Karnataka State Archives
(Oriental Library)
Accession No. 4811(B)

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE TWENTY-SIXTH DAY

OF THE

FOURTH SESSION

SATURDAY, 28TH MARCH 1964

Vol. IV—No. 26

L811(A)

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE TWENTY-SEVENTH DAY

OF THE

FOURTH SESSION

SUNDAY, 29TH MARCH 1964

Vol. IV—No. 27

BANGALORE :
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1964

Price : 25 nP.

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE TWENTY-EIGHTH DAY

OF THE

FOURTH SESSION

MONDAY, 30TH MARCH 1964

Vol. IV—No. 28

BANGALORE :

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE TWENTY-NINTH DAY

OF THE

FOURTH SESSION

TUESDAY, 31st MARCH 1964

Vol. IV—No. 29

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP.

THE MYSORE LEGISLATIVE ASSEMBLY DEBATES

OFFICIAL REPORT
OF THE
PROCEEDINGS OF THE THIRTIETH DAY
OF THE
FOURTH SESSION

WEDNESDAY, 1ST APRIL 1964

Vol. IV—No. 30

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1964

Price: 25 nP.

CONTENTS

	Pages
Starred Questions and Answers ...	2123—2142
Question for answer on the day (but not taken up) ...	2143
Calling attention to a matter of urgent public importance, *viz.*, Sinking of launch in Sharavathy river between Honnavar and Kasargod ...	2143—2144
Business of the House ...	2144—2146
Non-Official Resolution—	
***Re*: Utilization of Potential Resources of Cauvery Waters—(Debate not concluded)** ...	2147—2184
Half-an-hour discussion on Question No. 395 *re*: Registration of Hyderabad Karnatak Education Society, Afzalpur ...	2184—2189

MYSORE LEGISLATIVE ASSEMBLY

TWENTY-SIXTH DAY

Saturday, 28th March 1964.

The House met in the Assembly Hall, Vidhána Soudha, Bangalore, at Thirty Minutes past Eight of the Clock.

Mr. SPEAKER (SRI B. VAIKUNTA BALIGA, B.A., B.L.) in the Chair.

CALLING ATTENTION TO A MATTER OF URGENT PUBLIC IMPORTANCE UNDER RULE 63.

re: Cholera Epidemic in Kanakapura Taluk.

Sri T. MADIAH GOWDA (Ramanagaram).—I beg to call the attention of the Minister for Health to the Cholera epidemic in Kanakapur Taluk, and its spread in neighbouring taluks and the deaths due to it.

Dr. K. NAGAPPA ALVA (Minister for Health).—Sir, Cholera infection started in Bangalore South Taluk, Nittegere village on 7th March 1964. But the report was received 3 days later and immediate action was taken. The spread of this infection has been there but all the protective measures have been taken. Neighbouring villages have been infected also. Anticipatory inoculations also have been done in the non-affected but contiguous villages. Today, the situation is completely under control and hence after 24th, there has been no attack or death. Sir, in Bangalore South Taluk, 11 villages have been infected. In these villages over 7,000 anti-cholera inoculations have been done and in neighbouring 41 villages over 15,000 inoculations have been done. The patients also in these villages have been treated adequately. The number of attacks were 40 and deaths 19. In Bangalore North Taluk, there was only one case; Tyagarakondapura was infected and even here almost the entire population was protected by innoculations. In Kanakapura Taluk 19 villages and Kanakapura Town had been infected; the number of attacks here had been 83 and the number of deaths 24; by the 27th, 90 per cent of the population had been protected by inoculations and no fresh attacks were reported after 24th. I wish to mention Sir at this stage that majority of the attacks have been only of gastro-antiritis and every precaution has been taken and in a number of cases it was due to carelessness of the people that some deaths have taken place. In Ramanagaram, Bidadi Hobli, neighbouring South and Kanakapura Taluk, 6 villages have reported infections and indeed there had been 14 attacks and 2 deaths; in the neighbouring 8

(DR. K. NAGAPPA ALVA)

villages also, inoculations had been done and there had been no fresh attacks since 21st March 1964. In Hoskote Taluk, one village Medihalli was infected and even here immediate action has been taken and inoculations and other care had been undertaken. From here the report is that there is no infection since 2 weeks. All preventive measures had been undertaken promptly. In Kanakapura Taluk itself 9 Medical Officers and 8 Senior Health Inspectors, 8 Junior Health Inspectors had been still doing their control measures. Chlorination of drinking water sources, disinfection of patients' belongings, sanitation treatment of patients are still being continued. Cholera situation is well under control, Sir. No new cases had been reported since 2 days and the total number of attacks so far is 154 and the total number of deaths 54 and the total inoculations done is 1,11,634.

BUDGET ESTIMATES FOR 1964-65

Demands for Grants

DEMAND NO. 6 —OTHER TAXES—ADMINISTRATION

13. Other Taxes and Duties.

Sri S. NIJALINGAPPA (Chief Minister).—Sir, on the recommendation of the Governor, I beg to move :

> "That a sum not exceeding Rs. 10,44,000 be granted to the Government to defray the charges which will come in course of payment during the financial year for the period ending 31st day of March 1965, in respect of 'Other Taxes and Duties'."

Mr. SPEAKER.—Motion moved :

> "That a sum not exceeding Rs. 10,44,000 be granted to the Government to defray the charges which will come in course of payment during the financial year for the period ending 31st day of March 1965, in respect of 'Other Taxes and Duties'."

Demands Nos. 10, 29, 30, 45, 46, and 47 will be deemed to have been moved. Cut motions about 70 are also open for debate.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ದಿನ ಸಾಮಾನ್ಯ ಆಡಳಿತ ಮತ್ತು ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಸುಮಾರು ನಲವತ್ತಾರು ಕೋಟಿ ರೂಪಾಯಿಗಳ ಒಂದು ದೊಡ್ಡ ಡಿಮ್ಯಾಂಡನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇವೊತ್ತು ನಮ್ಮ ದೇಶದ ಆಡಳಿತಕ್ಕೆ ಬಹಳ ಪ್ರಾಮುಖ್ಯವಾಗಿ ಬೇಕಾಗಿರತಕ್ಕ ಇಲಾಖೆಗಳಿಗೆ ಸಂಬಂಧಪಟ್ಟ ಡಿಮ್ಯಾಂಡುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಮುಂದೆ ಮಂಡನೆ ಮಾಡಿದ್ದಾರೆ. ಮೊಟ್ಟಮೊದಲನೆದಾಗಿ ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ರಾಜ್ಯಪಾಲರ ಮತ್ತು ಮಂತ್ರಿ ಮಂಡಲದ ಖರ್ಚಿಗಾಗಿ ಇರತಕ್ಕಂಥ ಹಣವನ್ನು ಒದಗಿಸಿವೆ, ರಾಜ್ಯಪಾಲರಿಗಂತೂ ಇದುವರೆಗೂ ನಮ್ಮ ಬಡ್ಜೆಟ್ಟಿನಲ್ಲಿ ಹಣವನ್ನು ಅವರ ಸಂಭಾವನೆಗೆ ಒದಗಿಸಬೇಕಾದ ಅವಶ್ಯಕತೆ ಇರ

---

†Indicates that the remarks or speeches have not been revised by the member concerned.

ಲಿಲ್ಲ. ಆದರೆ ಈಗ ಇಲ್ಲಿ ಇರತಕ್ಕಂಥ ರಾಜ್ಯಪಾಲರಾದ ಶ್ರೀಮಾನ್ ಜಯಚಾಮರಾಜೇಂದ್ರ ಒಡೆಯರ್ ಅವರು ಈ ದೇಶದಿಂದ ಬೇರೆ ದೇಶಕ್ಕೆ ರಾಜ್ಯಪಾಲರಾಗಿ ವರ್ಗಾವಣೆಯಾಗಿರುವುದ ರಿಂದ........

ಶ್ರೀ ಎಸ್. ನಿಜಲಿಂಗಪ್ಪ.—ಅವರನ್ನು ಪ್ರೋಸ್ಟ್ ಮಾಡಿದ್ದಾರೆ.

Mr. SPEAKER.—I do not want to disturb the trend. They are appointed and requested to function as governors by an order of the President.

ಶ್ರೀ ಎಸ್. ಶಿವಪ್ಪ.—ರಾಜ್ಯಪಾಲರಿಗೆ ಸಂಬಂಧಪಟ್ಟಂಥ ಸಂಭಾವನೆ ವಿಷಯವಾಗಿ ಚರ್ಚೆ ಮಾಡುವ ಇಚ್ಛೆಯೇನೂ ನನಗೆ ಇಲ್ಲ.

Mr. SPEAKER.—That demand is over. Nor can it be discussed either.

ಶ್ರೀ ಎಸ್. ಶಿವಪ್ಪ.—ಮುಂದೆ ಇಲ್ಲಿಗೆ ಬರತಕ್ಕಂಥ ರಾಜ್ಯಪಾಲರಿಗೆ ಆ ರೀತಿಯಾದಂಥ ಸಂಭಾವನೆ ಇಲ್ಲವೆಂದು ಹೇಳಿದೆ. ಇಲ್ಲಿಂದ ಅಲ್ಲಿಗೆ ಹೋಗತಕ್ಕವರು, ನಿರ್ಗಮನವಾಗತಕ್ಕಂಥವರು ಕನ್ನಡಿಗರಾಗಿದ್ದಾರೆ. ಮೈಸೂರು ದೇಶದ ಪ್ರೀತಿ, ವಿಶ್ವಾಸಗಳಿಗೊಳಗಾಗಿದ್ದಾರೆ. ಅವರು ಹೊರಗೆ ಇದ್ದರೂ ಮೈಸೂರು ದೇಶದ ಹಿತವನ್ನೇನೋ ಇಟ್ಟುಕೊಂಡಿರುತಾರೆಂಬುದಾಗಿ ನಾನು ನಂಬಿದ್ದೇನೆ. ನಾನು ಈ ವರ್ಷ ರಾಜ್ಯಪಾಲರ ಕನ್ನಡ ಭಾಷಣವನ್ನು ಇತಿಹಾಸದಲ್ಲೇ ಪ್ರಪಥಮ ವಾಗಿ ಕೇಳಿದ್ದೇನೆ. ಮುಂದೆ ಬರುವವರು ಕನ್ನಡದವರೇ೦ಬುದು ನನಗೆ ಗೊತ್ತಿಲ್ಲ. ಇವರು ಅನೇಕ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಆದ್ದರಿಂದ ಮುಂದೆ ಬರತಕ್ಕಂಥವರೂ ಕೂಡ ಅದೇ ರೀತಿ ಯಲ್ಲಿ ಆಗಲಿ ಎಂದು ನಾನು ನನ್ನ ಅಭಿಲಾಷೆಯನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಮಂತ್ರಿ ಮಂಡಲದ ವಿಚಾರ ಈಗಿನ ಮಂತ್ರಿ ಮಂಡಲದ ಮೇಲೆ ಆಗಿರತಕ್ಕ ಖರ್ಚು ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಇರತಕ್ಕದ್ದನ್ನು ನಾವು ಇಲ್ಲಿ ನೋಡಬಹುದು. 62-63ನೇ ಸಾಲಿನ ಮಂತ್ರಿ ಮಂಡಲದ ಖರ್ಚು ಕೇವಲ ಆರು ವರೆ ಲಕ್ಷ ರೂಪಾಯಿಗಳಿದ್ದುದು ಹದಿಮೂರು ಲಕ್ಷ ರೂಪಾಯಿಗಳಿಗೆ ಈಗ ಏರಿದೆ. ನಮ್ಮ ದೇಶದ ಮಂತ್ರಿಗಳಿಗೆ ತಿಂಗಳಿಗೆ ಒಬ್ಬೊಬ್ಬರಿಗೂ ಸುಮಾರು ಐವತ್ತು ಸಾವಿರ ರೂಪಾಯಿಗಳು ಖರ್ಚಾಗ ಬಹುದು. ಆ ರೀತಿ ಖರ್ಚಾದರೆ ಸರಾಸರಿ ಖರ್ಚು ವ್ಯಕ್ತವಾಗುತ್ತದೆ. ಇದರಿಂದ ಏನು ಆಗುತ್ತದೆಂದರೆ ನಮಗೆ ಅರ್ಥವಾಗುತ್ತದೆ. ಒಬ್ಬೊಬ್ಬ ಮಂತ್ರಿಗೆ ತಿಂಗಳಿಗೆ ಸರಾಸರಿ ನಾಲ್ಕೈದು ಸಾವಿರ ರೂಪಾಯಿಗಳ ಖರ್ಚು ಇವರಿಂದ ಆಗುತ್ತದೆಂಬುದು ವ್ಯಕ್ತ ವಾಗುತ್ತದೆ. ಒಂದು ದಿನಕ್ಕೆ ಸುಮಾರು ನೂರೈವತ್ತು ರೂಪಾಯಿಗಳಿಂದ ಇನ್ನೂರು ರೂಪಾಯಿ ಗಳವರೆಗೂ ಮಂತ್ರಿಗಳಿಗೆ ಖರ್ಚಾಗುತ್ತದೆ. ಇದು ನಿಜವಾಗಿ ನಮ್ಮ ಒಂದು ಸಮಾಜದ ನೀತಿಗೆ ಅನುಗುಣವಾಗುತ್ತದೆಯೋ ಎಂಬುದಾಗಿ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಖರ್ಚುಗಳು ಕಡಿಮೆಯಾಗಬೇಕಾದರೆ ಈ ಸಭೆಯ ವೇದಿಕೆಯಿಂದ ನಾನು ಹೇಳುತ್ತಿದ್ದೇನೆ. ಮಂತ್ರಿ ಮಂಡಲ ನಮ್ಮ ದೇಶದಲ್ಲಿ ಬಹಳ ದೊಡ್ಡದಾಗಿದೆ. ಈ ಮಂತ್ರಿ ಮಂಡಲದ ಮೇಲೆ ಖರ್ಚನ್ನು ಕಡಿಮೆ ಮಾಡುವ ಮುಖಾಂತರ ನಾವು ಎಷ್ಟೋ ಮಿತವ್ಯಯವನ್ನು ಮಾಡಿಕೊಳ್ಳಬಹುದು. ಮಂತ್ರಿ ಮಂಡ ಲದ ಮೇಲೆ ಮಾಡತಕ್ಕ ಖರ್ಚು ಯಾವ ರೀತಿಯಲ್ಲಿ ಕಡಿಮೆ ಮಾಡಿದ್ದಾರೆಂಬುದನ್ನು ಜನರಿಗೆ, ದೇಶಕ್ಕೆ ತೋರಿಸಬೇಕು ಎಂಬುದಾಗಿ ನಾನು ಹೇಳುತ್ತೇನೆ. ಮಂತ್ರಿಮಂಡಲದಲ್ಲಿ ಕೆಲಸ ಕಾರ್ಯ ಗಳು ಯಾವ ರೀತಿ ಇವೆಯೆಂಬುದನ್ನು ಅವರೇ ನೋಡಲಿ, ಹೆಚ್ಚಿನ ಸಂಖ್ಯೆಯಲ್ಲಿ ಮಂತ್ರಿಗಳನ್ನು ನೇಮಕ ಮಾಡುವ ಪರಿಣಾಮವಾಗಿ ಒಂದೊಂದು ಖಾತೆಯನ್ನು ಎರಡು-ಮೂರು ವಿಧವಾಗಿ ಹಂಚಿಕೆ ಕೊಟ್ಟಿದ್ದಾರೆ.

ಮಂತ್ರಿಮಂಡಲದ ಮೇಲೆ ಒಂದು ಬಗೆಯಾದ ಆಡಳಿತ ಇರಿಸಲಿಕ್ಕೋಸ್ಕರ ವ್ಯವಸಾಯ ಇಲಾಖೆ, ಮೀನುಗಾರಿಕೆ, ಅನಿಮಲ್ ಹಸ್ಬೆಂಡ್ರಿ, ಮುಂತಾದ ಇಲಾಖೆಗಳನ್ನು ಎರಡು ಮೂರು ಜನ ಮಂತ್ರಿ ಗಳಿಗೆ ಹಂಚಿಕೊಟ್ಟಿದ್ದಾರೆ. ಏಕೆಂದರೆ 25 ಜನ ಮಂತ್ರಿಗಳಿದ್ದಾರೆ. ಅವರಿಗೆಲ್ಲರಿಗೂ ಈ ಇಲಾಖೆ ಗಳನ್ನು ಹಂಚಬೇಕೆಂಬ ಸಂದರ್ಭದಲ್ಲಿ ಒಂದೊಂದು ಇಲಾಖೆಯನ್ನು ಬೇರೆ ಬೇರೆಯಾಗಿ ಹಂಚಿಕೊಟ್ಟಿ ದ್ದಾರೆ. ಮೈನರ್ ಇರ್ರಿಗೇಷನ್ನಿಗೇ ಒಬ್ಬರು; ರಸ್ತೆ, ಸೇತುವೆಗಳ ಕೆಲಸ ಇನ್ನೊಬ್ಬರ ಕೈಲಿ, ಹೀಗೆ ಒಬ್ಬೊಬ್ಬರ ಕೈಲಿ ಒಂದೊಂದು ಖಾತೆ ಇರಬೇಕೆಂದು ಈ ರೀತಿ ಹಂಚಿಕೊಂಡಿರುತ್ತಾರೆ. ಇದನ್ನು ಕೊ-ಆರ್ಡಿನೇಷನ್ ಎಂದು ಹೇಳುತ್ತಾರೆ. ಇವರ ಒಂದು ಮೇಲ್ವಿಚಾರಣೆಯಲ್ಲಿ ನಡೆಯತಕ್ಕ ಅಭಾವ ಇವತ್ತು ಅನೇಕ ಇಲಾಖೆಗಳಲ್ಲಿ ಕಂಡುಬರುತ್ತಾ ಇದೆ.

(ಶ್ರೀ ಎಸ್. ಶಿವಪ್ಪ)

ಮತ್ತೊಂದು ಸಲಹೆ, ಈಗ ಅವರ ಕೈಲಿರತಕ್ಕ ಸೆಕ್ರೆಟೇರಿಯಟ್ ಸರಿಯಾಗಿ ಕೆಲಸ ಮಾಡಬೇಕಾಗಿದ್ದರೆ ಮಂತ್ರಿಮಂಡಲವೇ ಎಲ್ಲೋ ಸೆಕ್ರೆಟರಿಗಳ ಕೈಗೊಂಬೆಯಾಗಿರಬಹುದು ಎಂಬ ಸಂದೇಹ ನನಗೆ ಈಗ ಬರುತ್ತಿದೆ. ದೇಶದ ಪಾಲಿಸಿಯನ್ನು ನಿರ್ಧಾರ ಮಾಡುವುದು, ಮಂತ್ರಿಮಂಡಲ ಕಟ್ಟುನಿಟ್ಟಾಗಿ ಅದನ್ನು ಜಾರಿಗೆ ತರತಕ್ಕದ್ದು ಸೆಕ್ರೆಟರಿಗಳು. ಅದನ್ನು ಅವರಿಂದ ನೆರವೇರಿಸಬೇಕು. ಒಬ್ಬೊಬ್ಬ ಮಂತ್ರಿಗೆ ಒಂದೊಂದು ಇಲಾಖೆ ಸಂಬಂಧಪಟ್ಟಂತೆ ಕೊಡಬೇಕು ಮತ್ತು ಈ ಸಭೆಯಲ್ಲಿರತಕ್ಕ ಕೆಲವು ಸದಸ್ಯರುಗಳನ್ನೊಳಗೊಂಡಂತೆ ಒಂದೊಂದು ಸಬ್-ಕಮಿಟಿಯನ್ನು ಒಂದೊಂದು ಇಲಾಖೆಗೂ ಸರ್ಕಾರದವರು ಮಾಡಿದರೆ, ಬಹುಶಃ ದೇಶದಲ್ಲಿ ಒಂದು ವರ್ಷದಲ್ಲಾಗುವ ಕೆಲಸ ಕಾರ್ಯಗಳನ್ನು ಚೆನ್ನಾಗಿ ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯ ಪರಿಣಾಮವಾಗುತ್ತದೆ. ಆಗ ಆಯಾ ಇಲಾಖೆಗೆ ಸಂಬಂಧಪಟ್ಟಂತೆ ದೇಶಾದ್ಯಂತವಿರತಕ್ಕ ವಿಚಾರಗಳನ್ನು ಅವರು ವಿಮರ್ಶೆ ಮಾಡಬಹುದು ಮತ್ತು ಇಲ್ಲಿರತಕ್ಕಂಥ ಸದಸ್ಯರಿಂದ ಒಳ್ಳೆಯ ಸಲಹೆಗಳನ್ನು ಪಡೆಯಬಹುದು ಎಂಬ ಭಾವನೆಯನ್ನು ತಮ್ಮ ಮುಂದಿಡಬೇಕಾಗಿದೆ. ಬಹುಶಃ ಇಂಥಾದ್ದಕ್ಕೆ ಅವರ ಸೆಕ್ರೆಟರಿಗಳು ಅಡ್ಡಬರುತ್ತಾರೆ. ಈರೀತಿ ತೀರ್ಮಾನ ಮಾಡಿದರೆ ಸೆಕ್ರೆಟರಿಗಳ ಅಫಿಷಿಯಲ್ ಮೆಂಟಾಲಿಟಿ ಇರುವವರು ಇದಕ್ಕೆ ಅಡ್ಡಬರಬಹುದು. ಅದನ್ನು ಅವರು ತಪ್ಪಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಅವರೇ ಏರ್ಪಾಡು ಮಾಡಿದಂಥ ಎ. ಜಿ. ಆರ್. ಕಮಿಟಿ ಗೋರ್ವಾಲ ಕಮಿಟಿ ವರದಿಗಳನ್ನು ನೋಡಿದರೆ ನನಗೆ ವ್ಯಥೆಯಾಗುತ್ತದೆ. ಸೆಕ್ರೆಟೇರಿಯೇಟ್ ಮತ್ತು ಇತರೇ ಇಲಾಖೆಗಳಲ್ಲಿ ಯಾವರೀತಿ ಕೆಲಸ ಬಹಳವಾಗಿ ವಿಳಂಬವಾಗುತ್ತಿದೆಯೆಂಬುದನ್ನು ಅವರು ಅಂಕಿ ಅಂಶಗಳಿಂದ ತೋರಿಸಿಕೊಟ್ಟಿದ್ದಾರೆ. ಈ ವಿಳಂಬ ತಪ್ಪಬೇಕಾದರೆ ಅವರು ಕಟ್ಟುನಿಟ್ಟಾಗಿ ಕೆಲವು ರೂಲ್ಸುಗಳನ್ನು ಮಾಡಬೇಕಾಗಿದೆ. ಸೆಕ್ರೆಟೇರಿಯಟ್, ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕೆಲಸಗಳು ಬಹಳ ಶೀಘ್ರವಾಗಿ ಆಗಬೇಕಾಗಿವೆ. ಇವತ್ತು ಈ ಸಭೆಯಲ್ಲಿ ನಮಗೆ ಇವರು ಹೇಳತಕ್ಕ ಉತ್ತರಗಳನ್ನು ನೋಡಿದರೆ ನನಗೆ ಬಹಳ ವ್ಯಥೆಯಾಗುತ್ತದೆ. ಅನೇಕ ವಿಚಾರಗಳು ತಾಲ್ಲೂಕು ಕಚೇರಿಗಳಲ್ಲಿ ಪೆಂಡಿಂಗ್ ಆಗಿ ಇರುತ್ತವೆ. ಇವತ್ತು ನಮ್ಮ ಸಮಾಜದಲ್ಲಿ ಒಂದು ರೀತಿಯಾಗಿ ನ್ಯಾಯ ದೊರಕಬೇಕಾಗಿದ್ದರೆ, ಆದಷ್ಟು ಜಾಗ್ರತೆ ಜಿಲ್ಲಾ ಮತ್ತು ತಾಲ್ಲೂಕ್ ಕಚೇರಿಗಳಲ್ಲಿ ಇರತಕ್ಕ ಕೆಲಸಗಳನ್ನೆಲ್ಲಾ ವಿಳಂಬ ಮಾಡದೆ ವಿಲೇವಾರಿ ಮಾಡುವುದು ಮುಖ್ಯ. ಯಾರೊಬ್ಬರೂ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಚೆನ್ನಾಗಿ ಕೆಲಸ ಮಾಡುವುದನ್ನು ನೋಡಬೇಕು. ಕೆಲವು ಸಂದರ್ಭಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕಚೇರಿಗಳಲ್ಲಿ ಕೆಲವರ ಪ್ರಭಾವಕ್ಕೊಳಗಾಗಿ ಕೆಲಸ ಮಾಡುವುದೂ ಉಂಟು. ಅದಕ್ಕೆಲ್ಲಾ ನಾವೆಲ್ಲರೂ ಕಾರಣವೆಂದು ಹೇಳಬಹುದು. ಯಾವ ಪಕ್ಷದವರೇ ಆಗಲೀ ಅಧಿಕಾರಿಗಳ ಮೇಲೆ ತಮ್ಮ ಒಂದು ಪ್ರಭಾವವನ್ನು ಬೀರುವ ಒಂದು ಮನೋವೃತ್ತಿ ಬಹಳ ಕೆಟ್ಟದ್ದು. ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿ ಬೆಳೆಯಬೇಕಾದರೆ ಈಗ ಎಲ್ಲ ಅಧಿಕಾರಿಗಳೂ ಸಹ ತಂತಮ್ಮ ಕೆಲಸವನ್ನು ಯಶಸ್ವಿಯಾಗಿ ದಾಕ್ಷಿಣ್ಯಕ್ಕೊಳಗಾಗದೆ ನಿರ್ದಾಕ್ಷಿಣ್ಯವಾಗಿ ಮಾಡಬೇಕಾಗಿದೆ.

ಕಾನೂನಿಗೆ ಎರಡು ಕಣ್ಣು ಇರಬಾರದು. ಕಾನೂನು ಒಂದೇ. ಕಾನೂನಿನ ಪರಿಮಿತಿಗೆ ಒಳಪಟ್ಟು ಕೆಲಸ ಮಾಡತಕ್ಕ ಪದ್ಧತಿ ಈ ದೇಶದಲ್ಲಿ ಜಾರಿಗೆ ಬರಬೇಕಾಗಿದೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕಾನೂನು ಆಗುತ್ತಾ ಹೋದರೆ ಆ ಕಾನೂನಿನಿಂದ ಏನು ಸಾಧನೆ ಮಾಗಬೇಕೆಂದು ಬಯಸುತ್ತೇವೆಯೋ ಅದು ಆಗುವುದಿಲ್ಲ. ಆದುದರಿಂದ ಕಾನೂನು ಕಟ್ಟುನಿಟ್ಟಾಗಿ ಜಾರಿಗೆ ಬಂದರೆ ಪ್ರಜಾಪ್ರಭುತ್ವ ದೇಶದಲ್ಲಿ ಯಶಸ್ವಿ ಆಗುತ್ತದೆಂಬುದು ನನ್ನ ಭಾವನೆಯಾಗಿದೆ.

ಪ್ರಜಾಪ್ರಭುತ್ವದಲ್ಲಿ ಸಿವಿಲ್ ಸರ್ವಿಸಸ್ ಎನ್ನುವುದು—It must be like a steel net. ಯಾವ ಪ್ರಭಾವಕ್ಕೂ ಒಳಗಾಗದೆ ಅದು ನೇರವಾಗಿ ಹೋದರೆ ಆ ಹೊತ್ತಿಗೆ ಈ ಸರ್ಕಾರದ ಆಡಳಿತ ಚೆನ್ನಾಗಿ, ಸುಗಮವಾಗಿ ನಡೆಯತಕ್ಕದ್ದಾಗುತ್ತದೆ. ನಾವು ಇವತ್ತಿನ ದಿವಸ ಸರ್ಕಾರಕ್ಕೆ ಹೇಳುವುದೇನೆಂದರೆ ತಮ್ಮ ಅಧಿಕಾರಿಗಳಿಗೆ ತಾವು ಒಂದು ಸೂಚನೆಯನ್ನು ಕೊಡಬೇಕು—ಕಾನೂನನ್ನು ಯಾವ ರೀತಿಯಲ್ಲಿಯೂ ಕೂಡ ಬದಲಾಯಿಸುವುದಿಲ್ಲ, ಅದನ್ನು ಸಡಿಲ ಮಾಡತಕ್ಕ ಪ್ರವೃತ್ತಿ ಬೆಳೆಯಬಾರದು ಎಂಬುದಾಗಿ ಅಧಿಕಾರಿಗಳಿಗೆ ಸರ್ಕಾರ ತಿಳಿಸಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಮ್ಮ ಮುಖಾಂತರವಾಗಿ ಈ ಮಾನ್ಯ ಸಭೆಯಲ್ಲಿ ತಿಳಿಸುತ್ತಿದ್ದೇನೆ.

ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ದೇಶದಲ್ಲಿ ಒಂದು ಹೊಸ ವಾತಾವರಣ, ಒಂದು ಹೊಸ ಶಕ್ತಿ ಮೂಡುತ್ತಿದೆ. ರಾಜಕೀಯದಲ್ಲಿ ಕೂಡ ಸಮಾಜವಾದದ ಮುಖಾಂತರ ಪ್ರಜಾಪ್ರಭುತ್ವವನ್ನು ಪಾಲಿಸಿಕೊಂಡು ಬರುತ್ತೇವೆ ಎಂದು ಕಾಂಗ್ರೆಸ್ ಪಕ್ಷ ಕೂಡ ಒಪ್ಪಿಕೊಂಡಿದೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಈಚೆಗೆ ನಿರ್ಣಯ ಮಾಡಿದ್ದಾರೆ. ಅದು ನಿಜವಾಗಿ ಕಾರ್ಯಗತ

ವಾಗಬೇಕಾಗಿದ್ದರೆ ನಮ್ಮ ದೇಶದಲ್ಲಿನ ಆಡಳಿತ ಕ್ರಮದಲ್ಲಿ ಪ್ರಬಲವಾದ ಬದಲಾವಣೆಗಳು ಆಗ ತಕ್ಕದ್ದು ಮುಖ್ಯ. ನಮ್ಮ ದೇಶದಲ್ಲಿ ನಾಲ್ಕು ಮಟ್ಟಗಳಲ್ಲಿ ರಾಜ್ಯಾಡಳಿತವಿರಬೇಕು. ಒಂದು ಪಂಚಾಯಿತಿಯ ಮಟ್ಟ, ಇನ್ನೊಂದು ಜಿಲ್ಲಾ ಪರಿಷತ್ ಮಟ್ಟ, ಮೂರನೆಯದು ರಾಜ್ಯದ ಮಟ್ಟ, ನಾಲ್ಕನೆಯದು ಕೇಂದ್ರದ ಮಟ್ಟ. ಚೌಕಂಬ ಎಂದು ಏನು ಹೇಳುತ್ತಾರೆ. ಆ ರೀತಿ ಅಧಿಕಾರ ವಿಕೇಂದ್ರೀಕರಣ ಆಗಬೇಕಾಗಿದೆ. ಅಧಿಕಾರ ವಿಕೇಂದ್ರೀಕರಣವನ್ನು ನೆಪಮಾತ್ರಕ್ಕೆ ಮಾಡಿ ಕೆಲವು ಕಡೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಎಷ್ಟು ಸಾರಿ ಹೋಗುವುದಿಲ್ಲ? ನಾನು ಹೇಳು ವುದು ಪಂಚಾಯಿತಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು, ಹೆಚ್ಚಿನ ಪರಿಹಾರಕ್ಕಾಗಿ ಹಣದ ರೂಪ ದಲ್ಲಿ ಒದಗಿಸಿ ಆ ಮೂಲಕ ಕೆಲಸ ನಡೆಯುವಂತಹ ವಾತಾವರಣವನ್ನು ಇವತ್ತು ಕಲ್ಪಿಸಬೇಕು. ಮಹಾತ್ಮ ಗಾಂಧಿಯವರು ಹೇಳಿದಂತೆ—every village panchayat should be a parliament. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದರೆ ಅವರಿಗೆ ಹೆಚ್ಚಿನ ಹಣ ಮತ್ತು ಅಧಿಕಾರವನ್ನು ಒದಗಿಸಬೇಕು. ನಮ್ಮ ರಾಜ್ಯದಲ್ಲಿ ಪಂಚಾಯಿತಿ ಮಟ್ಟ, ಜಿಲ್ಲಾ ಮಟ್ಟ ಮತ್ತು ಸೆಕ್ರೆಟೇರಿಯಟ್ ಮಟ್ಟ ಈ ಮೂರು ಸಾಕು. ಈ ಮಧ್ಯೆ ಇರತಕ್ಕ ಅನೇಕ ಮಟ್ಟಗಳು ಕೆಲಸ ಸುಗಮವಾಗುವುದರ ಬದಲು ತೊಂದರೆಯಾಗಲು ಕಾರಣವಾಗುತ್ತಿವೆ. ರೆಡ್ ಟೇಪಿಸಂನಿಂದ ಕೆಲಸ ಸರಾಗವಾಗಿ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಡಿವಿಜನಲ್ ಕಮಿಷನರ ಹುದ್ದೆ ಒಂದು ಪೋಸ್ಟಾಫೀಸು ಇದ್ದಹಾಗೆ ಇರಬಾರದು. ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಜಿಲ್ಲಾ ಮಟ್ಟದಿಂದ ನೇರ ವಾಗಿ ರಾಜ್ಯ ಮಟ್ಟಕ್ಕೆ ಬರಬೇಕು. ಒಂದು ಕಮಿಟಿ ಅಥವಾ ಕಮಿಷನ್ ಎಂದು ಇಟ್ಟು, ನೇರವಾಗಿ ಅಲ್ಲಿ ಇತ್ಯರ್ಥವಾಗತಕ್ಕ ಕಾರ್ಯಕ್ರಮವನ್ನು ಜಾರಿಗೆ ತರುವುದು ಒಳ್ಳೆಯದು ಎಂದು ಹೇಳುತ್ತೇನೆ. ಸರ್ಕಾರದವರು ಕೂಡಲೇ ಡಿವಿಜನಲ್ ಕಮಿಷನರ ಹುದ್ದೆಯನ್ನು ವಜಾ ಮಾಡಿ ರಾಜ್ಯ ಮಟ್ಟದಲ್ಲಿ ಅಪೆಲೇಟ್ ಟ್ರಿಬ್ಯುನಲ್ ರೀತಿಯಲ್ಲಿ ಎಲ್ಲ ಇಲಾಖೆಯ ಮುಖ್ಯಾಧಿಕಾರಿಗಳೂ ಇರುವಂಥ ಒಂದು ಕ್ರಮ ವನ್ನು ಮಾಡಿದರೆ ಅದರಿಂದ ವೆಚ್ಚ ಕಡಮೆಯಾಗಿ ವಿತರಣೆಯಲ್ಲಿ ಚೆನ್ನಾಗಿ ಆಗತಕ್ಕ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆಗಳು ಕಂಡುಬರುತ್ತಿವೆ. ಬ್ಯೂರೊಕ್ರಟಿಕ್ ಸೆಟಪ್ ಎಂದು ಬ್ರಿಟಿಷರ ಕಾಲದಲ್ಲಿ ಯಾವ ಒಂದು ಅಧಿಕಾರದ ಚೌಕಟ್ಟನ್ನು ನಿರ್ಮಾಣ ಮಾಡಿದ್ದರೋ ಅದೇ ಚೌಕಟ್ಟು ಇವತ್ತು ಇದೆ, ಸಾಹೇಬಗಿರಿ ಮನೋಭಾವ ಎನ್ನುವಂಥದ್ದು ಇವತ್ತಿಗೂ ಇದೆ. ಇವತ್ತು ಜನತೆಯೊಡನೆ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡು ಜನತೆಯ ಸೇವೆ ಮಾಡಬೇಕು ಎನ್ನುವ ಮನೋಭಾವ ಬೆಳೆಯಬೇಕು. ಇದು ನಮ್ಮ ಅಧಿಕಾರಿಗಳಲ್ಲಿ ಮೂಡದ ಹೊರತು ನಿಮ್ಮ ಯಾವ ಯೋಜನೆಯೂ ಸಫಲವಾಗುವುದಿಲ್ಲ. ಇಂಗ್ಲಿಷರು ರಾಜ್ಯ ಆಳುವ ಒಂದೇ ಒಂದು ಮನೋ ಭಾವನೆಯನ್ನಿಟ್ಟುಕೊಂಡು ಆ ದೆಸೆಯಲ್ಲಿ ಕೆಲಸ ಮಾಡಿದರು. ಇವತ್ತು ಆಳುವುದು ಒಂದೇ ಕ್ರಮವಲ್ಲ, ಜನತೆಯ ಸೇವೆ ಮಾಡಬೇಕು ಎನ್ನುವಂಥ ಮನೋಭಾವ ಬೆಳೆಯಬೇಕು. ಆಳತಕ್ಕ ಮನೋ ಭಾವ ಬೆಳೆಯಬಾರದು, ನಾವು ಸೇವಕರು, ಜನತೆಯ ಸೇವೆ ಮಾಡಬೇಕು ಎಂಬ ಮನೋಭಾವ ವನ್ನು ಅಧಿಕಾರಿಗಳಲ್ಲಿ ಹುಟ್ಟಿಸಿದ ಹೊರತು ಯಾವ ಯೋಜನೆಗಳೂ ಕಾರ್ಯಗತವಾಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಬಯಸುತ್ತೇನೆ. ಹಿಂದಿನ ಬ್ಯೂರೊಕ್ರಟಿಕ್ ರೀತಿ ಬೆಳೆಯುತ್ತಿರುವುದನ್ನು ತಪ್ಪಿ ಸಲು ಖಂಡಿತವಾಗಿ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಜನತೆ ಯಾವ ನಿರೀಕ್ಷೆಯನ್ನು ತಮ್ಮಿಂದ ಬಯಸುತ್ತದೆಯೋ ಅದು ಕೈಕೂಡಬೇಕಾದರೆ, ಅವರ ಮನಸ್ಸಿನ ಮೇಲೆ ಬದಲಾವಣೆ ಮಾಡತಕ್ಕ ಕಾರ್ಯಕ್ರಮ ಆಗಬೇಕೆಂದು ನಾನು ತಮಗೆ ಹೇಳಯಸುತ್ತೇನೆ.

ಸ್ವಾಮಿ ಅಪಾರವಾದ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಒಂದೊಂದರ ಮೇಲೂ ಮಾತನಾಡಲು ಒಂದೊಂದು ಗಂಟೆ ಕಾಲ ಬೇಕು ಅಂಥ ವಿಚಾರಗಳಿವೆ. ಆದರೂ ನಾನು ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಈಗ ಮೇಜರ್ ಮತ್ತು ಮೈನರ್ ಇರಿಗೇಷನ್ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮೇಜರ್ ಮತ್ತು ಮೈನರ್ ಇರಿಗೇಷನ್ ಎರಡೂ ತಮ್ಮ ಕೈಯಲ್ಲಿದೆ. ಇವು ಒಂದು, ಎರಡು, ಮತ್ತು ಮೂರು ಯೋಜನೆಗಳ ಅವಧಿಯಲ್ಲಿ ಎಷ್ಟರಮಟ್ಟಿಗೆ ಫಲಕಾರಿಯಾಗಿವೆ ಎಂದು ತಾವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ, ಎಷ್ಟೊಂದು ನಿರೀಕ್ಷೆಯನ್ನು ನಾವು ಬಯಸಿದ್ದೇವೋ ಅಷ್ಟರ ಮಟ್ಟಿಗೆ ಕೆಲಸವಾಗಿಲ್ಲ ಎನ್ನುವುದನ್ನು ನಾವು ನೋಡಬಹುದಾಗಿದೆ. ಮೊದಲನೆಯ ಯೋಜನೆಯಲ್ಲಿ ಸುಮಾರು 83 ಕೋಟಿ ರೂಪಾಯಿ ಅಂದಾಜು ಹಾಕಿಕೊಂಡಿದ್ದುದರಲ್ಲಿ ಖರ್ಚಾಗಿರುವುದು ಕೇವಲ 37 ಕೋಟಿ ರೂಪಾಯಿ ಮಾತ್ರ. ಇರಿಗೇಷನ್ ಪೊಟೆನ್‌ಷಿಯಲ್ 11 ಲಕ್ಷ ಆಗ ಬೇಕು ಎಂದು ಅಂದಾಜು ಮಾಡಿದ್ದುದರಲ್ಲಿ ಸಾಧನೆ ಮಾಡಿದ್ದು 1.17 ಲಕ್ಷ ಎಕರೆ, ಯುಟಿಲೈಸ್ ಆದದ್ದು ಕೇವಲ 41 ಸಾವಿರ ಎಕರೆ. ಎರಡನೆಯ ಯೋಜನೆಯಲ್ಲಿ 129 ಕೋಟಿ

(ಶ್ರೀ ಎಸ್. ಶಿವಪ್ಪ)

ರೂಪಾಯಿ ವೆಚ್ಚದ ಯೋಜನೆಗಳನ್ನು ತಯಾರು ಮಾಡಿದ್ದರೂ ಖರ್ಚಾದದ್ದು ಕೇವಲ 26.6 ಕೋಟಿ ರೂಪಾಯಿಗಳು ಮಾತ್ರ. ಒಟ್ಟು ಪ್ಲಾನ್ ಔಟ್‌ಲೇ ಒಂದು ಮತ್ತು ಎರಡನೆ ಯೋಜನೆಗಳಿಂದ ಖರ್ಚಾದದ್ದು 63 ಕೋಟಿ ರೂಪಾಯಿ ಮಾತ್ರ. ಆ ಖರ್ಚಿಗೆ ಕ್ರಿಯೇಷನ್ ಪೊಟೆನ್‌ಷಿಯಲ್ 4.6 ಲಕ್ಷ, ಯುಟಿಲೈಸ್ ಆದದ್ದು ಮಾತ್ರ 2.9 ಲಕ್ಷ ಎಕರೆ. ಮೂರನೆಯ ಯೋಜನೆಗೆ ಬಂದರೆ ಮೊದಲನೆಯ ಮತ್ತು ಎರಡನೆಯ ಯೋಜನೆಗಳಲ್ಲಿ ಬಂದಂಥ ಕೆಲಸಗಳ ಜೊತೆಗೆ 7 ಹೊಸ ಸ್ಕೀಮುಗಳನ್ನು ತಯಾರು ಮಾಡಿದ್ದಾರೆ. ಅದರ ಅಂದಾಜು ಪ್ರಕಾರ 99 ಕೋಟಿ ರೂಪಾಯಿಗಳನ್ನು ಮೂರನೆಯ ಯೋಜನೆಯಲ್ಲಿ ಸೇರಿಸಿಕೊಂಡಿದ್ದಾರೆ. ಇದರ ಪ್ರಕಾರವಾಗಿ ಇರಿಗೇಷನ್ ಪೊಟೆನ್‌ಷಿಯಲ್ ಹತ್ತೂವರೆ ಲಕ್ಷ ಎಕರೆ ಬರಬೇಕು ಎಂದು ಅಂದಾಜನ್ನು ತಾವು ಇಟ್ಟುಕೊಂಡರು. ಈ ಅಂದಾಜು ಇಟ್ಟುಕೊಂಡರೂ ಕೂಡ ಮೂರು ಯೋಜನೆಗಳ ಪ್ರಕಾರವಾಗಿ ಒಟ್ಟು ಲೆಕ್ಕ ಹಾಕಿದರೆ 225 ಕೋಟಿ ರೂಪಾಯಿಗಳ ಅಂದಾಜು ಮಾಡಿದರು. ಎಲ್ಲ ನೆರವೇರಿದರೆ ಗ್ರಾಸ್ ಪೊಟೆನ್‌ಷಿಯಲ್ 25 ಲಕ್ಷ ಎಕರೆ ಆಗಬೇಕೆಂದು ಅಂದಾಜು ಕೂಡ ಇಟ್ಟುಕೊಂಡಿದ್ದರು. ಇವತ್ತು ಮೂರನೆಯ ಯೋಜನೆಯಲ್ಲಿ ಡಿಸೆಂಬರ್ ಕೊನೆಯವರೆಗೆ ಆಗಿರತಕ್ಕ ನಿರೀಕ್ಷೆಯ ಮೇಲೆ ಕಾರ್ಯಗತವಾಗಿರುವುದನ್ನು ನೋಡುವುದಾದರೆ ಪೊಟೆನ್‌ಷಿಯಲ್ ಕ್ಯುಮುಲೇಟಿವ್ ಆಗಿರುವುದು ಆರುವರೆ ಲಕ್ಷ ಎಕರೆ ಮಾತ್ರ; ಅದರಲ್ಲಿ ಯುಟಿಲೈಸ್ ಆಗಿರುವುದು ನಾಲ್ಕುವರೆ ಲಕ್ಷ ಎಕರೆ. ನಿರೀಕ್ಷೆ ಮಾಡಿದ್ದು ಪೊಟೆನ್‌ಷಿಯಲ್ ಕ್ಯುಮುಲೇಟಿವ್ ಹದಿಮೂರುವರೆ ಲಕ್ಷ ಎಕರೆ. ಇದರಲ್ಲಿ ಯುಟಿಲೈಸೇಷನ್ ಕ್ಯುಮುಲೇಟಿವ್ 11.7 ಲಕ್ಷ ಎಕರೆ ಎಂದು ಹೇಳಿದರೂ ಅದರಲ್ಲಿ ಸಾಧನೆಯಾಗಿರತಕ್ಕದ್ದು ಆರುವರೆ ಲಕ್ಷ ಎಕರೆ ಯುಟಿಲೈಸ್ ಆಗಿರತಕ್ಕದ್ದು ನಾಲ್ಕುವರೆ ಲಕ್ಷ ಎಕರೆ. ನೀವು ಏನು ಯೋಜನೆಯನ್ನು ಹಾಕಿಕೊಂಡು ಎಷ್ಟು ಎಕರೆಯನ್ನು ನೀರಾವರಿ ಉಪಯೋಗಕ್ಕೆ ತರುತ್ತೇವೆ ಎಂದು ಒಂದು ಅಂದಾಜನ್ನು ಮಾಡಿದರೋ ಅದರಲ್ಲಿ ಕೇವಲ ಅರ್ಧ ಮಾತ್ರ ಇವತ್ತು ಕಾರ್ಯಗತ ಮಾಡಿದ್ದಾರೆ ಎಂದರೆ ಮೇಜರ್ ಮತ್ತು ಇರಿಗೇಷನ್‌ನಲ್ಲಿ ಏನು ಸಾಧನೆ ಮಾಡಬೇಕೆಂದು ಮೂರು ಯೋಜನೆಗಳಿಂದ ಯೋಜನೆ ಮಾಡಿದ್ದಾರೋ ಅದರಲ್ಲಿ ಅರ್ಧ ಮಾತ್ರ ಕಾರ್ಯಗತವಾಗಿದೆ. ನಮ್ಮ ದೇಶದಲ್ಲಿ ನೀರಾವರಿಯಲ್ಲಿ ಎಲ್ಲ ಪ್ರಾಂತಗಳಿಗಿಂತಲೂ ಕೂಡ ಬಹಳ ಹಿಂದೆ ಇದ್ದೇವೆ. ನಮ್ಮಲ್ಲಿ ಶೇಕಡ 7 ರಷ್ಟು ನೀರಾವರಿ ಸೌಲಭ್ಯವಿದೆ. ಪಕ್ಕದ ಮದ್ರಾಸ್ ಮತ್ತು ಆಂಧ್ರ 38, 40, ಇಷ್ಟು ನೀರಾವರಿ ಸೌಲಭ್ಯಗಳನ್ನು ಹೊಂದಿದೆ. ಇಷ್ಟು ಕಡಮೆ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಇರುವಂಥ ಮೈಸೂರು ದೇಶದಲ್ಲಿ ನಾವೇ ಮಾಡಿಕೊಂಡಂಥ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಕೂಡ ಎಷ್ಟು ವೇಗವಾಗಿ ಹೋಗಬೇಕೋ, ಎಷ್ಟು ತ್ವರಿತವಾಗಿ ಹೋಗಬೇಕೋ ಆ ರೀತಿ ಕೆಲಸ ಮಾಡಿ ಯೋಜನೆಗಳನ್ನು ಕಾರ್ಯಗತ ಮಾಡಲಿಲ್ಲ ಎಂದು ನಾನು ಬಹಳ ವಿಷಾದ ಪಡುತ್ತಿದ್ದೇನೆ.

9 A.M.

ನಾವು ನಮ್ಮ ದೇಶದಲ್ಲಿ ನೀರಾವರಿಯನ್ನು ಹೆಚ್ಚು ಮಾಡಬೇಕಾದರೆ, ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ತೆಗೆದುಕೊಂಡಿರುವ ಯೋಜನೆಗಳನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕು. ಇಲ್ಲದಿದ್ದರೆ ನೀರಾವರಿ ಸೌಲಭ್ಯ ಖಂಡಿತವಾಗಿಯೂ ನಮಗೆ ಅಗತ್ಯವಾಗಿರುವಷ್ಟು ದೊರಕುವುದಿಲ್ಲ. ನೀರಾವರಿಯ ಪ್ರಮಾಣ ಹೆಚ್ಚಾಗುವುದಿಲ್ಲ. ನಮ್ಮಲ್ಲಿ ಇಷ್ಟು ಕಡಮೆಯಾಗಲು ಕಾರಣವೇನೆಂಬುದನ್ನು ಕಂಡುಹಿಡಿಯಬೇಕಾಗಿದೆ. ಸರಕಾರದವರು ಒಂದು ಕಾರಣವನ್ನು ಹೇಳಬಹುದು, ನಮಗೆ ಹಣದ ಕೊರತೆ ಇದೆಯೆಂದು ಹೇಳಬಹುದು. ಆದರೆ ಇನ್ನೂ ಬೇರೆ ಅನೇಕ ಕಾರಣಗಳೂ ಇವೆ ಎಂದು ನನ್ನ ಭಾವನೆ. ಅಂದಾಜು ಮಾಡುವುದರಲ್ಲಿ ಅನೇಕ ಲೋಪದೋಷಗಳಿವೆ, ಕಾರ್ಯಗತ ಮಾಡುವ ವಿಧಾನದಲ್ಲಿ ಅನೇಕ ಲೋಪದೋಷಗಳಿವೆ ಎನ್ನುವುದನ್ನು ಅನೇಕ ಪಬ್ಲಿಕ್ ಅಕೌಂಟ್ಸ್ ಕಮಿಟಿಗಳವರೂ ಮತ್ತು ಎ. ಜಿ. ರಾಮಚಂದ್ರರಾಯರ ಸಮಿತಿಯವರೂ ಸೂಚನೆ ಮಾಡಿದ್ದಾರೆ. ಯಾವುದೇ ಯೋಜನೆಯಾಗಲಿ, ಅದನ್ನು ಅಂದಾಜು ಮಾಡುವಾಗ ಆ ಅಂದಾಜನ್ನು ಕ್ರಮೇಣ ಬದಲಾಯಿಸುತ್ತಾ ಹೋಗುತ್ತಾರೆ; ಸ್ಪಿಲ್ ಓವರ್ ಆದರೆ ಒಂದಕ್ಕೆ ಎರಡರಷ್ಟಾಗುತ್ತದೆ. ಇದರಲ್ಲೇನೋ ಲೋಪವಿದೆ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಎಲ್ಲರೂ ಯೋಚನೆ ಮಾಡಬೇಕಾಗಿದೆ. ಇದಕ್ಕೆ ತಜ್ಞರ ಸಮಿತಿಯೊಂದನ್ನು ಏರ್ಪಾಡು ಮಾಡಿ ಇದರ ಕಾರಣವನ್ನು ಕಂಡುಹಿಡಿಯಬೇಕಾಗಿದೆ. ನಾವು ಯಾವ ಯಾವ ದೇಶದಿಂದಲೋ ಹಣವನ್ನು ಸಾಲ ತರುತ್ತಿದ್ದೇವೆ. ಸರಿಯಾದ ಅಂದಾಜಿಲ್ಲದೆ, ಲಂಗುಲಗಾಮಿಲ್ಲದೆ ಅದನ್ನು ಬದಲಾಯಿಸುವ ನೀತಿ ಕಟ್ಟ ಪರಿಣಾಮವನ್ನುಂಟುಮಾಡುತ್ತದೆ. ಇದರಿಂದ ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಲೋಪದೋಷಗಳುಂಟಾಗುವುದಲ್ಲದೆ ನಮ್ಮ ದೇಶದ ಹಣಕಾಸಿನ ಪರಿ-

ಸ್ಥಿತಿಯ ಮೇಲೆ ಸಹ ಪರಿಣಾಮವಾಗುತ್ತದೆ. ಆದಕಾರಣ ನಿರ್ದಿಷ್ಟವಾಗಿ ಒಂದು ಸಮಿತಿಯನ್ನು ರಚನೆ ಮಾಡಿ ನಮ್ಮ ಯೋಜನೆಗಳು ಸರಿಯಾದ ಫಲ ಕೊಡದೆಯಿರುವುದಕ್ಕೂ ಮತ್ತು ಅವು ಸರಿಯಾಗಿ ಕಾರ್ಯಗತವಾಗದೆ ಇರುವುದಕ್ಕೂ ಕಾರಣವೇನೆಂಬುದನ್ನು ಮಂತ್ರಿಗಳು ನೋಡಬೇಕು: ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡುವುದರಮೇಲೆಯೇ ನಮ್ಮ ದೇಶದ ಸಂಪತ್ತು ನಿಂತಿದೆ.

ಮೇಜರ್ ನೀರಾವರಿಗೆ ಚೀಫ್ ಇಂಜಿನಿಯರನ್ನು ನೇಮಕ ಮಾಡಿದ್ದಾರೆ, ಅವರೇ ಟೆಕ್ನಿಕಲ್ ಎಜುಕೇಷನ್ ಡೈರೆಕ್ಟರೂ ಆಗಿದ್ದಾರೆ; ಒಬ್ಬರೇ ಎರಡು ಕುದುರೆಗಳನ್ನು ಏಕ ಕಾಲದಲ್ಲಿ ಸವಾರಿಮಾಡುವುದು ಹೇಗೆ ಸಾಧ್ಯ ? ಎರಡು ಅಧಿಕಾರಗಳನ್ನೂ ಒಬ್ಬರೇ ಮಾಡಬೇಕೆಂದರೆ ಹೇಗೆ ಸಾಧ್ಯ ? ಎಷ್ಟೇ ದಕ್ಷರಾದರೂ ಎಷ್ಟೇ ನುರಿತವರಾದರೂ ಎರಡನ್ನೂ ಮಾಡುವುದು ಸಾಧ್ಯವಿಲ್ಲ. ನಾನು ವೈಯುಕ್ತಿಕ ಆಪಾದನೆಯನ್ನೇನೂ ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಇಂಜಿನಿಯರುಗಳಿದ್ದಾರೆ, ಒಬ್ಬೊಬ್ಬರನ್ನು ಒಂದೊಂದು ಬಾಬಿಗೆ ನೇಮಕ ಮಾಡಿ ಅದಕ್ಕೆ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕು. ಮೇಜರ್ ನೀರಾವರಿಗೆ ಅದರಲ್ಲಿ ಪ್ರವೀಣರಾಗಿರುವವರನ್ನು ನೇಮಕ ಮಾಡಬೇಕು, ಟೆಕ್ನಿಕಲ್ ಶಿಕ್ಷಣಕ್ಕೆ ಆ ಕ್ಷೇತ್ರದಲ್ಲಿ ಪ್ರವೀಣರಾಗಿರುವವರನ್ನು ನೇಮಿಸಬೇಕು. ಅವರವರ ಇಲಾಖೆಗೆ ಅವರವರನ್ನು ಜವಾಬ್ದಾರರನ್ನಾಗಿ ಮಾಡಿ, ಉತ್ತಮ ರೀತಿಯಲ್ಲಿ ಕೆಲಸವಾಗುವ ಏರ್ಪಾಡು ಮಾಡಬೇಕು. ಸರಿಯಾದ ಕಾರ್ಯವಿಂಗಡಣೆಯಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಅವರ ಶಾಖೆಯ ಬೇಡಿಕೆಯಮೇಲೆ ಮಾತನಾಡುವಾಗ ತಮ್ಮ ಜವಾಬ್ದಾರಿಯಿಂದ ಜಾರಿದರು. ಹಳೆಯ ಮೈಸೂರಿಗೆ ಇಷ್ಟು ಖರ್ಚು ಮಾಡಿದ್ದೇವೆ, ಹೊಸ ಮೈಸೂರಿಗೆ ಇಷ್ಟುಮಾಡಿದ್ದೇವೆ ಎಂದು ಹೇಳುವುದರ ಕಡೆಗೇ ಅವರ ಗಮನ ಹೋಯಿತು. ಅದು ಸರಿಯಲ್ಲ ನಮಗೆ ಅದು ಬೇಡ; ಇಡೀ ಮೈಸೂರು ದೇಶವನ್ನು ಯಾವ ರೀತಿ ಬೆಳೆಸುವುದು ಎನ್ನುವುದು ನಮಗೆ ಮುಖ್ಯ. ಮೈಸೂರು ರಾಜ್ಯದಲ್ಲಿರುವ ಸಂಪನ್ಮೂಲಗಳನ್ನು ಇಲ್ಲಿನ ಪ್ರಗತಿಗಾಗಿ ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಕಾವೇರಿ, ಕೃಷ್ಣಾ ಮುಂತಾದ ನದಿಗಳಿಗೆ ಸಂಬಂಧಪಟ್ಟಿರುವ ಯೋಜನೆಗಳನ್ನು ಬೇಗ ಕಾರ್ಯಗತಮಾಡಬೇಕು. ಇಡೀ ದೇಶಕ್ಕೆ ಆಹಾರವನ್ನೊದಗಿಸುವುದು ಪವಿತ್ರ ಕಾರ್ಯ. ಇಂತಹ ದೇಶಾಭ್ಯುದಯ ಯೋಜನೆಗಳನ್ನು ಕಾರ್ಯಗತ ಮಾಡುವಾಗ, ಸಾಧನ ಮಾಡುವಾಗ ಪಕ್ಷ ಮನೋಭಾವವನ್ನು ಬೆಳಸಬಾರದು. ಹಾರಂಗಿ, ಕಬಿನಿ, ಹೇಮಾವತಿ ಯೋಜನೆಗಳಲ್ಲಿ ರಾಜಕೀಯವಿದೆ ಎಂದು ಜನರು ಹೇಳುತ್ತಿದ್ದಾರೆ, ಆಡಳಿತ ಪಕ್ಷದವರೇ ಮಾಜಿ ಮಂತ್ರಿಗಳೇ ಮೊದಲಾಗಿ ಅನೇಕರು ರಾಜಕೀಯ ಮಾಡುತ್ತಿದ್ದಾರೆ. ನಾನು ಅವರ ಮೇಲಾಗಲೀ ಯಾರ ಮೇಲಾಗಲಿ ಅಪಾದನೆ ಮಾಡುವುದಿಲ್ಲ. ನಾವು ಯೋಜನೆಗಳ ಮಧ್ಯೆ ಇದ್ದೇವೆ. ಅವೆಲ್ಲವೂ ಕಾರ್ಯಗತವಾಗಿ ಅವುಗಳಿಂದ ಫಲಬರುವುದನ್ನು ನಿರೀಕ್ಷಿಸುತ್ತಿರುವ ಜನತೆ, ಅವುಗಳಿಂದ ದೇಶಕ್ಕೆ ಹೆಚ್ಚು ಸಂಪತ್ತು ಬರುತ್ತದೆಂದು ನಿರೀಕ್ಷಿಸುತ್ತಿದ್ದಾರೆ. ಈ ಯೋಜನೆಗಳ ಸಂಬಂಧವಾಗಿ ಆಡಳಿತಪಕ್ಷದಲ್ಲಿ ಎರಡು ಪಕ್ಷಗಳಾಗಿವೆ. ಒಂದು ಪಕ್ಷದವರು ಇದು ಸರಿ ಎಂದರೆ ಇನ್ನೊಂದು ಗುಂಪಿನವರು ಅದು ತಪ್ಪು ಎಂದು ಹೇಳುತ್ತಿದ್ದಾರೆ. ಮಂತ್ರಿಮಂಡಲದಲ್ಲಿರುವಾಗ ಒಂದು ರೀತಿ ಹೇಳುವುದು ಅಲ್ಲಿಂದ ಹೊರಗೆ ಹೋದಮೇಲೆ ಬೇರೆ ರೀತಿ ಹೇಳುವುದು, ವರ್ತಿಸುವುದು ಪ್ರಜಾಪ್ರಭುತ್ವಕ್ಕೆ ದೂರವಾದುದು. ಇದು ಜನತೆಯನ್ನು ಮೋಸ ಮಾಡುವ ಮಾರ್ಗ. ಈ ಯೋಜನೆಗಳನ್ನು ದೇಶದ ಯಾವ ರಾಜಕೀಯ ದೃಷ್ಟಿಯಿಂದಲೂ ನೋಡದೆ ದೇಶದ ಸಮಗ್ರ ಪ್ರಗತಿಯ ದೃಷ್ಟಿಯಿಂದ ನೋಡಬೇಕೆಂದು ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಜನತೆಯಲ್ಲಿ ಒಂದು ಒಳ್ಳೆಯ ಭಾವನೆ ಮೂಡಬೇಕಾಗಿದೆ. ಹಳೆಯ ಮೈಸೂರು, ಹೊಸ ಮೈಸೂರು ಎಂದು ಶ್ರೀಮಾನ್ ಪಾಟೀಲ್ ಅವರು ಹೇಳಿದ ಧೋರಣೆಯಲ್ಲಿ ಹೋಗಬಾರದು. ನಮ್ಮ ಭುಜವನ್ನು ನಾವೇ ತಟ್ಟಿಕೊಂಡರೆ ಸಾಲದು. ಜಟ್ಟಿಯವರು ಮತ್ತು ವೀರೇಂದ್ರ ಪಾಟೀಲ್ ಅವರು ಹೇಳುವುದಲ್ಲ, ಜನರಿಂದ ಸರ್ಟಿಫಿಕೇಟ್ ಪಡೆದುಕೊಳ್ಳುವ ಹಾಗೆ ಕಾರ್ಯ ಸಾಧನೆ ಮಾಡಬೇಕು. ಹೇಮಾವತಿ ಯೋಜನೆಯನ್ನು ಮೊದಲು ಒಂದು ರೀತಿ ಮಾಡಿದರು 120 ಅಡಿ ಎತ್ತರ 14—15 ಕೋಟಿ ರೂಪಾಯಿ ಖರ್ಚಿನಿಂದ ಮಾಡಬೇಕೆಂದು ಮಾಡಿದರು ; ಈಗ ಕೇವಲ ನಾಲ್ಕು ಕೋಟಿ ರೂಪಾಯಿನಲ್ಲಿ ಸುಮಾರು 22 ಸಾವಿರ ಎಕರೆ ನೀರಾವರಿಯಾಗುವಂತೆ ಮಾಡಬೇಕೆಂದು ಮಾಡಿದ್ದಾರೆ. ಇದು ಸಾಲದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇದು ಮೊದಲನೆಯ ಸ್ಟೇಜ್.

ಶ್ರೀ ಎಸ್. ಶಿವಪ್ಪ.—ಕಾವೇರಿ ನೀರಿನಲ್ಲಿ ನಮ್ಮ ಭಾಗವನ್ನು 1974 ರೊಳಗಾಗಿ ಪೂರ್ತಿಯಾಗಿ ಉಪಯೋಗ ಮಾಡುವುದಕ್ಕೆ ನಮಗೆ ಅವಕಾಶವಿರುವುದರಿಂದ ಆ ಯೋಜನೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಅಷ್ಟರಲ್ಲಿ ಪೂರೈಸುವ ಯೋಜನೆಯನ್ನು ಹಾಕಬೇಕೆಂದು ಸೂಚಿಸುತ್ತೇವೆ.

(ಶ್ರೀ ಎಸ್. ಶಿವಪ್ಪ)

ಕೃಷ್ಣಾನದಿ ಯೋಜನೆಗಳ ಸಂಬಂಧವಾಗಿ ಒಂದೆರಡು ಮಾತು ಹೇಳಬೇಕಾಗಿದೆ. ನಮಗೆ ಹಂಗಾಮಿ ಒಪ್ಪಂದದ ಪ್ರಕಾರ 600 ಟಿ ಎಂ ಸಿ ಎಫ್ ಟಿ ನೀರು ಸಿಕ್ಕಿದೆ. ಇದು ಇನ್ನೂ ಹೆಚ್ಚ ಬೇಕು. ಆಲಮಟ್ಟಿ ಮತ್ತು ನಾರಾಯಣಪುರದಲ್ಲಿ ದೊಡ್ಡ ದೊಡ್ಡ ಅಣೆಗಳನ್ನು ಕಟ್ಟಬೇಕಾದರೆ ನಮಗೆ ಬರಬೇಕಾದ ನೀರಿನ ಪರಿಮಿತಿಯನ್ನು ಹೆಚ್ಚಿಸಬೇಕಾಗಿದೆ. ಕೃಷ್ಣಾನದಿಯ ಪಾತ್ರದಲ್ಲಿರುವ ಯೋಜನೆಗಳಿಗೆ-ಇದುವರೆಗೆ ಮಲಪ್ರಭಾ, ಘಟಪ್ರಭಾ ಮತ್ತು ಮದರಾಸಿಗೆ 50 ಟಿ ಎಂ ಸಿ ಎಫ್ ಟಿ ಕೊಡಲು ಒಪ್ಪಿರುವುದು ಇದಕ್ಕೆಲ್ಲ 480 ಟಿ.ಎಂ. ಸಿ. ಎಫ್. ಟಿ. ಖರ್ಚಾಗಿ ಇನ್ನು 115—120 ಟಿ ಎಂ ಸಿ ಎಫ್ ಟಿ ಉಳಿಯುತ್ತದೆ. ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳಿಗೆ ಇನ್ನೂ ಸುಮಾರು 220 ಟಿ ಎಂ ಸಿ ಎಫ್ ಟಿ ಬೇಕಾಗುತ್ತದೆ. ಆದಕಾರಣ ನಮಗೆ ಉಳಿಯುವ 120 ಟಿ ಎಂ ಸಿ ಎಫ್ ಟಿ. 600ರ ಮೇಲಾಗಬೇಕಾಗುತ್ತದೆ. ಆದ್ದರಿಂದ ಇವತ್ತು ನಾವು ಯಾವ ಉದ್ದೇಶವನ್ನು ಸಾಧನೆ ಮಾಡಬೇಕೆಂದು ಹೊರಟಿದ್ದೀರೊ, ನಾರಾಯಣ ಪುರ ಮತ್ತು ಆಲಮಟ್ಟಿಯಲ್ಲಿ ಪ್ರಾಜೆಕ್ಟ್ ಕಟ್ಟ ಬೇಕೆಂದು ಹೊರಟಿದ್ದೀರೋ, ಅವು ಕಾರ್ಯಗತವಾಗ ಬೇಕಾದರೆ, ಕೃಷ್ಣನದಿ ನೀರಿನ ಹಂಚಿಕೆಯಲ್ಲಿ ಹೆಚ್ಚು ಭಾಗವನ್ನು ಹೊಂದಲೇ ಬೇಕಾಗಿದೆ. ಇಲ್ಲದಿದ್ದರೆ ಕೇವಲ ಭಾಷಣಗಳಲ್ಲಿಯೇ ತೃಪ್ತರಾಗಬೇಕಾಗಿದೆ. ಸರ್ಕಾರ ಅದರ ಜವಾಬ್ದಾರಿ ಯನ್ನು ತ್ವರಿತವಾಗಿ ನಿರ್ವಹಿಸಬೇಕು. ಕೇಂದ್ರ ಸರಕಾರ ಮತ್ತು ನೀರನ್ನು ಹಂಚಿಕೆ ಮಾಡತಕ್ಕಂಥ ಇರ್ರಿಗೇಶನ್ ಬೋರ್ಡಿನವರ ಹತ್ತಿರ ವಾದ ಮಾಡಿ ಮೈಸೂರು ದೇಶಕ್ಕೆ ಬರಬೇಕಾದ ಹೆಚ್ಚು ನೀರಿನ ಭಾಗವನ್ನು ಹೊಂದಲೇ ಬೇಕಾಗಿದೆ. ಕೃಷ್ಣನದಿಯಿಂದ ಸಂಪೂರ್ಣವಾದ ನೀರಿನ ಶಕ್ತಿಯನ್ನು ಹೊಂದಬೇಕಾಗಿದ್ದರೆ, ಕೊನೆಯ ಪಕ್ಷ ಒಂದು ಸಾವಿರ ಟಿ ಎಂ ಸಿ ನೀರನ್ನಾದರೂ ಅದರಿಂದ ಪಡೆ ಯಬೇಕು; 1,000 ಬಂದರೆ ಕೃಷ್ಣನದಿಯ ಪಾತ್ರದಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಾಣ ಮಾಡತಕ್ಕ ಕಾರ್ಯಸಾಧನೆಯಾಗುತ್ತದೆಂದು ನಾನು ನಂಬಿಕೊಂಡಿದ್ದೇನೆ.

ಇವತ್ತಿನ ಡಿಮ್ಯಾಂಡುಗಳಲ್ಲಿ ವಿದ್ಯುಚ್ಛಕ್ತಿ ಸ್ಕೀಮುಗಳನ್ನೂ ಸೇರಿಸಿದ್ದಾರೆ. ಇವತ್ತು ವಿದ್ಯು ಚ್ಛಕ್ತಿ ಡಿಮ್ಯಾಂಡು ಮನವಿಯ ಮೊಬಲಗು ಸುಮಾರು 22 ಕೋಟಿ ರೂಪಾಯಿ. ವಿದ್ಯುಚ್ಛಕ್ತಿ ಆಡ ಳಿತಕ್ಕೆ ಎಲೆಕ್ಟ್ರಿಸಿಟಿ ಬೋರ್ಡನ್ನು, ಸ್ವಯಂ ಆಡಳಿತ ಅಧಿಕಾರವನ್ನು ಹೊಂದಿರತಕ್ಕಂಥ ಮಂಡಳಿ ಯನ್ನು ರಚನೆಮಾಡಿದ್ದಾರೆ. ತಮ್ಮಲ್ಲಿ ನಾನು ಸಲಹೆ ಮಾಡುವುದು: ವಿದ್ಯುಚ್ಛಕ್ತಿಯ ಹೊಸಹೊಸ ಕಾಂಗಾರಿಗಳನ್ನು ಏನೇನು ನಿರ್ಮಾಣ ಮಾಡುತ್ತಿರೋ ಅವುಗಳ ನೇರವಾದ ಜವಾಬ್ದಾರಿಯನ್ನು ಬೋರ್ಡಿಗೇನೆ ವಹಿಸಬೇಕು, ಎಂದು ನಾನು ಭಾವನೆಮಾಡಿಕೊಂಡಿದ್ದೇನೆ. ಈಗ ಅದಕ್ಕೆ ಎಲೆಕ್ಟ್ರಿಸಿಟಿ ಲೈನು ಹಂಚತಕ್ಕ ಜವಾಬ್ದಾರಿಯನ್ನು ಮಾತ್ರ ಕೊಟ್ಟಿದ್ದೀರಿ. ಅವರಿಗೆ ಕನ್‌ಸ್ಟ್ರಕ್ಷನ್ ನಿರ್ವಹಿಸತಕ್ಕಂಥ ಜವಾಬ್ದಾರಿಯನ್ನು ನೇರವಾಗಿ ಕೊಡುವುದು ಒಳ್ಳೆಯದು. ಈ ಕನ್‌ಸ್ಟ್ರಕ್ಷನ್ ಬೋರ್ಡಿಗೆ ಕೊಡುವುದರ ಮುಖಾಂತರವಾಗಿ ಹೆಚ್ಚಿನ ರೀತಿಯಲ್ಲಿ ಅವರ ಮೇಲೆ ಜವಾಬ್ದಾರಿಯನ್ನು ಹಾಕಿ ಕೆಲಸವನ್ನು ಮಾಡಿಸಬಹುದು. ಸರಕಾರ ಅದರ ಮೇಲೆ ನಿಂತು ಮೇಲ್ವಿಚಾರಣೆ ಮಾಡ ತಕ್ಕಂಥ ಅಧಿಕಾರ ಹೊಂದಿರುವುದು ಒಳ್ಳೆಯದು ಎಂದು ನಾನು ಭಾವನೆಮಾಡಿಕೊಂಡಿದ್ದೇನೆ. ಈ ನೀತಿಯನ್ನು ಸರಕಾರ ಅನುಸರಿಸಬೇಕು.

ಶರಾವತಿ ವಿಚಾರಕ್ಕೆ ನಾನು ಹೋಗುವುದಿಲ್ಲ, ಅದರ ಬಗ್ಗೆ ಸರಕಾರದವರು ಶ್ವೇತಪತ್ರ ಹೊರಡಿಸಿದ್ದಾರೆ; ಅದು ದೊಡ್ಡದಾಗಿದೆ. ಅದರಮೇಲೆ ಭಾಷಣ ಮಾಡುವುದಕ್ಕೆ ಸಾಕಷ್ಟು ವೇಳೆ ಬೇಕು; ಅದರ ಮೇಲೆ 1 ಗಂಟೆ 2 ಗಂಟೆ ಕಾಲ ಭಾಷಣ ಮಾಡಬೇಕಾಗುತ್ತದೆ; ಚರ್ಚೆಮಾಡ ಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಒಂದು ದಿನವೊ, 2 ದಿನವೊ ಇಟ್ಟು ಕೊಂಡರೆ ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆಮಾಡಿ ಸರಕಾರದವರಿಗೆ ಈ ಸಭೆಯು ಅಭಿಪ್ರಾಯ ವನ್ನು, ತೀರ್ಮಾನವನ್ನೂ ಅಮೂಲಾಗ್ರವಾಗಿ ವಿಮರ್ಶೆಮಾಡಿ ಒದಗಿಸಬೇಕು. ನಾನು ಅದಕ್ಕೆ ಸರಕಾರಕ್ಕೆ ಸಲಹೆ ಮಾಡುತ್ತೇನೆ: ಇದಕ್ಕೆ ಒಂದೆರಡು ದಿನಗಳನ್ನು ಮೀಸಲಾಗಿಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುತ್ತಾ ಇದ್ದೇನೆ.

Mr. SPEAKER.—He is creating a sort of situtation as to whether other members should or should not deal with this subject. If other members deal with it and if he does not, then a situation arises.

ಶ್ರೀ ಎಸ್. ಶಿವಪ್ಪ.—ದೊಡ್ಡ ದೊಡ್ಡ ಬೇಡಿಕೆಗಳು ಸಭೆಯ ಮುಂದಿರುವುದರಿಂದ, ನಮಗೆ ಅವುಗಳನ್ನು ಡಿಸ್ಕಸ್ ಮಾಡುವುದಕ್ಕೇ ಟೈಮ್ ಬೇಕಾಗುತ್ತದೆ.

Mr. SPEAKER.—I have heard his suggestion. I cannot control the members if they begin to speak on it. He is under the impression

that they will not speak. It is better that we discuss it and come to a conclusion. I will invite the members concerned to meet me at 10-30 A.M. and then we can discuss and come to a conclusion.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೊನೆಯದಾಗಿ, ಸಾರ್ವಜನಿಕ ಆಡಳಿತ ಮತ್ತು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಿಷ್ಟೆ: ತಾವು ಈ ಮುಖ್ಯವಾದ ಇಲಾಖೆಗಳ ಮೇಲ್ವಿಚಾರಣೆ ಹೊಂದಿದ್ದೀರಿ. ಈ ಇಲಾಖೆಗಳು ಮೈಸೂರು ರಾಜ್ಯದ ಆಡಳಿತದ ಮೇಲೆ ಎಂತಹ ಪ್ರಭಾವ ಬೀರತಕ್ಕಂಥವು ಎಂದು ಸಾಕಷ್ಟು ತಿಳಿದುಕೊಂಡಿದ್ದೀರಿ. ಈ ದೇಶದಲ್ಲಿ ನಮ್ಮ ಸಾರ್ವಜನಿಕ ಆಡಳಿತದಲ್ಲಿ ಒಂದು ದೊಡ್ಡ ಲೋಪವಿದೆ. ಅದನ್ನು ತಮಗೆ ಖುದ್ದಾಗಿ ಹೇಳುತ್ತಾ ಇದ್ದೇನೆ. ಇದನ್ನು ಸರಿಮಾಡದೆಹೋದರೆ, ನಮ್ಮ ದೇಶದ ಆಡಳಿತ ಖಂಡಿತವಾಗಿ ಇನ್ನೂ ಕುಸಿದು ಬೀಳುತ್ತದೆ ಎಂಬ ಒಂದು ಶಂಕೆ ಇದೆ. ಏಕೆಂದರೆ ಅನೇಕರಿಗೆ ಸರಕಾರದ ಆಡಳಿತದಮೇಲೆ ಪ್ರಭಾವಬೀರಿ ಕಾನೂನು ಒಳಗೆಡೆ ಹೋಗುವ ಅವಕಾಶವಿದೆ ಎಂಬ ಶಂಕೆ ಮೂಡಿದೆ. ಆದ್ದರಿಂದ ಒಂದು ಬಿಗಿಮುಷ್ಟಿಯಿಂದ ತಾವು ಆಡಳಿತದಲ್ಲಿರತಕ್ಕಂಥ ಕಲ್ಮಷವನ್ನು ನಿರ್ನಾಮ ಮಾಡಬೇಕು; ಇಲ್ಲದೆ ಹೋದರೆ ತಮ್ಮ ಯೋಜನೆಗಳು ಖಂಡಿತ ಕಾರ್ಯಗತವಾಗುವುದಿಲ್ಲ. ತಾವು ಕಟ್ಟುನಿಟ್ಟಾಗಿ ಆಡಳಿತ ಕ್ರಮದಲ್ಲಿರುವ ಕಲ್ಮಷವನ್ನು ನಿರ್ಮೂಲ ಮಾಡಬೇಕೆಂದು ತಮ್ಮಲ್ಲಿ ಸಭಾಪತಿಯವರ ಮುಖಾಂತರ ಹೇಳಲಿಚ್ಛಿಸುತ್ತೇನೆ.

ದೊಡ್ಡ ದೊಡ್ಡ ಕಾಂಗಾರಿಗಳ ವಿಚಾರವಾಗಿ ಹೇಳುವುದಾದರೆ ಇದರ ಮೇಲೆ ಅನೇಕ ಶಂಕೆಗಳು ಬಂದಿವೆ, ದೊಡ್ಡ ದೊಡ್ಡ ಯೋಜನೆಗಳನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಭಾರಿಭಾರಿ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೀರಿ. ನಮ್ಮ ದೇಶದಲ್ಲಿರತಕ್ಕ ಇಂಜನಿಯರುಗಳು ಮತ್ತು ಇತರ ಅಧಿಕಾರಿಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಅವರು ಬೀರುತ್ತಿದ್ದಾರೆ. ಅಂದಾಜುಗಳನ್ನು ಕೂಡ ಬದಲಾಯಿಸತಕ್ಕಂಥ ಶಕ್ತಿಯನ್ನು ಈ ಕಂಟ್ರಾಕ್ಟರುಗಳ ಹೊಂದಿದ್ದಾರೆ. ನಮ್ಮ ದೇಶದಿಂದ ಅವರಿಗೆ ನ್ಯಾಯವಾಗಿ ಎಷ್ಟು ಹಣ ತಲುಪಬೇಕೊ ಅದಕ್ಕಿಂತ ಹೆಚ್ಚಿಗೆ ಸಂದಾಯವಾಗುತ್ತಿರುವುದನ್ನು ನಿಲ್ಲಿಸಬೇಕು. ಯಾವ ಕಂಟ್ರಾಕ್ಟುದಾರರ ಪ್ರಭಾವಕ್ಕೂ ಅಧಿಕಾರಿಗಳು ಒಳಗಾಗದಂತೆ ಮಾಡಬೇಕು. ಅಷ್ಟೇ ಅಲ್ಲದೆ, ದೇಶದ ಖಜಾನೆಯ ಒಂದು ಬಿಡಿಕಾಸೂ ಸರಿಯಾಗಿ ಖರ್ಚಾಗಬೇಕು. ಅಂಥ ಒಂದು ಕಾರ್ಯಕ್ರಮವನ್ನು ಇವತ್ತಿನ ದಿವಸ ಬಿಗಿಯಾಗಿ ತೆಗೆದುಕೊಳ್ಳದೆ ಹೋದರೆ, ನಮ್ಮ ದೇಶದ ಹಣಕಾಸಿನ ಸ್ಥಿತಿ ದುಸ್ಥಿತಿಗೆ ಒಳಗಾಗುವುದರಲ್ಲಿ ಸಂಶಯವಿಲ್ಲ. ನಮ್ಮ ಹಣಕಾಸಿನ ಸಚಿವರೇ 50-60 ಕೋಟಿ ರೂಪಾಯಿ ಸರಕಾರಕ್ಕೆ ಕಡಿಮೆ ಬರುವ ಅಪಾಯ ಬಂದಿದೆ ಎಂಬ ಒಂದು ಅಂಶವನ್ನು ಕೂಡ ಹೇಳಿದ್ದಾರೆ. ಆದ್ದರಿಂದ ಖರ್ಚಿನಮೇಲೆ ಬಹಳ ಬಿಗಿಯಾದ ಹಿಡಿತವನ್ನು ಇಟ್ಟುಕೊಳ್ಳಬೇಕು ಮತ್ತು ದೊಡ್ಡ ದೊಡ್ಡ ಕಂಟ್ರಾಕ್ಟರುಗಳ ಪ್ರಭಾವಕ್ಕೆ ಯಾರೂಕೂಡ ಒಳಗಾಗದಂತೆ ಸೂಕ್ತ ಕಾರ್ಯಕ್ರಮವನ್ನು ಹಾಕಿ ಅನುಸರಿಸಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಂಟ್ರಾಕ್ಟರುಗಳಿಗೆ ಕೊಡದೆ, 10 ಲಕ್ಷಕ್ಕಿಂತ ಹೆಚ್ಚಿನ ಮೊಬಲಗಿರುವ ಕೆಲಸವನ್ನು ಸರಕಾರವೇ ನೇರವಾಗಿ ಮಾಡಬೇಕು. ಹಿಂದೆ ಮಾಡುತ್ತಾ ಇದ್ದರು. ನಿಮಗೆ ಅಧಿಕಾರಿಗಳು ಇದ್ದಾರೆ. ದುಡ್ಡೂ ಸರಕಾರದ್ದು ಇದೆ. ಮೆಶಿನರಿಯೂ ನಿಮ್ಮದು ಬೇಕಾದಷ್ಟು ಇದೆ. ಬೇಕಾದಷ್ಟು ಇಂಜನಿಯರುಗಳು ಇದ್ದಾರೆ. ಆದ್ದರಿಂದ ಸರಕಾರವೇ ಕಂಟ್ರಾಕ್ಟು ತಪ್ಪಿಸಿ ನೇರವಾಗಿ ಕೆಲಸ ಮಾಡಬಹುದು. ಹಳೆ ಮೈಸೂರಿನಲ್ಲಿ ಹಿಂದಿನ ಸರಕಾರದವರು ಮಾಡುತ್ತಾ ಇದ್ದರು.

ನಾನು ಮೊದಲೆ ಹೇಳಿದ ಹಾಗೆ ಶರಾವತಿ ಬಗ್ಗೆ ಮಾತನಾಡಲು ಬೇರೆ ದಿನ ಏರ್ಪಾಡು ಮಾಡಿ ಕೊಡಬೇಕು. ನಾನು ನನ್ನ ಮಾತನ್ನು ಅಗ್ಗೆ ಇರಿಸುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಈ ಮಾನ್ಯ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳಿಗೆ ನಾನು ಸಂಪೂರ್ಣವಾಗಿ ಅನುಮೋದನೆ ನೀಡುತ್ತೇನೆ. ಈ ಬೇಡಿಕೆಗಳು ಬಹಳ ಪರಿಹಾರದ ಕಾರ್ಯಗಳ ಮೇಲೆ ನಿಂತಿವೆ; ಮುಖ್ಯವಾಗಿ ದೊಡ್ಡ ನೀರಾವರಿ ಯೋಜನೆಗಳು, ಬಹಳ ಮುಖ್ಯವಾದಂಥ ವಿಚಾರ. ಆಮೇಲೆ ಮಧ್ಯವರ್ತಿ ನೀರಾವರಿ ಕೆಲಸಕಾರ್ಯಗಳು, ವಿದ್ಯುಚ್ಛಕ್ತಿ ಹಾಗೂ ಸಾಧಾರಣ ರಾಜ್ಯಭಾರ ಕ್ರಮ. ಈ ಪ್ರಾಮುಖ್ಯವಾದಂಥ ಬೇಡಿಕೆಯನು ಮಾನ್ಯ ಮುಖ್ಯಮಂತ್ರಿಗಳು ಈ ಮಾನ್ಯ ಸಭೆಯ ಮುಂದೆ ಇಟ್ಟಿದ್ದಾರೆ.

ಮೊದಲನೆಯದಾಗಿ, ನೀರಾವರಿ ಯೋಜನೆಗಳಲ್ಲಿ ಕೃಷ್ಣ-ಗೋದಾವರಿ ನೀರಿನ ಹಂಚಿಕೆ ಹಾಗೂ ಕೃಷ್ಣದಂಡೆಮೇಲೆ ಕಟ್ಟತಕ್ಕಂಥ ಆಲಮಟ್ಟಿ ಮತ್ತು ನಾರಾಯಣಪುರ ಪ್ರಾಜೆಕ್ಟುಗಳ ವಿಚಾರ ಬಹಳ ಪ್ರಾಮುಖ್ಯವಾದುದು. ಮೊದಲನೆಯದಾಗಿ ಕೃಷ್ಣ ನದಿ ನೀರಿನ ಹಂಚಿಕೆಯಲ್ಲಿ ನಮಗೆ ಏನು 600 ಟಿ.ಎಂ.ಸಿ ಫೀಟ್ ನೀರನ್ನು ಕೊಟ್ಟಿದ್ದಾರೆ ಅದು ನಮಗೆ ಸಾಲದು; ನಮಗೆ ನ್ಯಾಯವಾಗಿ ಸಲ್ಲಬೇಕಾದಂಥ ನೀರನ್ನು ಕೊಡಬೇಕೆಂಬ ಮನವಿಯನ್ನು ಕೇಂದ್ರಸರಕಾರದ ಮುಂದೆ ಇಟ್ಟಿದ್ದಾರೆ ಮತ್ತು ಅದನ್ನು ಒತ್ತಾಯಪಡಿಸಿಕೊಂಡು ಬರುತ್ತಾ ಇದ್ದಾರೆ. ಏನು ಕಾರ್ಯಗತವಾಗಿದೆ

(ಶ್ರೀ ಡಿ. ಎಂ. ಸಿದ್ದಯ್ಯ)

ಎಂಬ ವಿಚಾರದಲ್ಲಿ ಈ ನೀರನ್ನುಪಯೋಗಿಸಿಕೊಂಡು ಆಲಮಟ್ಟಿ ಮತ್ತು ನಾರಾಯಣಪುರ ಪ್ರಾಜೆಕ್ಟುಗಳ ವಿಷಯದಲ್ಲಿ, ಪತ್ರಿಕೆಗಳಲ್ಲಿ, ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರುಗಳು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ನಾರಾಯಣಪುರ ಕಟ್ಟುವುದರಿಂದ ನಮ್ಮ ಭಾಗ ಕ್ಷಾಮಡಾಮರಗಳಿಗೆ ಒಳಗಾಗುವಂತಹ ಬಿಜಾಪುರ ಹಾಗೂ ಬೊಂಬಾಯಿ ಕರ್ಣಾಟಕಗಳಿಗೆ ಬಹಳ ಅನಾನುಕೂಲಗಳಾಗುತ್ತವೆ, ಆದಕ್ಕಾಗಿ ಆಲಮಟ್ಟಿಯನ್ನು ಮೊದಲು ಆಮೇಲೆ ನಾರಾಯಣಪುರ ಕಟ್ಟಬೇಕೆಂದು ಹೇಳಿದ್ದಾರೆ. ಮತ್ತು ಮಾನ್ಯ ಸದಸ್ಯರೂ ಇಲ್ಲಿ ಸಲಹೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ವೇಳೆ, ಒಂದಲ್ಲ ಎರಡಲ್ಲ ಅನೇಕ ಸಾರಿ ಎರಡು ಪ್ರಾಜೆಕ್ಟುಗಳನ್ನೂ ಒಟ್ಟಿಗೆ ಕಟ್ಟುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನನಗಾದರೂ ತೋರುವುದು, ಆಲಮಟ್ಟಿ ಮೊದಲು ಕಟ್ಟಬೇಕು ಎನ್ನುವುದು ನನ್ನ ನಿರ್ದಿಷ್ಟವಾದ ಅಭಿಪ್ರಾಯ. ನಾರಾಣಪುರದ ಅಣೆಕಟ್ಟೆಯನ್ನು ಮೊದಲೇ ಕಟ್ಟುವುದಾದರೆ ನಮ್ಮ ಬೊಂಬಾಯಿ ಭಾಗದ ಕರ್ಣಾಟಕದಲ್ಲಿ ನೀರಾವರಿಸೌಕರ್ಯವೇ ಸಿಗದೆ ನೆರೆಯ ಪ್ರಾಂತವಾದ ಆಂಧ್ರ ಪ್ರದೇಶಕ್ಕೆ ಸಹಾಯವಾಗಬಹುದು. ಆಂಧ್ರಪ್ರದೇಶಕ್ಕೆ ಸಹಾಯವಾಗಬಾರದು ಎಂದು ಹೇಳುವವನು ನಾನಲ್ಲ. ಅಣೆಕಟ್ಟುಗಳಲ್ಲಿ ಹಾಗೂ ಯೋಜನೆಗಳಲ್ಲಿ ಅಲ್ಲಿರುವ ಇರಿಗೇಷನ್ನು ಪರ್ಸೆಂಟೇಜು ಸುಮಾರು 23-24ರಷ್ಟು ಇದೆ ಮತ್ತು ನೀರಾವರಿ ಯೋಜನೆಗಳಲ್ಲಿ ಅವರು ಮುಂದುವರಿದಿದ್ದಾರೆ. ನಮ್ಮ ರಾಜ್ಯದಲ್ಲಿ ಕೇವಲ ಏಳು ಪರ್ಸೆಂಟುಗಳಷ್ಟು ಮಾತ್ರ ಇದೆ. ವಿವಿಧ ಭಾಗಗಳು ಸೇರಿ ವಿಶಾಲ ಮೈಸೂರು ಆದಮೇಲೆ ಬಹುಭಾಗದಲ್ಲಿ ಕೃಷ್ಣಾನದಿಯ ನೀರಿನ ಹತೋಟಿಯಿಂದಾಗಿ ನಮ್ಮ ದೇಶದ ನೀರಾವರಿ ಯೋಜನೆಗಳಿಂದ ಹೆಚ್ಚಾಗಿ ಕೋಟ್ಯಾಂತರ ಜನಗಳ ಭವಿಷ್ಯ ರೂಪುಗೊಂಡಿದೆ. ನಾವು ಅನೇಕ ಸಮಸ್ಯೆಗಳನ್ನು ನಿಧಾನವಾಗಿ ಪರಿಹರಿಸಿಕೊಂಡು ಹೋಗಬೇಕು. ಜನರಲ್ ಅಡ್ಮಿನಿಸ್ಟ್ರೇಷನ್ನು ಕುಂದುಕೊರತೆಗಳನ್ನು ಸರಕಾರದವರು, ಮುಖ್ಯಮಂತ್ರಿಗಳು, ದಿನಕ್ರಮೇಣ ಪರಿಹರಿಸಿಕೊಂಡು ಹೋಗುವ ಪ್ರಯತ್ನ ಮಾಡಬೇಕು. ಮಹಾಯೋಜನೆ ಕಟ್ಟುವುದು ಒಂದೇ ಸಾರಿ ಒಂದು ಸಾರಿಕಟ್ಟುವ ಕಾಲದಲ್ಲಿ, ಸಕಾಲದಲ್ಲಿ ಸರಿಯಾದಂತಹ ನೀರಿನ ಹಂಚಿಕೆಯಿಂದ ಕಟ್ಟಿದ್ದೇ ಆದರೆ ಕೋಟ್ಯಾಂತರ ಜನ ಕ್ಷಾಮಡಾಮರಗಳಿಗೆ ತುತ್ತಾಗುತ್ತಿರುವುದು ತಪ್ಪುತ್ತದೆ, ಈ ಕರ್ಣಾಟಕದ ರಾಜ್ಯವನ್ನು ಒಂದು ಸುಖೀರಾಜ್ಯ ಮಾಡಬೇಕು ಎನ್ನುವ ಉದ್ದೇಶ ನಿಜವಾಗಿ ಸಫಲವಾಗಬೇಕಾದರೆ, ನಾವು ಇವೊತ್ತಿನ ದಿವಸ ಆಲಮಟ್ಟಿಯ ಬಳಿ ದೊಡ್ಡ ಡ್ಯಾಮನ್ನು ಕಟ್ಟಿಕೊಂಡು ಹೋಗುವುದರ ಜೊತೆಗೆ ನಾರಾಯಣಪುರದ ಕಟ್ಟೆಯನ್ನೂ ಕಟ್ಟಿಕೊಂಡು ಹೋಗುವ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ಭರವಸೆ ಇದೆ. ನಾನು ಮೊದಲೇ ತಿಳಿಸಿದ ಹಾಗೆ ಈ ಮಾನ್ಯ ಸಭೆಯಲ್ಲಿಯೂ ಮತ್ತು ಮೇಲ್‌ಮನೆಯಲ್ಲಿಯೂ ಭರವಸೆ ಕೊಟ್ಟಿದ್ದಾರೆ ಮತ್ತು ಹಾಗೆ ಮಾಡುತ್ತಾರೆಂಬ ನಂಬಿಕೆಯೂ ನಮಗೆ ಕೂಡ ಇದೆ. ಇಂತಹ ಪ್ರಾಜೆಕ್ಟು ಕಟ್ಟುವಾಗ ಹಣದಕೊರತೆ ಬರುವುದು ಸಹಜವಾಗಿಯೇ ಇದೆ. ಹೆಚ್ಚಾಗಿ ಕೈಗಾರಿಕೆಗಳಿಗಾಗಿ ಹಣ ಪಡೆಯುವ ಸಾಹಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ಮೈಸೂರು ಪ್ರಾಂತದ ಮುಖ್ಯ ಮಂತ್ರಿಗಳಾಗಿ ಒತ್ತಾಯಮಾಡುತ್ತಾರೆಂಬ ಭರವಸೆಯೂ ಇದೆ. ಮೇಜರು ಪ್ರಾಜೆಕ್ಟುಗಳನ್ನು ಕಟ್ಟುವುದೂ ಇದಕ್ಕೇ. ಮೀಡಿಯಂ ಪ್ರಾಜೆಕ್ಟು ಕೂಡ ಆಗಬೇಕಾಗಿದೆ. ಕಾವೇರಿ ಬೇಸಿನ್‌ನಲ್ಲಿ ಬಹಳ ಪ್ರಾಜೆಕ್ಟುಗಳು ಆಗಬೇಕಾಗಿದೆ. ಮದರಾಸು ಸರಕಾರದೊಡನೆ ಹಿಂದೆ ಆದ ಅಗ್ರಿಮೆಂಟಿನ ಪ್ರಕಾರ ಇನ್ನೂ 10 ವರ್ಷಗಳಷ್ಟು ಅವಧಿ ಇದೆ. 1974 ಇಸವಿಯ ವೇಳೆಗೆ ಮದರಾಸು ಸರಕಾರಕ್ಕೂ ನಮಗೂ ಆಗಿರುವ ಒಪ್ಪಂದ ಮುಗಿಯುವ ಸ್ಥಿತಿಯಲ್ಲಿದೆ. ಅದರೊಳಗೆ ಕೃಷ್ಣಾನದಿಯ ಯೋಜನೆಗಳಿಗಾಗಿ ಕೋಟ್ಯಾಂತರ ರೂಪಾಯಿಗಳು ಆಗುವಂತೆ ಕಾವೇರಿ ಬೇಸಿನ್‌ನಲ್ಲಿ ಇರತಕ್ಕ ಯೋಜನೆಗಳನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿಗಳು ಬೇಕಾಗಬಹುದು. ಇಷ್ಟೊಂದು ಗುರುತರವಾದ ಜವಾಬ್ದಾರಿ ಸರಕಾರದ ಮೇಲೆ, ಮುಖ್ಯ ಮಂತ್ರಿಗಳ ಮೇಲೆ ಬಿದ್ದಿದೆ ಎಂಬುದನ್ನು ನಾನು ಹೇಳಬಯಸುತ್ತೇನೆ. ವಿಶಾಲ ಕರ್ಣಾಟಕ ಕಟ್ಟುವುದಕ್ಕಾಗಿ ಸರ್ವಸಾಹಸಮಾಡಿ ಅದರ ಶಿಲ್ಪಿಗಳಾಗಿದ್ದವರು ಮೂರು ಸಾರಿ ಈ ದೇಶಕ್ಕೆ ಮುಖ್ಯಮಂತ್ರಿಗಳಾಗಿ ಚುನಾಯಿತರಾಗಿ ಬಂದಿದ್ದಾರೆ. ಅವರು ಇಂತಹ ಮುಖ್ಯ ಇಲಾಖೆಗಳನ್ನೂ ವಹಿಸಿಕೊಂಡು ಐದು ಭಾಗಗಳೂ ಸೇರಿರುವ ಎರಡೂವರೆ ಕೋಟಿಯಷ್ಟು ವಿಶಾಲ ಮೈಸೂರಿನ ಹಾಗೂ ಕರ್ಣಾಟಕದ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದವರಾಗಿದ್ದಾರೆ ಮತ್ತು ಅವರ ಭವಿಷ್ಯವನ್ನು ರೂಪಿಸುತ್ತಿದ್ದಾರೆ. ಹಿಂದೆ ಇದ್ದುದಕ್ಕಿಂತ ನಮ್ಮ ದೇಶದ ಸಂಪತ್ತನ್ನು ಕೈಗಾರಿಕೆಗಳ ಅಭಿವೃದ್ಧಿಯನ್ನು ಮಾಡಲು ನಾವು ಮೊದಲನಿಂದಲೂ ಏನು ಒಂದು ನಿರ್ಧಾರ ಮಾಡಿದ್ದೇವೋ ಎಂದರೆ ಸಮತಾವಾದದ ಸಮಾಜವನ್ನು ಕಟ್ಟಬೇಕಾದರೆ ನಿಜವಾಗಿಯೂ ಮೇಜರು ಮತ್ತು ಮೈನರು ಇರಿಗೇಷನ್ನು ಯೋಜನೆಗಳು ಸಕಾಲದಲ್ಲಿ ಆಗತಕ್ಕದ್ದು ಒಳ್ಳೆಯದೇ. ಕಾವೇರಿ

ಬೇಸಿನ್‌ನಲ್ಲಿರುವ ಕಪಿನಿ ಪ್ರಾಜೆಕ್ಟು ಯೋಜನೆ ಸುಮಾರು 10 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈಗ ಪ್ರಾರಂಭವಾಗಿದೆ. ಮುಖ್ಯ ಮಂತ್ರಿಗಳು ಮೈಸೂರು ಜಿಲ್ಲೆಗೆ ಪ್ರವಾಸಕ್ಕೆ ಬಂದಾಗ ನಂಜನಗೂಡು ಬಳಿ ಇರುವ ಸಬ್‌ಡಿವಿಜನ್ನಿನಲ್ಲಿ ಸುಮಾರು 60-70 ಎಕರೆಯಷ್ಟು ಭೂಮಿಗೆ ನೀರಾವರಿ ಸೌಕರ್ಯ ದೊರೆಯುವುದಾಗಿದೆ, ಬಿಜಾಪುರ, ಧಾರವಾರ ಮುಂತಾದ ಭಾಗಗಳು ಕ್ಷಾಮಕ್ಕೆ ತುತ್ತಾಗಿವೆ. ಅಲ್ಲಿ ಮಳೆ ಇಲ್ಲವಿದ್ದರೆ ಇನ್ನೂ ಕಷ್ಟದ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಆ ಭಾಗದ ಜನಗಳಿಗೂ ನೀರಿನ ಸೌಕರ್ಯ ಸಕಾಲದಲ್ಲಿ ಒದಗದಿದ್ದರೆ, ಮಳೆ ಬಾರದೇ ಇದ್ದರೆ, ಅವರಿಗೆ ತೊಂದರೆಯಾಗುತ್ತದೆ, ನಮ್ಮ ಕಪಿನಿಯೋಜನೆ ಮೂರು ವರ್ಷದಲ್ಲಿ ಇದು ಮುಗಿಯತಕ್ಕ ಭರವಸೆ ಇದೆ; ಇದಕ್ಕಾಗಿ ಒಂದು, ಒಂದೂವರೆ ಕೋಟಿ ರೂಪಾಯಿಗಳಷ್ಟು ಕೆಲಸ ಸಾಗಿದೆ ; ಇದರ ಕೆಲಸ ತೀವ್ರಗತಿಯಿಂದ ಮುಗಿಯುತ್ತದೆ ಎನ್ನುವ ಭರವಸೆ ಇದೆ. ಆದ್ದರಿಂದ ಅದು ಇನ್ನು ಎರಡು ಮೂರು ವರ್ಷಗಳ ಕಾಲದಲ್ಲಿ ಪೂರ್ಣವಾಗಿ ಮಾಡಿದರೆ ನಮ್ಮ ಪ್ರಾಂತದ ಜನಗಳಿಗೆ ಸುಮಾರು 60-70 ಸಾವಿರ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಕಲ್ಪಿಸತಕ್ಕ ವ್ಯವಸ್ಥೆಯನ್ನು ಸಕಾಲದಲ್ಲಿ ಸಿಗುವಂತೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಸೂಚಿಸುತ್ತೇನೆ. ಎರಡನೇದು, ನಮ್ಮ ಕಾವೇರಿ ಬೇಸಿನ್‌ನಲ್ಲಿ ಸುವರ್ಣಾವತಿ ಪ್ರಾಜೆಕ್ಟಿಗಾಗಿ ಒಂದು ಕೋಟಿ 20 ಲಕ್ಷದಷ್ಟು ಆಗುವ ಯೋಜನೆ ಇದೆ, ಇದಾಗತಕ್ಕದ್ದು ಮತ್ತು ಚಿಕ್ಕಹೊಳೆ ಯೋಜನೆಗಾಗಿ ಸುಮಾರು 60 ಲಕ್ಷದಷ್ಟು ಖರ್ಚಾಗುತ್ತದೆ. ಈ ಕೆಲಸ ಪ್ರಾರಂಭ ಮಾಡಿದರೆ ಸುಮಾರು ನಾಲ್ಕು ಸಾವಿರ ಎಕರೆಗಳಷ್ಟು ಭೂಮಿಗೆ ನೀರಿನ ಸೌಕರ್ಯ ಸಿಗುವ ಸ್ಥಿತಿಯಲ್ಲಿದೆ. ಸುವರ್ಣಾವತಿ ಪ್ರಾಜೆಕ್ಟನ್ನು ಮೂರನೇ ಯೋಜನೆಯಲ್ಲಿ ಸೇರಿಸಿಲ್ಲ. ಅನೇಕ ವೇಳೆ ಈ ಪ್ರಶ್ನೆಗಳು ಬಂದಾಗ ನಮ್ಮ ಜಿಲ್ಲೆಯನ್ನು ಸುಧಾರಿಸಿಕೊಳ್ಳುವುದಕ್ಕೆ ಇದನ್ನು ಮೂರನೆ ಯೋಜನೆಯಲ್ಲಿ ಸೇರಿಸಬೇಕೆಂದು ಹೇಳುತ್ತಿದ್ದರು, ಸೇರಿಸಿ, ಮಾಡುತ್ತಾರೆ ಎಂಬ ಭರವಸೆ ಇತ್ತು. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದು ಸುವರ್ಣಾವತಿ ಪ್ರಾಜೆಕ್ಟು ಬಹು ಭಾಗದ ಜನಗಳಿಗೆ ಅನುಕೂಲವಾಗುವಂತಹುದು. ಸುವರ್ಣಾವತಿ ಪ್ರಾಜೆಕ್ಟಿಗಾಗಿ ಖರ್ಚಾಗತಕ್ಕ ಹಣ ಅಷ್ಟೊಂದು ಹೆಚ್ಚಿನದೇನೂ ಅಲ್ಲ. ಈ ಒಂದು ಸುವರ್ಣಾವತಿ ಪ್ರಾಜೆಕ್ಟನ್ನು ಮೂರನೇ ಯೋಜನೆಯೊಳಗೇ ಪ್ರಾರಂಭ ಮಾಡಬೇಕು ಎಂದು ಸೂಚಿಸಬಯಸುತ್ತೇನೆ.

ಹಾಗೆ ಕಾವೇರಿ ಬೇಸಿನ್‌ನಲ್ಲಿ ಹಾರಂಗಿ ಪ್ರಾರಂಭ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿದ್ದಾರೆ. ಹಾರಂಗಿ ಕಂಬದಕಡದ ವಿಷಯದಲ್ಲಿ ಬೇಕಾದಷ್ಟು ಈ ಮನೆಯಲ್ಲಿ ಇಲ್ಲದ ಶಂಕೆಗಳು, ಹೊರಗಡೆ ವೃತ್ತಪತ್ರಿಕೆಗಳಲ್ಲಿ ವಿಜ್ಞಾಪನೆಗಳು, ಇದರ ಬಗ್ಗೆ ಬೆದರಿಕೆಗಳು ಜನತೆಗೆ ಒಂದು ತಪ್ಪು ಅಭಿಪ್ರಾಯವನ್ನು ಕೊಡುವಂತಹ ಜವಾಬ್ದಾರಿಯಿಂದ ಹೇಳಿಕೆಗಳನ್ನು ಕೊಡುವುದಾದರೆ ಅದಕ್ಕೆ ಯಾವ ಮಾನ್ಯತೆಯೂ ಕೊಡುವಂತಹುದಲ್ಲ ಎಂದು ನಾನು ಹೇಳಬಯಸುತ್ತೇನೆ. ಈ ಪ್ರಾಜೆಕ್ಟುಗಳು ಆಗಬೇಕಾದುದು ಬಹಳ ಮುಖ್ಯ. ನೀರಾವರಿಯ ಹಿತದಿಂದ ಹೆಚ್ಚು ಮುಳುಗಡೆ ಆಗತಕ್ಕ ಪ್ರಾಂತಗಳು ಬಂದರೆ ಯಾವ ರೀತಿಯಲ್ಲಿ ಮುಳುಗಡೆ ಕಡಿಮೆ ಮಾಡಬಹುದು ಎನ್ನುವುದನ್ನು ಬಹು ಜನರ ಹಿತದೃಷ್ಟಿಯಿಂದ ಮಾಡಬೇಕು. ಹಾರಂಗಿ ಮತ್ತು ಕಂಬದಕಡ ಪ್ರಾಜೆಕ್ಟನ್ನು ಮೂರು ವರ್ಷಗಳ ಹಿಂದೆಯೇ ಪ್ರಾರಂಭ ಮಾಡುತ್ತಾರೆಂದು ಇತ್ತು. ಆದರೆ ಇದು ಒಂದು ತರಹದ ಕ್ವಾಕ್ ಡಾಕ್ಟರಿನಂತೆ, ಒಂದು ಪೊಲಿಟಿಕಲ್ ಸ್ಟಂಟಿನಂತೆ, ಪ್ರಚಾರ ಮಾಡುವುದು, ಕ್ವಾಕ್ ಡಾಕ್ಟರು ಪ್ರಚಾರ ಮಾಡುವುದಕ್ಕಾಗಿ ಒಬ್ಬರನ್ನು ಇಟ್ಟುಕೊಂಡಿರುತ್ತಾನೆ. ಅವನು ಪ್ರತಿಯೊಂದು ಕಾಯಿಲೆಗೂ ಒಂದೇ ರೀತಿಯಾದ ಔಷಧಿ ಕೊಟ್ಟು ಇದರಿಂದ ರೋಗ ವಾಸಿಯಾಗುತ್ತದೆ ಎಂದು ಹೇಳುತ್ತಾನೆ. ಅದರಂತೆ ಜನಗಳನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಅಂಕಿ ಅಂಶಗಳಿವೆ. ಅದನ್ನು ಹೇಳಿ ತಿಳಿಯದೇ ಇರತಕ್ಕ ಜನಗಳಿಗೆ ತಪ್ಪು ಭಾವನೆಯನ್ನುಂಟುಮಾಡಿ ಕೆಲವರ ಮನಸ್ಸಿನಲ್ಲಿ ಅಲ್ಲ ಕಲ್ಲೋಲವನ್ನುಂಟು ಮಾಡುವುದಕ್ಕಿಂತ, ನಿಜವಾಗಿ ಸರ್ಕಾರ ತಕ್ಕ ಯೋಜನೆಗಳನ್ನು ಇಟ್ಟುಕೊಂಡು ವಿಶಾಲ ಮೈಸೂರಿನ ಅನುಕೂಲಕ್ಕೆ ವಿಶಾಲ ಮೈಸೂರಿನ ಹಿತಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು. ನಾನು ಮೊದಲೇ ತಿಳಿಸಿದ ಹಾಗೆ ಕೇವಲ ನಮ್ಮ ದೇಶದಲ್ಲಿ ಏಳು ಪರ್ಸೆಂಟಿನಷ್ಟು ನೀರಾವರಿಯ ಸೌಕರ್ಯಗಳು ದೊರೆತಿವೆ. ಇದು ಕೊನೆಯಪಕ್ಷ 20 ರಿಂದ 25 ಪರ್ಸೆಂಟಿನಷ್ಟಾದರೂ ತೆಗೆದುಕೊಂಡು ಹೋಗದ ಪಕ್ಷದಲ್ಲಿ ಆಹಾರ ಸಮಸ್ಯೆ ಬಗೆಹರಿಯುವುದರಲ್ಲಿ ಆಗಲಿ ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವುದರಲ್ಲಿ ಆಗಲಿ ಬಹಳ ಕುಂಠಿತವಾಗುತ್ತದೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಕೆಲಸಗಳನ್ನು ಏಕಪ್ರಕಾರದಿಂದ ವಿವರಣೆಗೊಳಿಸುವುದರ ಮೂಲಕ ಮತ್ತು ಈ ಪ್ರಾಜೆಕ್ಟುಗಳನ್ನು ಜಾಗ್ರತೆ ಮಾಡುವುದರ ಮೂಲಕ ಸಾರ್ವಜನಿಕರಿಗೆ ಮಹತ್ವವಾದ ಸಾಧನೆಯೇನು ಆಗಿದೆ ಅದನ್ನು ತಿಳಿಸುವುದರ ಮೂಲಕ ಜನಗಳಲ್ಲಿ ಏನು ಶಂಕೆ ಮತ್ತು ತಪ್ಪು ಅಭಿಪ್ರಾಯಗಳಿವೆ ಆ ತಪ್ಪು ಅಭಿಪ್ರಾಯಗಳನ್ನು ಕಲುಷಿತಗೊಳಿಸುವುದಕ್ಕೆ ಕೆಲವು ಜನರು ಏನು ಒಂದು ಕುತಂತ್ರವನ್ನು ಮಾಡಲು ಹೊರಟಿದ್ದಾರೋ ಅದನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಂಬ ಭರವಸೆಯನ್ನು ಹೊಂದಿದಂತಾಗುತ್ತದೆ.

(ಶ್ರೀ ಡಿ. ಎಂ. ಸಿದ್ದಯ್ಯ)

9-30 A. M.

ಮತ್ತು ಮೂರನೆಯದಾಗಿ ಇವತ್ತು ಪವರ್ ಪ್ರಾಜೆಕ್ಟುಗಳು ಬಹಳ ಮುಖ್ಯವಾದದ್ದು. ಶರಾವತಿ ವ್ಯಾಲಿಯಲ್ಲಿ 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ದೊಡ್ಡ ಪ್ರಾಜೆಕ್ಟನ್ನು ನಮ್ಮ ದೇಶವೇ ಅಲ್ಲವೇ ಪಕ್ಕದ ದೇಶಕ್ಕೂ ಕೊಡತಕ್ಕ ಪವರ್ ಉತ್ಪಾದನೆ ಮಾಡತಕ್ಕ ದೊಡ್ಡ ಕೆಲಸ ಇವತ್ತಿನ ದಿವಸ ನಮ್ಮ ಸರ್ಕಾರದವರ ಮೇಲೆ ಇದೆ. ಈ ಕೆಲಸವನ್ನು ನಿರ್ವಹಿಸತಕ್ಕ ಕಾಲದಲ್ಲಿ ಏನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಸಂಶಯವನ್ನು ವ್ಯಕ್ತಪಡಿಸಿದರು ಅದಕ್ಕೆ ಸರ್ಕಾರದವರು ಶ್ವೇತ ಪತ್ರನನ್ನು ಹೊರಡಿಸಿದ್ದಾರೆ. ಅದನ್ನು ಅವಲೋಕನೆ ಮಾಡಿ ನಿಷ್ಪಕ್ಷಪಾತ ಬುದ್ಧಿಯಿಂದ ಈ ಸಭೆಯ ಸದಸ್ಯರು ಸರ್ಕಾರದವರಿಗೆ ಸಲಹೆ ಕೊಟ್ಟ ಪಕ್ಷದಲ್ಲಿ ಏನು ದೋಷ ಇದ್ದರೂ ಅದನ್ನು ಸರಿಪಡಿಸುವುದಕ್ಕೆ ಹಾಗೂ ನಿಷ್ಪಕ್ಷಪಾತವಾದ ಮತ್ತು ನಿರ್ದಿಷ್ಟವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ, ಸಿದ್ಧವಾಗಿರಬೇಕು ಎಂಬ ಮಾತನ್ನು ತಿಳಿಸುತ್ತೇನೆ. ಈ ದಿವಸ 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟತಕ್ಕ ಪವರ್ ಪ್ರಾಜೆಕ್ಟಿನ ಮೇಲೆ ಅಲ್ಲದ ಸಲ್ಲದ ಮಾತುಗಳನ್ನು ಆಡಿದರೆ ಅದರಿಂದ ಆಗತಕ್ಕ ಅನರ್ಥದಿಂದ ದೇಶದ ಅಭಿವೃದ್ಧಿಗೆ ತೊಂದರೆಯಾಗುತ್ತದೆ. ಸಾಕಾದಷ್ಟು ರುಜು ಮಾತು ಇಲ್ಲದೇ ಆಡಿದ ಪಕ್ಷದಲ್ಲಿ ಕೇಂದ್ರ ಸರ್ಕಾರದ ಸಹಾಯ ದೊರಕದೆ ನಮ್ಮ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುವುದಾದರೆ ಅದರಿಂದ ದೇಶಕ್ಕೆ ಬಹಳ ಮಟ್ಟಿನ ಅನ್ಯಾಯ ಅನರ್ಥವುಂಟಾಗುತ್ತದೆ ಎಂಬ ಮಾತನ್ನು ತಿಳಿಸಲು ಇಚ್ಛಿಸುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ 5 ಭಾಗದ ಅಧಿಕಾರಿಗಳು ಬಂದಿದ್ದಾರೆ. ಅವರ ಸಂಬಳ ಸಾರಿಗೆ ಅವರ ಸೀನಿಯಾರಿಟಿ ವಿಷಯದಲ್ಲಿ ಅತೃಪ್ತಿಯುಂಟಾಗಿ ಹಳೇ ಮೈಸೂರು, ಹೊಸ ಮೈಸೂರು ಎಂಬ ಭಾವನೆಯನ್ನು ತಪ್ಪಿಸತಕ್ಕ ವಿಷಯದಲ್ಲಿ ಶೀಘ್ರವಾಗಿ ಕ್ರಮ ಕೈಕೊಂಡು ಅವರಿಗೆ ಸಲ್ಲಬೇಕಾದ ಸೌಕರ್ಯಗಳನ್ನು ಮಾಡಿಕೊಟ್ಟು ವಿಶಾಲ ಮೈಸೂರು, ವಿಶಾಲ ಕರ್ನಾಟಕ ಎಂಬ ಭಾವನೆ ಅಧಿಕಾರ ವರ್ಗದಲ್ಲಿ ಮೂಡುವಂತೆ ಮಾಡಬೇಕು. ಈಗ ಅವರಲ್ಲಿ ಶಂಕೆ, ಸಂಶಯ ಏನಿವೆ ಅದನ್ನು ನಿವಾರಣೆ ಮಾಡಿ ಇಂಟರ್-ಸ್ಟೇಟ್ ಸೀನಿಯಾರಿಟಿ ವಿಷಯದಲ್ಲಿ ಜಾಗ್ರತೆ ತೀರ್ಮಾನವನ್ನು ತೆಗೆದುಕೊಂಡು ಅಧಿಕಾರಿ ವರ್ಗದವರ ಮನಸ್ಸನ್ನು ಸರಿಪಡಿಸಬೇಕು. ಏಕೆಂದರೆ ಸರ್ಕಾರದ ನೀತಿಗಳನ್ನು ಅನುಷ್ಠಾನಕ್ಕೆ ಕೊಡತಕ್ಕವರು ಅವರು. ಅವರು ಅತೃಪ್ತರಾಗಿದ್ದರೆ ಕೆಲಸ ಕಾರ್ಯಗಳು ಕುಂಠಿತವಾಗುತ್ತವೆ. ಆದ್ದರಿಂದ ನ್ಯಾಯವಾದಂತಹ ರೀತಿಯಲ್ಲಿ ಅವರಿಗೆ ದೊರಕಬೇಕಾದ, ಸೀನಿಯಾರಿಟಿ ಗ್ರೇಡು ಇವುಗಳನ್ನು ಕೊಟ್ಟು ಅವರು ನಮ್ಮ ಯೋಜನೆಗಳಲ್ಲಿ ನಮ್ಮ ದೇಶವನ್ನು ರೂಪಿಸುವುದರಲ್ಲಿ ಅವರ ಸಂಪೂರ್ಣವಾದ ಮನಸ್ಸನ್ನು ಕೊಟ್ಟು ಆತ್ಮಪೂರ್ವಕವಾಗಿ ಕೆಲಸ ಮಾಡುವ ಹಾಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಸಲಹೆ ಮಾಡಿ ಅಧ್ಯಕ್ಷರು ನಾನು ಈ ಬೇಡಿಕೆಯ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ, ಈ ದಿವಸ ನಮ್ಮ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ತರುಯುತ್ತೇನೆ. ಪ್ರಪ್ರಥಮವಾಗಿ ಸಾಮಾನ್ಯ ಆಡಳಿತದ ವಿಷಯವಾಗಿ ಕೆಲವು ವಿಷಯಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ನಾವು ಕುಳಿತುಕೊಂಡು ಶಾಸನ ಮಾಡುತ್ತಿರುವ ಈ ವಿಧಾನ ಸೌಧವೊಳಗೆ ಒಂದು ಪಬ್ಲಿಕ್ ವರ್ಕ್ಸ್ ಸಬ್-ಡಿವಿಜನ್ ಇದೆ ಎಂದು ತಿಳಿದು ಬರುತ್ತದೆ, ಆ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ಶಾಸನ ಭವನದ ವಾಯುವ್ಯ ಮೂಲೆಯಲ್ಲಿ ಮೇಲ್‌ಚಾವಣಿಯಲ್ಲಿ ಒಂದು ರಂಧ್ರ ಇದೆ. ಆ ರಂಧ್ರ ದಿವಸ ದಿವಸಕ್ಕೂ ದೊಡ್ಡದಾಗುತ್ತಾ ಇದೆ ಎಂದು ತಿಳಿದು ಬರುತ್ತಾ ಇದೆ, ಅದನ್ನು ಕೂಡಲೇ ಸೀಲ್ ಮಾಡಿಸಿ ಉತ್ತಮಸ್ಥಿತಿಗೆ ತರಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಹಾಗೆಯೇ ಕಟ್ ಮೋಷನ್‌ಗಳಲ್ಲಿ ಮಂತ್ರಿಗಳ ಪ್ರವಾಸದ ಬಗ್ಗೆ ಕೆಲವು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಂತ್ರಿಗಳು ಪ್ರವಾಸ ಮಾಡಬಿಲ್ಲ ಎಂದರೆ ನನಗೇನೂ ಸಮಾಧಾನವಿಲ್ಲ. ಏಕೆಂದರೆ ಪ್ರಜಾ ಸರ್ಕಾರದಲ್ಲಿ, ಪ್ರಜೆಗಳಿಂದ ಚುನಾಯಿತರಾದ ಮಂತ್ರಿಗಳು ಇದ್ದು ಅವರು ನಮ್ಮ ಈ ಸಭೆಗೆ ಜವಾಬ್ದಾರರಾಗಿರುವಾಗ ಅವರು ಒಂದೇ ಕಡೆ ಕುಳಿತುಕೊಳ್ಳಕೂಡದು. ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲೂ ಸಂಚಾರ ಮಾಡಿ ಆಯಾಯ ಇಲಾಖೆಗಳಿಗೆ ಸಂಬಂಧಪಟ್ಟ ಅಧಿಕಾರಿ

ಗಳನ್ನು ತಾಲ್ಲೂಕು ಮಟ್ಟದಲ್ಲಿ ಕರೆಸಿ ಆ ಸ್ಥಳದಲ್ಲೇ ಆಯಾಯ ರೆಕಾರ್ಡ್‌ಗಳನ್ನು ಇತ್ಯರ್ಥ ಮಾಡುವುದು ಉತ್ತಮ. ಹಾಗೆ ಮಾಡದೇ ಅವರಿಗೆ ಸಂಬಂಧಪಟ್ಟಿರುವ ಕೆಲವು ಮುಖಂಡರುಗಳನ್ನು ಕರೆಸಿ ಚಪ್ಪರದಲ್ಲಿ ಕುಳಿತುಕೊಂಡು ತಮಗೆ ಬೇಕಾದ ವಿಷಯಗಳಲ್ಲಿ ಭಾಷಣ ಮಾಡಿ ಬರುವುದು ಸರಿಯಲ್ಲ. ಕಳೆದ ಸಾರಿ ಇದೇ ಶಾಸನ ಸಭೆಯಲ್ಲಿ ಈ ಪ್ರವಾಸದ ಬಗ್ಗೆ ಒಂದು ಪ್ರಶ್ನೆ ಬಂದಾಗ ರೆವಿನ್ಯೂ ಮಂತ್ರಿಗಳ ಪ್ರವಾಸದ ಭತ್ಯ ಬಹಳ ಕಡಿಮೆಯಾಗಿದೆ ಎಂದು ನಾನೇ ಪ್ರಶ್ನೆ ಕೇಳಿದೆ. ಪ್ರವಾಸದ ಭತ್ಯ ಕಡಿಮೆಯಾಯಿತು ಎನ್ನುವುದು ದೊಡ್ಡದಲ್ಲ. ಹಳ್ಳಿಗಳಲ್ಲಿ ಒಂದು ಗಾದೆ ಇದೆ. ಹೊಳೆ ಹರಿದು ಹೋದ ಮೇಲೆ ದಬ್ಬೆ ಇಟ್ಟ ಹಾಗೆ ಎಂದು. ಆ ರೀತಿ ಯಾವ ಕೆಲಸ ಆಗಬೇಕೋ ಅದನ್ನು ತಕ್ಷಣ ಮಾಡಿಸಿಕೊಡಬೇಕೇ ಹೊರತು ಎಲ್ಲಾ ಆದಮೇಲೆ ಮಂತ್ರಿಗಳ ಪ್ರವಾಸ ಮಾಡಿದರೆ ಏನೂ ಪ್ರಯೋಜನವಿಲ್ಲ ಮತ್ತು ಇದು ಹಣದ ಪ್ರಶ್ನೆಯೂ ಕೂಡ ಅಲ್ಲ. ದೇಶದ ಹಿತಕ್ಕಾಗಿ ಯಾವ ಕೆಲಸವನ್ನು ತಕ್ಷಣ ಮಾಡಬೇಕೋ ಅದನ್ನು ಮಂತ್ರಿಗಳು ಪ್ರವಾಸ ಕಾಲದಲ್ಲಿ ತಿಳಿದುಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದ್ದು ಅತ್ಯಂತ ಅವಶ್ಯಕ. ತಾಲ್ಲೂಕು ಆಫೀಸುಗಳಿಗೆ ರೈತ ಹತ್ತಾರು ಸಾರಿ ಸುತ್ತಬೇಕಾಗುತ್ತದೆ. ಅವನಿಗೆ ಆಗಬೇಕಾದ ಕೆಲಸ ಯಾವುದೂ ಆಗದೇ ದಿನಬೆಳಗಾದರೆ ತಾವು ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆಂದು ಏನು ಹೇಳುತ್ತೀರೋ ಆ ಕೆಲಸ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಬಗ್ಗೆ ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಟ್ಟು ತಾಲ್ಲೂಕು ಮಟ್ಟದಲ್ಲಿ ಪ್ರವಾಸ ಮಾಡಿ ರೈತರ ಕಷ್ಟಸುಖ ಏನು ಎಂಬುದನ್ನು ತಿಳಿದುಕೊಂಡು ಅವರಿಗೆ ಆಗಬೇಕಾದ ಸೌಕರ್ಯಗಳನ್ನು ತಕ್ಷಣ ಮಾಡಿಸಿಕೊಟ್ಟರೆ ಆಗ ಪ್ರಜಾಸರ್ಕಾರ ಎಂದರೆ ಏನು ಎಂಬುದು ರೈತರಿಗೆ ಮನದಟ್ಟು ಆಗುತ್ತದೆ; ಆ ರೀತಿ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಮಾಗಡಿ ತಾಲ್ಲೂಕು ಆಫೀಸಿನ ಒಂದು ವ್ಯವಹಾರವನ್ನು ಈ ಸಂದರ್ಭದಲ್ಲಿ ನಾನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಟೆನೆನ್ಸಿ ಕೇಸುಗಳು ಇವೆ. ನನಗೆ ತಿಳಿದ ಹಾಗೆ ಏನೂ ತಿಳಿಯದ ಒಬ್ಬರು ಅಧಿಕಾರಿಗಳನ್ನು ಅಲ್ಲಿಗೆ ಹಾಕಿದ್ದೀರಿ, ಗುಮಾಸ್ತರು ಬರೆದು ಕೊಡಬೇಕು ಅದನ್ನು ಅವರ ಸ್ವಂತ ಬರವಣಿಗೆಯಲ್ಲಿ ಬರೆದುಕೊಂಡು ಓದಬೇಕು ಅಂತಹ ಪರಿಸ್ಥಿತಿ ಅಲ್ಲಿ ಇದೆ. ಆದ್ದರಿಂದ ಈ ವಿಷಯದಲ್ಲಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡು ಟೆನೆನ್ಸಿ ಕೇಸುಗಳು ಜಾಗ್ರತೆಯಾಗಿ ತೀರ್ಮಾನವಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅವರು ಬಂದ ಮೇಲೆ ಮಾಗಡಿ ತಾಲ್ಲೂಕಿನಲ್ಲಿ ಅಲ್ಲಿನ ಪರಿಸ್ಥಿತಿ ಹದಗೆಡುತ್ತಾ ಇದೆ. ಇದುವರೆಗೂ ಇಲ್ಲದೇ ಇದ್ದ ರಾಜಕೀಯ ಭಿನ್ನಾಭಿಪ್ರಾಯ ದೊಡ್ಡದಾಗಿ ಎದ್ದು ಕಾಣುತ್ತಾ ಇದೆ, ಅದನ್ನು ಪರಿಶೀಲನೆ ಮಾಡಬೇಕು. ಒಂದು ವಿಷಯವನ್ನು ಹೇಳಬೇಕೆಂದರೆ ಬಸ್‌ನವರ ಮೇಲೆ ಅರ್ಜಿ ಬರೆಸುವುದು. ಕಳೆದ ಫೆಬ್ರವರಿ ತಿಂಗಳಿನಲ್ಲಿ ಒಂದು ಜಾತ್ರೆ ನಡೆಯಿತು, ಅವರು ಹೇಳಿದವರನ್ನು ಬಸ್‌ನಲ್ಲಿ ಕೂಡಿಸಲಿಲ್ಲ ಎಂದು ಹೇಳಿ ಬಸ್‌ನವರ ಮೇಲೆ ಮತ್ತು ಪೋಲೀಸ್‌ನವರ ಮೇಲೆ ಅರ್ಜಿ ಬರೆದು ಕೊಟ್ಟು ಅನೇಕರನ್ನು ಕಷ್ಟನಷ್ಟಗಳಿಗೆ ಗುರಿಮಾಡಿದ್ದಾರೆ.

ಹಾಗೆಯೇ ದೇವಾಲಯಕ್ಕೆ ಸೇರಿದ ಮರಗಳನ್ನು ಬೇಕಾದಷ್ಟು ಕಡಿದುಹಾಕುತ್ತಾ ಇದ್ದಾರೆ. ಆದರೂ ಕೂಡ ಸಂಬಂಧಪಟ್ಟ ರೆವಿನ್ಯೂ ಆಫೀಸರುಗಳಿಗೆ ತಿಳಿಸಿದರೂ ಕ್ರಮ ಕೈಕೊಂಡಿಲ್ಲ, ಇಂತಹ ತಾತ್ಸಾರ ಮನೋಭಾವ ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಇಲಾಖೆ, ಅಲ್ಲಿ ಇಂಡಸ್ಟ್ರಿಯಲ್ ಕೇಡರ್ ಅನ್ನು ಮಾಡಿಲ್ಲ, ರೆವಿನ್ಯೂ ಇಲಾಖೆಯ ಅಧಿಕಾರಿಗಳನ್ನೇ ಅಲ್ಲಿ ಹಾಕುತ್ತೀರಿ, ಇದರಿಂದ ಅವರಿಗೆ ತೊಂದರೆಯಾಗುತ್ತಾ ಇದೆ. ಆದ್ದರಿಂದ ಇಂಡಸ್ಟ್ರೀ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುವವರಿಗೆ ಅದೇ ಇಲಾಖೆಯ ಮಟ್ಟದಲ್ಲಿ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿ ಅವರಿಗೆ ಸೂಕ್ತವಾದ ಪರಿಹಾರವನ್ನು ಕೊಡಬೇಕೆಂದು ಹೇಳುತ್ತೇನೆ. ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಆಫೀಸರುಗಳನ್ನು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ವರ್ಗ ಮಾಡಲು ಯೋಚಿಸಿದ್ದೀರಿ. ನಾನ್-ಎಸ್.ಎಸ್.ಎಲ್.ಸಿ.-ಆಗಿ ವೇಟ್ಸ್ ಅಂಡ್ ಮೆಷರ್ಸ್ ಇನ್ಸ್‌ಪೆಕ್ಟರುಗಳನ್ನಾಗಿ ಕೆಲಸ ಮಾಡುತ್ತಿದ್ದವರನ್ನು ಸೀನಿಯರ್ ಮತ್ತು ಜೂನಿಯರ್ ಇಂಡಸ್ಟ್ರಿ ಆಫೀಸರನ್ನಾಗಿ ಹಾಕುವುದಾಗಿ ತಿಳಿದುಬಂದಿದೆ. ಆ ರೀತಿ ಮಾಡುವುದಾದರೆ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಆಫೀಸರುಗಳಿಗೆ ತೊಂದರೆಯಾಗದ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಾಗಡಿ ತಾಲ್ಲೂಕು ರೇಂಜ್ ಎಜುಕೇಷನಲ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿದವರಿಗೆ ಕೆಲಸ ಸಿಕ್ಕುತ್ತಿಲ್ಲ ಎಂಬುದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅಲ್ಲಿ ಯಾರಾದರೂ ಹೋಗಿ ಕೆಲಸ ಬೇಕೆಂದು ಕೇಳಿದರೆ, ಯಾರಾದರೂ ವಶೀಲಿ ಹಚ್ಚಿ, ಅವರ ಹತ್ತಿರ ಕಾಗದ ಬರೆಸಿಕೊಂಡು ಬಂದರೆ ಮಾತ್ರ ಕೆಲಸ ಕೊಡುತ್ತೇವೆ ಎಂದು ಹೇಳತಕ್ಕ ಪರಿಸ್ಥಿತಿ ಅಲ್ಲಿ ಇದೆ. ಅದನ್ನು ಸರ್ಕಾರದವರ ಗಮನಕ್ಕೆ ತರಬೇಕಾದ್ದು ನನ್ನ ಕರ್ತವ್ಯವಾಗಿದೆ. ಹಾಗೆಯೇ ಮಾಗಡಿ

(ಶ್ರೀ ಸಿ. ಆರ್. ರಂಗೇಗೌಡ)

ತಾಲ್ಲೂಕಿನಿಂದ ಬೆಂಗಳೂರಿಗೆ ವಾಟರ್ ಸಪ್ಲೈ ಲೈನ್ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಬಹಳ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಈಗ ಫಸ್ಟ್ ಲೈನ್ ಆಗಿ, ಸೆಕೆಂಡ್ ಲೈನ್ ಆಗಿ, ಥರ್ಡ್ ಲೈನ್ ಕೂಡ ಪೂರ್ತಿಯಾದರೂ ಕೂಡ ಇನ್ನೂ ಕಾಂಪೆನ್ಸೇಷನ್ ಕೊಟ್ಟಿಲ್ಲ. ಆದ್ದರಿಂದ ಆ ಕಾಂಪೆನ್ಸೇಷನನ್ನು ಜಾಗ್ರತೆ ಕೊಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಾಗೆಯೇ ಬಿಲ್ಡಿಂಗ್ ಟ್ಯಾಕ್ಸ್ ವಿಷಯದಲ್ಲಿ ಹೇಳುವುದಾದರೆ ನನಗೆ ತಿಳಿದಮಟ್ಟಿಗೆ ಹೌಸ್ ರೆಂಟ್ ಕಂಟ್ರೋಲ್ ಆಕ್ಟ್ 1957ನೇ ಇಸವಿ ನಂತರ ಕಟ್ಟಿದ ಕಟ್ಟಡಗಳಿಗೆ ಅನ್ವಯಿಸುತ್ತಿಲ್ಲ ಎಂದು ತಿಳಿದು ಬಂದಿದೆ. ಬೆಂಗಳೂರು ಚಿಕ್ಕಪೇಟೆ, ದೊಡ್ಡ ಪೇಟೆ ಮುಂತಾದ ಬೀದಿಗಳಲ್ಲಿ ಅನ್‌ಅರ್ನ್ಡ್ ಇನ್‌ಕಂ ಸಂಪಾದನೆ ಮಾಡುವುದು ಬಹಳವಾಗಿದೆ. ಅವು ಹಿಂದೆ ಯಾವುದೋ ಕಾಲದಲ್ಲಿ ಕಟ್ಟಿದ ಮನೆಗಳು ಈಗ ಅವಕ್ಕೆ ಬಾಡಿಗೆ ಬಹಳ ಜಾಸ್ತಿಯಾಗಿದೆ. ಅದರಿಂದಲೂ ಕೂಡ ಹೊರಗಡೆ ಇತರ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆಯೋ ಏನೋ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಆ ಅಂಗಡಿಗಳು ಏನಿವೆ ಅವನ್ನು ಸರ್ಕಾರದವರ ವತಿಯಿಂದ ಹರಾಜು ಮಾಡಿ ಆ ಬಾಡಿಗೆಯಿಂದ ಅನ್‌ಅರ್ನ್ಡ್ ಇನ್‌ಕಂ ಏನು ಬರುತ್ತದೆ ಅದನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸೋಷಿಯಲ್ ವೆಲ್‌ಫೇರ್ ಇಲಾಖೆ ವಿಚಾರ ಎಷ್ಟೇಸಲ ಹೇಳಿದರೂ ಕೂಡ ಇದುವರೆಗೂ ಸಂಬಂಧಪಟ್ಟ ಅಧಿಕಾರಿಗಳು ಬಂದು ಮಾಗಡಿ ತಾಲ್ಲೂಕಿನಲ್ಲಿ ಏನಾಗಿದೆ ಎಂದು ನೋಡಿರುವುದಿಲ್ಲ. ಮನೆಗಳು ಪಾಳು ಬಿದ್ದಿವೆ, ಬಂದು ನೋಡಿ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎನ್. ಎ. ಕರಿಲಿಂಗಣ್ಣಾವರ್ (ಗೋಕಾಕ್-I).—ಅಧ್ಯಕ್ಷರೇ, ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಡಿಮ್ಯಾಂಡುಗಳನ್ನು ಅನುಮೋದಿಸುತ್ತೇನೆ. ಇರಿಗೇಷನ್ ಸಲುವಾಗಿ ನಮ್ಮ ತಾಲ್ಲೂಕಿನ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳುತ್ತೇನೆ. ನಮ್ಮ ಇಡೀ ರಾಜ್ಯದಲ್ಲಿ ಗೋಕಾಕ್‌ನಲ್ಲಿ ಬಹಳ ಲಾಭದಾಯಕವಾದ ನಾಲೆಯಿದೆ. ಹಾಗಿದ್ದರೂ ಸಹಿತ ಅಲ್ಲಿಯ ರೈತರಿಗೆ ಅತಿ ಭಾರವಾದ ಕರ ಹಾಕಿದ್ದಾರೆ. ಆ ನಾಲೆಗಾಗಿ ಒಟ್ಟು 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಪ್ರತಿ ವರ್ಷವೂ ಅದೇ 14 ಲಕ್ಷದಷ್ಟು ಉತ್ಪತ್ತಿ ಬರುತ್ತಿದೆ. ಎಷ್ಟೋ ವರ್ಷಗಳಿಂದ ಅಷ್ಟು ಉತ್ಪತ್ತಿ ಬಂದರೂ ಅತಿ ಭಾರವಾದ ಕರ ಹಾಕಿದ್ದಾರೆ. ಆ ನಾಲೆಯ ಕೆಳಗೆ ಪ್ರತಿ ವರ್ಷ ಕೇವಲ 40 ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಾರೆ. ಇಡೀ ರಾಜ್ಯದಲ್ಲೇ ಅದು ಲಾಭದಾಯಕವಾದ ನಾಲೆಯಾದರೂ ಸಹ ಅಷ್ಟು ಭಾರ ಏಕೆ ಹಾಕಬೇಕು? ಕರದಲ್ಲಿ ಏಕರೂಪತೆಯನ್ನು ಮಾಡಿದರೆ ಒಳ್ಳೆಯದು, ಹಾಗೆ ಮಾಡಬೇಕು ಎಂದು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಆ ಸಂಬಂಧದಲ್ಲಿ ರೂಲ್ಸ್ ಮಾಡಿದ್ದಾರೆಂದು ಹೇಳುತ್ತಾರೆ, ಅದನ್ನು ತೀವ್ರ ಜಾರಿಗೆ ತರಬೇಕು.

ಎರಡನೆಯದು ನಮ್ಮ ಕಡೆ ಇರಿಗೇಷನ್ನಿಗಾಗಿ 351 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅದರಿಂದ ಉತ್ಪತ್ತಿ ಬರುವುದು 51 ಲಕ್ಷ ರೂಪಾಯಿಗಳು. ಈ ರೀತಿಯಿಂದ ಮಾಡಿದರೆ ನಮ್ಮ ದೇಶಕ್ಕೆ ಹಾನಿಯಾಗುತ್ತದೆ. ಯಾವ ಇರಿಗೇಷನ್ ಮೇಲೆ ಖರ್ಚು ಮಾಡುವುದಕ್ಕೆ ತಕ್ಕಂತೆ ಉತ್ಪತ್ತಿ ಬರುವ ಹಾಗೆ ರೈತರ ಮೇಲೆ ಕರ ಹಾಕಿ ಸರಿಪಡಿಸಬೇಕು. ಇದಲ್ಲದೆ ನಮ್ಮ ರಾಜ್ಯದಲ್ಲಿ ಎಷ್ಟೋ ಲಕ್ಷ ಎಕರೆ ಜಮೀನನ್ನು ಸಾಗುವಳಿ ಮಾಡುವವರು ಸರ್ಕಾರಕ್ಕೆ ತೆರಿಗೆ ಕೊಡುವುದಿಲ್ಲ, ಹೀಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿಯಿಂದ ಅವಕಾಶ ಕೊಟ್ಟರೆ ಉತ್ಪತ್ತಿ ಬರುವುದು ಹೇಗೆ? ಸರ್ಕಾರ ಇದರ ಮೇಲೆ ನಿಗಾ ಇಟ್ಟು ಸರ್ಕಾರಕ್ಕೆ ಬರಬೇಕಾದ ಉತ್ಪತ್ತಿ ಪಡೆಯಲು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಘಟಪ್ರಭ ನಾಲೆಯ ಕೆಲಸ ತೀವ್ರವಾಗಿ ಆಗದೆ ಹಾಗೆಯೇ ನಿಂತಿದೆ, ಇದರಿಂದ ನೀರಾವರಿ ಹೆಚ್ಚಲು ಬೇಗ ಅವಕಾಶವಾಗಿಲ್ಲ, ತೀವ್ರರೀತಿಯಿಂದ ಇದನ್ನು ಮುಗಿಸಬೇಕು. ಸಣ್ಣ ಸಣ್ಣ ನೀರಾವರಿ ಕೆಲಸಗಳು ಸಾಕಷ್ಟು ಆಗುತ್ತಿಲ್ಲ. ಗೋಕಾಕ್ ತಾಲ್ಲೂಕು ಮೊದಲೇ ಬರಗಾಲ ಪ್ರದೇಶ, ಅಲ್ಲಿ ನೀರಾವರಿ ಸೌಕರ್ಯ ತೀವ್ರವಾಗಿ ಮಾಡಿಕೊಟ್ಟರೆ ಹೆಚ್ಚು ಆಹಾರ ಧಾನ್ಯ ಬೆಳೆಯಲು ಅನುಕೂಲವಾಗುತ್ತದೆ. ಆದುದರಿಂದ ಘಟಪ್ರಭ ಹಿಡಕಲ್ ಡ್ಯಾಂ ಕೆಳಗೆ ಬರುವ ಪ್ರದೇಶಕ್ಕೆ ಸಣ್ಣ ನೀರಾವರಿ ಸೌಲಭ್ಯವನ್ನು ರೂಲ್ಸ್ ಬದಲಾಯಿಸಿ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ. ಇದಲ್ಲದೆ ನಮ್ಮ ತಾಲ್ಲೂಕು ಮಟ್ಟಿಗೆ ಹೇಳುವುದು ಅದು ಚಿಕ್ಕೋಡಿ ಡಿವಿಜನ್ನಿಗೆ ಸೇರಿದೆ. ಆ ಡಿವಿಜನ್ನಿಗೆ ಅದರಲ್ಲೂ ನಮ್ಮ ತಾಲ್ಲೂಕಿಗೆ ಬಹಳ ಕಡಿಮೆ ಹಣ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಇರಿ

ಗೇಷನ್, ರಸ್ತೆ ಮುಂತಾದ ಕೆಲಸಗಳು ಯಾವುವೂ ಆಗಿಲ್ಲ. ಹುಲಿಕಟ್ಟೆ ಕೆರೆ ಕೆಲಸ ಬಡ್ಜೆಟ್ಟಿನಲ್ಲಿ ಸೇರಿಸಿದ್ದರೂ ಪ್ರಾರಂಭಿಸಿಲ್ಲ, ಅದನ್ನು ಪ್ರಾರಂಭಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಮಾಡಿದರೆ ಬರಗಾಲ ಪ್ರದೇಶಕ್ಕೆ ಬಹಳ ಉಪಯೋಗವಾಗುತ್ತದೆ. ಅದರ ಸಲುವಾಗಿ ಸಣ್ಣ ನೀರಾವರಿ ಕೆಲಸಗಳನ್ನು ಕೈಕೊಳ್ಳಲು ಒತ್ತಾಯ ಮಾಡುತ್ತೇನೆ. ಹುಲಿಕಟ್ಟೆ ಕೆರೆ ಕೆಲಸ ವನ್ನು ತೀವ್ರವಾಗಿ ಪೂರ್ಣ ಮಾಡಬೇಕು. ಕಂಚಿಗಟ್ಟ ಕೆರೆ, ಮೋಟಗಾನಹಳ್ಳಿ ನೀರಾವರಿ ಕೆಲಸ ಮುಂತಾದುವನ್ನು ಮಾಡಿದರೆ ರೈತರಿಗೂ ಉಪಯೋಗವಾಗಿ ಆಹಾರ ಧಾನ್ಯಗಳ ಕೊರತೆಯೂ ನೀಗುತ್ತದೆ. ನಮ್ಮಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಇವನ್ನು ತೀವ್ರಮಾಡಬೇಕು. ಮತ್ತೊಂದು ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಅನುಕೂಲ ಮಾಡಬೇಕಾದರೆ ಮಾರ್ಕಂಡೇಯ ನದಿಗೆ ಡ್ಯಾಂ ಕಟ್ಟಲು ಬಹಳ ದಿವಸಗಳ ಹಿಂದೆಯೇ ಸರ್ವೆಯಾಗಿದೆ. ಗೋಕಾಕ್ ತಾಲ್ಲೂಕಿನಲ್ಲಿ ಈ ನದಿಗೆ ರಂಗುಹೊಳೆ ಎಂದು ಹೇಳುತ್ತಾರೆ. ಮಳೆಯಾಗದಿರುವ ಪ್ರದೇಶದ ಈ ಕೆಲಸ ಕೈಕೊಳ್ಳ ಬೇಕು. ಬಳ್ಳಾರಿ ಹಳ್ಳಕ್ಕೆ ಅಡ್ಡಲಾಗಿ ಒಂದು ಕಟ್ಟೆ ಕಟ್ಟಿದರೆ 8–10 ಹಳ್ಳಿಗಳಿಗೆ ನೀರಾವರಿ ಸೌಕರ್ಯ ಒದಗುವುದರಿಂದ ಅದನ್ನು ಸಹ ಮಾಡಬೇಕು. ನಮ್ಮ ತಾಲ್ಲೂಕಿನ ರೈತರಿಗೆ ಅನ್ಯಾಯ ವಾಗಿರುವುದು ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ನಮ್ಮ ಪ್ರಾಂತದ ರೈತರನ್ನು ಇತರರ ಸಮಕ್ಕೆ ತರಬೇಕು, ಯಾರ ವಿಚಾರದಲ್ಲೂ ಹೆಚ್ಚು ಕಡಮೆ ಮಾಡಬೇಕೆಂಬ ಉದ್ದೇಶವಿಲ್ಲ. ಘಟಪ್ರಭಾ ಯೋಜನೆಯನ್ನು ತೀವ್ರವಾಗಿ ಮುಗಿಸಬೇಕು, ಅದು ಬಹಳ ದಿವಸಗಳಿಂದ ನಡೆಯುತ್ತಿದೆ, ಪ್ರತಿ ವರ್ಷ 70 ಲಕ್ಷ ಮಾತ್ರ ಖರ್ಚು ಮಾಡುತ್ತಿದ್ದಾರೆ. ಹೀಗಾದರೆ 3 ಕೋಟಿ ಖರ್ಚು ಮಾಡಿ ಕೆಲಸ ಮುಗಿಸುವುದು ಯಾವಾಗ ? ಮಲಪ್ರಭ ಯೋಜನೆಯನ್ನು ಕೂಡ ತೀವ್ರವಾಗಿ ಮಾಡಬೇಕು ಎಂದು ಕಳಕಳಿಯಿಂದ ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಸಿ. ಎಂ. ರೇವಣ ಸಿದ್ದಯ್ಯ (ಶಿರುಗುಪ್ಪ).—ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆ ರಡು ವಿಷಯಗಳನ್ನು ಹೇಳಬಯಸುತ್ತೇನೆ.

Mr. SPEAKER—I am trying to send intimation to the next member who might participate in the debate so that he might be ready. All the Hon'ble Members who have sent in their names and who desire to participate in the debate will please note this.

ಶ್ರೀ ಸಿ. ಎಂ. ರೇವಣ ಸಿದ್ದಯ್ಯ.—ಈ ಸಂದರ್ಭದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆ ರಡು ಮಾತುಗಳನ್ನು ಹೇಳುತ್ತೇನೆ. ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿ 12 ವರ್ಷಗಳಾದರೂ ಅಲ್ಲಿನ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯನ್ನು ಇದುವರೆಗೂ ಮಾಡಿರುವುದಿಲ್ಲ. ಕೆಲವು ಪಟ್ಟಿ ಗಳೇನು ಆಗಿವೆ ; ಅವೂ ಸರಿಯಾಗಿ ಆಗಿಲ್ಲ. ಸ್ಟೇಟ್ ಲೆವಲ್‌ನಲ್ಲಿ ಮತ್ತು ಡಿವಿಜನ್ ಲೆವಲ್‌ನಲ್ಲಿ ಕೂಡ ಕೆಲವು ಆಗಿಲ್ಲ. ಕೆಲವರು ರಿಟೈರ್ ಆಗಿದ್ದಾರೆ, ಕೆಲವರು ಸತ್ತು ಹೋಗಿದ್ದಾರೆ, ಕೆಲವರು ಎದೆ ಯೊಡೆದು ಸತ್ತರೋ ಏನೋ ಗೊತ್ತಿಲ್ಲ. ಆದರೂ ಇನ್ನೂ ಪಟ್ಟಿ ತಯಾರಾಗಿಲ್ಲ. ಈ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ತೀವ್ರವಾಗಿ ಬಳ್ಳಾರಿ ಜಿಲ್ಲೆಯ ಮತ್ತು ಇಡೀ ದೇಶದ ಸೀನಿ ಯಾರಿಟಿ ಪಟ್ಟಿಯನ್ನು ಮಾಡಬೇಕು. ಸರ್ವಿಸ್ ರಿಜಿಸ್ಟರು ಮತ್ತು ರಿಕಾರ್ಡುಗಳೆಲ್ಲಾ ಸರ್ಕಾರ ದಲ್ಲೇ ಇರುವಾಗ 12 ವರ್ಷಗಳಾದರೂ ಇನ್ನೂ ಮಾಡಿಲ್ಲದಿರುವುದು ವಿಷಾದಕರ. ಮುಖ್ಯ ಮಂತ್ರಿ ಗಳು ತೀವ್ರವಾಗಿ ಗಮನಕೊಟ್ಟು ಪರಿಷ್ಕರಿಸಬೇಕು.

ಆಮೇಲೆ ಕೆಲವು ಟ್ರಾನ್ಸ್‌ಫರುಗಳ ವಿಷಯ ಇಲ್ಲಿ ಹೇಳಬೇಕಾಗಿದೆ. ಅನೇಕ ಮಂದಿ ಅಧಿ ಕಾರಿಗಳು ಬೆಂಗಳೂರಿನಲ್ಲೇ ಹತ್ತುಹತ್ತು ವರ್ಷಗಳ ಕಾಲ ಒಂದೇ ಕಡೆ ಇದ್ದವರೂ ಇದ್ದಾರೆ. ಕೆಲವಾರು ಅಧಿಕಾರಿಗಳನ್ನು ಒಂದೇ ವರ್ಷದಲ್ಲಿ ಮೂರು ಜಾಗಕ್ಕೆ ಮೂರು ಸಾರಿ ವರ್ಗ ಮಾಡಿ ದ್ದಾರೆ, ಇದಕ್ಕೆ ಕಾರಣಗಳೂ ತಿಳಿಯುತ್ತಿಲ್ಲ. ಅವರ ಮೇಲೆ ಯಾವ ಫಿರ್ಯಾದುಗಳಾಗಲೀ ಮತ್ತು ಕಷ್ಟದ ಕಟ್ಟಲೆಗಳಾಗಲೀ ಇರಲಿಲ್ಲ. ಇಂತಹ ಅಧಿಕಾರಿಗಳನ್ನು ಒಂದೇ ವರ್ಷದಲ್ಲಿ ಮೂರು ಸಾರಿ ಏಕೆ ವರ್ಗ ಮಾಡಬೇಕೋ ಕಾರಣ ಗೊತ್ತಾಗುತ್ತಿಲ್ಲ. ಈ ಬಗ್ಗೆ ಸರಕಾರ ಪರಿಶೀಲನೆ ಮಾಡಿ ಯಾರಿಗೂ ಅನ್ಯಾಯಗಳಾಗದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನ್ಯಾಯ ದೊರಕುವಂತೆ ಮಾಡಬೇ ಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರಕಾರದಲ್ಲಿ ಈಚೆಗೆ ವಿಳಂಬವು ಬಹಳ ಹೆಚ್ಚಾಗುತ್ತಿದೆ. ಒಂದು ಪೇಪರು ಸರಕಾ ರಕ್ಕೆ ಬಂದುದು ವರ್ಷಗಟ್ಟಲೆ ಅಲ್ಲೇ ಕೊಳೆಯುತ್ತಿದ್ದರೆ ಅದರಿಂದ ಜನರಲ್ಲಿ ಇಲ್ಲದ ಶಂಕೆಗಳಿಗೆ ಕಾರಣವಾಗುತ್ತದೆ. ಈ ರೀತಿಯಾಗಿ ತಾಲ್ಲೂಕು ಮಟ್ಟದಲ್ಲಿ, ಕಷ್ಟಪಟ್ಟು ಮುಂದೆ ಡಿವಿಜನಲ್ ಮಟ್ಟದಲ್ಲಿಯೂ ಕಷ್ಟಪಟ್ಟು ಮುಂದೆ ಬಂದು ಸ್ಟೇಟು ಲೆವೆಲ್ಲಿನಲ್ಲಿ ಬಹಳ ನಿಧಾನವಾಗುತ್ತಿರುವುದು ಕಂಡುಬರುತ್ತದೆ. ಇದರ ಬಗ್ಗೆ ಸಾಕಷ್ಟು ನಿಗಾ ಇಡಬೇಕು. ಉದಾಹರಣೆಯಾಗಿ ಹೇಳುವು

(ಶ್ರೀ ಸಿ. ಎಂ. ರೇವಣಸಿದ್ದಯ್ಯ).

ದಾದರೆ, ಎಫ್.ಡಿ., ಲಾ ಇಲಾಖೆ ಇತ್ಯಾದಿಗಳಲ್ಲಿ ಬಂದು ನಿಂತ ಕಾಗದವನ್ನು ಹೊರಡಿಸಬೇಕಾದರೆ ಅಲ್ಲಿಗೆ ಒಬ್ಬರು ಬಂದು ಒತ್ತಾಯಪಡಿಸಿದಲ್ಲದೆ ಅಲ್ಲಿಂದ ಹೊರಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಹಿಂದೆ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಯಾವ ಕಾಗದವಾಗಲಿ ಜನಗಳಿಂದ ಬಂದ ಮೇಲೆ ಅವುಗಳನ್ನು ಇಷ್ಟು ದಿನದಲ್ಲೇ ಇತ್ಯರ್ಥಪಡಿಸಬೇಕೆಂದು ನಿಗದಿ ಮಾಡಲಾಗಿದೆ ಎಂದು ಒಂದು ಹೇಳಿಕೆಯನ್ನೂ ಕೊಟ್ಟಿದ್ದರು. ಆ ರೀತಿಯಾಗಿ ಸರಕಾರದ ಅಧಿಕಾರಿಗಳು ಪ್ರಯತ್ನ ಮಾಡಬೇಕು, ಒಂದು ಚಿಕ್ಕ ಕೆಲಸಕ್ಕಾಗಿ ಅರ್ಜಿಗಳು ಸರಕಾರಕ್ಕೆ ಬಂದರೆ ಅದರ ಬಗ್ಗೆ ವಿಳಂಬವಾಗದಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಿಧಾನವಾಗುವುದನ್ನು ತಡೆಗಟ್ಟಬೇಕೆಂದು ಬೇಡಿಕೊಳ್ಳುತ್ತೇನೆ. ಸರಕಾರ ಇಂತಹ ನಿರ್ಣಯವನ್ನು ತೆಗೆದುಕೊಳ್ಳುವುದು ಬಹಳ ಅಗತ್ಯವಾದುದು.

ಸರಕಾರ ಅಣೆಕಟ್ಟುಗಳನ್ನು ಕಟ್ಟಿ ಜನರಿಗೆ ಹೆಚ್ಚು ಆಹಾರಧಾನ್ಯ ಬೆಳೆಯುವಂತೆ ಮಾಡಬೇಕೆಂದು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾ ಇದೆ. ಆದರೆ ನೀರು ಕೊಡುವುದರ ಬಗ್ಗೆ ಸರಕಾರ ತಕ್ಕ ಕ್ರಮ ತೆಗೆದುಕೊಳ್ಳುತ್ತಿಲ್ಲ. ಒಂದು ಅಣೆಕಟ್ಟನ್ನು ಕಟ್ಟಿಯಾದ ಮೇಲೆ ವರ್ಷಗಟ್ಟಲೆಯಾದರೂ ಅದಕ್ಕೆ ಬೇಕಾದ ಕಾಲುವೆಗಳನ್ನು ತೆಗೆಸುವುದರ ಕಡೆಗೆ ಗಮನ ಕೊಡುವುದಿಲ್ಲ. ನೀರು ಸಿಗದೇ ಹೋದರೆ ಬೆಳೆಯುವವರು ಬೆಳೆಯನ್ನು ಹೇಗೆ ಮಾಡಲಿಕ್ಕಾದೀತು ? ಇದರ ಬಗ್ಗೆ ಡೆಪ್ಯುಟೀ ಕಮಿಷನರವರೂ ಕೂಡ ಕಾಲುವೆಗಳನ್ನು ತೆಗೆಸಿ ನೀರನ್ನು ಕೊಡಬೇಕು ಇಲ್ಲದಿದ್ದರೆ ರೈತರು ಬೆಳೆ ಬೆಳೆಯುವುದಕ್ಕಾಗುವುದಿಲ್ಲ ಎಂದು ಸರಕಾರಕ್ಕೂ ಶಿಫಾರಸು ಮಾಡಿದ್ದಾರೆಂದು ಕೇಳುತ್ತೇನೆ. ಇದರಿಂದ ಬೆಳೆಯನ್ನು ಬೆಳೆಯುವುದು ನಿಧಾನವಾಗುತ್ತಿದೆ ಮತ್ತು ಅನಾನುಕೂಲಗಳು ಆಗುತ್ತಿರುವುದು ಕಂಡುಬರುತ್ತಿದೆ. ಮಾನ್ಯ ಫೈನಾನ್ಸ್ ಮಿನಿಸ್ಟರವರು ಒಂದು ಸಾರಿ ಹೇಳಿಕೆ ಕೂಡ ಕೊಟ್ಟರು, ಕಾಲುವೆಗಳನ್ನು ತೆಗೆದು ನೀರನ್ನು ಸರಿಯಾಗಿ ಕೊಡದೇ ಹೋದರೆ ಬೆಳೆಗಳ ಉತ್ಪನ್ನಗಳೂ ಸರಿಯಾಗಿ ಬರುವುದಿಲ್ಲ ಎಂದು. ಈ ಕಾರಣದಿಂದಾಗಿ ನಮ್ಮ ಭಾಗದಲ್ಲಿ ಎಷ್ಟೋ ಕಡೆಗಳಲ್ಲಿ ಆಹಾರದ ಉತ್ಪನ್ನದ ಲಾಭಗಳಾಗದೇ ಬಹಳ ಕಡಿಮೆಯಾಗಿದೆ, ಉದಾಹರಣೆಯಾಗಿ ನಮ್ಮ ಭಾಗದಲ್ಲಾಗಿರುವ ತುಂಗಭದ್ರಾ ಅಣೆಕಟ್ಟು ಮಾಡಿಸಿ ಬಹಳ ದಿನಗಳಾದರೂ ಕಾಲುವೆಗಳನ್ನು ಸರಿಯಾಗಿ ತೆಗೆಸಿಲ್ಲ. ಈ ಅಣೆಕಟ್ಟನ್ನು ಕಟ್ಟಿಸಿ ಹತ್ತು ವರ್ಷಗಳಾದರೂ ಇದರಿಂದ ದೇಶಕ್ಕೆ ಸದುಪಯೋಗವಾಗುತ್ತಿಲ್ಲ. ತಜ್ಞರಾದವರು ಬಂದು ಅಣೆಕಟ್ಟುಗಳನ್ನು ಮಾಡುವಾಗಲೇ ಕಾಲುವೆಗಳನ್ನು ತೆಗೆಸಿ ಕೊನೆಯವರೆಗೂ ನೀರು ಪೂರ್ತಿಯಾಗಿ ಮುಟ್ಟುವಂತೆ ಮಾಡಬೇಕು. ಆ ರೀತಿಯಾಗಿ ಒಂದು ಯೋಜನೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಪ್ರಾಂತವಾದ ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರ ಅಣೆಕಟ್ಟನ್ನು 1952ರಲ್ಲೇ ಕಟ್ಟಿದರು ಎಂದರೆ ಸುಮಾರು 12 ವರ್ಷಗಳಾದವು. ಇದಕ್ಕಾಗಿ 108 ಕೋಟಿಯಷ್ಟು ಹಣ ವೆಚ್ಚ ಮಾಡಿ 9 ಲಕ್ಷ ಎಕರೆಗಳಷ್ಟು ಭೂಮಿಗೆ ನೀರು ಕೊಡಬೇಕೆಂದು ಇದ್ದರೂ ಸುಮಾರು ಎರಡು ಲಕ್ಷ ಎಕರೆಗಳಷ್ಟಕ್ಕೆ ಮಾತ್ರ ನೀರು ಸಿಗಲು ಅನುಕೂಲವಾಯಿತು. ಇದರಿಂದ ಜನಗಳ ಕಷ್ಟ ಏನಾಗಿದೆ ಎನ್ನುವುದನ್ನು ತಿಳಿದುಕೊಂಡು ಇನ್ನು ಮುಂದೆ ಇದಾಗದಂತೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅನೇಕ ಕಡೆಗಳಲ್ಲಿ ಸಣ್ಣ ಸಣ್ಣ ಕಾಲುವೆಗಳನ್ನು ತೆಗೆಸಿದ್ದರೆ ಎಲ್ಲರಿಗೂ ನೀರು ಸಿಗುವುದಕ್ಕೆ ಅನುಕೂಲವಾಗುತ್ತಿತ್ತು. ಇದರಿಂದ ಕೆಲವು ಕಡೆಗಳಲ್ಲಿ ವೆಟ್ ಕಂ ಡ್ರೈ ಕಲ್ಟಿವೇಷನ್ನು ಆಗಲು ಮತ್ತು ವೆಟ್ ಮತ್ತು ಡ್ರೈ ಕಲ್ಟಿವೇಷನ್ನು ಮಾಡುವುದೂ ಬಹಳ ಕಷ್ಟವಾಗಿದೆ. ಇಲ್ಲಿನ ಜನರು ಅಗ್ರಿಕಲ್ಚರ್ ಕಮಿಟಿಯವರು ನಮ್ಮ ಭಾಗದ ಕಡೆ ಬಂದಿದ್ದಾಗ ಅಲ್ಲಿನ ಪರಿಸ್ಥಿತಿಗಳನ್ನೆಲ್ಲಾ ಹೇಳಿಕೊಂಡರು ಮತ್ತು ಅಲ್ಲಿ ಎಲ್ಲವನ್ನೂ ವಿಚಾರಿಸಿಕೊಂಡರು. ನಮ್ಮ ಭಾಗದಲ್ಲಿ ವ್ಯವಸಾಯ ಹೇಗೆ ಇದೆ ಎಂದರೆ ಪೆರಿನ್ನಿಯಲ್, ವೆಟ್ ಮತ್ತು ಡ್ರೈ ಕಂ ವೆಟ್ ಎಂದು ಮೂರು ಬೇರೆ ಬೇರೆ ರೀತಿಯಾಗಿ ಇವೆ, ಇದರಲ್ಲಿ ನೀರಿನ ಆಸರೆ ಸಿಗದೆ ಇರುವುದರಿಂದ ಶೇಕಡಾ ಹತ್ತು ಭಾಗದಷ್ಟೂ ಕೂಡ ಸಾಗುವಳಿಯಾಗದೇ ಉಳಿದುಬಿಟ್ಟಿದೆ. ಇದಕ್ಕೆ ಕಾರಣ ಸರಿಯಾಗಿ ನೀರು ಸರಬರಾಜು ಮಾಡದೇ ಇರುವುದು, ಕಂಟ್ರೋಲು ಸರಿಯಾಗಿಲ್ಲದೇ ಇರುವುದು, ಷಟ್ಟರುಗಳಿಂದ ಸರಿಯಾಗಿ ನೀರು ಬಿಡದೇ ಇರುವುದು, ಮುಂಗಾರಿನಲ್ಲಿ ಸರಿಯಾದ ಕಂಟ್ರೋಲು ಇಲ್ಲದೆ ಹಿಂಗಾರಿನಲ್ಲಿ ಡ್ರೈ ಕಂ ವೆಟ್ ನಂತರ ವ್ಯವಸಾಯ ಮಾಡುವ ಮತ್ತು ಬೆಳೆ ತೆಗೆಯುವುದು ಎಂದು ಟೆಕ್ನಿಕಲ್ ಕಮಿಟಿಯವರ ಮುಂದೆ ಒಂದು ವಾದವನ್ನು ಅಲ್ಲಿನ ಜನರು ಕೂಡ ತೋರಿಸಿದ್ದರು. ಅಲ್ಲದೆ ಅನ್ಆಥರೈಸ್ಡ್ ಕಲ್ಟಿವೇಷನ್ನು ನಡೆಯುತ್ತಿರುವುದನ್ನು ತಪ್ಪಿಸಲು ಈಗ ಸರಿಯಾದ ಇರಿಗೇಷನ್ನು ಆಕ್ಟು ಇಲ್ಲ ಮತ್ತು ಕಟ್ಟೆಯ ರಿಪೇರಿ ಸರಿಯಾಗಿಲ್ಲ. ಷಟ್ಟರುಗಳು ಸರಿಯಾಗಿಲ್ಲ ಮತ್ತು ಕಂಟ್ರೋಲುಗಳೂ ಸರಿಯಾಗಿಲ್ಲ, ಅಲ್ಲದೆ ಎಲ್ಲೆಲ್ಲಿ ಕಾಲುವೆಗಳನ್ನು ಕಟ್ಟಿಕೊಂಡು ಸುಮಾರು 10 ಸಾವಿರ ಎಕರೆಗಳವರಿಗೂ ಅನ್ಆಥರೈಸ್ಡ್ ಕಲ್ಟಿವೇಷನ್ನು ಎಂದಿದ್ದರೆ ಅದರಲ್ಲಿ ಸಾಧಾರಣವಾಗಿ 3,000 ಎಕರೆಗಳಷ್ಟು ಡ್ರೈ

ಈ ವೆಟ್ ಕಲ್ಟಿವೇಷನ್ನಿಗೂ ಪೂರ್ತಿಯಾಗಿ ನೀರು ಸಿಗುವುದಿಲ್ಲ. ಅಲ್ಲದೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಕಟ್ಟೆಗಳನ್ನು ಕಟ್ಟುವುದರ ಕಡೆಗೆ ಹೆಚ್ಚು ಲಕ್ಷ್ಯ ಕೊಡುವ ಹಾಗೆ ಕಾಲುವೆಗಳನ್ನು ಪೂರ್ತಿ ತೆಗೆಸಿ ನೀರು ಕೊಡುವುದರ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಇದರಿಂದ ಸಾವಿರಾರು ಎಕರೆಗಳಷ್ಟು ಭೂಮಿಗೆ ನೀರು ಸಿಗದೇ ಬಹಳ ಅನ್ಯಾಯವಾಗಿದೆ. ನೀರು ಹಂಚಿಕೆಯನ್ನು ಇಲಾಖೆಯಲ್ಲಿರುವ ಅಧಿಕಾರಿಗಳು ಸರಿಯಾಗಿ ನೋಡಿ ಹಂಚದೇ ಹೋದರೆ ಬೆಳೆಯನ್ನು ಸರಿಯಾಗಿ ಬೆಳೆಯುವುದಕ್ಕೆ ಆಗುವುದಿಲ್ಲ. ಹತ್ತು ಸಾವಿರ ಎಕರೆಗಳಷ್ಟು ಭೂಮಿಗೂ ನೀರು ಕೊಡಲು ಸಾಕಷ್ಟು ಕಾಲುವೆಗಳನ್ನು ತೆಗೆಸಿ ನೀರು ಕೊಡದೆ ಹೋದುದರಿಂದ ಜನರಿಗೂ ಬಹಳ ನಷ್ಟವಾಗಿದೆ ಮತ್ತು ಸರಕಾರಕ್ಕೂ ನಷ್ಟ. ಆದುದರಿಂದ ಪಿ.ಡಬ್ಲ್ಯು.ಡಿ. ಅಧಿಕಾರಿಗಳು ಕೆಲಸಗಳನ್ನು ಮಾಡಿ ಮುಗಿಸುವಾಗ ಪ್ರತಿಯೊಂದು ಸರ್ವೆ ನಂಬರಿಗೂ ನೀರು ಹೋಗುವಂತೆ ಮಾಡಬೇಕು ಎಂದು ನನ್ನ ಸಲಹೆ. ಸರಕಾರದವರೇನೋ ಅಣೆಕಟ್ಟಾಗಿದೆ ಎನ್ನುತ್ತಾರೆ, ದೀಪಗಳಿಗಾಗಿ ಎಲೆಕ್ಟ್ರಿಸಿಟಿ ಲೈನು ಹಾಕಿದ್ದೇವೆನ್ನುತ್ತಾರೆ. ಆದರೆ ದೀಪವನ್ನು ಪ್ರತಿ ಮನೆಗೂ ಕೊಡಲು ಕನೆಕ್ಟು ಮಾಡಿದರೆ ದೀಪ ಬರುತ್ತದೆ ಇಲ್ಲದಿದ್ದರೆ ಇಲ್ಲ. ಹಾಗಿಲ್ಲದೆ ಲೈಟಿಗಾಗಿ ಮೀಟರು ಹಾಕಿದ್ದೇವೆ ತೆರಿಗೆ ಕೊಡಿ ಎಂದರೆ ದೀಪವನ್ನು ತೆಗೆದುಕೊಳ್ಳದೆ ತೆರಿಗೆಯನ್ನು ಯಾರು ತಾನೇ ಕೊಡುತ್ತಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಇಲ್ಲಿನ ಅಧಿಕಾರಿಗಳಿಗೆ ನೀರನ್ನುಪಯೋಗಿಸದೇ ಇರುವವರಿಂದ ತೆರಿಗೆ ವಸೂಲು ಮಾಡಕೂಡದು ಎಂದು ಒಂದು ಸ್ಟೇ ಆರ್ಡರು ಕಳುಹಿಸಬೇಕೆಂದು ಇಲ್ಲಿನ ಜನರು ಮನವಿಯನ್ನು ಕೂಡ ಕಳುಹಿಸಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡಿ ಯಾರಿಗೆ ಅನ್ಯಾಯವಾಗಿದೆ ಎನ್ನುವುದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಲ್. ಎಲ್. ಸಿ. ಗಾಗಿ ಲ್ಯಾಂಡುಗಳನ್ನು ಎರಡು ಸಲ, ಮೂರು ಸಲ ತೆಗೆದುಕೊಂಡರು, ಅದರ ಬಗ್ಗೆ ಸರಕಾರ ಇದುವರೆಗೆ ಲಕ್ಷ್ಯ ಕೊಟ್ಟಿಲ್ಲ. ಎಲ್. ಎಲ್. ಸಿ. ಗಾಗಿ ಎಲ್ಲಿ ಭೂಮಿ ತೆಗೆದುಕೊಂಡು ಕೆಲಸಗಳನ್ನು ಆರಂಭ ಮಾಡಬೇಕು ಅಲ್ಲಿಂದ ರೈತರಿಗೆ ನೀರು ಒದಗಿಸಿಕೊಡಬೇಕು. ರೈತರಿಂದ ಪಡೆದ ಭೂಮಿಗೆ ಸರಕಾರದವರು ಇನ್ನೂ ಪರಿಹಾರಗಳನ್ನು ಕೊಟ್ಟಿಲ್ಲ. ಅಲ್ಲದೆ ರೈತರಿಗೆ ಒಳ್ಳೆಯ ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ಒದಗಿಸಿ ಕೊಡಬೇಕು, ಸಣ್ಣಸಣ್ಣ ಕಾಲುವೆಗಳು ಹೋಗತಕ್ಕ ಪ್ರದೇಶದಲ್ಲಿ ಅನೇಕ ಭೂಮಿಗಳಿದ್ದರೂ ಅಲ್ಲಿ ಏನನ್ನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ಪಿ.ಡಬ್ಲ್ಯು.ಡಿ. ಯವರು ಎಲ್ಲೆಲ್ಲಿ ಸೀಪೇಜು ವಾಟರು ಸಿಗುತ್ತದೋ ಅಲ್ಲಿಗೆ ಬಿತ್ತನೆಗಾಗಿ ಬೀಜಗಳನ್ನು ಕೊಡಲು ಡಿ.ಸಿ.ಯವರಿಗೇ ಹಂಚುವ ಡಿಸ್‌ಕ್ರಿಷನ್ನು ಬಿಡಬೇಕು, ಅವರುಗಳು ಸರಿಯಾಗಿ ಪರಿಶೀಲನೆ ಮಾಡಿಕೊಡಲು ಅನುಕೂಲವಾಗುತ್ತದೆ. ಸರಕಾರದವರೇ ಇಂತಹ ಆರ್ಡರನ್ನು ಇಟ್ಟುಕೊಳ್ಳುವುದಕ್ಕೆ ಬದಲಾಗಿ ಡೆಪ್ಯುಟೀ ಕಮಿಷನರವರಿಗೇನೆ ಇದರ ಹಂಚುವಿಕೆಯನ್ನು ಮಾಡುವಂತೆ ಆರ್ಡರು ಕಳುಹಿಸಬೇಕೆಂದು ಸೂಚಿಸುತ್ತೇನೆ. ಮತ್ತು ಕಾಲುವೆಗಳನ್ನು ತೆಗೆದುಕೊಂಡು ಹೋಗಲು, ತೆಗೆದುಕೊಂಡಿರತಕ್ಕ ಭೂಮಿಗಳಿಗೆ ಪರಿಹಾರದ ದುಡ್ಡು ಇನ್ನೂ ಸಿಕ್ಕಿಲ್ಲ. ಅವರಿಂದ ಬಿರಾಡ್ ಮಾತ್ರ ವಸೂಲು ಮಾಡುತ್ತಿದ್ದಾರೆ. ಈ ವಿಚಾರವನ್ನು ಸರಕಾರದವರು ದಯವಿಟ್ಟು ಮನಸ್ಸಿಗೆ ತೆಗೆದುಕೊಂಡು ಅವರಿಗೆ ಪರಿಹಾರ ದ್ರವ್ಯ ಬೇಗನೆ ಸಿಕ್ಕುವಂತೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair.]

†ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಶರಾವತಿ ವ್ಯಾಲಿ ಪ್ರಾಜೆಕ್ಟಿನ ಕೆಲಸ ಇನ್ನೇನು ಮುಗಿಯುತ್ತಾ ಬರುತ್ತಿದೆ, ಬರುವ ಜುಲೈ ತಿಂಗಳಿನಲ್ಲಿ ಪವರನ್ನು ಹಂಚುತ್ತೇವೆಂದೂ ಮತ್ತು ಈ ಬಗ್ಗೆ ಒಂದು ದಕ್ಷಿಣಭಾರತಕ್ಕೆ ಸಂಬಂಧಪಟ್ಟಹಾಗೆ ವಿದ್ಯುಚ್ಛಕ್ತಿಯ ಜಾಲವನ್ನು ಮಾಡಬೇಕೆಂಬ ಏರ್ಪಾಡುಗಳಿರುತ್ತವೆಂದು ನಾವು ಕೇಳುತ್ತಿದ್ದೇವೆ. ಈ ಕಾರ್ಯ ಮುಗಿಯುವುದರೊಳಗಾಗಿ ನಮ್ಮ ರಾಜ್ಯದಲ್ಲಿರತಕ್ಕ ನಗರಗಳಿಗೂ ಪಟ್ಟಣಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸತಕ್ಕ ಕಾರ್ಯಕ್ರಮವನ್ನು ಅತಿ ಜಾಗ್ರತೆಯಾಗಿ ಸರ್ಕಾರದವರು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದಕ್ಕಾಗಿ ಈಗಲೇ ಟ್ರಾನ್ಸ್‌ಮಿಷನ್ ಲೈನು ವಗೈರೆಗಳನ್ನು ಹಾಕಿಕೊಳ್ಳುವುದು ಒಳ್ಳೆಯದು. ಇಲ್ಲವಾದರೆ ನಾವು ನಾಳೆ ಆ ಸಂಸ್ಥಾನಗಳ ಜಾಲದಲ್ಲಿ ಸಿಕ್ಕಿ ನಮಗೆ ಅನನುಕೂಲವಾಗತಕ್ಕ ಪ್ರಸಂಗ ಬರಬಹುದು. ಇದಕ್ಕೆ ಸರ್ಕಾರದವರು ಅವಕಾಶ ಕೊಡದಂತೆ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಬೇಕೆಂದು ಹೇಳುತ್ತೇನೆ.

(ಶ್ರೀ ಟಿ. ಎನ್. ಮಾದಪ್ಪ ಗೌಡ)

10.00 A.M.

ಇನ್ನು ಸಂಸ್ಥಾನದಲ್ಲಿ ಅಲ್ಲಲ್ಲೇ ದೊಡ್ಡದೊಡ್ಡ ನೀರಾವರಿ ಕಾಂಗಾರಿಗಳನ್ನು ಕೈಗೊಂಡಿರುತ್ತಾರೆ. ಆದರೆ ನಮ್ಮ ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಆಗಿಂದಾಗ್ಗೆ ಬರಬೀಳುತ್ತಿರುವುದು ಎಲ್ಲರಿಗೂ ತಿಳಿದಿರತಕ್ಕ ಅಂಶವೇ ಆಗಿದೆ. ಈ ಕಾರಣದಿಂದ ಅಲ್ಲಲ್ಲೇ ಬೋರ್‌ವೆಲ್‌ಗಳನ್ನು ತೆಗೆದು ಅಲ್ಲಿಯ ಜನರಿಗೆ ನೀರನ್ನೊದಗಿಸುವ ಕೆಲಸವನ್ನು ಕೈಗೊಳ್ಳಬೇಕೆಂದು ನಾನು ಸೂಚಿಸಲಿಚ್ಛೆಪಡುತ್ತೇನೆ. ಈ ದಿವಸ ಬಾವಿಗಳನ್ನು ತೆಗೆಸಲು ಕೊಡುತ್ತಿರುವ 3 ಸಾವಿರ ರೂಪಾಯಿಗಳ ಸಾಲ ಏತಕ್ಕೂ ಸಾಲದು. ಅದರಿಂದ ಸರಿಯಾಗಿ ನೀರನ್ನೊದಗಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ದೇಶಾದ್ಯಂತವೂ ಒಂದು ಸರ್ವೇ ಮಾಡಿಸಿ ಎಲ್ಲೆಲ್ಲಿ ಬರಬರುತ್ತದೋ ಅಂಥಾ ಕಡೆಗಳಲ್ಲಿ ಈ ಬೋರ್‌ವೆಲ್‌ಗಳನ್ನು ಕೂಡಲೇ ಹಾಕಿಸತಕ್ಕ ಪ್ರಯತ್ನವನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಎ. ಜಿ. ಆರ್. ಸಮಿತಿಯವರು ಸರ್ಕಾರಕ್ಕೆ ಮಿತವ್ಯಯ ಎಲ್ಲೆಲ್ಲಿ ಮಾಡಲು ಸಾಧ್ಯವಿದೆ ಯೆಂಬ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದರು. ಆದರೆ ಅವು ಈ ದಿನದವರೆಗೂ ಕಾರ್ಯಗತವಾದಂತೆ ಕಂಡುಬರುತ್ತಿಲ್ಲ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಸಚಿವರು).—ಅವರು ಕೊಟ್ಟಿದ್ದ ಸಲಹೆಗಳ ಬಗ್ಗೆ ಸರ್ಕಾರ ಯಾವ ಯಾವ ಇಲಾಖೆಯಲ್ಲಿ ಏನೇನು ಕಾರ್ಯಕ್ರಮ ಕೈಗೊಂಡಿದೆ ಎಂಬುದನ್ನು ಒಂದು ಪುಸ್ತಕ ರೂಪದಲ್ಲೇ ಅಚ್ಚುಹಾಕಿಸಿ ಅವುಗಳನ್ನೆಲ್ಲಾ ಮಾನ್ಯ ಸದಸ್ಯರಿಗೂ ಕೊಡಲಾಗಿದೆ. ಮಾನ್ಯ ಸದಸ್ಯರು ಆ ಪುಸ್ತಕವನ್ನು ಓದಲಿಲ್ಲವೆಂದು ಕಾಣುತ್ತದೆ. ಅವರು ದಯವಿಟ್ಟು ಆ ಪುಸ್ತಕವನ್ನು ಓದಬೇಕು.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಾವು ಹಿಂದಿನಿಂದಲೂ ಡಿವಿಜನಲ್ ಕಮಿಷನರ ಹುದ್ದೆಗಳನ್ನು ರದ್ದುಮಾಡಬೇಕೆಂದು ಹೇಳಿ ಹೇಳಿ ಸಾಕಾಯಿತು. ಅವುಗಳಿನ್ನೂ ಹಾಗೇ ಉಳಿದಿವೆ. ಇದರಿಂದ ಸರ್ಕಾರಕ್ಕೆ ಬಹಳ ಹಣ ಉಳಿತಾಯವಾಗುತ್ತಿತ್ತು, ಇವುಗಳನ್ನು ರದ್ದುಮಾಡಿದ್ದರೆ. ಇದರಿಂದ ಕೆಲಸಕಾರ್ಯಗಳು ಬೇಗ ಆಗುವುದಿಲ್ಲ.

ಇನ್ನು ಮೇಜರ್ ಟ್ಯಾಂಕುಗಳ ನೀರು ಸರಿಯಾಗಿ ಡಿಸ್ಟ್ರಿಬ್ಯೂಟಾಗುತ್ತಿಲ್ಲ. ಕೆಲವು ಕಡೆ ಈ ನೀರನ್ನು ಬಿಡತಕ್ಕ ವಿಚಾರದಲ್ಲಿ ಇದರ ಕಂಟ್ರೋಲನ್ನು ರೆವಿನ್ಯೂ ಇಲಾಖೆ ಇಟ್ಟುಕೊಂಡಿದೆ. ಇದನ್ನು ತಪ್ಪಿಸಿ ಈ ಕಾರ್ಯವನ್ನು ಪಿ.ಡಬ್ಲ್ಯೂ.ಡಿ.ಗೆ ವಹಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಬಗ್ಗೆ ಒಂದು ವ್ಯವಸ್ಥೆಯಿಲ್ಲದಿರುವುದರಿಂದ ಈ ದಿವಸ ಬಹಳ ನೀರು ಅನಾವಶ್ಯಕವಾಗಿ ಪೋಲಾಗಿ ಹೋಗುತ್ತಿದೆ. ಜನರ ಬೆಳೆಗೆ ಸಾಕಷ್ಟು ನೀರು ಸಿಕ್ಕದೆ ನೀರು ಬಹಳ ನಷ್ಟವಾಗುತ್ತಿದೆ. ಕೂಡಲೇ ಈ ಅಧಿಕಾರವನ್ನು ಪಿ.ಡಬ್ಲ್ಯೂ.ಡಿ.ಗೆ ವಹಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಆಡಳಿತದ ವಿಚಾರಕ್ಕೆ ಬಂದರೆ ಬಹಳ ವ್ಯಸನವಾಗುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಇಲ್ಲಿಯ ವಿಚಾರ ಬಹಳ ದಿವಸಗಳಿಂದಲೂ ಚೆನ್ನಾಗಿ ಗೊತ್ತಿದೆ; ಈ ವಿಚಾರಗಳನ್ನೆಲ್ಲಾ ಅವರು ಚೆನ್ನಾಗಿ ತಿಳಿದಿರತಕ್ಕವರು. ಈಗ ನಮಗೆ ದೇಶ ಒಂದು ದೊಡ್ಡದಾಗಿದೆ. ಸುಮಾರು ಬೀದರಿನಿಂದ ಬೆಂಗಳೂರುವರೆಗೆ 500-600 ಮೈಲಿಗಳಾಗುತ್ತದೆ. ಆದರೆ 1957 ರ ಹಿಂದೆ ಈ ಸಂಸ್ಥಾನದ ಆಡಳಿತ ಬಹಳ ಬಿಗಿಯಾಗಿತ್ತು. ಅದು ಈ ದಿವಸ ಮಾಯವಾಗಿದೆ. ಇದೇ ಮಾತನ್ನು ನಾನು ಮೇಲ್ಮನೆಯ ಒಬ್ಬ ಸದಸ್ಯರ ಎದುರಿನಲ್ಲಿ ತಿಳಿಸಿದಾಗ, ಅವರು ಹೇಳಿದರು—ಆಡಳಿತ ಅನುಕೂಲಕ್ಕಾಗಿ ದೇಶವನ್ನು ಇಬ್ಭಾಗ ಮಾಡುವುದು ದೇಶದ್ರೋಹವಾಗುತ್ತದೆ ಎಂದು. ಆದರೆ ಅದು ತಪ್ಪಭಿಪ್ರಾಯ ಎಂದು ನಾನು ಹೇಳುತ್ತೇನೆ. ನಾವು ಪಾಕಿಸ್ತಾನದವರು ಕೇಳುವಂತೆ ಕೇಳುತ್ತಿಲ್ಲ. ನಾವು ಕೇಳುತ್ತಿರುವ ಉದ್ದೇಶ ಇಲ್ಲಿಯ ಆಡಳಿತ ಸರಿಯಾಗಿ ದಕ್ಷತೆಯಿಂದ ನಡೆಯಲಿ ಎಂದೂ ಈ ದೇಶದ ಆಡಳಿತ ಒಂದು ಸರಿಯಾದ ಹಿಡಿತದಲ್ಲಿರಲೆಂದೂ ನಾವು ಇದನ್ನು ಕೇಳುತ್ತಿದ್ದೇವೆ. ದೇಶ ಚಿಕ್ಕದಾದರೆ ಈ ಆಡಳಿತ ಒಂದು ಹಿಡಿತದಲ್ಲಿರುತ್ತದೆಂಬುದು ನನ್ನ ಖಚಿತವಾದ ಅಭಿಪ್ರಾಯ. ಇನ್ನು ಈ ಕನ್ನಡ ಭಾಷೆಯ ನುಡಿಯ ವಿಚಾರದಲ್ಲಿ ನೋಡಿದರೂ ಈ ದೇಶವನ್ನು ಎರಡು ಮಾಡುವುದಕ್ಕೆ ಅವಕಾಶವಿದೆ. ನಾನು ಈ ವಿಚಾರವನ್ನು ಒಕ್ಕಲಿಗ-ಲಿಂಗಾಯಿತರ ಒಂದು ಪ್ರಶ್ನೆಯಿಂದ ಇದನ್ನು ಹೇಳುತ್ತಿದ್ದೇನೆಂದು ಕೆಲವರು ಹೇಳಬಹುದು. ಆದರೆ ಇದು ಹಾಗೆ ನೋಡತಕ್ಕ ಪ್ರಶ್ನೆಯಲ್ಲ. ಈ ಹಿಂದೆ ಹಳೆಯ ಮೈಸೂರಲ್ಲಿ ದಿವಾನ್ ರಂಗಾಚಾರ್ಲು ಕಾಲದಿಂದ ಹಿಡಿದು ದಿವಾನ್ ಎನ್. ಮಾಧವ ರಾಯರ ಕಾಲದ ವರೆಗೆ ಇಲ್ಲಿಯ ಆಡಳಿತ ಎಷ್ಟು ಬಿಗಿಯಾಗಿತ್ತು ಎಂಬುದನ್ನು ಹೇಳಿಕೊಳ್ಳಲು ನಮಗೆಲ್ಲರಿಗೂ ಒಂದು ಹೆಮ್ಮೆಯ ವಿಷಯವಾಗಿದೆ ಅದು. ಆಗ್ಗೆ ಅವರು ಕೇವಲ ಒಬ್ಬಿಬ್ಬರು ಕೌನ್ಸಿಲರುಗಳನ್ನು ಇಟ್ಟುಕೊಂಡು ಈ ಸೆಕ್ರೆಟೇರಿಯಟ್ಟನ್ನು ಒಂದು ಬಿಗಿಯಲ್ಲಿಟ್ಟುಕೊಂಡು ಬಹಳ

ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಈಗಲಾದರೋ 29 ಜನ ಮಂತ್ರಿಗಳು, ದೇಶ 29 ವಿಧವಾಗಿ ಕೆಟ್ಟುಹೋಗುತ್ತದೆ. ಈ ದೇಶ ಎರಡಾಗಬೇಕು ಎಂದು ಹೇಳುವಾಗ ಬಳ್ಳಾರಿ ಮತ್ತು ಮಂಗಳೂರು ಇವೆರಡೂ ಇತ್ತಲಾದರೂ ಸೇರಬಹುದು, ಅತ್ತಲಾದರೂ ಸೇರಬಹುದು. ಹೀಗೆ ಮಾಡಿದರೆ ಆಡಳಿತದ ದೃಷ್ಟಿಯಿಂದ ಅನುಕೂಲವಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಭಾಷೆಯ ವಿಚಾರ ಹೇಳುವುದಾದರೆ ಅವರು ಮಾತನಾಡುವುದೇ ನಮಗೆ ಅರ್ಥವಾಗುವುದಿಲ್ಲ. ಅವರು ಏನು ಹೇಳುತ್ತಾರೆಂಬುದೇ ನಮಗೆ ಗೊತ್ತಾಗುವುದಿಲ್ಲ. ಮೇಲಾಗಿ ಊಟದ ವಿಚಾರಕ್ಕೆ ಬಂದರೆ ನಾವು ಅನ್ನ ತಿನ್ನತಕ್ಕವರು; ಅವರು ಜೋಳ ತಿನ್ನತಕ್ಕವರು. ನಾವು ಜೋಳವನ್ನು ತಿಂದರೆ ನಮಗೆ ಭೇದಿಯಾಗುತ್ತದೆ. ದೇಶ ಈಗ ಒಂದಾಗಿರುವುದರಲ್ಲಿ ಹೀಗೆಲ್ಲಾ ನಾನಾ ಭಿನ್ನತೆಗಳಿವೆ. ಇನ್ನು ಹಳೇ ಮೈಸೂರು ಹೊಸ ಮೈಸೂರು ಎಂಬ ಭೇಧ ಭಾವನೆಯನ್ನು ನಮ್ಮ ಭರತ ಕಂಠಿ ಸಾಹೇಬರು ಹೆಚ್ಚಿಸುತ್ತಿರುವುದರಿಂದ ನಮ್ಮಗಳ ಮನಸ್ಸು ಬಹಳ ಬೇಜಾರಾಗಿ ಜಿಗುಪ್ಸೆಯಾಗಿದೆ. ಇವರು ನಮ್ಮ ಈ ದೇಶವನ್ನೇ ನಿರ್ನಾಮ ಮಾಡುವುದಕ್ಕೆ ಹೊರಟಿದ್ದಾರೇನೋ ಎಂಬ ಭಾವನೆ ನಮಗೆ ಬಂದಿದೆ. ನಾನು ಈಗ ಈ ವಿಚಾರಗಳನ್ನೆಲ್ಲಾ ಏಕೆ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆಂದರೆ: ನಾನು ಮನಸ್ಸಿನಲ್ಲಿ ಒಂದೂ ಬಚ್ಚಿಟ್ಟುಕೊಳ್ಳದೆ ಮುಚ್ಚುಮರೆ ಮಾಡದೆ ನಮ್ಮ ಮನಸ್ಸಿನಲ್ಲಿರುವುದನ್ನು ಹೇಳಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆಲ್ಲಾ ಚೆನ್ನಾಗಿ ಅರ್ಥವಾಗಲೆಂದು ಹೇಳುತ್ತಿದ್ದೇನೆ. ಇನ್ನು ಇಲ್ಲಿರುತಕ್ಕ ನೌಕರರ ಸಂಬಳ ಸಾರಿಗೆಯ ವಿಚಾರಕ್ಕೆ ಬಂದರೆ—ಇಲ್ಲಿಯವರಿಗೆ ಬಹಳ ಅನ್ಯಾಯವಾಗಿದೆ. ಏಕೆಂದರೆ ಸ್ಟೇಟ್ ರೀ-ಆರ್ಗನೈಜೇಷನ್ ಆಗತಕ್ಕ ಸಮಯದಲ್ಲಿ ನಮ್ಮವರು ಯಾವಾಗಲೂ ಮೈಸೂರಿನ ಜನ ಬಹಳ ಧರ್ಮಿಷ್ಟರು. ಅವರಿಗೆ ಮುಂದೆ ಏನಾಗುತ್ತದೋ ಎಂಬುದನ್ನು ಯೋಚನೆ ಮಾಡುವ ಶಕ್ತಿಯಿಲ್ಲ. ಹೊರಗಡೆಯಿಂದ ಬಂದವರನ್ನು ಅವರು ಅಲ್ಲಿಯೇ ಕೆಲಸಕ್ಕೆ ಸೇರಿಸಿಕೊಂಡು ಬೇಕಾದಷ್ಟು ಇನ್‌ಕ್ರಿಮೆಂಟುಗಳನ್ನು ಕೊಟ್ಟರು. ಎಸ್. ಆರ್. ಸಿ. ವರದಿ ಪ್ರಕಾರ ಹೊಸ ಮೈಸೂರಿನವರಿಗೆ ಸಂಬಳ ಸಾರಿಗೆ ಬಗ್ಗೆ ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಇವರ ಯೋಗ್ಯತೆ ನೋಡಿ ಇಲಾಖೆಯಲ್ಲಿ ಪ್ರೊಮೋಷನ್ ಕೊಡತಕ್ಕ ವಿಚಾರದಲ್ಲಿ, ನಾಲ್ಕೈದು ವರ್ಷಗಳು ಮಾತ್ರ ಸರ್ವಿಸ್ ಆದವರು ಬಹಳ ಮೇಲಕ್ಕೆ ಬಂದಿರತಕ್ಕ ವಿಚಾರ ನೋಡಿದರೆ ಈ ಎರಡನೆ ವಿಶ್ವವಿದ್ಯಾನಿಲಯ ನಮಗೆ ಏತಕ್ಕೆ ಬೇಕು? ಕರ್ಣಾಟಕ ಮತ್ತು ಮೈಸೂರು ಯೂನಿವರ್ಸಿಟಿಗಳು ಎಂಬುದಾಗಿ ಎರಡು ಏತಕ್ಕೆ ಬೇಕು? ದೇಶವೆಲ್ಲಾ ಒಂದಾದ ಮೇಲೆ ಒಂದೇ ಯೂನಿವರ್ಸಿಟಿ ಇರಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನೂ ಎರಡು ಆಗುತ್ತವೆ. ಒಂದು ಬೆಂಗಳೂರಿನಲ್ಲಿ ಆಗುತ್ತದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಏನಾದರೂ ಎಲ್ಲಕ್ಕೂ ಒಂದೇ ಸಿಲಬಸ್ ಇರಬೇಕು. ಈಗಿನ ಆಡಳಿತ ದೃಷ್ಟಿಯಿಂದಾದರೂ ದೇಶವನ್ನು ಎರಡು ಭಾಗಗಳಾಗಿ ಮಾಡುವುದಕ್ಕೆ ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಕೆಲವು ಕಡೆಗಳಲ್ಲಿ ತಾಲ್ಲೂಕು ಆಫೀಸುಗಳಿಗೆ ಬೇಕಾದಷ್ಟು ಸಿಬ್ಬಂದಿ ಕೊಟ್ಟಿಲ್ಲ, ಬಹಳ ಕಡಿಮೆ ಇದೆ. ಅನಾವಶ್ಯಕವಾಗಿ ಕೆಲವು ಸಬ್ ಡಿವಿಜನ್ ಆಫೀಸುಗಳಲ್ಲಿ ಬಹಳ ಹೆಚ್ಚಿಗೆ ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದಾರೆ. ಇವೆಲ್ಲಾ ಮೊದಲು ಹೋಗಬೇಕು ಎಂಬುದಾಗಿ ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲ್‌ಪುರ್).—ಅಧ್ಯಕ್ಷರೇ, ಈ ದಿವಸ ನನಗೆ ಬಹಳ ಸಂತೋಷವೆನ್ನಿಸುತ್ತದೆ. ಮುಖ್ಯಮಂತ್ರಿಗಳು ಉತ್ತರ ಕೊಡಲಿಕ್ಕೆ ಕುಳಿತಿದ್ದಾರೆ. ನಮ್ಮ ದೇಶದ ನೀರಿನ ಹಂಚಿಕೆ ವಿಷಯವಾಗಿ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಸರ್ಕಾರದವರು ಕೊಟ್ಟಿದ್ದ ಮೆಮೊರ್ಯಾಂಡಂನಲ್ಲಿ ಪುಟ 12 ರಲ್ಲಿ the full development of irrigation potential in Krishna Basin is most important for the very survival of Mysore ಎಂದು ಹೇಳಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಏನಾದರೂ ಆಹಾರ ಸಿಗಬೇಕಾದರೆ, ಗಂಡಾಂತರ ಪರಿಸ್ಥಿತಿಯಿಂದ ದೂರವಾಗಬೇಕಾದರೆ ಕೃಷ್ಣನೀರು ಬಗ್ಗೆ ನಮ್ಮ rightful share ಏನಿದೆ ಅದು ನಮಗೆ ಸಿಕ್ಕಬೇಕು. ಅದು ಸಿಕ್ಕದೆ ಈಗ ಉಳಿತಾಯವಾಗಿದೆ. ಇಲ್ಲದಿದ್ದರೆ ನಾವು ಆಂಧ್ರಕ್ಕೆ ಅಂದರೆ ಎರಡನೇ ದೇಶಕ್ಕೆ ಆಹಾರಕ್ಕಾಗಿ ಬೇಡಿಕೊಳ್ಳುವುದಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ಈ ದಿವಸ ಲೆಖ್ಖ ಹಾಕಿದರೆ ಮೈಸೂರು ಇರಿಗೇಷನ್ ಶೇ. 6 ರಷ್ಟಿದೆ. ಆಂಧ್ರ ಶೇ. 20 ಎಂದು ಸರ್ಕಾರದ ಲೆಖ್ಖ ಕೊಟ್ಟಿದ್ದಾರೆ. ಮದ್ರಾಸ್ ಶೇ. 40 ಇದೆ. ಇವರು ಮೂರನೆಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಶೇ 8 ರಷ್ಟು ಮಾಡುತ್ತೇವೆಂದು ಹೇಳುತ್ತಾರೆ. ಈ ದೃಷ್ಟಿಯಿಂದ ನಮ್ಮವರು ಎಷ್ಟರಮಟ್ಟಿಗೆ ಹಿಂದುಳಿದಿದ್ದಾರೆಂಬುದನ್ನು ನಾವು ತಿಳಿಯಬೇಕು. ಆದರೆ ಸರ್ಕಾರದವರು ಕೊಟ್ಟಿರತಕ್ಕ

(ಶ್ರೀ ಅಣ್ಣಾರಾವ್ ಗಣಮುಖಿ)

ಮೆಮೊರ್ಯಾಂಡಂ ಪ್ರಕಾರ ಅಂಕಿ ಸಂಖ್ಯೆಗಳನ್ನು ನೋಡಿದರೆ ಪುಟ 14 ರಲ್ಲಿ 46 ಯೋಜನೆಗಳನ್ನು ಉಲ್ಲೇಖ ಮಾಡಿದ್ದಾರೆ. ಅದರಲ್ಲಿ ಸಣ್ಣ ಸಣ್ಣ 10 ಪ್ರಾಜೆಕ್ಟುಗಳು 6·5 ಟಿ. ಎಂ. ಸಿ. ಎಫ್. ಟಿ. ವಾಟರ್ ಎಷ್ಟುಮಟ್ಟಿಗೆ ಎಗ್ಸಿಕ್ಯೂಷನ್ನಿನಲ್ಲಿದೆ ಎಂಬುದನ್ನು ತಿಳಿಯಬೇಕು. ಅಲ್ಲಿಂದ ಮಲಪ್ರಭ ಮತ್ತು ತುಂಗಭದ್ರ right canal ಯಾವ ರೀತಿ ಹೋಗಿದೆ ಎಂಬುದನ್ನು ತೋರಿಸಿದ್ದಾರೆ. ಈಗ ಸಾಧಾರಣವಾಗಿ ಗುಲ್ಹಾಟಿ ಕಮಿಷನ್ನಿನವರು ವಾಟರ್ ಸ್ಕೇರ್ಸಿಟಿ ಬಗ್ಗೆ ಒಂದು ವಿಷಯವನ್ನು ಹೇಳಿದ್ದಾರೆ. ಆದರೆ ನೀರಿನ ಉತ್ಪತ್ತಿ ಹೆಚ್ಚು ಇರುವಾಗ ಬರಗಾಲ ಕೂಡಲೆ ಹೋಗಬೇಕು ಎಂದು ಹೇಳುವ ಮಾತಿನಲ್ಲಿ ಸ್ವಲ್ಪ ಸಂಶಯವಿದೆ. ಇದು ಹೋಗುತ್ತದೋ ಇಲ್ಲವೋ ಎಂಬ ಅನುಮಾನವೂ ನನಗಿದೆ. ಕಾರಣವೇನೆಂದರೆ ಕೊಟ್ಟಂಥ ನೀರಿನ ಹಂಚಿಕೆಯಲ್ಲಿ ಉಳಿದುದು ಕೃಷ್ಣಾ ನೀರಿನಲ್ಲಿ 122 ಟಿ. ಎಂ. ಸಿ. ಎಫ್. ಟಿ. ಸುಮಾರು ಹತ್ತಾರು ಯೋಜನೆಗಳನ್ನು ತೆಗೆದರೂ 36 ಯೋಜನೆಗಳನ್ನಾದರೂ ಮಾಡಬೇಕಾಗಿ ಬರುತ್ತದೆ. ಸಾಧಾರಣವಾಗಿ ಇಷ್ಟೆಲ್ಲಾ ಕೆಲಸ ಮಾಡಬೇಕಾದರೆ ನಮ್ಮಲ್ಲಿ ನೀರಿಲ್ಲವೆಂದು ಕಲ್ಪನೆಯಾಗುತ್ತದೆ ಇವರು ನೀರನ್ನು ಹೆಚ್ಚು ಉಪಯೋಗಿಸಬೇಕೆಂದು ಹುಡುಕಲಿಕ್ಕೆ ಹೋಗುವುದು ಹೇಗಿದೆಯೆಂದರೆ ಕತ್ತಲೆ ಕೋಣೆಯಲ್ಲಿ ಕರಿಬೆಕ್ಕನ್ನು ಹುಡುಕಿದಂತಾಗಿದೆ. ಇದರಲ್ಲಿ ನಾರಾಯಣಪುರ, ಆಲಮಟ್ಟಿ, ಮಲಪ್ರಭಾ, ಘಟಪ್ರಭಾ, ತುಂಗಭದ್ರಾ ಮತ್ತು ಅಪ್ಪರ್ ಕೃಷ್ಣಾ ಯೋಜನೆಗಳನ್ನೆಲ್ಲಾ ಮಾಡುತ್ತೇವೆಂದು ಹೇಳುವುದಾದರೆ, ಯಾವ ಪ್ರಯೋಜನವೂ ಖಂಡಿತವಾಗುವುದಿಲ್ಲ. ಇನ್ನು ಮುಂದೆ ನಮಗೆ ಸಿಕ್ಕುವ ನೀರನ್ನು ಲೆಖ್ಖ ಹಾಕಿದರೆ ಮತ್ತು ನಾವು ಆ ನೀರನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಬೇಕೆಂಬುದನ್ನು ಸಹ ಲೆಖ್ಖ ಹಾಕಿ ನೋಡುವುದಾದರೆ 1961 ರಲ್ಲಿ 278 ಟಿ. ಎಂ. ಸಿ. ಎಫ್. ಟಿ. ಉಪಯೋಗವಾಗಿದೆ. ಪ್ಲಾನಿನಲ್ಲಿ 82 ಟಿ.ಎಂ.ಸಿ.ಎಫ್.ಟಿ. ಇದೆ. ಮಲಪ್ರಭಾಗೋಸ್ಕರ 37 ಟಿ. ಎಂ. ಸಿ. ಎಫ್. ಟಿ. ಉಪಯೋಗ ಆಗಲಿಕ್ಕಿದೆ. ತುಂಗಭದ್ರಾ ಹೈಲೆವೆಲ್‌ನಲ್ಲಿ 19·5 ಟಿ. ಎಂ. ಸಿ. ಎಫ್. ಟಿ. ಮೈನರ್ ಪ್ರಾಜೆಕ್ಟುಗಳಿಗಾಗಿ 6·5 ಟಿ.ಎಂ.ಸಿ ಎಫ್.ಟಿ. ಉಪಯೋಗವಾಗಲಿದೆ. ಮದ್ರಾಸ್ ರಾಜ್ಯ ಶೇ. 5 ರಷ್ಟು ಟಿ. ಎಂ. ಸಿ. ಎಂದು ಹೇಳಿದೆ. ಮೆಮೊರ್ಯಾಂಡಂನಲ್ಲಿ ಹೇಳಿದ ಪ್ರಕಾರ ಕುಡಿಯುವುದಕ್ಕೋಸ್ಕರ 50 ಟಿ. ಎಂ. ಸಿ. ಬೇಕಾಗಿದೆ. ಇಂಡಸ್ಟ್ರಿಯಲ್ ಪರ್ಪಸಿಗೋಸ್ಕರ 60 ಟಿ. ಎಂ. ಸಿ. ಬೇಕೆಂದು ಹೇಳುತ್ತಾರೆ. ಈಗ ಕೃಷ್ಣಾ ನೀರು ಕೃಷ್ಣಾರ್ಪಣವಾಗುತ್ತಿದೆ. 478 ಟಿ. ಎಂ. ಸಿ. ಯನ್ನು 600 ಟಿ. ಎಂ. ಸಿ. ಯಲ್ಲಿ ವೆಚ್ಚಮಾಡಿದರೆ ಇನ್ನು 122 ಟಿ. ಎಂ. ಸಿ ಮುಂದೆ ಉಳಿಯುವುದು. ಆದರೆ 36 ಯೋಜನೆಗಳಲ್ಲಿ ಅಪ್ಪರ್ ಕೃಷ್ಣಾ ಯೋಜನೆ ಮೊದಲನೆಯದಾಗಿ ಬಂದಿದೆ. ಆದರೂ ಅದರ first stage ಆಗುತ್ತದೋ ಇಲ್ಲವೋ ಎಂದು ನನಗೆ ಸಂಶಯವಿದೆ. ಈಗಿನ 36 ಯೋಜನೆಗಳಲ್ಲಿ ಒಂದು ಯೋಜನೆಯೂ ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಆದ್ದರಿಂದ ಸರ್ಕಾರದವರು ಬಹಳ ಧೈರ್ಯದಿಂದ ಕೆಲಸ ಮಾಡಬೇಕಾಗಿದೆ. ಈ ಬಗ್ಗೆ ನೆಗೋಷಿಯೇಷನ್ಸ್ ಆಗಿ ಎರಡು ವರ್ಷಗಳಾದರೂ ಇನ್ನು ಅರ್ಜಿಗಳು ಪೆಂಡಿಂಗ್ ಆಗಿಯೇ ಇದ್ದು ಕೊಂಡು ನೆಗೋಷಿಯೇಷನ್‌ನಲ್ಲೇ ಇದು ಒದ್ದಾಡುತ್ತಿದೆ. ಆದರೆ ನೆಗೋಷಿಯೇಷನ್ಸ್ ಮಾಡಿರುವುದರಲ್ಲಾದರು ನಮಗೇನಾದರೂ ಅಡಿಷನಲ್ ಆಗಿ ನೀರು ಸಿಗುತ್ತದೆಯೇ ಎಂದು ಲೆಖ್ಖ ಹಾಕಿದರೆ ಅದೂ ಕೂಡ ಸಿಕ್ಕುವುದಿಲ್ಲ ಗುಲ್ಹಾಟಿ ಕಮಿಷನ್ ವರದಿ ಪ್ರಕಾರ ಪುಟ 284 ರಲ್ಲಿ ನಮಗೆ ಅಂದಾಜು 2,270 ಟಿ. ಎಂ. ಸಿ. ವಾಟರಷ್ಟು ಸಿಗಬಹುದೆಂದು ಲೆಖ್ಖ ಹಾಕಿ ಹೇಳಿದ್ದಾರೆ. ಅದರಲ್ಲಿ ಗೋದಾವರಿ ಮತ್ತು ಕೃಷ್ಣಾ ನದಿಗಳಿಂದ ಸುಮಾರು ಶೇ. 10 ರಷ್ಟನ್ನು ಎವ್ಯಾಪೊರೇಷನ್‌ಗೋಸ್ಕರ ತೋರಿಸಿದ್ದಾರೆ. 1,996 ಟಿ. ಎಂ. ಸಿ. ಒಟ್ಟು ನೀರಿದೆ. ಇದರಲ್ಲಿ 1,800 ಟಿ. ಎಂ. ಸಿ. ಹೋದ ನಂತರ ಇನ್ನುಳಿಯುವುದು ಕೇವಲ 196 ಟಿ. ಎಂ. ಸಿ. ಇದನ್ನು ಮೂರಕ್ಕೆ ಅಂದರೆ ಮೈಸೂರು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಗೆ ಹಂಚಬೇಕು. ನಮ್ಮ rightful share ಗೋಸ್ಕರ ಯಾವ ರೀತಿ ಪ್ರಯತ್ನ ನಡೆದಿದೆಯೋ ನನಗೆ ಅರ್ಥವಾಗುವುದಿಲ್ಲ. ಮುಖ್ಯ ಮಂತ್ರಿಗಳು ಒಮ್ಮೆ ಒಂದು ಮಾತನ್ನು ಹೇಳಿದರು. I will not rest until I get 1,000 T.M.C.F.T. of water ಎಂದು. ಅಲ್ಲಿಂದ ಮುಂದೆ ಅವರು ಆಂಧ್ರಕ್ಕೆ ಹೋದಾಗ ಅವರು ಹೇಳಿದರು: ಮೂರು ಪ್ರಾಂತಗಳ ಮುಖ್ಯಮಂತ್ರಿಗಳು ಒಟ್ಟಿಗೆ ಕೂಡಿದರೆ ಏನಾದರೂ ಒಂದು ನಿರ್ಣಯಕ್ಕೆ ಬರಬಹುದೆಂದು. ಇನ್ನು ನಮ್ಮಲ್ಲಿ ನೀರು ಎಷ್ಟು ಇದೆ ಎಂಬುದನ್ನು ಲೆಕ್ಕ ಹಾಕಬೇಕು. ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟರೆ ಸಾಕು, ಫೈನಾನ್ಸಿಯಲ್ ಎಯ್ಡ್ ಬರಲಿ ಬಾರದೆ ಇರಲಿ ನಮ್ಮ ಪ್ರಾಜೆಕ್ಟನ್ನು ನಾವು ತಯಾರು ಮಾಡುತ್ತೇವೆಂದು ಅವರು ಹೇಳಿದರು. ಆದರೆ ಆ ಅಪ್ಲಿಕೇಷನ್ ಪೆಂಡಿಂಗ್‌ನಲ್ಲಿ ಇದೆ ಎಂದು ಹೇಳಿದರು. ಅವರು ಒಮ್ಮೆ ಒಂದು ಮಾತನ್ನು ಹೇಳುತ್ತಾರೆ: ಒಮ್ಮೆ ಇನ್ನೊಂದು ಮಾತನ್ನು ಹೇಳುತ್ತಾರೆ. ಆ ಸಂಬಂಧದಲ್ಲಿ ಯಾವುದೂ ಕೆಲಸ ಆಗಿಲ್ಲ. ನೆಗೋಷಿಯೇಷನ್ ಕೂಡ ಆಗಿಲ್ಲ. ಆ ವಾಟರ್ ಡಿಸ್‌ಪ್ಯೂಟನ್ನು ಟ್ರಿಬ್ಯುನಲ್ಲಿಗೆ ಹಾಕುವುದನ್ನ ಒತ್ತಾಯ ಮಾಡುವುದು ಕೂಡ

ಆಗಿಲ್ಲ. ಅದರ ಬಗ್ಗೆ ನೆಗೋಷಿಯೇಷನ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ನಾನು ಸರ್ಕಾರದವರ ಗಮನಕ್ಕೆ ತರುವ ಒಂದು ಮಾತು ಏನೆಂದರೆ ಮೊನ್ನೆ ಇರಿಗೇಷನ್ ಪವರ್ ಮಿನಿಷ್ಟ್ರಿಯವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ ಅದರಲ್ಲಿ Attempts are being made for harmonious agreement between the parties ಎಂದು ಹೇಳಿಯ್ದಾರೆ. ಆಮೇಲೆ ಅದರಲ್ಲಿಯೇ

> "It has been the intention of the Central Government that it should lead to practical development of the region without stopping any project, nor at the same time injuring the interests of any other State."

ಎಂದು ಹೇಳಿದ್ದಾರೆ. ಆಂಧ್ರದಲ್ಲಿ ಈಗ ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲಂ ಪ್ರಾಜೆಕ್ಟುಗಳ ಕೆಲಸ ಏನು ನಡೆಯುತ್ತಿದೆ ಅದನ್ನು ನಿಲ್ಲಿಸುವುದಿಲ್ಲ, ನಮ್ಮ ಇಂಟರೆಸ್ಟಿಗೆ ಅವು ಧಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲಂ ಈ ಎಂಡು ಪ್ರಾಜೆಕ್ಟುಗಳು ಆಗಬೇಕು, ಮತ್ತು ನಮಗೂ ಅನ್ಯಾಯವಾಗಬಾರದು ಆ ರೀತಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇದರಲ್ಲಿ ಎರಡೂ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಒಂದು ವೇಳೆ ನಮ್ಮ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಸರಿಯಾದ ಪ್ರಯತ್ನ ಮಾಡದೆ ತಪ್ಪಿದ್ದರೆ ಕರ್ಣಾಟಕಕ್ಕೆ ಪೂರ್ಣವಾಗಿ ಅನ್ಯಾಯವಾಗುತ್ತದೆ ಎಂದು ನಾನು ಹೇಳುತ್ತೇನೆ. ಮೆಮೋರಾಂಡಂನಲ್ಲಿ 1990ನೇ ಇಸವಿಯ ವೇಳೆಗೆ ನಮ್ಮ ದೇಶದ ಜನಸಂಖ್ಯೆ 5 ಕೋಟಿ ಯಾಗುತ್ತದೆ. ಮತ್ತು ಆ ಯೋಜನೆಯ ಕೆಳಗಡೆ ಒಂದು ಕೋಟಿ 28 ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತದೆ ಎಂದು ಹೇಳುತ್ತಾರೆ. ಈಗ ಸಾಧಾರಣವಾಗಿ ಕೃಷ್ಣಾ ಯೋಜನೆಯ ಕೆಳಗಡೆ 10–12 ಲಕ್ಷ ಎಕರೆ ನೀರಾವರಿ ಆಗಬಹುದು. ಅದರ ಕೆಳಗಡೆ 1990ನೇ ಇಸವಿಯ ವೇಳೆಗೆ ಇನ್ನು ಒಂದು ಕೋಟಿ 16 ಲಕ್ಷ ಎಕರೆ ನೀರಾವರಿಯಾಗಬೇಕಾದರೆ ನೀರು ಎಲ್ಲಿದೆ? ಸರ್ಕಾರದವರು ಮೆಮೋರಾಂಡಂನಲ್ಲಿ ಬಹಳ ದೊಡ್ಡ ಮಾತನ್ನು ಹೇಳಿದ್ದಾರೆ. ಆದರೆ ಕಾರ್ಯಗತ ಮಾಡಬೇಕಾದರೆ ಏನೂ ಇಲ್ಲ, ಬರೀ ಸೊನ್ನೆ. ಮುಖ್ಯ ಮಂತ್ರಿಗಳು ಕರ್ನಾಟಕವನ್ನು ಮಾಡುವುದರಲ್ಲಿ ಭಾಗವನ್ನು ತೆಗೆದುಕೊಂಡಿದ್ದಾರೆ, ಮುಂದಾಳುಗಳಾಗಿದ್ದಾರೆ. ಅವರು ಈ ಕಾರ್ಯವನ್ನು ಮಾಡುವುದಕ್ಕೆ ಮನಸ್ಸು ಮಾಡದೆ ಹೋದರೆ ಕರ್ನಾಟಕಕ್ಕೆ ಅಧೋಗತಿ ಉಂಟಾದೀತು ಎಂದು ನನಗನ್ನಿಸುತ್ತದೆ. "ನೆಚ್ಚಿದ ಎಮ್ಮೆ ಕೋಣನನ್ನು ಹಾಕಿತು" ಎನ್ನುವ ಹಾಗೆ ಆಗ ಬಾರದು. ಆದ್ದರಿಂದ ಆ ಕಡೆ ಸರ್ಕಾರದವರು ಮನಸ್ಸು ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಆಲಮಟ್ಟಿ ಮತ್ತು ನಾರಾಯಣಪುರದ ಅಣೆಕಟ್ಟಿನ ವಿಷಯದಲ್ಲಿ ಸ್ವಲ್ಪ ಜಗಳ ಬಂದಿದೆ. ಗುಲ್ಬರ್ಗಾ ಡಿಸ್ಟ್ರಿಕ್ಟಿನವರು ನಾರಾಯಣಪುರದ ಅಣೆಕಟ್ಟನ್ನು ಮೊದಲು ತೆಗೆದುಕೊಳ್ಳಬೇಕೆಂತಲೂ, ಬಿಜಾಪುರ ಡಿಸ್ಟ್ರಿಕ್ಟಿನವರು ಆಲಮಟ್ಟಿ ಅಣೆಕಟ್ಟನ್ನು ಮೊದಲು ತೆಗೆದುಕೊಳ್ಳಬೇಕೆಂತಲೂ ಆಯಾ ಪ್ರದೇಶದ ಜನಗಳಲ್ಲಿ ಯಾದವೀ ಕಲಹವನ್ನು ಮಾಡುವುದು ಸರಿಯಲ್ಲ. 120 ಟಿ. ಎಂ. ಸಿ. ನೀರಿನಲ್ಲಿ ಯಾವುದು ಮಾಡುತ್ತಾರೆ. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುವ ಕಾಲಕ್ಕೆ ನೀರು ಎಲ್ಲಿದೆ ಎಂಬುದನ್ನು ವಿಚಾರ ಮಾಡಬೇಕು. ಮೆಮೋರಾಂಡಂನಲ್ಲಿ ನಮಗೆ 764 ಟಿ. ಎಂ. ಸಿ. ನೀರು ಬೇಕಾಗಿದೆ ಎಂದು ಹೇಳಿದ್ದಾರೆ. ಅಷ್ಟೊಂದು ನೀರು ಎಲ್ಲಿ ಉಳಿದಿದೆ? ಸುಮ್ಮನೆ ನಮ್ಮ ಜನತೆಯ ಕಣ್ಣಿನಲ್ಲಿ ಮಣ್ಣು ಎರಚಿದರೆ ಏನೂ ಪ್ರಯೋಜನವಾಗುವುದಿಲ್ಲ. ಈ ದೃಷ್ಟಿಯಿಂದ ಇವೊತ್ತಿನ ದಿವಸ ನಾನು ಹೇಳುವುದು ಏನೆಂದರೆ ನಮ್ಮ ಸರ್ಕಾರದವರು ಕೃಷ್ಣಾ ನದಿಯಲ್ಲಿ ನ್ಯಾಯವಾದ ನೀರಿನ ಪಾಲನ್ನು ಪಡೆಯಲು ಲಕ್ಷ್ಯವನ್ನು ಕೊಡಬೇಕು. ಒಂದೆರಡು ವರ್ಷಗಳ ಕಾಲ ಬರೀ ನೆಗೋಸಿಯೇಷನ್‌ನಲ್ಲಿಯೇ ಕಾಲವನ್ನು ಕಳೆಯುತ್ತಾ ಹೋದರೆ ಏನೂ ಪ್ರಯೋಜನ ವಾಗುವುದಿಲ್ಲ. ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲಂ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡುವುದು ಮತ್ತು ಸಂಬಂಧ ಪಟ್ಟ ರಾಜ್ಯಗಳಿಗೆ ಧಕ್ಕೆ ಯಾಗದಂತೆ ನೋಡಿಕೊಳ್ಳುವುದು ಹೇಗೆ ಸಾಧ್ಯ ಎಂದು ನಾನು ಕೇಳಬಯಸುತ್ತೇನೆ. ನಾಗಾರ್ಜುನ ಸಾಗರದ ಪ್ರಾಜೆಕ್ಟಿಗೆ ಮೊದಲನೇ ಸ್ಟೇಜಿಗೆ 504 ಟಿ. ಎಂ. ಸಿ. ನೀರು ಬೇಕಾಗುತ್ತದೆ ಸೆಕೆಂಡ್ ಸ್ಟೇಜಿಗೆ ಸ್ಕೋಪ್ ಕಡಿಮೆ ಇದೆ. ಶ್ರೀ ಶೈಲಂ ಪ್ರಾಜೆಕ್ಟಿಗೂ ಸ್ಕೋಪ್ ಕಡಿಮೆ ಇದೆ. ಇದನ್ನು ಯಾರೂ ವಿಚಾರ ಮಾಡುವುದಿಲ್ಲ. ಮೊದಲು ಕೃಷ್ಣಾನದಿಯಲ್ಲಿ ನಮ್ಮ ಪಾಲಿನ ನೀರಿನ ತೆಗೆದುಕೊಳ್ಳಲು ಪ್ರಯತ್ನ ಮಾಡುವುದು ನಮ್ಮ ಕರ್ತವ್ಯ. ನಾವು ನಮ್ಮ ಭಾಗದ ನೀರನ್ನು ಪಡೆಯದೇ ಹೋದರೆ ನಾರಾಯಣಪುರ, ಆಲಮಟ್ಟಿ ಯಾವ ಅಣೆಕಟ್ಟನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀರು ಸಾಲದೆ ಬರುತ್ತದೆ. ಆಗ ನಾವು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ಭೀಮಾ ಯೋಜನೆಯಲ್ಲಿ ಮತ್ತು ಅಪ್ಪರ್ ತುಂಗಭದ್ರಾ ಯೋಜನೆಯಲ್ಲಿ ನೀರಿನ ಹಂಚಿಕೆ ಸರಿಯಾಗಿ ಆಗಿಲ್ಲ. ಇದಕ್ಕೋಸ್ಕರ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದು ಏನೆಂದರೆ

(ಶ್ರೀ ಅಣ್ಣಾರಾವ್ ಗಣಮುಖಿ)

ಸರ್ಕಾರದವರು ವಾಟರ್ ಡಿಸ್‌ಪ್ಯೂಟಿಗೆ ಹೋಗಬೇಕು. ಇಲ್ಲದಿದ್ದರೆ ನಮಗೆ ನ್ಯಾಯವಾಗಿ ನೀರಿನ ಪಾಲು ಸಿಕ್ಕುವುದಿಲ್ಲ. ಸುಮ್ಮನೆ ನೆಗೋಷಿಯೇಷನ್ ಮಾಡುತ್ತೇವೆ, ನೆಗೋಷಿಯೇಷಯನ್ ಮಾಡುತ್ತೇವೆ ಎಂದು ಹೇಳುತ್ತಾರೆಯೇ ವಿನಾ ನೆಗೋಷಿಯೇಷನ್ ಮಾಡಿದುದರ ಬಗ್ಗೆ ನಮ್ಮ ಮುಂದೆ ಯಾವ ಒಂದು ಸ್ಟೇಟ್‌ಮೆಂಟನ್ನೂ ಸರ್ಕಾರದವರು ಇಟ್ಟಿಲ್ಲ. ಆಲಮಟ್ಟಿ ಮತ್ತು ನಾರಾಯಣಪುರ ಎರಡು ಅಣೆಕಟ್ಟುಗಳನ್ನು ಕಟ್ಟಬೇಕಾದರೆ 226 ಟಿ. ಎಂ. ಸಿ. ನೀರು ಬೇಕಾಗುತ್ತದೆ. ಅಷ್ಟು ನೀರು ಎಲ್ಲಿದೆ? ಮೆಮೊರಾಂಡಂನಲ್ಲಿ ಹೇಳಿರುವ ಪ್ರಕಾರ ಏನು ಮಾಡುತ್ತೇವೆಂದು ಹೇಳಿದ್ದಾರೆಯೋ ಅದು ಸುಮ್ಮನೆ ಜನತೆಯ ಕಣ್ಣಿಗೆ ಮಣ್ಣು ಹಾಕಿ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಆ ರೀತಿ ಮಾಡುವುದಕ್ಕೆ ನೀರು ಎಲ್ಲಿದೆ ಎಷ್ಟು ಇದೆ ಎಂಬುದನ್ನು ನಾನು ಸರ್ಕಾರದವರನ್ನು ಕೇಳುತ್ತೇನೆ. ಬಿಜಾಪುರದ ಸ್ನೇಹಿತರಿಗೆ ನಾನು ಒಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಬಿಜಾಪುರ ಬರಗಾಲ ಪ್ರದೇಶ ಎಂದು ಹೇಳುತ್ತಾರೆ. ಆದರೆ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳು ಬರಗಾಲದಲ್ಲಿ ಕಡಿಮೆ ಇವೆ ಎಂದು ಅವರು ತಿಳಿದುಕೊಳ್ಳಬಾರದು. ಹಾಗೆ ತಿಳಿದುಕೊಂಡಿಲ್ಲ ಎಂದು ರಿಪೋರ್ಟಿನಲ್ಲಿಯೂ ಹೇಳಿದ್ದಾರೆ. ಮೆಮೋರಾಂಡಂನಲ್ಲಿ However the districts of Gulbarga and Raichur sandwiched between Bijapur and Bellary is as bad as the latter. So also Gulbarga ಎಂದು ಹೇಳಿದ್ದಾರೆ. ಅದಕ್ಕಾಗಿ ಅವರೂ ನಾವೂ ಕೂಡಿ ನಮ್ಮ ರೈಟ್‌ಫುಲ್ ವಾಟರ್ ಷೇರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

10-30 A.M.

ಅಪ್ಪರ್ ತುಂಗಭದ್ರ, ಮಲಪ್ರಭ, ಘಟಪ್ರಭ ಮೂರನೆಯ ಸ್ಟೇಜ್ ಇವೆಲ್ಲ ಆಗಬೇಕು. ಇವುಗಳನ್ನು ಮುಂದಕ್ಕೆ ಹಾಕುವ ಪ್ರಶ್ನೆ ಇಲ್ಲ. ನೀರಿನ ಎಷ್ಟು ಭಾಗ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಆದುದರಿಂದ ಈ ದಿವಸ ನೆಗೋಷಿಯೇಷನ್‌ನಲ್ಲಿ ಕಾಲಹರಣ ಮಾಡಬಾರದು. ನಾಗಾರ್ಜುನ ಸಾಗರ ಕೆಲಸ ನಡೆದಿದೆ.

ಶ್ರೀ ಆಲೂರು ಹನುಮಂತಪ್ಪ.—ನೆಗೋಷಿಯೇಷನ್‌ನಲ್ಲಿ ಕಾಲ ಕಳೆಯುತ್ತಿಲ್ಲ. ನಮಗೆ ಸಾಕಷ್ಟು ನೀರು ಸಿಕ್ಕುತ್ತದೆ. ಈಗಾಗಲೇ ಟೆಕ್ನಿಕಲ್ ಕ್ಲಿಯರೆನ್ಸ್ ಬರುತ್ತಿದೆ, ಎರಡಕ್ಕೂ ಒಂದೇ ಸಾರಿ foundation ಹಾಕಬೇಕೆಂದು ತೀರ್ಮಾನವಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನೀರು ಇದ್ದರೆ ನಾನು ಯಾವುದನ್ನೂ ಬೇಡವೆನ್ನುವುದಿಲ್ಲ. ನೀವು ಕೊಟ್ಟಂಥ memorandum, Gulhati Commission ಕೊಟ್ಟಿರುವ ರಿಪೋರ್ಟ್ ಇವನ್ನು ಓದಿ ನಾನು ಹೇಳುತ್ತಿದ್ದೇನೆ. ಹಾಗೆಯೇ ಕಣ್ಣುಮುಚ್ಚಿ ಹೇಳುತ್ತಿಲ್ಲ. ದಯಮಾಡಿ ದುರುದ್ದೇಶದಿಂದ ಹೇಳುತ್ತೇನೆಂದು ತಿಳಿಯಬಾರದು. ಹಾಗೆ ಹೇಳಲು ಕಾರಣ ಏನೂ ಇಲ್ಲ. ನಾನು ರಿಕಾರ್ಡ್ ನೋಡಿಯೇ ಹೇಳುತ್ತಿದ್ದೇನೆ. ಈಗಿನ generationಗೇ ಅಲ್ಲ, ಮುಂದೆಯೂ ಅನುಕೂಲವಾಗುವಂತೆ ಮಾಡಬೇಕು. 1990ಕ್ಕೆ ನಮ್ಮ ಜನಸಂಖ್ಯೆ 475 ಲಕ್ಷವಾಗುತ್ತದೆ. Additional acreage ನೀರಾವರಿಗೆ ಬರಬಹುದಾದ್ದು ಎಷ್ಟು ಎಂಬುದನ್ನು ಲೆಕ್ಕ ಹಾಕಿದರೆ ಬಹಳ ಹೆಚ್ಚಾಗಿ ಆಗುತ್ತದೆ. ಆಗ total area to be irrigated 12 million acres. 1980ಕ್ಕೆ ನಮಗೆ ಸಾಕಾದಷ್ಟು ನೀರು ಇಲ್ಲದೆ ಅನ್ನ ತಿನ್ನಲೂ ಸಿಕ್ಕುವುದಿಲ್ಲ. ಇವತ್ತಿನ ದಿವಸ irrigated area ಎಷ್ಟು ಹೆಚ್ಚಾದರೆ ಅದರಿಂದ ಲಾಭವಾಗುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಆ ಕಾಲಕ್ಕೆ ಗಂಗಾನದಿ ನೀರನ್ನು ಈ ಕಡೆಗೆ ತಿರುಗಿಸಿ ತರಲು ಸಾಧ್ಯವಾಗಬಹುದು.

SRI ANNA RAO GANAMUKHI:—

"The entire possibility of water potential needs to be developed before 1990 and this can be done only if the allocation of Krishna waters is not denied."

SRI L. B. BIRJE.—(Marathi)

ಶ್ರೀ ಅಣ್ಣಾರಾವ್ ಗಣಮುಖಿ (ಮರಾಠಿ).—ನಾನು ಈಗ ಸರ್ಕಾರವನ್ನು ಬೇಡಿಕೊಳ್ಳುವುದೇನೆಂದರೆ ಈ ದಿಸೆಯಲ್ಲಿ ಯೋಚನೆ ಮಾಡಿ ಹೆಜ್ಜೆ ಇಡಬೇಕು. ಆಲಮಟ್ಟಿ ಪ್ರಾಜೆಕ್ಟ್‌ಗೆ ಹೆಚ್ಚಾಗಿ ಖರ್ಚು ಮಾಡತಕ್ಕ ಹೊಣೆ ಕೂಡ ಸರ್ಕಾರದ ಮೇಲಿದೆ. ಆಲಮಟ್ಟಿ ಅಣೆಕಟ್ಟು ಕಟ್ಟಲು ಮೊದಲ

ನಿಂದಲೂ ಒತ್ತಾಯವಿದ್ದಾಗ CPM bridge ಕಟ್ಟುವುದನ್ನು ಮುಂದಕ್ಕೆ ಹಾಕಿ, ಸಬ್‌ಮರ್ಷನ್ ಬರುತ್ತದೆಂದು ಹೇಳಿದ್ದೆವು. ಹಿಂದೆ ಅಲ್ಲಿ ಸರ್ವೆ ಮಾಡುತ್ತಿದ್ದರು. ಆದರೆ ಮುಂದೆ ಏನಾಯಿತು ಎಂದರೆ ಯಾರಿಗೂ ಕೇಳದೆ ಗರ್ಡರ್ ಹಾಕಿ ಕೆಲಸ ಪೂರ್ತಿ ಮಾಡಿದರು, ಈ ದಿವಸ ಅದನ್ನು ಕಿತ್ತು ಹಾಕಬೇಕಾಗಿದೆ. ಗರ್ಡರ್ ಉಪಯೋಗಕ್ಕೆ ಬರುತ್ತದೆ. Labour charges, ಕಟ್ಟತಕ್ಕ ಚಾರ್ಜ್, ಇಂಥವೆಲ್ಲ ಕೂಡಿ ಒಂದು ಕೋಟಿ ರೂಪಾಯಿ ತನಕ ಖರ್ಚು ಸರ್ಕಾರದ ಮೇಲೆ ಬರುತ್ತದೆಂದು ಹೇಳುತ್ತೇನೆ. ಈ ಎಲ್ಲ ವಿಚಾರಗಳನ್ನು ನೋಡಿದರೆ ಸರ್ಕಾರದವರು ನೆಗೋಷಿಯೇಷನ್ ಎನ್ನತಕ್ಕ ಪಂಥವನ್ನು ಹೇಳಬಾರದು. ಆಂಧ್ರದ ಸಂಗಡ ನಾವು ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ. ನಾಗಾರ್ಜುನ ಸಾಗರ, ಶ್ರೀ ಶೈಲ ಇವುಗಳಿಂದ ಅನ್ಯಾಯ ಮಾಡುತ್ತಿದ್ದಾರೆ. ನಾಗಾರ್ಜುನ ಸಾಗರ first stage ಏನಿದೆ ಅದಾದರೂ ಚಿಂತೆ ಇಲ್ಲ. Second stageನಲ್ಲಿ technical clearance ಬರಬಾರದೆ ಹಾಗೆಯೇ ಮುಂದೆ ಹೋಗುತ್ತಿದ್ದಾರೆ. ಮೊದಲನೆಯ ಸ್ಟೇಜಿಗೂ ಇದೇ ರೀತಿ ಇದ್ದು ಅನಂತರ ದೊರಕಿತು. ಈಗಲೂ ಸಹ ಮುಂದೆ clearance ಸಿಕ್ಕುತ್ತದೆ ಎಂದು ಅವರಿಗೆ ಗೊತ್ತಿದೆ. Mr. Rao ಏನಿದ್ದಾರೆ, ಮೈಸೂರಿಗೆ ನೀರು ಹಂಚಿಕೆಯಲ್ಲಿ ಹಾನಿ ಮಾಡಿದವರು ಅವರೇ.

Mr. DEPUTY SPEAKER.—He should avoid mentioning names.

ಶ್ರೀ ಅಣ್ಣಾರಾವ್ ಗಣಮುಖಿ.—ಅವರು ಇವತ್ತಿನ ದಿವಸ ನೀರು ಹಂಚಿಕೆಯನ್ನು ಸರಿಯಾಗಿ ಮಾಡುತ್ತಾರೆ. ಅವರ ಕಡೆಯಿಂದ ನ್ಯಾಯ ಸಿಕ್ಕುತ್ತದೆಂದರೆ ಯಾರಿಗೂ ಕೂಡ ಸ್ವಲ್ಪವಾದರೂ ಸಮಾಧಾನವಿರಲಾರದು.

ಶ್ರೀ ಆಲೂರು ಹನುಮಂತಪ್ಪ.—ಅವರಿಂದ ನ್ಯಾಯ ದೊರೆಯುತ್ತದೆಂದು ನಮಗೆ ಸಂಪೂರ್ಣ ವಿಶ್ವಾಸವಿದೆ. ಆ ವಿಷಯದಲ್ಲಿ ಅನುಮಾನವಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಸಂಪೂರ್ಣವಾದ ವಿಶ್ವಾಸವಿದ್ದರೆ ಅದಕ್ಕೆ ಪಾತ್ರರಾಗಿ ಅದರ ಜವಾಬ್ದಾರಿ ನಿಮ್ಮ ಮೇಲೆಯೇ ಬರುತ್ತದೆ. ನಮಗೆ ಮಾತ್ರ ನ್ಯಾಯ ಸಿಕ್ಕುವ ವಿಚಾರದಲ್ಲಿ ಸಂಶಯವಿದೆ.

ನಾಗಾರ್ಜುನ ಸಾಗರ second stage ಕಟ್ಟಲು ಮತ್ತೊಂದು ಕಾರಣ ಗೋದಾವರಿ diversion ಆಗುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅದನ್ನು ಹೇಳಬಹುದು. ಹಾಗೂ ಹೀಗೂ ಮಾತನಾಡುವುದರಲ್ಲಿಯೇ ಕಾಲ ಕಳೆಯುತ್ತೀರಿ ಎಂದಾಗುತ್ತದೆ. ಈ ಸಂದರ್ಭದಲ್ಲಿ ಒಂದು ಕಥೆ ಹೇಳುತ್ತೇನೆ. ಒಬ್ಬ ವ್ಯಾಪಾರಸ್ಥ (businessman) ಇದ್ದ. ಅವನ ಅತ್ತೆ ತೀರಿಕೊಂಡಳು. ಅವನು ಬಹಳ busy ಇದ್ದ. ಆವನಿಗೆ ತಾರು ಬಂತು ನಿಮ್ಮ ಅತ್ತೆ ಸತ್ತು ಹೋದರು. ಅವರ ಹೆಣವನ್ನು ಸುಡಬೇಕೋ, ಹೂಳಬೇಕೋ ಅಥವಾ ಔಷಧಿ ಹಾಕಿ ಹಾಗೆಯೇ ಇಡಬೇಕೋ, ಈ ಮೂರರಲ್ಲಿ ಯಾವುದು ಮಾಡಬೇಕು ಎಂದು ತಾರು ಬಂತು. ಅದಕ್ಕೆ ಅವನು ಉತ್ತರವಾಗಿ ಮೂರೂ ಮಾಡಿ ಎಂದು ತಿಳಿಸಿದನಂತೆ. ನಮ್ಮ ಸರ್ಕಾರದವರು ಮಾಡುತ್ತಿರುವುದು ಇದೇ ರೀತಿ ಇದೆ. Negotiations ಮಾಡುತ್ತಿದ್ದೇವೆ; technical clearance ಬರಲಿದೆ, foundation stone ಹಾಕಿ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಖರೆ ಎನ್ನುವುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ನಮಗೆ ಬರಬೇಕಾದ ನೀರಿನ ಪಾಲು ಬರಬೇಕೆಂದು ಹೇಳುತ್ತೇನೆ.

ಶರಾವತಿಯ ಬಗ್ಗೆ ಒಂದು ಮಾತು. ಸರ್ಕಾರದ ಕಡೆಯಿಂದ white paper ಹೊರಟ ನಂತರ 128 ಲಕ್ಷ ರೂಪಾಯಿ ಸರ್ಕಾರಕ್ಕೆ ಪೋಲಾಗಿದೆ ಎಂದು ಕಾಣುತ್ತದೆ. ಇಂಥ ದೊಡ್ಡ ಕೆಲಸದಲ್ಲಿ 50-60 ಲಕ್ಷ ರೂಪಾಯಿ ಏನಾದರೂ ಆಗಿರಬಹುದು ಎಂದು ಮುಖ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇದರಿಂದ ನಮಗೆ 128 ಲಕ್ಷ ರೂಪಾಯಿ ಪೋಲಾಗಿದೆ ಎಂದು ಸಾಧಾರಣವಾಗಿ ಗೊತ್ತಾಗುತ್ತದೆ. ಇದರೊಳಗೆ ಅವರು ಏನು ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅವರ 'ಭರತ'ರು ಮುಖ್ಯ ಮಂತ್ರಿಗಳಾಗಿದ್ದರು. ಅವರ ಆಶೀರ್ವಾದದಿಂದ ಎಲ್ಲ ಕೆಲಸ ಮಾಡುತ್ತೇನೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರಿಂದ ಜನರಲ್ಲಿ ಸಂಶಯ ಉತ್ಪನ್ನವಾಗುತ್ತದೆ. ಇಂಥ ಸಂಶಯಕ್ಕೆ ಆಸ್ಪದ ಕೊಡದೆ ಇರಲು ಯಾರಾದರೂ ತಪ್ಪು ದಾರಿ ಹಿಡಿದು ದುರುದ್ದೇಶದಿಂದ ಹೇಳಿದರೆ ಅದನ್ನು ನಿವಾರಣೆ ಮಾಡಲು judicial enquiry ಮಾಡಿಸಲು ಯೋಚನೆ ಮಾಡಬೇಕೆಂದು ನಾನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ಈ ದಿವಸದ ಬೇಡಿಕೆಗಳ ಮೇಲೆ ಮಾತನಾಡುತ್ತ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡ ಬಯಸುತ್ತೇನೆ. ಮೊದಲು ಸಾಮಾನ್ಯಾಡಳಿತದ ವಿಚಾರದಲ್ಲಿ ಸರ್ಕಾರದ ಕೆಲವು ನ್ಯೂನತೆಗಳನ್ನು ಹೇಳುತ್ತ ಒಂದೆರಡು ಸಲಹೆಗಳನ್ನು ಕೊಡ ಬಯಸುತ್ತೇನೆ. ತಾಲ್ಲೂಕು ಮಟ್ಟದಲ್ಲಿರತಕ್ಕ ಆಫೀಸಿನಲ್ಲಿ ದಿನನಿತ್ಯ ರೈತನಿಗೆ,

(ಶ್ರೀ ಬಿ. ಬೈರಪ್ಪಾಜಿ)

ಸಾಮಾನ್ಯ ಜನತೆಗೆ ಬಹಳ ತೊಂದರೆಯಾಗುತ್ತಿದೆ. ತಾಲ್ಲೂಕಾಫೀಸಿನಲ್ಲಿ ಸುಮಾರು 20 ವರ್ಷಗಳ ಹಿಂದೆ ಇದ್ದ ಸಿಬ್ಬಂದಿಯನ್ನೇ, ಇವತ್ತೂ ಸಹ ಮುಂದುವರಿಸುತ್ತಿದ್ದಾರೆ. ಹಿಂದೆ ಎಷ್ಟು ಕಾಗದ ಪತ್ರಗಳು ಬರುತ್ತಿದ್ದುವು, ಈಗ ಎಷ್ಟು ಬರುತ್ತಿವೆ ಎಂದು ನೋಡಿಕೊಂಡು ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನು ಏಕೆ ಇನ್ನೂ ನೇಮಿಸಿಲ್ಲವೆಂದು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದರಿಂದ ಏನಾಗುತ್ತದೆಂದರೆ, ಇರತಕ್ಕ ಗುಮಾಸ್ತರಿಗೆ ಕೆಲಸ ಜಾಸ್ತಿಯಾಗಿ ತತ್ಪರಿಣಾಮವಾಗಿ ಜನರಿಗೆ ತೊಂದರೆಯಾಗುವುದಲ್ಲದೆ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಆದಕಾರಣ ಆದಷ್ಟು ಬೇಗ ಸಿಬ್ಬಂದಿಯನ್ನು ಹೆಚ್ಚು ಮಾಡಿ ಈಗ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕೆಂದು ಸೂಚಿಸುತ್ತೇನೆ.

ಒಬ್ಬ ಮನುಷ್ಯ ಸಬ್‌ರಿಜಿಸ್ಟ್ರಾರ್ ಆಗಿ ಕೆಲಸಕ್ಕೆ ಸೇರಿದರೆ ಅವನು ರಿಟೈರ್ ಆಗುವವರೆಗೂ ಸಬ್ ರಿಜಿಸ್ಟ್ರಾರ್ ಆಗಿಯೇ ಕೆಲಸ ಮಾಡುತ್ತ ರಿಟೈರ್ ಆಗಬೇಕಾಗಿದೆ. ಇಂಟರ್ ಮೀಡಿಯೆಟ್ ಪರೀಕ್ಷೆ ಪಾಸು ಮಾಡಿದ್ದರೆ ಸಬ್‌ರಿಜಿಸ್ಟ್ರಾರ್ ಆಗಿ ನೇಮಕ ಮಾಡಬಹುದೆಂದು ನಿಯಮಗಳಲ್ಲಿ ಅವಕಾಶವಿದೆ. ಅದರಂತೆ ಅರ್ಜಿಗಳನ್ನು ಕರೆಯುತ್ತಾರೆ. ಅದಕ್ಕೆ ನೌಕರಿಗಳು ಸಿಕ್ಕಲು ಕಷ್ಟವಾಗಿರುವುದರಿಂದ ಗ್ರ್ಯಾಜುಯೇಟುಗಳೂ ಡಬ್ಬಲ್ ಗ್ರ್ಯಾಜುಯೇಟುಗಳೂ ಅರ್ಜಿಗಳನ್ನು ಹಾಕುತ್ತಾರೆ. ಆಗ ಇಂಟರ್‌ಮೀಡಿಯೆಟ್ ಮಾಡಿರುವವರಿಗೆ ಆ ಕೆಲಸಗಳು ಸಿಕ್ಕುವುದಿಲ್ಲ, ಪದವೀಧರರನ್ನೇ ಚುನಾಯಿಸಿಕೊಳ್ಳುತ್ತಾರೆ. ಇಂಥವರು ಈ ಕೆಲಸಕ್ಕೆ ಸೇರಿದರೆ ಕೊನೆಯವರೆಗೂ ಸಬ್‌ರಿಜಿಸ್ಟ್ರಾರ್ ಆಗಿಯೇ ಉಳಿಯುವ ಪರಿಸ್ಥಿತಿ ಬರುತ್ತದೆ. ಇದರಿಂದ ಅವರಿಗೆ ನಿರುತ್ಸಾಹ ಬರುತ್ತದೆ. ತಾನು ಪದವೀಧರನಾಗಿದ್ದರೂ ತನಗೆ ಬಡ್ತಿ ಸಿಕ್ಕುವುದಿಲ್ಲ ತನ್ನ ಅರ್ಹತೆಗೆ ತಕ್ಕಹಾಗೆ ಎಂದು ಆಲಸ್ಯ ಮನೋಭಾವ ಬಂದು ಕರ್ತವ್ಯಲೋಪ ಮಾಡುತ್ತಾನೆ. ಆದಷ್ಟು ಕೆಲಸ ಆಗಲಿ, ನನ್ನ ಸಂಬಳಕ್ಕೆ ಮೂವತ್ತು ದಿವಸಗಳನ್ನು ಎಣಿಸುತ್ತೇನೆ ಎಂಬ ಮನಸ್ಸು ಹುಟ್ಟಿ ಜನರಿಗೆ ಕಿರುಕುಳ ಕೊಡುತ್ತ ತನ್ನ ವಿಷಯವನ್ನು ನೋಡಿಕೊಳ್ಳಲು ಪ್ರಾರಂಭಿಸುತ್ತಾನೆ. ಇದರಿಂದ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ. ಆದಕಾರಣ ಸರಕಾರ ತನ್ನ ನೀತಿಯನ್ನು ಬದಲಾಯಿಸಬೇಕು. ಇವರಿಗೆ ಬಡ್ತಿ ಕೊಡುವುದರಿಂದ ಇವರಲ್ಲಿ ಉತ್ಸಾಹವನ್ನು ಮೂಡಿಸಬೇಕು. ಒಬ್ಬ ಗ್ರ್ಯಾಜುಯೇಟ್ ಸಬ್‌ರಿಜಿಸ್ಟ್ರಾರ್ ಆಗಿ ಬಂದರೆ, ಅವನು ಬೇರೆ ಇಲಾಖೆಗೆ ಸೇರಿದ್ದರೆ ಏನು ಬಡ್ತಿ ಬರುತ್ತಿತ್ತೋ ಅದು ಅವನಿಗೆ ದೊರಕುವಂತೆ ಇಲ್ಲಿಯೂ ಏರ್ಪಾಡು ಮಾಡಿ ಅವನು ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಅವಕಾಶ ಮಾಡಬೇಕು.

ಅಸಿಸ್ಟೆಂಟ್ ಕಮಿಷನರು, ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಮತ್ತು ಡಿವಿಜನಲ್ ಕಮಿಷನರ ಆಫೀಸುಗಳು ಟಪಾಲ್ ಆಫೀಸುಗಳಹಾಗಿವೆ. ಮೇಲಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಕಾಗದಗಳನ್ನು ರವಾನೆ ಮಾಡುತ್ತಾರೆ. ತಾಲ್ಲೂಕು ಕಚೇರಿಯಿಂದ ಡೆಪ್ಯುಟಿ ಕಮಿಷನರ ಕಚೇರಿಗೆ, ಡೆಪ್ಯುಟಿ ಕಮಿಷನರ ಕಚೇರಿಯಿಂದ ತಾಲ್ಲೂಕು ಕಚೇರಿಗೆ ಕಾಗದ ಪತ್ರಗಳನ್ನು ರವಾನೆ ಮಾಡುವ ಕೆಲಸ ಅಸಿಸ್ಟೆಂಟ್ ಕಮಿಷನರ ಹುದ್ದೆಯದು. ಇದರಿಂದ ರೈತರಿಗೆ ಯಾವ ಸಹಾಯವೂ ಆಗುತ್ತಿಲ್ಲ. ಹೀಗೆಯೇ ಪೋಲೀಸು ಡೆಪ್ಯುಟಿ ಸೂಪರಿಂಟೆಂಡೆಂಟರ ಹುದ್ದೆ ಮತ್ತು ಕಚೇರಿ ಬರಿಯ ಖರ್ಚಿನ ಬಾಬು. ಇದರಿಂದ ದೇಶಕ್ಕೂ ಜನತೆಗೂ ಯಾವ ಅನುಕೂಲವೂ ಇಲ್ಲ. ಇಂತಹ ಇಲಾಖೆಗಳು ಮತ್ತು ಸಿಬ್ಬಂದಿಯಿಂದ ಕಾಸಿನ ಪ್ರಯೋಜನವೂ ಇಲ್ಲದಿದ್ದರೂ ಕೂಡ ಇವನ್ನು ಮುಂದುವರಿಸುವುದರ ಔಚಿತ್ಯವೇನಿದೆ ಎಂದು ಕೇಳುತ್ತೇನೆ. ಆದಷ್ಟು ಬೇಗ ಇಂತಹ ಹುದ್ದೆಗಳನ್ನೂ ಕಚೇರಿಗಳನ್ನೂ ಕಡಮೆ ಮಾಡಿ ದೇಶದ ಜನತೆಯ ಹಣವನ್ನು ಉಳಿಸಬೇಕೆಂದು ಹೇಳುತ್ತಿದ್ದೇನೆ.

ಸೀನಿಯಾರಿಟಿ ಪಟ್ಟಿಯ ವಿಷಯ ಕೆಲವು ಇಲಾಖೆಯ ದಿನ ಬೆಳಗಿನ ಗೋಳಾಗಿದೆ. ಉದಾಹರಣೆಗೆ ವ್ಯವಸಾಯ ಇಲಾಖೆಯಲ್ಲಿ ಸುಮಾರು ನೂರಕ್ಕೆ ಮೇಲ್ಪಟ್ಟು ಗೆಜೆಟೆಡ್ ಹುದ್ದೆಗಳು ಖಾಲಿ ಇವೆ, ಇದು ಎಲ್ಲರ ಬಾಯಲ್ಲಿಯೂ ಬರುತ್ತಿದೆ. ಅನೇಕ ವರ್ಷಗಳು ಕಳೆದರೂ ಇಂತಹ ದೇಶದ ಭವಿಷ್ಯವನ್ನು ನಿರ್ಮಾಣ ಮಾಡುವ ವ್ಯವಸಾಯ ಇಲಾಖೆಯಲ್ಲಿ ಇಂತಹ ಪರಿಸ್ಥಿತಿ ಇದೆಯೆಂದರೆ ಇದು ನಾಚಿಕೆಗೇಡಿನ ವಿಷಯ. ಅನೇಕ ವರ್ಷಗಳಾದರೂ ಕೂಡ ಅಲ್ಲಿನ ನೌಕರರ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡದೆ, ಅಲ್ಲಿ ಖಾಲಿ ಇರತಕ್ಕ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಹುದ್ದೆಗಳನ್ನು ಭರ್ತಿ ಮಾಡದೆ ಹಾಗೆಯೇ ಇದೆ. ದೇಶದ ಆಹಾರದ ಕೊರತೆಯನ್ನು ನೀಗಲು ಸಹಾಯಕವಾದ ಈ ಮುಖ್ಯ ಇಲಾಖೆಯಲ್ಲಿ ಇಂತಹ ಹುದ್ದೆಗಳನ್ನು ಭರ್ತಿ ಮಾಡದೇಯಿರುವ ಧೋರಣೆಯಾದರೂ ಏನೆಂದು ಸರಕಾರವನ್ನು ಕೇಳುತ್ತೇನೆ. ಇದರಲ್ಲಿ ಯಾವ ರಾಜಕೀಯ ತುಂಬಿದೆಯೋ ಗೊತ್ತಿಲ್ಲ. ನಿಮ್ಮಲ್ಲಿರುವ ರಾಜಕೀಯವನ್ನು ಇಂತಹ ಪವಿತ್ರ ಹಾಗೂ ಪ್ರಾಮುಖ್ಯವಾದ ಇಲಾಖೆಗೆ ತುಂಬುತ್ತ ವ್ಯವಸಾಯಕ್ಕೆ ಆಗುವ ಅನುಕೂಲವನ್ನು ಮತ್ತು ರೈತರಿಗೆ ಆಗುವ ಸಹಾಯವನ್ನು ನಿರಾಕರಿಸುತ್ತಿದ್ದೀರೆಂದು ಸರಕಾರದಲ್ಲಿ ಸೂಚಿಸುತ್ತಿದ್ದೇನೆ. ಈ ಇಲಾಖೆಯಲ್ಲಿರುವ ಸ್ಥಾನಗಳನ್ನು ಆದಷ್ಟು

ಬೇಗ ಭರ್ತಿ ಮಾಡಿ ಇಲ್ಲಿ ಕೆಲಸ ಸುಗಮವಾಗಿ, ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ಸರಕಾರಕ್ಕೆ ಹೇಳ ಬಯಸುತ್ತೇನೆ.

ನಾನಾಗಲೇ ಹೇಳಿದಂತೆ ಡಿವಿಜನಲ್ ಕಮೀಷನರ ಕಚೇರಿಯೂ ಕೂಡ ಒಂದು ಟಪ್ಪಾಲು ಆಫೀಸು. ದೇಶಕ್ಕೆ ಮತ್ತು ಜನರಿಗೆ ಆಗಬೇಕಾದ ಅನುಕೂಲಕ್ಕೆ ಪ್ರತಿಯಾಗಿ ಕಾಗದಪತ್ರಗಳ ವಿಲೇವಾರಿ ವರ್ಷಗಟ್ಟಲೆ ತಡವಾಗುತ್ತಿದೆ. ಇದನ್ನು ಆದಷ್ಟು ಶೀಘ್ರವಾಗಿ ಯೋಚನೆ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು, ಇಲ್ಲವಿದ್ದರೆ ಈ ಕಚೇರಿಗಳನ್ನು ಮುಚ್ಚಬೇಕು. ಈ ಎರಡರಲ್ಲಿ ಯಾವುದಾದರೊಂದು ಕಾರ್ಯವನ್ನು ಕೈಗೊಳ್ಳಲಿ ಎಂದು ಸರಕಾರಕ್ಕೆ ಸೂಚಿಸುತ್ತೇನೆ.

ಸಾಮಾನ್ಯ ಆಡಳಿತದ ಮೇಲೆ ಮಾತನಾಡಬೇಕಾದ ಇನ್ನೂ ಅನೇಕ ವಿಷಯಗಳಿವೆ. ಎ. ಜಿ. ರಾಮಚಂದ್ರರಾಯರ ಸಮಿತಿಯ ವರದಿಯಲ್ಲಿ ಅತಿ ಮುಖ್ಯವಾಗಿ ಮಂತ್ರಿಮಂಡಳದ ಸಂಖ್ಯೆಯನ್ನು ಕಡಿಮೆ ಮಾಡಿ ತನ್ಮೂಲಕ ಬೊಕ್ಕಸಕ್ಕೆ ಹಣ ಪೋಲಾಗುತ್ತಿರುವುದನ್ನು ತಪ್ಪಿಸಿ ಎಂದು ಹೇಳಿದ್ದಾರೆ. ಇದನ್ನು ಇನ್ನೂ ಕಾರ್ಯಗತಮಾಡದೇ ಇರುವುದು ಯಾವ ಲಕ್ಷಣ ಎಂದು ಕೇಳುತ್ತೇನೆ. ನಮ್ಮ ವಿರೋಧಪಕ್ಷದ ನಾಯಕರು ಹೇಳಿದಂತೆ ಮಂತ್ರಿಮಂಡಲದ ಮೇಲೆ ವರ್ಷಕ್ಕೆ 50 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಒಬ್ಬ ಮಂತ್ರಿಗೆ ಕನಿಷ್ಠ ಪಕ್ಷ ತಿಂಗಳಿಗೆ ಮೂರರಿಂದ ನಾಲ್ಕುಸಾವಿರ ರೂಪಾಯಿ ಖರ್ಚಾಗುತ್ತಿದೆ, ಇದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ, ಕೆಲಸಕ್ಕೆ ಎಷ್ಟು ಅವಶ್ಯಕವೋ, ಎಷ್ಟು ಮಂತ್ರಿಗಳು ಬೇಕಾಗುತ್ತಾರೋ, ಅಷ್ಟು ಜನರನ್ನು ಇಟ್ಟುಕೊಳ್ಳದೆ ಗೊಂದಲಕ್ಕೆ ಕಾರಣ ಮಾಡಿಕೊಂಡು ದೇಶದ ಜನತೆ ಕಷ್ಟಪಟ್ಟು ಬೆವರು ಸುರಿಸಿ ಸಂಪಾದನೆ ಮಾಡಿಕೊಟ್ಟ ತೆರಿಗೆ ಹಣವನ್ನು ಅನ್ಯಾಯವಾಗಿ ಖರ್ಚುಮಾಡುತ್ತಿದ್ದಾರೆ. ಇನ್ನಾದರೂ ಇಂತಹ ಅನ್ಯಾಯಕ್ಕೆ ಎಡೆಗೊಡದೆ ಆದಷ್ಟು ಬೇಗ ಕಡಮೆ ಮಾಡಬೇಕು. ಕಾಮರಾಜ ಸೂತ್ರ ಕೂಡ ಬಂದಿದೆ, ಮಂತ್ರಿಮಂಡಲದ ಸಂಖ್ಯೆಯನ್ನು ಕಟ್ಟುನಿಟ್ಟಾಗಿ ಕಡಮೆ ಮಾಡುವುದಕ್ಕೆ ಕಾರ್ಯೋನ್ಮುಖರಾಗಬೇಕೆಂದು ಸರಕಾರಕ್ಕೆ ಹೇಳುತ್ತಿದ್ದೇನೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಂತೂ ಹೇಳಲಸದಳವಾದ ಅನ್ಯಾಯಗಳು ನಡೆಯುತ್ತಿವೆ. ಅಲ್ಲಿ ಕಾಗದಪತ್ರಗಳು ವೇಗವಾಗಿ ಓಡಾಡುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲ, ಬಂದರೂ ನಾಮ್ಕಾವಸ್ತೆ ಕಲಿತು ಅಲ್ಲಿಗೇ ನಿಲ್ಲಿಸಿರುತ್ತಾರೆ. ಅವರಲ್ಲಿ ನೂರಾರು ಕೇಸುಗಳು ಸೇರಿಕೊಂಡು ಸಾಮಾನ್ಯ ರೈತನಿಗೆ ಆಗುತ್ತಿರುವ ಕಿರುಕುಳವನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇಂತಹ ದುರವಸ್ಥೆಯನ್ನು ಸರಕಾರ ತಪ್ಪಿಸಬೇಕು. ಯಾವುದಾದರೂ ಒಬ್ಬರು ಜಿಲ್ಲಾಧಿಕಾರಿಗಳ ಕಚೇರಿಯನ್ನು ಸಂಬಂಧಪಟ್ಟ ಮಂತ್ರಿಗಳೋ ಅಥವಾ ಮುಖ್ಯ ಮಂತ್ರಿಗಳೋ ನೋಡಿ ಅಲ್ಲಿ ಏನು ಅನ್ಯಾಯ ನಡೆಯುತ್ತಿದೆ ಎಂದು ನೋಡಬೇಕು. ಉದಾಹರಣೆಗೆ ಟೆನೆನ್ಸಿ ಕೇಸುಗಳನ್ನು ತೆಗೆದುಕೊಂಡರೆ, ಎಷ್ಟೋ ಕೇಸುಗಳು ದಾಖಲಾಗಿರುವುದು ಮೂರು ನಾಲ್ಕು ವರ್ಷಗಳಾದರೂ ಸತ್ಯ ಇತ್ಯರ್ಥವಾಗದೆ ಉಳಿದಿರುವ ಸಂದರ್ಭಗಳು ನೂರಾರಿವೆ. ಹದಿನೈದು ದಿವಸಗಳಿಗೆ, ಒಂದು ತಿಂಗಳಿಗೊಂದು ಹಿಯರಿಂಗ್ ಹಾಕಿಕೊಂಡು ಆ ರೈತರನ್ನು ವಿನಾ ಕಾರಣ ತಿರುಗಿಸುವುದು ಯಾವತ್ತೋ ಒಂದು ದಿವಸ ರೈತನಿಗೆ ಕಾಹಿಲೆ ಬಂದು ಬಾರದೇಹೋದರೆ ಎಕ್ಸ್‌ಪಾರ್ಟಿ ಡಿಕ್ರಿ ಕೊಡುವುದು, ಹೀಗಾಗಿ ಅನ್ಯಾಯ ನಡೆಯುತ್ತಿದೆ. ಸಾಮಾನ್ಯ ಜನತೆಗೆ ನ್ಯಾಯ ಸಿಕ್ಕಲು ಸುಲಭವಾದ ಮಾರ್ಗ ಈ ದಿವಸ ಕಾಣುತ್ತಿಲ್ಲ. ಇಂತಹ ಅನ್ಯಾಯ ಮತ್ತು ಅನಾವಶ್ಯಕವಾದ ತಡ ಇವುಗಳನ್ನು ತಪ್ಪಿಸುವುದು ಸರಕಾರದ ಕರ್ತವ್ಯ. ಇಲ್ಲಿ ಸುಮ್ಮನೆ ಯಾವುದೋ ಒಂದು ವಿಧವಾದ ಬಾಹ್ಯಾಡಂಬರವನ್ನಿಟ್ಟುಕೊಂಡು ಎಲ್ಲಿ ಮಂತ್ರಿಗಳು ಗಮನ ಕೊಡಬೇಕೋ ಅಲ್ಲಿ ಕೊಡುತ್ತಿಲ್ಲ. ಸಾಮಾನ್ಯ ಜನರಿಗೆ ಇದರಿಂದ ತೊಂದರೆಯಾಗುತ್ತಿದೆ. ಇದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಬಗೆಹರಿಸಬೇಕು ಮತ್ತು ಸರಿಯಾದ ಮಾರ್ಗದಲ್ಲಿ ಸಾಮಾನ್ಯ ಜನತೆಗೆ ನ್ಯಾಯ ದೊರಕುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೇಜರ್ ಪ್ರಾಜೆಕ್ಟ್ ಬಗ್ಗೆ ಹೇಳಲು ಬಯಸುತ್ತೇನೆ. ಹಾಸನ ಜಿಲ್ಲೆಯಲ್ಲಿ ಗೊರೂರು ಯೋಜನೆ ಪ್ರಾರಂಭ ಮಾಡಿದ್ದಾರೆಂದು ತಿಳಿದು ಬಂದಿದೆ. ಹಿಂದಕ್ಕೆ ಇದೇ ಸ್ಥಳದಲ್ಲಿ 14 ಕೋಟಿ ರೂಪಾಯಿ ಯೋಜನೆ ಮಾಡಿದ್ದರು. ಅದರಿಂದ ಹಾಸನ, ತುಮಕೂರು ಜಿಲ್ಲೆಯ ಕೆಲವು ಭಾಗ, ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಭಾಗಗಳಿಗೆ ನೀರಿನ ಅನುಕೂಲವಾಗುವ ಹಾಗೆ ಯೋಜನೆ ಮಾಡಲಾಗಿತ್ತು. ಯಾವದೋ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಆ ಯೋಜನೆ ಬದಲಿಸಿ 14 ಕೋಟಿ ಇದ್ದುದನ್ನು 4 ಕೋಟಿ ಮಾಡಿ 22,000 ಎಕರೆ ಅಚ್ಚುಕಟ್ಟು ಮಾಡಬೇಕೆಂದು ಇದೆ. ಈಗ ಪ್ರಿಲಿಮಿನರಿ ಕೆಲಸ ಪ್ರಾರಂಭ ಮಾಡಿದ್ದಾರೆ. ಈ ರೀತಿ ಯೋಜನೆ ಬದಲಿಸಿ ತುಮಕೂರು, ಬೆಂಗಳೂರು ಹಾಗೂ ಹಾಸನ ಜಿಲ್ಲೆಗಳಿಗೆ ಬಹಳ ಅನ್ಯಾಯ ಮಾಡುತ್ತಾ ಇದ್ದಾರೆ. ಒಂದು ಲಕ್ಷ ಎಕರೆಗೆ ನೀರು ಕೊಡುವುದಕ್ಕೆ ಹಿಂದಕ್ಕೆ ಯೋಜನೆ ಮಾಡಿದ್ದನ್ನು ಈಗ 22,000 ಎಕರೆಗೆ ನೀರು ಕೊಡುವುದನ್ನು ಏರ್ಪಾಡು ಮಾಡಿರುವುದು ತಪ್ಪು. ಹಿಂದಿನ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು

(ಶ್ರೀ ಬಿ. ಬೈರಪ್ಪಾಜಿ)

ಎಂದು ನಾನು ಒತ್ತಾಯ ಮಾಡುತ್ತೇನೆ. ಯಾಕಂದರೆ ಹಿಂದಿನ ಯೋಜನೆಯಿಂದ ಹಾಸನ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕುಗಳಿಗೆ ನೀರಿನ ಅನುಕೂಲವಾಗುತ್ತದೆ. 7,000 ಬದಲು 11,000 ಟೀ.ಎಂ.ಸಿ.ಎಫ್.ಟೀ. ನೀರು ಹೆಚ್ಚಿಸಬೇಕು, ಅದಕ್ಕಾಗಿ ಎತ್ತರವಾದ ಡ್ಯಾಮ್ ಕಟ್ಟಬೇಕು ಅಂದರೆ ಹಾಸನ, ತುಮಕೂರು, ಬೆಂಗಳೂರು ಜಿಲ್ಲೆಗೆ ಕೆಲವು ಭಾಗಕ್ಕೆ ನೀರು ಬರುತ್ತದೆ. ಈ ಯೋಜನೆ ಬಗ್ಗೆ ಪುನರ್ವಿಮರ್ಶೆ ಮಾಡಿ ಈ ಭಾಗಕ್ಕೆ ನೀರು ದೊರೆಯುವ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಲಕ್ಷ ಎಕರೆಗೆ ನೀರು ಒದಗಿಸುವ ಹಾಗೆ ಈ ಯೋಜನೆ ಪರಿವರ್ತನೆ ಮಾಡಬೇಕು. ಈ ಯೋಜನೆ ಪ್ರಾರಂಭ ಮಾಡುವ ಮೊದಲೇ ಈ ಯೋಜನೆ ಪರಿವರ್ತನೆ ಮಾಡಿ ಈ ಯೋಜನೆಯನ್ನು ಮುಂದುವರಿಸಬೇಕೆಂದು ಈ ಸಮಯದಲ್ಲಿ ಸರಕಾರಕ್ಕೆ ನನ್ನ ಮನವಿ ಸಲ್ಲಿಸಿ ನನ್ನ ಮಾತು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ):—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯ ಮುಂದಿರುವ ಎಲ್ಲ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಎರಡೆರಡು ವಿಚಾರ ಹೇಳಲು ಅಪೇಕ್ಷೆ ಪಡುತ್ತೇನೆ. ಸಾಮಾನ್ಯ ಆಡಳಿತದ ಬಗ್ಗೆ ಈಗಾಗಲೇ ಮಾತನಾಡಿದ ಮಹನೀಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಮಾನ್ಯ ಸದಸ್ಯರಾದ ಶ್ರೀ ಮಾದಪ್ಪಗೌಡರು ಈ ಸಂಸ್ಥಾನದಲ್ಲಿ ಆಡಳಿತ ದಕ್ಷತೆ ಆಡಳಿತ ಹತೋಟಿ ಚೆನ್ನಾಗಿ ಇರಬೇಕಾದರೆ ಮೈಸೂರು ರಾಜ್ಯವನ್ನು ಎರಡು ಭಾಗ ಮಾಡತಕ್ಕದ್ದು ಯೋಗ್ಯ ಎಂಬ ಅಭಿಪ್ರಾಯ ಸೂಚಿಸಿದ್ದಾರೆ. ಆಡಳಿತದಲ್ಲಿ ದಕ್ಷತೆ ಕಡಿಮೆಯಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಂಸ್ಥಾನ ಎರಡು ಭಾಗ ಮಾಡಿದರೆ ಆಡಳಿತ ದಕ್ಷತೆ ಹೆಚ್ಚುತ್ತದೆ ಎಂಬ ಅವರ ವಾದದಲ್ಲಿ ಸಂಪೂರ್ಣವಾಗಿ ತಿರುಳಿಲ್ಲ. ದಕ್ಷತೆ ವಿಚಾರ ರಾಜ್ಯ ದೊಡ್ಡದು ಸಣ್ಣದು ಇದರ ಮೇಲೆ ಅವಲಂಬಿಸಿಲ್ಲ ಎಂದು ನಾನು ನಂಬಿದ್ದೇನೆ. ನಮ್ಮ ಸಂಸ್ಥಾನದಲ್ಲಿ ದಕ್ಷತೆ ಕಡಿಮೆಯಾಗಬೇಕಾದರೆ ಏನು ಲೋಪ ಇದೆ ಎಂಬುದನ್ನು ಯೋಚನೆ ಮಾಡಬೇಕಾದುದು ಮುಖ್ಯ. ಅಧಿಕಾರಿಗಳಲ್ಲಿ ಅಸಂತೋಷ ಇದೆ ಎಂಬುದು ನಿಜ. ತಮಗೆ ಸರಿಯಾಗಿ ನ್ಯಾಯ ದೊರಕಿಲ್ಲ ಎಂಬ ಮನೋಭಾವ ಅಧಿಕಾರಿಗಳಿಗೆ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಅದಕ್ಕೆ ನಾನಾ ಕಾರಣಗಳು ಇವೆ. ಅನೇಕ ಪ್ರಶ್ನೆಗಳ ಮುಖಾಂತರ ಇದನ್ನು ಕೇಳಲಾಗಿದೆ, ಅನೇಕ ರಿಟ್‌ಅರ್ಜಿಗಳು ಹೈಕೋರ್ಟಿನಲ್ಲಿ ಬಂದಿರುವುದರಿಂದ ಇದು ಗೊತ್ತಾಗುತ್ತದೆ. ಅಧಿಕಾರಿಗಳಲ್ಲಿ ದಕ್ಷತೆ ಅಭಾವ ಮತ್ತು ಅಸಂತೋಷ ಇದೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅಂದರೆ ಇಲಾಖಾ ಮುಖ್ಯಾಧಿಕಾರಿಗಳು ತಮ್ಮ ಕೈ ಕೆಳಗಿನ ಅಧಿಕಾರಿಗಳನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದರೆ, ಹಾಗೂ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡದೇ ಇದ್ದರೆ ಡಿಸಿಪ್ಲಿನ್ ಉಳಿಯುವುದಿಲ್ಲ ಮತ್ತು ದಕ್ಷತೆ ಕಡಿಮೆಯಾಗುವುದಕ್ಕೆ ಇದು ಕಾರಣ. ಸಿ.ಎಸ್.ಎಸ್. ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಅವರು ಕ್ರಮ ತೆಗೆದುಕೊಳ್ಳುವುದಿಲ್ಲ. ನಿಷ್ಠೂರ ಕಟ್ಟಿಕೊಳ್ಳುವುದು ಏಕೆ, ಹಾಗೇ ನಡೆಕೊಂಡು ಹೋಗಲಿ ಎಂಬ ಮನೋಭಾವ ಬಂದರೆ ಆಡಳಿತ ದಕ್ಷತೆ ಕಡಿಮೆಯಾಗುವುದಕ್ಕೆ ಮುಖ್ಯ ಕಾರಣ. ದಕ್ಷತೆ ಹೆಚ್ಚಿಸಬೇಕಾದುದು ನಮ್ಮ ಕರ್ತವ್ಯ, ಸರಕಾರದ ಕರ್ತವ್ಯ. ಆಡಳಿತ ದಕ್ಷತೆ ಇಲ್ಲದೇ ಹೋದರೆ ನಾವು ಹೆಮ್ಮೆ ಪಡಲು ಸಾಧ್ಯವಿಲ್ಲ. ಭ್ರಷ್ಟಾಚಾರ ನಿರ್ಮೂಲ ಮಾಡಲು ಸಾಧ್ಯವಿಲ್ಲ. ಆದುದರಿಂದ ಆಡಳಿತ ದಕ್ಷತೆ ಹೆಚ್ಚಿಸುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮುಖ್ಯವಾಗಿ ನೀರಾವರಿ ಕಾಮಗಾರಿಗಳಿಗೆ ಮುಖ್ಯ ಬೇಡಿಕೆ ಇದೆ. ಮೊದಲನೇ ಯೋಜನೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಗಮನ ಕೊಡಲಾಯಿತು. ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಎಂಟೂವರೆ ಕೋಟಿ ರೂಪಾಯಿ ಖರ್ಚುಮಾಡಬೇಕೆಂಬ ಯೋಜನೆ ಹಾಕಿಕೊಂಡಿದ್ದೇವು. ಕಳೆದ 3 ವರ್ಷಗಳಲ್ಲಿ 852 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಒಂದೂವರೆ ಲಕ್ಷ ಎಕರೆ ಹೆಚ್ಚು ಜಮೀನು ನೀರಾವರಿ ಮಾಡಿದ್ದೇವೆ. ಈ ವರ್ಷ ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ವರ್ಷದ ಅಂತ್ಯದಲ್ಲಿ ಸುಮಾರು ನಾಲ್ಕೈದು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಸರಕಾರ ಉತ್ಸಾಹದಿಂದ ಇದೆ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು):— ಬರೀ ಕಾಗದದ ಮೇಲಿನ ಅಂಕಿಅಂಶಗಳನ್ನು ನೋಡಿದ್ದೀರಾ ?

ಶ್ರೀ ಎಂ. ಸಿ. ಬಸಪ್ಪ.—ಸಣ್ಣ ನೀರಾವರಿ ಬಗ್ಗೆ ನನ್ನ ಮುಂದೆ ಇರತಕ್ಕಂಥ ಅಂಕಿಅಂಶಗಳನ್ನು ಕೊಡುತ್ತೇನೆ. ಅದರಿಂದ ಸಮಾಧಾನ ಪಟ್ಟುಕೊಳ್ಳದೇ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಸರಕಾರ ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ಹೇಳುತ್ತೇನೆ.

ಸಣ್ಣ ನೀರಾವರಿ ಯೋಜನೆಗಾಗಿ ನಿಜವಾಗಿ ಏನೆಂದು ಪ್ರೋತ್ಸಾಹ ದೊರಕಬೇಕಾಗಿತ್ತೋ ಅವನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

11-00 A.M.

ಮೇಜರ್ ಮತ್ತು ಮೀಡಿಯಮ್ ಇರ್ರಿಗೇಶನ್ ಪ್ರಾಜೆಕ್ಟ್ ವಿಚಾರವಾಗಿ ಹೇಳತಕ್ಕದು ಬಹಳ ಅವಶ್ಯಕ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ 40 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಒಂದು, ಎರಡು ಮತ್ತು ಮೂರನೆ ಪಂಚವಾರ್ಷಿಕ ಯೋಜನೆಗಳಲ್ಲಿ ನಾವು ಖರ್ಚುಮಾಡಿರತಕ್ಕ ಒಟ್ಟು ವೆಚ್ಚವನ್ನು ನೋಡಿದರೆ, 19 ಕೋಟಿ 62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೂರನೆ ಯೋಜನೆಯ 4ನೆ ವರ್ಷಕ್ಕಾಗಿ ಸುಮಾರು 6½ ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದೇವೆ. ಅದರಲ್ಲಿ ಕೆಲಸಕ್ಕಾಗಿ (works)ಗೆ 561 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮೂರನೆ ಯೋಜನೆಯ 4ನೇ ವರ್ಷದ ಅಂತ್ಯದೊಳಗೆ 25-26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು. ಇನ್ನೂ ಪ್ಲಾನಿನಲ್ಲಿ ಖರ್ಚುಮಾಡಿ ಉಳಿಯುವ ಹಣ 15 ಕೋಟಿ ರೂಪಾಯಿ. ಇದನ್ನು 3ನೆ ಯೋಜನೆಯ 5ನೇ ವರ್ಷದಲ್ಲಿ ಖರ್ಚು ಮಾಡಬೇಕಾದಂಥ ಒಂದು ಸಂದರ್ಭ ಬರುತ್ತದೆ. ಸರಕಾರದವರು ಹಾಕಿಕೊಂಡಿರತಕ್ಕ ನೀತಿಯಲ್ಲಿ ಇದು ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಆಲೋಚನೆ ಮಾಡಬೇಕಾದುದು ಬಹಳ ಮುಖ್ಯ. ಈಗ ನಾವು ಪ್ಲಾನಿನಲ್ಲಿರುವ ಹಣ ಸಂಪೂರ್ಣ ಖರ್ಚು ಮಾಡಬೇಕಾದರೆ, ಖರ್ಚು ಮಾಡತಕ್ಕ ಪ್ರತಿಯೊಂದು 11 ರೂಪಾಯಿಗೆ, 14 ರೂಪಾಯಿಗಳನ್ನು ಕೇಂದ್ರದವರು ಕೊಡುತ್ತಾರೆ. ಅಲ್ಲಿಗೆ 25 ರೂಪಾಯಿ ಖರ್ಚು ಮಾಡತಕ್ಕ ಅರ್ಹತೆ ಬರುತ್ತದೆ. ನಾವು ಹೇಳುವುದು ಮುಂದಿನ ವರ್ಷ ಇದೇ ಕಷ್ಟವಿದೆ. 14 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು 5ನೆ ವರ್ಷದಲ್ಲಿ ನಾವು ಹಾಕಿಕೊಂಡರೆ, ಭಾರಿ ಪ್ರಮಾಣದ ನೀರಾವರಿ ಕಾಂಗಾರಿಗಳಿಗೆ ಸರಿಯಾದ ಒಂದು ಕಾರ್ಯಕ್ರಮವನ್ನು ನಿರ್ದಿಷ್ಟವಾಗಿ ನಡೆಸಿಕೊಂಡು ಹೋಗುವದಕ್ಕೆ ಆಗುತ್ತದೆ ಎಂದು ಆಲೋಚನೆ ಮಾಡಬೇಕಾದುದು ಬಹಳ ಮುಖ್ಯವಾದ ವಿಚಾರ.

ಶ್ರೀ ಅಣ್ಣಾರಾವ್‌ರವರು ಕೃಷ್ಣ ಗೋದಾವರಿ ನೀರಿನಬಗ್ಗೆ ಸರಕಾರದ ನೀತಿ ಅಷ್ಟೊಂದು ಚೆನ್ನಾಗಿಲ್ಲ, ಅದು ಇನ್ನೂ ಸ್ವಲ್ಪ ನಿರ್ದಿಷ್ಟವಾಗಿರಬೇಕಾಗಿತ್ತು, ಹೋರಾಟ ನಡೆಸಬೇಕಾಗಿತ್ತು ಎಂದು ಹೇಳಿದರು ನನಗೆ ಅನ್ನಿಸುತ್ತಾ ಇರುವುದು, ಹೋರಾಟ ನಡೆಸಬೇಕಾದುದು ಅನಾವಶ್ಯಕ. ಸಾಮಾನ್ಯವಾಗಿ ದೇಶದ ದೃಷ್ಟಿಯಿಂದ ತೆಗೆದುಕೊಂಡಾಗ, ಮೈಸೂರಿನಲ್ಲಿ ನೀವು ನೀರನ್ನು ಉಪಯೋಗಿಸಿಬಿಡಿ, ಕಟ್ಟೆ ಕಟ್ಟಿಬಿಡಿ, ನಿಮಗೆ 1,250 TMCFT ನೀರನ್ನು ಇಟ್ಟಿದ್ದೇವೆ ಅಂದರೆ, ಬೇಕಾದರೆ ಉಪಯೋಗಿಸುತ್ತೇವೆ ಅಂತ ಹೇಳಿಕೊಂಡರೆ, ಕೇಂದ್ರ ಸರಕಾರ ಈಬಗ್ಗೆ ಒಪ್ಪುವುದು ಕಷ್ಟ. ಆಂಧ್ರದವರು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಬರೀ ನೀರಾವರಿಗಾಗಿ ಎಷ್ಟು ಇಟ್ಟಿದ್ದಾರೆಂದರೆ 70 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅವರು ಖರ್ಚು ಮಾಡತಕ್ಕಂಥ ಈ 70 ಕೋಟಿ ಅಲ್ಲದೇನೆ, ತೆಗೆದುಕೊಂಡಿರುವುದು ನಾಗಾರ್ಜುನಸಾಗರ ಮತ್ತು ಶ್ರೀಶೈಲಂ, ಅವುಗಳನ್ನು outside the Plan ತೆಗೆದುಕೊಂಡಿದ್ದಾರೆ. ನಾವು 40 ಕೋಟಿ ಇಟ್ಟು, 4ನೇ ವರ್ಷದಲ್ಲಿ ಖರ್ಚು ಮಾಡಿರುವದು 26 ಕೋಟಿ; ಅದರ ಮಟ್ಟಿಗೆ ಇನ್ನೂ 14 ಕೋಟಿ ರೂಪಾಯಿ ಬಂದಿಲ್ಲ. 600 ಟಿ.ಎಂ.ಸಿ. ಉಪಯೋಗಿಸುತ್ತೇವೆಯೋ ಇಲ್ಲವೋ ಎಂದು ಒಬ್ಬ ಸದಸ್ಯ ಹೇಳಿದರು. ನಮ್ಮ 3ನೇ ಪಂಚವಾರ್ಷಿಕ ಯೋಜನೆ ಮುಗಿದರೂ 400 ಟಿ.ಎಂ.ಸಿ. ಉಪಯೋಗವಾಗುವುದಿಲ್ಲ. ಈಗಾಗಲೇ 600 ಟಿ.ಎಂ.ಸಿ. ಉಪಯೋಗಿಸುವುದಕ್ಕೆ ಇನ್ನೂ ಪ್ರಯತ್ನ ಮಾಡೋಣ. ನಿಜವಾದ ಖರ್ಚು ತೆಗೆದುಕೊಳ್ಳುವುದಾದರೆ, 600 ಟಿ. ಎಂ. ಸಿ. ಉಪಯೋಗಿಸಬೇಕಾದರೆ, 10 ಪಂಚವಾರ್ಷಿಕ ಯೋಜನೆಗಳು ಬೇಕಾಗುತ್ತವೆ. ಸರಕಾರದ ಭಾರಿ ಯೋಜನೆಗಳಿಗಾಗಿ ತೆಗೆದುಕೊಂಡಿರುವ ನಿಲುವು ಸರಿಯಾದುದಲ್ಲ. ಹೆಚ್ಚು ಪ್ರಮಾಣದ ಹಣವನ್ನು ಕೊಡಬೇಕು.

ಹಣ ಎಲ್ಲಿದೆ ಎಂಬ ಪ್ರಶ್ನೆ ಎತ್ತುತ್ತಾರೆ; ಅದಕ್ಕೆ ಎಷ್ಟು ಯೋಜನೆಗಳು ಬೇಕು? ತಮ್ಮ ಮುಂದಿಡುತ್ತೇವೆ. ನೀರಾವರಿ ವಿಚಾರದಲ್ಲಿ ಹಣ ಹೆಚ್ಚಾಗಿಲ್ಲ ಒಂದು ಬೆಟರ್‌ಮೆಂಟ್ ಲೆವಿ ಆಕ್ಟ್ ಪಾಸ್ ಮಾಡಿದ್ದೀರ. ಅದು ಡಿಫೆಕ್ಟಿವ್. ಜಿಲ್ಲಾಮಟ್ಟದ ಅಧಿಕಾರಿಗಳನ್ನು ಡೆಪ್ಯೂಟಿ ಕಮಿಶನರನ್ನು ಮಾಡಿ, 4 ವರ್ಷ ಕೂಡಿಸಿದ್ದು, ಅವರಿಗೆ ಏನೂ ಕೆಲಸವಿಲ್ಲವೆಂದು ಪೋಸ್ಟ್ ಅಬಾಲಿಶ್ ಮಾಡಿದಿರಿ. ಕಳೆದ ಸಾಲಿನಲ್ಲಿ ಬೆಟರ್‌ಮೆಂಟ್ ಲೆವಿ ಆಕ್ಟ್ ಪಾಸ್‌ಮಾಡಿದ್ದೇವೆ. ಎರಡು ಯೋಜನೆಗಳಲ್ಲಿ ನೀರಾವರಿ ಮಾಡಿರತಕ್ಕಂಥದ್ದು 4½ ಲಕ್ಷ ಎಕರೆಗಳು; ಆ ಎಕರೆಗಳಲ್ಲಿ ಬೆಟರ್‌ಮೆಂಟ್ ಲೆವಿ ಎಷ್ಟು ಬರುತ್ತದೆ? ವರ್ಷಕ್ಕೆ 2¼ ಕೋಟಿ ರೂಪಾಯಿಗಳು ಬೆಟರ್‌ಮೆಂಟ್ ಲೆವಿ ವಸೂಲು ಮಾಡುವುದಕ್ಕೆ ಅವಕಾಶವಿದೆ. ಎಲ್ಲಿದೆ ಹಣ ಅಂತ ಸುಮ್ಮನೆ ಯೋಚನೆ ಮಾಡುತ್ತಾ ಕೂತರೆ ಸಾಧ್ಯವಿಲ್ಲ. ಹಣ ಮಾಡಿಕೊಳ್ಳತಕ್ಕ ಹತ್ತಾರು ಮಾರ್ಗಗಳನ್ನು ತೋರಿಸುವುದಕ್ಕೆ ಸಾಧ್ಯ. ಆ ಹಣ ಸಂಪಾದಿಸುವ

(ಶ್ರೀ ಎಂ. ಸಿ. ಬಸಪ್ಪ)

ಪ್ರಯತ್ನ ಸರಕಾರ ಮಾಡಬೇಕು. ಜೊತೆಗೆ ನಮ್ಮ ರೈಟ್ಸ್ ಏನಿವೆ ಅವುಗಳನ್ನು ಇತರ ಸಂಸ್ಥಾನಗಳ ಜೊತೆಗೆ ಹೋರಾಟ ನಡೆಸಿ, ತೆಗೆದುಕೊಳ್ಳಬೇಕಾದ ಹಕ್ಕು ನಮಗೆ ಸೇರಿದ್ದು. ಕಾದಾಡಿ ಬಿಡಿ ಎಂದು ಅಣ್ಣಾರಾಯರು ಹೇಳಿದರೆ; ಬಹುಶಃ ಅದರಿಂದ ನ್ಯಾಯವನ್ನು ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಅವರಿಗಿಂತ ಮುಂದೆ ಹೋಗಿ ಎಷ್ಟು ನೀರನ್ನು ಉಪಯೋಗಿಸಿಕೊಂಡರೆ ಅಷ್ಟು ದಕ್ಕುತ್ತದೆಂದು ಅವರು ಹೇಳಿದರು. ಇತ್ತೀಚಿನ ಮುಖ್ಯ ಮಂತ್ರಿಗಳ ಹೇಳಿಕೆಗಳು ನಿಜವಾಗಿ ಬಹಳ ಸಂತೋಷಕರ ವಾಗಿದೆ. ಆದರೆ ಬರೀ ಹೇಳಿಕೆಗಳಲ್ಲಿ ನಮ್ಮ ನೀರು ಬರುವುದಿಲ್ಲ ಎಂದು ನಂಬಿಕೊಂಡಿರುವವರಲ್ಲಿ ನಾನೂ ಒಬ್ಬ. ಅದರ ಜೊತೆಗೆ ಪ್ರಯತ್ನವೂ ಇರಬೇಕು.

ಶ್ರೀ ಬಿ. ಡಿ. ಜತ್ತಿ.—ಶ್ರೀ ಬಸಪ್ಪನವರು ಹೇಳಿದ ಮಾತು ಸರಿ. ಬೆಟರ್‌ಮೆಂಟ್ ಲೆವಿ ಈಗಲೂ ಕೂಡ ಇಂಪ್ಲಿಮೆಂಟ್ ಆಗುವುದು ನಿಮ್ಮ ಸಪೋರ್ಟ್ ಇದ್ದರೆ ಮಾತ್ರ. You support us unanimously to collect money.

ಶ್ರೀ ಎಂ. ಸಿ. ಬಸಪ್ಪ.—ಕೃಷ್ಣ ಮತ್ತು ಗೋದಾವರಿ ನೀರಿನಬಗ್ಗೆ ಇಷ್ಟು ಮಾತ್ರ ಹೇಳಿಬಿಟ್ಟು, ಕಾವೇರಿ ನೀರನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳುತ್ತಾ ಇದ್ದೇವೆ ಅನ್ನುವ ವಿಚಾರದಲ್ಲಿ ಕೂಡ ಸರಕಾರದ ಗಮನವನ್ನು ಸೆಳೆಯಬೇಕು ಎಂದು ಪ್ರಯತ್ನ ಮಾಡುತ್ತೇನೆ. ನಾವು ಕಾವೇರಿಯಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ. ಮದ್ರಾಸಿಗೂ ಮತ್ತು ನಮಗೂ ಆಗಿರತಕ್ಕ ಅಗ್ರಿಮೆಂಟ್ ಏನಿದೆ ಅದರ ಬಗ್ಗೆ ಆಲೋಚನೆ ಮಾಡುವುದಾದರೆ, ಅಲ್ಲಿಯೂ ಕೂಡ ನಮ್ಮ ಲೆಜಿಟಿಮೇಟ್ ರೈಟ್ ಸಾಧನೆ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ.

ಶ್ರೀ ಬಿ. ಡಿ. ಜತ್ತಿ.—ಅದರ ಬಗ್ಗೆ ನಾನ್ ಅಫಿಶಿಯಲ್ ರೆಸಲ್ಯೂಶನ್ ಇದೆ. ಆವಾಗ ಬೇಕಾದಷ್ಟು ಮಾತನಾಡಿ.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮಂತ್ರಿಗಳ ಸಲಹೆ ಮೇಲೆ, ಕಾವೇರಿ ವಿಚಾರವಾಗಿ ನಾನ್-ಅಫಿಶಿಯಲ್ ರೆಸಲ್ಯೂಶನ್ ಬಂದಾಗ ಹೇಳುತ್ತೇನೆ. ಅದರಲ್ಲಿ ಒಂದೇ ಒಂದು ಅಂಶವನ್ನು ಸರಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ಸ್ಕೀಮುಗಳ ಬಗ್ಗೆ, ಕಟ್ಟಡ ನಿರ್ಮಾಣದ ಬಗ್ಗೆ ಒಂದು ಜಿಜ್ಞಾಸೆ ಇಟ್ಟುಕೊಂಡಿದ್ದಾರೆ. ಹಾಗಾಗಿ ಎಷ್ಟು ಪ್ರಮಾಣದ್ದಿರಬೇಕು, ಅದನ್ನು ಎಲ್ಲಿ ಕಟ್ಟಬೇಕು. ಕಂಬದ ಕಟ್ಟೆ ಯಾವ ರೀತಿ ಇರಬೇಕು ಲಕ್ಷ್ಮಣತೀರ್ಥ ಯಾವ ರೀತಿ ಇರಬೇಕು ಎಂದು 18 ಯೋಜನೆಗಳನ್ನು ಕಾವೇರಿ ನದಿ ನೀರಿನ ಬಳಕೆಗಾಗಿ ಸರಕಾರದವರು ರೆಡಿಮಾಡಿ ಇಟ್ಟುಕೊಂಡಿದ್ದಾರೆ. ಸುವರ್ಣಾವತಿ ಯೋಜನೆಗೆ 1 ಕೋಟಿ 20 ಲಕ್ಷ ಖರ್ಚಾಗಿ, 12 ಸಾವಿರ ಎಕರೆಗೆ ನೀರು ಒದಗುವುದು. ಅರ್ಕಾವತಿ, ಹೇಮಾವತಿ, ಹೀಗೆ ಎಷ್ಟೋ ಯೋಜನೆಗಳು ರೆಡಿಯಾಗಿದ್ದು, ಈ ವರ್ಷದಲ್ಲಿಯೇ, ಇಂಪ್ಲಿಮೆಂಟ್ ಮಾಡಬೇಕಾದಂಥ ಯೋಜನೆಗಳಾಗಿದ್ದರೂ ಕೂಡ, ಯಾವ ಒಂದು ಪ್ರಾಜೆಕ್ಟಿಗೂ ಸ್ಟೈಟ್ ಸರಿಯಾದುದಿಲ್ಲ, ಸ್ಥಳ ಸರಿ ಇಲ್ಲ. ಹೆಚ್ಚಿನ ಸ್ಕೀಮುಗಳನ್ನು ಎಲ್ಲಿ ಕಟ್ಟಬೇಕು, ಬಿಡಬೇಕು ಎಂದು ಕಾಲ ಕಳೆಯುವುದು ಬಿಟ್ಟು, ನಿರ್ವಿವಾದವಾಗಿ ಕಟ್ಟತಕ್ಕ ಪ್ರಾಜೆಕ್ಟುಗಳು ನಮ್ಮ ದೇಶದಲ್ಲಿವೆ. 1974 ರಲ್ಲಿ ಮದ್ರಾಸ್ ಅಗ್ರಿಮೆಂಟ್ ಎಕ್ಸ್‌ಪೈರ್ ಆಗುತ್ತದೆ. ಅವತ್ತು ಉಳಿದ ಸರ್‌ಪ್ಲಸ್ ವಾಟರ್ ಏನಿದೆ, ಅದನ್ನು ಜನರಲ್ ಪೂಲಿಗೆ ಕೊಟ್ಟು, ಮದ್ರಾಸು ಮತ್ತು ನಾವು ಹಂಚಿಕೊಳ್ಳುವ ಪ್ರಶ್ನೆ ಬಂದಾಗ, ಮೈಸೂರಿನ ಹಿತಕ್ಕೆ ಧಕ್ಕೆ ಬರುತ್ತದೆ. ಆ ದೃಷ್ಟಿಯಿಂದ ಆದಷ್ಟು ಬೇಗ ಯಾವ ಯಾವ ಯೋಜನೆಗಳು ಕಾವೇರಿ ಬೇಸಿನ್ನಿನೊಳಗೆ ರೆಡಿಯಾಗಿವೆಯೋ ಅವುಗಳಿಂದ ನೀರನ್ನು ಉಪಯೋಗಿಸಿಕೊಳ್ಳಲು, ಅವಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕಾದದು ಬಹಳ ಅವಶ್ಯಕ. ಇವತ್ತು ನಾವು ನೀರಾವರಿ ಕಾಂಗಾರಿಗಳಿಗೆ 5 ಕೋಟಿ, $3\frac{1}{2}$ ಕೋಟಿ, 8 ಕೋಟಿ ಕಾರ್ಯಕ್ರಮವನ್ನು ಹಾಕಿಕೊಂಡು, ಅದನ್ನು ಯಾವ ರೀತಿಯಲ್ಲಿ 3ನೆ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡುತ್ತೇವೆ? 40 ಕೋಟಿ ಖರ್ಚು ಮಾಡಲು, ನೀರಿನಲ್ಲಿ ನಮಗೆ ದೊರಕಬೇಕಾದ ಪಾಲು ಏನಿದೆ ಅದನ್ನು ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದ ಕೆಲಸ. ಆದ್ದರಿಂದ ದೊಡ್ಡ ಪ್ರಮಾಣದ ಯೋಜನೆಗಳಿಗಾಗಿ ಸರಕಾರದ ಹಣದ ನೀತಿ ಏನಿದೆ, ಅದು ಬದಲಾವಣೆಯಾಗಬೇಕು. ದೊಡ್ಡ ಪ್ರಮಾಣದ ಯೋಜನೆಗಳಿಗೆ ಹೆಚ್ಚಿನ ಹಣ ಪ್ರೊವೈಡ್ ಮಾಡಿ, ಅದನ್ನು ಖರ್ಚು ಮಾಡುವುದಕ್ಕೆ ಹೆಚ್ಚಿನ ಒಂದು ಗಮನವನ್ನು ಸರಕಾರ ಕೊಡಬೇಕು ಎಂದು ಹೇಳಿ; ನನಗೆ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಈಗ ನೀರಾವರಿ ಯೋಜನೆಗಳ ವಿಚಾರದಲ್ಲಿ ದೀರ್ಘವಾದ ಚರ್ಚೆಯಾಗುತ್ತಾ ಇದೆ. ಹಣ ಎಷ್ಟು ಬೇಕು, ನೀರು ಎಷ್ಟು ಬರುತ್ತದೆ ಅನ್ನುವ ವಿಷಯದಲ್ಲಿ ಸರಿಯಾದ ಅಂಕಿ ಅಂಶಗಳು ಇಲ್ಲದೆ ಚರ್ಚೆ ಮಾಡುತ್ತಾ ಇದ್ದೇವೆ. ಒಂದು ಎಸ್ಟಿಮೇಟು ಮಾಡಿದರೂ ಕೂಡ, ಯಾವುದಾದರೂ ಪ್ರಾಜೆಕ್ಟು ಕೊಡಬೇಕಾದರೂ ಕೂಡ,

ನವಾಗೆ ಬೇಕಾದವರು ಅಲ್ಲಿದ್ದರೆ ಆಗುತ್ತದೆ. ಅಲ್ಲಿ ಯಾರಿಗೆ ಅನುಕೂಲ ಮಾಡಿಕೊಡಬೇಕು, ಯಾರ ಜಮೀನು ಮುಳುಗುತ್ತದೆ ಎಂಬ ಪ್ರಶ್ನೆ ಅದಕ್ಕೆ ಅಡ್ಡಿ ಬಂದು ಬಹಳ ಪ್ರಾಜೆಕ್ಟುಗಳು ಮುಂದಕ್ಕೆ ಹೋಗದೆ ಇವೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಏನು ಸ್ವಾಮಿ, ಇಷ್ಟು ಮುಖ್ಯವಾದ ವಿಚಾರಗಳನ್ನು ಹೇಳುತ್ತಿದ್ದರೂ ಬರೆದುಕೊಳ್ಳುವುದಕ್ಕೆ ಮಿನಿಸ್ಟರು ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಒಂದು ಕೆಲಸ ಮಾಡಬೇಕಾಗಿದ್ದರೂ, ಅಂಥ ದಾಕ್ಷಿಣ್ಯಕ್ಕೆ ಒಳಗಾಗಿ ನಮ್ಮ ನೀರಾವರಿ ಕಾಂಗಾರಿಗಳಿಗೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟು ಪ್ರಯೋಜನ ಪಡೆಯಬೇಕೊ ಅಷ್ಟನ್ನು ಪಡೆಯಲಿಕ್ಕಾಗಿಲ್ಲ. ಮಂತ್ರಿ ಮಂಡಲವನ್ನು ಬಿಟ್ಟ ಮೇಲೆ, ಮಾಜಿ ಮಂತ್ರಿಗಳು ಇನ್ನೊಂದು ಮಂತ್ರಿ ಮಂಡಳದ ಮೇಲೆ ಆಪಾದನೆಗಳನ್ನು ಮಾಡುವುದು, ಛಾಡಿಛಿದ್ರಗಳನ್ನು ಹೇಳುವ ಒಂದ ಅಭ್ಯಾಸ ನಮ್ಮ ಮೈಸೂರು ದೇಶದಲ್ಲಿ ಸತತ ವಾಗಿ ನಡೆದು ಬಂದಿದೆ.

ಇದರಿಂದ ಸಾಮಾನ್ಯ ಜನರ ಪ್ರಗತಿ ಬಹಳವಾಗಿ ಹಿಂದೆ ಬೀಳುತ್ತಾ ಇದೆ. ಉದಾಹರಣೆಗೆ ಈಗ ನಾರಾಯಣಪುರ ಅಲಮಟ್ಟಿ ತೆಗೆದುಕೊಳ್ಳಿ. ಅವರಿವರ ವ್ಯಾಜ್ಯ ತೆಗೆದುಕೊಂಡು ಹೋಗಿ ಈಗ ಅಲ್ಲಿ ಜನರು ಉಪವಾಸ ಮಾಡುತ್ತೇವೆ, ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳಿ ಹೇಳತಕ್ಕ ಮಟ್ಟಕ್ಕೆ ಬರಬೇಕಾದರೆ ನಾರಾಯಣಪುರ ಕಟ್ಟಿದರೆ ಎಷ್ಟು ಪ್ರಯೋಜನವಾಗುತ್ತದೆ, ಹಣ ಎಷ್ಟಾಗುತ್ತದೆ, ಆ ಎರಡನ್ನೂ ಕಟ್ಟುವುದರಿಂದ ಎಷ್ಟು ಎಕರೆ ಸಾಗುವಳಿಯಾಗುತ್ತದೆ ಮತ್ತು ಎಷ್ಟು ಹಣ ಖರ್ಚಾಗುತ್ತದೆ ಎಂಬ ಅಂದಾಜು ಏನಾದರೂ ತಮ್ಮಲ್ಲಿ ಇದೆಯೇ ಎಂದರೆ ಯಾವ ಅಂದಾಜೂ ಇಲ್ಲ. ಪೂರ್ವದಲ್ಲಿ ಹೇಳುತ್ತಾ ಇದ್ದರು ಕಾಲಿನ ಹೆಜ್ಜೆಯಲ್ಲಿ ಅಳತೆ ಮಾಡುವುದು, ನಾಲ್ಕು ಬಾರು, ಮೂರು ಬಾರು ಎಂದು ಹೇಳುವುದು ಈ ಪದ್ಧತಿ ಇತ್ತು. ಈಗ ನೀವು ಮಾಡ ತಕ್ಕ ಕೆಲಸ ಕಾರ್ಯಗಳಿಗೆ ನಾಲ್ಕು ಕೋಟಿ ರೂಪಾಯಿ, ಹತ್ತು ಕೋಟಿ ರೂಪಾಯಿಗಳು ಬೇಕು. ಎಷ್ಟು ಅಂದಾಜಾಗಿದೆ, ಎಷ್ಟು ದಿವಸದಲ್ಲಿ ಮಾಡಿ ಮುಗಿಸುತ್ತೀರಿ ಎಂದರೆ ಅದು ಯಾವುದೂ ಇಲ್ಲ. ಇದಕ್ಕೆ ಉದಾಹರಣೆಗೆ ಶರಾವತಿಯನ್ನು ಷುರು ಮಾಡಿದಾಗ 27 ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳಿದಿರಿ. ಅದು ಹೋಗಿ 120 ಕೋಟಿ ರೂಪಾಯಿ ಆಯಿತು. ಈ ರೀತಿ ಮೊದಲು ಏನು ಅಂದಾಜು ಮಾಡುತ್ತೀರೋ ಅದಕ್ಕೆ ವರ್ಷಕ್ಕೆ 20 ಕೋಟಿ ರೂಪಾಯಿನಂತೆ ಜಾಸ್ತಿ ಮಾಡುತ್ತಾ ಹೋಗುತ್ತೀರಿ. ಅದಕ್ಕೆ ದಾಖಲೆ ಏನಾದರೂ ಒದಗಿಸುತ್ತೀರಾ ಎಂದರೆ ಏನೂ ಇಲ್ಲ. ಇದನ್ನು ನೀವೇ ಚೆನ್ನಾಗಿ ಯೋಜನೆ ಮಾಡಿ. ಗೋರೂರು ಅಣೆಕಟ್ಟು ವಿಶ್ವೇಶ್ವರಯ್ಯನವರ ಕಾಲದಲ್ಲಿ, ಮಿರ್ಜಾರವರ ಕಾಲದಲ್ಲಿ, ಷುರುವಾದುದು ತಮ್ಮವರೆಗೂ ಬಂದು ಈಗ ಅದರ ಎಸ್ಟಿಮೇಟನ್ನು ಬದಲಾಯಿಸ ಬೇಕಾದರೆ ನಿಮ್ಮ ಇಂಜನಿಯರಿಂಗ್ ಇಲಾಖೆ ಎಷ್ಟುಮಟ್ಟಿಗೆ ಇದೆ? ನಿಮ್ಮ ಉದ್ದೇಶ ಏನು? ಹೊಸ ಹೊಸ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಗೊರೂರನ್ನು ಏಕೆ ತೆಗೆದುಕೊಳ್ಳ ಲಿಲ್ಲ? ಅಧಿಕಾರಿಗಳಲ್ಲಿ ಟೆಕ್ನಿಕಲ್ ಅಭಾವ ಇದೆ ಎಂದು ಹೇಳುತ್ತಾ ಇದ್ದೇನೆ. ಇವತ್ತು ನೋಡಿ ದರೆ ಅಲ್ಲಿ ಕೆಲಸ ಇಲ್ಲ, ಆ ಡಿವಿಜನ್ ಅನ್ನು ವೈನ್ಡ್ ಅಪ್ ಮಾಡಿ ಎಂದರೆ ಅದನ್ನೂ ಮಾಡಿಲ್ಲ, ಅಲ್ಲಿದ್ದವರನ್ನು ಎಲ್ಲೆಲ್ಲಿಗೆ ಕಳುಹಿಸಿದ್ದೀರಿ ಎಂಬ ನಿಗದಿಯಾದ ಅಂಕಿ ಅಂಶ ನಿಮ್ಮಲ್ಲಿ ಇದೆಯೇ ಎಂದರೆ—ಚಾಲೆಂಜ್ ಮಾಡುವುದಾದರೆ ಬನ್ನಿ ಒಂದು ಗಂಟೆ ಟೈಂ ಕೊಡುತ್ತೇನೆ—ಅದು ಖಂಡಿತ ವಾಗಿಯೂ ಇಲ್ಲ, ತಾವು ಬಂದು ನೋಡಬಹುದು. ಅವರಿಗೆ ಅಲ್ಲಿ ಕೆಲಸ ಮಾಡುವುದಕ್ಕೆ ಕೆಲಸ ಇಲ್ಲ. ಬೇರೆ ಕಡೆಗೆ ಕಳುಹಿಸುವುದಕ್ಕೆ ನಿಮಗೆ ಛಾತಿ ಇಲ್ಲ, ಹೀಗಾಗಿ ನಿಮ್ಮ ಕೈನ್ನೆ ಬಂದಾಗಿದೆ. ನಿಮ್ಮ ಹಿಂದು ಮುಂದೆ ಅಧಿಕಾರಿಗಳು ಸುತ್ತಬೇಕಾಗಿದೆ. ನಾರಾಯಣಪುರ ಆಲಮಟ್ಟಿಯ ವಿಷಯದಲ್ಲಿ ನನಗೆ ತಿಳಿದಿರುವ ವರ್ತಮಾನದ ಪ್ರಕಾರ ಸೆಂಟ್ರಲ್ ಗವರ್ನಮೆಂಟ್ ಮಿನಿಸ್ಟರು ನಾರಾಯಣಪುರದಲ್ಲಿ ಕಟ್ಟಿದರೆ ಆಂಧ್ರಕ್ಕೂ ನೀರು ಬರುತ್ತದೆ, ಆದ್ದರಿಂದ ಅದನ್ನು ಮೊದಲು ಕಟ್ಟಿ ನೀವು ಶರಾವತಿಯಲ್ಲಿ ಮಾಡಿರತಕ್ಕ ಲೋಪದೋಷಗಳನ್ನು ಮುಚ್ಚುತ್ತೇನೆ ಎಂದು ಹೇಳಿರು ತ್ತಾರೆ ಎಂದು ಕೇಳುತ್ತೇನೆ. ಮೊದಲು ಆಲಮಟ್ಟಿಯಲ್ಲಿ ತೆಗೆದುಕೊಳ್ಳಬೇಕೆಂದು ಇದ್ದುದನ್ನು ತೆಗೆದುಕೊಳ್ಳದೇ ಇರುವುದಕ್ಕೆ ಆದೇ ಕಾರಣವೇನು? ಮತ್ತು ಟೆಂಡರ್ ಕರೆದೂ ಕೂಡ ಅದು ಅಧಿ ಕಾರಿಗಳ ಹತ್ತಿರ ಬಂದು 6 ತಿಂಗಳು, ವರ್ಷ ಆಗಿ ಇನ್ನು ಆರು ತಿಂಗಳು, ವರ್ಷ ನಿಮ್ಮ ಹತ್ತಿರ ಇರ ಬೇಕಾದರೆ ಯಾವ ದಾಕ್ಷಿಣ್ಯಕ್ಕೆ—ಹಣದ ಅಥವಾ ಅಧಿಕಾರದ—ಯಾವ ರೂಪದಲ್ಲಿ ಒಳಗಾಗಿದ್ದೀರಿ ಎಂಬುದನ್ನು ಮತ್ತು ಅಂಥಾದ್ದು ಯಾವುದಾದರೂ ಇದೆಯೋ ಇಲ್ಲವೇ ಎಂಬುದನ್ನು ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ಇದಕ್ಕೆ ಕಾರಣವೇನು! ಉದಾಹರಣೆಗೆ ಸಾಮಾನ್ಯ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಹೇಳುತ್ತೇನೆ. ಇಲ್ಲಿಗೆ ಸುಮಾರು 12 ವರ್ಷದ ಕೆಳಗೆ ಚಿಕ್ಕ ಮಗಳೂರಿನ ವಾಟರ್ ಸಪ್ಲೈ ಸ್ಕೀಂಗೆ ನಾಲ್ಕೂವರೆ ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿತ್ತು. ಅದಕ್ಕೆ ದುಡ್ಡೂ ಕೂಡ ಮಂಜೂರು ಆಗಿತ್ತು, ಆದರೆ ಆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಕೆಲವು

(ಕೆ. ಪಿ. ರೇವಣ್ಣಸಿದ್ದಪ್ಪ)

ದಿವಸಗಳು ಕಳೆದಮೇಲೆ ಅದು ಹತ್ತೊಂಬತ್ತುವರೆ ಲಕ್ಷ ರೂಪಾಯಿ ಆಯಿತು, ಇವತ್ತಿನ ದಿವಸ 29 ಲಕ್ಷ ರೂಪಾಯಿ ಆಗಿದೆ. ಇದಕ್ಕೆ ಜವಾಬ್ದಾರರು ಯಾರು ? ಮೊದಲೇ ಆ ಕಾರ್ಯವನ್ನು ಕಾರ್ಯಗತ ಮಾಡಿದರೆ ಈ ರೀತಿಯ ತೊಂದರೆ ಬರುತ್ತಾ ಇತ್ತೇ ? ಪ್ರತಿಯೊಂದು ಅಣೆಕಟ್ಟುಗಳನ್ನು ಕಟ್ಟು ವಾಗಲೂ ಕೂಡ ಇದೇ ರೀತಿ ಆಗಿದೆ. ನಿಮ್ಮಲ್ಲಿ ಅಂದಾಜು ಮಾಡತಕ್ಕ ಅಧಿಕಾರಿ ವರ್ಗ ಸರಿಯಾಗಿ ಇಲ್ಲ. ಏನೋ ಒಂದು ಅಂದಾಜು ಮಾಡುವುದು, ನಿಮಗೂ ಡೆಲ್ಲಿಗೆ ಹೋಗಬೇಕೆಂದು ಮನಸ್ಸು ಇರುತ್ತದೆ, ಅಲ್ಲಿಗೆ ಹೋಗಿ ಡೆಲ್ಲಿಯಲ್ಲೆಲ್ಲಾ ಸುತ್ತಿಕೊಂಡು ಬಂದು ದೊಡ್ಡ ದೊಡ್ಡ ಹೋಟೇಲು ಗಳಲ್ಲಿ ಇದ್ದು ಮಜಾ ಮಾಡಿಕೊಂಡು ಬರಬೇಕೆಂದು ಅಲ್ಲಿಗೆ ಹೋಗುತ್ತೀರಿ.

ಶ್ರೀ ಆಲೂರು ಹನುಮಂತಪ್ಪ.—ಮಜಾ ಮಾಡಿಕೊಂಡು ಬರುವುದು ಎಂದರೆ ಏನು ಅಂತಹ ಪದಗಳನ್ನು ಉಪಯೋಗಿಸಬಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಅನ್‌ಪಾರ್ಲಿಮೆಂಟರಿ ಎನ್ನುತ್ತೀರಾ ? ಇರಲಿ ಅದಕ್ಕೆ ಆಮೇಲೆ ಬರುತ್ತೇನೆ. ಯಾವ ಯಾವ ಅಧಿಕಾರಿಯಲ್ಲಿ ಎಷ್ಟೆಷ್ಟು ಪೇಪರ್ ಪೆಂಡಿಂಗ್ ಇದೆ ಎಂಬುದನ್ನು ನೋಡಿದ್ದೀರಾ ? ಆ ರೀತಿ ಇರುವುದಕ್ಕೆ ಕಾರಣವೇನು ? ಚಿಕ್ಕಮಗಳೂರಿನ ವಿಷಯ 12 ವರ್ಷ ನಿಧಾನವಾಗುವುದಕ್ಕೆ ಕಾರಣವೇನು ಎಂಬುದನ್ನು ಹೇಳಿ ? ಸಣ್ಣ ನೀರಾವರೀ ಯೋಜನೆಗೆ ಎಂಟೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತೀರಿ. ಇವತ್ತು ಎಷ್ಟು ಎಕರೆ ಭೂಮಿ ಸಾಗು ಆಗುತ್ತಾ ಇದೆ, ವ್ಯವಸಾಯಗಾರರಿಗೆ ಎಷ್ಟು ಪ್ರಯೋಜನ ವಾಗಿದೆ ಎಂಬುದನ್ನು ತಿಳಿಸುತ್ತೀರಾ ? ಇವತ್ತು ತುಂಗಭದ್ರಾದಲ್ಲಿ 10 ಸಾವಿರ ಎಕರೆ ನೀರಾವರಿ ಪ್ರದೇಶವನ್ನು ವ್ಯವಸಾಯಕ್ಕೆ ಕೊಟ್ಟಿಲ್ಲ ಎಂದರೆ ವ್ಯವಸಾಯಕ್ಕೆ ನೀರು ಕೊಟ್ಟಿಲ್ಲ ಎಂದರೆ ಹಣ ಖರ್ಚು ಮಾಡಿ ಎಷ್ಟು ದಿವಸ ಆಯಿತು ? ಅದಕ್ಕೆ ರಿಟರ್ನ್ ಏನು ಆಯಿತು ? ಅಧಿಕಾರವಿಲ್ಲದ ಅಧಿಕಾರಿಗಳನ್ನು ನೇಮಕ ಮಾಡುವುದು, ಅವರು ಏನು ಮಾಡಬೇಕೆಂಬ ಕೆಲಸ ನಿಗದಿ ಮಾಡದೇ ಇರುವುದು ಈ ರೀತಿಯಾಗಿ ನಡೆಯುತ್ತಾ ಹೋಗಿದೆ, ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವುದಕ್ಕೆ ಅಧಿಕಾರಿಗಳನ್ನು ನೇಮಕ ಮಾಡಿ ಮೂರು ವರ್ಷ ಆಯಿತು, ಅವರಿಗೆ ಕೆಲಸವಿಲ್ಲದೇ ಇರುವಾಗ ಇವರು ಮುಂದೆ ಏನು ಮಾಡಬೇಕೆಂಬ ಅಂದಾಜು ತಮಗೆ ಏನಾದರೂ ಇದೆಯೇ ? ಏನೋ ಒಂದು ರೀತಿಯಲ್ಲಿ ಅಧಿಕಾರಿಗಳನ್ನು ಸೃಷ್ಟಿ ಮಾಡಬೇಕು, ಅವರಿಗೆ ಸಂಬಳ ಸಾರಿಗೆ ಕೊಡಬೇಕು, ಅಷ್ಟು ಆಗುತ್ತಾ ಇದೆಯೇ ಹೊರತು ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ನಿಮಗೆ ಚೈತನ್ಯ ಇದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ದೊಡ್ಡ ದೊಡ್ಡ ಪ್ರಾಜೆಕ್ಟು ಗಳನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಉತ್ಸುಕರಾಗಿದ್ದೀರೋ ಅಷ್ಟೇ ಉತ್ಸಾಹದಿಂದ ಸಣ್ಣ ಸಣ್ಣ ಕೆರೆ, ಕಟ್ಟೆಗಳನ್ನು ಮಾಡಿಸಿದ್ದೇ ಆದರೆ ಆದರಿಂದ ಎಷ್ಟೋ ಅನುಕೂಲವಾಗುತ್ತಾ ಇತ್ತು. ಏಕೆಂದರೆ ಹಳೇ ಮೈಸೂರಿನಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಕೆಲವು ಭಾಗದಲ್ಲಿ ಮಾತ್ರ ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಮತ್ತು ಹೂಳು ತುಂಬಿರತಕ್ಕ ಕೆರೆಗಳನ್ನು ಆದಷ್ಟು ಜಾಗ್ರತೆ ತೆಗೆದುಕೊಂಡು ಅವುಗಳನ್ನು ದುರಸ್ತು ಮಾಡಿಸಬೇಕು.

[MR. SPEAKER in the Chair]

ಸಣ್ಣ ಸಣ್ಣ ನೀರಾವರಿ ಕೆರೆ ಕಟ್ಟೆಗಳನ್ನು ದುರಸ್ತು ಮಾಡಿಸಿದ ಹೊರತು ನಮ್ಮ ರಾಜ್ಯಕ್ಕೆ ಅನುಕೂಲವಾಗುವುದಿಲ್ಲ. ಅಷ್ಟೇ ಅಲ್ಲದೇ ಕೆಲಸ ಇಲ್ಲದೇ ಇರುವ ಕಡೆ ಅಧಿಕಾರಿಗಳನ್ನು ಏಕೆ ಇಟ್ಟಿದ್ದೀರಿ, ಕೆಲವು ಡಿವಿಜನ್‌ಗಳನ್ನು ಮುಚ್ಚಿ ಎಂದರೂ ಕೂಡ ಮುಚ್ಚದೇ ಇರುವುದಕ್ಕೆ ಕಾರಣ ವೇನು ? ಇದನ್ನೆಲ್ಲಾ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೀನಿಯಾರಿಟಿ ಲಿಸ್ಟ್ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಬಹಳ ಬುದ್ಧಿ ವಂತರು 26-27 ವರ್ಷ ಸರ್ವಿಸ್ ಆಗಿದ್ದವರು ಅವರಿಗೆ ಸಿಕ್ಕಬೇಕಾದ ಗ್ರೇಡು ಪ್ರಮೋಷನ್ ಸಿಕ್ಕದೇ ಪ್ರತಿಯೊಂದು ಆಫೀಸಿನಲ್ಲೂ ಅತೃಪ್ತಿ ಬಹಳವಾಗಿದೆ. ಇದಕ್ಕೆ ಕಾರಣವೇನು ? ಅವರಲ್ಲಿ ಇರತಕ್ಕ ಅತೃಪ್ತಿಯನ್ನು ಕೂಡಲೇ ಹೊಗಲಾಡಿಸಿದ ಹೊರತು ಕಾಗದ ಪತ್ರಗಳು ಒಂದು ಕಡೆ ಯಿಂದ ಒಂದು ಕಡೆಗೆ ಹೋಗುವುದು ತಲೆಕೆಳಗಾಗುವುದು ಕಡಿಮೆಯಾಗುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿ ಎಂದು ಹೇಳುತ್ತೇನೆ. ಮತ್ತು ಸಬ್ ರಿಜಿಸ್ಟ್ರಾರ್ ಅವರ ಆಫೀಸುಗಳಲ್ಲಿ ಎಂದಿನಂತೆ ಮಾಮೂಲು ಇದ್ದೇ ಇದೆ. ಆದ್ದರಿಂದ ಅಲ್ಲಿ ಇರತಕ್ಕ ಭ್ರಷ್ಟಾಚಾರವನ್ನು ಆದಷ್ಟು ಜಾಗ್ರತೆ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಕೊನೆಯ ದಾಗಿ ಇನ್ನೊಂದು ಸಾರಿ ಸೀನಿಯಾರಿಟಿ ಪಟ್ಟಿಯನ್ನು ಆದಷ್ಟು ಜಾಗ್ರತೆ ತಯಾರು ಮಾಡಿ, ಕೆಲಸ ಮಾಡಬಾರದು ಎಂಬ ಮನೋಭಾವವನ್ನು ಜಾಗ್ರತೆ ತೆಗೆದುಹಾಕಬೇಕೆಂದು ಹೇಳಿ ಕೊಟ್ಟಂತಹ

ಅರ್ಜಿಗಳು ಜಾಗ್ರತೆ ವಿಲೇ ಆಗದೇ ಇರುವುದರಿಂದ ಸರ್ಕಾರಕ್ಕೂ ಮತ್ತು ಸಾಮಾನ್ಯ ಜನರಿಗೂ ತೊಂದರೆಯಾಗುತ್ತದೆ ಎಂದು ಹೇಳಿ—ಚಿಕ್ಕಮಗಳೂರಿನ ನೀರಿನ ವಿಷಯ ಹೇಳಿದ್ದೇನೆ—ಆ ವಿಷಯದಲ್ಲೂ ಕೂಡ ತಾವು ಸಮರ್ಪಕವಾದ ಉತ್ತರವನ್ನು ಕೊಡುತ್ತೀರಿ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Smt. MURARI KAMALAMMA (Hospet) [Spoke in Telugu].—

† ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಸ್ವಾಮಿ, ಈ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಈ ದೇಶದಲ್ಲಿ ಒಂದು ಭಾವನೆ ಮೂಡಲಿಕ್ಕೆ ಅವಕಾಶವಾಗುತ್ತಿದೆ ಎಂದು ಇಲ್ಲಿ ಹೇಳಬೇಕಾಗಿದೆ. ಅಂತಹ ಒಂದು ಭಾವನೆ ತಾರತಮ್ಯದಿಂದ ಬರುತ್ತಿದೆ ಎಂದು ಹೇಳಿದರೆ ಕೇವಲ ದಬಾವಣೆಯಿಂದ ಮತ್ತು ಜಬರ್ದಸ್ತಿನಿಂದ ಕೊಡಿಸತಕ್ಕ ಪ್ರವೃತ್ತಿಯಿಂದಲ್ಲ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

Mr. SPEAKER.—With regard to power, I wish to make the position clear. Whether Sharavathy should or should not be debated upon, the Leader of the Opposition said that he was reserving his observations on it, taking a unilateral decision; it might lead to certain complications. The understanding is that Sharavathy will not be discussed. If the members so choose, a separate day will be given later on at a convenient time.

Sri K. S. SURYANARAYANA RAO.—I am confining myself to three aspects, namely, major irrigation, minor irrigation costing more than 1 lakh and minor irrigation costing less than 1 lakh.

ನಾನು ಏತಕ್ಕೆ ಇದನ್ನು ಇಲ್ಲಿ ಹೇಳುತ್ತಿದ್ದೇನೆಂದರೆ ಈ ರೀತಿಯಾದ ಒಂದು ಭಾವನೆ ಬಂತಲ್ಲಾ ನಮ್ಮ ಸರಕಾರಕ್ಕೆ ಎಂದು ನನಗೆ ವಿಷಾದವಾಗಿದೆ. ಈ ಭಾವನೆ ಸರಿಯಿಲ್ಲವೆಂದು ಸಮಜಾಯಿಷಿ ಮಾಡುವ ಬದಲು ಗ್ರಾಮೋಫೋನ್ ರಿಕಾರ್ಡಿನಂತೆ ಒಂದೇ ಮಾತು ಹೇಳುವುದು ಸರಿಯಲ್ಲ. ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳತಕ್ಕ ಜನ ಇದ್ದಾರೆ. ಇದನ್ನು ಏತಕ್ಕಾಗಿ ಹೇಳುತ್ತೇನೆಂದರೆ, ತಾವು ಅವರಿಗಿಂತ ಇವರಿಗೆ ದೇಶಪ್ರೇಮವನ್ನು ಹೊಸದಾಗಿ ಮತ್ತು ಹೆಚ್ಚಾಗಿ ಹೇಳಬೇಕಾಗಿ ಬಂತಲ್ಲ ಎಂದು ನನಗನಿಸುತ್ತದೆ. ಎಲ್ಲಿ ಯಾವ ಒಂದು ಪ್ರಜಾ ಪ್ರಭುತ್ವವನ್ನು ಸೇವೆಮಾಡಿ ಇವೊತ್ತಿನ ದಿವಸ ದೇಶಪ್ರೇಮದಿಂದ ಹೇಳತಕ್ಕಂತಹ ಬಡವರಾದ ನಮಗೆ ಒಂದು ಭಾವನೆ ಬಂದಾಗ ಆ ಭಾವನೆಗೆ ಕಾರಣವಿಲ್ಲ ಎಂದು ಸಮಾಧಾನ ಪಡಿಸಿ ಮೆಚ್ಚಿಕೊಂಡು ಹೋಗುವುದು ಒಂದು ನ್ಯಾಯವಾದ ಮತ್ತು ಲಾಯಕ್ಕಾದ ಮಾರ್ಗವಲ್ಲ ಎಂದು ಹೇಳತಕ್ಕದ್ದು ನ್ಯಾಯ ಎನ್ನುವುದು ಇಷ್ಟರಮಟ್ಟಿಗೆ ಕೆಳಗೆ ಇಳಿಯುವಷ್ಟು ಮಟ್ಟಿಗೆ ಆಗಿದೆ. ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ, ಬೆಂಕಿ ಇಲ್ಲದೆ ಹೊಗೆಯಾಡುವುದಕ್ಕೆ ಕಾರಣವೇನು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಈ ದೇಶವು ಎರಡು ಭಾಗಗಳಾಗಬೇಕು ಎಂದು ಹೇಳುವುದಕ್ಕೆ ಅವರ ಮನಸ್ಸು ಅಷ್ಟು ನೊಂದು ಹೇಳಿದ್ದಾರೆ. ಇದಕ್ಕೆ ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್ಟಿನ ಹಂಚಿಕೆಗಳಿಂದ ಹೇಗೆ ನಡೆಯುತ್ತಿದೆ ಎನ್ನುವುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಉದಾಹರಣೆಯಾಗಿ ಮೇಜರು ಹಾಗೂ ಮೈನರು ಇರಿಗೇಷನ್ನು ಬಾಬುಗಳಿಗಾಗಿ, ನೀರಾವರಿ ಯೋಜನೆಗಳಿಗಾಗಿ ಹಂಚಿರುವ ಮೆಮೊರ್ಯಾಂಡಂನಲ್ಲಿ ಮತ್ತು ಪ್ಲಾನಿಂಗು ಸ್ಕೀಮುಗಳಲ್ಲಿ ಇರತಕ್ಕ ಮೇಜರು ಇರಿಗೇಷನ್ನು ಪ್ರಾಜೆಕ್ಟಿಗಾಗಿ ಪ್ರೊವೈಡ್ ಮಾಡಿರುವುದರಲ್ಲಿ ಹಳೆಯ ಮೈಸೂರಿಗೆ ಎಷ್ಟು ಹಣದ ಅಂದಾಜು ಮಾಡಿದ್ದಾರೆ ಮತ್ತು ಇತರ ಭಾಗಗಳಿಗಾಗಿ ಎಷ್ಟು ಎನ್ನುವುದನ್ನು ನೋಡುವುದಾದರೆ ನಮಗೆ ಒಟ್ಟು 5 ಕೋಟಿ 57 ಲಕ್ಷದಷ್ಟು ಇದ್ದರೆ ಅದರಲ್ಲಿ ಒಂದು ಕೋಟಿ ಚಿಲ್ಲರೆ ಮಾತ್ರ ಹಳೆಯ ಮೈಸೂರಿನ ಜನಕ್ಕೆ ಬರುತ್ತದೆ ಎಂದು ಹೇಳಿದರೆ ಇದೊಂದು ದೊಡ್ಡ ತಪ್ಪೇ ಎಂದು ನಾನು ಹೇಳುತ್ತೇನೆ. ಎಲ್ಲೂ ಆಗದೆ ಇರುವಂತಹ ಎಲ್ಲ ಜನರನ್ನೂ ಒಪ್ಪಿಸುವಂತಹ ಈ ಒಂದು ಭಾವನೆಗೆ ಅವಕಾಶವಿಲ್ಲದಂತಹ ಇಂತಹ ಒಂದು ದೊಡ್ಡ ಭಾವನೆಗೆ ಕಾರಣವಾಗಿದೆ ಎಂದು ನಾನು ಹೇಳುತ್ತೇನೆ.

ಎರಡನೇದು, ಮೈಸೂರು ಇರಿಗೇಷನ್ನು ನೋಡುವಾಗ ಒಂದು ಲಕ್ಷದಷ್ಟು ಒಂದು ಪ್ರಾಜೆಕ್ಟನ್ನು ತೆಗೆದುಕೊಂಡರೆ, ನಮ್ಮ ಈ ಭಾಗಗಳಲ್ಲಿ ಪ್ರಾದೇಶಿಕ ಮನೋಭಾವನೆಯಿಂದ ಹೇಳುತ್ತಿದ್ದಾರೆಂದು ತಿಳಿಯಬೇಕಾಗಿಲ್ಲ. ಇಲ್ಲಿರುವ ಬಡ್ಜೆಟ್ಟಿನ ಪೇಪರುಗಳನ್ನು ನೋಡಿಕೊಂಡೇ ತಮ್ಮ ಮುಂದೆ ಮಾತನಾಡುತ್ತಿದ್ದೇನೆ. ನಾನು ಯಾರನ್ನೂ ಒಂದು ಪೇಪರಿಗಾಗಿ ಹೋಗಿ ಒಂದು ಆಫೀಸಿನಲ್ಲಿ ಕೇಳಿಲ್ಲ. ಇಲ್ಲಿರುವ ನಮ್ಮ ಪಟ್ಟಿಯನ್ನು ನೋಡಿಕೊಂಡೇ ಹೊಸ ಮೈಸೂರಿಗಾಗಿ ಎಷ್ಟು ವೆಚ

(SRI K. S. SURYANARAYANA RAO)

ಮಾಡಲಾಗಿದೆ ಮತ್ತು ಹಳೆಯ ಮೈಸೂರಿಗಾಗಿ ಎಷ್ಟು ಆಗಿದೆ ಎನ್ನುವ ಅಂಕಿ ಅಂಶಗಳನ್ನು ಹೇಳುತ್ತೇನೆ. ಹಳೆಯ ಮೈಸೂರಿಗೆಷ್ಟು ಕಡಿಮೆ ಪ್ರೊವೈಡು ಮಾಡಿದ್ದಾರೆಯೋ ಅದಕ್ಕೆ ಎರಡರಷ್ಟು ಮತ್ತು ಮೂರರಷ್ಟು ಬಾಕಿ ಇತರ ಭಾಗಗಳಿಗಾಗಿ ಕೊಡುತ್ತಿದ್ದಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತ್ರ ಹೇಳುತ್ತಿದ್ದೇನೆ. ಎಲ್ಲ ವಿವರವಾದ ವಿಚಾರಗಳನ್ನು ಹೇಳುವುದಕ್ಕೆ ಕಾಲಾವಕಾಶವಿಲ್ಲ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅವನ್ನೆಲ್ಲಾ ಕೂಡಿ ಹೇಳಿಬಿಟ್ಟರೆ ಸಾಕು.

† ಶ್ರೀ ಭೀಮಣ್ಣ ಶಿವಲಿಂಗಪ್ಪ (ಭಾಲ್ಕಿ).—ಅಧ್ಯಕ್ಷರೇ, ಕರ್ಣಾಟಕ ಏಕೀಕರಣವಾದಾಗ ಬಿದರೆ ಜಿಲ್ಲೆಯ ನಾಲ್ಕು ತಾಲ್ಲೂಕುಗಳು ಹೈದರಾಬಾದಿನಿಂದ ವಿಭಜನೆಯಾಗಿ ವಿಶಾಲ ಮೈಸೂರಿಗೆ ಸೇರುವಾಗ ದೊಡ್ಡ ಚಳವಳಿ ಆಯಿತು. ಆಗ ಅಲ್ಲಿನ ಬಾರ್ಡರ್ ಪ್ರದೇಶದ ಪ್ರತಿನಿಧಿಗಳು ಡೆಲಿಗೇಷನ್ ದೆಹಲಿಗೆ ಹೋಗಿದ್ದರು. ಈಗಿನ ಮುಖ್ಯಮಂತ್ರಿಗಳು ಆಗ ಪಾರ್ಲಿಮೆಂಟ್ ಮೆಂಬರಾಗಿದ್ದರು. ಆಗ ಏಕೀಕರಣದ ಬಗ್ಗೆ ನಮ್ಮ ಡಿಮ್ಯಾಂಡ್ ಇತ್ತು, ಬಹಳ ಉತ್ಸಾಹದಿಂದ ಪ್ರೇಮದಿಂದ ನಮ್ಮನ್ನು ಕಂಡುದು ನನಗೆ ನೆನಪಿದೆ. ಒಂದು ಮಧುರ ಭಾವವು ಸಹ ಆಗ ಇತ್ತು. ಇಲ್ಲಿಗೆ ಬಂದ ನಂತರ ಏಳು ವರ್ಷಗಳಲ್ಲಿ ನಮಗೆ ಬಂದಿರುವ ಅನುಭವ ನೋಡಿದರೆ ಬಹಳ ವಿಷಾದವಾಗುತ್ತದೆ. ಬಾರ್ಡರ್ ಪ್ರದೇಶದ ಬಗ್ಗೆ ಇರುವ ಮನೋಭಾವನೆ ನೋಡಿದರೆ ಬಹಳ ವಿಷಾದವಾಗುತ್ತದೆ. ಮೈಸೂರನ್ನು ಎರಡು ಭಾಗ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕಾರಣ ಕೆಲವರಿಗೆ ಅನ್ಯಾಯವಾಗುತ್ತಿದೆ ಎಂಬುದು. ಹಿಂದೆ ವೀರೇಂದ್ರ ಪಾಟೀಲ್‌ರವರು ಅಂಕಿಅಂಶ ಕೊಟ್ಟು ವಿವರವಾಗಿ ಎಲ್ಲೆಲ್ಲಿ ಏನೇನಾಗಿದೆ ಎಂಬುದನ್ನು ಹೇಳಿದರು. ಹೈದರಾಬಾದು ಕರ್ಣಾಟಕಕ್ಕೆ ಎಷ್ಟು ಭಾಗ ಕೊಟ್ಟಿದ್ದಾರೆ, ಹಳೇ ಮೈಸೂರಿಗೆಷ್ಟು ಅನುಕೂಲ ಮಾಡಿದ್ದಾರೆಂಬುದನ್ನು ಹೇಳಿದರು. ಹಳೇ ಮೈಸೂರಿಗೆ ಅನುಕೂಲಮಾಡಿದ್ದಾರೆ. ನಮಗೆ ಹೆಚ್ಚು ಗಮನ ಕೊಡದೆ ನಮ್ಮನ್ನು ನಿರ್ಲಕ್ಷಮಾಡಿದರೂ ಚಿಂತೆಯಿಲ್ಲ, ಇತರರು ಉದ್ದನೆಯ ಭಾಷಣ ಮಾಡಿ ನಮಗೆ ಹೆಚ್ಚು ಅನುಕೂಲಮಾಡುತ್ತಿದ್ದಾರೆಂದು ಭಾವಿಸುವುದಕ್ಕೆ ಅವಕಾಶ ಕೊಡುವುದು ಬೇಡ. ಪ್ರತಿಯೊಂದು ಭಾಗಕ್ಕೂ ನ್ಯಾಯವಾಗಿ ದೊರೆಯಬೇಕಾದ ಸೌಲಭ್ಯ ಸಿಕ್ಕಬೇಕು ಎಂಜನಿಯರಿಂಗ್ ಇಲಾಖೆ, ವಿದ್ಯಾ ಇಲಾಖೆ ಮುಂತಾದ ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟಂತೆ ಸಮಾನವಾದ ಸೌಕರ್ಯ ಎಲ್ಲರಿಗೂ ದೊರೆಯಬೇಕಾದ್ದು ಅವಶ್ಯಕ.

ಈಗ ಕೈಕೊಂಡಿರುವ ಶರಾವತಿ ಯೋಜನೆ ಬಹಳ ದೊಡ್ಡದು; ಅದಕ್ಕೆ ಸರ್ಕಾರ ಬಹಳ ಮಹತ್ವ ಕೊಟ್ಟಿದ್ದರೆ ಅದು ಸರಿಯಲ್ಲ ಎಂದು ಹೇಳುವುದು ಯುಕ್ತವಲ್ಲ. ಅದು ನಮ್ಮ ದೇಶಕ್ಕೆ ಮಾತ್ರವಲ್ಲ, ಇಡೀ ರಾಷ್ಟ್ರಕ್ಕೆ ಕೀರ್ತಿ ತರತಕ್ಕಂಥಾದ್ದು. ಮುಖ್ಯಮಂತ್ರಿಗಳು ಅದಕ್ಕೆ ವಿಶೇಷಲಕ್ಷ ಕೊಟ್ಟಿದ್ದಾರೆ. ಅದಕ್ಕೆ ಎಷ್ಟು ಖರ್ಚಾದರೂ ಚಿಂತೆಯಿಲ್ಲ, ಜನರಿಗೆ ಉಪಯೋಗವಾಗಬೇಕೆಂದು ಒಳ್ಳೆಯ ಮನೋಭಾವದಿಂದ ಮುತವರ್ಜಿ ವಹಿಸಿ ಅದನ್ನು ಮಾಡುತ್ತಿರುವುದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ದೇಶದಲ್ಲಿ ಈ ದಿವಸ ರಾಮರಾಜ್ಯ ಕಟ್ಟಬೇಕೆಂದಿದ್ದಾರೆ, ರಾಮ ಒಂದು ಸಣ್ಣ ಅಪವಾದಕ್ಕಾಗಿ ಸೀತೆಯನ್ನು ತ್ಯಾಗಮಾಡಿದ. ಈಗ ಸಮಾಜವಾದ ಸ್ಥಾಪಿಸಬೇಕೆಂದಿದ್ದೀರಿ, ಲಕ್ಷಾವಧಿ ಜನರು ಶರಾವತಿ ಕೆಲಸದ ವಿಷಯದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿಯಾಗಬೇಕೆಂದು ಬೇಡುತ್ತಿದ್ದಾರೆ, ಅಗ್ನಿಪರೀಕ್ಷೆ ಆಗಬೇಕೆಂದು ಆಶಿಸುತ್ತಿದ್ದಾರೆ, ಅದನ್ನು ಮಾಡುವುದು ಒಳ್ಳೆಯದು ಎಂದು ಸೂಚಿಸುತ್ತೇನೆ.

ನೀರಾವರಿ ಕಾರ್ಯಗಳಿಗಾಗಿ ಹಣ ಮೀಸಲಾಗಿಡುವುದು ಖರ್ಚಾಗಬೇಕು. ನಮ್ಮ ಬಿದರೆ ಭಾಗಕ್ಕೆ ಒದಗಿಸುವ ಹಣ ಯಾವ ಬಡ್ಜೆಟ್ ನೋಡಿದರೂ ಸಮಾಧಾನ ತರುವಂತಿರುವುದಿಲ್ಲ. ಎಲ್ಲಿ ನದಿ ಇಲ್ಲವೋ ಅಲ್ಲಿಗೆ ನದಿ ನೀರು ತಂದುಕೊಡುವುದಕ್ಕಾಗುವುದಿಲ್ಲ. ಆದರೆ ಅವಕಾಶ ಇರುವುದನ್ನು ಸರಿಯಾಗಿ ಉಪಯೋಗಿಸಿಕೊಂಡು ಸಾಧ್ಯವಾದಷ್ಟು ನೆರವು ನೀಡಲು ಪ್ರಯತ್ನ ಮಾಡಬೇಕು. 7 ವರ್ಷಗಳ ಬಡ್ಜೆಟ್ ನೋಡಿದರೂ ಬಿದರೆ ಜಿಲ್ಲೆಗೆ ಸಮಾಧಾನ ಸಿಕ್ಕಿಲ್ಲ. ಬಿದರೆ ಜಿಲ್ಲೆಯಲ್ಲಿ ಭಾಲ್ಕಿ ಮತ್ತು ಸಂತಾಪುರ ತಾಲ್ಲೂಕುಗಳು ಬಹಳ ಹಿಂದುಳಿದಿವೆ. ಹಿಂದೆ ಮುಖ್ಯಮಂತ್ರಿಗಳು ಆ ಕಡೆ ಬಂದಾಗ ನಮ್ಮ ಕಷ್ಟವನ್ನು ತಿಳಿಸಿದ್ದೆವು. ಆದರೂ ಕೂಡ ಇದುವರೆಗೂ ಸೂಕ್ತ ಕಾರ್ಯಕ್ರಮ ಕೈಕೊಳ್ಳದಿರುವುದು ವ್ಯಸನಕರ. ಒಂದು ವರ್ಷಕ್ಕೆ ಮೊದಲು ಮುಖ್ಯಮಂತ್ರಿಗಳು ಡಿಫೆನ್ಸ್ ಫಂಡನ್ನು ವಸೂಲು ಮಾಡಲು ಭಾಲ್ಕಿಗೆ ಬಂದಾಗ ಕಾರಂಜಿ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನು ಅವರ ಮುಂದೆ ಇಟ್ಟೆವು. ಅದರಿಂದ 60 ಸಾವಿರ ಎಕರೆ ನೀರಾವರಿಯಾಗುವುದು. ಅದನ್ನು ತ್ವರಿತವಾಗಿ ಕೈಕೊಂಡರೆ ಒಳ್ಳೆಯದಾಗುವುದೆಂದು ಸೂಚಿಸಿದೆವು. ಮುಖ್ಯಮಂತ್ರಿಗಳು ಭರವಸೆ ಕೊಟ್ಟರು; ಜಾಗ್ರತೆ ಕೈಕೊಳ್ಳುವುದಾಗಿ ಹೇಳಿದರು. ಆದರೆ ಬಡ್ಜೆಟ್ ಎಸ್ಟಿಮೇಟ್, ಮೆಮೊರ್ಯಾಂಡಂ ಮೊದಲಾದುವನ್ನೆಲ್ಲ ನೋಡಿದರೆ ಅದಕ್ಕಾಗಿ ಎಲ್ಲೂ ಅವಕಾಶ ಮಾಡಿಲ್ಲ. ಎಲ್ಲಕ್ಕೂ ಹಿಂದುಳಿದ ಪ್ರದೇಶಕ್ಕೆ ಅದರಿಂದ ಹೆಚ್ಚು ಅನುಕೂಲವಾಗುತ್ತದೆ. ಅದಕ್ಕೆ ಸಮಾಧಾನ ಸಿಕ್ಕಬೇಕು. ಕಾರಂಜಿ ಪ್ರಾಜೆಕ್ಟನ್ನು ಲಗೂನ ತೆಗೆದುಕೊಳ್ಳಬೇಕು. ಮತ್ತೊಂದು ಮಾತು ಹೈದರಾಬಾದಿನವರು ಜಹರಾಬಾದ್ ನದಿಗೆ 25 ಲಕ್ಷ ಖರ್ಚುಮಾಡಿ ಒಂದು ಪ್ರಾಜೆಕ್ಟ್ ಮಾಡುತ್ತಿದ್ದಾರೆ, ಅದನ್ನು ಮಾಡಿದರೆ ನಮಗೆ ಅನ್ಯಾಯವಾಗುತ್ತದೆಂದು ಮುಖ್ಯ ಮಂತ್ರಿಗಳಿಗೆ ಮೆಮೊರ್ಯಾಂಡಂ ಅರ್ಪಿಸಿದೆವು. ಆ ವಿಚಾರದಲ್ಲಿ ಗಮನಕೊಡಬೇಕು. ಇದಲ್ಲದೆ ಮೈನರ್ ಇರಿಗೇಷನ್ ಬಗ್ಗೆ ನೋಡಿದರೆ ನಾನು ಒಂದು ಮಾತನ್ನು ಹೇಳಬೇಕಾಗಿದೆ

ಬಾವಿಯ ಸಲುವಾಗಿ ಎಷ್ಟು ಹಣಕೊಡುತ್ತಿದ್ದಾರೋ ಅದನ್ನು ತಾಲ್ಲೂಕು ಬೋರ್ಡುಗಳ ಮೂಲಕ ಹಂಚುತ್ತಲಿದ್ದಾರೆ.

ಇದರಲ್ಲಿರುವ Budget memorandum ಪುಟ 177ರಲ್ಲಿ 14 Tanks ಗಳಿವೆ. Seven not restored ಎಂದಿದೆ. ನಾಲ್ಕೈದು ಟ್ಯಾಂಕುಗಳ ರೆಸ್ಟೋರೇಷನ್ ಮಾಡುವುದಕ್ಕೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಸ್ಟಿಮೇಟು ಬಂದಿಲ್ಲ. ಇದಕ್ಕಾಗಿ ನಾನು ತಮ್ಮಲ್ಲಿ ನಮ್ರವಾಗಿ ಪ್ರಾರ್ಥನೆ ಮಾಡುವುದು ಆದಷ್ಟು ಎಲ್ಲ ಸ್ಕೀಮುಗಳನ್ನೂ ತೆಗೆದುಕೊಂಡು ಅದನ್ನು ಮುಗಿಸುವ ಪ್ರಯತ್ನ ಮಾಡಬೇಕು ಎಂದು ಸ್ಪಷ್ಟವಾಗಿ ಇಲ್ಲಿ ಹೇಳಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಬಾರ್ಡರು ಜಿಲ್ಲೆಯಾದ ನಮ್ಮ ಭಾಗದಲ್ಲಿ ಲಕ್ಷ ಕೊಟ್ಟು ಇಲ್ಲಿ ಆಗಬೇಕಾದ ಟ್ಯಾಂಕು ರೆಸ್ಟೋರೇಷನ್ನು ಮತ್ತು ಇನ್ನೂ ಕೆಲವು ಪ್ರಾಜೆಕ್ಟು ಪ್ರಾರಂಭವಾಗುವಂತೆ ಮಾಡುತ್ತಾರೆ ಎಂದು ಆಶಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಮಾಡುತ್ತೇನೆ.

B.R.R.B. Channel ವಿಚಾರದಲ್ಲಿ ನಾವು ಇನ್ನೂ ಕಟ್ಟೆಯನ್ನು ಕಟ್ಟಿ ಮಡಿಗಳನ್ನು ಮಾಡಿಲ್ಲಾ. ಭದ್ರ ರೈಟ್ ಬಾಂಕ ಚ್ಯಾನಲ್‌ನಲ್ಲಿ ಸುಮಾರು 3,000 ಎಕರೆಯಷ್ಟು ತರಿ ಭೂಮಿಯ ವಿಚಾರ ದಲ್ಲಿ ರೈತರು ಸಾಗುವಳಿಮಾಡಲು ಅನುಕೂಲಗಳನ್ನು ಕಲ್ಪಿಸಿ ಕೊಟ್ಟು ಪರಿಪೂರ್ಣವಾಗಿ ಸಾಗು ಮಾಡಲು ರೈತರನ್ನು ಮುಂದೆ ತರಬೇಕಾಗಿದೆ. ಇದಕ್ಕಾಗಿ ಸರಿಯಾದ ಡೈರೆಕ್ಷನ್ನನ್ನು ಸರಕಾರ ಕಳುಹಿಸಿಕೊಡಬೇಕು. ಈ ವರ್ಷ ಮುಂಗಾರು ಬೆಳೆಯನ್ನು ಬೆಳೆಯಲು ನೀರು ಒದಗಿಸಿಕೊಡು ತ್ತೀರಿ. ನೀರಿನ ಉಪಯೋಗ ಹೆಚ್ಚಾಗಿ ಮಾಡಿ ಹೇಗೆ ಅಭಿವೃದ್ಧಿ ಮಾಡಬೇಕು ಎನ್ನುವುದರ ಬಗ್ಗೆ ಕೆಲವು ಸಲಹೆಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಲ್ಲಿರುವ 30,000 ಎಕರೆಗಳಿಗೆ ನೀರನ್ನು ಕೊಡುತ್ತೇವೆ. ಆದರೆ ಈ ಮೂವತ್ತು ಸಾವಿರ ಎಕರೆ ಪೈಕಿ ಭೂಗುಣದಮೇಲೆ ಭತ್ತ, ಕಬ್ಬು ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯಲೇಬೇಕು ಎಂದು ಹೇಳಿದ್ದಾರೆ, ಇಷ್ಟು ಎಕರೆಗಳಲ್ಲಿ ಕಬ್ಬನ್ನು ಬೆಳೆಯಬೇಕೆಂದು ಮತ್ತು ಅದನ್ನು ಶಿವಮೊಗ್ಗದಲ್ಲಿರುವ ಸಕ್ಕರೆ ಕಂಪನಿಯವರು ಕೊಂಡು ಕೊಳ್ಳುತ್ತಾರೆಂದರೆ ಇದರ 45 ಮೈಲಿ ಟ್ರಾನ್ಸ್‌ಪೋರ್ಟ್ ಎಕ್ಸ್‌ಪೆಂಡಿಚರ್ ಮಾಡುವುದನ್ನು ಹೇಗೆ ಸುಧಾರಿಸುವುದು ? ಚನ್ನಗಿರಿ ತಾಲ್ಲೂಕಿನಲ್ಲಿಯೇ ಒಂದು ಸಕ್ಕರೆ ಕಾರ್ಖಾನೆಗಾಗಿ ಒಂದು ಸೊಸೈಟಿ ಮಾಡಿ ಸರಕಾರ ಎಷ್ಟು ದುಡ್ಡು ಬೇಕೋ ಅಷ್ಟನ್ನೂ ವಸೂಲು ಮಾಡಿ ನಾವು ಷೇರುಗಳನ್ನು ಪಡೆಯು ವುದಕ್ಕೆ ನಮ್ಮ ಜನರು ತಯಾರಾಗಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 1,50,000 ಜನ ಸಂಖ್ಯೆ ಇರುವ ಗ್ರಾಮಗಳಲ್ಲಿ ಯಾವ ಒಂದು ಇಂಡಸ್ಟ್ರಿಯನ್ನೂ ಮಾಡಲಿಲ್ಲ. ಏನೋ ತಮ್ಮ ಕಾಲ ದಲ್ಲಾದರೂ ಒಂದು ಇಂಡಸ್ಟ್ರಿ ಮಾಡಲು ಲಕ್ಷಕೊಡಬೇಕೆಂದು ಹೇಳುತ್ತೇನೆ. ಇದು ತಮಗೂ ಗೊತ್ತು. ಅಂತಹ ಒಂದು ಕೈಗಾರಿಕೆ ಮಾಡಿ ಕೀರ್ತಿ ಸಂಪಾದಿಸಬೇಕೆಂದು ಮನವಿಮಾಡಿ ಕೊಳ್ಳುತ್ತೇನೆ.

ರೈತರಿಗೆ ತರಿಯಾದರೆ ಉದ್ಧಾರವಾಗುತ್ತದೆ ಎಂದರೆ ಅವರಿಗೆ ಸರಿಯಾದ ದುಡ್ಡು, ಗೊಬ್ಬರ ಸಾಲ ಇತ್ಯಾದಿಗಳನ್ನು ಸಹಾಯಮಾಡಿಕೊಟ್ಟರೆ ಯಥೇಚ್ಛವಾಗಿ ಮತ್ತು ಚೆನ್ನಾಗಿ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯ. ಆದುದರಿಂದ ತಾವು ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತೀರಿ. ಆದರೆ ಅದು ರೈತರಿಗೆ ಸಕಾಲದಲ್ಲಿ ಹಣ ಪಾವತಿಯಾಗುವ ಹಾಗೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Agricultural Financial Corporation ಎಂದು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಾಡಿ ಅವರ ಮೂಲಕ ಅಡಕೆ ತೋಟದ ರೈತರಿಗೆ ಸಹಾಯ ಕೊಡುತ್ತಿದ್ದಾರೆಂದು ಕೇಳಿರತ್ತೇನೆ. ಅದರಂತೆ ನಮ್ಮ ತಾಲ್ಲೂಕಿನಲ್ಲಿರುವ ಅಡಿಕೆ ಸಾಗು ಮಾಡುವ ರೈತರಿಗೂ ಸಹಾಯಗಳನ್ನು ಸಾಲ ವಾಗಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಸಹಾಯಮಾಡಿದರೆ ಮುಂದೆ ರೈತರು ಧೈರ್ಯದಿಂದ ಕೆಲಸಮಾಡುತ್ತಾರೆ.

ಇರಿಗೇಷನ್ನು ಟ್ರ್ಯಾಕ್ಟ್ ರೋಡುಗಳನ್ನು ತಮ್ಮ ಇಲಾಖೆಯಿಂದ ಪಿ. ಡಬ್ಲ್ಯು. ಡಿ. ಗೆ ವಹಿಸಿದ್ದರು. ಈಗ ಪುನಃ ತಾವು ತೆಗೆದುಕೊಳ್ಳುತ್ತೀರೆಂದು ಕೇಳಿದ್ದೇನೆ. ಹಾಗೆ ತೆಗೆದು ಕೊಂಡರೆ ಸರಕಾರಕ್ಕೆ ನೂರಕ್ಕೆ ಇಪ್ಪತ್ತರಷ್ಟು ನಷ್ಟವಾಗುತ್ತದೆ. ಏಕೆಂದರೆ ನಿಮ್ಮ ಖಾತೆ ರೇಟಿಗಿಂತ P. W. D. ರೇಟು ಕಡಮೆ ಇರುತ್ತದೆ. ಅನಾವಶ್ಯಕವಾಗಿ ಕಂಟ್ರಾಕ್ಟು ದಾರರಿಗೂ ಓಡಾಟದಿಂದ ಖರ್ಚು ಹೆಚ್ಚಾಗುತ್ತದೆ. ಸರಕಾರಕ್ಕೂ ನಷ್ಟವಾಗುತ್ತದೆ. ಇದನ್ನು ತಾವು ಪರಿಶೀಲನೆ ಮಾಡಬೇಕು. ಹಾಲಿ ಇರುವಂತೆ P.W.D. ಯವರೇ ಕೆಲಸ ಮಾಡಬೇಕಾಗಿ ಕೋರುತ್ತೇನೆ. ಇನ್ನು ಮುಂದೆ ಭದ್ರಾವತಿಯಲ್ಲಿ ಸರ್ಕಲ್ ಆಫೀಸನ್ನು ವೈಂಡ್ ಅಪ್ ಮಾಡುತ್ತೀರಿ. ಇನ್ನು ಮೇಲೆ ಹೆಚ್ಚಿಗೆ ಇರಿಗೇಷನ್ನು ಟ್ರ್ಯಾಕ್ಟ್ ರೋಡು ಹೆಚ್ಚಿಗೆ ತೆಗೆದುಕೊಳ್ಳುವ ಹಾಗೆ ಕಾಣಿವುದಿಲ್ಲ.

(ಕುಂದೂರು ರುದ್ರಪ್ಪ)

ನಮ್ಮ ದನ ಕರುಗಳು ಓಡಾಡಲಿಕ್ಕೆ ಗಾಡಿಗಳು ಹೋಗಲು ರಸ್ತೆ ಇಲ್ಲದಿದ್ದರೆ ಬಹಳ ತೊಂದರೆ ಯಾಗುತ್ತದೆ. ಅನೇಕ ಕಡೆ ಸರ್ಕಾರ ಸ್ವೇಚ್ಛೆಯಾಗಿ ದುಡ್ಡು ಖರ್ಚು ಮಾಡುತ್ತಿದೆ. ರೋಡು ಟ್ಯಾಕ್ಸ್ ಬೆಟರ್ ಮೆಂಟ್ ಟ್ಯಾಕ್ಸ್, ಭೂಮಿಸೆಸ್ಸು, ಆಸೆಸ್ಸು, ಈ ಸೆಸ್ಸು ಎಂದು ವಸೂಲುಮಾಡಿ ಸರಕಾರ ಸರಿಯಾದ ರೋಡು ಮಾಡದಿದ್ದರೆ ನಮ್ಮ ಗತಿಯೇನು ? ಜೀವನ ಹೇಗೆ ಮಾಡುವುದು ? ನಾವೇನೋ ಇದರಿಂದ ಉದ್ಧಾರವಾಗುವಂತಿಲ್ಲ. ಟ್ರ್ಯಾಕ್ಟರುಗಳನ್ನೂ ಮತ್ತು ಬುಲ್ಡೋಜರ್‌ಗಳನ್ನೂ ಕೊಟ್ಟು ಭೂಮಿಯನ್ನು ಸರಿಪಡಿಸಲು ಸಹಾಯ ಮಾಡಬೇಕು. ಹೊಸದಾಗಿ Irrgation tract Road ನ್ನು ಕೇಳಿದರೆ ಈಗಾಗಲೇ ಫೈನಲ್ಲಾಗಿದೆ ಎಂದು ಹೇಳುತ್ತಾರೆ. ಇನ್ನು ರೋಡುಗಳನ್ನು ಬೇಗ ಮಾಡಲು ಯೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಿರೇ ಮಾಡಾಳಾನಲ್ ಆಫೀಸ್ ಬಿಲ್ಡಿಂಗ್ಸ್‌ಗಾಗಿ ಎಂದು ನಮ್ಮ ಭಾಗದಲ್ಲಿ ಸುಮಾರು 5 ಲಕ್ಷದಷ್ಟು ರೂಪಾಯಿ ಖರ್ಚು ಮಾಡಿ 112 ಬಿಲ್ಡಿಂಗ್ಸ್‌ಗಳನ್ನು ಕಟ್ಟಿಸಿದ್ದೀರಿ. ಇಲ್ಲಿ ಈಗ ಇವುಗಳು ಖಾಲಿಯಾಗಿ ಇವೆ. ಮಾನ್ಯ ವಿದ್ಯಾ ಮಂತ್ರಿಗಳು ಒಂದು ಸಾರಿ ಇಲ್ಲಿಗೆ ಬಂದಿದ್ದಾಗ ಈ ಖಾಲಿ ಬಿಲ್ಡಿಂಗು ಇರುವ ಭಾಗದಲ್ಲಿ ಒಂದು ಬೇಸಿಕ್ ಟ್ರೈನಿಂಗ್ ಸ್ಕೂಲ್ ಮಾಡುವುದಾಗಿ ಹೇಳಿ ಬಂದರು. ಈ ವರ್ಷದಿಂದಲಾದರೂ ಇಲ್ಲಿ ಬೇಸಿಕ್ ಟ್ರೈನಿಂಗ್ ಸ್ಕೂಲ್ ಆರಂಭ ಮಾಡಬೇಕೆಂದು ಕೇಳುತ್ತೇನೆ. 112 ಕಟ್ಟಡಗಳು ಕಟ್ಟಿ ಇಲ್ಲಿ ಈಗ ಇದ್ದ ಆಫೀಸನ್ನು ಅಬಾಲಿಷ್ ಮಾಡಿರುವುದರಿಂದ, 1,50,000 ದಷ್ಟು ಜನ ಸಂಖ್ಯೆ ಇರುವ ನಮ್ಮ ತಾಲ್ಲೂಕಿನಲ್ಲಿ ವ್ಯವಸಾಯದಲ್ಲಿ ತರಬೇತಿ ಪಡೆಯಲು ಇಂಡಸ್ಟ್ರಿಯಲ್ ಸ್ಕೂಲು ಅಥವಾ ಒಂದು ಅಗ್ರಿಕಲ್‌ಚರಲ್ ಕಾಲೇಜು ಮಾಡಬೇಕೆಂದು ಕೇಳುತ್ತೇನೆ. ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಬೇಸಿಕ್ ಟ್ರೈನಿಂಗ್ ಸ್ಕೂಲನ್ನು ಪ್ರಾರಂಭ ಮಾಡುವುದಾಗಿ ಹೇಳಿದ್ದರೂ, ಇನ್ನೂ ಅದು ಇಲ್ಲಿ ಪ್ರಾರಂಭವಾಗಲಿಲ್ಲ. ಈ ರೀತಿ ಸರಕಾರ ವಾಗ್ದಾನ ಮಾಡಿದಂತಹ ಕಾರ್ಯವನ್ನು ನೆರವೇರುವಂತೆ ಮಾಡಲು ಪ್ರಯತ್ನ ಮಾಡಬೇಕು.

ಶಾಂತಿಸಾಗರದ ಯೋಜನೆಯ ಕೆಳಗಡೆ 4,000 ಎಕರೆ ಅಚ್ಚುಕಟ್ಟು ಇರುತ್ತದೆ. ಹಾಗೂ 6,500 ಎಕರೆಯಷ್ಟು ವಿಸ್ತೀರ್ಣದಲ್ಲಿ ನೀರು ನಿಲ್ಲುತ್ತದೆ. ಹಾಲಿ ಈ ಕೆರೆಯಲ್ಲಿ 10,000 ಯೂನಿಟ್ಟು ನೀರು ನಿಂತಿದ್ದು ಕೋಡಿಯನ್ನು 3 ಅಡಿ ಕಡಿಮೆ ಮಾಡಿದ್ದಾಗ್ಯೂ ಇದರ ಕೆಳಗಿರುವ 4,000 ಎಕರೆಗೆ ತೊಂದರೆಯಿಲ್ಲದೆ ನೀರು ಸರಬರಾಜು ಮಾಡಬಹುದು. ಇದರ ಕೋಡಿಯನ್ನು ಕಡಮೆ ಮಾಡಿದರೆ 10,000 ಎಕರೆ ನೀರುಮುಳುಗಡೆಯಾಗುವುದು ತಪ್ಪುತ್ತದೆ. ಇದನ್ನು ಕಡಮೆ ಮಾಡಿದ್ದಾಗ್ಯೂ 4,000 ಎಕರೆಗೇನೂ ನೀರಿನ ತೊಂದರೆಯಿರುವುದಿಲ್ಲ. ಆಗ ಇಲ್ಲಿ ಉಳಿಯತಕ್ಕ 3,000 ಎಕರೆಯನ್ನು ಜಮೀನಿಲ್ಲದ ಜನರಿಗೆ ಹಂಚಿಕೆ ಮಾಡಬಹುದು. ಈಗ ಇಟ್ಟಿರತಕ್ಕ ಕೋಡಿಯ ಎತ್ತರದಿಂದ 18 ಊರುಗಳು ನೀರಿನಲ್ಲಿ ಮುಳುಗಡೆಯಾಗುತ್ತವೆ. ಈ ವಿಚಾರವನ್ನು ನಾವು ತಾರೀಖು ॥ 19-8-1958 ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಸ್ಥಳದಲ್ಲೇ ತೋರಿಸಿದ್ದೇವೆ. ಆ ಬಗ್ಗೆ ಸಂಬಂಧಪಟ್ಟ ಆಧಾರಗಳು ಈಗ ನನ್ನಲ್ಲಿವೆ. ಈ ವಿಚಾರದಲ್ಲಿ ಸರ್ಕಾರದವರು ರೈತರಿಗೆ ಆದಷ್ಟೂ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಸ್ವಾಮಿ : ಈಗ ಶಿವಮೊಗ್ಗಾ ಜಿಲ್ಲೆಯನ್ನು ಮೈಸೂರು ಡಿವಿಜನ್ನಿಗೆ ಸೇರಿಸಿದ್ದಾರೆ. ಇದರಿಂದ ಅಲ್ಲಿಯ ಜನರಿಗೆ ತುಂಬಾ ಅನಾನುಕೂಲವಾಗಿದೆ. ಈ ಅನಾನುಕೂಲವನ್ನು ತಪ್ಪಿಸುವುದಕ್ಕಾಗಿ ಇದನ್ನು ಬೆಂಗಳೂರು ಡಿವಿಜನ್ನಿಗೆ ವರ್ಗಾಯಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಸಣ್ಣ ನೀರಾವರೀ ಯೋಜನೆಗಳಿಗಾಗಿ 40 ಕೋಟಿ 60 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆಂದು ಕೇಳುತ್ತೇನೆ. ಆದರೆ ಇಲ್ಲಿ ಈ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ತಯಾರಿಸುವುದರಲ್ಲಿ ತುಂಬಾ ತಡವಾಗುತ್ತಿದೆ. 2-3 ವರ್ಷಗಳಾದರೂ ಪೇಪರುಗಳು ಜಾಗವನ್ನು ಬಿಟ್ಟು ಕದಲುವುದಿಲ್ಲ. ಇದರಿಂದ ಅನಾಯಾಸವಾಗಿ ಮಂತ್ರಿಗಳಿಗೆಲ್ಲಾ ಕೆಟ್ಟ ಹೆಸರು ಬರುತ್ತಿದೆ. ಹೀಗೆ ವೃಥಾ ಕಾಲವಿಳಂಬ ಮಾಡತಕ್ಕ ಅಧಿಕಾರಿಗಳ ಬಗ್ಗೆ ಏಕೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬಾರದೆಂದು ಕೇಳುತ್ತೇನೆ. ಸರಿಯಾಗಿ ಕೆಲಸ ಮಾಡದಿದ್ದರೆ ಸಂಬಳ ಸಾರಿಗೆಗಳನ್ನೇಕೆ ನಿಲ್ಲಿಸಬಾರದು ?

ಅಧ್ಯಕ್ಷರು.—ಸಂಬಳಗಳನ್ನು ನಿಲ್ಲಿಸಿದರೆ ಅವರು ಕೋರ್ಟಿಗೆ ಹೋಗುತ್ತಾರೆ.

ಶ್ರೀ ಕುಂದೂರು ರುದ್ರಪ್ಪ.—ಹಾಗೆ ಮಾಡಿದರೆ ಯಾರಿಗೆ ತೊಂದರೆ ? ಇನ್ನು ಈ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಲಾಗಿದ್ದ 40 ಕೋಟಿ 60 ಲಕ್ಷ ರೂಪಾಯಿಗಳಲ್ಲಿ ಇನ್ನೂ 13 ಕೋಟಿ ರೂಪಾಯಿಗಳು ಹಾಗೇ ಉಳಿದಿದೆ. ಇನ್ನು ನಮಗಿರುವುದೆಲ್ಲಾ ಕೇವಲ ಒಂದು ವರ್ಷ ಮಾತ್ರ. ಹೀಗಿರುವಾಗ ಇವರು ಅಷ್ಟೊಂದು ಹಣವನ್ನು ಹೇಗೆ ಖರ್ಚು ಮಾಡುತ್ತಾರೆ ? ಆ ಹಣ

ವನ್ನು ಸದ್ವಿನಿಯೋಗ ಮಾಡತಕ್ಕ ಶಕ್ತಿಯನ್ನು ಮಂತ್ರಿಗಳಿಗೆ ದೇವರು ಕೊಡಲೆಂದು ಹಾರೈಸಿ, ಸರ್ಕಾರದವರು ಆ ಹಣದಿಂದ ಸಾಧ್ಯವಾದಷ್ಟು ಅನುಕೂಲಗಳನ್ನು ರೈತರಿಗೆ ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಬೆಂಗಳೂರಿನಲ್ಲಿ ನೋಡಿದರೆ ಇಲ್ಲಿ ಹಗಲೂ ರಾತ್ರಿ ಒಂದೇ ಸಮನೆ ವಿದ್ಯುದ್ದೀಪಗಳು ಉರಿಯುತ್ತಿರುತ್ತವೆ. ಹಳ್ಳಿಗಳ ಕಡೆಯಿಂದ ಬರತಕ್ಕ ನಾವುಗಳು ವಿದ್ಯುಚ್ಛಕ್ತಿಯನ್ನು ಕೇಳಿದರೆ— ಕಂಬವಿಲ್ಲ, ತಂತಿಯಿಲ್ಲ, ಅದಿಲ್ಲ ಇದಿಲ್ಲ ಎಂದು ಒಂದು ಸಾವಿರ ತಕರಾರುಗಳನ್ನು ಹೇಳುತ್ತಿದ್ದಾರೆ. ನಮಗೆ ಕೊಡಬೇಕೆಂದರೆ ಇವೆಲ್ಲಾ ಮುಂದೆ ಬರುತ್ತವೆ. ಹಳ್ಳಿಗಳನ್ನು ದಿಲ್ಲಿಯಾಗಿ ಮಾಡಬೇಕು ಎಂದು ಬಾಯಲ್ಲಿ ಹೇಳುತ್ತಾರೆ. ಕಾರ್ಯತಃ ಮಾಡುತ್ತಿಲ್ಲ. ಇನ್ನಾದರೂ ಈ ವಿದುಚ್ಛಕ್ತಿಯ ಸಂಪತ್ತನ್ನು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿಗೆ ಒದಗಿಸುತ್ತಾರೆಂದು ನಾನು ಆಶಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಿಗೆ ಅಗತ್ಯವಾಗಿ ಬೇಕಾಗಿರತಕ್ಕ ಪಂಪ್‌ಸೆಟ್, ಪವರನ್ನು ಮತ್ತು ಅವುಗಳಿಗೆ ಬೇಕಾದ ಸಾಮಾನುಗಳನ್ನು ತಾಲ್ಲೂಕ್ ಬೋರ್ಡುಗಳ ಮೂಲಕ ಒದಗಿಸಿ ರೈತರಿಗೆ ಹಂಚಿಕೆಯಾಗುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗಾಗಲೇ ಭದ್ರಾ ಛಾನಲ್ ಮುಗಿಯುತ್ತಾ ಬಂದಿದೆ. ಎಲ್ಲೆಲ್ಲಿ ಈ ಛಾನಲ್ ಹೋಗುತ್ತದೋ ಅಲ್ಲಲ್ಲಿ ಸೀಳು ಕಾಲುವೆಗಳನ್ನು ಸರ್ಕಾರದವರೇ ತೆಗೆಸಿ ಅಲ್ಲಲ್ಲಿರತಕ್ಕ ಜನರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ ಬೇಗ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಛಾನಲ್ ಏರಿಯಾದಲ್ಲಿ ನೀರಿನ ಹಂಚಿಕೆಯ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ಜನರು ಒಬ್ಬರಿಗೊಬ್ಬರು ಅನಾಯಾಸವಾಗಿ ಹೊಡೆದಾಡಿಕೊಂಡು ಕೋರ್ಟಿಗೆ ಹೋಗುತ್ತಿದ್ದಾರೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ 1,500 ಪ್ರಜಾಸಂಖ್ಯೆ ಇದೆ. ಅಲ್ಲಿ ಅನೇಕರಿಗೆ ಉಳುವುದಕ್ಕೆ ಜಮೀನಿಲ್ಲ. ಅಲ್ಲಿರತಕ್ಕ ಮೈನರ್ ಫಾರೆಸ್ಟಿನಲ್ಲಿ, ಹೆಸರಿಗಾದರೂ ಹೇಳಲು ಒಂದು ಮರ ಮಂಡಿಯಿಲ್ಲ. ಅರ್ಜಿ ಹಾಕಿದರೆ ಜಮೀನಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಒಂದಾವರ್ತಿ ಸರ್‌ಪ್ರೈಜ್ ವಿಜಿಟ್ ಕೊಟ್ಟು ಇದನ್ನು ಪರಿಶೀಲನೆ ಮಾಡಿ ಅಲ್ಲಿರತಕ್ಕ ಭೂರಹಿತ ಜನರಿಗೆ ಭೂಮಿಯನ್ನು ಕೊಡಿಸಿಕೊಟ್ಟು ಅವರಿಗೆ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಉಬ್ರಾಣಿ ಹೋಬಳಿಯಲ್ಲಿ ಇಂಥ ಅವಕಾಶವಿದೆ. ಮಲಹಾಳ್, ಹೆದ್ನಿರಿ ಫಾರೆಸ್ಟಿನಲ್ಲಿ ಮರಗಳಿಲ್ಲದ ಪ್ರದೇಶ ಬಹಳವಾಗಿದೆ. ಮಂತ್ರಿಗಳೆಲ್ಲರೂ ಹಳ್ಳಿಗಳಿಂದಲೇ ಬಂದವರಾಗಿದ್ದಾರೆ. ಹಳ್ಳಿಯವರ ತೊಂದರೆಗಳೇನೆಂಬುದು ಅವರಿಗೆಲ್ಲಾ ಚೆನ್ನಾಗಿ ಗೊತ್ತಿದೆ. ಮಂತ್ರಿಗಳು ಈ ವಿಚಾರಕ್ಕೆ ಗಮನ ಕೊಟ್ಟಲ್ಲಿ ಹಳ್ಳಿಯವರಿಗೆಲ್ಲಾ ತುಂಬಾ ಅನುಕೂಲವಾಗುತ್ತದೆ. ಇನ್ನು ನಮ್ಮ ತಾಲ್ಲೂಕಿನಲ್ಲಿ 30 ಸಾವಿರ ಎಕರೆ ತರೀ ಜಮೀನಿವೆ. ಅಲ್ಲಿಗೆ ಒಂದು ಪ್ಯಾಕೇಜ್ ಸ್ಕೀಮ್ ಪ್ರೋಗ್ರಾಮನ್ನು ಮಾಡಿದರೆ, ಅಲ್ಲಿಗೆ ಸರಿಯಾಗಿ ಬೀಜ, ಗೊಬ್ಬರ, ಉಪಕರಣಗಳನ್ನು ಒದಗಿಸಿದರೆ ಬಹಳ ಅನುಕೂಲವಾಗುತ್ತದೆಂದು ಹೇಳಿ ಅಧ್ಯಕ್ಷರು ನನಗಿಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ತೆರಿಗೆಗಳ ವಿಚಾರಕ್ಕೆ ಬಂದರೆ—ಈ ವರ್ಷ ಈ ಅದರ್ ಟ್ಯಾಕ್ಸಸ್ ಕೆಳಗಡೆ 40 ಲಕ್ಷಕ್ಕಿಂತಲೂ ಹೆಚ್ಚಿಗೆ ಬಾಕಿ ಉಳಿದಿದೆ. ಈ ಬಾಕಿ ಯಾವತ್ತೂ ಐದು ಪರ್ಸೆಂಟಿಗಿಂತ ಜಾಸ್ತಿಯಾಗುಳಿದರೆ ಪರವಾ ಇಲ್ಲ. ಆಗ ಈ ಅಡ್ಮಿನಿಷ್ಟ್ರೇಷನ್ ವ್ಯವಸ್ಥೆ ಒಂದು ರೀತಿಯಲ್ಲಿ ಸರಿಯಾಗಿ ನಡೆಯುತ್ತಿದೆಯೆಂದು ಹೇಳಬಹುದು. ನಮ್ಮ ಕಲೆಕ್ಷನ್ 90 ಪರ್ಸೆಂಟಿಗೇರುವಂತೆ ಮಾಡಲು ಈ ದಿವಸ ಖಂಡಿತ ಸಾಧ್ಯವಿಲ್ಲ. ಇದು ಏತಕ್ಕೆ ಹೀಗಾಗುತ್ತಿದೆಯೆಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಅಧಿಕಾರಿಗಳ ಸಂಖ್ಯೆಯೇನೋ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಕಲೆಕ್ಷನ್ ಮಾತ್ರ ಬಿದ್ದುಹೋಗುತ್ತಿದೆ. ಇದನ್ನು ಯಾರೇ ನೋಡಲಿ ಮಧ್ಯೆ ಏನೋ ಒಂದು ದುರ್ವ್ಯವಹಾರ ನಡೆಯುತ್ತಿದೆಯೆಂದು ಹೇಳದೆ ಇರಲಾರರು. ತೆರಿಗೆಯ ಮೂಲ ಸ್ವರೂಪ ಹೇಗಿದೆಯೆಂದರೆ: ನಮ್ಮ ವಸೂಲಿಯು ದಿನದಿನಕ್ಕೂ ಕಡಮೆಯಾಗುತ್ತಿದ್ದು ಮೂಲ ಟ್ಯಾಕ್ಸಿನ ಶೇಕಡಾ ಐದಕ್ಕಿಂತ ಶಿಬ್ಬಂದಿಯ ವೆಚ್ಚ ಯಾವಾಗ ಜಾಸ್ತಿಯಾಗುತ್ತದೋ ಆಗ ಸರ್ಕಾರದವರು ಕೂಡಲೆ ಎದ್ದು ಕುಳಿತುಕೊಳ್ಳಬೇಕು. ಇಲ್ಲಿಗೆ ಬರತಕ್ಕ ಸದಸ್ಯರಾದರೂ ಈ ವಿಚಾರಗಳನ್ನೆಲ್ಲಾ ಚೆನ್ನಾಗಿ ಮನವರಿಕೆಮಾಡಿಕೊಂಡು ಬಂದಿರುವುದರಿಂದಲೇ ಅವರು ಈ ವಿಚಾರದಲ್ಲಿ ಅನೇಕ ಕಟ್‌ಮೋಷನ್‌ಗಳನ್ನು ಕೊಟ್ಟಿರುತ್ತಾರೆ. ಇನ್ನು ಮಾನ್ಯ ಸದಸ್ಯರು ಬಹಳ ಪರಿಶ್ರಮದಿಂದ ಕೆಲವು ಖೋತಾ ಸೂಚನೆಗಳನ್ನು ಕಳುಹಿಸುತ್ತಾರೆ. ಅವನ್ನು ಸರ್ಕಾರದವರು ಚೆನ್ನಾಗಿ ಅಧ್ಯಯನಮಾಡಿ ಏತಕ್ಕಾಗಿ ಅವನ್ನು ಕಳುಹಿಸಿದ್ದಾರೆ; ಅವನ್ನೇನು ಮಾಡಬೇಕು ಎಂಬೀ ವಿಚಾರದಲ್ಲಿ ಸರ್ಕಾರದವರು ನಿಜವಾಗಿ ಮತ್ತು ಆಳವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

Mr. SPEAKER.—The House will now rise to meet again at 2-30 P.M.

The House adjourned at Thirty Minutes past One of the Clock and re-assembled at Thirty Minutes past Two of the Clock.

[MR. SPEAKER in the Chair.]

ಶ್ರೀ ವಿ. ಎಂ. ದೇವ್.—ಇವತ್ತು ಒಂದು ಕೂಗು ಕೇಳುತ್ತಾ ಇದೆ. ಎರಡು ಕನ್ನಡನಾಡು ವಿಭಾಗವಾಗಬೇಕು ಎಂದು. ಮೊನ್ನೆ ಮದ್ರಾಸ್ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಕಾಮರಾಜ್ ಅವರು ರಾಜೀನಾಮೆ ಕೊಟ್ಟರು. ಇದರ ಹಿನ್ನೆಲೆ ಏನೇ ಇರಲಿ, ಅಲ್ಟಿಮೇಟಾಗಿ ಅನಾಲಿಸಿಸ್ ಮಾಡುವುದಾದರೆ, ...

Mr. SPEAKER.—That analysis is not necessary on the floor of this House.

ನಾನು ಹೇಳುವುದು ಇಷ್ಟೆ. ನಾವು ಯಾವ ಕೆಲಸವನ್ನು ಮಾಡಬೇಕಾದರೂ ಕೂಡ ನಾವು ಇಂಥಾ ಒಂದು ಅಪಾಯಕಾರೀ ಸ್ಥಿತಿಯಲ್ಲಿರುವಾಗ ಇದನ್ನು ಯೋಚನೆಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದು ಆ ಕೆಲಸವನ್ನು ಮಾಡಬೇಕಾಗುತ್ತದೆ.

ಇನ್ನು ಕೊನೆಯದಾಗಿ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅದು ಏನೆಂದರೆ ನನ್ನ ತಾಲ್ಲೂಕಿಗೆ ನೀರು ಸಿಕ್ಕುವ ವಿಚಾರ. ಶ್ರೀಮಾನ್ ಬೈರಪ್ಪಾಜಿಯವರು ಹೇಳಿದಹಾಗೆ ಗೊರೂರು ಹತ್ತಿರ ಹೇಮಾವತಿ ಮತ್ತು ಯಗಚಿ ನದಿಗೆ ಒಂದು ಎತ್ತರವಾದ ಅಣೆಕಟ್ಟನ್ನು ಕಟ್ಟಿದರೆ ಅದರಿಂದ ಎರಡು ಮೂರು ತರಹ ಉಪಯೋಗವಾಗುತ್ತದೆ. ಕೃಷ್ಣರಾಜಸಾಗರಕ್ಕೆ ಏನಾದರೂ ನೀರು ಖೋತಾ ಬಂದಾಗ ಅದಕ್ಕೆ ಫೀಡ್ ಮಾಡಿಕೊಳ್ಳಬಹುದು. ಮತ್ತು ಆ ಪ್ರದೇಶದಲ್ಲಿ ತರೀ ವ್ಯವಸಾಯವನ್ನೂ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈಗ ಆ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡಬೇಕೆಂದು ಹೇಳುತ್ತಿದ್ದಾರೆ. ಮೊದಲು ಆ ಅಣೆಕಟ್ಟಿನ ಎಸ್ಟಿಮೇಟು 14 ಕೋಟಿ ರೂಪಾಯಿ ಇತ್ತು ಈಗ ಅದು ನಾಲ್ಕು ಕೋಟಿ ರೂಪಾಯಿಗಳಿಗೆ ಇಳಿದಿದೆ ಎಂದು ಹೇಳುತ್ತಿದ್ದಾರೆ. ಮುಂದೆ ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದು ಒಂದು ಅಗಾಧವಾದ ಪ್ರಶ್ನೆಯಾಗಿದೆ. ಆದ್ದರಿಂದ ಸರ್ಕಾರದವರು ಇದನ್ನು ಕೂಲಂಕಷವಾಗಿ ಯೋಚನೆಮಾಡಿ ಇದರ ಬಗ್ಗೆ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ.

ಇನ್ನು ಈ ಇಲಾಖೆಗಳ ಮುಖಾಂತರ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳಿಗೆ ಏನು ಹಣವನ್ನು ಒದಗಿಸುತ್ತಾರೆಯೋ ಅದನ್ನು ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಒದಗಿಸಿ ಅವುಗಳ ಮುಖಾಂತರ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿ ಅವು ಮುಂದೆ ಬರುವ ಹಾಗೆ ಮಾಡಿದರೆ ಒಳ್ಳೆಯದು. ಆ ರೀತಿ ಮಾಡುವುದಾದರೆ ನಾವು ಇನ್ನೂ ಹೆಚ್ಚಿನ ಕಾರ್ಯವನ್ನು ಸಾಧಿಸಬಹುದು ಎಂಬುದು ನನ್ನ ಅಭಿಪ್ರಾಯ. ಇಷ್ಟು ಹೇಳಿ ನನಗೆ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮುಂದೆ ಇರತಕ್ಕ ತೆರಿಗೆಗಳು, ಸಾಮಾನ್ಯ ಆಡಳಿತ, ನೀರಾವರಿ, ಜಲಯಾನ, ಕಟ್ಟೆ ಕಾಮಗಾರಿಗಳು ಹಾಗೂ ವಿದ್ಯುಚ್ಛಕ್ತಿ ಯೋಜನೆಗಳ ಮೇಲಿನ ಬಂಡವಾಳ ವೆಚ್ಚ ಮುಂತಾದ ಮೂರು ನಾಲ್ಕು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳ ಮೇಲೆ ಚರ್ಚೆ ನಡೆಯುತ್ತಿದೆ. ಈ ಖಾತೆಗಳಲ್ಲಿ ಕೆಲವು ಮುಖ್ಯಮಂತ್ರಿಗಳಿಗೆ ಸೇರಿವೆ. ನಾನು ಹಿಂದೆ ಒಂದು ಸಾರಿ ಮಾತನಾಡುವಾಗ ಹೇಳಿದ್ದೆ, ಈ ರಾಜ್ಯದಲ್ಲಿ ಆಡಳಿತ ಬಿಗಿಯಾಗಬೇಕಾದರೆ ಅಧಿಕಾರಿಗಳ ಪ್ರಮೋಷನ್ ಮತ್ತು ಸೀನಿಯಾರಿಟಿ ಲಿಸ್ಟು ಇವುಗಳ ಕಡೆ ನಿಗಾ ಕೊಟ್ಟು ಅದನ್ನು ಆದಷ್ಟು ಬೇಗ ಬಗೆಹರಿಸಬೇಕು. ಈಗ ಮುಖ್ಯಮಂತ್ರಿಗಳು ಯಾವ ಯಾವ ಖಾತೆಗಳನ್ನು ಇಟ್ಟುಕೊಂಡಿದ್ದಾರೆಯೋ ಅವುಗಳನ್ನು ಸಹೋದ್ಯೋಗಿಗಳಿಗೆ ವಹಿಸಬೇಕು. ಮುಖ್ಯಮಂತ್ರಿಗಳು ಜನರಲ್ ಅಡ್ಮಿನಿಸ್ಟ್ರೇಷನ್ ಮಾತ್ರಾ ಇಟ್ಟುಕೊಂಡು ಬಾಕಿ ಯಾವ ಯಾವ ಖಾತೆಗಳು

ಯಾವ ರೀತಿ ಕೆಲಸಮಾಡುತ್ತಿವೆ ಎನ್ನತಕ್ಕ ಸೂಪರ್‌ವಿಜನ್ ನೋಡಿಕೊಂಡರೆ ಸಾಕು ಎಂದು ನಾನು ಈ ಸಭೆಯಲ್ಲಿ ಅರಿಕೆಮಾಡಿಕೊಂಡಿದ್ದೆ. ಆದರೆ ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪವೂ ಯೋಚನೆ ಮಾಡಿದಹಾಗೆ ಕಾಣುವುದಿಲ್ಲ. ನಾನು ಈಗ ಮತ್ತೊಮ್ಮೆ ಅವರನ್ನು ಕೇಳಿಕೊಳ್ಳುತ್ತೇನೆ. ಈಗ ಅವರಿಗೆ ಇರತಕ್ಕ ಕಾರ್ಯವತ್ತಡದಲ್ಲಿ ಈಗ ಅವರು ಇಟ್ಟುಕೊಂಡಿರತಕ್ಕ ಎಲ್ಲಾ ಖಾತೆಗಳ ಆಡಳಿತವನ್ನೂ ನೋಡಿಕೊಳ್ಳುವುದು ಕಷ್ಟ. ಆದ್ದರಿಂದ ಅವರು ಜನರಲ್ ಅಡ್ಮಿನಿಸ್ಟ್ರೇಷನ್ ಮಾತ್ರ ಇಟ್ಟುಕೊಂಡು ಈಗ ಅವರ ವಶದಲ್ಲಿರತಕ್ಕ ಎಲ್ಲ ಖಾತೆಗಳನ್ನೂ ತಮ್ಮ ಸಹೋದ್ಯೋಗಿಗಳಿಗೆ ಕೊಡುವುದು ಒಳ್ಳೆಯದು ಎಂದು ನಾನು ಮತ್ತೊಮ್ಮೆ ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅವರು ಆ ರೀತಿ ಮಾಡುವುದಾದರೆ ಅವರಿಗೆ ಮತ್ತಷ್ಟು ಶಕ್ತಿ ಬರುತ್ತದೆ. ಮತ್ತು ಅವರಿಗೆ ಒಂದು ಹೊಸ ಚೈತನ್ಯ ಬಂದು ನಿರೀಕ್ಷೆಮಾಡಿದಷ್ಟು ಕಾರ್ಯವನ್ನು ಅವರು ಸಾಧಿಸಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ನಾನು ಮೊದಲು ಸಾಮಾನ್ಯ ಆಡಳಿತದ ಮೇಲೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಮಾಡುತ್ತೇನೆ. ನಾವು ಸಾಮಾನ್ಯ ಆಡಳಿತದಿಂದ ಯಾವ ಒಂದು ತತ್ವವನ್ನು, ಯಾವ ಒಂದು ಫಲವನ್ನು ನಿರೀಕ್ಷಣೆ ಮಾಡಿದ್ದೆವೋ ಅದು ದೊರಕಿಲ್ಲ. ಜನತೆಗೆ ಏನನ್ನು ಸರ್ಕಾರದವರು ಕೊಡಬೇಕೆಂದು ಹೊರಟಿದ್ದರೋ ಅದನ್ನು ಕೊಡುವುದಕ್ಕೆ ಇನ್ನೂ ತಡವಾಡತಕ್ಕದ್ದು ಸರಿಯಿಲ್ಲ. ಸಾಮಾನ್ಯ ಆಡಳಿತದ ವಿಚಾರದಲ್ಲಿ ಇವೊತ್ತು ಜನತೆ ನಮ್ಮ ರಾಜ್ಯದಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ, ಸರ್ಕಾರದ ಆಡಳಿತದಲ್ಲಿ ಇವೊತ್ತು ಎಷ್ಟು ಬಿಗಿ ಇರಬೇಕೋ ಅಷ್ಟು ಬಿಗಿ ಇಲ್ಲದೆ ಆಡಳಿತ ಯಂತ್ರ ಸ್ವಲ್ಪ ಶಿಥಿಲವಾಗಿದೆ ಎಂದು ಹೇಳುತ್ತಿದ್ದಾರೆ. ನಾನು ಇವೊತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನಮಾಡುತ್ತೇನೆ; ಅವರು ಏನು ಜನತೆಗೆ ಒಳ್ಳೆಯದನ್ನು ಮಾಡಬೇಕೆಂದು ಹೊರಟಿದ್ದಾರೆಯೋ ಏನು ಕಲ್ಯಾಣವನ್ನು ಮಾಡಬೇಕೆಂದು ಹೊರಟಿದ್ದಾರೆಯೋ, ಅದು ಸಾಧನೆಯಾಗಿಲ್ಲ ಎಂದು. ಇವೊತ್ತು ಬೆಳಿಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಮಾತನಾಡುತ್ತಾ ಹೇಳಿದರು: ಒಂದು ದಿವಸಕ್ಕೆ ಎಷ್ಟು ಫೈಲುಗಳನ್ನು ಡಿಸ್‌ಪೋಜ್ ಆಫ್ ಮಾಡುತ್ತಾರೆ ಎನ್ನುವ ಬಗ್ಗೆ ರಿಪೋರ್ಟುಗಳನ್ನು ತರಿಸಿದ್ದೇವೆ ಎಂದು. ಒಬ್ಬ ನೌಕರರ ಸೀನಿಯಾರಿಟಿಗೆ ಸಂಬಂಧಪಟ್ಟ ಫೈಲನ್ನು ಡಿಸ್‌ಪೋಸ್ ಆಫ್‌ಮಾಡಿದೆ, ಒಬ್ಬ ನೌಕರರ ಟ್ರಾನ್ಸ್‌ಫರಿಗೆ ಸಂಬಂಧಪಟ್ಟ ಫೈಲನ್ನು ಡಿಸ್‌ಪೋಜ್ ಆಫ್‌ಮಾಡಿದೆ, ಒಬ್ಬ ನೌಕರರ ಐದು ರೂಪಾಯಿ ಅಲೋಯನ್ಸ್ ಕೊಡುವ ಫೈಲನ್ನು ಡಿಸ್‌ಪೋಜ್ ಆಫ್‌ಮಾಡಿದೆ ಎಂದು ಹೇಳಿದರೆ ಅದು ಅಷ್ಟು ಪ್ರಾಮುಖ್ಯವಲ್ಲ. ಅದನ್ನು ನಾನು ಒಪ್ಪುವುದಿಲ್ಲ. ನಾನು ಕೇಳುವುದೇನೆಂದರೆ ಎಲ್ಲಿ ಕೆರೆ ಆಯಿತು, ಎಲ್ಲಿಗೆ ರಸ್ತೆಯನ್ನು ಕೊಟ್ಟಿರಿ, ಎಷ್ಟು ಬಾವಿಗಳನ್ನು ಕೊಟ್ಟಿದ್ದೀರಿ, ಎಷ್ಟು ಭೂಮಿ ಸಾಗಾಗಿದೆ, ಎಷ್ಟು ಆಹಾರವನ್ನು ಹೆಚ್ಚಿಗೆ ಬೆಳೆದಿದ್ದಾರೆ ಎನ್ನುವ ಕಡೆ ಗಮನವನ್ನು ಕೊಟ್ಟು ಆ ದಾರಿಯಲ್ಲಿ ಎಷ್ಟು ಕಾಗದಗಳನ್ನು ಡಿಸ್‌ಪೋಜ್ ಆಫ್ ಮಾಡಿದ್ದೀರಿ ಎಂದು ಹೇಳುವುದಾದರೆ ನಾನು ನಿಜವಾಗಿಯೂ ಮಾನ್ಯ ಮಂತ್ರಿಗಳಿಗೆ ಋಣಿಯಾಗಿರುತ್ತೇನೆ.

ಇನ್ನು ಡಿವಿಜನಲ್ ಕಮಿಷನರ ಆಫೀಸು ಬೇಡ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಈ ಡಿವಿಜನಲ್ ಕಮಿಷನರ ಆಫೀಸು ತಮ್ಮ ಕಾಲದಲ್ಲಿಯೇ ಜನ್ಮ ತಾಳಿತು. ಆಗ ಈ ಡಿವಿಜನಲ್ ಕಮಿಷನರ ಆಫೀಸು ಬೇಡ, ಇದು ಪೋಸ್ಟ್ ಆಫೀಸ್ ಕೆಲಸವಾಗುತ್ತದೆ. ಕೆಲಸ ಸ್ಟ್ಯಾಗ್ನೇಟ್ ಆಗುತ್ತದೆ; ಪ್ರತಿಯೊಂದು ಕಾಗದವೂ ಡೆಪ್ಯುಟಿ ಕಮಿಷನರ ಮುಖಾಂತರವೇ ಸರ್ಕಾರಕ್ಕೆ ಬರಬೇಕಾಗುತ್ತದೆ ಎಂದು ನಾವು ಹೇಳಿದೆವು. ಆಗ ಅವರು ಇದು ದೊಡ್ಡ ರಾಜ್ಯ, ಪ್ರತಿಯೊಂದು ಕೆಲಸಕ್ಕೂ ಬೀದರ್‌ನಿಂದ ಬೆಂಗಳೂರಿಗೆ ಬರಬೇಕಾಗುತ್ತದೆ; ಬೆಳಗಾಮಿನಿಂದ ಬೆಂಗಳೂರಿಗೆ ಬರಬೇಕಾಗುತ್ತದೆ. ಹೀಗೆ ಬಹಳ ದೂರದಿಂದ ಬೆಂಗಳೂರಿಗೆ ಬರುವುದಕ್ಕೆ ಬಹಳ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಡಿವಿಜನಲ್ ಕಮಿಷನರ ಆಫೀಸು ಇದ್ದರೆ ಆಯಾ ಡಿವಿಜನ್ನಿನವರು ಅವರವರ ಕೆಲಸಗಳನ್ನು ಅಲ್ಲಲ್ಲಿಯೇ ಮಾಡಿಕೊಳ್ಳಬಹುದು ಎಂದು ಹೇಳಿದರು. ಈ ಡಿವಿಜನಲ್ ಕಮಿಷನರುಗಳ ಆಫೀಸುಗಳನ್ನು ಸ್ಥಾಪನೆಮಾಡಿ ಏಳು ವರ್ಷಗಳಾಯಿತು. ಈ ಆಫೀಸುಗಳು ಬರೀ ಪೋಸ್ಟ್ ಆಫೀಸುಗಳಾಗಿವೆಯೇ ಹೊರತು ಇವುಗಳಿಂದ ಅಷ್ಟೇನು ಪ್ರಯೋಜನವಾಗಿಲ್ಲ. ಈ ಡಿವಿಜನಲ್ ಕಮಿಷನರಿಂದ ಕಾಗದಗಳ ಡಿಸ್‌ಪೋಜಲ್ ಕಡಿಮೆಯಾಗಿದೆ. ಪ್ರತಿಯೊಂದಕ್ಕೂ ಡೆಪ್ಯುಟಿ ಕಮಿಷನರಿಗೇ ಬರೆಯಬೇಕು, ಪ್ರತಿಯೊಂದಕ್ಕೂ ಡೆಪ್ಯುಟಿ ಕಮಿಷನರಿಗೇ ಟೆಲಿಫೋನ್ ಮಾಡಬೇಕು. ಆದ್ದರಿಂದ ಡಿವಿಜನಲ್ ಕಮಿಷನರ ಆಫೀಸುಗಳು ಹೋಗಬೇಕು ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಕಾಂಗ್ರೆಸ್ ಪಾರ್ಟಿ ಸಭೆಯಲ್ಲಿ ಡಿವಿಜನಲ್ ಕಮಿಷನರ್ ಆಫೀಸ್ ಇರಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದಾರೆಂದು ಪತ್ರಿಕೆಯಲ್ಲಿ ನಾನು ಓದಿದ್ದೇನೆ. ಇದರ ಬಗ್ಗೆ ವಿವರ ಹೇಳಬೇಕು. ಇನ್ನು ಅಡಿಷನಲ್ ಡೆಪ್ಯುಟಿ ಕಮಿಷನರ್ ಹುದ್ದೆ ಇರುವುದು ಬೇಡ ಎಂದು ಹೇಳಬೇಕಾಗಿದೆ. ಒಂದು ಜಿಲ್ಲೆಗೆ ಇಬ್ಬರು ಅಧಿಕಾರಿಗಳು ಇರುವುದು ಸರಿಯಿಲ್ಲ, ಒಬ್ಬ ಗಂಡನಿಗೆ ಇಬ್ಬರು ಹೆಂಡತಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದ್ದ ಹಾಗೆ ಆಗುತ್ತದೆ, ಮತ್ತು ತೊಂದರೆಯಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಪ್ಯಾಕೇಜ್ ಸಿಸ್ಟಂ ಎಲ್ಲಿ ಇದೆಯೋ ಅಲ್ಲಿ ಇವರನ್ನು ಇಡಬಹುದು. ಪ್ರತಿಯೊಂದು ಜಿಲ್ಲೆಗೆ ಇಟ್ಟುಕೊಂಡರೆ ಮೂಗಿಗಿಂತ ಮೂಗುತಿ ಭಾರ ಎಂದು ಹೇಳುವ ಹಾಗೆ ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತದೆ. ಅಡಿಷನಲ್ ಡೆಪ್ಯೂಟಿ ಕಮಿಷನರ್ ಹುದ್ದೆ ಯಾರಿಗೂ ಅಪ್ಯಾಯಮಾನವಾಗಿಲ್ಲ, ಇದು ಬೇಡ ಎಂದು ಹೇಳುತ್ತೇನೆ. ಸರಕಾರಪಡೆಯುವ ಹಣ ಅಧಿಕಾರಿಗಳಿಗೆ ಕೊಡಬೇಕೆಂಬುದು ಸರಕಾರದ ಉದ್ದೇಶವೇ? ಅಧಿಕಾರಿಗಳಿಗೋಸ್ಕರ ಈ ಹುದ್ದೆಗಳನ್ನು ಸೃಷ್ಟಿ ಮಾಡುತ್ತೀರಾ? ಅಧಿಕಾರಿಗಳಿಗಾಗಿ ಸರಕಾರ ನಡೆಯುತ್ತಿದೆಯೇ? ಸಾಮಾನ್ಯ ಜನರಲ್ಲಿ ಇಂಥ ಭಾವನೆ ಬೇರೂರಿದೆ. ಇದನ್ನು ದೂರ ಮಾಡುವುದು ಅಗತ್ಯ. ಡೆಪ್ಯೂಟಿ ಕಮೀಷನರ್ ಆಫೀಸಿನಲ್ಲಿ ರಾಜಕೀಯ ನಡೆಯುತ್ತಿದೆ ಎಂದು ಕೇಳಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಅದರಲ್ಲಿ ನೀವೂ ಸೇರುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡೆವಲಪ್‌ಮೆಂಟ್ ಕಮಿಷನರ್ ಮೀಟಿಂಗಿಗೆ ಕರೆದರೆ ಮಾತ್ರ ಹೋಗುತ್ತೇನೆ, ಒಂದು ಮಾತು ಹೇಳುತ್ತೇನೆ. ಎಗ್ಸಿಕ್ಯೂಟಿವ್‌ನಲ್ಲಿ ಮಾತ್ರ ರಾಜಕೀಯ ಕೈ ಹಾಕಬಾರದು. ಕಾರ್ಯಾಂಗದಲ್ಲಿ ರಾಜಕೀಯ ಪ್ರವೇಶ ಮಾಡಿದರೆ ನಿರ್ದಿಷ್ಟವಾದ ಫಲ ದೊರೆಯುವುದಿಲ್ಲ. ನಾನು ನೋಡಿದ್ದೇನೆ. ಕೆಲವರು ಗುಪ್ತವಾಗಿ ರಾಜಕೀಯ ಮಾಡುತ್ತಾರೆ. ಅಂಥವರನ್ನು ಬಂದೋಬಸ್ತಿನಲ್ಲಿಡಬೇಕೆಂದು ನಾನು ಮುಖ್ಯ ಮಂತ್ರಿಗಳಿಗೆ ಅರಿಕೆ ಮಾಡಿಕೊಳ್ಳುತ್ತೇನೆ. ಕೋಲಾರ ಡೆಪ್ಯೂಟಿ ಕಮೀಷನರ್ ಅವರು ಸರಕಾರವೇ ಇಲ್ಲ ಎಂಬ ಭಾವನೆ ಇಟ್ಟುಕೊಂಡಿದ್ದಾರೆ. ತಾವೇ ಅಧಿಕಾರ ನಡೆಸುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಒಬ್ಬರು ಇದ್ದಾರೆ. ಅವರನ್ನು ಟ್ರಾನ್ಸ್‌ಫರ್ ಮಾಡಲಾಗುತ್ತದೆಂದು ಕೇಳಿದ್ದೇನೆ. ನಾನು ಒಂದು ಸೂಚನೆ ಮಾಡುತ್ತೇನೆ. ದೊಡ್ಡ ಜಿಲ್ಲೆಗೆ ಇವರನ್ನು ನೇಮಕ ಮಾಡಿ ಇವರಿಗೆ ಅಧಿಕಾರ ಕೊಟ್ಟರೆ ಇವರಿಗೆ ಅರ್ಹತೆ ಸಾಲದು. ಆದುದರಿಂದ ಪ್ರತಿಯೊಂದು ಜಿಲ್ಲೆಗೆ ಅಧಿಕಾರಿ ನೇಮಕ ಮಾಡುವಾಗ ಅವರ ಅನುಭವ ಎಷ್ಟು, ಅವರ ಕ್ಯಾಪಾಸಿಟಿ ಎಷ್ಟು, ಎಷ್ಟರಮಟ್ಟಿಗೆ ಕೆಲಸ ಮಾಡಬಹುದು ಎನ್ನುವುದನ್ನು ನೋಡಿ ಹಾಕಬೇಕು. ಅಂಥವರು ವಿಧಾನ ಸೌಧದಲ್ಲಿ ಕೆಲಸ ಮಾಡಬಹುದು. ಈ ನಮ್ಮ ಚೀಫ್ ಸೆಕ್ರೆಟರಿಯವರು ಎಫೀಶಿಯಂಟಾದವರು, ಅನ್‌ಬಿಯಾಸ್ಡ್ ಆದವರು ಇದ್ದಾರೆ. ಅಂಥವರ ಜೊತೆಗೆ ಕುಳಿತು ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಯಾಕೆಂದರೆ ಚೀಫ್ ಸೆಕ್ರೆಟರಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ. ಅಂಥವರ ಜೊತೆಗೆ ಕೆಲಸ ಮಾಡಿದರೆ ಸೋಮಾರಿತನ ಹೋಗಿ ಚಟುವಟಿಕೆಯಿಂದ ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಮತ್ತು ಬುದ್ಧಿವಂತರಾಗಿ ದಕ್ಷರಾಗುತ್ತಾರೆ. ಆದುದರಿಂದ ಜಿಲ್ಲಾಧಿಕಾರಿಗಳನ್ನು, ಬುದ್ಧಿವಂತರಾದವರನ್ನು, ದಕ್ಷರಾದವರನ್ನು ಹಾಕಬೇಕು ಎಂದು ನನ್ನ ಅಭಿಪ್ರಾಯ. ಇದನ್ನು ಸರಕಾರ ಯೋಚನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಜಾರಿಗೆ ತರುವ ವಿಚಾರದಲ್ಲಿ ಅಸಿಸ್ಟೆಂಟ್ ಕಮಿಷನರ ಅವರ ಒಂದು ಹೊಸ ಹುದ್ದೆಯನ್ನು ಕ್ರಿಯೇಟ್ ಮಾಡಬೇಕೆಂದು ಇದ್ದಿತು. ಆದರೆ ಲ್ಯಾಂಡ್ ರಿಫಾರ್ಮ್ಸ್ ಕೈ ಬಿಟ್ಟಂತಾಗಿದೆ ಎಂದು ಕಾಣುತ್ತದೆ. ಆದುದರಿಂದ ಈಗ ಇರತಕ್ಕಂಥ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಏನು ಕೆಲಸ ಇದೆ? ಪ್ರೊಜೆಕ್ಟ್ ಎಗ್ಸಿಕ್ಯೂಟಿವ್ ಆಫೀಸರು ಆಗಿ ನಾಲ್ಕು ಎಕರೆ ಭೂಮಿ ಕೊಡುವುದರ ಹೊರತು ಬೇರೆ ಏನೂ ಕೆಲಸ ಅವರಿಗೆ ಇಲ್ಲ. ರೀ ಆರ್ಗನೈಜ್ ಮಾಡುವುದು ಏತಕ್ಕೆ ಸಾಧ್ಯವಾಗಿಲ್ಲ? ಇದನ್ನು ಯೋಚನೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಹುದ್ದೆ ಕೂಡ ಇದು ಒಂದು ಪೋಸ್ಟ್ ಆಫೀಸು ಇದ್ದ ಹಾಗೆ ಇದೆ. ಯಾವ ತಾಲ್ಲೂಕಿನಲ್ಲಿ ನೋಡಿದರೂ ಕೂಡ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಏನೇನೂ ಕೆಲಸವಿಲ್ಲ. ಅವರಿಗೆ ಬೇಕಾದರೆ ಸಂಬಳ ಕೊಡಬಹುದು. ಅವರನ್ನು ಬೇರೆ ಕಡೆ ಕೆಲಸಕ್ಕೆ ಡೈವರ್ಟ್ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಆದುದರಿಂದ ಅಸಿಸ್ಟೆಂಟ್ ಕಮಿಷನರ್ ವಿಷಯದಲ್ಲಿಯೂ ಕೂಡ ಸರಕಾರ ದೀರ್ಘವಾಗಿ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಡಿಸ್ಟ್ರಿಕ್ಟುಗಳನ್ನು, ತಾಲ್ಲೂಕುಗಳನ್ನು ರೀಆರ್ಗನೈಜ್ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಗುಡಿಬಂಡೆ ತಾಲ್ಲೂಕಿನಲ್ಲಿ 22,000 ಜನಸಂಖ್ಯೆ ಇದೆ. ಅದೂ ಒಂದು ತಾಲ್ಲೂಕು. ತುಮಕೂರು ತಾಲ್ಲೂಕಿನಲ್ಲಿ ಒಂದೂ ಮುಕ್ಕಾಲು ಲಕ್ಷ ಜನಸಂಖ್ಯೆ ಇದ್ದರೂ ಕೂಡ ಅದೂ ಒಂದು ತಾಲ್ಲೂಕು. 27,000 ಜನಸಂಖ್ಯೆ ಇದ್ದರೂ ಕೂಡ ಅದೂ ಒಂದು ತಾಲ್ಲೂಕು. ಆದುದರಿಂದ ಜಿಲ್ಲೆಗಳನ್ನೂ, ತಾಲ್ಲೂಕುಗಳನ್ನು ರೀಆರ್ಗನೈಜ್ ಮಾಡಬೇಕು. ಅಡ್ಮಿನಿಸ್ಟ್ರೇಷನ್ ವೈಯಬಲ್ ಯೂನಿಟ್ ಮಾಡಬೇಕು, ಒಂದು ಲಕ್ಷ, ಒಂದೂವರೆ ಲಕ್ಷ ಜನಸಂಖ್ಯೆ ಇರುವ ತಾಲ್ಲೂಕಿಗೆ ಖರ್ಚು ಮಾಡುವುದು ಅಷ್ಟೇ, ಹಾಗೂ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಿಗೆ ಖರ್ಚು ಮಾಡುವುದೂ

ಅಷ್ಟೇ. ಇದು ಸರಿಯಲ್ಲ. ಆದುದರಿಂದ ಒಂದು ಸರಿಯಾದ ತಳಹದಿಯ ಮೇಲೆ ಸರಿಯಾಗಿ ರೀ ಆರ್ಗನೈಜ್ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿಧಾನ ಸೌಧದ ಬಗ್ಗೆ ಒಂದು ಸಣ್ಣ ವಿಷಯ ಸರಕಾರದ ಗಮನಕ್ಕೆ ತರುತ್ತೇನೆ. ಹಳ್ಳಿಗಳಿಂದ ಬರತಕ್ಕಂಥ ಜನರು ತಮ್ಮನ್ನು ನೋಡಬೇಕು, ಮಂತ್ರಿಗಳನ್ನು ನೋಡಬೇಕು ಎಂದು ವಿಧಾನ ಸೌಧಕ್ಕೆ ಬಂದರೆ ಇಲ್ಲಿ ಅವರಿಗೆ ಬಹಳ ಕಷ್ಟ ಇದೆ. ವಿಧಾನ ಸೌಧದಲ್ಲಿ ಮಂತ್ರಿಗಳನ್ನು ಕಾಣುವುದಕ್ಕೆ ಬಿಡುವುದಿಲ್ಲ. ಡಿಸಿಪ್ಲಿನ್ ಎನ್‌ಫೋರ್ಸ್ ಮಾಡಬೇಕೆಂದು ಚೀಫ್ ಸೆಕ್ರೆಟರಿಯವರು ಮಾಡಿರತಕ್ಕಂಥಾದ್ದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಬಂದಂಥ ಜನರು ಬಹಳ ಹೊತ್ತು ಕಾಯಬೇಕಾಗುತ್ತದೆ. ಒಂದೊಂದು ಸಲ ಮಂತ್ರಿಗಳು ಇದ್ದಾರೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಅಲ್ಲದೆ ಮಂತ್ರಿಗಳ ಭೇಟಿಯಾಗುವುದಕ್ಕೆ ಅವಕಾಶ ದೊರೆಯುವುದಿಲ್ಲ. ಮರಳಿ ಅವರು ಊರಿಗೆ ಹೋಗುವುದಕ್ಕೂ ಸಾಧ್ಯವಾಗುವುದಿಲ್ಲ. ಎಲ್ಲಿಯೋ ಮರದ ಕೆಳಗೆ ಇರಬೇಕಾಗುತ್ತದೆ. ಆದುದರಿಂದ ವಿಧಾನ ಸೌಧಕ್ಕೆ ಮಂತ್ರಿಗಳನ್ನು ನೋಡುವುದಕ್ಕೆ ಬಂದರೆ ಅವರು ಯಾವಾಗ ಬರಬೇಕು ಮತ್ತು ವೇಳೆಯ ಅವಧಿಯನ್ನು ಸ್ವಲ್ಪ ಸಡಿಲ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಯಾಕೆಂದರೆ ಹಳ್ಳಿಗಾಡಿನಿಂದ ತಮ್ಮನ್ನು ನೋಡಲಿಕ್ಕೆ ಬಂದರೆ ಬಹಳ ಕಷ್ಟವಾಗುತ್ತದೆ. ತಮ್ಮನ್ನು ಕಾಣುವುದು ಸುಲಭವಾಗುವ ಹಾಗೆ ಮಾಡುವುದಕ್ಕೆ ಯೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೆವೆನ್ಯೂ ಡಿಮ್ಯಾಂಡ್ ಬಗ್ಗೆ ಹೇಳುವುದಾದರೆ ಡಿಸ್ಪೋಸಲ್ ಆಫ್ ದರಖಾಸ್ತು ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಡೆಪ್ಯೂಟಿ ಕಮಿಷನರ್ ಆಫೀಸಿನಲ್ಲಿ ತಕರಾರು ಕೊಟ್ಟರೆ ದರಖಾಸ್ತು ಬಗ್ಗೆ ಬಹಳ ಡಿಲೇ ಆಗುತ್ತಾ ಇದೆ. ರೆವೆನ್ಯೂ ಮಂತ್ರಿಗಳಿಗೆ ತಾವು ಒಂದು ಮಾತು ಹೇಳಬೇಕು. ತಾಲ್ಲೂಕು ಆಫೀಸ್, ಸಬ್‌ಡಿವಿಜನಲ್ ಆಫೀಸಿಗೆ ಸರ್‌ಪ್ರೈಜ್ ವಿಜಿಟ್ ಕೊಟ್ಟು ಇನ್‌ಸ್ಪೆಕ್ಷನ್ ಮಾಡಬೇಕು ಎಂದು ಹೇಳಬೇಕು. ಸರಕಾರದ ಬಗ್ಗೆ ಅವರಿಗೆ ಭಯ ಬರಬೇಕು. ಯಾವದೇ ಅಧಿಕಾರಿ ಇರಲಿ ಅವರಿಗೆ ಸರಕಾರದ ಭಯ ಇರಬೇಕು. ಹೀಗೆ ಭಯ ಇದ್ದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಈಗ ಎಲ್ಲಾ ಕಡೆ ಡಿಸ್‌ಆರ್ಡರ್ ಆಗಿದೆ. ಸರಕಾರವೇ ಇಲ್ಲಾ, ಯಾರೂ ಇಲ್ಲಾ, ನಾವೇ ಸ್ವೇಚ್ಛಾಚಾರವಾಗಿ ಏನುಬೇಕಾದರೂ ಮಾಡಬಹುದು ಎಂಬ ಭಾವನೆ ಅಧಿಕಾರಿಗಳಿಗೆ ಬಂದಿದೆ. ಇದು ಒಳ್ಳೆಯದಲ್ಲ. ಇದನ್ನು ನಿವಾರಣೆಮಾಡಬೇಕು. ಸರಕಾರ ಇದೆ ಎಂದು ತೋರಿಸಿ ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಸೀನಿಯಾರಿಟಿ ಗೊತ್ತು ಪಡಿಸುವುದರ ಬಗ್ಗೆ ಒಂದು ಕೂಗು ಇದೆ. ಬೇಕಾದವರಿಗೆ ಅನುಕೂಲವಾಗಿದೆ ಎಂಬ ಭಾವನೆ ಜನರ ಮನಸ್ಸಿನಲ್ಲಿ ಬಂದಿದೆ. ಜನ ಏನು ಅನ್ನುತ್ತಾರೆ ಎಂಬುದನ್ನು ತಮಗೆ ತಿಳಿಸಬೇಕಾಗಿದೆ. ಬೇಕಾದವರಿಗೆ ರಕ್ಷಣೆ ಕೊಡುವುದು, ಬೇಡವಾದವರಿಗೆ ಇಲ್ಲಾ ಹೀಗೆ ನನ್ನ ಕಡೆ ಅನೇಕ ತಕರಾರುಗಳು ಬಂದಿವೆ. ಇದರ ಬಗ್ಗೆ ಬಹಿರಂಗವಾಗಿ ಮುಖ್ಯ ಮಂತ್ರಿಗಳು ಸರಕಾರದ ನಿಲುವನ್ನು ದೇಶದ ಮುಂದೆ ಇಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಎಲ್ಲ ವಿವರ ಕೊಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ತಮಗೆ ತಿಳಿಸಬಯಸುತ್ತೇನೆ. ನಿಮ್ಮ ಖಾತೆಯಲ್ಲಿ ಅನ್ಯಾಯ ನಡೆದಿಲ್ಲ ಎಂಬುದನ್ನು ತಿಳಿಸಬೇಕು. ಆದರೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಮೈನರ್ ಇರಿಗೇಶನ್‌ನಲ್ಲಿ ಒಬ್ಬ ಚೀಫ್ ಇಂಜಿನಿಯರ್ ಅವರನ್ನು ಮಾಡಿದ್ದೀರಿ. ಟೆಕ್ನಿಕಲ್ ಎಜ್ಯುಕೇಶನ್ ಡೈರೆಕ್ಟರ್ ಹಾಗು ಮೇಜರ್ ಇರಿಗೇಶನ್ನಿಗೆ ಒಬ್ಬರನ್ನೇ ಮಾಡಿದ್ದೀರಿ. ಈ ಪ್ರತಿಯೊಂದು ಭಾಗಕ್ಕೆ ಒಬ್ಬೊಬ್ಬರನ್ನು ಇಡಬೇಕು. ಕೃಷ್ಣ, ಕಾವೇರಿ, ಘಟಪ್ರಭಾ, ಮಲಪ್ರಭಾ, ಕಾಳಿ ನದಿ ಮೊದಲಾದ ಹತ್ತು ಕೋಟಿ, ಐದು ಕೋಟಿ, ರೂಪಾಯಿ ಖರ್ಚುಮಾಡತಕ್ಕ ಪ್ರೊಜೆಕ್ಟುಗಳಿಗೆ ಒಬ್ಬ ಚೀಫ್ ಎಂಜಿನಿಯರ್ ಇರಬೇಕು. ಅವರಿಗೆ ಟೆಕ್ನಿಕಲ್ ಎಜ್ಯುಕೇಶನ್ ಕೊಟ್ಟಿರುವುದು ಸಮಾಧಾನಕರವಾಗುವುದಿಲ್ಲ. ಇವು ದೊಡ್ಡ ಯೋಜನೆಗಳು. ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಕೆಲಸ ಕಾರ್ಯ ಮಾಡಿದರೆ ಎಲ್ಲವೂ ಸರಿಹೋಗುತ್ತದೆ.

ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ, ಅವರು ನಮಗೂ ನಿಮಗೂ ಬೇಕಾದವರು. ಆದರೆ ಈ ದೇಶದಲ್ಲಿ ಸರಕಾರಕ್ಕೂ ತಮ್ಮ ಮಂತ್ರಿ ಮಂಡಲಕ್ಕೂ ಅಪಕೀರ್ತಿ ಸಂಭವಿಸುವ ರೀತಿಯಲ್ಲಿ ಅವರು ರಾಜಕೀಯದಲ್ಲಿ ಕೈಹಾಕುತ್ತಾರೆ. ಅವರಿಗೆ ಇನ್ನೂ ಚಿಕ್ಕ ವಯಸ್ಸು, ಆದರೂ ಅವರು ಎಷ್ಟು ರಾಜಕೀಯವನ್ನು ಮಾಡುತ್ತಾರೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಮುಖ್ಯ ಮಂತ್ರಿಗಳು ಅವರಿಗೆ ಸಹಾಯ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಆದರೆ ಆ ಮಹನೀಯರು ಹೊರಗಡೆ ಮುಖ್ಯ ಮಂತ್ರಿಗಳು ನಮಗೆ ಬೇಕಾದವರು, ನನ್ನ ಮೇಲೆ ಯಾರು ಕೈಹಾಕುತ್ತಾರೋ ನೋಡೋಣ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಮೇಜರ್ ನೀರಾವರಿ ಚೀಫ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಂಜಿನಿಯರ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಮೇಜರ್ ನೀರಾವರಿ ಚೀಫ್ ಇಂಜಿನಿಯರ ಹುದ್ದೆ ಮತ್ತು ಟೆಕ್ನಿಕಲ್ ಎಜ್ಯುಕೇಷನ್ ಡೈರೆಕ್ಟರ ಹುದ್ದೆ ಇವುಗಳನ್ನು ಬೇರೆ ಬೇರೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

3-00 P.M.

ಇನ್ನು ಸರ್ವೀಸ್‌ನಲ್ಲಿ ಎಕ್ಸ್‌ಟೆನ್‌ಷನ್ ಯಾರಿಗೂ ಕೊಡಬಾರದು. ಚಿಕ್ಕವಯಸ್ಸಿನವರನ್ನು ತಾಸೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ ಹುದ್ದೆಗಳಿಗೆ ಪ್ರೊಬೇಷನರುಗಳಾಗಿ ತೆಗೆದುಕೊಂಡಿದ್ದಾರೆ. ಆದರೂ ಕೂಡ ಯಾರು ನಿವೃತ್ತರಾಗಬೇಕೋ ಅವರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತಾರೆ. ಇದು ಸರಿಯಾದ ನೀತಿಯಲ್ಲ. ಟೆಕ್ನಿಕಲ್ ಆಫೀಸರುಗಳಿಗೆ ವಿನಾ ಬೇರೆಯವರಾರಿಗೂ ಎಕ್‌ಟೆನ್‌ಷನ್ ಕೊಡುವುದಿಲ್ಲವೆಂದು ಹೇಳುತ್ತಾ ಬೇರೆಯವರಿಗೂ ಕೊಟ್ಟಿದ್ದಾರೆ. ಚೀಫ್ ಇಂಜಿನಿಯರು ಸೂಪರಿಂಟೆಂಡಿಂಗ್ ಇಂಜಿನಿಯರಿಗಿಂತಲೂ ತುಂಬಾ ಉತ್ತಮರು ಎನಿಸಿಕೊಂಡಿದ್ದರೆ ಅಂಥವರಿಗೆ ಬೇಕಾದರೆ ಪ್ರೋತ್ಸಾಹ ಕೊಡಿ, ಅವರೆ ಸಾಮಾನ್ಯವಾಗಿ ಬೇರೆ ಯಾರಿಗೂ ಕೊಡಬಾರದು. ನಾನು ಇಲ್ಲಿಗೆ ಬರುವಾಗ ಒಬ್ಬರು ಒಂದು ಮಾತು ಹೇಳಿದರು. ಅನಿಮಲ್ ಹಸ್ಬೆಂಡ್ರಿ ಡೈರೆಕ್ಟರು ಮತ್ತು ಚೀಫ್ ಇಂಜಿನಿಯರ್ ಫಾರ್ ಕಮ್ಯುನಿಕೇಷನ್ಸ್ ಮುಖ್ಯ ಮಂತ್ರಿಗಳಲ್ಲಿ ಓಡಾಡುತ್ತಿದ್ದಾರೆ, ಅವರಿಗೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳುತ್ತಾರೆ, ಎಂದು ಹೇಳಿದರು. ಆಗ ನಾನು ಈ ಮಾತನ್ನು ಇಲ್ಲಿಗೇ ಬಿಡಿ, ಇನ್ನೊಂದು ಸಾರಿ ಈ ಮಾತನ್ನು ಹೇಳಬಾರದು ಎಂದು ಅವರಿಗೆ ಹೇಳಿದೆ......

ಅಧ್ಯಕ್ಷರು.—ಹಾಗೆ ಹೇಳಬಾರದೆಂದು ಅವರಿಗೆ ಮಾನ್ಯ ಸದಸ್ಯರು ಬುದ್ಧಿವಾದ ಹೇಳಿದಮೇಲೆ, ಅವರು ಹೇಳುವುದು ನಿಜವಲ್ಲ, ಅವರು ತಪ್ಪು ಮಾತನಾಡುತ್ತಾರೆ ಎನ್ನುವುದು ಅರ್ಥವಾಯಿತು. ಹಾಗಾದಮೇಲೆ ಅದನ್ನು ಇಲ್ಲಿ ಹೇಳಬಾರದು. ಅವರು ಹೀಗೆ ಹೇಳಿದರು ಎಂದು ಅವರು ಹೇಳಿದುದನ್ನು ಇನ್‌ವರ್ಟೆಡ್ ಕಾಮದಲ್ಲಿ ಹಾಕುವಂತೆ ಇಲ್ಲಿ ಮಾನ್ಯ ಸದಸ್ಯರು ಹೇಳಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಳ್ಳೆಯ ಜನರನ್ನು ಎಷ್ಟುಮಟ್ಟಿಗೆ ಎಕ್ಸ್‌ಪ್ಲಾಯ್ಟ್ ಮಾಡುತ್ತಾರೆಂಬುದನ್ನು ಹೇಳಿದೆ. ಅವರು ಹೇಳಿದುದರಲ್ಲಿ ಎಳ್ಳಷ್ಟು ಕೂಡ ಸತ್ಯಾಂಶವಿಲ್ಲವೆಂದು ನನಗೆ ಭರವಸೆ ಇದೆ. ಆದರೆ ಜನ ಹಾಗೆ ಹೇಳುತ್ತಿದ್ದಾರೆ. ಇದು ಬಹಳ ಲೂಸ್ ಟಾಕ್. ಹೀಗೆ ಮಾತನಾಡುವವರಿಗೆ ಗೌರವ ಬರುವುದಿಲ್ಲ. ಆದರೂ ಮುಖ್ಯ ಮಂತ್ರಿಗಳು ಇನ್ನೂ ಸ್ವಲ್ಪ ಬಿಗಿಯಾಗಬೇಕು ; ಬಿಗಿಮಾಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮನ್ನೇ ಬಿಗಿ ಮಾಡುವುದಕ್ಕಾಗಲಿಲ್ಲ. (ನಗು.)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನನ್ನು ಬಿಗಿ ಮಾಡಬಲ್ಲಿರಿ, ಹೊರಗೆ ಜನರಲ್ಲಿ ಸಣ್ಣ ಪುಟ್ಟ ಮಾತುಗಳು ಬರುತ್ತವೆ, ವೈಲ್ಡ್ ರೂಮರ್ಸ್ ಬರುತ್ತವೆ. ಜನರಲ್ಲಿ ಇಂತಹ ಭಾವನೆ ಬರಬಾರದು. ಈ ವಿಷಯದಲ್ಲಿ ಸರಕಾರ ಬಿಗಿಯಾಗಿರಬೇಕು. ಮೈನರ್ ನೀರಾವರಿ ಮತ್ತು ಚೀಫ್ ಇಂಜಿನಿಯರ್ (ಜನರಲ್) ಅವರು ನಿವೃತ್ತಿಯಾಗುವ ಕಾಲದಲ್ಲಿ ಅವರ ಬಗ್ಗೆ ಇಲ್ಲಿ ನಾನು ಏನೂ ಹೇಳುವುದಿಲ್ಲ. ಅವರ ಪೂರ್ವ ಚರಿತ್ರೆಯನ್ನು ಹೇಳಿ ಅವರ ಮನಸ್ಸನ್ನು ನೋವು ಮಾಡಬೇಕೆಂಬ ಇಚ್ಛೆ ನನಗಿಲ್ಲ ; ಪ್ರತ್ಯೇಕವಾಗಿ ಹೇಳುತ್ತೇನೆ, ಅವರ ವಿಷಯದಲ್ಲಿ ಸರಕಾರದ ದೃಷ್ಟಿ ಸ್ವಲ್ಪ ಹೊರಳಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಎಲ್ಲವೂ ಸರಿಯಾಗಿಲ್ಲ. ರಾಜಕೀಯ ಜಿಲ್ಲಾಧಿಕಾರಿಗಳ ಮಟ್ಟದಲ್ಲಿದೆಯೆಂದು ನಾನು ಹೇಳಿದಾಗ ಅದಕ್ಕೆ ನೀವೂ ಸೇರಿದ್ದೀರಿ ಎಂದು ಹೇಳಿದಿರಿ. ಆದರೆ ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಯಾವುದೂ ಸರಿಯಿಲ್ಲ. ಅಲ್ಲಿನ ಚೇರ್ಮನ್ ಅವರು 1951-55ರಲ್ಲಿ ಈ ದೇಶದ ಮಂತ್ರಿಯಾಗಿದ್ದರು.........

Mr. SPEAKER.—If the Hon'ble Member is making any allegations against any officer, I think I have pointed out the Rule the other day.

Sri C. J. MUCKANNAPPA.—I am not making any allegation, Sir.

ಅಲ್ಲಿ ರಾಜಕೀಯ ನಡೆಯುತ್ತಿದೆ ; ವ್ಯವಹಾರಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಮಾತ್ರ ಹೇಳಿದೆ ಬೇರೇನೂ ಹೇಳಲಿಲ್ಲ. ಹಣಕಾಸುಗಳನ್ನು ಏನು ಮಾಡುತ್ತಾರೆ, ಎಲ್ಲಿ ಡಿಪಾಜಿಟ್ ಮಾಡುತ್ತಾರೆ, ಹೇಗೆ ಎಂಬುದು ವಿದ್ಯುಚ್ಛಕ್ತಿ ಬೋರ್ಡಿನ ವರದಿಯಲ್ಲಿ ಬಂದಿದೆ, ಅದನ್ನು ಹೇಳುತ್ತೇನೆ. ಅಲ್ಲಿ ಕೆಲಸ ಕೊಡುವಾಗ, ಪ್ರಮೋಷನ್ ಕೊಡುವಾಗ, ಮುಖ್ಯ ಮಂತ್ರಿಗಳ ಹೆಸರನ್ನು ಈಚೆಗೆಳೆದಿದ್ದಾರೆ ; ಈ ಬಗ್ಗೆ ನನ್ನಲ್ಲಿ ಕಾಗದ ಪತ್ರಗಳಿವೆ.

ಶ್ರೀ ಎಸ್. ನಿಜಲಿಂಗಪ್ಪ.—ಅಂತಹ ಕಾಗದವಿದ್ದರೆ ಮಾನ್ಯ ಸದಸ್ಯರು ತರಲಿ.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ಒಬ್ಬ ಡಿಪ್ಲೊಮ ಹೋಲ್ಡರನ್ನು ಎಗ್ಸಿಕ್ಯೂಟಿವ್ ಇಂಜಿನಿಯರಾಗಿ ಮಾಡಿದ್ದಾರೆ. ವಿದ್ಯುಚ್ಛಕ್ತಿ ಬೋರ್ಡಿನ ಮೇಲೆ, ಅಲ್ಲಿನ ಆಡಳಿತವರ್ಗದ ಮೇಲೆ ಪ್ರಭಾವ ಬೀರಿದರು ಕಾನೂನಿಗೆ ವಿರೋಧವಾಗಿ ಮಾಡಿದರು, ಯಾವುದೋ ಸಂದರ್ಭದಲ್ಲಿ ಅವರಿಂದ ಇವರಿಗೆ ಅನುಕೂಲ ವಾದುದರಿಂದ ಹೀಗೆ ಮಾಡಿದರು ಎಂಬ ಸಮಾಚಾರ ಬಂದಿದೆ. ಈ ವಿಷಯ ಹೈಕೋರ್ಟಿನಲ್ಲಿರುವುದ ರಿಂದ ನಾನು ಹೆಚ್ಚು ಹೇಳುವುದಿಲ್ಲ. ಈ ವಿಷಯವೇನೆಂಬುದನ್ನು ನಾನು ತಮಗೆ ಈಗಲೇ ಬೇಕಾದರೆ ಕೊಡುತ್ತೇನೆ. ಹೈಕೋರ್ಟಿನ ತೀರ್ಮಾನಕ್ಕೆ ಬದ್ಧರಾಗಿರುತ್ತಾರೆಂದು ಹೇಳಿದ ಮೇಲೆ ನಾನು ಹೆಚ್ಚು ಹೇಳುವುದಿಲ್ಲ.

ವಿದ್ಯುಚ್ಛಕ್ತಿ ಪಂಪುಗಳನ್ನು ಎಷ್ಟು ಸರ್ವಿಸ್ ಕೊಟ್ಟಿದ್ದಾರೆ? ಮತ್ತು ಎಷ್ಟು ಹೆಚ್ಚು ಮಾಡಿ ದ್ದಾರೆಂಬ ಬಗ್ಗೆ ಉತ್ತರ ಹೇಳಿದ್ದಾರೆ. ಉತ್ತರ ಭಾಗಕ್ಕೆ ಹೋದರೆ ವಿದ್ಯುಚ್ಛಕ್ತಿ ಡ್ರಾಪ್ ಇದೆ, ಎಷ್ಟು ಶಕ್ತಿ ಬೇಕೋ ಅಷ್ಟು ಇಲ್ಲದೆ ಪಂಪುಗಳು ಕೆಲಸ ಮಾಡುತ್ತಿಲ್ಲ. ಸಾವಿರಾರು ಎಕರೆಗಳಿಗೆ ಪಂಪುಗಳು ಕೆಲಸ ಮಾಡದೆ ನೀರೆತ್ತುವುದಕ್ಕೆ ಸಾಧ್ಯವಾಗದೆ, ಟ್ರಾನ್ಸ್‌ಫಾರ್ಮರುಗಳೂ ಇಲ್ಲದೆ ಬಹಳ ಕಷ್ಟವಾಗಿದೆ. ನನ್ನ ತಾಲ್ಲೂಕು ಒಂದರಲ್ಲಿ 250 ಪಂಪುಗಳ ಸರ್ವಿಸ್ ಆಗಬೇಕು. ಸುಮಾರು 4,500 ಎಕರೆಗೆ ತೊಂದರೆಯಾಗಿದೆ, ವೋಲ್ಟೇಜ್ ಡ್ರಾಪ್ ಆಗುತ್ತಿದೆ. ವಿದ್ಯುಚ್ಛಕ್ತಿ ಬೋರ್ಡ್ ಚೇರ್ಮನ್‌ಗೆ ಹೇಳಿದೆ, ಬೋರ್ಡಿನವರಿಗೆ ಹೇಳಿದೆ, ಯಾರೂ ಅದಕ್ಕೆ ನಿಗಾ ಕೊಡಲಿಲ್ಲ. ಅವರನ್ನು ಕೇಳಿದರೆ ಸಾಮಾನು ಇಲ್ಲವೆಂದು ಹೇಳುತ್ತಾರೆ. ವಿದ್ಯುಚ್ಛಕ್ತಿ ಬೋರ್ಡಿನ ಸ್ಟೋರ್ಸ್ ಇದೆ. ಇವರು ಹೆಚ್ಚು ಸಾಮಾನು ಬೇಕೆಂದು ಇಂಡೆಂಟ್ ಮಾಡಬೇಕು. ಯಾವತ್ತು ಬೇಕೋ ಆ ಹೊತ್ತು ಕೊಡುವುದಕ್ಕೆ ಸಿದ್ಧವಾಗಿರಬೇಕು. ಈ ಹೊತ್ತು ಬೇಕೆಂದರೆ ಇನ್ನು 15 ದಿವಸಗಳ ಮೇಲೆ ಕೊಡುತ್ತಾರೆ.

ಇಲೆಕ್ಟ್ರಿಸಿಟಿ ಬೋರ್ಡು ಪಂಪ್ ಸೆಟ್ಟುಗಳಿಗೆ ಮೋಟಾರ್ ಬೇಕೆಂದು ಕೋಯಿಮುತ್ತೂರಿಗೆ ಕೇಳಲು ಹೋಗಿದ್ದರು. ಯಾವ ಫೌಂಡ್ರಿಯವರಿಗೂ ಇದನ್ನು ಒದಗಿಸಲು ಸಾಧ್ಯವಿಲ್ಲ. ಕೇವಲ ಕಿರ್ಲೋಸ್ಕರ್ ಕಂಪೆನಿಗೆ ಮಾತ್ರ ಮೋಟಾರ್ ಒದಗಿಸಲು ಸಾಧ್ಯವಾಗಬಹುದು. ಕೊನೇ ಹೊತ್ತಿನಲ್ಲಿ ಮೋಟಾರ್ ಒದಗಿಸಬೇಕೆಂದು ಕೇಳುತ್ತಾರೆ. ಅದು ಹೇಗೆ ಸಾಧ್ಯವಾಗುತ್ತದೆ. ಅವರು ಬೇರೆ ಬೇರೆ ರಾಜ್ಯಗಳಿಗೆ ಒದಗಿಸಬೇಕಾಗುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ 45,000 ಡಿಸ್ಟ್ರಿಬ್ಯೂಟ್ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲೆಕ್ಟ್ರಿಸಿಟಿ ಬೋರ್ಡಿನ ಸ್ಟೋರ್ ಹೇಗೆ ಇರಬೇಕು? ಕಂಡಕ್ಟರ್ಸ್ ಟ್ರಾನ್ಸ್‌ಫಾರ್ಮರ್ಸ್ ಎಷ್ಟು ಇರಬೇಕು ಎಂಬುದನ್ನು ಯೋಚನೆ ಮಾಡಿ ತರಿಸಿ ಇಟ್ಟುಕೊಳ್ಳುವುದು ಒಳ್ಳೆಯದು. ಇಂದು ಬೆಳಿಗ್ಗೆ ಆರ್ಡರ್ ಕೊಟ್ಟು ಇನ್ನು ಮೂರು ದಿನಕ್ಕೆ ಕೊಡಿ ಎಂದರೆ ಅದನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

Mr. SPEAKER.—Order has been placed. They cannot go on supplying it to one party alone.

Sri C. J. MUCKANNAPPA.—The Factory belongs to the State. First, our demands must be met; then they must meet the demands from others. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕಂಬ ಇಲ್ಲ, ವೈರ್ ಇಲ್ಲ, ಕಂಡಕ್ಟರ್ ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ ಎಂದು ಹೇಳುವುದು ಸರಿಯಲ್ಲ. ಸ್ಟೋರ್ ರೀಆರ್ಗನೈಜ್ ಮಾಡಿ ಯಾವ ಯಾವ ಸಾಮಾನು ಎಷ್ಟೆಷ್ಟು ಮಡಗಬೇಕು ಎಂಬುದನ್ನು ಪರಿಶೀಲಿಸಿ ಅಷ್ಟು ಸಾಮಾನು ಮಡಗಿರಬೇಕು. ಈಗ ಇರತಕ್ಕಂಥ ರೀತಿ ಸರಿಯಾಗಿಲ್ಲ. ಸ್ಟೋರ್ ರೀಆರ್ಗನೈಜ್ ಮಾಡ ಬೇಕೆಂದು ಮುಖ್ಯ ಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶರಾವತಿ ಯೋಜನೆಯಿಂದ ದೊರೆಯುವ ವಿದ್ಯುತ್ ಶಕ್ತಿ ವಿನಿಯೋಗ ಮಾಡುವುದಕ್ಕೆ ಸಾಮಾನುಗಳು ಬೇಕಾಗುತ್ತವೆ. ಇದನ್ನು ಸರಿಯಾಗಿ ಯೋಚನೆ ಮಾಡಿ ಪುನಃ ಪರಿಶೀಲನೆ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಹೊಗೇನಕಲ್ ಯೋಜನೆ ಬಗ್ಗೆ ಮದ್ರಾಸ್ ಸರಕಾರ ಮತ್ತು ಮೈಸೂರು ಸರಕಾರ ಕೂಡಿ ಒಂದು ಜಾಯಿಂಟ್ ವೆಂಚರ್ ಮಾಡುತ್ತಾರೆಂದು ತಿಳಿದಿದೆ. ಕೇರಳ ಅಸೆಂಬ್ಲಿಯಲ್ಲಿ ಕೇರಳದ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅವರ ಪ್ರದೇಶದಲ್ಲಿ ಹೆಚ್ಚು ಸಬ್‌ಮರ್ಜ್ ಆಗುವುದಾದರೆ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಗಲಾಟೆಯಾಗಿದೆ. ಆದುದರಿಂದ ಹೊಗೇನಕಲ್ ಹೈಡ್ರೋ ಇಲೆಕ್ಟ್ರಿಕ್ ಪ್ರೊಜೆಕ್ಟ್ ಹೇಗೆ ಮಾಡುತ್ತೀರಿ, ಯಾವ ರೀತಿ ಕಾರ್ಯರೂಪಕ್ಕೆ ತರುತ್ತೀರಿ ಎಂಬುದನ್ನು ತಿಳಿಸ ಬೇಕೆಂದು ಸರಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇನ್ನು ಇಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಹುದ್ದೆಗಳ ವಿಷಯದಲ್ಲಿ ಬಹಳ ಡಿಸ್‌ಸ್ಯಾಟಿಸ್‌ಫ್ಯಾಕ್ಷನ್ ಇದೆ. ಪ್ರೊಮೋಷನ್ ವಿಚಾರದಲ್ಲಿ ಬಹಳ ಅಸಂತೋಷ ಉಂಟಾಗಿದೆ. ಅಸಿಸ್ಟೆಂಟ್ ಎಂಜಿನಿಯರ್ ಗ್ರೇಡ್ ಇನ್ನೊಬ್ಬರಿಗೆ ಕೊಟ್ಟುಬಿಟ್ಟರು ಎಂದು ತಕರಾರು ಇದೆ. ಇದನ್ನು ನಿವಾರಣೆ ಮಾಡಬೇಕು. ಈ ಬೋರ್ಡಿನಲ್ಲಿ ರೈತರ ಹಿತ ರಕ್ಷಣೆ ಮಾಡುವುದಕ್ಕೆ ಪ್ರತಿನಿಧಿ ಯಾರು ಇದ್ದಾರೆ? ಯಾರೂ ಇಲ್ಲ. ರೈತನಿಗೆ ಇರಿಗೇಷನ್ನಿಗಾಗಿ ಪವರ್ ಸಪ್ಲೈ ಮಾಡಬೇಕಾಗುತ್ತದೆ. ಪವರ್ ಸಪ್ಲೈ ಮಾಡದೇ ಇದ್ದರೆ ರೈತನಿಗೆ ತೊಂದರೆಯಾಗುತ್ತದೆ. ರೈತನ ಹಿತ ರಕ್ಷಣೆ ಮಾಡುವವರು ಯಾರೂ ಇಲ್ಲ. ಆದುದರಿಂದ ಈ ಬೋರ್ಡಿನಲ್ಲಿ ರೈತನ ಪ್ರತಿನಿಧಿ ಒಬ್ಬರನ್ನು ಇಡುವುದಕ್ಕೆ ಸರಕಾರ ಮತ್ತು ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈಗ ನಮ್ಮ ಮುಂದೆ ಇರುವ ಬೃಹತ್ ನೀರಾವರಿ ಯೋಜನೆ, ಸಾಮಾನ್ಯ ಆಡಳಿತ, ಮಧ್ಯಮ ತರಗತಿ ನೀರಾವರಿ ಮುಂತಾದ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತಾ ಸರಕಾರಕ್ಕೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಬೃಹತ್ ನೀರಾವರಿ ಯೋಜನೆಯಲ್ಲಿ ಮಲಪ್ರಭಾ ಯೋಜನೆ ಕೆಲಸ ನಡೆದಿದೆ. ಮುಂಬಯಿ ಸರಕಾರದಲ್ಲಿದ್ದಾಗ್ಗೆ ಆ ಬಗ್ಗೆ ಅನೇಕ ರೀತಿ ಒತ್ತಾಯ ತರಲಾಯಿತು. ಈಗ ಕೆಲವು ಕಟ್ಟಡ ಕಾಲುವೆಗಳ ರಚನೆ ಕೆಲಸ ಆಗುತ್ತಾ ಇದೆ. ಈ ಯೋಜನೆಯ ನೀರಿನ ಸಹಾಯ ಮುಖ್ಯವಾಗಿ ಬರಗಾಲ ಪೀಡಿತ ಪ್ರದೇಶಕ್ಕೆ ಉಪಯೋಗವಾಗುತ್ತದೆ. ನವಲಗುಂದ, ಬಾದಾಮಿ, ರೋಣ್ ತಾಲ್ಲೂಕುಗಳಿಗೆ ನೀರು ಉಪಯೋಗವಾಗುತ್ತದೆ. ಈ ದೃಷ್ಟಿಯಿಂದ ಬರಗಾಲ ಪೀಡಿತ ಪ್ರದೇಶದ ಜನರ ಕೂಗು ನಿಲ್ಲುವಂತೆ ನೀರಾವರಿ ಯೋಜನೆ ಮಾಡಬೇಕು. ಯಾವ ದಿವಸ ಈ ಮಲಪ್ರಭಾ ಯೋಜನೆ ಕೆಲಸ ಪೂರ್ತಿಯಾಗುವುದೋ ಅಂದು ಅವರ ತೊಂದರೆ ಮುಕ್ತಾಯವಾಗುತ್ತದೆ. ಈ ಬಗ್ಗೆ ಸರಕಾರ ಒಂದು ಆಶ್ವಾಸನೆ, ಭರವಸೆ ಕೊಡಬೇಕು. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಅನೇಕ ವಿವಾದ ನಡೆದಿದೆ. ಸರಕಾರದ ನಿಲುವನ್ನು ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟು ಅತ್ಯಂತ ಸ್ಪಷ್ಟಪಡಿಸಿದ್ದಾರೆ. ಆಲಮಟ್ಟಿ ಹಾಗು ನಾರಾಯಣಪುರ ಎರಡೂ ಸ್ಥಳಗಳಲ್ಲಿ ಒಮ್ಮೆಲೆ ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಕೆಲವು ಸಲ ಸರಕಾರ ಅಪೇಕ್ಷೆ ಮಾಡಿದ ರೀತಿಯಲ್ಲಿ ಅದನ್ನು ಸಾಧಿಸಲು ಶಕ್ತಿ ಇಲ್ಲದೇ ಹೋಗಬಹುದು. ಅಥವಾ ಮೇಲಿನ ಒತ್ತಾಯದಿಂದ ಕಾರ್ಯ ನಿರ್ವಹಿಸದೆ ಹೋಗುವ ಸಂಭವ ಇರುತ್ತದೆ. ಸರಕಾರ ಜನತೆಗೆ ಈಗಾಗಲೇ ಆಶ್ವಾಸನೆ ಕೊಟ್ಟಿದೆ. ಆದುದರಿಂದ ಕನಿಷ್ಟ ಪಕ್ಷ ಯಾರಿಗೂ ಅನ್ಯಾಯವಾಗದ ಹಾಗೆ ಎರಡೂ ಕಡೆ ಅಣೆಕಟ್ಟು ಕಟ್ಟುವುದಕ್ಕೆ ಪ್ರಾರಂಭ ಮಾಡುವ ಹಾಗೆ ದಕ್ಷತೆ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ಕಾವೇರಿ ಯೋಜನೆ, ಹಾರಂಗಿ ಹಾಗು ಕಂಬದಕಡ ಯೋಜನೆ ಬಗ್ಗೆ ಅಂದೋಲನ ನಡೆದಿದೆ. ಈ ಯೋಜನೆ ಪುನಃ ಪರಿಶೀಲನೆ ಮಾಡಿ ಯೋಜನೆ ಕೈಕೊಳ್ಳಬೇಕು ಮತ್ತು ಕೆಲಸ ಪ್ರಾರಂಭಿಸುವುದು ಒಳ್ಳೆಯದು ಎಂದು ಹೇಳಲು ಅಪೇಕ್ಷಿಸುತ್ತೇನೆ.

ಆಡಳಿತ ವಿಚಾರದಲ್ಲಿ ಕೆಲವು ಮಾತು ಹೇಳಲು ಬಯಸುತ್ತೇನೆ. ಆಡಳಿತದಲ್ಲಿ ವಿಳಂಬವಾಗುತ್ತದೆ ಅಂದರೆ ರೆಡ್ ಟೇಪಿಜಂ ಸಾಕಷ್ಟು ಇದೆ. ಇದನ್ನು ಯಾರೂ ಅಲ್ಲಗೆಳೆಯಲಾರರು. ಕಾಗದ ಪತ್ರಗಳು ಬಹಳ ತಡವಾಗಿ ಮುಂದೆ ಸಾಗುತ್ತವೆ. ಈಗ ಅತ್ಯುತ್ತಮ ಚೀಫ್ ಸೆಕ್ರೆಟರಿಯವರು ದೊರೆತಿದ್ದಾರೆ. ಆದರೂ ಕೂಡ ಈ ರೀತಿ ತಡವಾಗುವುದು ಏಕೆ ಹಿಡಿತದಲ್ಲಿ ಬರುವುದಿಲ್ಲ? ರೆಡ್ ಟೇಪಿಜಂ ನಿವಾರಣೆ ಮಾಡುವುದಕ್ಕೆ ಮುಖ್ಯ ಮಂತ್ರಿಗಳು ಎಲ್ಲ ಇಲಾಖೆಯ ಸೆಕ್ರೆಟರಿಗಳನ್ನು ಕರೆಸಿ ಆಲೋಚನೆ ಮಾಡಿ ಒಂದು ರಿಪೋರ್ಟ್ ತರಿಸುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇದೇ ವಿಧಾನ ಸೌಧದ ಮೇಲಂತಸ್ತಿನಲ್ಲಿರುವ ನಾನಾ ಇಲಾಖೆಗಳಲ್ಲಿ ಎಷ್ಟೋ ಜನ ಕಾರಕೂನರು ಕೆಲಸವಿಲ್ಲದೆ ಸುಮ್ಮನೆ ಕುಳಿತಿರುತ್ತಾರೆ. ಕೆಲವರು ಚಹಾ, ಕಾಫಿ, ಕುಡಿಯುವುದಕ್ಕೂ ಚುಟ್ಟಾ ಸೇದುವುದಕ್ಕೂ ಹೊರಗೆ ಹೋಗುತ್ತಾರೆ. ಎಲ್ಲಿ ಹೋಗಿದ್ದಾರೆಂದು ಕೇಳಿದರೆ ಕಾಫಿ ಕುಡಿಯುವುದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಸರ್, ತಿಂಡಿ ತಿನ್ನುವುದಕ್ಕೆ ಹೊರಗೆ ಹೋಗಿದ್ದಾರೆ. ಸರ್ ಎಂದು ಬರೀ ಸರ್ ಸರ್ ಸೇರಿಸಿ ಮಾತನಾಡುತ್ತಾರೆ. ಸೆಕ್ರೆಟೇರಿಯಟ್‌ನಲ್ಲಿ ಕಾರಕೂನರು, ಸೂಪರ್‌ವೈಜರ್ಸ್‌ಗಳು ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ನೋಡಬೇಕು. ಕೆಲವು ಕಡೆ ಅವಶ್ಯಕತೆಗಿಂತ ಹೆಚ್ಚು ಜನ ಕೆಲಸ ಮಾಡಲು ಇದ್ದಾರೆ. ಕೆಲವು ಕಡೆ ಕೆಲಸ ಹೆಚ್ಚು ಇದ್ದರೂ ಕೆಲಸ ಮಾಡತಕ್ಕಂಥ ಕ್ಲರ್ಕುಗಳು ಕಡಿಮೆ ಇವೆ. ಇದನ್ನು ಸರಿಪಡಿಸಬೇಕಾದುದು ಆವಶ್ಯಕ ಎಂದು ನನಗೆ ಅನಿಸುತ್ತದೆ. ಆಡಳಿತಕ್ಕೆ ದುಡ್ಡು ಇಲ್ಲ; ಪಿ.ಡಬ್ಲ್ಯು.ಡಿ.ಗೆ

ಹೆಚ್ಚು ದುಡ್ಡು ಬೇಕಾಗಿದೆ. ಇವನ್ನು ಸರಿಪಡಿಸಿದರೆ ಎಷ್ಟೋ ದುಡ್ಡು ಸಿಗುತ್ತದೆ. ಇನ್ನೊಂದು ಮಾತು, ಅದು ಕ್ರಾಂತಿಕಾರಕವಾದರೂ ಆಲೋಚನೆ ಮಾಡಬೇಕು. ಅದರಿಂದ ದುಡ್ಡಿನ ಉಳಿತಾಯವಾಗಬಹುದು ಎಂದು ಹೇಳಲು ಅಪೇಕ್ಷೆ ಮಾಡುತ್ತೇನೆ. ನಮ್ಮ ಮಂತ್ರಿಮಂಡಲದವರು ದೊಡ್ಡ ದೊಡ್ಡ ಬಂಗಲೆಗಳಲ್ಲಿ ಇದ್ದಾರಲ್ಲಾ, ಇವುಗಳಿಗೆ ಸಂಬಂಧಿಸಿದಂತೆ ಇನ್ನು ಮೂರು ವರ್ಷಗಳೊಳಗೆ ಒಂದು ಯೋಜನೆ ಮಾಡಿ ''ಲೆಜಿಸ್ಲೇಟರ್ಸ್ ಹೋಂ'' ಹಾಗೆ ಮಿನಿಸ್ಟರ್ಸ್ ಹೋಂ ಮಾಡಿ, ಎಲ್ಲಾ ಮಿನಿಸ್ಟರುಗಳು ಒಂದೇ ಕಡೆ ಇರುವಂತೆ ಮಾಡಿ, ಅವರನ್ನು ಚಿಕ್ಕ ಚಿಕ್ಕ ಬಂಗಲೆಗೆ ಹಾಕಿ. ಅವರ ಮಧ್ಯದಲ್ಲಿ ಒಂದು ದೊಡ್ಡ ಬಂಗಲೆಯನ್ನು, ಗೌಡನ ಚಾವಡಿ ಇದ್ದ ಹಾಗೆ, ಮುಖ್ಯ ಮಂತ್ರಿಗಳಿಗೆ ಕಟ್ಟಿಸಿಬಿಡಿ. ಅಲ್ಲಿ ಮಂತ್ರಿಮಂಡಳ ಕೂಡಲಿಕ್ಕೆ, ಆಲೋಚನೆ ಮಾಡಲಿಕ್ಕೆ ಅವಕಾಶ ಮಾಡಿ. ಈಗ ಅವರುಗಳಿರುವ ಭಾರಿ ಬಂಗಲೆಗಳನ್ನು ಮಾರಿ, ಅಥವ ಇನ್ನು ಯಾವುದಕ್ಕಾದರೂ ಉಪಯೋಗ ಮಾಡಿ ಇದು ಒಳ್ಳೆದಾದೀತು. ಹೀಗೆ ಮಾಡಿದರೆ, ರಾಜ್ಯಕ್ಕೆ ದುಡ್ಡು ಉಳಿತಾಯ ವಾಗುವುದಲ್ಲದೆ, ಲೆಜಿಸ್ಲೇಟರುಗಳ ಮನಸ್ಸಿನ ಮೇಲೂ ಒಳ್ಳೆಯ ಪರಿಣಾಮವಾಗಬಹುದು; ಅದೇನೆಂದರೆ ನಾವೂ ಮಂತ್ರಿಗಳೂ ಸಮೀಪಕ್ಕೆ ಬರಲಿಕ್ಕೆ ಹತ್ತಿದ್ದೇವೆ ಎಂಬ ಭಾವನೆ ಬರುವುದು.

ದೂರ ನಿಂತು ನಮ್ಮ ಜನರಲ್ಲಿ ಪ್ರತ್ಯೇಕ ಭಾವನೆ, ನೌಕರರ ಸೀನಿಯಾರಿಟಿ ಲಿಸ್ಟ್ ಆಗದೆ ಇರುವುದರಿಂದ ಬೆಳೆಯುತ್ತಾ ಇದೆ. ಅವರು ನಮ್ಮಗಳ ಮನೆಗೆ ಹಿಂಸೆ ಮಾಡುತ್ತಾರೆ. ನಾನು ಅವರಿಗೆ ಕಟ್ಟುನಿಟ್ಟಾಗಿ ಹೇಳಿಬಿಡುತ್ತೇನೆ, ನನ್ನನ್ನು ಅವರ್ಯಾರು ಭೇಟಿ ಮಾಡಕೂಡದೆಂದು. ''ಕ್ಷಯ ರೋಗವಿದೆ ಭೇಟಿಯಾಗಲಿಕ್ಕೆ, ಅಪೇಕ್ಷೆ ಇಲ್ಲ,'' ಎಂದು ಸ್ವಲ್ಪ ಜನರು ಬೋರ್ಡು ಹಾಕಿದ ಹಾಗೆ ಹಾಕಬೇಕು. ಆದರೆ ಈ ಸೀನಿಯಾರಿಟಿ ಲಿಸ್ಟ್ ಒಮ್ಮೆ ಒಳ್ಳೆಯದೇ, ಕೆಟ್ಟದ್ದೇ ಕೊನೆಯ ನಿರ್ಣಯ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು, ಈ ತೆರಿಗೆ ಬಾಕಿ ವಸೂಲಿ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈ ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಅನೇಕ ದೊಡ್ಡವರು ಕೊಟ್ಟಿಲ್ಲ. ತೆರಿಗೆ ಬಾಕಿಯನ್ನು ಕಡ್ಡಾಯವಾಗಿ ವಸೂಲು ಮಾಡಿದರೆ, ಕೋಟ್ಯಾಂತರ ರೂಪಾಯಿ ವಸೂಲಾಗುವ ಸಂಭವವಿದೆ.

ಅಧ್ಯಕ್ಷರು.—ಇವೊತ್ತು ಕಂದಾಯ ವಸೂಲಿ ಇಲಾಖೆ ಡಿಮ್ಯಾಂಡಿಲ್ಲ. Other Taxes and Duties ಇರುವುದು.

ಶ್ರೀ ಎ. ಜೆ. ದೊಡ್ಡಮೇಟಿ.—ಆಡಳಿತಕ್ಕೆ ದುಡ್ಡು ಸಿಗಲಿ ಅನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಷ್ಟುತನಕ ಅದರ ಮೇಲೆ ಎಲ್ಲರೂ ಮಾತನಾಡಿದರು.

ಶ್ರೀ ಬಿ. ಡಿ. ಜತ್ತಿ.—ನೀವು ಬುದ್ಧಿವಂತರು, ಮಾತನಾಡಬಾರದು.

ಅಧ್ಯಕ್ಷರು.—ತಾವು ಇಬ್ಬರೂ ಬುದ್ಧಿವಂತರು ಎನ್ನುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಎ.ಜೆ. ದೊಡ್ಡಮೇಟಿ.—ಕಂದಾಯ ಇಲಾಖೆಯಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬೇಗಬರಬೇಕು. ಅಲ್ಲದೆ ಆ ಇಲಾಖೆಯಲ್ಲಿ ವರ್ಗಾ ವರ್ಗಿ ಅನಾವಶ್ಯಕವಾಗಿ ಆಗಬಾರದು. ಕೆಲವೊಂದು ಪುಡಾರಿಗಳು ತಮ್ಮ ಮಾತನ್ನು ಡೆಪ್ಯೂಟಿ ಕಮೀಷನರು ಕೇಳದಿದ್ದರೆ ಆ ಡೆಪ್ಯೂಟಿ ಕಮೀಷನರು ಅಲ್ಲಿಂದ ವರ್ಗವಾಗ ಬೇಕು ಅನ್ನುತ್ತಾರೆ. ಮತ್ತೆ ಕೆಲವು ಕಡೆ ಅನ್ಯಾಯವಾಗಿ ಆಫೀಸರುಗಳ ಮೇಲೆ ಆರೋಪಿಸುತ್ತಾರೆ. ಕೆಲವು ಕಡೆ ಅನ್ಯಾಯವಾಗಿ ಉಳಿಸಲಿಕ್ಕೆ ಪ್ರಯತ್ನಮಾಡುತ್ತಾರೆ. ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾ ಕಲೆಕ್ಟರು (ಅಥವ ಡೆಪ್ಯೂಟಿ ಕಮೀಷನರು) ಹೇಗಿರಬೇಕೆಂದರೆ ಯಾರ ಮಾತನ್ನೂ ಕೇಳದೇ ಇರುವವರು. ನ್ಯಾಯವಾಗಿ ನಡೆಯುವವರು, ಮತ್ತು ಜನರೊಂದಿಗೆ ಹೊಂದಿ ಕೊಂಡು ಹೋಗುವವರಾಗಿರಬೇಕು; ಈ ಎಲ್ಲಾ ಮೂರೂ ಗುಣಗಳುಳ್ಳವರು ಡೆಪ್ಯೂಟಿ ಕಮೀಷನರು ಗಳಾಗಿ ಬರಬೇಕು. ಜಿಲ್ಲಾ ಕಲೆಕ್ಟರನ್ನು ನೇಮಿಸುವಾಗ, ಈ ರೀತಿ ಮುಖ್ಯಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಿ, ಮಾಡಬೇಕು ಇನ್ನು ಮುಂದೆ ಸರಕಾರ ಇದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಹೇಳಲು ಇಚ್ಛೆಪಡುತ್ತೇನೆ.

ಇನ್ನು ವಿದ್ಯುತ್ ಮಂಡಳಿಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಹಿತದೃಷ್ಟಿಯಿಂದ ಹೆಚ್ಚಿನ ಬದಲಾವಣೆಗಳನ್ನು ಮಾಡಬೇಕು. ವಿದ್ಯುತ್ ಮಂಡಳಿ ಕೆಲಸದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಪಂಪು ಸೆಟ್ಟುಗಳು ತೋಟ ಪಟ್ಟಿಗಳ ದೃಷಿಯಿಂದ ಸಾಕಷ್ಟು ಪ್ರಗತಿ ಯಾಗಿಲ್ಲ. ಮೊನ್ನೆ ಇದರ ಬಗ್ಗೆ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ, ಧಾರವಾಡ ಜಿಲ್ಲೆಯೊಳಗೆ 200 ಅರ್ಜಿ ಬಂದರೂ, ಮೂರು ವರ್ಷವಾದರೂ, 30ಕ್ಕೆ ಸಹ ಸಹಾಯವಾಗಿಲ್ಲ, ಹಣ ಲ್ಯಾಪ್ಸ್ ಆಗಿ ಹೋಯಿತು ಎಂದು ಹೇಳಿದರು. ಇದಕ್ಕೆ ಏನು ಕಾರಣವೇನೆಂದು ತಾವು ಚೌಕಾಶಿ ಮಾಡಿ ಉತ್ತರ ಹೇಳಬೇಕಾಗುತ್ತದೆ. ಈ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಹಳ್ಳಿಗರಿಗೆ ಮತ್ತು ಗ್ರಾಮಾಂತರ ಪ್ರದೇಶ ಗಳಿಗೆ ಬೇಕಾದಂಥ ಬೇಡಿಕೆಯನ್ನು ಮಂಜೂರು ಮಾಡಲಿಕ್ಕೆ, ಅವರ ಒಬ್ಬ ಪ್ರತಿನಿಧಿ ಇರುವುದನ್ನು ಪರಿಶೀಲನೆ ಮಾಡಬೇಕು; ಅದಾದರೆ ನಿಮ್ಮ ತಲೆ ಭಾರ ಕಡಿಮೆಯಾದೀತು ಎಂದು ಹೇಳಲಿಕ್ಕೆ ಅಪೇಕ್ಷಿಸುತ್ತೇನೆ.

(ಶ್ರೀ ಎ. ಜೆ. ದೊಡ್ಡಮೇಟಿ)

ಇನ್ನು ಆಡಳಿತ ವೆಚ್ಚ ಕಡಿಮೆಯಾಗುವ ದೃಷ್ಟಿಯಿಂದ ಸಣ್ಣ ಪುಟ್ಟ ಮಾತುಗಳಿಗೆ ಸುಪ್ರೀಂ ಕೋರ್ಟಿಗೆ ಹೋಗುವುದನ್ನು ಸರಕಾರ ಸ್ವಲ್ಪ ಹೆಚ್ಚು ಜಾಗರೂಕತೆಯಿಂದ ಆಲೋಚನೆ ಮಾಡಬೇಕು. 20 ಸಾವಿರ ರೂಪಾಯಿ ಉಳಿಸಲಕ್ಕೆ ಹೋಗಿ 40 ಸಾವಿರ ರೂಪಾಯಿ ಖರ್ಚಾಗುತ್ತದೆ, 10 ಸಾವಿರ ರೂಪಾಯಿ ಉಳಿಸಲಿಕ್ಕೆ ಹೋಗಿ 20 ಸಾವಿರ ರೂಪಾಯಿ ಖರ್ಚು ಮಾಡುತ್ತೀರ. ಕೇವಲ ಒಂದು ಪ್ರತಿಷ್ಠೆಗಾಗಿ ಅಪೀಲು ಹೋಗಿ ಸಹಸ್ರಾರು ರೂಪಾಯಿ ಖರ್ಚು ಮಾಡುವ ಸಂಭವವಿರುತ್ತದೆ. ಉದಾಹರಣಾರ್ಥವಾಗಿ ಕೆಲವು ಲೆಕ್ಚರರುಗಳ ಪರ ಹೈಕೋರ್ಟಿನವರು ತೀರ್ಮಾನ ಕೊಟ್ಟಿದ್ದಾರೆ. ಆ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ನಮ್ಮ ಸರಕಾರ ಹೋಗಬೇಕೆಂದಿದೆ ಎಂದು ನಾನು ಕೇಳಿದೆ. ಲೆಕ್ಚರರುಗಳಿಗೆ ತಾವು ಪೇಗಾಗಿ ಕೊಡುವ ಖರ್ಚನ್ನು, ಸುಪ್ರೀಂ ಕೋರ್ಟಿಗೆ ಕೊಡುತ್ತೀರ, ಅದರಿಂದ ಪ್ರಯೋಜನವೆಷ್ಟು ? ಈ ದೃಷ್ಟಿಯಿಂದ ಶಕ್ಯವಿದ್ದಷ್ಟು ಸುಪ್ರೀಂ ಕೋರ್ಟಿಗೆ ಹೋಗಬೇಡಿ. ಅತ್ಯಂತ ಅವಶ್ಯಕವಿದ್ದರೆ ಹೋಗಬೇಕು.

ಇನ್ನು ಕೊನೆಯದು ಅತ್ಯಂತ ಮಹತ್ವದ್ದು. ಅದು ಏನೆಂದರೆ ನಮ್ಮ ದೇಶದಲ್ಲಿ ಅನೇಕ ರೀತಿಯಿಂದ ಪ್ರತ್ಯೇಕತಾ ಭಾವನೆಯನ್ನು ಕೆಲವರು ಬೆಳಸುತ್ತಾ ಇದ್ದಾರೆ. ಇದನ್ನು ನಿರ್ಮೂಲ ಮಾಡಲು ಮುಖ್ಯ ಮಂತ್ರಿಗಳಿಗೆ ಮಾತ್ರ ಸಾಧ್ಯ ಎಂದು ಹೇಳಲು ಅಪೇಕ್ಷೆ ಮಾಡುತ್ತೇನೆ. ಅವರು ಮನಸ್ಸು ಮಾಡಿ ಈ ಒಂದು ವಿಷಯದಲ್ಲಿ ಜನರಮನಸ್ಸಿನಲ್ಲಿರುವ ಸಂದೇಹ ಮಾಡುವ ಭಾವನೆಯನ್ನು ನಿವಾರಣೆ ಮಾಡುವ ಶಕ್ತಿ ಅವರಲ್ಲಿ ಮಾತ್ರ ಇದೆ. ಅವರ ವಿಷಯದಲ್ಲಿ ವಿರೋಧ ಪಕ್ಷದವರಲ್ಲಾಗಲಿ, ಕಾಂಗ್ರೆಸ್ ಪಕ್ಷದವರಲ್ಲಾಗಲಿ, ದೇಶದ ಸಾಮಾನ್ಯ ಜನರಲ್ಲಾಗಲಿ ಸಾಕಷ್ಟು ಗೌರವ, ಪ್ರೀತಿ, ಆದರ ಇದೆ. ತಮ್ಮ ಸಾಮರ್ಥ್ಯದ ಬಗ್ಗೆ ಜನರಿಗೆ ಪೂರ್ಣ ನಂಬಿಕೆ ಇದೆ. ತಾವು ಇದರ ಬಗ್ಗೆ ಹೆಚ್ಚು ವೇಳೆಯನ್ನು ತೆಗೆದುಕೊಂಡು ಆಲೋಚನೆ ಮಾಡಬೇಕು, ಮತ್ತು ಈ ಪ್ರತ್ಯೇಕತಾ ಮನೋಭಾವನೆ ಇಲ್ಲದಂತೆ ಪ್ರಯತ್ನ ಮಾಡಬೇಕು ಎಂದು ಅಪೇಕ್ಷೆ ಮಾಡುತ್ತೇನೆ. ಜನರಲ್ಲಿರತಕ್ಕಂಥ ಸಂದೇಹಗಳು ಪುನಃ ಉಚ್ಚಾರ ಮಾಡಲಿಕ್ಕೂ ಮನಸ್ಸು ಮಾಡಕೂಡದು. ಏಕೆಂದರೆ ಉಚ್ಚಾರ ಮಾಡಲಾರದ ಮಾತುಗಳಿವೆ. ನೀವು ಈ ವಿಷಯಕ್ಕೆ ಲಕ್ಷ್ಯಕೊಡಲು, ತಾವು ಕೆಲವು ಇಲಾಖೆಗಳನ್ನು ಬೇರೆಯವರಿಗೆ ಬಿಟ್ಟುಕೊಡಬೇಕು. ತತ್‌ಪ್ರಯುಕ್ತ ನಿಮ್ಮಲ್ಲಿ ಸಮರ್ಥ ಮಂತ್ರಿಗಳಿದ್ದಾರೆ. ಅವರಿಗೆ ನಿಮ್ಮ ಪೋರ್ಟ್ ಪೋಲಿಯೋಗಳನ್ನು ಒಪ್ಪಿಸಿ. ಈ ಕಾರ್ಯವನ್ನು ಕೇವಲ ನಾಲ್ಕಾರು ತಿಂಗಳೊಳಗೆ ಅಥವ ಮುಂದಿನ ಅಸೆಂಬ್ಲಿ ಅಧಿವೇಶನ ಕೂಡುವ ಪೂರ್ವದಲ್ಲಿ ಸಾಧಿಸಬೇಕು. ಇನ್ನೊಮ್ಮೆ ಯಾರ ಬಾಯಿನಲ್ಲಿಯೂ ಈ ಪ್ರತ್ಯೇಕ ಮನೋಭಾವನೆಯ ಮಾತು ಹೊರಡಬಾರದು. ಈ ಕ್ರಮ ತೆಗೆದು ಕೊಳ್ಳಿ. ಆಡಳಿತ ದೃಷ್ಟಿಯಿಂದ, ಬೃಹತ್ ಕರ್ಣಾಟಕ ಒಂದಾಗಬೇಕು, ಬೃಹತ್ ಕರ್ಣಾಟಕ ಭದ್ರವಾಗಬೇಕು, ಬೃಹತ್ ಕರ್ಣಾಟಕ ಶುಚಿಯಾಗಬೇಕು, ರುಚಿಯಾಗಬೇಕು ಬೃಹತ್ ಕರ್ಣಾಟಕ ಬೇರೆ ದೇಶಗಳಿಗೆ, ಮಾರ್ಗದರ್ಶಕವಾಗಬೇಕು ಅದನ್ನು ಮಾಡುವ ಸಾಮರ್ಥ್ಯ ಇವರೊಬ್ಬರಿಗೆ ಮಾತ್ರ ಸಾಧ್ಯವಿದೆ. ಆ ದೃಷ್ಟಿಯಿಂದ ಈ ಎಲ್ಲಾ ಮಾತುಗಳನ್ನು ಹೇಳಿದ್ದೇನೆ. ಒಂದು ದೊಡ್ಡ ಗಿಡದ ಬುಡದಲ್ಲಿ ಅನೇಕ ಹೆಗ್ಗಣಗಳು ಬರುತ್ತವೆ ಅನ್ನುವುದು ಬುದ್ಧನ ಕಾಲದಿಂದ, ಶಂಕರಾಚಾರ್ಯರ ಕಾಲದಿಂದ, ಬಸವಣ್ಣನವರ ಕಾಲದಿಂದ ನಮ್ಮ ಅನುಭವಕ್ಕೆ ಬಂದ ಮಾತು. ಕೆಲವು ಘಟನೆಗಳು ತಿಳಿಯದೆಯೇ ತಿಳಿದೇ ಸಂಭವಿಸಿವೆ. ಆದ್ದರಿಂದ ಯಾರು ಒಳ್ಳೆಯವರು, ಯಾರು ಕೆಟ್ಟವರು, ಯಾರು ಯಾರು ಯೋಗ್ಯರು ಎಂದು ನೋಡಿ, ಯೋಗ್ಯರನ್ನು ಯೋಗ್ಯ ಕೆಲಸದಲ್ಲಿ ತೊಡಗುವಂತೆ ಮಾಡಿ ಈ ಪ್ರತ್ಯೇಕವಾದ ಮನೋಭಾವನೆ ಹೋಗಲಿಕ್ಕೆ ಇದು ಅತ್ಯವಶ್ಯಕ. ಹಿಂದೆ ತಪ್ಪು ಮಾಡಿದಿರಿ. ಅವತ್ತೆ ಎಲ್ಲಾ ಮಾತು ಆಗಿ ಹೋಗಿತ್ತು. ಒಮ್ಮೆ ಈ ರಾಜ್ಯಕ್ಕೆ ಕರ್ಣಾಟಕ ರಾಜ್ಯ ಎಂದು ಹೆಸರು ಬಂದಿದ್ದರೆ ಪ್ರತ್ಯೇಕ ಮನೋಭಾವ ಮುಕ್ತಾಯವಾಗಿ ಹೋಗುತ್ತಿತ್ತು. ಹಿಂದೆ ಈ ಪ್ರಶ್ನೆ ಬಂದಾಗ ಹೆಸರು ಕರ್ಣಾಟಕ ಎಂದು ಬದಲಾಗಿದ್ದರೆ, ಈ ಸಮಸ್ಯೆಯು ಬರುತ್ತಲೇ ಇರಲಿಲ್ಲ.

ಭ್ರಷ್ಟಾಚಾರ ನಿವಾರಣೆ ದೃಷ್ಟಿಯಿಂದಲೂ ಸಹ ಪ್ರತ್ಯೇಕವಾದ ಕೆಲಸ ಕೈಗೊಳ್ಳಬೇಕು. ವಿಜಿಲೆನ್ಸ್ ಕಮಿಷನ್ನೇ, ಸದಾಚಾರ ಸಮಿತಿಯಾಗಿ ಮಾಡಿ, ಯೋಗ್ಯ ರೀತಿಯೊಳಗೆ ಒಂದು ಒಳ್ಳೆಯ ಕೆಲಸ ಮಾಡಬೇಕು. ಆದರೆ ಕೇಂದ್ರದಲ್ಲಿ ಮಾಡುವ ಒಳ್ಳೆಯ ಕೆಲಸಕ್ಕೂ ಲಕ್ಷ್ಯ ಕೊಡಬೇಕು. ಕಾರಣ ತಾವು ಬಲ್ಲಿರಿ. ಒಟ್ಟಿನಲ್ಲಿ ಕೇಂದ್ರಕ್ಕೂ ಸಹ ಮಾರ್ಗದರ್ಶಕರು ಆಗಿದ್ದೀರಿ. ಅನ್ನುವ ರೀತಿಯಲ್ಲಿ ನೀವು ಈ ಕೆಲಸಕ್ಕೆ ಗಟ್ಟಿಗರು ಆಗಿದ್ದೀರಿ. ಹಿಂದೆಯೇ ಒಮ್ಮೆ ಹೇಳಿದ್ದೇನೆ. ಮುಕ್ಕಣ್ಣ ಬಂದರೂ ಕೂಡ ಅಚಲರಾಗದಂತಹ ವಿಜಿಲೆನ್ಸ್ ಕಮಿಷನರನ್ನು ನೇಮಕ ಮಾಡಬೇಕು, ಅದಕ್ಕೆ ಸಹಾಯಕರಾದ ಸದಾಚಾರ ಸಮಿತಿಯನ್ನು ಬೇಗನೆ ರಚಿಸಬೇಕೆಂದು ಹೇಳಿ ತಮ್ಮ ಈ ಬೇಡಿಕೆಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ,

3-30 P.M.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ಈ ಅನೇಕ ಡಿಮ್ಯಾಂಡುಗಳು ಸಾಧುವಾದ್ದಲ್ಲ ಎಂಬುದಾಗಿ ಅವನ್ನು ಎದುರಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅನೇಕ ವಿಷಯಗಳನ್ನು ಮಾನ್ಯ ಸ್ನೇಹಿತರು ಆಗಲೇ ಮಾತನಾಡಿದ್ದಾರೆ, ಇನ್ನು ಉಳಿದಿರತಕ್ಕ ಕೆಲವು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇಂಗೇಷನ್ ವಿಷಯ ತೆಗೆದು ಕೊಂಡರೆ : ಮೇಜರ್ ಇರಿಗೇಷನ್‌ಗೆ 228 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ತಾವು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೀರಿ. ತಮ್ಮ ಇರಿಗೇಷನ್ ಪೊಟೆನ್ಸಿಯಲ್ ಎಷ್ಟು ಎಂದರೆ ಎರಡನೆಯ ಪ್ಲಾನ್ ಕೊನೆಯಲ್ಲಿ 2·91 ಲಕ್ಷ ಎಕರೆ. 3ನೇ ಪ್ಲಾನ್ ಕೊನೆಯ ಹೊತ್ತಿಗೆ ಅದನ್ನು 3·17 ಲಕ್ಷ ಎಕರೆ ಮಾಡುತ್ತೇವೆ ಎಂದು ಹೇಳಿದ್ದೀರಿ. 230 ಕೋಟಿ ರೂಪಾಯಿ ಖರ್ಚು ಮಾಡಿದ ಮೇಲೆ ಸರಾಸರಿ ಆದಾಯ ಎಷ್ಟು ಬರುತ್ತದೆ ಎಂದರೆ ಸುಮಾರು ಒಂದು ಕೋಟಿ ರೂಪಾಯಿ ಬರಬಹುದು, ಅದಕ್ಕೆ ಮೇನ್‌ಟೆನನ್ಸ್ ಚಾರ್ಜಸ್ ಎಷ್ಟಾಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಹಾಗೆ ಮಾಡಿದ್ದೇ ಆದರೆ ದೊಡ್ಡ ನೀರಾವರಿ ಕಾಂಗಾರಿಗಳಲ್ಲಿ ಕೇವಲ 25 ಪರ್ಸೆಂಟ್ ಇನ್‌ಕಂ ಕೂಡ ಬರುವುದಿಲ್ಲ. ಈ ಯೋಜನೆಗಳನ್ನು ಎಷ್ಟೇ ಕಡಿಮೆ ಬಂದರೂ ಪರವಾಗಿಲ್ಲ ಮಾಡ ಬೇಕಾದ್ದು ಅಗತ್ಯ ಮಾಡೋಣ. ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ, ದೊಡ್ಡ ನೀರಾ ವರಿಗೆ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಆ ರೀತಿ ಖರ್ಚು ಮಾಡಿ ಕೇವಲ ಕಡಿಮೆ ಆದಾಯ ತೆಗೆದುಕೊಳ್ಳುವುದಕ್ಕಿಂತಲೂ ಕೂಡ ಪ್ರತಿಯೊಂದು ಹಳ್ಳಿಯಲ್ಲೂ ಇರತಕ್ಕ ನಮ್ಮ ದೇಶದಲ್ಲಿ 27 ಸಾವಿರ ಹಳ್ಳಿಗಳು ಇವೆ—ಒಂದು ಹಳ್ಳಿಗೆ ಒಂದು ಕೆರೆ ಎಂದರೆ 27 ಸಾವಿರ ಕೆರೆಗಳು ಆಯಿತು—ಅಷ್ಟು ಕೆರೆ ಕಟ್ಟೆಗಳ ರಿಪೇರಿ ಬಗ್ಗೆ ಆದ್ಯತೆ ಕೊಟ್ಟು ರಿಪೇರಿ ಮಾಡಿಸಿದರೆ ಅವುಗಳ ಹಿಂದೆ ಸುಮಾರು 50 ಎಕರೆ ಭೂಮಿಯನ್ನು ಸಾಗುವಳಿಗೆ ತರಬಹುದು. ಲೆಕ್ಕಾಚಾರ ಹಾಕಿದರೆ ಪ್ರಾಜೆಕ್ಟುಗಳ ವಿಸ್ತೀರ್ಣಕ್ಕಿಂತ ಅದು ಜಾಸ್ತಿಯಾಗುತ್ತದೆ. ಅದನ್ನು ಆಲೋಚನೆ ಮಾಡಬೇಕು. ದೊಡ್ಡ ನೀರಾವರಿ ನಮಗೆ ಬೇಡ ಎಂದು ನಾನು ಅನ್ನುವುದಿಲ್ಲ. ಅದು ಅಗತ್ಯ ವಾದದ್ದು. ದೇಶದ ಹಿತದೃಷ್ಟಿಯಿಂದ ಆದರೆ ಸಣ್ಣ ನೀರಾವರಿಗೆ ಹೆಚ್ಚು ಗಮನ ಕೊಟ್ಟಿಲ್ಲ. ಆದ್ದರಿಂದ ಆದಷ್ಟು ಶೀಘ್ರವಾಗಿ ಸಣ್ಣ ನೀರಾವರಿ ಕೆಲಸಗಳಿಗೆ ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ. ಇನ್ನೂ ಹೆಚ್ಚು ಹಣ ಕೊಟ್ಟು ಅವುಗಳ ಕೆಲಸವನ್ನು ನಿಯಮಿತ ಕಾಲದಲ್ಲಿ ಮಾಡಿಸಬೇಕೆಂದು ತಮಗೆ ಸೂಚನೆ ಕೊಡುತ್ತೇನೆ.

ದೊಡ್ಡ ನೀರಾವರಿ ವಿಷಯದಲ್ಲಿ, ತಾವು ಕೆಲವು ಪ್ರಾಜೆಕ್ಟುಗಳನ್ನು ತೆಗೆದು ಕೊಳ್ಳುತ್ತೀರಿ. ಕೊಡಗು ಮತ್ತು ಹಾಸನ ಜಿಲ್ಲೆಯಲ್ಲಿ ಇರತಕ್ಕ ಪ್ರಾಜೆಕ್ಟುಗಳ ವಿಷಯ ಮಾತ್ರ ನಾನು ಹೇಳುತ್ತೇನೆ. ಹಾರಂಗಿ ವಿಷಯದಲ್ಲಿ ಒಂದು ಪ್ರಾಜೆಕ್ಟನ್ನು ತಯಾರು ಮಾಡಿ ಅದು 180 ಅಡಿ ಎತ್ತರ ಇರಬೇಕೆಂದು ಮೊದಲಿನಿಂದಲೂ ಜನ ಅಪೇಕ್ಷಿಸುತ್ತಿದ್ದುದನ್ನು ತಪ್ಪಿಸಿ ಎರಡು ಕಡೆ ಪ್ರಾಜೆಕ್ಟು ಕಟ್ಟಬೇಕೆಂದು ಮಾಡಿದ್ದೀರಿ. ಇದರಿಂದ ಮೊದಲನೆಯದು ಅದರ ಕಾಸ್ಟ್ ಜಾಸ್ತಿಯಾಗುತ್ತದೆ. ಎರಡನೆಯದು ಮೊದಲನೆಯ ಪ್ರಾಜೆಕ್ಟ್‌ಗೂ ಇದಕ್ಕೂ ವ್ಯತ್ಯಾಸ ಎಂದರೆ ಎರಡು ಕಡೆಗೆ ಬದಲಾಯಿಸಿದ್ದರಿಂದ ಮೊದಲನೆಯ ಕಡೆಯಲ್ಲಿ ಕೇವಲ ಬೆಟ್ಟ ಗುಡ್ಡ ಪ್ರದೇಶ ಹೋಗುತ್ತಾ ಇತ್ತು ಮತ್ತು ಬಹಳ ಧನಿಕ ರಾದ ಬೇರೆ ಕಡೆ ಜಮೀನು ಉಳ್ಳ ಕೆಲವು ಜಮೀನ್ದಾರರ ಜಮೀನು ಹೋಗುತ್ತಾ ಇತ್ತು. ಈಗ ಬಡವರಿಗೆ ಸೇರಿದ 5—6 ಸಾವಿರ ಎಕರೆ ಜಮೀನು ಹೋಗುತ್ತದೆ. ಅವರಿಗೆ ಬೇರೆ ಕಡೆ ಆಶ್ರಯವೇ ಇಲ್ಲ, ಅವರಿಗೆ ತೊಂದರೆಯಾಗುತ್ತದೆ. ಇದನ್ನು ಯಾರೋ ಕೆಲವರು ಶ್ರೀಮಂತರ ಅನುಕೂಲಕ್ಕಾಗಿ ಈ ರೀತಿ ಬದಲಾಯಿಸಿದ್ದೀರಿ ಎಂದು ಜನರು ಹೇಳುತ್ತಾ ಇದ್ದಾರೆ. ಆದ್ದರಿಂದ ಆ ಒಂದು ದೂಷಣೆ ಯಿಂದ ತಪ್ಪಿಸಿಕೊಳ್ಳಬೇಕಾದರೆ ಅದನ್ನು ಬದಲಾಯಿಸುವುದು ಸೂಕ್ತವೇ ಅಲ್ಲವೇ ಎಂಬುದನ್ನು ಆಲೋಚನೆ ಮಾಡಿ ಮೊದಲು ಯಾವ ಕಡೆ ಕಟ್ಟಬೇಕೆಂದು ಆಗಿತ್ತೋ ಅದೇ ಕಡೆ ಕಟ್ಟಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಹೇಮಾವತಿ ಪ್ರಾಜೆಕ್ಟಿನ ವಿಷಯ. ಅದನ್ನು 180 ಅಡಿ ಕಟ್ಟಬೇಕೆಂದು ಇದ್ದಿರಿ, ಈಗ ಆ ಎತ್ತರವನ್ನು ಕಡಿಮೆ ಮಾಡುತ್ತಾ ಇದ್ದೀರಿ. ಹೇಮಾವತಿ ಪ್ರಾಜೆಕ್ಟನ್ನು ಕಟ್ಟುತ್ತಾರೆ ಎಂದು ಬೆಂಗಳೂರಿನ ನೆಲಮಂಗಲ, ನಾಗಮಂಗಲದವರೆಗೂ ಜನ ನೋಡುತ್ತಾ ಇದ್ದರು. ಇಲ್ಲಿಯತನಕ ಅದರ ನೀರು ಬರುತ್ತದೆ ಎಂದು ಅವರು ನಿರೀಕ್ಷೆ ಮಾಡುತ್ತಾ ಇದ್ದರು. ಆದರೆ ಅದರ ಎತ್ತರವನ್ನು ಕಡಿಮೆ ಮಾಡಿದ್ದರಿಂದ ಹಾಸನ ಜಿಲ್ಲೆಯಲ್ಲಿ ಅದರ ನೀರು ಕೊನೆಗಾಣುತ್ತದೆ. ಅಲ್ಲಿಂದ ಮುಂದಕ್ಕೆ ಬರುವುದಿಲ್ಲ. ಮೊದಲಿನ ಕಾಲಕ್ಕೆ ಏನು ಅಭಿಪ್ರಾಯ ಇತ್ತು ಅದರಂತೆ ಜನಗಳಿಗೆ ಅನುಕೂಲ ವಾಗುವುದಿಲ್ಲ. ಅದರಿಂದ ಜನರು ನಿರಾಶರಾಗುತ್ತಾರೆ ಅದಕ್ಕೆ ಅವಕಾಶ ಕೊಡದಂತೆ, ಸರಿಯಾಗಿ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಅದರ ಎತ್ತರ ಜಾಸ್ತಿ ಮಾಡಿ ಇನ್ನಿತರ ಪ್ರದೇಶಗಳಿಗೂ ಮತ್ತು ನೀರಾವರಿ ಕಡಿಮೆ ಇರತಕ್ಕ ಪ್ರದೇಶಗಳಿಗೂ ಹೆಚ್ಚು ನೀರು ಬರುವುದಕ್ಕೆ ಅವಕಾಶ ಮಾಡಿ ಕೊಡಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುವಾಗ ಅನೇಕ ಜನರ ಭೂಮಿ ನೀರಿನಿಂದ ಮುಳುಗಡೆಯಾಗಿ ಅವರ ಜಮೀನನ್ನು ಕಳೆದುಕೊಳ್ಳುತ್ತಾರೆ, ಸಾವಿರಾರು ಸಂಸಾರಗಳವರು ತೊಳಲಿ ಬಳಲುತ್ತಾರೆ, ಅವರಿಗೆ ಪರಿಹಾರ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯ, ಕೊಡುತ್ತೀರಿ ಕೊಡುವುದಿಲ್ಲ ಎಂದು ಅಲ್ಲ ಪ್ರಾಜೆಕ್ಟು ಕಟ್ಟುವ ತನಕ ತಮಗೆ ಒಂದು ತರಹ ಮನಸ್ಸಿನಲ್ಲಿ ಇರುತ್ತದೆ. ಆಮೇಲೆ ಅದು ಬದಲಾವಣೆಯಾಗುತ್ತದೆ. ಆದ್ದರಿಂದ ನಾನು ಅರಿಕೆ ಮಾಡುವುದು ಇಷ್ಟೆ, ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎಂಬುದನ್ನು ನೋಡಿಕೊಂಡು ಮೊದಲೇ ಆ ಜನರು ಯಾವ ಯಾವ ಸ್ಟ್ಯಾಂಡರ್ಡ್ ಆಫ್ ಲೈಫ್ ಲೀಡ್ ಮಾಡುತ್ತಾ ಇದ್ದರೋ ಅದೇ ತರಹ ಲೈಫ್ ಮೇನ್‌ಟೇನ್ ಮಾಡುವುದಕ್ಕೆ ಸಾಕಾದಷ್ಟು ಜಮೀನನ್ನೋ ಅಥವಾ ಬೇರೆ ಒಂದು ತರಹ ಅನುಕೂಲವನ್ನೋ ಆ ಜನರಿಗೆ ಮಾಡಿಕೊಡಬೇಕು ಎಂದು ಸೂಚನೆ ಮಾಡುತ್ತೇನೆ.

ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತೀರಿ, ಅದರಲ್ಲಿ ಆದಾಯ ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಹೆಚ್ಚು ಆದಾಯ ಬರುತ್ತದೆಯೋ ಇಲ್ಲವೋ ಎಂಬುದನ್ನು ಮೊದಲೇ ನೋಡುವುದು ತಮ್ಮ ಆದ್ಯ ಕರ್ತವ್ಯ. ದೊಡ್ಡ ಪ್ರಾಜೆಕ್ಟುಗಳಿಗೆ ಎಷ್ಟೋ ವೆಚ್ಚವಾಗುತ್ತದೆ, ಅನೇಕ ಕಡೆಗಳಲ್ಲಿ ರೆವಿನ್ಯೂ ಲೀಕೇಜ್ ಇರುತ್ತದೆ, ನೀರಾವರಿ ಕಂದಾಯ ತೆಗೆದುಕೊಳ್ಳುವುದಿಲ್ಲ. ಮತ್ತು ಅನೇಕ ಕಡೆ ನೀರು ಕೊಡುವುದಕ್ಕೆ ಅವಕಾಶ ಇದ್ದರೂ ನೀರು ಸರಿಯಾಗಿ ಕೊಡುತ್ತಾ ಇರುವುದಿಲ್ಲ. ತಾವು ಪ್ರಾಜೆಕ್ಟ್ ಕಟ್ಟಿದ ಸ್ಥಳದಲ್ಲಿ ಎಷ್ಟು ಹೆಚ್ಚು ಹಣವನ್ನು ಸಂಪಾದನೆ ಮಾಡಬಹುದೋ ಅಷ್ಟನ್ನೂ ಕೂಡ ಸಂಪಾದನೆ ಮಾಡಬೇಕು. ಅದರಿಂದ ಲೀಕೇಜಸ್ ಮತ್ತು ಹಣ ಪೋಲಾಗುವುದು ಕಡಿಮೆಯಾಗಿ ದೇಶಕ್ಕೆ ಹೆಚ್ಚು ಆದಾಯ ಬರುತ್ತದೆ, ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಯಗಚಿ ಹೊಳೆಗೆ ಅಣೆಕಟ್ಟನ್ನು ಕಟ್ಟಬೇಕು. ಅರಸೀಕೆರೆ ತಾಲ್ಲೂಕು ಕಣಕಟ್ಟೆ ಬೆಂಗಾಡು ಪ್ರದೇಶವಾಗಿದೆ. ಅದೇ ರೀತಿ ಹೊಸದುರ್ಗ ತಾಲ್ಲೂಕಿನಲ್ಲೂ ಬೆಂಗಾಡು ಪ್ರದೇಶ ಇದೆ, ಈ ಪ್ರದೇಶಗಳಿಗೆಲ್ಲಾ ಯಗಚೀ ಹೊಳೆಗೆ ಅಡ್ಡಕಟ್ಟೆಯನ್ನು ಕಟ್ಟಿದರೆ ಬಹಳ ಪ್ರಯೋಜನವಾಗುತ್ತದೆ, ನೀರನ್ನು ಒದಗಿಸಬಹುದು. ಅದೇ ರೀತಿ ಜಾವಗಲ್ ಹೋಬಳಿಯಲ್ಲಿ ಕೆರಗೋಡು ಒಡ್ಡು ಹಾಕಬೇಕೆಂಬುದನ್ನು ತಮ್ಮ ಗಮನಕ್ಕೆ ತಂದಿದ್ದೆ, ಅದನ್ನು ಕಾರ್ಯಗತ ಮಾಡಲು ಬಡ್ಜೆಟ್‌ನಲ್ಲೂ ಸಹ ಅದನ್ನು ಸೇರಿಸಿಲ್ಲ, ಅದನ್ನು ಗಮನಕ್ಕೆ ತಂದುಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅದೇ ರೀತಿ ಇನ್ನೊಂದು ಮೊಸಳೆ ಒಡ್ಡು ಎಂದು ಹೇಳಿ ಇದೆ, 3-4 ಸಾವಿರ ಎಕರೆ ಜಮೀನು ಅದರಿಂದ ಸಾಗಿಗೆ ಬರುತ್ತದೆ, ಅದನ್ನು ಸರ್ವೇ ಮಾಡಿಸಿ ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ರೆಸ್ಟೊರೇಷನ್ ಆಫ್ ಮೈನರ್ ಟ್ಯಾಂಕ್ಸ್ ವಿಷಯದಲ್ಲಿ ಈ ವರ್ಷ ಅದಕ್ಕೆ ಗೈರು ಮೀಸಲು ಮಾಡಿದ್ದೀರಿ. ಅದಕ್ಕೆ ಯಾವ ಹಣವನ್ನೂ ಕೂಡ ಕೊಟ್ಟಿಲ್ಲ. ಹಾಸನ ಡಿವಿಜನ್‌ನಲ್ಲಿ ಒಂದು ಕೆಲಸವನ್ನೂ ಕೂಡ ತೆಗೆದುಕೊಂಡಿಲ್ಲ. ಹೀಗೆ ಮಾಡಬಾರದು, ಪಿಕ್ ಅಪ್ಸ್ ಮತ್ತು ರೆಸ್ಟೊರೇಷನ್ ಆಫ್ ಟ್ಯಾಂಕ್ಸ್ ಇವಕ್ಕೆ ಹೆಚ್ಚು ಗಮನ ಕೊಟ್ಟು ಹೆಚ್ಚು ದುಡ್ಡನ್ನು ಕೊಡಬೇಕು. ನಮ್ಮ ಜಿಲ್ಲೆಗೆ ಕೊಡಿ ಎಂದು ನಾನು ಕೇಳುವುದಿಲ್ಲ, ಎಲ್ಲಿ ಕಡಿಮೆ ಕೆಲಸ ಆಗಿದೆಯೋ ಅಲ್ಲಿಗೆ ಕೊಡಿ, ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಕೆಲಸ ಕೂಡ ಆಗಿಲ್ಲ, ಆದ್ದರಿಂದ ಹೆಚ್ಚು ಹಣ ಒದಗಿಸಿಕೊಡಿ. ಹಾಸನ ದೊಡ್ಡ ಡಿವಿಜನ್, ಅಲ್ಲಿಗೆ ಹೆಚ್ಚು ಹಣ ಕೊಟ್ಟು ಈ ಕೆಲಸಗಳನ್ನು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಸ್ಕೀಂಸ್, ವಿಷಯದಲ್ಲಿ ಹೇಳುವುದಾದರೆ ಈ ವರ್ಷ 8 ಕೋಟಿ ರೂಪಾಯಿಗಳನ್ನು ಅದಕ್ಕೆ ತೆಗೆದುಕೊಳ್ಳುತ್ತಾ ಇದ್ದೀರಿ. ಟ್ರಾನ್ಸ್‌ಫಾರ್ಮರ್ಸ್; ಮತ್ತು ಬಾಕಿ ಕೆಲಸಗಳಿಗಾಗಿ. ಇಂಡಸ್ಟ್ರಿಯಲ್ ಪರ್‌ಪಸ್ ಮತ್ತು ದೊಡ್ಡ ದೊಡ್ಡ ಸಿಟಿಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿ, ಬೇಡ ಅನ್ನುವುದಿಲ್ಲ, ಆದರೆ ರೂರಲ್ ಎಲೆಕ್ಟ್ರಿಫಿಕೇಷನ್ ಕಡೆಗೆ ಸ್ವಲ್ಪ ತಾವು ಹೆಚ್ಚು ನಿಗಾ ಕೊಡಬೇಕು ಎಂದು ಅಷ್ಟೆ ನಾನು ತಮ್ಮನ್ನು ಪ್ರಾರ್ಥನೆ ಮಾಡುವುದು. ಮೈಸೂರು ದೇಶದಲ್ಲಿ 26, 168 ಹಳ್ಳಿಗಳಿವೆ, ಅದರಲ್ಲಿ ಸೇಕಡ 6·2 ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ದೊರೆತಿದೆ. ಇದು ನ್ಯಾಯವೇ ಎಂದು ಯೋಚಿಸಬೇಕು. ಹಳ್ಳಿಗಾಡನ್ನು ಇಷ್ಟು ಅಸಡ್ಡೆ ಮಾಡುವುದು ಧರ್ಮವಲ್ಲ. ಇದಕ್ಕೆ ಹೆಚ್ಚಾಗಿ ನಿಗಾ ಕೊಟ್ಟು ಟ್ರಾನ್ಸ್‌ಮಿಷನ್ ಲೈನ್ ಹಾಕಿ ಕರೆಂಟ್ ಒದಗಿದಾಗ ಹಳ್ಳಿಗಳವರು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಕೊಡಬೇಕು. ವೈರ್ ಇಲ್ಲ,

ಫ್ಲೋರ್ಸ್ ಇಲ್ಲ ಎಂದು ಆಗಾಗ ಹೇಳುತ್ತಿರುತ್ತಾರೆ, ಅದಕ್ಕೆ ಅವಕಾಶವಿಲ್ಲದಂತೆ ನಮ್ಮ ದೇಶದಲ್ಲಿ ಅವನ್ನು ತಯಾರಿಸಿ ಅನುಕೂಲ ಕಲ್ಪಿಸಬೇಕು. ಇದಕ್ಕೆ ಆದಷ್ಟು ಈಗಿನಿಂದಲೇ ಪ್ರಯತ್ನ ಮಾಡಬೇಕು.

ಕೆರೆಗಳ ಮೈಂಟೆನೆನ್ಸ್ ಮತ್ತು ರಿಪೇರಿಪಾಗಿ 76 ಲಕ್ಷ ರೂಪಾಯಿಗಳನ್ನೊದಗಿಸಿರುವುದು ಸಾಲದು, ಅದನ್ನು 7 ಕೋಟಿಗಾದರೂ ಏರಿಸಬೇಕು. ಕೊನೆಯ ಪಕ್ಷ ಅಷ್ಟನ್ನಾದರೂ ಒದಗಿಸ ದಿದ್ದರೆ ದೇಶ ಉಳಿಯುವುದಿಲ್ಲ.

ಟ್ಯಾಕ್ಸ್ ವಿಷಯ—ಬಿಲ್ಡಿಂಗ್ ಟ್ಯಾಕ್ಸ್‌ನಿಂದ 20 ಲಕ್ಷ ರೂಪಾಯಿಗಳ ಆದಾಯವಿದೆ ಎಂದು ಹೇಳುತ್ತಾರೆ. ಆದರೆ ಈ ಸಂಬಂಧದಲ್ಲಿ ಘರ್ಷಣೆ ಇರುವುದರಿಂದ 1964-65ನೆಯ ಸಾಲಿಗೆ ಅಷ್ಟು ಬರಲಾರದು, ಬರುವಂತೆ ಮಾಡಲು ,ಬೇಕಾದ ಪ್ರಯತ್ನಮಾಡಬೇಕು. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್, ಸೂಪರ್-ಟ್ಯಾಕ್ಸ್ ಮುಂತಾದ್ದನ್ನು ಹಣ ಹೆಚ್ಚಾಗಿ ಉಳ್ಳವರು ಕೊಡುತ್ತಾರೆ. ಆದು ದರಿಂದ ಸೋರ್ಸಸ್ ಆಫ್ ಎಂಟರ್‌ಟೈನ್‌ಮೆಂಟ್ ಹೆಚ್ಚು ಮಾಡಿ ಹಣವಂತರಿಂದ ಹೆಚ್ಚು ಆದಾಯ ಪಡೆಯಲು ಪ್ರಯತ್ನಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಜಿ. ಎ. ಡಿ. ವಿಚಾರದಲ್ಲಿ ಎರಡು ಮಾತು. ನೌಕರರು ಕಷ್ಟಪಟ್ಟು ಕೆಲಸಮಾಡುತ್ತಾರೆ. ಅವರ ವಿಚಾರದಲ್ಲಿ ಕೆಲವರಿಗೆ ಅಸಮಾಧಾನವಿದ್ದರೂ ನನಗೆ ಸಹಾನುಭೂತಿ ಇದೆ. ನಾವಾದರೆ ಅಧಿವೇಶನವಿಲ್ಲದಿರುವಾಗ ಊರಿಗೆ ಹೋಗಿ ನಮ್ಮ ಕೆಲಸ ನೋಡಿಕೊಳ್ಳುತ್ತೇವೆ. ಆದರೆ ನೌಕರ ರಾದರೋ ಊರು ಬಿಟ್ಟು ಮನೆ ಮಠ ಬಿಟ್ಟು ಬಂದು ಇಲ್ಲಿ ಕೆಲಸಮಾಡುತ್ತಿರುತ್ತಾರೆ, ಅವರಿಗೆ ನಮ್ಮಂತೆ ಊರಿಗೆ ಹೋಗಿಬರಲು ಅವಕಾಶವಿರುವುದಿಲ್ಲ. ಆದುದರಿಂದ ಅವರನ್ನು ದೂರುವುದು ಸರಿಯಲ್ಲ. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಇನ್ನೂ ಸಿದ್ಧವಾಗಿಲ್ಲ, ಅದರಿಂದ ಅವರಿಗೆ ಅಸಮಾಧಾನವಾಗಿದೆ, ಡಿ. ಎ. ಅವರಿಗೆ ಕೊಡುವುದು ಸಾಲದು, ಹಣಕಾಸಿನ ಸಚಿವರು ಎಲ್ಲ ಊರುಗಳಲ್ಲಿರುವವರಿಗೂ ಕೂಡ ಒಂದೇ ರೀತಿಯಲ್ಲಿ ಅದನ್ನು ಹೆಚ್ಚಿಸಿದ್ದಾರೆ, ಅದು ಸರಿಯಲ್ಲ. ಬೆಂಗಳೂರಿನಲ್ಲಿ ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ ಜಾಸ್ತಿ ಇರುವುದರಿಂದ ಅದಕ್ಕನುಗುಣವಾಗಿ ಭತ್ಯ ಕೊಡಬೇಕು. ದೊಡ್ಡ ಸಿಟಿಗಳಲ್ಲಿ ಜೀವನ ವೆಚ್ಚ ಹೆಚ್ಚಾಗಿರುವುದರಿಂದ ಎಲ್ಲಾ ಕಡೆಗೂ ಯೂನಿ ಫಾರಂ ಮಾಡದೆ ಬೇರೆ ಕಡೆ 5 ರೂಪಾಯಿ ಕೊಟ್ಟರೆ ಸಿಟಿಗಳಲ್ಲಿ 10 ರೂಪಾಯಿ ಕೊಡಬೇಕು. ಈ ಅಧಿವೇಶನ ಮುಗಿಯುವುದರೊಳಗೆ ದೊಡ್ಡ ದೊಡ್ಡ ಸಿಟಿಗಳಲ್ಲಿ ಇರುವವರಿಗೆ 5 ರೂಪಾಯಿ ಜಾಸ್ತಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಪೇ ಸ್ಕೇಲ್ಸ್ ವಿಷಯ. ಸೆಂಟ್ರಲ್ ಮತ್ತು ಸ್ಟೇಟ್ ಪೇ ಸ್ಕೇಲುಗಳಲ್ಲಿ ಬಹಳ ವ್ಯತ್ಯಾಸವಿದೆ. ಸಾಧ್ಯವಾದ ಮಟ್ಟಿಗೂ ಅದನ್ನು ಕಡಿಮೆ ಮಾಡಬೇಕು, ಇಂಡಿಯಾ ಸರ್ಕಾರದವರಾದರೂ ಕಡಿಮೆ ಮಾಡಲಿ ಅಥವ ನಮ್ಮ ಸರ್ಕಾರದವರೂ ಆ ಸಮಕ್ಕೆ ಕೊಡಲಿ, ಹೀಗೆ ಏನಾದರೂ ಮಾಡಿ ಎಲ್ಲರಿಗೂ ಒಂದೇ ರೀತಿಯಾದ ಸ್ಕೇಲಿರುವ ಹಾಗೆ ವ್ಯವಸ್ಥೆ ಮಾಡಬೇಕು.

ಎಸ್. ಡಿ. ಒ. ಡೆಪ್ಯುಟಿ ಕಮಿಷನರು, ಮತ್ತು ಇತರ ಗೆಜೆಟೆಡ್ ಅಧಿಕಾರಿಗಳನ್ನು ಎರಡು ವರ್ಷಗಳಿಗೆ ಮೇಲ್ಪಟ್ಟು ಒಂದು ಕಡೆ ಇಡಕೂಡದು, ಅದಕ್ಕಿಂತ ಹೆಚ್ಚಾಗಿ ಒಂದು ಜಾಗದಲ್ಲಿದ್ದರೆ ಸರ್ಕಾರಕ್ಕೂ ಮತ್ತು ಜನರಿಗೂ ಒಳ್ಳೆಯದಾಗುವುದಿಲ್ಲ. ಇದನ್ನು ಸರ್ಕಾರ ಆಲೋಚನೆ ಮಾಡಬೇಕು. ಮೂರು ವರ್ಷಗಳಿಗಿಂತ ಜಾಸ್ತಿ ಒಂದೇ ಕಡೆ ಇರುವ ಅಧಿಕಾರಿಗಳ ಮೇಲೆ ದೂರು ಜಾಸ್ತಿ ಬರುತ್ತದೆ. ಆದುದರಿಂದ ಅವರನ್ನು ಹೆಚ್ಚು ಕಾಲ ಒಂದೇ ಜಾಗದಲ್ಲಿಡದೆ ಸ್ಥಳಪಲ್ಲಟ ಮಾಡಿದರೆ ಒಳ್ಳೆಯದು.

ವರಮಾನ ತೆರಿಗೆಯನ್ನು ಕೇಂದ್ರ ಸರ್ಕಾರ ಅವರ ಏಜೆನ್ಸಿ ಮೂಲಕ ನಮ್ಮ ದೇಶದಲ್ಲಿ ವಸೂಲು ಮಾಡುತ್ತಿದೆ, ಹಾಗೆ ಮಾಡಿ ಅದರಲ್ಲಿ ಒಂದು ಭಾಗ ನಮಗೆ ಕೊಡುವುದು ಸರಿಯಲ್ಲ. ಅದರಲ್ಲಿ ಲೀಕೇಜು ಬೇಕಾದಷ್ಟಿದೆ. ಹಳ್ಳಿಗಳಲ್ಲಿ ದೊಡ್ಡ ಸಾಹುಕಾರರಿದ್ದಾರೆ. ಅವರು ಪ್ರೋನೋಟ್ ಬರೆದು ಶೇಕಡ 24ರವರೆಗೆ ಬಡ್ಡಿ ತೆಗೆದುಕೊಳ್ಳುತ್ತಿದ್ದಾರೆ. ಒಡವೆಗಳನ್ನು ಅಡವಿಟ್ಟು ಕೊಂಡು ಬೇಕಾದಷ್ಟು ಬಡ್ಡಿಯನ್ನು ತಾವು ಮುಂಗಡವಾಗಿ ಕೊಡುವ ಹಣದಮೇಲೆ ಪಡೆಯುತ್ತಿದ್ದಾರೆ, ಅಧಿಕಾರಿಗಳು ಅವರ ಜೊತೆಯಲ್ಲಿ ಸೇರಿಕೊಂಡು ಆದಾಯ ಪಡೆಯುತ್ತಿರುವುದರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ಬರುತ್ತಿಲ್ಲ, ಇತರರು ತೆಗೆದುಕೊಳ್ಳುವುದರಲ್ಲಿ ಹತ್ತನೆಯ ಒಂದು ಭಾಗ ಕೂಡ ಬರುತ್ತಿಲ್ಲ. ಇದು ಅನ್ಯಾಯ. ವರಮಾನ ತೆರಿಗೆಯಲ್ಲಿ ನಮಗೆ ಶೇಕಡ 56 ಭಾಗ ಕೊಟ್ಟು ಉಳಿದುದನ್ನು ಇಂಡಿಯಾ ಸರ್ಕಾರ ಇಟ್ಟು ಕೊಳ್ಳುತ್ತದೆ, ಇದು ಸರಿಯಲ್ಲ, ಈ ಪದ್ಧತಿಯನ್ನು ಬದಲಾಯಿಸಿ ನಮಗೆ ಶೇಕಡ 75 ರಷ್ಟಾದರೂ ಕೊಡುವಂತೆ ಪ್ರೊಟೆಸ್ಟ್ ಮಾಡಿಯಾದರೂ ಒಪ್ಪಿಸ ಬೇಕು. ನಮ್ಮವರೇ ವಸೂಲು ಮಾಡುವುದು ಒಳ್ಳೆಯದು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದಿರುವ ಜನರಲ್ ಅಡ್ಮಿನಿಸ್ಟ್ರೇಷನ್ ಮುಂತಾದ ಬಾಬುಗಳ ಬೇಡಿಕೆಯನ್ನು ಅನುಮೋದಿಸಿ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಆಲಮಟ್ಟಿ ಯೋಜನೆ ಮತ್ತು ನಾರಾಯಣಪುರ ಯೋಜನೆಗಳಲ್ಲಿ ಮೊದಲು ನಾರಾಯಣಪುರ ಯೋಜನೆಯನ್ನು ತೆಗೆದುಕೊಳ್ಳುತ್ತಾರೆ, ಆಲಮಟ್ಟಿ ಯೋಜನೆಯನ್ನು ಸದ್ಯಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಪ್ರಚಾರ ಮಾಡುತ್ತಿದ್ದಾರೆ. ಈ ಪ್ರಚಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹೀಗೆ ಪ್ರಚಾರ ಮಾಡುವುದಕ್ಕೆ ಅವಕಾಶ ಕೊಡಬಾರದು. ಎರಡನ್ನೂ ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಸರ್ಕಾರಕ್ಕೂ ಅನುಕೂಲವಾಗುತ್ತದೆ, ಜನರಿಗೂ ಸಂಶಯವಿರುವುದಿಲ್ಲ. ಯಾವುದನ್ನು ಮಾಡಿದರೂ ಮೈಸೂರಿಗೇ ಅನುಕೂಲವಾಗುತ್ತದೆ. ಬಿಜಾಪುರವೂ ಬರಗಾಲ ಜಿಲ್ಲೆ. ಎರಡು ಜಿಲ್ಲೆಗಳಿಗೂ ಅನುಕೂಲವಾಗಬೇಕು. ಜನರಿಗೆ ತೊಂದರೆಯಾಗುವುದಕ್ಕೆ ಅವಕಾಶ ಕೊಡಬಾರದು, ಎರಡು ಯೋಜನೆಗಳನ್ನೂ ಕೈಕೊಳ್ಳಬೇಕು ಈ ವಿಚಾರದಲ್ಲಿ ಜನರಿಗಿರುವ ಸಂಶಯ ನಿವಾರಣೆ ಮಾಡಬೇಕು. ದಯವಿಟ್ಟು Chief Minister ರವರು ಈ ಯೋಜನೆಯಲ್ಲಿ reply ಕೊಟ್ಟು ಸುಳ್ಳು ಟೀಕೆ ಮಾಡುವವರಿಗೆ ಆಸ್ಪದ ಕೊಡಬಾರದು. ದೇವಲಾಪುರದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ಇದೆ; ಆದರಿಂದ ಬಿಜಾಪುರ ಮತ್ತು ಬಾಗೇವಾಡಿ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ಅಂದಾಜ ಮಾಡಿ ಲಿಫ್ಟ್ ಇರೀಗೇಷನ್ ಸ್ಕೀಂ ಕೈಕೊಳ್ಳಬೇಕು.

ಎರಡನೇದು ಮೈನರು ಇರಿಗೇಷನ್ನು ದೆಸೆಯಿಂದ ಹೇಳಬೇಕಾದರೆ ನಮ್ಮ ಬಿಜಾಪುರದ ಜಿಲ್ಲೆಯಲ್ಲಿ 18 ಕೆರೆಗಳು ಮಂಜೂರಾಗಿವೆ. ಅದರ ಬಗ್ಗೆ ಬಾಗೆವಾಡಿ ತಾಲ್ಲೂಕಿನಲ್ಲಿ ಕೆಲವು ಕೆರೆಗಳಿಗಾಗಿ ಎಸ್ಟಿಮೇಟು ಆಗಿ ಮತ್ತು ಸರ್ವೇ ಇನ್ನೂ ಕೆಲಸ ಷುರುಮಾಡಿಲ್ಲ. ನಮ್ಮ ಬಾಗೇವಾಡಿ ವರೆಗೆ ಕೃಷ್ಣ ನೀರು ಬರುವುದಿಲ್ಲ. ಸರಕಾರ ನಮ್ಮ ಬರಗಾಲದ ಪರಿಸ್ಥಿತಿ ಅರಿತುಕೊಂಡು ಚಿಕ್ಕ ನೀರಾವರಿ ಯೋಜನೆಗಳಲ್ಲಿ ಕೆಳಗಿನ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೆರೆಗಳು: ಮುತ್ತಗಿ; ಯರನಾಳ; ಹುಣಸ್ಯಾಳ, ಮಸೂತಿ, ತುಬಕಟ್ಟಿ, ತಳೇವಾಡ, ರೋಣ್ಯಾಳ; ತಿರಸ್ಯಾಳ.

ಮಿನಿಮಂ ವೇಜಸ್ ಆಕ್ಟನ್ನು ನಮ್ಮ ಬಿಜಾಪುರ ಜಿಲ್ಲೆಗೂ ಲಾಗೂ ಮಾಡುತ್ತಿದ್ದಾರೆ. ಇಲ್ಲಿ ಫ್ಯಾಕ್ಟರಿಗಳಿಗಾಗಿ ಲಾಗು ಮಾಡುವುದೇನೋ ಸರಿ. ಆದರೆ ಅಗ್ರಿಕಲ್ಚರ್‌ಗೂ ಕೂಡ ಮಿನಿಮಂ ವೇಜಸ್ ಆಕ್ಟನ್ನು ಲಾಗು ಮಾಡಬೇಕೆಂದು ಮಾಡುವುದು ಸರಿಯಲ್ಲ. ಆದ್ದರಿಂದ ಫ್ಯಾಕ್ಟರಿಗಳಿಗೆ ಮಾತ್ರ ಮಿನಿಮಂ ವೇಜಸ್ ಅಕ್ಟನ್ನು ಲಾಗೂ ಮಾಡಿ ಅಗ್ರಿಕಲ್ಚರಿಗೆ ಲಾಗು ಮಾಡಬಾರದು.

ಈಗ ತಾನೆ ಮಾನ್ಯ ಶ್ರೀ ದೊಡ್ಡಮೇಟಿಯವರು ಹೇಳಿದ ಹಾಗೆ, ಅಧಿಕಾರಿಗಳ ಅದಲ ಬದಲ ಮಾಡುವುದು ಸರಿಯಲ್ಲ. ಯಾರಾದರೂ ಆಗಲಿ ಎಂ. ಎಲ್. ಎ. ಕಡೆಯಿಂದ ವಶೀಲಿ ಬಾಜಿ ಮಾಡುವುದು ಮತ್ತು ಇನ್ನಿತರ ಕಡೆಯಿಂದ ವಶೀಲಿ ಬಾಜಿ ಮಾಡಿಸಿ ಟ್ರಾನ್ಸ್‌ಫರು ಮಾಡುವುದು ಸರಿಯಲ್ಲ. ಇದರಿಂದ ಇತರ ಸರಕಾರಿ ಆಫೀಸರುಗಳಿಗೂ ಅನಾನುಕೂಲವಾಗುತ್ತದೆ. ಇನ್ನು ಮುಂದಾದರೂ ಸರಕಾರ ವಶೀಲಿ ಬಾಜಿಗೆ ಒಳಗಾಗದೆ ಕಟ್ಟುನಿಟ್ಟಾದ ನಿಯಮವನ್ನು ಟ್ರಾನ್ಸ್‌ಫರು ಮಾಡುವಾಗ ಅನುಸರಿಸಬೇಕೆಂದು ಇಲ್ಲಿ ಹೇಳುತ್ತೇನೆ.

ಇನ್ನು ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಹೋಗಿ ಅಧಿಕಾರಿಗಳನ್ನು ಆಫೀಸುಗಳಲ್ಲಿ ನೋಡಿದರೆ ಬಹಳ ದುಃಖವಾಗುತ್ತದೆ. ಅವರಿಗೇನೂ ಕೆಲಸವೇ ಇಲ್ಲವೇನೋ ಎಂದು ನನಗನಿಸುತ್ತದೆ. ನಾನು ಒಂದು ಸಾರಿ ಬೆಳಗ್ಗೆ ಒಂದು ಕೆಲಸಕ್ಕಾಗಿ ಒಂದು ಆಫೀಸಿಗೆ ಹೋದರೆ ಅಲ್ಲಿ ಎಲ್ಲ ತಿಂಡಿಗಾಗಿ, ಕಾಫಿಗಾಗಿ ಹೋಗಿದ್ದಾರೆಂದು ಹೇಳಿದರು. ಇನ್ನೊಂದು ಸಾರಿ ಹೋದಾಗಲೂ ಕಾಫಿಗಾಗಿ ಹೋಗಿದ್ದಾರೆಂದು ಹೇಳಿದರು. ಮೂರನೇ ದಿನ ನಾಲ್ಕು ಗಂಟೆಗೆ ಸೆಕ್ರೆಟೇರಿಯಟ್ಟಿಗೆ ಹೋಗಿ ಪುನಃ ಕೇಳಿದರೂ ಆ ಅಧಿಕಾರಿಗಳು ಕಾಫಿಗಾಗಿ ಹೋಗಿದ್ದಾರೆಂದು ತಿಳಿಯಬಂತು, ಆದ್ದರಿಂದ ಸರಕಾರ ಇವರ ಮೇಲೆ ಸರಿಯಾದ ರೀತಿಯಲ್ಲಿ ಒಬ್ಬರು ಚೆಕ್ಕಿಂಗ್ ಆಫೀಸರ್‌ರವರನ್ನು ಇಲ್ಲಿ ನೇಮಕ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇಲ್ಲಿ ಆಲಮಟ್ಟಿ ಯೋಜನೆಯ ಬಗ್ಗೆ ಜನ ಬೇಕಾದ ಹಾಗೆ ಹೇಳುತ್ತಿದ್ದಾರೆ. ಇದರ ಬಗ್ಗೆ ಇಲ್ಲಿ ಮಾನ್ಯ ಮಂತ್ರಿಗಳು ಸ್ವಲ್ಪ ಆಪೂವಾದ ಬಿಗಿಯಾದ ಉತ್ತರ ಕೊಡಬೇಕೆಂದು ಕೇಳಿಕೋಳುತ್ತೇನೆ.

ನಮ್ಮ ಬಿಜಾಪೂರ ಜಿಲ್ಲೆಯಲ್ಲಿ ಹೊನವಾಡ ಟಿಕೋಟಾ ಮಧ್ಯದಲ್ಲಿ ಒಂದು ಪೂಲು ಆಗಿದೆ. ಅದರಿಂದ ನೀರು ಅಲ್ಲಿಯೇ ನಿಂತು 25 ಸಾವಿರ ಎಕರೆ ಜಮೀನೆಲ್ಲ ಉಪ್ಪು ನೀರಿನಿಂದ ಸವಳವಾಗಿದೆ. ಆದುದರಿಂದ ಸರ್ಕಾರದವರು ಈ ಪೂಲು ಸ್ವಲ್ಪ ಹಣ ಮಂಜೂರು ಮಾಡಿ ಎತ್ತರಿಸಬೇಕೆಂದು ಸರಕಾರಕ್ಕೆ ವಿನಂತಿ ಮಾಡುತ್ತೇನೆ. ಇದನ್ನು ಮಾನ್ಯ Chief Minister ಮತ್ತು P.W.D. Minister ನೋಡಿದ್ದಾರೆ. ಅದೇ ರೀತಿ ನಮ್ಮ ಭಾಗದಲ್ಲಿ ಏನೇನು ಕೆಲಸಗಳಾಗಬೇಕು ಅವುಗಳ

ಬಗ್ಗೆ ಎಸ್ಟಿಮೇಟುಗಳನ್ನು ಮಾಡಿಸಿ ಅವಕ್ಕಾಗಿ ಬೇಕಾದ ಪ್ರಾಜೆಕ್ಟುಗಳನ್ನು ಮಾಡಿ ಅನುಕೂಲ ಮಾಡಿ ಕೊಡಬೇಕು. ಹಾಗೆ ಕೋಲಾರದ Bridge ಬಗ್ಗೆ ಚೀಫ್ ಮಿನಿಸ್ಟರು ಗಮನ ಕೊಡಬೇಕು. ಮತ್ತು ಆಲಮಟ್ಟಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಹೇಳಿಕೆಯನ್ನು ಇಲ್ಲಿ ಕೊಡಬೇಕು ಎಂದು ಹೇಳುತ್ತೇನೆ.

ಇಷ್ಟು ಹೇಳಿ ನನ್ನ ನಾಲ್ಕು ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇ ಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಸುಮಾರು 38 ಕೋಟಿಯಷ್ಟು ರೂಪಾಯಿಗಳ ಒಂದು ಬೇಡಿಕೆ ಇದೆ. ಇದರಲ್ಲಿ ಸಣ್ಣ ನೀರಾವರಿಗಾಗಿ ಬಹಳ ಕಡಿಮೆ ಹಣ ಇಟ್ಟಿರುವುದನ್ನು ನೋಡಿ ನನಗಂತೂ ಬಹಳ ವ್ಯಸನವಾಗುತ್ತದೆ. ನಮ್ಮ ದೇಶದಲ್ಲಿ ಸುಮಾರು 37,500 ಕೆರೆಗಳಿವೆ. ಇದಕ್ಕಾಗಿ ಇಟ್ಟಿರುವ ಹಣ ಸುಮಾರು ಎರಡು ಕೋಟಿ ರೂಪಾಯಿಗಳು. ಯಾವ ಒಂದು ಭಾಗಕ್ಕೋಸ್ಕರ ಹಣ ಒದಗಿಸಿದ್ದಾರೆನ್ನುವುದು ನನಗೆ ಅರ್ಥವಾಗುವುದಿಲ್ಲ. ಹೊಸ ಕೆರೆಗಳನ್ನು ಕಟ್ಟಬೇಕಾದರೆ, ಹೊಸ ಪಿಕ್-ಅಪ್‌ಗಳನ್ನು ಮಾಡಬೇಕಾದರೆ ಇರತಕ್ಕ ಕೆರೆಗಳನ್ನು ರಿಪೇರಿ ಮಾಡಲು, ಡೀಸಿಲ್ಟಿಂಗ್ ಮಾಡಿ ಕಟ್ಟೆ ಕಟ್ಟಬೇಕಾದರೆ, ಇವೆಲ್ಲಕ್ಕೂ ಒದಗಿಸಿರುವ ಹಣ ಕೇವಲ ಎರಡು ಸಾವಿರ ರೂಪಾಯಿಗಳು ಎಂದು ಇಟ್ಟರೆ. ಇದರಿಂದ ರೈತರ ಕಣ್ಣು ಒರಸುವುದಕ್ಕಾಗಿ ಇಟ್ಟಿದ್ದಾರೆಂದು ನನಗನಿಸುತ್ತದೆ. ಈ ಒಂದು ಅಂಕೆ ಅಂಶಗಳನ್ನು ನೋಡಿದರೆ ಒಂದು ವರ್ಷಕ್ಕೆ ಸುಮಾರು ಹತ್ತು ಕೋಟಿಯಷ್ಟಾದರೂ ಇಟ್ಟು ಕೊಳ್ಳಬೇಕಾಗಿತ್ತು. ಇದರ ಕಡೆಗೆ ಸರಕಾರ ಏತಕ್ಕೆ ಗಮನಕೊಡಲಿಲ್ಲ ? ಈಗಲಾದರೂ ಗಮನಕೊಡಬೇಕೆಂದು ಒತ್ತಿ ಹೇಳಬೇಕಾಗಿದೆ. ರೈತರು ದೇಶದ ಬೆನ್ನುಮೂಳೆ, ಆಹಾರ ಹೆಚ್ಚಾಗಿ ಉತ್ಪತ್ತಿ ಮಾಡಬೇಕು, ನೀರಾವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು, ನೀರಾವರಿ ಕೆಲಸಗಳಿಗಾಗಿ ಬ್ಲಾಂಕು ಚೆಕ್ಕು ಇದೆ ಎಂದು ಹೇಳುತ್ತಿರುವಂತೆ ಇಲ್ಲಿರುವ ಅಂಕಿಅಂಶಗಳನ್ನು ನೋಡಿದರೆ ಆನೆಗೆ ಹಲ್ವಾ ಕೊಟ್ಟಹಾಗೆ ಆಗುತ್ತದೆ ಎನ್ನುವುದು ಇದರಿಂದ ಕಾಣುತ್ತದೆ. ಮುಂದಾದರೂ ಮಾನ್ಯ ಸರಕಾರದವರು ಕನಿಷ್ಟ ಪಕ್ಷ ಹತ್ತು ಕೋಟಿಯಷ್ಟನ್ನಾದರೂ ಸಣ್ಣ ನೀರಾವರಿಗಾಗಿ ಒದಗಿಸಿಕೊಟ್ಟು ಅದಷ್ಟುಮಟ್ಟಿಗಾದರೂ ಸಣ್ಣಸಣ್ಣ ಕೆರೆಗಳ ರಿಪೇರಿ, ಮತ್ತು ಸಣ್ಣ ಕೆರೆಗಳನ್ನು ಕಟ್ಟಿಸುವುದಕ್ಕೆ ಪಿಕ್‌ಅಪ್‌ಗಳನ್ನು ಮಾಡಲು ತಕ್ಕ ಕ್ರಮ ತೆಗೆದು ಕೊಳ್ಳಬೇಕು. ಅಲ್ಲದೆ ಡೀಸಿಲ್ಟಿಂಗ್ ವ್ಯವಸ್ಥೆಯನ್ನು ಈ ವರ್ಷದಿಂದಲೇ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೆರೆಗಳನ್ನು ಡೀಸಿಲ್ಟು ಮಾಡಿದರೆ ಹಣ ಬೇಕಾದಷ್ಟು ಖರ್ಚು ಬರುವುದಿಲ್ಲ. ಆದರೂ ಹೊಸ ಕೆರೆಗಳನ್ನು ಮಾಡದೇಕೆಂದು ಇದನ್ನು ಕೈಬಿಡಲಾಗಿದೆ ಎಂದು ಹೇಳುತ್ತಾ ಬರುವುದಂತು ನಾನು ಒಪ್ಪುವುದಿಲ್ಲ. ಯಾವಾಗ ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಅನುಕೂಲವಿಲ್ಲವೋ ಅಂತಹ ಪ್ರದೇಶದಲ್ಲಿ ಹಳೆಯ ಕೆರೆಗಳನ್ನು ಡೀಸಿಲ್ಟು ಮಾಡತಕ್ಕದ್ದು, ಜನಗಳ ಹಿತದೃಷ್ಟಿಯಿಂದ ಬಂಜರು ಬಿದ್ದಿರುವ ಜಮೀನುಗಳಿಗೆ ಮಳೆ ಬಹಳ ಕಡಿಮೆ ಬರತಕ್ಕ ಜಾಗಗಳಲ್ಲಿ ಹಣದ ಖರ್ಚು ಕಡಿಮೆ ಬರುವುದರಿಂದ ಈ ಕೆರೆಗಳಲ್ಲಿ ಡೀಸಿಲ್ಟು ಮಾಡುವುದಕ್ಕಾಗಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಿ ಹೇಳುತ್ತೇನೆ.

ಈಗ ಕೆರೆಗಳಿಗಾಗಿ ಮಾಡಿರುವ ಒಂದು ವ್ಯವಸ್ಥೆ ನನ್ನ ಮನಸ್ಸಿಗೆ ಸರಿಯಾಗಿಲ್ಲ. ಒಂದು ಬೆಳೆಗಾಗಿ ನೀರು ಇರತಕ್ಕ ಕೆರೆಗಳೂ ಇವೆ. ಒಂದೊಂದು ಸಮಯದಲ್ಲಿ ಒಂದು ಬೆಳೆ ಮಾಡುವ ಕೆರೆ ನೀರಿನಲ್ಲಿರುವ ಮೀನಿನ ಹರಾಜು ಮಾಡುವ ಒಂದು ಪದ್ಧತಿ ಈಚೆಗೆ ಬಂದಿದೆ. ಇಂತಹ ಕೆರೆಗಳನ್ನು ಮೀನಿಗಾಗಿ ನೂರು ರೂಪಾಯಿಗಳಿಗೆ ಹರಾಜು ಮಾಡುತ್ತಾರೆ. ಇದರಿಂದ ಇಲ್ಲಿನ ನೀರನ್ನು ಪೋಲು ಮಾಡಿ ಸುಮಾರು 5,000 ರೂಪಾಯಿನಷ್ಟು ಬಾಳುವ ಬೆಳೆಯನ್ನು ಪೋಲು ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಇದರಿಂದ ಪ್ರಯೋಜನವೇನಿದೆ ? ಏತಕ್ಕೋಸ್ಕರ ಇದನ್ನು ಹರಾಜು ಮಾಡಿ ಏತಕ್ಕಾಗಿ ಕಂಟ್ರಾಕ್ಟರುಗಳಿಗೆ ಕೊಟ್ಟು ನೀರನ್ನು ಪೋಲು ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆನ್ನುವುದನ್ನು ಸರಕಾರ ತೀವ್ರವಾಗಿ ಯೋಚನೆ ಮಾಡಿಲ್ಲ. ಈ ಕೂಡಲೇ ಕೆರೆಯ ನೀರನ್ನು ನೂರು ರೂಪಾಯಿಗಳಿಗಾಗಿ ಮೀನಿಗಾಗಿ ಹರಾಜು ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಎಲೆಕ್ಟ್ರಿಸಿಟಿ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ವರದಿಯಲ್ಲಿ 7,500 ಪಂಪುಗಳನ್ನು ಕೊಡಬೇಕು ಎಂದು ಅಭಿಪ್ರಾಯಪಟ್ಟು 6,000 ಪಂಪುಗಳನ್ನು ಹೆಚ್ಚಿಗೆ ಕೊಟ್ಟಿರುವುದು ಬಹಳ ಸಂತುಷ್ಟವಾಗಿದೆ ಎಂದು ಹೇಳುವುದು ನನಗೆ ಅರ್ಥವಾಗುವುದಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಮಿನ ಮೂಲಕ ಆಗಿರುವ 200 ಬಾವಿಗಳು ಇವೆ ಮತ್ತು ಕೆರೆಗಳೂ ಇವೆ. ನಮ್ಮ ತಾಲ್ಲೂಕಿನಲ್ಲಿ 250 ಬಾವಿಗಳಿಗಾಗಿ ಎಲೆಕ್ಟ್ರಿಸಿಟಿಯನ್ನು ಕೇಳಿದ್ದಾರೆ. ಸುಮಾರು 10 ಬಾವಿಗಳಿಗೂ ನಮ್ಮ ಸರಕಾರದವರು ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಶಕ್ತಿ ಇಲ್ಲ. ತಂತಿ ಇಲ್ಲ, ಕರೆಂಟು ಇಲ್ಲ, ಎಂದು ಹೇಳುತ್ತಿದ್ದವರು ಹೀಗೆ ಒಂದೊಂದು ಕಷ್ಟವನ್ನು ಹೇಳುತ್ತ ಬಂದರೆ ರೈತರಿಗೆ ಅನುಕೂಲ ಮಾಡಿದಂತಾಗಲಿಲ್ಲ, ಮುಂಚಿನಂತೆ ಕೊಟ್ಟಿದ್ದ ಅಭಿ

(ಶ್ರೀ ಜಿ. ರಾಮೇಗೌಡ)

ಪ್ರಾಯವನ್ನು ನೋಡಿದರೆ ಇನ್ನು ಎಷ್ಟು ವರ್ಷಗಳ ಕಾಲ ರೈತರಿಗೆ ಬೆಳೆಯುವುದಕ್ಕೆ ಬೇಕಾಗುವಂತಹ ಅನುಕೂಲಗಳನ್ನು ಕಲ್ಪಿಸಿಕೊಡುತ್ತೀರಿ ಎನ್ನುವುದನ್ನು ಇನ್ನೂ ದೇಶಕ್ಕೆ ಹೇಳಬೇಕಾಗಿದೆ. ಈಗ 800 ಪಂಪುಗಳನ್ನು ಕೊಡುತ್ತೇವೆ ಎಂದರೆ 1000 ಪಂಪುಗಳಿಗೆ ಸಂತುಷ್ಟರಾಗಿದ್ದಾರೆಂದು ಯಾವ ಆಧಾರದಿಂದ ಹೇಳುತ್ತಿದ್ದಾರೆ.

4 P.M.

ನಮ್ಮ ಮಾನ್ಯ ಜತ್ತಿಯ ವರದಿಯಲ್ಲಿ ವಿ ಹಾವ್ ರೀಚ್ಡ್ ದಿ ಟಾರ್ಜೆಟ್ ಎಂದು ಹೇಳಿದೆ. ಹೀಗೆ ಹೇಳಬೇಕಾಗಿದ್ದರೆ ಸರ್ಕಾರದವರು ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಬಾವಿಗಳನ್ನು ತೆಗೆಸಿದ್ದಾರೆ, ಎಷ್ಟು ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಒದಗಿಸಿದ್ದಾರೆ, ಎಷ್ಟು ಎಕರೆಗೆ ನೀರು ಸರಬರಾಯಾಗುವಂತೆ ಮಾಡಿದ್ದಾರೆ, ಯಾವ ಆಧಾರದ ಮೇಲೆ ಇವರು ಹೀಗೆ 750 ಬಾವಿಗಳೆಂದು ಈ ಒಂದು ಟಾರ್ಗೆಟ್ಟನ್ನು ಫಿಕ್ಸ್ ಮಾಡಿದರು ಎಂದು ನಾನು ಸರ್ಕಾರದವರನ್ನು ಪ್ರಶ್ನೆ ಮಾಡಲಿಚ್ಛಿಸುತ್ತೇನೆ. ನನ್ನ ಮುಂದೆ ಈ ಒಂದು ವರ್ಷದ ಅಂಕಿಸಂಖೆಗಳನ್ನೇ ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಈ ದಿವಸ ಎಲೆಕ್ಟ್ರಿಸಿಟಿ ಪಂಪ್‌ಸೆಟ್‌ಗಳಿಗಾಗಿ ನಮ್ಮ ಒಂದು ತಾಲ್ಲೂಕಿನಲ್ಲೇ 15 ಸಾವಿರ ಅರ್ಜಿಗಳನ್ನು ಕೊಟ್ಟಿದ್ದಾರೆ. ಆ ರೈತರ ಅರ್ಜಿಗಳು ಇನ್ನೂ ಹಾಗೇ ಅಲ್ಲೇ ಕೊಳೆಯುತ್ತಾ ಬಿದ್ದಿವೆ. ಆದ್ದರಿಂದ ನಾನು ಈ ವಿಚಾರದಲ್ಲಿ ರೈತರಿಗೆ ಸಾಕಷ್ಟು ಅನುಕೂಲ ದೊರೆತಿಲ್ಲವೆಂದು ಹೇಳಲಿಷ್ಟಪಡುತ್ತೇನೆ. ಹೀಗಿರುವಾಗ ಸರ್ಕಾರ ಈ ಒಂದು ಕುಂಟು ನೆಪವನ್ನು ನಮ್ಮ ಮುಂದಿಡಲು ಸಾಧ್ಯವಿಲ್ಲವೆಂದು ಹೇಳುತ್ತೇನೆ. ಯಾವ ಒಬ್ಬ ರೈತನೇ ಆಗಲೀ ತನಗೆ ಎಲೆಕ್ಟ್ರಿಕ್ ಪಂಪ್‌ಸೆಟ್ ಬೇಕೆಂದು ಒಂದು ಅರ್ಜಿಯನ್ನು ಕೊಟ್ಟರೆ ಅದು ಅರ್ಜಿ ಕೊಟ್ಟ 15 ದಿವಸಗಳಲ್ಲಿ ಅವನಿಗೆ ಅದು ಸಿಗುವಂತಿರಬೇಕು. ಅಂಥ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಜಾರಿಗೆ ತರಬೇಕೆಂದು ಹೇಳುತ್ತೇನೆ. ತತ್ರಾಪಿ ಮಳೆ ಕಡಮೆಯಿರತಕ್ಕ ಪ್ರದೇಶದಲ್ಲಿ ಈ ಅನುಕೂಲವನ್ನು ರೈತರಾಪಿ ಜನರಿಗೆಲ್ಲಾ ಒದಗಿಸಬೇಕೆಂದು ಕಡ್ಡಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮಳೆ ಕಡಿಮೆಯಿರತಕ್ಕ ಪ್ರದೇಶದಲ್ಲಿ ಒಂದು ಎಕರೆಗೆ ಒಂದು ಸಾವಿರಕ್ಕಿಂತ ಹೆಚ್ಚಿಗೆ ಖರ್ಚು ಬರಬಾರದೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಹೀಗಾಗಿ ಈ ದಿವಸ ನೂರಾರು ಎಸ್ಟಿಮೇಟುಗಳು ಹಿಂದಕ್ಕೆ ಬರುತ್ತಿವೆ. ಅದಕ್ಕೆ ನಾನು ಸಲಹೆ ಮಾಡುವುದೇನೆಂದರೆ: ಎಲ್ಲಿ ಮಳೆ ವರ್ಷಕ್ಕೆ 25 ಇಂಚುಗಳಿಗಿಂತ ಕಡಮೆಯಾಗಿರುತ್ತದೆಯೋ ಅಂಥ ಕಡೆಗಳಿಗೆ ಈ ರೂಲ್ಸನ್ನು ಅನುಸರಿಸಬಾರದೆಂದು ಹೇಳುತ್ತೇನೆ. ಪ್ರತಿ ತಿಂಗಳೂ ತಪ್ಪದೆ ಮಳೆ ಬರತಕ್ಕ ಪ್ರದೇಶವಾಗಿದ್ದರೆ ಪರವಾ ಇಲ್ಲ. ಹಾಗಿಲ್ಲವಾದರೆ ಎಲ್ಲಿ ಮಳೆ 3 ತಿಂಗಳಿಗೊಮ್ಮೆ ಬರುತ್ತದೋ ಅಂಥ ಡ್ರಾಟ್ ಏರಿಯಾಗಳಿಗೆಲ್ಲಾ ಈ ಅನುಕೂಲ ಸಿಗಬೇಕಾಗಿದ್ದರೆ ಈ ರೂಲ್ಸನ್ನು ಸಡಿಲ ಮಾಡಲೇಬೇಕು.

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ಈಗಾಗಲೇ ಎಲ್ಲೆಲ್ಲಿ 25 ಇಂಚುಗಳಿಗಿಂತಲೂ ಮಳೆ ಕಡಮೆಯಾಗಿರುತ್ತದೋ ಅಂಥ ಕಡೆಗಳಲ್ಲಿ ಈ ಅಂದಾಜಿದ ಮಟ್ಟವನ್ನು ಎಕರೆಗೆ 1,500 ರೂ.ಗಳವರೆಗೂ ಏರಿಸಬಹುದೆಂದು ನಾವು ಅಕ್ಟೋಬರ್ ತಿಂಗಳಿನಲ್ಲೇ ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಜಿ. ರಾಮೇಗೌಡ.—ನಮ್ಮ ರಾಜ್ಯದಲ್ಲಿ ಅಂಥ ಪ್ರದೇಶಗಳೇ ಜಾಸ್ತಿಯಿರುತ್ತವೆ. ಅಲ್ಲಿ ಪ್ರತಿ ತಿಂಗಳೂ ಮಳೆ ಬರುವುದಿಲ್ಲ. ಎಲ್ಲೋ ಮೂರು ನಾಲ್ಕು ತಿಂಗಳಿಗೊಮ್ಮೆ ಮಳೆ ಬಂದರೆ ಅದರಿಂದೇನೂ ಪ್ರಯೋಜನವಿಲ್ಲ. ನಮ್ಮ ತಾಲ್ಲೂಕಿನಲ್ಲಿ ಇಂಥ ಪ್ರದೇಶವೆಂದರೆ: ನಾಸಲು ಹೋಬಳಿ ಮತ್ತು ತೊಂಡೆಬಾವಿ ಹೋಬಳಿಗಳು. ಅಲ್ಲಿ ವರ್ಷದಲ್ಲಿ ಮೂರು ತಿಂಗಳು ಮಳೆ ಬಂದರೆ ಇನ್ನು 9 ತಿಂಗಳು ಅಲ್ಲಿ ಮಳೆಯಿರುವುದಿಲ್ಲ. ಅಂಥ ಪ್ರದೇಶದಲ್ಲಿರತಕ್ಕವರಿಗೆ ಈ ರೀತಿ ಎಸ್ಟಿಮೇಟನ್ನು ಮಾಡಿದರೆ ಅನಾನುಕೂಲವಾಗುತ್ತದೆ. ಆದ್ದರಿಂದ ಸರಕಾರದವರು ಈ ವಿಚಾರವನ್ನು ಪುನರ್ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ವಿಚಾರಕ್ಕೆ ಬಂದರೆ: ನಾನು ಇಲ್ಲಿ ಒಂದೆರೆಡು ಮಾತುಗಳನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ: ನಮ್ಮ ಜಿಲ್ಲಾಮಟ್ಟದಲ್ಲಂತೂ ಆಡಳಿತ ಬಹಳ ಸಡಿಲವಾಗಿದೆ. ಯಾರಾದರೊಬ್ಬ ಒಂದು ಅರ್ಜಿಯನ್ನು ಸರ್ಕಾರಕ್ಕೆ ಬರೆದುಕೊಂಡರೆ ಅದರ ಹಿಂದೆ ಪ್ರತ್ಯೇಕವಾಗಿ ಒಬ್ಬ ಮನುಷ್ಯ ಇರಲೇಬೇಕು. ಇಲ್ಲದಿದ್ದರೆ ಆ ಕಾಗದ ಮುಂದಕ್ಕೆ ಹೊರಡುವುದೇ ಇಲ್ಲ. ಅಧಿಕಾರಿಗಳಲ್ಲಿ ಅಂಥ ಒಂದು ಸ್ವಭಾವ ಬಂದುಹೋಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆ ಅಧಿಕಾರಿಗಳಿಗೆ ಒಂದು ಕಟ್ಟುನಿಟ್ಟಾದ ಸೂಚನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಯಾರೇ ಒಂದು ಅರ್ಜಿಯನ್ನು ಕೊಡಲಿ, ಅದನ್ನು ಕೊಟ್ಟ 15 ದಿನಗಳಲ್ಲಿ ಅದರ ವಿಲೇವಾರಿಯಾಗ

ಬೇಕು. ಅದರ ಬಗ್ಗೆ ಅರ್ಜಿದಾರನಿಗೆ ಒಂದು ಎಂಡಾರ್ಸ್‌ಮೆಂಟ್ ಸಿಗಬೇಕು. ಆ ರೀತಿ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಆ ಮನುಷ್ಯ ಆ ಅರ್ಜಿಯ ಹಿಂದೆ ಉಪವಾಸ ತಿರುಗುತ್ತಿದ್ದಾಗ್ಯೂ, ತಲೆಬಾಗಿ ನಮಸ್ಕಾರಮಾಡುತ್ತಿದ್ದಾಗ್ಯೂ ಅವನ ಅರ್ಜಿ ಮುಂದಕ್ಕೆ ಹೋಗುತ್ತಿಲ್ಲವೆಂದರೆ, ಇದೆಂಥಾ ಆಡಳಿತ? ನಾನು ಈ ಸಭೆಗೆ ಮೆಂಬರಾದಮೇಲೆ ಈ ವಿಚಾರದಲ್ಲಿ ನಾನು ಪಟ್ಟಿರತಕ್ಕ ಕಷ್ಟ ಅಷ್ಟಿಷ್ಟಲ್ಲ. ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ ಪದೇ ಪದೇ ಒತ್ತಿ ಒತ್ತಿ ಹೇಳುತ್ತಲೇ ಇದ್ದೇವೆ. ಆದರೇನೂ ಸಾರ್ಥಕವಾಗಿಲ್ಲ. ಇಲ್ಲಿಯವರೆಗೂ ಸರ್ಕಾರ ರೈತನಿಗೇನೂ ಅನುಕೂಲವನ್ನು ಕಲ್ಪಿಸಿಕೊಟ್ಟಿಲ್ಲ. ನಾನು ಕೇಳುತ್ತಿರುವುದು ಸರ್ಕಾರದವರು ತಮ್ಮ ರೂಲ್ಸ್ ರೆಗ್ಯುಲೇಷನ್‌ಗಳನ್ನು ಮುರಿದು ಕೆಲಸ ಮಾಡಬೇಕೆಂದು ಹೇಳುತ್ತಿಲ್ಲ. ರೈತರೇ ನೋಕೇಳಿಕೊಳ್ಳುತ್ತಾರೆ. ಅದನ್ನು ಎಂಟು ದಿವಸಗಳೊಳಗಾಗಿ ಒದಗಿಸುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ನನಗೆ ನಮ್ಮ ತಾಲ್ಲೂಕಿನಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಕೊಡಬೇಕೆಂದು ನೋಟೀಸನ್ನು ಜಾರಿ ಮಾಡಿದ್ದಾರೆ. ಆ ನೋಟೀಸನ್ನು ಜಾರಿ ಮಾಡಿದ್ದರೂ ಯಾವಾಗ ಎಲ್ಲಿ ಎಂದರೆ, ನಾನು ಒಂದು ಮೀಟಿಂಗಿನಲ್ಲಿದ್ದಾಗ. ಆ ನೋಟೀಸನ್ನು ತಂದು ಜಾರಿ ಮಾಡಿ ಅದಕ್ಕೆ ನನ್ನ ರುಜುವನ್ನು ಪಡೆದುಕೊಂಡು ಹೋಗಿದ್ದಾನೆ. ನಾನಾದರೋ ಆ ಟ್ಯಾಕ್ಸನ್ನು ಯಾವತ್ತೋ ಸರ್ಕಾರಕ್ಕೆ ಪಾವತಿ ಮಾಡಿದ್ದೇನೆ. ಹಾಗಾದರೂ ನನಗೆ ಮೊನ್ನೆ ನೋಟೀಸನ್ನು ಜಾರಿ ಮಾಡಿದ್ದಾರೆ. ನಾನು ಒಬ್ಬ ಎಂ. ಎಲ್. ಎ. ನನ್ನಂಥವನಿಗೇ ಹೀಗಾಗುವುದಾದರೆ, ಇನ್ನು ಸಾಮಾನ್ಯರ ಪಾಡೇನಾಗಿರಬೇಕು? ನಾನು ಈ ಇನ್‌ಕಂ-ಟ್ಯಾಕ್ಸನ್ನು ಮೊದಲೇ ಕೊಟ್ಟಿರುವುದಾಗಿ ತಾಶೀಲ್ದಾರರಿಗೂ, ಸಬ್‌ಡಿವಿಜನ್ ಆಫೀಸರಿಗೂ ತಿಳಿಸಿದ್ದೇನೆ. ಅಷ್ಟಾದರೂ ನೋಟೀಸು ಬಂದೇ ಬಂತು. ನನಗೆ ಗೊತ್ತಿರುವಂತೆ ಎಷ್ಟೋ ಕಡೆಗಳಲ್ಲಿ ಕಂದಾಯವನ್ನು ವಸೂಲ್ಮಾಡಿಕೊಂಡು, ಪುನಃ ಬಾಕಿ ತೋರಿಸಿ ರೈತರಿಗೆ ತೊಂದರೆ ಕೊಟ್ಟಿರತಕ್ಕ ನಿದರ್ಶನಗಳು ಅನೇಕ ಇವೆ. ಇಂಥಾ ದಬಾವಣೆಗಳಾಗುತ್ತಿದ್ದರೆ ಸರ್ಕಾರವಿದ್ದೇನು ಪ್ರಯೋಜನ? ಇದನ್ನೆಲ್ಲಾ ಹೇಳಿಕೊಳ್ಳಲು ರೈತನಿಗೆ ಬಾಯಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ; ಈ ಕಾಗದ ಪತ್ರಗಳು ಬೇಗ ವಿಲೇವಾರಿಯಾಗಿ ರೈತನಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಿದರೆ ನಾನು ಇವರಿಗೆ ತುಂಬಾ ಋಣಿಯಾಗಿರುತ್ತೇನೆಂದು ಹೇಳಿ ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕ ಇರಿಗೇಷನ್, ಎಲೆಕ್ಟ್ರಿಸಿಟಿ ಮತ್ತು ಸಾಮಾನ್ಯ ಆಡಳಿತ ಈ ಡಿಮ್ಯಾಂಡುಗಳನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ನಾನು ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ನನಗೆ ತಿಳಿದಿರತಕ್ಕ ಕೆಲವು ಮಾತುಗಳನ್ನೀಗ ಆಡಬಯಸುತ್ತೇನೆ. ರಾಜ್ಯದ ಅನೇಕ ಕಡೆಗಳಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರನ್ನು ನಿಲ್ಲಿಸಿ ವ್ಯವಸಾಯಗಾರರಿಗೆ ನೀರನ್ನೊದಗಿಸುತ್ತಿದ್ದೇವೆಂದು ಈ ಒಂದು ಯೋಜನೆ ನಮ್ಮ ಮುಂದೆ ಇದೆಯೇ ಹೊರತು ಆ ನೀರು ಮಾತ್ರ ರೈತರಿಗೆ ಸರಿಯಾಗಿ ಹೋಗುತ್ತಿಲ್ಲ; ಇವುಗಳ ಪ್ರತಿಫಲ ಬೆಳೆಯತಕ್ಕ ರೈತನಿಗೆ ಸರಿಯಾಗಿ ಬರುತ್ತಿಲ್ಲ. ಆ ನೀರೆಲ್ಲಾ ಹಾಗೇ ಹರಿದು ಸಮುದ್ರಕ್ಕೆ ಹೋಗುತ್ತದೆ. ಈ ವಿಚಾರವನ್ನು ನಾನೀಗ ಈ ಖಾತೆಯನ್ನು ಹೊತ್ತಿರತಕ್ಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಸ್ವಾಮಿ, ಇನ್ನು ಕೆಲವು ಕಡೆ ರೈತನಿಗೆ ನೀರನ್ನೇನೋ ಕೊಟ್ಟಿದ್ದಾರೆ, ಆದರೆ ಅಲ್ಲಿ ರಸ್ತೆಗಳೊಂದೂ ಇಲ್ಲ. ಸಾಲದ್ದಕ್ಕೆ ಜನರು ಮಲೇರಿಯಾದಿಂದ ನರಳುತ್ತಿದ್ದಾರೆ, ಅವರಿಗೆ ಔಷಧಿಗಳಿಲ್ಲ, ಗೊಬ್ಬರ ಸರಿಯಾಗಿ ದೊರೆಯುತ್ತಿಲ್ಲ, ಸೀಳು ಕಾಲುವೆಗಳ ಕೆಲಸ ಸರಿಯಾಗಿ ನಡೆಯದೆ ನೀರೆಲ್ಲಾ ಹರಿದು ಸಮುದ್ರದ ಪಾಲಾಗುತ್ತಿದೆ. ನಾವು ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನೀರನ್ನು ತಡೆಯತಕ್ಕ ಕೆಲಸದಲ್ಲಿ ವಿಫಲರಾಗಿದ್ದೇವೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಭಾಗದಲ್ಲಿ ತಮ್ಮ ವಿಶಿಷ್ಟ ಗಮನ ಕೊಟ್ಟು ಈ ಕೆಲಸಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿ ರೈತರಿಗೆ ಈ ಎಲ್ಲ ಸೌಕರ್ಯಗಳೂ ಒದಗುವಂತೆ ಮಾಡಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಹೇಳಿಕೊಂಡು ಈ ವಿಚಾರಗಳಿಗೆ ಅವರ ಗಮನವನ್ನು ಸೆಳೆಯುತ್ತಿದ್ದೇನೆ. ಇನ್ನು ಈ ಜಲಾಶಯಗಳ ಕೆಳಭಾಗದಲ್ಲಿ ವರ್ಗಾಂತರಿಸಬೇಕಾದ ಸ್ಥಳಗಳು ಬಹಳವಾಗಿವೆ. ಪರಿಹಾರವನ್ನು ಕೊಡತಕ್ಕ ವಿಚಾರದಲ್ಲಿ ಶರಾವತಿಯ ಕೆಳಗಡೆಯಲ್ಲೇ ಒಂದು ರೀತಿ, ತುಂಗಭದ್ರಾ ಜಲಾಶಯದ ಕೆಳಗೇ ಒಂದು ರೀತಿ. ಹೀಗೆ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕತಕ್ಕದ್ದಕ್ಕೆ ಅವಕಾಶವನ್ನು ಕೊಡಬಾರದು. ಆ ಶರಾವತಿಯ ಕೆಳಗೆ ಏನೊಂದು ಪರಿಹಾರವನ್ನು ಕೊಡಲಾಗುತ್ತಿದೆಯೋ ಅದನ್ನೇ ಇನ್ನುಳಿದ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಕಡೆಗಳಲ್ಲಿಯೂ ಕೊಡಬೇಕೆಂದು ಹೇಳುತ್ತೇನೆ. ಎಲ್ಲರಿಗೂ ಒಂದೇ ರೀತಿಯ ಸೌಲತ್ತುಗಳನ್ನೊದಗಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಇನ್ನು ನಮ್ಮ ತಾಲ್ಲೂಕಿನಲ್ಲಿ ಸಿದ್ಧೀಪುರ, ಸನ್ಯಾಸಿ ಕೊಡಮಗ್ಗಿ, ನಿಂಬೇಗಂದಿ, ಕುರುಬರ ವಿಟ್ಲ್ಯಾಪುರ ಮತ್ತು ಕೊಪ್ಪ ಇಲ್ಲಿ ಇವುಗಳನ್ನಿನ್ನೂ ವರ್ಗಾಂತರ ಮಾಡಿಲ್ಲ. ಅಲ್ಲಿ ದನಕರುಗಳು ಸಹಾ ಓಡಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಈ ವಿಚಾರದಲ್ಲಿ ನಾವು ಬೇಕಾದಷ್ಟು ರಿಪೋರ್ಟುಗಳನ್ನು ಮಾಡಿದ್ದೇವೆ. ಸರ್ಕಾರಕ್ಕೆ ಈ ವಿಚಾರವನ್ನು ಎಷ್ಟೋ ವಿಧದಲ್ಲಿ ಮನವರಿಕೆ ಮಾಡಿಕೊಂಡಿದ್ದೇವೆ. ಗ್ರಾಮಗಳನ್ನು ವರ್ಗಾಂತರಿಸಬೇಕಾಗಿದೆ. ಈ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಸರ್ಕಾರ ಪರಿಶೀಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಭದ್ರಾ ಜಲಾಶಯವಿದೆ, ಅಲ್ಲಿ ಅದರ ಮಧ್ಯೆ ಒಂದು ಹಳ್ಳ ಇದೆ, ತೂಬಿನಲ್ಲಿ ನೀರು ಬಿಡುತ್ತಾರೆ, ಕೆಲವು ಕಡೆಗಳಲ್ಲಿ ಪಿಕಪ್ಪುಗಳನ್ನು ಕಟ್ಟುತ್ತಿದ್ದಾರೆ. ಅದನ್ನೆಲ್ಲಾ ಕಟ್ಟಿದ ಮೇಲೆ ಆ ಭಾಗದ ಜನರು ಗ್ರಾಮಗಳಿಗೆ ಹೋಗುವುದಕ್ಕೆ ದಾರಿ ಇಲ್ಲ. ಈ ವಿಚಾರದಲ್ಲಿ ಅಲ್ಲಿನ ಜನರು ಅನೇಕ ಸಾರಿ ಕಾಗದ ಪತ್ರಗಳನ್ನು ಬರೆದಿದ್ದಾರೆ, ನಾನೂ ಕೂಡ ಕಾಗದ ಬರೆದಿದ್ದೇನೆ. ಕೋರ್ಟಿಗೆ ಹೋಗುತ್ತೇವೆಂದು ಅವರು ಹೇಳಿದಾಗ ತಕ್ಷಣದಲ್ಲಿ ನಾನು ಇದನ್ನು ಪ್ರಸ್ತಾಪ ಮಾಡುತ್ತೇನೆ, ನೀವು ಆ ಮಟ್ಟಕ್ಕೆ ಹೋಗುವುದು ಬೇಡವೆಂದು ಹೇಳಿದ್ದಾರೆ. ಆದ್ದರಿಂದ ಈ ಜನಗಳು ಅಲ್ಲಿ ಶೀಘ್ರದಲ್ಲಿ ಓಡಾಡುವ ಹಾಗೆ ಮಾಡಬೇಕೆಂದು ನಾನು ತಿಳಿಸುತ್ತೇನೆ.

ಇನ್ನು ಶರಾವತಿ ಎಲೆಕ್ಟ್ರಿಸಿಟಿ ವಿಚಾರವಾಗಿ ಹೇಳುವುದಾದರೆ, ಇನ್ನು ಕೆಲವೇ ವರ್ಷಗಳಲ್ಲಿ ತೊಂದರೆಯನ್ನು ಪೂರೈಸಬಹುದು. ಮತ್ತು ಮನೆಮನೆಗೆ ಬಂದು ಪವರ್ ತೆಗೆದುಕೊಳ್ಳಿ ಎಂದು ಹೇಳುವ ಕಾಲ ಬರುತ್ತದೆಂದು ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ನಿಜವಾಗಿಯೂ ನಾವು ಉತ್ಪತ್ತಿಯನ್ನು ಹೆಚ್ಚು ಮಾಡಿ ನಮ್ಮ ಕರ್ಣಾಟಕದಲ್ಲಿಯೇ ಹೆಚ್ಚು ಅದರ ಪ್ರತಿಫಲವನ್ನು ಪಡೆಯಬೇಕಾಗಿದೆ. ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ಅದರ ಪ್ರಯೋಗ ನಡೆಯಬೇಕು. ಕೈಗಾರಿಕೆಗಳೂ ಸಹ ಬೆಳೆಯಬೇಕು. ಈಗಾಗಲೇ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಾಡಿ ಹೆಚ್ಚಿಗೆ ಸಹಾಯ ಮಾಡುತ್ತಿದ್ದಾರೆ. ಯಾವ ಕಾರಣದಿಂದ ಒಂದು ತಜ್ಞರ ಕಮಿಟಿ ಇಲ್ಲ, ಟೆಕ್ನಿಕಲ್ ಫೆಸಿಲಿಟೀಸ್ ಇಲ್ಲವೋ ಗೊತ್ತಿಲ್ಲ. ಸಣ್ಣ ಸಣ್ಣ ಕೈಗಾರಿಕೆ ಆಗತಕ್ಕಂಥ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿದೆ. ಆದ್ದರಿಂದ ನಿಜವಾಗಿಯೂ ಕೂಡ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ಯಾವ್ಯಾವ ಭಾಗದಲ್ಲಿ ಕೈಗಾರಿಕೆಗಳು ಆಗಬೇಕೋ ಅಂತಹ ಸ್ಥಳಗಳಲ್ಲಿ ಅವನ್ನು ಸ್ಥಾಪನೆ ಮಾಡುವುದಕ್ಕೆ ತಜ್ಞರನ್ನು ನೇಮಿಸಬೇಕು. ಈಗ ಈ ರಾಜ್ಯದ ಆಡಳಿತ ಚೆನ್ನಾಗಿ ನಡೆಯುತ್ತಿದ್ದರೂ ಕೂಡ ಅದರ ಕಾರ್ಯಗತವಾಗುವ ಕೆಲಸದಲ್ಲಿ ಸರಿಯಾಗಿ ಕೆಲಸವಾಗದೆ ರೈತನಿಗೆ ಸಕಾಲದಲ್ಲಿ ಸಹಾಯ ಮುಟ್ಟುವ ಹಾಗೆ ಕೆಲಸವಾಗುತ್ತಾ ಇಲ್ಲವೆಂಬ ವಿಚಾರವನ್ನು ಸ್ಪಷ್ಟವಾಗಿ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನಾನಾದರೋ ಅದನ್ನು ಒಪ್ಪುತ್ತೇನೆ. ಈ ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಇವತ್ತು ಯಾವುದಾದರೂ ಕಚೇರಿಗಳಲ್ಲಿ ಗೆಜೆಟೆಡ್ ಅಧಿಕಾರಿಗಳು ಇಲ್ಲದೇ ಹೋದರೆ ಅನೇಕ ನೌಕರರು ರೈತರನ್ನು ಅನುಸರಿಸಿಕೊಂಡು ಹೋಟಲಿನಲ್ಲಿಯೇ ಕಾಲ ಕಳೆಯುತ್ತಿರುತ್ತಾರೆ. ಇದು ಸತ್ಯಸಂಗತಿ. ಹಿಂದೆ ಒಂದು ಸಾರಿ ಗೆಜೆಟೆಡ್ ಅಧಿಕಾರಿಗಳ ಕೈಕೆಳಗೆ ಕೆಲಸ ಮಾಡುವವರು ಕೆಲವರು ಇದ್ದರು, ಅವರು ಅವನ ಹತೋಟಿಯಲ್ಲಿ ಇರದಿದ್ದರೆ ಅಂತಹ ಗುಮಾಸ್ತನಿಗೆ ಜುಲ್ಮಾನೆ ಹಾಕುವುದು, ಸಸ್ಪೆಂಡ್ ಮಾಡುವುದು ಇಂಥಾದ್ದಕ್ಕೆ ಅವಕಾಶವಿತ್ತು. ಬ್ರಿಟಿಷ್ ಸರ್ಕಾರ ಬಂದ ಮೇಲೆ ಅದನ್ನು ಕಡಿಮೆ ಮಾಡಿದ್ದರು. ಈಗಿನ ಸರ್ಕಾರ ಬಂದ ಮೇಲೆ ಈ ವಿಷಯದ ಬಗ್ಗೆ ಎಷ್ಟು ಪ್ರಸ್ತಾಪ ಮಾಡಿದರೂ ಕೆಲಸಗಳು ಹಿಂದಿಂದೆಯೇ ಹೋಗುತ್ತಿವೆ. ಇದರಿಂದ ನಾವು ಏನು ಮಾಡಬೇಕೆಂಬುದೇ ಗೊತ್ತಾಗಲಿಲ್ಲ. ಆಫೀಸುಗಳಿಗೆ ಕಾಗದಗಳು ಬಂದರೆ ಗುಮಾಸ್ತ ಏನು ಮಾಡುತ್ತಾನೆಂದರೆ ಅವನ್ನು ತೆಗೆದುಕೊಂಡು ಹೋಗಿ ಬುಟ್ಟಿಯಲ್ಲಿ ಹಾಕುತ್ತಾನೆ. ಕಾಫಿ ಕುಡಿಸಿದರೆ ಮಾತ್ರ ಅವನ್ನು ಮೇಲಕ್ಕೆತ್ತುತ್ತಾನೆ. ಆ ಕಾಗದಗಳು ಮೇಲಕ್ಕೆ ಬರುತ್ತವೆ. ಅವನಿಗೆ ಏನಾದರೂ ಶಿಕ್ಷೆ ಮಾಡೋಣವೆಂದರೆ ಅಧಿಕಾರಿಗೆ ಯಾವ ಅಧಿಕಾರವೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ಚತುರತೆಯಿಂದ ಆಡಳಿತದಲ್ಲಿ ರಿಕಾರ್ಡ್ಸ್ ಸರಿಯಾಗಿಡಬೇಕಾಗಿದೆ. ಗೆಜೆಟೆಡ್ ಅಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಗೂ ಅವರ ಕೈ ಕೆಳಗೆ ಕೆಲಸ ಮಾಡುವ ಸಿಬ್ಬಂದಿ ವರ್ಗದವರ ಮೇಲೆ ಜುಲ್ಮಾನೆ ಹಾಕಲು, ಸಸ್ಪೆಂಡ್ ಮಾಡುವುದಕ್ಕೆ ಪೂರ್ಣ ಅಧಿಕಾರವನ್ನು ಕೊಡುವುದರಿಂದ ಆಡಳಿತ ದಕ್ಷತೆಯಿಂದ ಇರುತ್ತದೆ, ಸರ್ಕಾರೀ ಕೆಲಸ ಚೆನ್ನಾಗಿ ನಡೆಯಬಹುದು, ಅದರಿಂದ ಸರ್ಕಾರಕ್ಕೆ ಕೀರ್ತಿಯೂ ಬರುವುದು.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇಡೀ ಕರ್ಣಾಟಕ ರಾಜ್ಯವನ್ನು ಹಿಂದೆ ಭಕ್ತ ಭಂಡಾರಿ ಬಸವಣ್ಣನವರು ಆಳುತ್ತಿದ್ದರು. ಈಗ ಶ್ರೀಮಾನ್ ನಿಜಲಿಂಗಪ್ಪನವರು ಆಳುತ್ತಿದ್ದಾರೆ. ಅವರ ಒಂದು ಸತ್ಯಸಂಧತೆಯಿಂದ ಈ ಕರ್ಣಾಟಕ ರಾಜ್ಯ ಹಾಲು ಉಕ್ಕಿದ ಹಾಗೆ ಉಕ್ಕಲಿ ಎಂದು ಹೇಳಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರಿಗೆ ಅಂತಹ ಒಂದು ಶಕ್ತಿ, ಸಾಮರ್ಥ್ಯ ಒದಗಿಬರಲಿ, ಅಂತಹ ಒಂದು ರಾಜ್ಯ ಅವರ ಕಾಲದಲ್ಲಿಯೇ ಆಗಲಿ ಎಂದು ನಾನು ಭಗವಂತನನ್ನು ಪ್ರಾರ್ಥಿಸಿ, ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

†Sri D. PARAMESWARAPPA (Honnali).—Criticisms have been levelled by Hon. Members about nepotism, corruption, inefficiency and favouritism. In this context, I would like to recall to the memory of the House the statement made by the elderly statesman, Sri Nijalingappa, who happens to be the Chief Minister of our State. On one occasion, he said that it is not possible even for God to eradicate these evils.

Mr. SPEAKER.—Let us deal with mundane matters on the floor of this House.

Sri D. PARAMESWARAPPA.—Let me assure the Chair that this statement was made by the Chief Minister on the floor of the House. That is why I am referring to it.

Mr. SPEAKER.—Then let it not be repeated.

Sri D. PARAMESWARAPPA.—My point is that if he, being the Chief Minister, should make such a statement, it would encourage officers who are corrupt and commit *mal-practices*.

Mr. SPEAKER.—I do not think he made any such statement on the floor of this House.

Sri D. PARAMESWARAPPA.—He did, Sir. If it is his idea that God Himself manifests in the form of corruption, then nobody on earth could prevent it. He must be very firm minded in dealing with cases of corruption. Criticisms have been levelled very often and I see no improvement in the general administration. Can we attribute it to the soft-heartedness of the Chief Minister or can we say that the Chief Minister is incapable of tackling this problem. The reasons for inefficiency in administration and the reasons for corruption and nepotism are not far to seek. As far as I have analysed the reasons and as submitted by so many Hon. Members, there is inordinate delay in disposal of files. One method of avoiding delay, I would suggest, is to prepare a code of conduct and rules for the disposal of files.

Therefore, it is my humble suggestion to the Chief Minister that there should be a code of conduct and rules so far as disposal of files is concerned and whoever violates the rules must be strictly punished. If such a procedure is adopted, efficiency in the general administration would definitely improve.

Another thing is, when the Ministers go on official tours, people play on the psychology of the poor. So, the Ministers should avoid coming in contact with such people. If they are interested in their organisation work, they must go on private tours and meet their party men. That is my suggestion.

Coming to the Demand on irrigation and electricity, I emphasise that more importance should be given to medium and minor irrigation and well irrigation. Major irrigation projects create several problemes

(SRI D. PARAMESWARAPPA)

like the submerging of vast lands, paying copmensation to those people who lose their land and rehabilitating them and all that. Incidentally, I request the Chief Minister to enlighten me about the proposal of upper Tungabhadra Project, at Honnali. I was not present when my interpellation about this came up. There is a scare and apprehension created in the mind of the people of my taluk and they are selling away their land because the project is expected to come and the lands would be submerged.

Sri S. NIJALINGAPPA.—I have said that the matter is still in the preliminary stage and nothing is settled as to where the dam should be. So, nobody need be scared.

Sri D. PARAMESWARAPPA.—Sir, my friends have said that the amount allotted for minor irrigation is very inadequate. I also join them and say that there should be adequate funds for minor irrigation. Some friends, while speaking, said that more provision has been made for the intergrated areas. I am of the opinion that equity requires that preference should be given to those backward areas. I have seen the conditions in Bijapur and other districts and I was moved to see the scarcity conditions in those areas. I therefore emphasise that more attention should be paid to those under-developed areas and take up projects there as early as possible. Almatti and Narayanapur and Upper Krishna projects should be taken up very early.

Coming to Electricity Board, as far as rural electrification work is concerned, the activities of the Board are very slow. One of the reasons advanced by the Board for this is non-availability of materials like transformers and wires. But, this should not come in the way of rural electrification work. As an alternative, I suggest that factories to manufacture these materials should be established in our State itself. I hope Government would evince greater interest in this matter. Then, there is the difficulty of supplying power to the pump sets and the hours are restricted.

Sri S. NIJALINGAPPA.—Sir, within one week we are getting 10,000 K. W. and within another week we are getting another 10,000 K. W. So, this trouble will not be there.

Sri D. PARAMESWARAPPA.—Thank you Sir. With these words I conclude.

Mr. SPEAKER.—The House will now stand adjourned to meet at 8-30 A.M. tomorrow.

The House adjourned at Thirty Minutes past Four of the Clock to meet again at Thirty Minutes past Eight of the Clock on Sunday, the 29th March 1964.

WD 2600—GPB—900—19-6-64

MYSORE LEGISLATIVE ASSEMBLY

TWENTY-SEVENTH DAY.

Sunday, 29th March 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE.

SRI ALUR HANUMANTHAPPA (Deputy Minister for Minor Irrigation).—I beg to lay the statement showing the region-wise expenditure on Communications and Buildings and Minor Irrigation and Public Health during the period from 1962-63 to 1964-65, as promised by the Minister for P. W. D. during the course of his reply to demands under P. W. D.

BUDGET ESTIMATES FOR 1964-65

Demands for Grants Nos. 6, 10, 29, 30, 45, 46 and 64.

(Debate continued.)

† ಶ್ರೀ ಸಿದ್ಧಯ್ಯ ಕಾಶೀಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡ್ ನಂಬರ್ 6,10,29,30,45,46,47 ಇವುಗಳ ಬಗ್ಗೆ ನಾನು ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ಡಿಮ್ಯಾಂಡುಗಳಿಗೂ ಒಟ್ಟಾಗಿ 19,74,37,190 ರೂಪಾಯಿಗಳಿಗೆ ಈ ಸಭೆಯ ಮಂಜೂರಾತಿಯನ್ನು ಕೇಳಲಾಗಿದೆ. ಈ ತೆರಿಗೆಗಳ ವಿಷಯದಲ್ಲಿ ಹೇಳುವುದಾದರೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಮೊದಲು 20 ಪರ್ಸೆಂಟ್ ಇದ್ದುದ್ದನ್ನು 35 ಪರ್ಸೆಂಟಿಗೆ ಏರಿಸಿದ್ದಾರೆ. ಇದರಲ್ಲಿ ಸಿನಿಮೋಟಾಗ್ರಾಫ್ ಟ್ಯಾಕ್ಸಿನಲ್ಲಿ ಹೆಚ್ಚಿಗೆ ಟ್ಯಾಕ್ಸ್‌ಗಳನ್ನು ಹಾಕುವಂತಾದ್ದು ಏನಿದೆಯೋ ಅದು ಸಾಮಾನ್ಯ ಜನರ ಮೇಲೆ ಬೀಳುವುದರಿಂದ ಅದನ್ನು 20 ಪರ್ಸೆಂಟಿಗೆ ಇಳಿಸಬೇಕು. ಆ ತೆರಿಗೆಯನ್ನು 20 ಪರ್ಸೆಂಟಿಗಿಂತ ಜಾಸ್ತಿ ಹಾಕಬಾರದು. ಇಷ್ಟೇ ಅಲ್ಲದೆ ಈಗ ಬೆಂಗಳೂರಿನಲ್ಲಿ ನಡೆಯುವ ಸಿನಿಮಾಗಳಿಗೆ ಹೊಸಧಾಗಿ ಒಂದು ರೂಪಾಯಿನಿಂದ ಎರಡೂವರೆ ರೂಪಾಯಿ ತೆರಿಗೆಯನ್ನು ಹಾಕಬೇಕೆಂದು ನಿಗದಿ ಮಾಡಿದ್ದಾರೆ. ಇದನ್ನು ಹಾಕುವುದಾದರೆ ಈ ಟ್ಯಾಕ್ಸ್ ಜನಸಾಮಾನ್ಯರ ಮೇಲೆ ಮತ್ತು ಕಾರ್ಮಿಕರ ಮೇಲೆ ಬಿದ್ದು ಅದನ್ನು ವಸೂಲು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಸಾಮಾನ್ಯವಾಗಿ ಮನುಷ್ಯ ಬೆಳಗಿನಿಂದ ಸಾಯಂಕಾಲದವರೆಗೆ ದುಡಿದು ಬೇಸತ್ತು ಹೋಗಿರುವುದರಿಂದ ಅವನು ಯಾವುದಾದರೂ ಒಂದು ಮನರಂಜನೆಯ ಕಾರ್ಯಕ್ರಮವನ್ನು ನೋಡುವ ಪದ್ಧತಿ ಇರುವುದರಿಂದ ಈ ಟ್ಯಾಕ್ಸ್‌ಗಳನ್ನು ಹೆಚ್ಚು ಹೆಚ್ಚು ಹಾಕುವುದರಿಂದ ಆ ಟ್ಯಾಕ್ಸ್‌ಗಳೆಲ್ಲಾ ಸಾಮಾನ್ಯ ಮನುಷ್ಯನ ಮೇಲೆ ಬೀಳುತ್ತದೆ.

†Indicates that the remarks or speeches have not been revised by the member concerned

(ಶ್ರೀ ಸಿದ್ದಯ್ಯ ಕಾಶೀಮಠ್)

ಆದ್ದರಿಂದ ಆ ತೆರಿಗೆಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕು. ನಾಟಕ ಪ್ರದರ್ಶನ, ಸಂಗೀತ, ಹಾಡುಗಾರಿಕೆ ಮತ್ತು ಕುಸ್ತಿಪಂದ್ಯಗಳ ಬಗ್ಗೆ ತೆರಿಗೆಗಳನ್ನು ಹಾಕುವುದರಲ್ಲಿ ರಿಯಾಯಿತಿಯನ್ನು ಕೊಡಬೇಕು. ಈಗ ನಾಟಕ ಪ್ರದರ್ಶನ, ಸಂಗೀತ, ಹಾಡುಗಾರಿಕೆ ಮತ್ತು ಕುಸ್ತಿಪಂದ್ಯಗಳ ಬಗ್ಗೆ ತೆರಿಗೆಯನ್ನು ಹಾಕುವುದರಲ್ಲಿ ರೆಕಗ್ನೈಸ್ಡ್ ಇನ್ಸ್ಟಿಟ್ಯೂಷನ್‌ಗಳಿಗೆ ಮಾತ್ರ ರಿಯಾಯಿತಿಯನ್ನು ಕೊಡುತ್ತಿದ್ದಾರೆ. ಉಳಿದವುಗಳಿಗೆ ಕೊಡುತ್ತಿಲ್ಲ. ಸಂಗೀತ, ಹಾಡುಗಾರಿಕೆ, ನಾಟಕ ಕಂಪೆನಿಗಳು ಅಮೆಚೂರ್ ಇಂಥವುಗಳು ರೆಕಗ್ನೈಜ್ ಆಗದೇ ಇದ್ದು ಅಂಥವರುಗಳ ಧರ್ಮಾರ್ಥವಾಗಿ ಯಾವುದಾದರೂ ಒಂದು ಸಂಸ್ಥೆಗಾಗಲೀ ಅಥವಾ ಯಾವುದಾದರೂ ಒಂದು ದೇವಸ್ಥಾನದ ಜೀರ್ಣೋದ್ಧಾರದ ವೆಚ್ಚಕ್ಕಾಗಲಿ ಪ್ರದರ್ಶನವನ್ನು ನಡೆಸಿದಾಗ ಅವುಗಳಿಗೆ ಈ ತೆರಿಗೆಯನ್ನು ಹಾಕುವುದರಲ್ಲಿ ವಿನಾಯಿತಿಯನ್ನು ಕೊಡಬೇಕು. ಮತ್ತು ಆದಷ್ಟು ಮಟ್ಟಿಗೆ ನಾಟಕ ಪ್ರದರ್ಶನ, ಸಂಗೀತ, ಹಾಡುಗಾರಿಕೆ, ಮುಂತಾದುವುಗಳಿಗೆ ತೆರಿಗೆಯನ್ನು ವಿಧಿಸುವುದರಲ್ಲಿ ವಿನಾಯಿತಿಯನ್ನು ಕೊಟ್ಟು ಅವುಗಳನ್ನು ವಜಾ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು 1962ನೇ ಇಸವಿಯ ಮೈಸೂರು ಬಿಲ್ಡಿಂಗ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಈ ಕಾನೂನು 1964ನೇ ಇಸವಿ ಜನವರಿ ತಿಂಗಳಿನಿಂದ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದಿದೆ. ಯಾವ ಯಾವ ಮುನಿಸಿಪಾಲಿಟಿಯಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿದ್ದಾರೆಂದು ಈಗಾಗಲೇ ಸರ್ಕಾರದವರು ಅಳತೆ ಮಾಡಿದ್ದಾರೆಯೇ ? ನಿಜವಾಗಿಯೂ ಈ ಬಿಲ್ಡಿಂಗ್ ಟ್ಯಾಕ್ಸನ್ನು ವಸೂಲು ಮಾಡತಕ್ಕದ್ದು ದುರ್ದೈವದ ಸಂಗತಿಯಾಗಿದೆ. ಈ ಬಿಲ್ಡಿಂಗ್ ಟ್ಯಾಕ್ಸನ್ನು ವಸೂಲು ಮಾಡತಕ್ಕ ಸಂಬಂಧದಲ್ಲಿ ಬೇಕಾಗಿರತಕ್ಕ ಫಾರಂಗಳು ಗೌರ್ನಮೆಂಟ್ ಪ್ರೆಸ್ಸಿನಲ್ಲಿ ಮಾರಾಟವಾಗದೆ ಇರತಕ್ಕ ಪರಿಸ್ಥಿತಿ ಬಂದಿದೆ. ಸಾಮಾನ್ಯವಾಗಿ ಎಲ್ಲಾ ಮುನಿಸಿಪಾಲಿಟಿಗಳೂ ಮತ್ತು ಬೆಂಗಳೂರು ಕಾರ್ಪೊರೇಷನ್ನಿನವರು ಈ ಬಿಲ್ಡಿಂಗ್ ಟ್ಯಾಕ್ಸನ್ನು ನಾವು ವಸೂಲು ಮಾಡುವುದಿಲ್ಲ ಎಂದು ಕಡಾ ಖಂಡಿತವಾಗಿ ಹೇಳಿದ್ದುಂಟು. ಈ ಒಂದು ಕಾನೂನಿನಿಂದ ಅನೇಕ ಜನಗಳಿಗೆ ತೊಂದರೆಯಾಗಿದೆ ಎಂದು ಅನೇಕ ಜನಗಳು ಹೇಳಿದ್ದನ್ನು ಕಿವಿಯಾರ ಕೇಳಿದ್ದೇನೆ. ಈ ಒಂದು ತೆರಿಗೆಯನ್ನು ವಸೂಲು ಮಾಡತಕ್ಕ ಸಂಬಂಧದಲ್ಲಿ ಬೇಕಾಗಿರತಕ್ಕ ಫಾರಮುಗಳನ್ನು ಯಾರು ಸಪ್ಲೈ ಮಾಡಬೇಕೆಂಬುದನ್ನು ಕೂಡ ಸರ್ಕಾರದವರು ನಿಗದಿ ಮಾಡಿಲ್ಲ. ಈ ಟ್ಯಾಕ್ಸನ್ನು ಹಾಕಬೇಕಾದರೆ ಇದು ಎಷ್ಟು ಮನೆಗಳ ಮೇಲೆ ಬೀಳುತ್ತದೆ ಎನ್ನುವ ಒಂದು ಸರ್ವೆಯನ್ನೂ ಕೂಡ ಸರ್ಕಾರದವರು ಮಾಡಿಲ್ಲ. ಆದ್ದರಿಂದ ಈಗಲಾದರೂ ಕೂಡ ಸರ್ಕಾರದವರು ಈ ಟ್ಯಾಕ್ಸ್ ಎಷ್ಟು ಮನೆಗಳ ಮೇಲೆ ಬೀಳುತ್ತದೆ ಎನ್ನುವ ಒಂದು ಸರ್ವೆಯನ್ನು ಮಾಡುವುದಕ್ಕೋಸ್ಕರ ಅದಕ್ಕೇ ಪ್ರತ್ಯೇಕವಾಗಿ ಒಬ್ಬ ಇಂಜಿನಿಯರನ್ನು, ಒಬ್ಬ ಸರ್ವೆಯರನ್ನು ನೇಮಿಸಿ ಅದರ ಅಂಕಿಅಂಶಗಳನ್ನು ಶೇಖರಣೆ ಮಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಮೊನ್ನೆ ದಿವಸ ಹಣಕಾಸಿನ ಮಂತ್ರಿಗಳು ಮಾತನಾಡುತ್ತ ಹೇಳಿದರು ಬಡವರ ಮನೆಗಳಿಗೆ ಕರಬಿದ್ದರೆ ಅದನ್ನು ಕಂತು ಪ್ರಕಾರ ಕೊಡಬಹುದು ಎಂದು. ಬಡವರು ಎನ್ನುವ ವಿಚಾರವನ್ನು ನಮ್ಮ ಮಂತ್ರಿಗಳು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಸಾಹುಕಾರರು ಮಾತ್ರ ಈ ಕರದ ವಿಚಾರದಲ್ಲಿ ಪ್ರತಿಭಟಿಸುತ್ತಿದ್ದಾರೆ, ಉಳಿದವರು ಪ್ರತಿಭಟಿಸುತ್ತಿಲ್ಲ ಎಂದು ಹೇಳುತ್ತಾರೆ. ಜಾಗಗಳು ಬಹಳ ಧಿವಸಗಳಿಂದ ಇವೆ. ಸಾಹುಕಾರರಾಗಿರುವವರು ಇವತ್ತಿನ ದಿವಸ ಬಡವರಾಗಿರುತ್ತಾರೆ. ಇಂಥ ಪರಿಸ್ಥಿತಿ ನಮ್ಮ ಮುಂದೆ ಇದೆ. ಸರ್ಕಾರದವರು ಸರ್ವೆ ವಗೈರೆ ಮಾಡಿ ಎಷ್ಟು ಮನೆಗಳು ಈ ಕಾಯದೆಯ ವ್ಯಾಪ್ತಿಗೆ ಬರುತ್ತವೆ, ಯಾವ ತೆರನಾಗಿದೆ ಎಂದು ನೋಡಿ ಗಟ್ಟಿಮುಟ್ಟಾಗಿ ಜಾರಿ ಮಾಡಿದರೆ ವಸೂಲ್ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕಾಯದೆಗೆ ನಮ್ಮ ರಾಜ್ಯದ ಮೂಲೆ ಮೂಲೆಯಿಂದಲೂ ಪ್ರತಿಭಟನಾ ಪತ್ರಗಳು ಬರುತ್ತಿವೆ, ಸಭೆಗಳನ್ನು ಮಾಡಿ, ಕಾನ್ಫರೆನ್ಸ್‌ಗಳನ್ನು ಮಾಡಿ ಈ ಕರವನ್ನು ಹಾಕುವುದು ಯೋಗ್ಯವಲ್ಲ, ಇದನ್ನು ವಜಾ ಮಾಡಬೇಕು ಎಂದು ಹೇಳುದ್ದಾರೆ. ಸರ್ಕಾರದವರು ಇದನ್ನು ಜಾರಿ ಮಾಡುವುದಕ್ಕೆ ಮೊದಲು; ವಸೂಲು ಮಾಡುವುದಕ್ಕೆ ಮೊದಲು ಈ ಕರ ಎಷ್ಟು ಮನೆಗಳ ಮೇಲೆ ಬೀಳುತ್ತದೆ, ಅದನ್ನು ಯಾವ ರೀತಿ ವಸೂಲಿ ಮಾಡಬೇಕು ಎಂದು ಯೋಚನೆ ಮಾಡಬೇಕಾಗಿದೆ. ಅಲ್ಲದೆ ಈ ಆಕ್ಟ್ ಪುಸ್ತಕಗಳನ್ನು ಆದಷ್ಟು ಮಟ್ಟಿಗೆ ಜನರಿಗೆ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ.

ಪ್ರಯಾಣಿಕರ ಮತ್ತು ಸರಕುಗಳ ಮೇಲೆ ಕರ ಹಾಕುವ ಕಾಯದೆಯನ್ನು ಜಾರಿಯಲ್ಲಿ ತಂದಿದ್ದೀರಿ. ಇದು 1961ನೇ ಇಸವಿ ಅಕ್ಟೋಬರ್ ಒಂದನೆಯ ತಾರೀಖಿನಿಂದ ಜಾರಿಯಲ್ಲಿ ಬಂದಿದೆ. ಇದರ ಅಜಮಾಯಿಷಿಯಾಗಿ ಬರತಕ್ಕದ್ದು 130 ಲಕ್ಷ ರೂಪಾಯಿ ಎಂದು ಹಾಕಿದ್ದೀರಿ. 1961ರಿಂದ ಜಾರಿಯಲ್ಲಿ ತಂದರೂ ಈ ಕರವನ್ನು ವಸೂಲಿ ಮಾಡದೆ ಇರುವುದಕ್ಕೆ ಕಾರಣವೇನು ಎಂದು ಹೇಳಿಲ್ಲ. ಒಮ್ಮಿಂದೊಮ್ಮೆಲೇ 1961 ರಿಂದ 1964–65ನೆ ಸಾಲಿನವರೆಗೂ ವಸೂಲು ಮಾಡಿದರೆ ಅದರಿಂದ

ಬಹಳ ಕಠಿಣವುಂಟು. 130 ಲಕ್ಷ ರೂಪಾಯಿಗಳನ್ನು ಯಾವ ರೀತಿಯಿಂದ ವಸೂಲಿ ಮಾಡುತ್ತೀರಿ ? ಮೋಟಾರು ಮತ್ತು ಲಾರಿಗಳ ಮಾಲೀಕರು ತಮ್ಮ ಕಡೆಗೆ ಒಂದು ಮನವಿಯನ್ನು ಕಳಿಸಿದ್ದಾರೆ ಎಂದು ತಿಳಿದುಬಂದಿದೆ. ನಾವು ಇದನ್ನು ಕೊಡಬೇಕು ಎಂದರೂ ಅದನ್ನು ಪ್ರಯಾಣಿಕರ ಮೇಲೆ ಮತ್ತು ಯಾವನು ಸಾಮಾನು ಕಳಿಸುತ್ತಾನೆಯೋ ಅವರ ಮೇಲೆ ಹಾಕಿ ಕೊಡಬೇಕು, ಅದನ್ನು ಕಂತುಗಳ ಮೇಲೆ ಕೊಡುತ್ತೇವೆ ಎಂದು ತಿಳಿಸಿದ್ದಾರೆ. ಇದಕ್ಕೆ ಸರ್ಕಾರದವರು ರಿಯಾಯಿತಿ ಕೊಡಬೇಕೆಂದೂ, ಆ ಪ್ರಕಾರ ಕೊಡುವುದಕ್ಕೆ ಅಡ್ಡಿ ಇಲ್ಲವೆಂದೂ ಹೇಳುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕಾದರೆ, ನಾನು ಕಟ್ ಮೋಷನ್‌ನಲ್ಲಿ ಕೊಟ್ಟ ಹಾಗೆ ಡಿವಿಜನಲ್ ಕಮಿಷನರ್ ಹುದ್ದೆಯನ್ನು ಕಡಿಮೆ ಮಾಡಬೇಕು. ಈ ಹುದ್ದೆಗಳನ್ನು ಕಡಮೆ ಮಾಡಿ ಆ ಆಫೀಸುಗಳನ್ನು ತೆಗೆದಿದ್ದಾದರೆ ಸರ್ಕಾರಕ್ಕೆ 10 ಲಕ್ಷ ಉಳಿತಾಯವಾಗುತ್ತದೆ. ಇದನ್ನು ಮೇಲಿಂದ ಮೇಲೆ ನಾವು ಹೇಳುತ್ತ ಬಂದಿದ್ದೇವೆ. ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿಯವರು ಕೂಡ ಈ ಹುದ್ದೆಗಳನ್ನು ತೆಗೆಯಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದಾರೆ. ಇದು ಸರ್ಕಾರಕ್ಕೂ ದೊಡ್ಡದಲ್ಲ. ಮಾನ್ಯ ರೆವೆನ್ಯೂ ಮಂತ್ರಿಗಳು ಮಾತನಾಡುತ್ತ ಇವನ್ನು ತೆಗೆಯುತ್ತೇವೆಂದು ಹೇಳಿದರು. ಮೊಟ್ಟ ಮೊದಲನೆಯದಾಗಿ ಗುಲ್ಬರ್ಗ ಆಫೀಸನ್ನು ತೆಗೆಯುತ್ತೇವೆಂದು ಹೇಳುತ್ತಿದ್ದವರು ಕಡೆಗೆ ಅದನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಆರ್ಥಿಕ ದೃಷ್ಟಿಯಿಂದ ಹತ್ತು ಲಕ್ಷ ರೂಪಾಯಿಗಳ ಉಳಿತಾಯ ಮಾಡುವುದಕ್ಕೆ ಈ ಆಫೀಸುಗಳನ್ನು ತೆಗೆಯಬೇಕು. ರೆವೆನ್ಯೂ ಅಪಲೇಟ್ ಟ್ರಿಬ್ಯೂನಲ್ ಒಂದನ್ನು ಗುಲ್ಬರ್ಗಾಕ್ಕೆ ಏರ್ಪಾಡು ಮಾಡಿಕೊಟ್ಟರೆ ಅಲ್ಲಿಂದ ಬಂದಿರತಕ್ಕ ಅಪೀಲುಗಳಲ್ಲಿ ಗುಲ್ಬರ್ಗದಿಂದ ಬೆಂಗಳೂರಿಗೆ ಸುಮಾರು 360 ಮೈಲಿ ಮತ್ತು ಗುಲ್ಬರ್ಗದಿಂದ ಬೆಳಗಾವಿಗೆ 200 ಮೈಲಿ ದೂರ ಹೋಗುವುದು ತಪ್ಪುತ್ತದೆ. ಆ ಡಿವಿಜನ್ನಿಗೆ ಸಂಬಂಧಪಟ್ಟ ಜನರಿಗೆ ಅನುಕೂಲ ಮಾಡಿದ ಹಾಗೆ ಆಗುವುದರಿಂದ ಗುಲ್ಬರ್ಗದಲ್ಲಿ ಒಂದು ರೆವೆನ್ಯೂ ಅಪಲಟ್ ಟ್ರಿಬ್ಯೂನಲ್ ತೆಗೆದು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಆಫೀಸುಗಳ ಬಗ್ಗೆ ಹೇಳಬೇಕಾದರೆ ಡೆಪ್ಯುಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರು ಪ್ರತಿ ತಿಂಗಳೂ ಮೀಟಿಂಗ್‌ಗಳನ್ನು ಕರೆಯುತ್ತಾರೆ. ಇದಕ್ಕೆ ಎಲ್ಲ ಬಿ.ಡಿ.ಓ.ಗಳು ಮತ್ತು ತಹಸೀಲ್‌ದಾರರುಗಳನ್ನು ಕರೆಯುತ್ತಾರೆ. ಅಸಿಸ್ಟೆಂಟ್ ಕಮಿಷನರ ಆಫೀಸಿನಲ್ಲಿ ಕರೆದಾಗ ಎರಡು ದಿನ ಮತ್ತು ಡೆಪ್ಯುಟಿ ಕಮಿಷನರ ಆಫೀಸಿನಲ್ಲಿ ಕರೆದಾಗ ಮೂರು ದಿನ. ಈ ರೀತಿ 5 ದಿನ ಪ್ರತಿ ತಿಂಗಳಲ್ಲಿ ಹೋಗತಕ್ಕ ಪರಿಸ್ಥಿತಿ ಇದೆ. ಕಮಿಷನರು, ತಹಸೀಲ್ದಾರರು ಪ್ರತಿ ತಿಂಗಳೂ ಇಷ್ಟು ದಿವಸ ಪ್ರವಾಸ ಮಾಡಬೇಕೆಂಬ ನಿಯಮವಿದೆ. ಆ ರೀತಿ ಅಸಿಸ್ಟೆಂಟ್ ಕಮಿಷನರು ಅವರಿಗೆ ಸಂಬಂಧಪಟ್ಟ ತಾಲ್ಲೂಕುಗಳಿಗೆ ಹೋಗುತ್ತಾರೆ. ಅವರು ಕೊಡತಕ್ಕ ಹೇಳಿಕೆಗಳು, ತಿಳುವಳಿಕೆಗಳಿದ್ದರೆ ಅದನ್ನು ಪ್ರವಾಸ ಮಾಡಿದಾಗ ಮತ್ತು ಆಫೀಸು ಇನ್‌ಸ್ಪೆಕ್ಟ್ ಮಾಡಿದಾಗ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಡೆಪ್ಯುಟಿ ಕಮಿಷನರು ಕರೆದ ಮೀಟಿಂಗ್‌ನಲ್ಲಿ ಅಸಿಸ್ಟೆಂಟ್ ಕಮಿಷನರು, ತಹಸೀಲ್ದಾರರು ಎಲ್ಲರೂ ಕೂಡಿರುತ್ತಾರೆ. ಆದುದರಿಂದ ಈ ಒಂದು ಮೀಟಿಂಗ್ ಸಾಕು ಎಂದು ನಾನು ಹೇಳುತ್ತೇನೆ. ಇದರಿಂದ ಟಿ.ಎ. ಮತ್ತು ಡಿ.ಎ. ಉಳಿತಾಯವಾಗುವುದಲ್ಲದೆ ಸಮಯವೂ ಉಳಿತಾಯವಾಗುತ್ತದೆ. ಮತ್ತು ಇದರಿಂದ ಅವರಿಗೆ ಆಗತಕ್ಕ ತೊಂದರೆಗಳೂ ನೀಗುತ್ತವೆಂದು ಹೇಳುತ್ತೇನೆ.

ಸೀನಿಯಾರಿಟಿ ಬಗ್ಗೆ ಮೇಲಿಂದ ಮೇಲೆ ಹೇಳಿದ್ದೇವೆ. ಹೆಚ್ಚಾಗಿ ನೋಡಬೇಕು ಎಂದರೆ ಮುಂಬೈ ಕರ್ಣಾಟಕದಿಂದ ಬಂದಿರತಕ್ಕ ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆ ಎಂದು ನಾನು ಹೇಳಬೇಕಾಗಿದೆ. ಅಗ್ರಿಕಲ್ಚರಲ್ ಇಲಾಖೆ ಬಗ್ಗೆ ಹೋಲಿಕೆಗಳನ್ನು ನೋಡುವಾಗ ಬಿ.ಎಸ್‌.ಸಿ. (ಎಜಿ) ಮತ್ತು ಎಲ್‌ಎಜಿ ಎಂದು ಏನು ಈಕ್ವೇಟ್ ಮಾಡಿದ್ದಾರೆ, ಅದರ ಬಗ್ಗೆ ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ಇದು ಬಹಳ ದುಸ್ತರವಾದುದು. ಇದರ ಬಗ್ಗೆ ಮನಸ್ಸನ್ನು ಕೊಡಬೇಕು. ನಾನು ಹೇಳುವುದೇನೆಂದರೆ ಈಗ ನಮ್ಮಲ್ಲಿ ಒಬ್ಬ ದಕ್ಷರಾದ ಚೀಫ್ ಸೆಕ್ರೆಟರಿಯವರಿದ್ದಾರೆ. ಅವರ ಜೊತೆಗೆ ಸಂಬಂಧಪಟ್ಟ ಇಲಾಖೆಯ ಸೆಕ್ರೆಟರಿ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಮೂರು ಜನಗಳೂ ಕೂಡಿ ಎಲ್ಲ ಸೀನಿಯಾರಿಟಿ ಪಟ್ಟಿಗಳನ್ನೂ ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಮುಂದಿನ ವರ್ಷದೊಳಗಾಗಿ ಇದನ್ನು ಮುಗಿಸುತ್ತೇನೆ ಎಂದು ಮುಖ್ಯ ಮಂತ್ರಿಗಳು ಎರಡು ವರ್ಷದಿಂದಲೂ ಹೇಳುತ್ತಿದ್ದಾರೆ. ಆ ಭರವಸೆಯ ಮೂಲಕ ಕೊಟ್ಟ ತಮ್ಮ ಮಾತನ್ನು ಅವರು ಉಳಿಸಿಕೊಳ್ಳಬೇಕು. ಇನ್ನು ಮೂರು ನಾಲ್ಕು ತಿಂಗಳ ಒಳಗಾಗಿ ಎಲ್ಲ ಸೀನಿಯಾರಿಟಿ ಪಟ್ಟಿಗಳ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳಬೇಕು. ಆದರಿಂದ ಅನ್ಯಾಯವಾಗುವುದಾದರೆ ಪೂರ್ತಿಯಾಗಿ ಆಗಲಿ, ಅನುಕೂಲವಾದರೂ ಆಗಲಿ. ಈಗ ಇರುವ ತೊಂದರೆ ಬೇಗ ನಿವಾರಣೆಯಾಗಲಿ ಎಂದು ಹೇಳುತ್ತೇನೆ.

ಸೆಕ್ರೆಟೇರಿಯಟ್ ವಿಚಾರವಾಗಿ ಹೇಳಬೇಕಾದರೆ ಯಾವ ಕಾಗದಗಳೂ ಸರಿಯಾದ ಸಮಯಕ್ಕೆ ನಮಗೆ ಬರುತ್ತಿಲ್ಲ. ನಿನ್ನೆಯ ದಿವಸ ಶ್ರೀಮಾನ್ ಎ. ಜೆ. ದೊಡ್ಡಮೇಟಿಯವರು ಹೇಳಿದರು, ಒಂದು ಕಾಗದವನ್ನು ಹುಡುಕಬೇಕಾದರೆ ಬಹಳ ತೊಂದರೆಯಾಗುತ್ತದೆ ಎಂದು. ಯಾರಾದರೂ ಒಬ್ಬ

(ಶ್ರೀ ಸಿದ್ದಯ್ಯ ಕಾಶೀಮಠ್)

ಮಂತ್ರಿಗಳನ್ನು ಕಾಣಬೇಕಾದರೆ ದೊಡ್ಡ ತೊಂದರೆ ಬಂದಿದೆ. ಮಂತ್ರಿಗಳ ಆಫೀಸು ಬಾಗಿಲಿನಲ್ಲಿ ತಾಸುಗಟ್ಟಲೆ ಕಾಯಬೇಕು. ನಿನ್ನೆ ಒಬ್ಬ ಕಾಂಗ್ರೆಸ್ ಸದಸ್ಯರು ಕೂಡ ಮಂತ್ರಿಗಳ ಬಾಗಿಲಿನಲ್ಲಿ ಬಹಳ ಹೊತ್ತು ಹೊರಗಡೆಯೇ ನಿಂತಿದ್ದರು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಿನ್ನೆ ಒಂದು ದಿನ ಹಾಗೆ ಆಗಿರಬಹುದು. ಯಾವತ್ತಿಗೂ ಹಾಗೆಯೇ ಆಗುತ್ತದೆಂದು ಹೇಳಬೇಡಿ.

ಶ್ರೀ ಸಿದ್ದಯ್ಯ ಕಾಶೀಮಠ್.—ಜನ ಕುಳಿತುಕೊಳ್ಳುವುದಕ್ಕೆ ಯಾವ ತರಹ ವ್ಯವಸ್ಥೆಯೂ ಇಲ್ಲ. ದಫೇದಾರ ಮಾತ್ರ ಒಂದು ಕುರ್ಚಿ ಹಾಕಿಕೊಂಡು ಕುಳಿತಿರುತ್ತಾನೆ. ಅವರಿಗೆ ಆಗತಕ್ಕ ಪರಿಸ್ಥಿತಿಯನ್ನು ನೋಡಿ ಅದು ದುರ್ದೈವದ ಸಂಗತಿ ಎಂದು ಹೇಳುತ್ತೇನೆ. ಜನತೆಯ ಪ್ರತಿನಿಧಿಗಳಾಗಿರುವವರು ಅವರು ತಂದಿರುವ ಸಂದೇಶಗಳನ್ನು ತಮಗೆ ಮುಟ್ಟಿಸಬೇಕಾಗುತ್ತದೆ. ಮಂತ್ರಿಗಳಿಗೆ ಸಮಯವಿಲ್ಲದೆ ಇದ್ದರೆ ನನಗೆ ಈಗ ಸಮಯವಿಲ್ಲ, ಇಷ್ಟು ಹೊತ್ತಿಗೆ ಬನ್ನಿ ಎಂದು ಹೇಳಿದರೆ ನಾವು ಬರಲಿಕ್ಕೆ ಸಿದ್ಧರಾಗಿದ್ದೇವೆ. ಫೋನ್ ಮೂಲಕ ಕೇಳಿದರೆ ಸಿಕ್ಕುವುದಿಲ್ಲ. ಈ ರೀತಿ ಆದರೆ ನಮ್ಮ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳಿ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಒಂದು ಫೋಲ್ಡಿಂಗ್ ಕುರ್ಚಿಯನ್ನು ನಿಮ್ಮ ಮನೆಯಿಂದ ತರಬೇಕು.

ಶ್ರೀ ಸಿದ್ದಯ್ಯ ಕಾಶೀಮಠ್.—ಅದೇ ರೀತಿ ಮಾಡಬೇಕಾಗುತ್ತದೆ.

Sri S. NIJALINGAPPA.—Dont be too caustic. Let there be a limit for that also.

ಶ್ರೀ ಸಿದ್ದಯ್ಯ ಕಾಶೀಮಠ್.—ನಾವು ಆರಿಸಿ ಬಂದಿರುವ ಭಾಗದ ಜನಗಳ ಕಷ್ಟಗಳನ್ನೂ, ತೊಂದರೆಗಳನ್ನೂ ತಮ್ಮಲ್ಲಿ ನಿವೇದಿಸಿ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡಬೇಕಾಗಿರುತ್ತೆ. ದಿನಾಗಲೂ 50-60 ಪತ್ರಗಳನ್ನು ಬರೆಯುತ್ತಿರುತ್ತಾರೆ. ಅವುಗಳ ಬಗ್ಗೆ ಸರಕಾರವು ಮಾತನಾಡಬೇಕಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ನಮ್ಮ ಪರಿಸ್ಥಿತಿಯೂ ಚಿಂತಾಜನಕವಾಗಿರುತ್ತದೆ, ಅದರ ಮಟ್ಟಿಗಾದರೂ ನಾವು ಬರಬೇಕಾಗುತ್ತದೆ. ಅದಷ್ಟು ಮಟ್ಟಿಗೆ ಸಮಯ ಕೊಟ್ಟು ಅವರು ಹೇಳುವುದನ್ನು ಕೇಳಬೇಕೆಂದು ಹೇಳುತ್ತೇನೆ.

ದಸರಾ ಉತ್ಸವದ ಸಂಬಂಧದಲ್ಲಿ ಕೆಲವು ಕಮಿಟಿಗಳನ್ನು ಮಾಡುತ್ತೀರಿ. ಅದರಲ್ಲಿ ತಜ್ಞರನ್ನೂ, ಆಯಾ ವಿಷಯಗಳಲ್ಲಿ ತಿಳುವಳಿಕೆ ಉಳ್ಳವರನ್ನೂ ಹಾಕುವುದಿಲ್ಲ. ಸಂಗೀತದ ಜ್ಞಾನವಿಲ್ಲದೆ ಇರುವವರನ್ನು ಅದಕ್ಕೆ ಸಂಬಂಧಿಸಿದ ಕಮಿಟಿಯಲ್ಲಿ ಹಾಕುತ್ತೀರಿ. ಹಾಗೆಯೇ ಆಟಪಾಟಗಳ ಕಮಿಟಿಯಲ್ಲಿಯೂ ಇದೆ. ಇದರಿಂದ ಅದರಲ್ಲಿ ದೊರೆಯತಕ್ಕ ಇನಾಮುಗಳು ಸರಿಯಾದವರಿಗೆ ಸಿಕ್ಕದೆ ಯಾರಿಗೋ ಹೋಗತಕ್ಕ ಪರಿಸ್ಥಿತಿ ಇದೆ. ಆದುದರಿಂದ ಅದಷ್ಟು ಮಟ್ಟಿಗೂ ಈ ಕಮಿಟಿಗಳಿಗೆ ತಜ್ಞರನ್ನು ನೇಮಿಸಬೇಕು ಮತ್ತು ಯೋಗ್ಯರಾದವರಿಗೆ ಇನಾಮುಗಳು ಸಿಕ್ಕುವಂತೆ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ನೀರಾವರಿ ಯೋಜನೆಗಳ ಬಗ್ಗೆ ನನ್ನ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ ಧಾರವಾಡ ಜಿಲ್ಲೆ ನೈಸರ್ಗಿಕವಾಗಿ ವ್ಯವಸಾಯಕ್ಕೆ ಬಹಳ ಚೆನ್ನಾಗಿದೆ. ಈ ಜಿಲ್ಲೆಗೆ ಸಂಬಂಧಪಟ್ಟಂತೆ ಯಾವ ಯೋಜನೆಯೂ ಇಲ್ಲ. ಮೂಗಿಗೆ ತುಪ್ಪ ಹಚ್ಚಿದಂತೆ ಮಲಪ್ರಭಾ ಯೋಜನೆಯಿಂದ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಅದು 10 ವರ್ಷಗಳ ಒಳಗಾಗಿ ಆಗುವುದಿಲ್ಲ. ಶಿರಹಟ್ಟಿ, ಹಾವೇರಿ, ಬ್ಯಾಡಗಿ, ಮುಂಡರಗಿ ತಾಲ್ಲೂಕಿಗೆ ನೀರಾವರಿ ಸೌಕರ್ಯವನ್ನು ಮಾಡಿಕೊಡಬೇಕು ಎಂದು ಅನೇಕ ಸಲ ಮನವಿ ಮಾಡಿಕೊಂಡಿದ್ದೇವೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಹರಿಯುವ ವರದಾ ನದಿ ಯೋಜನೆಯನ್ನು ತೆಗೆದುಕೊಂಡರೆ ಅದರಿಂದ ಈ ನಾಲ್ಕು ತಾಲ್ಲೂಕುಗಳಿಗೂ ಹೆಚ್ಚಿನ ಉಪಕಾರವಾಗುತ್ತದೆ. ಮಲಪ್ರಭಾ ಯೋಜನೆಯಿಂದಲೂ ಕೆಲವು ತಾಲ್ಲೂಕುಗಳಿಗೆ ಅನುಕೂಲವಾಗುವುದರಿಂದ ಅದರ ಕೆಲಸವನ್ನೂ ಮುಂದುವರಿಸಬೇಕು ;

ಶ್ರೀ ಎಸ್. ನಿಜಲಿಂಗಪ್ಪ.—ವರದಾ ನದಿ ಎಕ್ಸ್‌ಟೆನ್ಷನ್ ಯೋಜನೆ ಆಗುತ್ತದೆಂದು ನಾನು ಹೇಳಿದ್ದೇನೆ ; ಆ ಕೆಲಸ ನಡೆಯುತ್ತದೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮುಜಬೂರು ಕಟ್ಟೆ ಕೆಲಸಕ್ಕೆ ಹೋದ ವರ್ಷ ಹಣ ಕೊಟ್ಟಿದ್ದುದು ಈ ವರ್ಷ ತೆಗೆಯುವುದಕ್ಕೆ ಕಾರಣವೇನು ? ನಮ್ಮ ಕ್ಷೇತ್ರದಿಂದ ವಿಧಾನ ಸಭೆಗೆ ಹೋಗಿರುವವರು

ವಿರೋಧ ಪಕ್ಷದವರಾದುದರಿಂದ ಹೀಗೆ ಮಾಡಿದರೆಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಅಲ್ಲಿನ ತಾಲ್ಲೂಕುಬೋರ್ಡ್ ಪ್ರೆಸಿಡೆಂಟರು ಕೂಡ ಹೇಳುತ್ತಿದ್ದಾರೆ. ಮುದ್ದಾಮಾಗಿ ಹೀಗೆ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಕೆರೆ ಕಟ್ಟೆಗಳನ್ನು ಕಟ್ಟುವುದರಿಂದ ನೀರು ಸೋರಿ ಭೂಮಿ ಚೌಳಾಗುತ್ತದೆ ಎಂದು ತಜ್ಞರು ಹೇಳುತ್ತಾರೆ. ನೂರು ಎಕರೆ ನೀರಾವರಿಯಾದರೆ ಒಂದು ಎಕರೆ ಚೌಳಾಗುತ್ತದೆ ಎಂದು ಹೇಳುತ್ತಾರ. ಇದರಲ್ಲಿ ಟೆಕ್ನಿಕಲ್ ಆಗಿ ತೊಂದರೆ ಏನಿದೆ ಎಂದು ನೋಡಬೇಕು. ನೂರಾರು ವರ್ಷ ಹೀಗೆಯೇ ಬಿಟ್ಟರೆ ನೂರಾರು ಎಕರೆ ಭೂಮಿ ಚೌಳಾಗುತ್ತದೆ. ಈ ಬಗ್ಗೆ ತಜ್ಞರನ್ನು ಕೇಳಿದರೆ ಜಲ್ಲಿ ಕೋಡಿಗಳನ್ನು ಹಾಕಿ ಎಂದು ಹೇಳುತ್ತಾರೆ; ಇದರ ಬಗ್ಗೆ ಇಲಾಖೆ ಹೆಚ್ಚು ನಿಗಾ ವಹಿಸಿ, ಅದಷ್ಟು ಮಟ್ಟಿಗೆ ಬುನಾದಿ ಹಾಕುವಾಗ ಏನು ಲೋಪದೋಷವಿದೆ ಎಂದು ನೋಡಬೇಕು. ಖರ್ಚು ಮಾಡುವ ಹಣ ಸದುಪಯೋಗವಾಗಬೇಕೆಂದು ಹೇಳುತ್ತೇನೆ.

† **Sri S. S. KOLKEBAIL** (Coondapur).—Sir, after hearing the speech of the Hon'ble Minister for Public Works, I thought that the argument for two States had died the natural death. But, yesterday again some members were canvassing the same fact. I would say that they are the voice of the deceased brain and a vapouring of such brains only.

Mr. SPEAKER.—The Hon'ble Member may kindly confine himself to the demands and use a less strong language.

Sri S. S. KOLKEBAIL.—The only way to dismiss that cry is by using the verse of our beloved Prime Minister that it is a 'fantastic nonsense. The earlier, we drop that idea, the better. As a matter of fact, if anybody were to complain against the Government, it is the integrated area people because those areas had been neglected. Our Chief Minister, who was responsible for the Karnataka State had held out all promises that he will give us all necessary help and develop the schemes and see that the Karnataka State will be a State flowing with honey and milk.

Sri S. NIJALINGAPPA.—If there is any district which has received the greatest amount of consideration, it is South Kanara.

Sri S. S KOLKEBAIL.—With due respects to the Chief Minister, I may point out that South Kanara District, especially in the matter of irrigation, has been completely neglected. I have got facts and figures, but in view of the present financial position, we do not press much. In other Districts, you have got the water difficulty and inter-state trouble, whereas we have got 22 perennial rivers with nearly ten thousand streams. But, still the ryots have no water available for irrigation purposes. There is a famous song in English saying.

"Water water everywhere, but not a drop for irrigation."

This particular matter has been brought to the notice of the Chief Minister. In my constituency, there are about 42 villages and the minor irrigation works in those villages have been ordered to be stopped saying that in view of the proposed Haladi reservoir coming up, no minor irrigation work should be taken up within the achkat of those areas. Thereby, the entire minor irrigation work has come to a stand-still in my constituency in particular and in the district of South Kanara in general. I have written not less than 6 or 7 letters to the Chief Minister,

(SRI S. S. KOLKEBAIL)

probably those letters might have been forwarded to the concerned Departments—but not a single letter has been replied by the concerned Department. I feel that it will take at least one more year at this rate to reply my letters. I submit that the minor irrigation works, especially in the 42 villages of my constituency, may be ordered to be taken up immediately. In this district, the irrigation works can be taken up only between the months of March and April. Afterwards the rain sets in and there will be very heavy rain for six to eight months and it will be impossible to start any irrigation work during that period. Therefore, I submit that the minor irrigation works may be taken up immediately in this area so that the ryots are helped. Otherwise, it is impossibls for the ryots to grow any second or third crop. To quote one instance, in Coondapur Taluk there is 63,000 acres of land fit for cultivation. The first crop is grown, but the second crop is grown only in 9,000 acres of land and the third crop in only 500 acres of land. This is entirely due to dearth of water for irrigation purposes. Though there is water, we have no facilities. There are no pick-ups and not a single village has been electrified. Last year we were told that electricity will be made available to everybody, but when people apply for electricity, they get the reply that they have no materials to take up the work. In view of non-availability of materials, electrification of rural areas has come to a stand-still. Without the Irrigation Pumps it is impossible for the ryots to make use of the water that is available in each village. We want only a few lakhs of rupees for providing electricity to the Irrigation Pumpsets in this area. If irrigation pumpsets are there working, the food production or the agricultural produce can be increased to 10 times in this area. I myself being a ryot, I know the difficulties of the villagers especially in the summer months of March and April. They cannot bail-out water during the day on account of hot sun. They have to bail-out water between 4 A.M. and 8 A.M. only. They must go to work after 6 P.M. only. If only these rural areas are electrified, the question of food production can be solved to a great extent. Especially when you are worried about 800 or 600 TMCft. of water, the Government has to take a little interest in putting up small vented dams. The cost of putting up these vented dams is also less. In my constituency, there are about 53 villages out of which 43 villages are having perennial streams passing through and if vented dams are put up, I am sure, the food production will go up. Therefore, I request the Chief Minister to take special interest in this matter irrespective of the orders passed by the Chief Engineer that the work should not be taken up.

And secondly, about General Administration: the burden of the song of all the Members is the same, and I also would like to add my chorus. Instead of repeating what they have already said and as the Chief Minister himself knows that it is only carrying coal to New Castle! Last year or year before, the Chief Minister said that we have inherited a rusted machinery and that machinery is being oiled and

hope to have a fine machinery somewere. by 1964 or 1965. But some how, I feel that it is not so much the machinery, but the system that we are following that seems to require attention, whether it is the Tottenham system or some other system. The system which we have inherited is responsible for this beurocratic mentality. Unless we completely discard that system, there is absolutely no hope. Though we have obtained political freedom from the Britishers, some of the things like this beurocratic system is still allowed to continue and this sometime makes us feel that we have not as yet achieved real political, economic and social freedom in the administration of our country.

Now, If I may quote only one instance, to illustrate how far these people do not use even the commonsense while receiving the papers, you will certainly appreciate that this system has outlived its purpose, and you must remove that system and introduce some other system which is common in some other countries. For example, one gentleman wrote a letter to the Railway Department of the Government of India that the Railway may be extended.

Mr. SPEAKER.—Railway Department is not a State Subject. I will not object if his ten minutes are not over.

Sri S. S. KOLKEBAIL.—It was a matter about Railway Sir. In order to find out that there was no railway line from Mangalore to Udipi, they had sent an official all the way from Delhi to Udipi. If they had looked at the railway map, it would have been very clear that there is no railway line from Mangalore to Udipi. This is the kind of men that we have through whom we have to get our works executed.

Even when an M. L. A. writes a letter, those letters also meet with the same fate. When we say these are certain works of public utility in a particular area, prompt action is not taken. I think even the Supervisors of the locality do not know many a time what it is. Much time is lost. Government must consider at least the request from responsible MLAs a little more seriously.

Mr. SPEAKER.—Sri Gopala Gowda will take only ten minutes. Some Members may be under the impression that I am doling out time as I like and that because I like Sri Gopala Gowda, I am giving him more time. I suppose Sri Gopala Gowda will maintain that position.

Sri S. GOPALA GOWDA.—Yes, Sir. ಸ್ವಾಮಿ, ಆಯವ್ಯಯ ಅಧಿವೇಶನದ ಸಂಬಂಧದಲ್ಲಿ ಬಹುಶಃ ಕೊನೆಯ ಇಲಾಖೆಗೆ ಸಂಬಂಧಪಟ್ಟ ಅತಿಮುಖ್ಯವಾದ ಬೇಡಿಕೆಗಳ ವಿಷಯವಾಗಿ ನಿನ್ನೆಯಿಂದ ಈ ಸಭೆಯಲ್ಲಿ ಚರ್ಚೆ ನಡೆಸಿದ್ದೇವೆ. ಇತರ ಬೇಡಿಕೆಗಳು ಮುಖ್ಯವಾಗಿದ್ದರೂ ಕೂಡ ವಿದ್ಯುತ್‌ಶಕ್ತಿ, ನೀರಾವರಿ, ಸಾಮಾನ್ಯ ಆಡಳಿತ ಬೇಡಿಕೆಗಳು ನೇರವಾಗಿ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವುದರಿಂದ ಅವುಗಳಿಗೆ ಮತ್ತಷ್ಟು ಹೆಚ್ಚಿನ ಪ್ರಾಮುಖ್ಯತೆ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಸ್ವಾಮಿ, ತಾತ್ವಿಕವಾಗಿ ನಾನು ರಾಜ್ಯಪಾಲರ ಹುದ್ದೆ ರದ್ದು ಆಗಬೇಕು ಎಂಬ ಭಾವನೆಯನ್ನು ಹೊಂದಿರುತ್ತೇನೆ. ನಮಗೆ ಅನುಭವ ಬಂದ ಹಾಗೆ ದೇಶ ಸ್ವತಂತ್ರವಾದ ಮೇಲೆ ಈ ಹುದ್ದೆ ಒಂದು ರೀತಿಯ ಅಲಂಕಾರವಾಗಿದೆ, ರಬ್ಬರ್ ಸ್ಟ್ಯಾಂಪ್ ಹಾಕತಕ್ಕಂಥಾದ್ದು ಆಗಿದೆ. ಕೇರಳ ರಾಜ್ಯದಲ್ಲಿ ಒಂದು ವಿಶೇಶ ಪರಿಸ್ಥಿತಿ ಉಂಟಾದಾಗ ಮತ್ತು ಕೆಲವು ರಾಜ್ಯಗಳಲ್ಲಿ ವಿಶೇಷ ಪರಿಸ್ಥಿತಿ ಉಂಟಾಗಿ ಆಡಳಿತ ಅವರಿಗೆ ವಹಿಸಿ ಕೊಡಬೇಕಾದ ಸಂದರ್ಭ ಅಂಥ ಕೆಲವು ಘಟನೆ ಕಂಡಿದ್ದೇವೆ. ಹೊರತಾಗಿ ಬೇರೆ ಯಾವ ಒಂದು ವ್ಯವಸ್ಥೆ ಮಾಡುವುದಕ್ಕೆ ದೇಶದಮುಂದೆ ಅಂಥ ಪರಿಸ್ಥಿತಿ ಇಲ್ಲ.

Mr. SPEAKER.—Not a correct rendering of the position of the Governor. Under the Constitution, he has got ample powers.

ಶ್ರೀ ಎಸ್. ಗೋಪಾಲಗೌಡ.—ಪರಿಸ್ಥಿತಿಯನ್ನು ಉತ್ತಮ ಪಡಿಸಲು ಸಾಧ್ಯವೇ ಎಂಬುದನ್ನು ಮುಖ್ಯ ಮಂತ್ರಿಗಳು ಬೇರೆ ಮುಖ್ಯಮಂತ್ರಿಗಳೊಡನೆ, ಕೇಂದ್ರ ಸರಕಾರದೊಡನೆ ಆಲೋಚನೆ ಮಾಡುವುದು ಅಗತ್ಯ ಎಂದು ನನಗೆ ಅನ್ನಿಸುತ್ತದೆ. ಇನ್ನು ರಾಜಕೀಯದಿಂದ ನಿವೃತ್ತರಾದವರಿಗೆ, ಮುಖ್ಯ ಮಂತ್ರಿ ಪದವಿಯಿಂದ ನಿವೃತ್ತರಾದವರಿಗೆ, ಕೇಂದ್ರ ಸರಕಾರದಲ್ಲಿ ಮಂತ್ರಿ ಪದವಿಯಿಂದ ನಿವೃತ್ತರಾದವರಿಗೆ ಒಂದು ಹುದ್ದೆ ಒದಗಿಸಬೇಕೆಂಬ ಉದ್ದೇಶವಿದ್ದ ಪಕ್ಷದಲ್ಲಿ ಅದನ್ನು ನಾವು ಎಷ್ಟು ಹೇಳಿದರೂ ಪ್ರಯೋಜನವಾಗುವುದಿಲ್ಲ. ಎಲ್ಲ ರಾಜ್ಯಪಾಲರು ತಮ್ಮ ಹುದ್ದೆಯಿಂದ ನಿವೃತ್ತರಾದ ಮೇಲೆ ಸರಕಾರದ ವಿರುದ್ಧ ತಮ್ಮ ಅನುಭವ ಹೇಳಿಕೆಗಳನ್ನು ಕೊಡುವಂಥ ಅನೇಕ ಉದಾಹರಣೆಗಳನ್ನು ನಾವು ಕಂಡು ಕೊಳ್ಳಬಹುದು. ಈ ವಿಷಯ ಅಷ್ಟಕ್ಕೇ ಬಿಡುತ್ತೇನೆ. ಹೆಚ್ಚಿಗೆ ಹೇಳಲು ಇಷ್ಟ ಪಡುವುದಿಲ್ಲ.

ಸ್ವಾಮಿ, ಇದುವರೆಗೆ ರಾಜ್ಯಪಾಲರಾಗಿರುವವರ ಬಗ್ಗೆ ನಾನು ಒಂದು ನಿಲುವನ್ನು ತೆಗೆದು ಕೊಂಡಿದ್ದೇನೆ. ಅದು ಮಾನ್ಯ ಸಭೆಗೂ ಗೊತ್ತಿದೆ. ಅದು ಏನು ಅಂದರೆ ಯಾರು ಒಂದು ರಾಜ್ಯದ ರಾಜರಾಗಿದ್ದಾರೆಯೋ ಅಂಥವರನ್ನು ರಾಜ್ಯಪ್ರಮುಖರಾಗಿ ಅಥವಾ ರಾಜ್ಯಪಾಲರನ್ನಾಗಿ ಅದೇ ರಾಜ್ಯದಲ್ಲಿ ನೇಮಿಸಬಾರದು ಎಂಬ ಅಭಿಪ್ರಾಯ ನಾನು ಹೊಂದಿದ್ದೇನೆ. ಅದಕ್ಕೆ ಅನೇಕ ಕಾರಣಗಳು ಇವೆ. ಜನ ತಂತ್ರದ ಈ ತತ್ವ ಸರ್ವಮಾನ್ಯವಾಗಿದೆ ಎಂದು ಹೇಳುತ್ತೇನೆ.

Mr. SPEAKER.—He should not develop that point further. What he has said is wrong. It is not the State that appoints the Governor. It is the President. If he wants he may take a representation to the Parliament and express his views there He may do it anywhere else, except in this Assembly.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲಿ ತಮ್ಮ ಸಲಹೆ ಗಮನದಲ್ಲಿಟ್ಟುಕೊಳ್ಳುತ್ತೇನೆ. ಒಂದು ಸ್ಪಷ್ಟ ಕಾರಣವನ್ನು ಮೊದಲು ತಿಳಿಸಲು ಇಷ್ಟ ಪಡುತ್ತೇನೆ. ಇದುವರೆಗೆ ರಾಜ್ಯಪಾಲರಾಗಿದ್ದವರು ಹೊರಗಡೆ ರಾಜ್ಯಕ್ಕೆ ರಾಜ್ಯಪಾಲರಾಗಿ ಹೋಗುತ್ತಿದ್ದಾರೆ. ಅವರ ಬಗ್ಗೆ ನನಗೆ ವೈಯುಕ್ತಿಕವಾಗಿ ಗೌರವ ಇದೆ. ಅವರು ಹೊರಗಡೆ ಹೋಗಿ ಮದ್ರಾಸ್ ರಾಜ್ಯದ ರಾಜ್ಯಪಾಲರಾಗುವವರು ಇರುವುದರಿಂದ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಕೂಡ ಸಲ್ಲಿಸಬಯಸುತ್ತೇನೆ. ಒಂದು ವಿಷಯ, ಸ್ವಾಮಿ. ರಾಷ್ಟ್ರಾಧ್ಯಕ್ಷರು ರಾಜ್ಯಪಾಲರನ್ನು ಇದುವರೆಗೆ ನೇಮಕ ಮಾಡುತ್ತಾರೆ ಎಂದು ಹೇಳುತ್ತಾರೆ. ಅದನ್ನು ಒಪ್ಪುತ್ತೇನೆ. ಅದು ಎಲ್ಲರಿಗೂ ವಿದಿತವಾಗಿದೆ. ರಾಜ್ಯಪಾಲರ ನೇಮಕ ಮಾಡುವಾಗ್ಗೆ ರಾಜ್ಯಗಳ ಮೇಲೆ, ರಾಜ್ಯ ಸರಕಾರದ ಮೇಲೆ, ಮುಖ್ಯಮಂತ್ರಿಗಳ ಮೇಲೆ, ಮಂತ್ರಿ ಮಂಡಳದ ಮೇಲೆ, ಅವರ ಇಷ್ಟವಿಲ್ಲದೆ ಇರತಕ್ಕಂಥವರನ್ನು ರಾಜ್ಯಪಾಲರನ್ನಾಗಿ ಹೊರಿಸುತ್ತಾರೆಯೇ ಎಂಬುದು ಪರಿಶೀಲನಾರ್ಹವಾದುದು. ಅಥವಾ ರಾಜ್ಯಸರ್ಕಾರದವರು ಕೇಂದ್ರ ಸರಕಾರಕ್ಕೆ ಮಾಡುವ ಬೇಡಿಕೆಗಳಿಗೆ ಏನಾದರೂ ಮಾನ್ಯತೆ ಇದೆಯೇ ? ಇದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ.

Mr. SPEAKER.—Does he mean to suggest that the Governor should be appointed in accordance with the wishes of the Chief Minister ? It is the absolute discretion of the President.

ಶ್ರೀ ಎಸ್. ಗೋಪಾಲ ಗೌಡ.—ಅದನ್ನು ಪರಿಶೀಲನೆ ಮಾಡಬೇಕಾದುದು ಅಗತ್ಯ. ಈ ನೇಮಕದಲ್ಲಿ ಮೇಲಿನಿಂದ ತಮಗೆ ಬೇಕಾದವರನ್ನು ಕಳಿಸುತ್ತಾರೆಯೇ ? ತಮಗೆ ಬೇಕಾದುದನ್ನು ಹೇರುತ್ತಾರೆಯೇ ? ಅಥವಾ ರಾಜ್ಯಸರಕಾರದ ಅನುಮತಿ ಸಲಹೆ ಸೂಚನೆಗಳನ್ನು ಕೇಳಿಕೊಳ್ಳುತ್ತಾರೆಯೇ ?

Mr. SPEAKER.—Thse are all matters for discussion in the Parliament and not here.

ಶ್ರೀ ಎಸ್. ಗೋಪಾಲ ಗೌಡ.—ನಾನು ಈ ವಿಷಯ ಅಷ್ಟಕ್ಕೆ ಬಿಡುತ್ತೇನೆ. ಸ್ವಾಮಿ, ಕುಮಾರ ಕೃಪಾ ಇತಿಹಾಸ ನೋಡಿದರೆ ಮಾನ್ಯ ನಿಜಲಿಂಗಪ್ಪನವರಿಗೆ ಗೊತ್ತಿದೆ ಅದು ಒಳ್ಳೆಮನೆ ಅಲ್ಲಾ ಎಂದು ಕಾಣುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕಾಗಿಯೇ ಏನು ನಿಮ್ಮಿಂದ ನಾನು ಬೈಯಿಸಿಕೊಳ್ಳುತ್ತಿರುವುದು ?

ಶ್ರೀ ಎಸ್. ಗೋಪಾಲ ಗೌಡ.—ಅದು ಒಳ್ಳೇ ಮನೆ ಅಲ್ಲಾ ಎಂದು ನನಗೆ ಅನಿಸುತ್ತದೆ. ಈ ಹಿಂದೆ ಕುಮಾರ ಕೃಪಾದಲ್ಲಿ ಇದ್ದವರು ಅಧಿಕಾರ ಕಳೆದುಕೊಂಡಿರುತ್ತಾರೆ. ಆ ವಿಷಯ ಈಗ ನನಗೆ ಅಪ್ರಕೃತ.

Mr. SPEAKER:—Is he believer in astrology ?

ಶ್ರೀ ಎಸ್. ಗೋಪಾಲ ಗೌಡ.—ಜ್ಯೋತಿಷ್ಯದಲ್ಲಿ ನನಗೆ ನಂಬಿಕೆ ಇಲ್ಲಾ ಸ್ವಾಮಿ.

ಇಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು "ಕುಮಾರ ಕೃಪವನ್ನು" ಹೊಸದಾಗಿ ಬರತಕ್ಕಂಥ ರಾಜ್ಯಪಾಲರಿಗೆ ತೆರವು ಮಾಡಿಕೊಟ್ಟು ತಾವು "ಬಲ್ಲಬ್ರೂವಿಗೆ" ಹೋಗುತ್ತೇವೆ ಎಂದು ಹೇಳಿದ್ದಾರೆ. ಇದರಿಂದ ಒಂದು ಹೊಸ ಸಮಸ್ಯೆ ಉದ್ಭವಿಸುತ್ತದೆ. ಅದೇನೆಂದರೆ "ರಾಜ ಭವನ" ಎಲ್ಲಿರಬೇಕು, ಹೇಗೆ ನಡೆಯಬೇಕು ಎಂದು. ಇದುವರೆಗೂ ನಡೆಯುತ್ತಾ ಇದ್ದಂಥ ವ್ಯವಸ್ಥೆಯಲ್ಲಿ ವಿಶೇಷ ಬದಲಾವಣೆಗಳು ಆಗಬೇಕು. ಹಿಂದೆ ಇದ್ದಂಥ ರಾಜ್ಯಪಾಲರು ತಮ್ಮ ಸಂಬಳವನ್ನು ತೆಗೆದುಕೊಳ್ಳುತ್ತಾ ಇರಲಿಲ್ಲ, ಮತ್ತು ಕೆಲವು ಅಲೋಯನ್ಸ್‌ಗಳನ್ನೂ ತೆಗೆದುಕೊಳ್ಳುತ್ತಾ ಇರಲಿಲ್ಲ, ಇದು ನಮಗೆ ಗೊತ್ತಿದೆ. ಅವರ ಮೈಸೂರು ಮತ್ತು ಬೆಂಗಳೂರು ಅರಮನೆಗಳ ಬಗ್ಗೆ ಹೋದ ಸಲ ಹಣಕಾಸಿನ ಮಂತ್ರಿಗಳು ಸ್ವಲ್ಪ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಹಿಂದೆ ಆ ಪ್ರಶ್ನೆ ನಮ್ಮ ಮುಂದಿತ್ತು. ಹಿಂದೆ ನಡೆದಂಥ ಒಪ್ಪಂದದಲ್ಲಿ ಯಾವ ರೀತಿ ಇದೆ. ನಮಗೆ "ಲಲಿತ ಮಹಲ್" ಆ ಹೊರತು ಇನ್ಯಾವುದಾದರೂ ನಮ್ಮ ರಾಜ್ಯಕ್ಕೆ ಸೇರುವಂಥ ಷರತ್ತುಗಳಿವೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಕೆಲವು ವಿಷಯಗಳನ್ನು ಆಯುವ್ಯಯ ಪಟ್ಟಿಯಲ್ಲಿ ಬದಲಾವಣೆ ಮಾಡಬೇಕಾದುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವು ಯಾವುವೆಂದರೆ, ಇದೇ ರಾಜ್ಯಪಾಲರು ಮುಂದುವರಿಯಬಹುದು ಮತ್ತು ಮಧ್ಯೆ ಎಲ್ಲಿಯಾದರೂ ಕೆಲವರು ನೇಮಕವಾಗಬಹುದು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು, ಈ ಒಂದು ಆಯವ್ಯಯವನ್ನು ಸಿದ್ಧಪಡಿಸಲಾಗಿದೆ. ಈಗ ಹೊಸಬರು ರಾಜ್ಯಪಾಲರಾಗಿ ಬರುತ್ತಾರೆ. ಆದ್ದರಿಂದ ಈ ಆಯವ್ಯಯದಲ್ಲಿ ಅನೇಕ ಬದಲಾವಣೆಗಳನ್ನು ಮಾಡಬೇಕಾಗುತ್ತದೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ಒಂದು ಐಟಂ 179ನೇ ಪೇಜಿನಲ್ಲಿ

	Rs.
"Repairs to Palace Buildings ...	75,000
Maintenance of Palace Buildings ...	75,000
Electricity Charges on account of Royalty on Street Lights Maintenance of Palace Electrical Installations including Electricity Charges	12 lakhs

ಇತ್ಯಾದಿ, ಇತ್ಯಾದಿ, ಇದೆ. ಇದು ಬೇರೆ ಕಡೆಯಲ್ಲಿಯೂ ಗಾರ್ಡನ್ನುಗಳ ವಿಷಯದಲ್ಲಿ ಬಂದಿದೆ. ಹೀಗೆ ಅನೇಕ ಖರ್ಚುಗಳು ಸರಕಾರಿ ಬಾಬಿಗೆ ಬೀಳುತ್ತಿವೆ ಎಂದು ಅನೇಕ ಸಲ ಹಿಂದೆ ಸರಕಾರದ ಗಮನಕ್ಕೆ ತಂದಿದ್ದೆ. ಆದರೆ ಅವುಗಳನ್ನು ವಹಿಸದಿರಲು ಬೇರೆ ತೊಡರುಗಳು, ತೊಂದರೆಗಳು ಇರಬಹುದು. ಆದರೆ ಮಾನ್ಯ ನಿಜಲಿಂಗಪ್ಪನವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಮ್ಮ ಮಂತ್ರಿಮಂಡಲದಲ್ಲಿ ಈ ವಿಷಯದ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಿ, ಇದರಲ್ಲಿ ರಾಜ್ಯಕ್ಕೆ ಯಾವ ರೀತಿಯಿಂದ ಹಣಕಾಸಿನ ನಷ್ಟವಾಗುತ್ತಿವೆ ಎಂದು ನೋಡಿಕೊಳ್ಳಬೇಕು. ಆಸ್ತಿಪಾಸ್ತಿ ವಿಷಯದಲ್ಲಿಯೂ ಹಿಂದೆ ಒಮ್ಮೆ ನಾನು ಹೇಳಿದ್ದೆ. ಬೆಂಗಳೂರು ಅರಮನೆಯನ್ನು 4 ಕೋಟಿ ರೂಪಾಯಿಗೆ ಕೊಂಡುಕೊಳ್ಳುವುದಕ್ಕೆ ಸರಕಾರ ಹೊರಟಿದೆ ಅಂತ ಒಂದು ಹೇಳಿಕೆ ಕೊಟ್ಟೆ. ಅದು ನಿಜವೋ, ಸುಳ್ಳೋ ಎಂದು ಸರಕಾರ ವಿವರಣೆ ಕೊಡಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಸುಳ್ಳು, ಸುಳ್ಳು.

ಶ್ರೀ ಎಸ್. ಗೋಪಾಲ ಗೌಡ.—ಕೊಂಡುಕೊಳ್ಳದೆ ಇದ್ದುದರಿಂದ ನನ್ನ ಹೇಳಿಕೆ ಸುಳ್ಳು ಆಯಿತು. ಅದು ನಾನು ಒಪ್ಪುತ್ತೇನೆ. ಮಾತುಕತೆ ಆಗಿದ್ದಿರಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಅದು ನಿಜವಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಆಗಲಿ ಸ್ವಾಮಿ, ಈ ವಿಷಯಕ್ಕೆ ಸಂಬಂಧಪಟ್ಟಂತೆ, ಅರಮನೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ, ಮತ್ತು ಹೊಸ ರಾಜ್ಯಪಾಲರಿಗೆ ರಾಜ ಭವನವನ್ನು ಒದಗಿಸ ತಕ್ಕಂಥ ವಿಷಯದಲ್ಲಿ ಸರಕಾರ ಏನು ನಿಲುವನ್ನು ವಹಿಸಲಿದ್ದಾರೆ ಎಂದು ತಾವು ಈ ಸಭೆಗೆ ಸ್ಪಷ್ಟಪಡಿಸಬೇಕಾದ್ದು ಈ ಸಂದರ್ಭದಲ್ಲಿ ಬಹಳ ಅಗತ್ಯ.

ನಾನು ಈ ಮಂತ್ರಿ ಮಂಡಳದ ಬಗ್ಗೆ ಕೆಲವು ಖೋತಾ ನಿರ್ಣಯಗಳನ್ನು ಕಳುಹಿಸಿದ್ದೆ, ಆ ಮೇಲೆ ಕಳುಹಿಸುವುದನ್ನು ಬಿಟ್ಟುಬಿಟ್ಟೆ. ಈ ಖೋತಾ ನಿರ್ಣಯಗಳು ಇವತ್ತೂ ಕೆಲವು ಬಂದಿವೆ. ಕಾಮರಾಜ ಸೂತ್ರದ ಪ್ರಕಾರ ಈ ರಾಜ್ಯದ ಮಂತ್ರಿಮಂಡಳದ ಸಂಖ್ಯೆಯನ್ನು ಇಳಿಸಬೇಕು, ಈ ಮಂತ್ರಿಮಂಡಲದ ಗಾತ್ರ ಜಾಸ್ತಿ ಇದೆ, ಕಾಮರಾಜ ಯೋಜನೆ ಯಶಸ್ವಿಯಾಯಿತೆ, ಅದಕ್ಕೆ ಮಹತ್ವ ಕೊಡಬೇಕು ಅಂತ ನಾನು ಈಗ ಹೇಳುತ್ತಿಲ್ಲ. ತಮಗೆ ಈಗಾಗಲೇ ಅನುಭವವಿರಬೇಕು, ತಮ್ಮ ಮಂತ್ರಿಮಂಡಲ ಹತ್ತು ದಿಕ್ಕುಗಳಲ್ಲಿ ಎಳೆದಾಡುತ್ತಿದೆ. ಅದಕ್ಕೆ ಒಂದು ಮುಖ, ಒಂದು ದಿಕ್ಕು, ಒಂದು ಭಾವನೆ, ಒಂದು ಅಂತರ್ಯ ಇಲ್ಲ. ಅದು ನಮಗೆಲ್ಲರಿಗೂ ಗೊತ್ತಿದೆ, ತಮಗೂ ಗೊತ್ತಾಗಿರಲೇಬೇಕು. ಹೊರಗಡೆಯವರಿಗೆ ಗೊತ್ತಾಗಿರುವಾಗ ತಮಗೂ ಗೊತ್ತಾಗಿರಬೇಕು. ಕಾರಣವೇನೆಂದರೆ ತಾವು ಮೃದು ಸ್ವಭಾವವಿರುವವರು, ಆದ್ದರಿಂದ ಪ್ರಭಾವಕ್ಕೆ ಕೂಡ ಒಳಗಾಗುತ್ತೀರ. ನಾನು ಬಂದು ತಮ್ಮ ಹತ್ತಿರ ಏನಾದರೂ ಹೇಳಿದರೆ, ಇವನು ನಮ್ಮ ಹುಡುಗ, ಸಾಮಾನ್ಯವಾಗಿ ಒಳ್ಳೆಯದೇ ಹೇಳುತ್ತಾನೆ, ಒಳ್ಳೆಯ ಕೆಲಸವನ್ನೇ ಹೇಳುತ್ತಿರಬೇಕು ಎಂದು ಅವನನ್ನು ನಂಬಿ, ಅವನು ಹೇಳಿದ್ದಕ್ಕೆ ಹೌದು ಅಂತ ಹೇಳಿ ಒಪ್ಪಿಕೊಂಡು ಬಿಡುತ್ತೀರ. ನಾನು ಕೆಟ್ಟ ಹುಡುಗ, ಕೆಟ್ಟ ಉದ್ದೇಶವಿದೆ. ಆ ಕೆಟ್ಟ ಉದ್ದೇಶ ಸಾಧನೆ ಮಾಡುವುದಕ್ಕೆ ಈ ಮನುಷ್ಯ ಹೊರಟಿದ್ದಾನೆ ಅನ್ನುವುದು ತಮಗೆ ಗೊತ್ತಾಗುವುದಿಲ್ಲ. ತಮ್ಮನ್ನು ಯಾರಾದರೂ ಹೊಗಳಿ ಏನನ್ನಾದರೂ ಹೇಳಿದರೆ, ಅದನ್ನು ಮಾಡಿಬಿಡುತ್ತೀರಾ. ತಮ್ಮ ಸ್ವಭಾವ ನಾನು ಅರಿತು ಇರುವುದರಿಂದ ನಾನು ವೈಯುಕ್ತಿಕವಾಗಿ ಮಾತನಾಡುತ್ತಾ ಇದ್ದೇನೆ. ರಾಜ್ಯದಲ್ಲಿ ರಾಜ್ಯಾಡಳಿತ ಮಾಡುವಾಗ, ಇಂಗ್ಲೀಷಿನಲ್ಲಿ ಹೇಳುವಂತೆ ಸ್ಟೇಟ್ಸ್‌ಮನ್‌ಶಿಪ್ ಇರಬೇಕು. ನಾನು ಹಿಂದಿನಿಂದಲೂ ಹೇಳುತ್ತಲೇ ಇದ್ದೇನೆ, ನಿರ್ದಯರಾಗಿ, ನಿಷ್ಠುರವಾಗಿಯೂ ಇರಬೇಕು, ಒಳ್ಳೆಯ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಬಹಳ ನಿಷ್ಠೂರವಾಗಿರಬೇಕು. ಈ ಅಧಿಕಾರ ದಾಹದಿಂದ ಕೂಡಿದವರ ಮಧ್ಯದಲ್ಲಿ ಒಳ್ಳೆಯವರು ಇರುವುದಕ್ಕೆ ಸಾಧ್ಯವಿಲ್ಲ. ಹಿಂದೆ ಅನೇಕ ಜನ ಒಳ್ಳೆಯವರು ರಾಜ್ಯವನ್ನು ಕಳೆದುಕೊಂಡಿದ್ದಾರೆ. ತಮ್ಮ ಅನುಭವದಲ್ಲಿಯೂ ಇದೆ, ತಾವೂ ಹಿಂದೆ ಅಧಿಕಾರವನ್ನು ಕಳೆದುಕೊಂಡಿರಿ. ನಾನು ತಮಗೆ ಬಹಳ ನೇರವಾಗಿ ಕಳಕಳಿಯಿಂದ ಹೇಳುತ್ತಿದ್ದೇನೆ. ಈಗಿರತಕ್ಕಂಥ ತಮ್ಮ ಮಂತ್ರಿಮಂಡಲ ಬಹಳ unwieldy. ಅದನ್ನು ಸರಿಯಾದ ಹತೋಟಿಗೆ ತೆಗೆದುಕೊಳ್ಳುವುದಕ್ಕೆ ತಮ್ಮಿಂದ ಆಗುತ್ತಾ ಇಲ್ಲ. ಅದು 10 ದಿಕ್ಕಿನಲ್ಲಿ ಎಳೆದಾಡುತ್ತಿದೆ. ನಮ್ಮ ಮಾನ್ಯ ಸ್ನೇಹಿತರಾದ ಷಂಸುದ್ದೀನ್‌ರವರು ಮೊನ್ನೆ ತಾನೆ ಮರಣ ಹೊಂದಿ ಒಂದು ಜಾಗ ಖಾಲಿ ಬಿದ್ದಿದೆ. ಯಾರೋ ಹೇಳಿದರು, ನಿಜಲಿಂಗಪ್ಪನವರಿಗೆ ಮಂತ್ರಿಮಂಡಲ ಸಣ್ಣದು ಮಾಡುವುದಕ್ಕೆ ಇಷ್ಟವಿಲ್ಲ, ದೇವರೇ ಮಾಡಿದ ಎಂದು. ಅದು ಕೆಟ್ಟ ಭಾವನೆಯಿಂದ ಅಲ್ಲ, ಹಾಸ್ಯಕ್ಕಾಗಿ ಹೇಳಿದರು. ಷಂಸುದ್ದೀನ್‌ರವರಲ್ಲಿ ನನಗೆ ತುಂಬ ಗೌರವವಿದೆ. ಅವರ ಜೊತೆಯಲ್ಲಿ ಹೋಗಿ ಕೆಲಸ ಮಾಡುವ ಸಂದರ್ಭವೂ ಬಂದಿತ್ತು. ಅದು ಶರಾವತಿ ಯೋಜನೆಯಿಂದ ಮುಳುಗಡೆಯಾದ ಪ್ರದೇಶದ ಜನರ ಪುನರ್ವಸತಿ ವಿಷಯದಲ್ಲಿ, ಅವರಿಗೆ ಬಹಳ ಅನುಕೂಲವಾಗಿದ್ದರು, ಮತ್ತು ಬಹಳ ಚಟುವಟಿಕೆಯಿಂದ ಇದ್ದರು. ಹೆಚ್ಚು ದಕ್ಷರೂ ಆಗಿದ್ದರು. ಅವರಿಗೆ ವಿಧ್ಯುಚ್ಛಕ್ತಿ ಬಾಬಿನಲ್ಲಿ ಬಹಳ ಆಸಕ್ತಿ, ಅನುಭವ ಇತ್ತು, ಎಂದು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ವಿದ್ಯುಚ್ಛಕ್ತಿ ಬಹಳ ದೊಡ್ಡ ಪೋರ್ಟ್‌ಫೋಲಿಯೋ, ಅದನ್ನು ನೀವು ಇಟ್ಟುಕೊಂಡಿದ್ದೀರ. ಅದರ ಜೊತೆಗೆ ನೀರಾವರಿಯಂಥ ಬಹಳ ದೊಡ್ಡ ಶಾಖೆಯನ್ನು ಹೊತ್ತಿದ್ದೀರ, ಸಾಮಾನ್ಯ ಆಡಳಿತದ ಹೊರೆಯನ್ನೂ ಹೊತ್ತುಕೊಂಡಿದ್ದೀರ. ಇಷ್ಟನ್ನೂ ನಿಭಾಯಿಸಿಕೊಂಡು ಹೋಗುವುದಕ್ಕೆ, ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಬಹಳ ಶಕ್ತಿ ಬೇಕು, ಬಹಳ ದೂರದೃಷ್ಟಿಬೇಕು. ಎಲ್ಲ ಮಂತ್ರಿಗಳ ಸಹಕಾರ ಬೇಕಾಗುತ್ತದೆ. ತಾವು ತಮ್ಮ ಪೋರ್ಟ್‌ಫೋಲಿಯೋಗಳನ್ನು ಪುನರ್ವಿಮರ್ಶಿಸಬೇಕಾಗಬಹುದು. ಶ್ರೀಮಾನ್ ಕಂಠಿಯವರು ತಮಗೆ ಒಂದು ದೊಡ್ಡ ಸಮಸ್ಯೆಯನ್ನು ಉಂಟು ಮಾಡಿದರು. ಒಂದು ಉದಾಹರಣೆ ತೆಗೆದುಕೊಳ್ಳಿ. ಮೈಸೂರು ವಿಶ್ವವಿದ್ಯಾನಿಲಯದ 35 ಸಾವಿರ ವಿದ್ಯಾರ್ಥಿಗಳು ರಾಜ್ಯದಲ್ಲಿ ಒಂದು ತಿಂಗಳ ಕಾಲ ಒಂದೇ ಸಮನೆ ಮುಷ್ಕರ ನಡೆಸಿದರು. ಉಪವಾಸ ಮುಷ್ಕರ ನಡೆದಾಗ, ದೇಶದಲ್ಲಿ ಕ್ಷೋಭೆ ನಡೆದಾಗ್ಯೂ ಕೂಡ, ಕಂಠಿಯವರು ತಮ್ಮ ನೆರವಿಗೆ ಬರಲಿಲ್ಲ. ತಾವು ಈಶ್ವರ ವಿಷಕುಡಿದಂತೆ, ನೀಲಕಂಠನ ಪಾತ್ರ ಮಾಡಬೇಕಾಯಿತು, ಆ ಒಂದು ಕಹಿಯನ್ನು ಕುಡಿಯಬೇಕಾಯಿತು. ದೇಶದಲ್ಲಿ ಅಂಥ ಕಹಿವಾತಾವರಣ ಉಂಟಾಗಿತ್ತು. ನಾವು ಕಂಠಿಯವರು ಹೇಳಿದಂತೆ ಕೇಳಿದ್ದರೆ, 16ನೇ ತಾರೀಖು ಮಾರಣ ಹೋಮವಾಗುತ್ತಿತ್ತು,

ಸರಕಾರವೇ ಉಳಿಯುವ ಹಾಗಿಲ್ಲ, ಸರಕಾರದಮೇಲೆ ಬಂದಿದ್ದ ಕಳಂಕವನ್ನು ಉಳಿಸುವುದಕ್ಕೆ ಆಗುತ್ತಿರಲಿಲ್ಲ. ವೈಯುಕ್ತಿಕವಾಗಿ ನಾನು ಏನೂ ಹೇಳುತ್ತಿಲ್ಲ. ನಾನೇ ಹಿಂದೆ ಹೇಳಿದ್ದೆ, ಶ್ರೀಮಾನ್ ಕಂಠಿಯವರು ವರವಾಗಿ ನಮ್ಮ ರಾಜ್ಯಕ್ಕೆ ಬಂದರು ಎಂದು ವೈಯುಕ್ತಿಕವಾಗಿ ಅವರ ಬಗ್ಗೆ ನನಗೆ ಗೌರವವಿದೆ. ಅವರು ವಿದ್ಯಾಭ್ಯಾಸದ ಮುಖ್ಯ ಪೋರ್ಟ್‌ಫೋಲಿಯೋವನ್ನು ಮಂತ್ರಿ ಮಂಡಲದಲ್ಲಿ ಹಿಡಿದಿದ್ದಾರೆ. ತಮಗೆ ಅವರಲ್ಲಿ ಗೌರವ ಇರಬಹುದು. ಏನೋ ನಾಲ್ಕು ತಿಂಗಳು ಭರತನಂತೆ ನನಗಾಗಿ ಆಡಳಿತವನ್ನು ಹಿಡಿದುಕೊಂಡು ಇಟ್ಟಿದ್ದರು, ನಾನು ಬಂದಮೇಲೆ ಗೌರವ ದಿಂದ, as a gentleman ಬಿಟ್ಟುಕೊಟ್ಟರು ಎಂದು ಅವರಲ್ಲಿ ಗೌರವವಿರಬಹುದು. ತಮಗೆ ಅದನ್ನು ಇಟ್ಟುಕೊಳ್ಳಿ. ಮಂತ್ರಿಮಂಡಲದಲ್ಲಿ ಸಂಯುಕ್ತ ಜವಾಬ್ದಾರಿ ಎನ್ನತಕ್ಕ ಕಡೆ ಎಷ್ಟು ಒಮ್ಮತ, ಎಷ್ಟು ಪರಸ್ಪರ ಅರ್ಥಮಾಡಿಕೊಳ್ಳುವುದು ಇದೆ ಎಂಬುದನ್ನು ಯೋಚನೆ ಮಾಡಿದ್ದೇ ಆದರೆ ಮುಖ್ಯ ಮಂತ್ರಿಗಳವರು ಈ ಸಭೆಯಲ್ಲಿ ಮತ್ತು ಹೊರಗಡೆ ಜನರನ್ನು ನೋಡಿಕೊಳ್ಳುವುದು ಒಂದು ರೀತಿಯಲ್ಲಿ ವ್ಯವಹಾರ ಮಾಡುವುದು, ಹೊರ ರಾಜ್ಯಗಳು ಮತ್ತು ಕೇಂದ್ರದವರ ಜೊತೆಯಲ್ಲಿ ವ್ಯವಹರಿಸುವುದು ಇದಕ್ಕೆಲ್ಲಾ ಅವರಿಗೆ ವ್ಯವಧಾನ ಇರಬೇಕು, ಚಿತ್ತ ಶಾಂತಿ ಇರಬೇಕು. ಇವತ್ತಿನ ದಿವಸ ಆಗಿಂದಾಗ್ಯೆ ಹೊಸ ಮೈಸೂರಿನವರಿಗೆ ಹಾಗೆ ಆಯಿತು, ಹಳೇ ಮೈಸೂರಿನವರಿಗೆ ಹೀಗೆ ಆಯಿತು ಎಂದು ಹೇಳಿ ನಿಮ್ಮ ಮನೆಯ ಬಾಗಿಲಿನಲ್ಲಿ ಕೂಡುತ್ತಾ ಇರುವುದಾದರೆ ತಮಗಾದರೂ ಯಾವ ಮನಸ್ಸಿನಿಂದ ರಾಜ್ಯದ ವ್ಯವಹಾರಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಯಾವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತದೆ? ಯಾವ ಒಂದು ದೊಡ್ಡ ಸಮಸ್ಯೆ ಗಳಿಗೆ ಗಮನ ಕೊಡುವುದಕ್ಕೆ ಆಗುತ್ತದೆ? ಈ ಮಾತನ್ನು ನಾನು ರಾಜ್ಯಭಾರ ಮಾಡಿ ಅಧಿಕಾರದ ಅನುಭವ ಇಲ್ಲದೇ ಇದ್ದರೂ ಕೂಡ ಅನೇಕ ಮಂತ್ರಿಗಳನ್ನು, ಮಂತ್ರಿಮಂಡಲಗಳನ್ನು ನೋಡಿ, ತಿಳಿದು ಅರ್ಥಮಾಡಿಕೊಂಡು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಇದರಲ್ಲಿ ಹೆಚ್ಚು ಕಮ್ಮಿ ಏನಾದರೂ ಇದ್ದಲ್ಲಿ ಕ್ಷಮಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಸಮಯ ಇಲ್ಲದೆ ಇರುವುದರಿಂದ ಸಾಮಾನ್ಯ ಆಡಳಿತದ ವಿಷಯದಲ್ಲಿ ಮಾತ್ರ ಸಭೆಯವರ ಗಮನವನ್ನು ಸೆಳೆಯುತ್ತೇನೆ. ಸಾಮಾನ್ಯ ಆಡಳಿತದ ವಿಷಯದಲ್ಲಿ ಸಾರ್ವಜನಿಕ ಸೇವಾ ಆಯೋಗದವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾರೆ:

> "The Commission are constrained to observe a certain amount of laxity on the part of Government departments, presumably due to an inadequate understanding of the duties and functions of the Commission and the working of the Consultation Regulations. Not infrequently, even Government Orders seem to be honoured more in the breach than in observance.
>
> "Delays in sending proposals to the Commission are some times so serious as to make them meaningless. For, the Commission are faced with a *fait accompli* and their advice is rendered superfluous. For instance, in the case of promotions, the Commission are consulted days after the issue of notification giving effect to the proposed promotions."

ಎಷ್ಟು ಅಪಹಾಸ್ಯಕ್ಕೆ ಈಡುಮಾಡುತ್ತಾರೆ, ಆಯೋಗವನ್ನು ಕೇಳದೇ ಕೆಲಸಮಾಡುತ್ತಾರೆ. ಆ ಒಂದು ಮಾತು ಸರಿಯೋ ಎಂಬುದನ್ನು ನಾನು ಈಗ ಪ್ರಸ್ತಾಪ ಮಾಡುವುದಿಲ್ಲ. ಅಲ್ಲಿ ಬಹಳ ಕೆಡಕು ಇರಬಹುದು, ಒಳ್ಳೆಯ ಜನ ಇಲ್ಲದೇ ಇರಬಹುದು. ಆದರೆ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಬಗ್ಗೆ ಹೇಳುವುದಾದರೆ ಕರ್ನಾಟಕ ರಾಜ್ಯ ಆಗಿ ಎಷ್ಟು ದಿವಸ ಆಯಿತು? ಇವತ್ತು ಹೇಳುತ್ತೇನೆ ಅನ್ನ ದಾನಪ್ಪ ದೊಡ್ಡ ಮೇಟಿ ಅವರಿಗೆ ಮತ್ತು ಮುಕ್ಕಣ್ಣಪ್ಪನವರಿಗೆ—ಈ ಕರ್ನಾಟಕ ಎರಡು ಆಗ ಬೇಕೆನ್ನುವುದರ ಹಿಂದುಗಡೆ ಯಾರಿದ್ದಾರೆ ಎಂಬುದನ್ನು ಸ್ವಲ್ಪ ವಿಚಾರ ಮಾಡಿ. ಇದರ ಹಿಂದೆ ರಾಜಕಾರಣಿಗಳು ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ, ಅತೃಪ್ತ ಅಧಿಕಾರಿಗಳು ಇದರ ಹಿಂದುಗಡೆ ಇದ್ದಾರೆ. ಇದೆಲ್ಲಾ ಬರಬೇಕಾದರೆ ಅವರು ಎಂ.ಎಲ್.ಎ.ಗಳ ಹತ್ತಿರ, ಮಿನಿಸ್ಟರುಗಳ ಹತ್ತಿರ ಹೋಗಿ ಹೇಳುತ್ತಾರೆ, ನನಗೆ ಕೊಡಗಿನಲ್ಲಿ ಆ ರೀತಿ ಇತ್ತು, ಇಲ್ಲಿಗೆ ಬಂದ ಮೇಲೆ ಹೀಗೆ ಅನ್ಯಾಯ ಆಯಿತು, ನನಗೆ ಆ ಜಾಗ ಸಿಕ್ಕಬೇಕಾಗಿತ್ತು ಅದು ಸಿಕ್ಕಲಿಲ್ಲ ನನ್ನನ್ನು ಕೆಳಗೆ ಕೂಡಿಸಿ

(ಶ್ರೀ ಎಸ್. ಗೋಪಾಲ ಗೌಡ)

ದರು, ಹಾಗೆ ಆಯಿತು, ಹೀಗೆ ಆಯಿತು ಎಂದು ಅನ್ನುತ್ತಾರೆ, ಅವರು ಎಂ.ಎಲ್.ಎ.ಗಳು ಮಿನಿಸ್ಟರುಗಳ ಸಂಬಂಧೀಕರು ಇರಬಹುದು, ಅಳಿಯ ಇರಬಹುದು, ನೆಂಟರು ಇರಬಹುದು, ಸ್ಟೇಟ್ ಆಫೀಸರು ಇರಬಹುದು. ದಿನಬೆಳಗಾದರೆ ಅವರಿಗೆ ಬೇರೆ ಕೆಲಸವೇ ಇಲ್ಲ, ನನ್ನ ಸೀನಿಯಾರಿಟಿ ಹೋಯಿತು, ನನ್ನ ಪ್ರಮೋಷನ್ ಹೋಯಿತು, ನನ್ನನ್ನು ಗುಲ್ಬರ್ಗಾಕ್ಕೆ ಹಾಕಿದರು, ಅದು ಮಾಡುತ್ತಾರೆ, ಇದು ಮಾಡುತ್ತಾರೆ ಎಂದು ಹೀಗೆಲ್ಲಾ ಹೇಳುತ್ತಾ ಹೋದರೆ ಏನಾಗುತ್ತದೆ? ಮನಸ್ಸು ಕಲುಷಿತಗೊಳ್ಳುತ್ತದೆ. ಏನೋ ಒಂದು ಅನ್ಯಾಯವಾಗಿದೆ ಎಂದು ಹೇಳಿ ಮನಸ್ಸಿಗೆ ಅನಿಸುತ್ತದೆ. ಇದನ್ನು ವಿಚಾರ ಮಾಡಿ. ಶ್ರೀಮಾನ್ ಕಂಠಿಯವರು ತಮ್ಮ ಇಲಾಖೆಯಲ್ಲಿರತಕ್ಕ ಟೆಂಪೊರರಿ ಉಪಾಧ್ಯಾಯರಿಗೆ ಯಾವ ಒಂದು ಸ್ಥಾನ ಮಾನ ಸಿಕ್ಕಬೇಕೋ ಅದನ್ನು ಏಕೆ ಕೊಡಬಾರದು? ನಮಗೆ ನೆಪ ಹೇಳುವುದು ಬೇಕಿಲ್ಲ. ಅವರು 6-7 ವರ್ಷದಿಂದ ಹೇಳುತ್ತಾ ಇದ್ದಾರೆ ಇವತ್ತು ಕುಳಿತುಕೊಂಡು ಇವತ್ತೇ ಮುಗಿಸುತ್ತೇವೆ ಎಂದು ಏಕೆ ಹೇಳಬೇಕು? ಆದ್ದರಿಂದ 25 ಕೋಟಿ ರೂಪಾಯಿಗಳನ್ನು ಯಾವ ಒಂದು ಯಂತ್ರಕ್ಕೆ ಖರ್ಚು ಮಾಡುತ್ತಾ ಇದ್ದೀರಿ ಆ ಯಂತ್ರವೇ ಇವತ್ತು ಈ ರಾಜ್ಯದ ಮೊದಲನೆಯ ಶತ್ರುವಾಗಿದೆ. ರಾಜ್ಯದ ಆಡಳಿತದ ಹೊಣೆಯನ್ನು ಹೊತ್ತಿರತಕ್ಕ ಸೆಕ್ರೆಟೇರಿಯಟ್ ಆಗಲಿ, ಜಿಲ್ಲಾ ಮಟ್ಟದ ಆಡಳಿತ ಆಗಲಿ, ಗ್ರಾಮಪಂಚಾಯಿತಿಯ ಮಟ್ಟದಲ್ಲಿ ಆಗಲಿ ಎಲ್ಲಿ ನೋಡಿದರೂ ಗ್ರಾಮ ಪಂಚಾಯಿತಿಯ ಶ್ಯಾನುಭೋಗರಿಂದ ಹಿಡಿದು ಎಂತಹ ವ್ಯವಹಾರ ನಡೆಯುತ್ತಾ ಇದೆ ಎಂಬುದನ್ನು ಹೇಳಬೇಕಾದರೆ, ಶ್ಯಾನುಭೋಗರು, ಜಿಲ್ಲಾಧಿಕಾರಿ, ಜಮಾಬಂದಿ ಇಟ್ಟರೆ ಬರುವುದಿಲ್ಲ—ಏಕೆ ಬರಬೇಕು ಹೋಗ್ರಿ ಅಂತ ಹೇಳುತ್ತಾರೆ. ಪಹಣಿ, ಖರದಿ ಕೊಡುತ್ತಿಲ್ಲ, ಪಹಣಿ ಬರೆಯುತ್ತಾ ಇಲ್ಲ. ನಾಲ್ಕು ವರ್ಷದಿಂದ ಈ ರೀತಿ ರಾಜ್ಯಭಾರ ಮಾಡುತ್ತಾ ಇದ್ದರೆ ಯಾವ ರೀತಿ ಆಡಳಿತ ಮಾಡುತ್ತೀರಿ ಎಂಬುದು ಒಂದು ಬಹಳ ದೊಡ್ಡ ಸಂಶಯದ ಪ್ರಶ್ನೆಯಾಗಿದೆ. ಎಷ್ಟು ದಿವಸ ಬೇಕು? ಮತ್ತೆ ನೆಪ ಹೇಳುತ್ತೀರಿ. ಅವರು ಕೋರ್ಟಿಗೆ ಹೋಗಿದ್ದಾರೆ ಆ ವಿಷಯ ಬಿಟ್ಟು ನೀವು ಏನು ಮಾಡಬೇಕೆಂಬುದನ್ನು ಹೇಳುವುದಿಲ್ಲ. ಅನುವಂಶಿಕವಾಗಿ ಬಂದಿರತಕ್ಕ ಹಕ್ಕು ಹೋಗಲೇ ಬೇಕು, ರಾಜ್ಯಾಂಗದಲ್ಲೇ ಸೂಚಿತವಾಗಿದೆ, ಇದು ಬಂದೇ ಬರುತ್ತದೆ. ರಾಜ್ಯದ ಪರವಾಗಿ ತೀರ್ಮಾನ ಬಂದೇ ಬರುತ್ತದೆ. ಆದ್ದರಿಂದ ಈ ಕೆಲಸಕ್ಕೆ ಬೇರೆಯವರನ್ನು ತರಪೇತು ಮಾಡುವುದು ಅನಿವಾರ್ಯವಾಗಿರುವ ಕೆಲಸವಾಗಿರಬೇಕಾದರೆ ಅದಕ್ಕೆ ಯಾವ ಕೆಲಸ ಕಾರ್ಯಗಳನ್ನು ಮಾಡಬೇಕೆಂಬುದನ್ನು ಮಂತ್ರಿ ಮಂಡಲದವರು ತಿಳಿದು ವಿಚಾರ ಮಾಡದಿದ್ದರೆ ಪ್ರತಿಸಲವೂ ಅಸೆಂಬ್ಲಿಯಲ್ಲಿ ಬಂದು ಅಲ್ಲಿ ಹೀಗೆ ಇದೆ, ಇಲ್ಲಿ ಹೀಗೆ ಇದೆ, ಇದನ್ನು ಮಾಡಿರಿ, ಅದನ್ನು ಮಾಡಿರಿ ಎಂದು ಹೇಳಿ ನಿಮ್ಮ ಮನೆಯ ಹತ್ತಿರ, ಆಫೀಸಿನ ಹತ್ತಿರ ಬಂದು ತಿರುಗುವುದಕ್ಕೆ ನಾವೇನು ತಿರುಪೆ ಜನರೇ? ಇವತ್ತು ಯಾವ ಯಾವ ಯೋಜನೆಗಳನ್ನು ಮಾಡಬೇಕೆಂಬುದನ್ನು ಚರ್ಚೆ ಮಾಡೋಣ, ದೇಶಕ್ಕೆ ಏನು ಆಗಬೇಕೆಂಬುದನ್ನು ಚರ್ಚೆ ಮಾಡೋಣ, ಇದನ್ನೆಲ್ಲಾ ಮಾಡುತ್ತಾ ಇರುವಾಗ ನಮ್ಮ ಹಳ್ಳಿಯ ಕೆರೆಯಲ್ಲಿ ನೀರು ಸಣ್ಣಗೆ ಬರುತ್ತಾ ಇದೆ ಅದಕ್ಕೆ ಒಂದು ತೂಬು ಇಡಿಸಬೇಕು ಎಂದು ಹೇಳುವುದಕ್ಕೇ ನಾವು ಇರುವುದು? ತಾವು ಇಡಿಸುವವರು ಇಡಿಸುತ್ತೀರಿ ಆ ಕೆಲಸ ಆಗಿಯೇ ಆಗುತ್ತದೆ, ಆದ್ದರಿಂದ ನಾನು ಬಹಳ ವಿಷಾದದಿಂದ ಹೇಳುವುದು ಏನೆಂದರೆ ಈ ಆಡಳಿತ ಬುಡದಿಂದ ತಲೆತನಕ ಬಹಳವಾಗಿ ಕೆಟ್ಟು ಹೊಲಸು ನಾರುತ್ತಾ ಇದೆ, ಮೊದಲು ಈ ಯಂತ್ರವನ್ನು ಸರಿಪಡಿಸಬೇಕು. ಇದು ಒಂದು ಹಿಂದಿನಿಂದ ಬಂದ ಲೆಗ್ಯಾಸಿ ಎಂದು ತಾವು ಹೇಳುತ್ತಾ ಇರುತ್ತೀರಿ, ಕೊಳೆತು, ಹಾಳಾಗಿ ನಾರುತ್ತಾ ಇದ್ದರೆ, ರಿಪೇರಿ ಮಾಡುವುದಕ್ಕೆ ಆಗದಿದ್ದರೆ ಯಾವ ಭಾಗ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲವೋ ಆ ಭಾಗವನ್ನು ಕತ್ತರಿಸಿ ಹಾಕಿ. ಯಾವುದು ಸ್ಪಷ್ಟವಾಗಿ ಬದುಕುತ್ತವೆ ಎಂಬ ಭರವಸೆ ಇದೆಯೋ ಅದಕ್ಕೆ ರಕ್ತ ಕೊಟ್ಟು ಬದುಕಿಸಿ. ಸರಿಯಾಗಿ ಕಣ್ಣು ಬಿಟ್ಟು ರಾಜ್ಯಾಡಳಿತದ ಜವಾಬ್ದಾರಿ ಹೊತ್ತ ಮೇಲೆ ತಮಗೆ ಕೊಟ್ಟಿರತಕ್ಕ ಅಷ್ಟೋ ಇಷ್ಟೋ ಕೆಲಸವನ್ನು ಮಾಡಲೇಬೇಕೆಂಬ ಅರಿವನ್ನು ಮಾಡಿ, ಆ ರೀತಿ ಮಾಡದಿದ್ದರೆ ಅದನ್ನು ಯಾವ ಪ್ರಕಾರ ಸರಿಪಡಿಸಬೇಕೆಂಬುದನ್ನು ವಿಚಾರ ಮಾಡಿ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ತಮ್ಮಲ್ಲಿ ಹೇಳಬಯಸುತ್ತೇನೆ.

ಇನ್ನು ಲ್ಯಾಂಡ್ ರೆವಿನ್ಯೂ ಕೋಡನ್ನು ಬರೆಯುವಾಗ ಡಿವಿಜನಲ್ ಕಮಿಷನರ ಹುದ್ದೆ ಹೋಗಬೇಕು, ಪ್ರಯೋಜನವಿಲ್ಲ 3-4 ತಿಂಗಳು ಡಿಲೇ ಆಗುತ್ತದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಾಗದಗಳನ್ನು ರವಾನಿಸುವ ಪೋಸ್ಟ್ ಆಫೀಸಿನಂತೆ ಆ ಹುದ್ದೆ ಇದೆ, ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು. ಆಮೇಲೆ ಅದು ಆಲ್ ಇಂಡಿಯಾ ಪ್ಯಾಟರ್ನ್ ಯಾವ ರೀತಿ ಇದೆಯೋ ಆ ರೀತಿ ಮಾಡಬೇಕಾಗುತ್ತದೆ, ಆ ಹುದ್ದೆಯನ್ನು ಉಳಿಸಿಕೊಳ್ಳಬೇಕು, ಅದನ್ನು ತೆಗೆದರೆ 7 ಜನ ದೊಡ್ಡ ಹುದ್ದೆಯಲ್ಲಿರುವವರಿಗೆ ಏನು ಮಾಡಬೇಕು ಎಂದು ಹೇಳಿದರು. ಅಂತೂ ಆ ಡಿವಿಜನ್ ಕಮಿಷನರುಗಳು ಇರಬೇಕು ಎನ್ನುತ್ತಾರೆ, ಅದು ಬೇರೆ ಪ್ರಶ್ನೆ. ಡಿವಿಜನಲ್

ಕಮಿಷನರ ಜೊತೆಗೆ ಸಬ್‌ಡಿವಿಜನ್‌ಗಳನ್ನೂ ಕೂಡ ಹೋಗಲಾಡಿಸಬೇಕು. ಒಂದು ಅಭಿಪ್ರಾಯ ನನಗೆ ಇವತ್ತು ಕಂಡು ಬರುತ್ತಾ ಇದೆ. ಅದು ಏನೆಂದರೆ ಅಸಿಸ್ಟೆಂಟ್ ಕಮಿಷನರ ಗ್ರೇಡ್‌ನವರನ್ನು ತಹಸೀಲ್‌ಗಳಲ್ಲಿ 3-4 ಜನರನ್ನು ಹಾಕಿರುತ್ತೀರಿ. ಇವತ್ತು ಬಿ.ಡಿ.ಓ.ಗಳು ಅಲ್ಲಿ ಇದ್ದಾರೆ. ಬಿ.ಡಿ.ಓ. ಗಳಿಗೆ ಜೀಪು ಕೊಟ್ಟಿದ್ದೀರಿ, ತಹಸೀಲ್ದಾರರಿಗೆ ಆ ಒಂದು ಸೌಕರ್ಯ ಯಾವುದೂ ಇಲ್ಲ, ಬಿ.ಡಿ.ಓ. ಹಿಂದೆಯೇ ಜನರು ಯಾವಾಗಲೂ ಓಡಾಡುತ್ತಾ ಇರುತ್ತಾರೆ, ಅವರಿಂದಲೇ ತಹಸೀಲ್‌ಗಳಲ್ಲಿ ಅನೇಕ ಕೆಲಸಗಳು ಆಗಬೇಕಾಗಿವೆ, ಹೀಗಿರುವಾಗ ತಹಸೀಲ್ದಾರರಿಗೆ ಜನರು ಗೌರವ ಕೊಡದೇ ಇರತಕ್ಕ ಪರಿಸ್ಥಿತಿ ಇವತ್ತು ಬಂದಿದೆ. ತಹಸೀಲ್ದಾರರು ಯಾವುದಾದರೂ ಮೀಟಿಂಗ್‌ಗೆ ಬಂದರೆ ಸುಮ್ಮನೆ ಕಾಫಿ ಕುಡಿದುಕೊಂಡು ಮರೆಯಲ್ಲಿ ಇರುವ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ರೆವಿನ್ಯೂ ಮಿನಿಸ್ಟ್ರಿನೇ ವಿದರ್ ಅವೇ ಆಗುತ್ತದೆ ಎಂದು ರೆವಿನ್ಯೂ ಮಿನಿಸ್ಟರು ಹೇಳಿದರು ಅದು ಆಗುವವರೆಗೂ ಕೂಡ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಬೇಕಾಗುತ್ತದೆಯಲ್ಲಾ. ಸೇಲ್ಸ್ ಟ್ಯಾಕ್ಸ್ ಆಫೀಸರಿಗೆ ತುಂಬಾ ಗೌರವ ಇರುತ್ತದೆ, ಏಕೆಂದರೆ ಅವನು 15 ಕೋಟಿ ರೂಪಾಯಿ ತರುತ್ತಾನೆ. ಎಕ್ಸೈಜ್ ಇಲಾಖೆಯ ಆಫೀಸರು ಯಾರಿದ್ದಾರೆ ಅವರಿಗೆ ತುಂಬಾ ಗೌರವ, ಏಕೆಂದರೆ ಅವನು 10 ಕೋಟಿ ರೂಪಾಯಿ ತರುತ್ತಾನೆ, ಹೀಗೆ ಯಾರು ಹೆಚ್ಚು ಹಣ ಇವತ್ತು ಕೊಡುತ್ತಾರೋ ಅವರಿಗೆ ಹೆಚ್ಚು ಗೌರವ. ಅದು ಹೋಗಲಿ ಇವತ್ತಿನ ದಿವಸ ಬಿ.ಡಿ.ಓ.ಗೆ ಇರತಕ್ಕ ಗೌರವ ತಹಸೀಲ್ದಾರರಿಗೆ ಇರುವುದಿಲ್ಲ. ಆದ್ದರಿಂದ ತಾಲ್ಲೂಕು ಮಟ್ಟದ ವ್ಯವಹಾರವನ್ನು ಸರಿಪಡಿಸಿದ್ದೇ ಆದರೆ ಇವತ್ತು ಬೆಳೆದಿರತಕ್ಕ ಬೆಳವಣಿಗೆ ಮಾಡುವ ಅಭಿವೃದ್ಧಿ ಇಲಾಖೆಗಳೇನು ಇವೆ ಅವರ ಕೈಕೆಳಗೆ ಈ ತಹಸೀಲಿನ ಕೆಲಸ ಕಾರ್ಯಗಳನ್ನೂ ಮಾಡುವುದಕ್ಕೆ ಅನುಕೂಲವಾದೀತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ ಶರಾವತಿಯ ಜಲ ವಿದ್ಯುತ್ ಕಾಮಗಾರಿಯ ಬಗ್ಗೆ ನಡೆದಂತಹ ಅಕ್ರಮ, ಭ್ರಷ್ಟಾಚಾರ ಹಣದ ದುರ್ವ್ಯಯದ ವಿಷಯದಲ್ಲಿ ನ್ಯಾಯಾಂಗ ವಿಚಾರಣೆಯನ್ನು ನಡಿಸಬೇಕೆಂದು ಒತ್ತಾಯಪಡಿಸುವ ವಿಷಯದಲ್ಲಿ ವಿರೋಧ ಪಕ್ಷದವರಲ್ಲಿ ಒಂದು ತೀರ್ಮಾನ ಆಗಿದೆ, ಈಗ ಸರ್ಕಾರದವರು ಒಂದು ಶ್ವೇತ ಪತ್ರವನ್ನು ಹೊರಡಿಸಿದ್ದಾರೆ, ಅದರ ಬಗ್ಗೆ ವಿಶೇಷ ಚರ್ಚೆಯಾಗಬೇಕೆಂದು ಕೇಳಿಕೊಂಡಿದ್ದೇವೆ. ಅಧ್ಯಕ್ಷರು ಅದಕ್ಕೆ ಸಮ್ಮತಿ ಕೊಟ್ಟಿದ್ದಾರೆ. ಈ ವಿಷಯವನ್ನು ಆ ಸಂದರ್ಭದಲ್ಲಿ ನನಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಾಗ, ಹೇಳುತ್ತೇನೆ. ಈಗ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಏಕೆಂದರೆ ಕಾಂಗ್ರೆಸಿನ ಒಳಗಡೆ ಇರುವವರೇ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ನಮಗೆ ಕೆಟ್ಟ ಹೆಸರು ಬಂದೀತು ಎಂಬ ಕಾರಣಕ್ಕಾಗಿ ಇದನ್ನು ಪ್ರಸ್ತಾಪ ಮಾಡುತ್ತೇನೆ; ಸ್ಪಷ್ಟೀಕರಣ ಮಾಡುತ್ತೇನೆ. ವಿರೋಧ ಪಕ್ಷದವರಿಗೆ ಆಳುವ ಪಕ್ಷದವರಿಗಿಂತ ಬಹಳವಾಗಿ ಕಳ ಕಳಿ ಇದೆ. ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ವಿರೋಧ ಪಕ್ಷದವರು ಕೊನೆಯ ತನಕ ಹೋರಾಟ ಮಾಡುತ್ತಾರೆ. ಅದರ ಬಗ್ಗೆ ಯಾರಲ್ಲೂ ಅನುಮಾನವಿಲ್ಲ. ಆಡಳಿತ ಪಕ್ಷದವರು ಮುಖ್ಯವಾಗಿ ಅಣ್ಣಾರಾವ್

9-30 A.M.

ಗಣಮುಖಿಯವರು ಶರಾವತಿ ಯೋಜನೆಯ ವಿಷಯದಲ್ಲಿ ವಿಚಾರಣೆ ನಡೆಯಬೇಕೆಂದು ಹೇಳಿದ್ದಾರೆ. ಕೇವಲ ವಿರೋಧ ಪಕ್ಷದವರು ಮಾತ್ರ ಹೇಳಲಿಲ್ಲ ಎಂದು ಮುಂದೆ ಯಾರೂ ಹೇಳುವುದಕ್ಕೆ ಅವಕಾಶವಿರಬಾರದು. ಸೂರ್ಯನಾರಾಯಣರಾಯರೂ ಕೂಡ ಹೇಳಿದ್ದಾರೆ. ಆಡಳಿತ ಪಕ್ಷದವರಿಗೂ ಕೂಡ ವ್ಯಕ್ತಿ ಸ್ವಾತಂತ್ರ್ಯವಿದೆ, ಅಭಿಪ್ರಾಯ ಸ್ವಾತಂತ್ರ್ಯವಿದೆ, ತಪ್ಪು ಕಂಡರೆ ಖಂಡಿಸಲು ಅವಕಾಶವಿದೆ. ಇದರಲ್ಲಿ ವಿರೋಧ ಪಕ್ಷದ ಕೈವಾಡವಿಲ್ಲ, ಕೋಟಿಗಟ್ಟಲೆ ಹಣ ದುರುಪಯೋಗವಾಗಿದೆ, ಇದಕ್ಕೆ ನ್ಯಾಯಾಂಗ ವಿಚಾರಣೆ ಆಗುವ ಅಗತ್ಯವಿದೆ. ಇದರಲ್ಲಿ ರಾಜಕೀಯವಿದೆಯೆಂದು ಹೇಳುತ್ತಾರೆ. ಶ್ವೇತ ಪತ್ರ ಹೊರಡಿಸಿರುವುದರಲ್ಲಿ ಇರುವ ಲೋಪವನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಇನ್ನು ವಿದ್ಯುಚ್ಛಕ್ತಿ ವಿಷಯದಲ್ಲಿ ಖಾಸಗಿ ಸಂಸ್ಥೆಗಳು ಬಹಳವಾಗಿವೆ, ಹಿಂದೆಯೇ ಇದನ್ನು ಹೇಳಿದೆ. ಇದಕ್ಕೆ ಒಂದು ಮಸೂದೆಯನ್ನು ಮಾಡಿ ರಾಷ್ಟ್ರೀಕರಣ ಮಾಡಬೇಕು, ಖಾಸಗಿಯವರ ಉಪಟಳ ಬಹಳ ಜಾಸ್ತಿಯಾಗಿದೆ. ಬಳಕೆದಾರರಿಗೆ ಕಣ್ಣೀರಿಡಿಸುತ್ತಿದ್ದಾರೆ. ವಿದ್ಯುಚ್ಛಕ್ತಿ ಬೋರ್ಡೂ ಸಹ ಖಾಸಗಿಯವರಿಗಿಂತ ಕೆಟ್ಟ ರೀತಿಯಲ್ಲಿ ವರ್ತಿಸುತ್ತಿದೆ, ಸಾವಿರಾರು ಕಿಲೋವಾಟ್ ಉಪಯೋಗಿಸುವವರಿಗೆ ಈ ಬೋರ್ಡು ಗೌರವ ಕೊಡುತ್ತದೆ, ಅದೇ ಬಡವರಿಗೆ ಸಹಾಯ ಮಾಡುವುದಿಲ್ಲ. ಇದನ್ನು ನಾನೂ ಮತ್ತು ಮುಕ್ಕಣ್ಣಪ್ಪನವರೂ ಹಿಂದೆಯೇ ಹೇಳಿದ್ದೇವೆ. ಇದರ ಪರಿಶೀಲನೆಯಾಗಬೇಕು. ವಿದ್ಯುಚ್ಛಕ್ತಿ ಬೋರ್ಡಿನವರು ಸಾಲಮಾಡಿ ಪಡೆದ ಹಣವನ್ನು ಖಾಸಗಿ ಬ್ಯಾಂಕುಗಳಲ್ಲಿಟ್ಟಿದ್ದಾರೆ, ಖಾಸಗಿ ಬ್ಯಾಂಕುಗಳ ಡೈರೆಕ್ಟರುಗಳು ಈ ಬೋರ್ಡಿನಲ್ಲೂ ಡೈರೆಕ್ಟ

(ಶ್ರೀ ಎಸ್. ಗೋಪಾಲ ಗೌಡ)

ರಾಗಿದ್ದಾರೆ, ಇದನ್ನು ನೋಡಿದರೆ ವಿಷಾದವಾಗುತ್ತದೆ. ಇದು ಹೇಳಿದರೆ ಸರ್ಕಾರಕ್ಕೆ ಅರ್ಥವಾಗುವುದಿಲ್ಲ, ಇದುವರೆಗೆ ಅರ್ಥವಾಗಿಲ್ಲ ಎಂದು ವಿಷಾದವಾಗುತ್ತಿದೆ. ನಾನು ಹಿಂದೆಯೇ ವಿದ್ಯುಚ್ಛಕ್ತಿ ಬೋರ್ಡಿಗೆ ಸಂಬಂಧಪಟ್ಟ ಕಾನೂನಿನ 9ನೇ ಕ್ಲಾಜನ್ನು ಓದಿ ಹೇಳಿದೆ. ಪಿಕ್ಯೂನಿಯರಿ ಇಂಟರೆಸ್ಟ್ ಇರುವ ಡೈರೆಕ್ಟರು ಬೋರ್ಡಿನಲ್ಲಿರಬಾರದು. ಆದರೆ ಜತ್ತಿಯವರೇ ಅವರನ್ನು ನೇಮಕ ಮಾಡಿರುವುದರಿಂದ ಅವರು ಡಿಫೆಂಡ್ ಮಾಡಿಕೊಳ್ಳುವುದು ಸ್ವಾಭಾವಿಕ. ಮಂತ್ರಿಗಳಾಗಿರುವವರು ಹಾಗೆ ಮಾಡುವುದು ಉಚಿತವಲ್ಲ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು 23 ಕೋಟಿ ರೂಪಾಯಿಗಳಿಂದ 120 ಕೋಟಿಯವರೆಗೆ ಶರಾವತಿ ಯೋಜನೆಯ ಸಂಬಂಧದಲ್ಲಿ ಹೇಗೆ ಅಂದಾಜು ಏರಿತು ಎಂಬುದು ವಿಸ್ಮಯಕಾರಿಯಾದ ಘಟನೆ. ಬೆಲೆ ಹೆಚ್ಚಾಗಿರಬಹುದು, ಅಲ್ಪ ಸ್ವಲ್ಪ ಬದಲಾವಣೆಗಳಾಗಿರಬಹುದು. ಆದರೆ ಯಾವುದಕ್ಕೂ ಒಂದು ಮಿತಿಯಿರಬೇಕು. ಬಹಳ ವಿಳಂಬವಾಗುತ್ತಿದೆ. ಪ್ರತಿ ವರ್ಷ ಕೋಟಿಗಟ್ಟಲೆ ಇದರ ಅಂದಾಜು ಜಾಸ್ತಿಯಾಗುತ್ತಿರುವುದು ಮತ್ತು ವಿಳಂಬವಾಗುತ್ತಿರುವುದು ನೋಡಿದರೆ ಭಯವಾಗುತ್ತದೆ. ಇದರ ಬಗ್ಗೆ ಪುನರ್ಪರಿಶೀಲನೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ. ತಲಕಳಲೆ ಡ್ಯಾಂ ಮತ್ತು ಮಳಲಿ ಟನಲ್‌ಗಳ ಉದ್ಘಾಟನೆ ಮಾಡಿದರು. ಅದನ್ನು ನೋಡಿದರೆ ಸರ್ಕಾರಕ್ಕೆ ಹೊಣೆಯಿದೆಯೇ ಎಂದು ಪ್ರಶ್ನೆಮಾಡಬೇಕಾಗಿದೆ. ಯಾರು ಮಾಡಿದರು, ಯಾರು ಇನ್‌ವಿಟೇಷನ್ ಕೊಟ್ಟರು ಎಂಬುದನ್ನು ಸ್ವಲ್ಪ ತಿಳಿಸಬೇಕು. ಪ್ರಭಾವ ಬೀರಲು ಇದಕ್ಕೆ ಒಪ್ಪಿಕೊಳ್ಳಬಹುದು. ಇದಕ್ಕೆ ಸಂಬಂಧಪಟ್ಟಂತೆ ಇದ್ದ ಇಂಜಿನಿಯರು ಇಂದು ರಾಜಿನಾಮೆ ಕೊಟ್ಟು ದೂರದಲ್ಲಿ ಒಂದು ಖಾಸಗಿ ಸಂಸ್ಥೆಗೆ ಸೇರಿ ಪಾಲುಗಾರರಾಗಿದ್ದಾರೆಂದು ಕೇಳಿದ್ದೇನೆ. ಅವರು ಶರಾವತಿಗೆ ಸಂಬಂಧಪಟ್ಟ ಕಂಟ್ರಾಕ್ಟರ ಜೊತೆಯಲ್ಲಿ ಸಖ್ಯ ಮಾಡಿದ್ದಾರೆಂಬ ವದಂತಿ ಇದೆ. ಈಗಿರುವ ಚೀಫ್ ಎಂಜಿನಿಯರು ನಿವೃತ್ತರಾಗುವುದಾಗಿ ಹೆದರಿಸುತ್ತಿದ್ದಾರೆಂದು ಕೇಳಿದ್ದೇನೆ. ಇದನ್ನು ಗಮನಿಸಬೇಕು. ಬೇಗ ಈ ವಿಷಯವನ್ನು ಪರಿಶೀಲಿಸಿ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಸಭೆಗೆ ತಿಳಿಸಬೇಕು. ಇನ್ನು ಸಮಯವಾಗಿರುವುದರಿಂದ ಅಧ್ಯಕ್ಷರ ಕ್ರೋಧಕ್ಕೆ ತುತ್ತಾಗುವುದಕ್ಕೆ ಇಷ್ಟಪಡುವುದಿಲ್ಲ. ಹೇಳಬೇಕಾದ್ದು ಬಹಳವಿದೆ. ಈ ವಿದ್ಯುಚ್ಛಕ್ತಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತೀರಿ, ಉತ್ಪತ್ತಿಯಾಗಲು ಏನು ಯೋಚನೆ ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಕೃಷ್ಣ ಮತ್ತು ಗೋದಾವರಿ ನೀರಿನ ಬಗ್ಗೆ ಒಂದು ಮಾತು ಹೇಳಲು ಅಪ್ಪಣೆ ಕೇಳುತ್ತೇನೆ. ಮೊನ್ನೆ ಈ ವಿಷಯದ ಪ್ರಸ್ತಾಪ ಬಂದಾಗ ಮುಖ್ಯ ಮಂತ್ರಿಗಳು ಇದರಲ್ಲಿ ರಾಜಕೀಯವಿದೆ ಎಂದು ಹೇಳಿದರು. ಕಮ್ಯೂನಿಸ್ಟ್ ಪಾರ್ಟಿ ರಾಜಕೀಯವಿರಬಹುದು ಎಂದು ಹೇಳಿದರು.

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಾ ರಾಜಕೀಯದವರೂ ಸೇರಿದ್ದಾರೆ, ನಿಮ್ಮವರೂ ಇರಬಹುದು ಎಂದು ಹೇಳಿದೆ.

ಶ್ರೀ ಎಸ್. ಗೋಪಾಲ ಗೌಡ.—ನಿಮ್ಮ ಮಂತ್ರಿ ಮಂಡಲದವರೇ ಇಬ್ಬರು ಈ ಜಿಲ್ಲೆಯವರು, ನಿಮ್ಮ ಕಡೆಯ ಈ ಸಭೆಯ ಸದಸ್ಯರು ಸೇರಿಸಿದ್ದಾರೆ. ಆದುದರಿಂದ ರಾಜಕೀಯ ನಡೆದಿದೆ ಎಂದು ಹೇಳುವುದು ಸರಿಯಲ್ಲ. ಇದು ಪಾರ್ಟಿ ಮೀಟಿಂಗಿನಲ್ಲಿ ವಿಚಾರ ಮಾಡತಕ್ಕ ವಿಷಯ. ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳನ್ನು ಈಚೆಗೆ ಅಶೋಕ ಮೆಹತಾ ರವರು ಪ್ರತಿಪಾದನೆ ಮಾಡಿ ನಾನು ಹೇಳುವ ಅಭಿಪ್ರಾಯ ಪ್ಲಾನಿಂಗ್ ಕಮಿಷನ್ ಕೊಟ್ಟಿರುವುದು ಎಂದು ಹೇಳಿದ್ದಾರೆ. ಅಂಕಿ ಸಂಖ್ಯೆ ಕೊಟ್ಟಿರುವ ಪ್ರಕಾರ ನಾರಾಯಣಪುರ ಉಳಿದು ಆಲಮಟ್ಟಿ ಯೋಜನೆಗೆ ಘನತೆ ಹೆಚ್ಚುತ್ತಿದೆ. ಮುಳುಗಡೆಯಾಗುವ ಪ್ರದೇಶವೆಷ್ಟು, ಎಷ್ಟು ನೀರಾವರಿಯಾಗುವುದು, ಎಷ್ಟು ಜನರಿಗೆ ಅನುಕೂಲವಾಗುವುದು, ಲಾಭ ನಷ್ಟವೇನು ಎಂಬುದನ್ನು ಪರಿಶೀಲಿಸಿ ನಿರ್ಣಯವಾಗಬೇಕು. ಎರಡನ್ನೂ ಒಮ್ಮೆಗೇ ಆರಂಭಿಸುತ್ತಾರೆಂಬ ವದಂತಿಯುತ್ತು. ಉದ್ಘಾಟನೆ ಮಾಡಿದರೂ ಈಗಿರುವ 32 ಯೋಜನೆಗಳನ್ನು ಮುಗಿಸದೆ ಮಾಡುವುದಕ್ಕಾಗುವುದಿಲ್ಲ. ಕೇವಲ ಭಾವನಾತ್ಮಕ ತೃಪ್ತಿಗಾಗಿ ಮಂತ್ರಿಮಂಡಲ ಏನು ಬೇಕಾದರೂ ಹೇಳಬಹುದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲರಾವ್ ಮುಡ್ಬಿ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳನ್ನು ಸಮರ್ಥಿಸುತ್ತಾ ಕೇವಲ ಬಿದರೆ ಜಿಲ್ಲೆಗೆ ಸಂಬಂದಪಟ್ಟ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಕೃಷ್ಣ ಮತ್ತು ಗೋದಾವರಿ ನೀರಿನ ಬಗ್ಗೆ ಚರ್ಚೆ ಪ್ರಾರಂಭವಾದಾಗಿನಿಂದ ಮೈಸೂರಿಗೆ ಕೃಷ್ಣನದಿಯ ನೀರು ಎಷ್ಟು ದೊರೆಯಬೇಕೆಂಬುದು ಹೇಳುತ್ತಿದ್ದೇವೆ. ಆದರೆ ಗೋದಾವರಿ ನೀರಿನ ಬಗ್ಗೆ ಮೈಸೂರಿನವರು ಮಾತನಾಡಿದ್ದನ್ನು ನಾನು ಕೇಳಿಲ್ಲ. ಈ ರಾಜ್ಯದಲ್ಲಿ ಗೋದಾವರಿ ಬೇಸಿನ್ ಇದ್ದುದೂ ಕೇವಲ ಬಿದರೆ ಜಿಲ್ಲೆಯಲ್ಲಿ ಮಾತ್ರ. ಗೋದಾ

ವರಿಯು ನೀರಿನಲ್ಲಿ ಶೇಕಡ 27 ಭಾಗ ಸಲ್ಲಬೇಕಾಗಿದೆ. ಆದರೆ ಇದನ್ನು ಬರಮಾಡಿಕೊಳ್ಳಲು ಯಾವ ಯೋಜನೆಯನ್ನು ರಾಜ್ಯ ಸರ್ಕಾರ ಮಾಡಿದೆಯೆಂಬುದನ್ನು ಇಲ್ಲಿಯವರಗೆ ಹೇಳಿಲ್ಲ. ಇದಕ್ಕೆ ಯಾವಾಗಿನಿಂದ ವಾದ ವಿವಾದಗಳು ಉದ್ಭವಿಸಿದ್ದುವು ಆಗಿನಿಂದ ನಾವು ಬೀದರ್ ಜಿಲ್ಲೆಗೆ ಮುಖ್ಯವಾಗಿ ಬೇಕಾಗಿರುವ ಕಾರಂಜ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂದು ಮತ್ತು ಇದನ್ನು ಮೂರನೆ ಯೋಜನೆಯಲ್ಲಿಯೇ ಸೇರಿಸಬೇಕೆಂದು ಕೇಳುತ್ತಲೇ ಇದ್ದೇವೆ. ಆದರೆ ಮೂರನೆ ಪಾಂಚವಾರ್ಷಿಕ ಯೋಜನೆಗಾಗಿ ಸೇರಿಸಲು ಇಲ್ಲಿಯುವರೆಗೆ ಯಾವ ಸರ್ವೆಯನ್ನೂ ಮಾಡಿಲ್ಲ. ಹೀಗಾಗಿ ಬೀದರ್ ಜಿಲ್ಲೆಯಲ್ಲಿ ಶೇಕಡಾ 50 ರಷ್ಟು ಭಾಗ ಕೇವಲ ಒಂದೇ ಬೆಳೆ ಬೆಳೆಯುತ್ತಿದ್ದಾರೆ. ಇಲ್ಲಿ ಯಾವಾಗಲೂ ಎರಡು ಬೆಳೆ ಮಾಡುವುದಕ್ಕೆ ಸಾಧ್ಯವಿಲ್ಲ. ಬರಿ ಖರೀಫ್ ಬೆಳೆಗಳನ್ನು ಮಾತ್ರ ಬೆಳೆಯುತ್ತಿದ್ದಾರೆ. ಆದುದರಿಂದ ಇಲ್ಲಿರುವ ಕಾರಂಜ ಪ್ರಾಜೆಕ್ಟು ಮಾಡಿಸಿಕೊಟ್ಟರೆ ಇಲ್ಲಿನ ಜನಕ್ಕೆ ಸುಖಮಯವಾದ ಜೀವನವನ್ನು ಮಾಡಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದಕ್ಕಾಗಿ ಮೂರನೆ ಯೋಜನೆಯೊಳಗೇ ಕಾರಂಜ ಪ್ರಾಜೆಕ್ಟನ್ನೂ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಾರಂಜ ಪ್ರಾಜೆಕ್ಟನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕೆಲವು ಕಾರಣಗಳೂ ಇರುತ್ತವೆ. ಹಿಂದಿನ ವರ್ಷ ಮುಖ್ಯ ಮಂತ್ರಿಗಳು ಬೀದರ್ ಜಿಲ್ಲೆಗೆ ಬಂದಾಗ ಇದೊಂದು ಮೀಡಿಯಮ್ ಪ್ರಾಜೆಕ್ಟು, ಇದನ್ನು ಮಾಡುವುದರಿಂದ ಇಲ್ಲಿನ ಒಕ್ಕಲಿಗರಿಗೆ ಅನುಕೂಲವಾಗುತ್ತದೆ; ಇಂತಹ ಪ್ರಾಜೆಕ್ಟನ್ನು ಮಾಡಿಸಿಕೊಡುವೆ ಎನ್ನುವ ಆಶ್ವಾಸನೆಯನ್ನೂ ಕೊಟ್ಟಿದ್ದರು. ಎರಡು ಮೂರು ವರ್ಷಗಳ ಹಿಂದೆ ಈ ಪ್ರಾಜೆಕ್ಟಿಗಾಗಿ ಎರಡು ಕೋಟಿಯಷ್ಟು ಎಸ್ಟಿಮೇಟ್ ಆಗುತ್ತದೆ ಎಂದಿತ್ತು. ಈಗ ಬೆಲೆಗಳು ಹೆಚ್ಚಾಗಿರುವಾಗ ಇದು 5 ಕೋಟಿಗಳವರೆಗೂ ಆಗಬಹುದೆಂದು ಹೇಳಲಾಗುತ್ತಿದೆ. ಹಿಂದೆ ಎಸ್ಟಿಮೇಟು ಎರಡು ಕೋಟಿಯಷ್ಟು ಇದ್ದಾಗಲೇ ಇದರ ವಿಚಾರ ಮಾಡದೇ ಇರುವಾಗ ಈಗ ಇದರ ಬೆಲೆ ಇನ್ನೂ ಹೆಚ್ಚಾಗುತ್ತಿರುವಾಗ ಇದನ್ನು ಮಾಡುತ್ತಾರೋ ಇಲ್ಲವೋ ಎನ್ನುವ ಸಂಶಯ ಬರುತ್ತಿದೆ, ನಮ್ಮ ಭಾಗದಲ್ಲಿ ಹರಿಯುವ ಗೋದಾವರಿ ನದಿಯ ನೀರನ್ನು ಮತ್ತು ಅದರ ವಿಚಾರವನ್ನು ಇಲ್ಲಿ ಯಾರೂ ಇದುವರೆಗೆ ಹೇಳಿಲ್ಲ ಎಂದು ನಾನು ಭಾವಿಸುತ್ತೇನೆ, ಈ ಗೋದಾವರಿ ನದಿಯಿಂದ ಬರುವ ನೀರನ್ನುಪಯೋಗಿಸಿಕೊಂಡರೆ ಸುಮಾರು 50,000 ಎಕರೆಗಳಷ್ಟು ಭೂಮಿಗೆ ಅನುಕೂಲವಾಗುತ್ತದೆ. ಅದಕ್ಕಾಗಿ ಇಲ್ಲಿನ ಕಾರಂಜ ಪ್ರಾಜಕ್ಟು ಯೋಜನೆಯನ್ನು ಈ ಮೂರನೆ ಯೋಜನೆಯಲ್ಲೇ ಸೇರಸಿ ಪ್ರಾರಂಭ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಬೀದರ್ ಜಿಲ್ಲೆಯಲ್ಲಿ ಸುಮಾರು 30 ಸಣ್ಣ ಸಣ್ಣ ನೀರಾವರಿ ಯೋಜನೆಗಳು ಇದ್ದವು. ಇವುಗಳಲ್ಲಿ ಕೇವಲ ಐದು ಕೆಲಸಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ನಮ್ಮ ಭಾಗದಲ್ಲಿರುವ ಔರಾದ್ ತಾಲ್ಲೂಕ, ಹುಮ್ನಾಬಾದ ಹಾಗೂ ಭಾಲ್ಕಿ ತಾಲ್ಲೂಕುಗಳಲ್ಲಿ ಶೇಕಡಾ 90 ಭಾಗ ಬರಿ ಖರೀಫ್ ಬೆಳೆ ಮಾತ್ರ ಬೆಳೆಯುತ್ತಿದ್ದಾರೆ. ಎಲ್ಲಿಯೂ ಎರಡುಬೆಳೆ ಬರುವುದಿಲ್ಲ. ಈ ಭಾಗಕ್ಕೆ ಮುಖ್ಯವಾಗಿ ಲಫ್ಟ್ ಇರಿಗೇಷನ್ ಸ್ಕೀಮ್ ತಂದು ಸಣ್ಣ ಸಣ್ಣ ಕೆರೆ ಕಟ್ಟೆಗಳನ್ನು ಉಪಯೋಗ ಮಾಡಲಿಕ್ಕೆ ಸಾಧ್ಯವಿದೆ. ಇದನ್ನು ಬೇಗನೆ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಇಲ್ಲಿ ಹೇಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಹೇಳಬೇಕಾದರೆ ಮೂರು ವರ್ಷಗಳ ಹಿಂದೆಯೇ ನಮ್ಮ ಭಾಗಕ್ಕೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳು ಬಂದು ಅಲ್ಲಿನ ಸಾರ್ವಜನಿಕ ಸಭೆಗಳಲ್ಲಿ ಹೇಳಿದ್ದರು. ಅದರಮೇಲೆ ಇಲ್ಲಿಗೆ ಬಂದು ವಿಚಾರಿಸಿದಾಗ ಥರ್ಮಲ್ ಸ್ಟೇಷನ್ನುಗಳೇನೋ ಬಂದವು. ಆದರೆ ಇಲ್ಲಿನ ಒಕ್ಕಲಿಗ ಜನರು ಹೈಡಲ್ ಪವರಿಗಾಗಿ ದಾರಿ ಕಾಯುತ್ತಿದ್ದಾರೆ. ಈಗಿರುವ ಡೀಸಲ್ ಪವರನ್ನುಪಯೋಗಿಸಿ ನೀರನ್ನು ಇರಿಗೇಷನ್ನಿಗಾಗಿ ಉಪಯೋಗಿಸಿಕೊಂಡರೆ ಅದರ ಖರ್ಚು ಒಂದೂವರೆ ಸಾವಿರದಿಂದ ಎರಡು ಸಾವಿರದವರೆಗೆ ಬರುತ್ತದೆ. ಸುಮಾರು ಒಂದು ಎಕರೆಯಷ್ಟು ವ್ಯವಸಾಯ ಮಾಡಬೇಕಾದರೆ ಸಾವಿರ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಆದರೆ ಹೈಡಲ ಪವರು ಬಂದರೆ ಖರ್ಚು ಇಷ್ಟು ಬರುವುದಿಲ್ಲ. ಈಗಾಗಲೇ ಗುಲ್ಬರ್ಗಾದವರೆಗೆ ಲೈನು ಬಂದಿದೆ. ಇದನ್ನು ಮುಂದೆ ಷಹಾಬಾದ, ಹುಮ್ನಾಬಾದ್ ಬೀದರ, ಭಾಲ್ಕಿ ಹಾಗು ಸಂತಪುರ ತಾಲ್ಲೂಕಾದವರೆಗೆ ತೀವ್ರವಾಗಿ ಲೈನನ್ನು ಹಾಕಿಸಿಕೊಟ್ಟರೆ ನಮ್ಮ ಭಾಗದ ಜನಕ್ಕೆ ಹೈಡಲ್ ಪವರು ಸಿಕ್ಕಲಿಕ್ಕೆ ಅನುಕೂಲವಾಗುತ್ತದೆ.

196 ನೇ ಆಗಸ್ಟ್ ತಿಂಗಳಿನಲ್ಲಿ ನಾನಾ ನಗರಸಭೆಗಳಿಗಾಗಿ; ವಾಟರು ವರ್ಕುಗಳಿಗಾಗಿ ಸುಮಾರು 45 ಲಕ್ಷದಷ್ಟು ಸಾಲದ ರೂಪವಾಗಿ ಒದಗಿಸಿದ್ದಾರೆ. ಅದರೆ ನಮ್ಮಲ್ಲಿ ಮೂರು ಮುನಿಸಿಪಾಲಿಟಿಗಳಲ್ಲಿ ವಾಟರು ವರ್ಕುಗಳನ್ನು ಮಾಡುವುದಕ್ಕಾಗಿ, ಹುಮ್ನಾಬಾದು, ಬಸವಕಲ್ಯಾಣ ನಗರಸಮಿತಿಗಳು 6-7 ಲಕ್ಷ ರೂಪಾಯಿಗಳಷ್ಟು ಹಣವನ್ನು ಸಾಲವಾಗಿ ಕೇಳಿದ್ದರು. ಆದರೆ ಅದು ಸಿಗಲಿಲ್ಲ. ಈಗ ಅದನ್ನೂ ಕಡಿಮೆಮಾಡಿ ಸುಮಾರು 5 ಲಕ್ಷದಷ್ಟು ಸಾಲವನ್ನು ಮಾತ್ರ ಕೇಳುತ್ತಿದ್ದಾರೆ. ಇದನ್ನಾದರೂ ಸಹಾಯಮಾಡಿದರೆ ಇಲ್ಲಿನ ಜನಕ್ಕೆ ನೀರಿನ ತೊಂದರೆ ತಪ್ಪುತ್ತದೆ

(ಶ್ರೀ ಗೋಪಾಲರಾವ್ ಮುಡ್ಬಿ)

ಎಂದು ಕೇಳಿದರೂ ಈ ಸಾಲವನ್ನು ಇದುವರೆಗೂ ಕೊಡುವ ವ್ಯವಸ್ಥೆಯಾಗಿಲ್ಲ. ನನಗೆ ಎರಡು ಮೂರು ದಿನಗಳ ಹಿಂದೆ ಅಲ್ಲಿಂದ ಒಂದು ಪತ್ರ ನೀರು ಸಿಕ್ಕಿದೆಯೆಂದು ಬಂದಿದೆ. ಅದರಿಂದ ಹುಮನಾಬಾದ ನಗರಕ್ಕೆ ಸಾಕಷ್ಟು ನೀರು ಸಿಗುತ್ತೆ ಎಂದು ಇಲ್ಲಿಗೆ ಬಂದಿದ್ದ ಒಬ್ಬರು ವಾಟರು ಡಿವೈನರು ಬಂದು ತೋರಿಸಿಕೊಟ್ಟು ಹೋಗಿದ್ದಾರೆ. ಅದರಿಂದ ಹುಮನಾಬಾದ್ ಮುನಿಸಿಪಾಲಿಟಿಯವರು ತಮ್ಮಲ್ಲಿರುವ ರಿಸರ್ವ್‌ನಿಂದ ಹಣವನ್ನು ಪಯೋಗಿಸಿಕೊಳ್ಳಲು ಸರಕಾರದ ಪರವಾನಗಿಯನ್ನು ಕೇಳುತ್ತಿದ್ದಾರೆ. ಅದೂ ಸಹ ಕೊಡುವುದರಲ್ಲಿ ವಿಳಂಬವಾಗುತ್ತದೆ. ಈ ಬೇಸಿಗೆ ಮುಗಿಯುವುದರೊಳಗಾಗಿಯಾದರೂ ಸರಕಾರದವರು ಇಲ್ಲಿಗೆ ಪರವಾನಗಿಯನ್ನು ಕೊಟ್ಟು 5 ಲಕ್ಷ ರೂಪಾಯಿ ವೆಚ್ಚದಲ್ಲಿ 10–11 ಸಾವಿರ ಜನಸಂಖ್ಯೆಯುಳ್ಳ ಹುಮನಾಬಾದ ಮತ್ತು 20 ಸಾವಿರ ಜನಸಂಖ್ಯೆಯುಳ್ಳ ಬಸವಕಲ್ಯಾಣ ನೀರಿನ ಪೂರೈಕೆ ಕೆಲಸವನ್ನು ಮಾಡಲು ಸಹಾಯ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೀದರ್ ಜಿಲ್ಲೆಗೆ ಸರಕಾರದ ಕಡೆಯಿಂದ ಬರುವ ಆಫೀಸರುಗಳು ಸರ್ವೇಸಾಧಾರಣವಾಗಿ ಯಾರಿಗಾದರೂ ಶಿಕ್ಷೆಯಾಗಿದ್ದರೆ ಅಂತಹ ಅಧಿಕಾರಿಗಳನ್ನು ಬೀದರ್ ಕಡೆಗೆ ವರ್ಗ ಮಾಡು ಎಂದು ಅವರಿಗೆ ಶಿಕ್ಷೆ ಕೊಡುತ್ತಾರೆ. ಹಿಂದುಸ್ಥಾನದಲ್ಲಿ ಅಂಡಮಾನ, ನಿಕೋಬಾರ ದ್ವೀಪಕ್ಕೆ ಕಳುಹಿಸಿದಂತೆ ಇಲ್ಲಿಗೆ ನಮ್ಮ ರಾಷ್ಟ್ರದ ಬೇರೆ ಭಾಗಗಳಿಂದ ಅಧಿಕಾರಿಗಳನ್ನು ವರ್ಗಾಯಿಸುತ್ತಿರುವಂತೆ ಭಾಸವಾಗುತ್ತದೆ. ಇಂತಹ ಜನರನ್ನೇಕೆ ಇಲ್ಲಿಗೆ ಕಳುಹಿಸಬೇಕು? ನಮ್ಮ ಜಿಲ್ಲೆಯಲ್ಲಿರುವ ಭಾಲ್ಕಿ ಸಂತಪೂರು ತಾಲ್ಲೂಕಾಕ್ಕೆ ಕೋಲಾರದಿಂದ ಒಬ್ಬರು ಬಿ.ಡಿ.ಓ. ಅವರನ್ನು ಹಾಕಿದ್ದಾರೆ. ಆಮೇಲೆ ವಿಚಾರಿಸುವಾಗ ಇವರು ಎಲ್ಲಿಯೋ ತಪ್ಪು ಮಾಡಿದವರು ಎಂದು ಇಲ್ಲಿಗೆ ವರ್ಗ ಮಾಡಿದ್ದಾರೆಂದು ನನಗೆ ತಿಳಿದು ಬಂತು. ಈ ಪ್ರಕಾರ ಮೈಸೂರು ಭಾಗದಿಂದ ಬೀದರ ಜಿಲ್ಲೆಗೆ ಏನಾದರೂ ತಪ್ಪು ಮಾಡಿದವರೆಂದು ಇಲ್ಲಿಗೆ ವರ್ಗ ಮಾಡುವುದು ಸರಿಯಾದುದಲ್ಲ. ಅಲ್ಲದೆ ಒಳ್ಳೆ ಆಫೀಸರುಗಳು ನಾಲ್ಕೈದು ತಿಂಗಳು ಕಾಲಮಾತ್ರ ಇದ್ದು ಹೊರಟು ಹೋಗುತ್ತಾರೆ ಮತ್ತು ಇದರಿಂದ ಅಲ್ಲಿನ ಕೆಲಸಗಳೂ ಸರಿಯಾಗಿ ನಡೆಯಲು ಅನುಕೂಲವಾಗುವುದಿಲ್ಲ. ಇದನ್ನು ತಪ್ಪಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಿವಿಜನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯು ಹಿಂದೆ ಒಂದು ಸಾವಿರ ಹುದ್ದೆಗಳು ಖಾಲಿಯಾಗಿವೆ ಎಂದು ಅರ್ಜಿಗಳನ್ನು ಕರೆದಿದ್ದಿತು. ಅದರಲ್ಲಿ ಬೀದರ್ ಜಿಲ್ಲೆಯ ಕಡೆಯಿಂದಲೂ ಅರ್ಜಿಗಳು ಬಂದಿದ್ದವು, ಒಬ್ಬರನ್ನು ಮಾತ್ರ ಗುಲ್ಬರ್ಗಾದ ರೆಕ್ರೂಟ್‌ಮೆಂಟ್ ಕಮಿಟಿಯವರು ಇಲ್ಲಿಯತನಕ ಅಪಾಯಿಂಟ್ ಮಾಡಿದ್ದಾರೆ. ಅಲ್ಲದೆ ನಾವುಗಳು ರೆಕ್ರೂಟ್‌ಮೆಂಟ್ ಕಮಿಟಿಯವರನ್ನು ನಮ್ಮ ಭಾಗದಲ್ಲಿಯೂ ಪ್ರವಾಸ ಮಾಡಬೇಕೆಂದು ಕರೆದರೂ ಬರಲಿಲ್ಲ. ಅಲ್ಲದೆ ಈ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ನಮ್ಮ ಬೀದರ್ ಭಾಗದ ಡೆಪ್ಯುಟೀ ಕಮಿಷನರವರನ್ನೂ ಒಬ್ಬ ಸದಸ್ಯರಾಗಿ ಸೇರಿಸಿದರೆ ಅವರಿಗೆ ನಮ್ಮ ಭಾಗದ ಜನರ ವಿಚಾರಗಳೆಲ್ಲಾ ಗೊತ್ತಿರುತ್ತವೆ ಮತ್ತು ನಮ್ಮ ಜನಗಳಿಗೂ ಅನುಕೂಲವಾಗುತ್ತದೆ. ಆ ರೀತಿ ಡೆಪ್ಯುಟಿ ಕಮಿಷನರವರನ್ನೂ ಸಮಿತಿಗೆ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಈಗ ಚೀಫ್ ಇಂಜನೀಯರುಗಳು ಏನಿದ್ದಾರೆ ಅವರ ಬಗ್ಗೆ ಮೊನ್ನೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ಎಷ್ಟು ಕೆಲಸದ ಒತ್ತಡ ಬರುತ್ತದೆ ಎನ್ನುವದನ್ನು ಹೇಳಿದರು. ಚೀಫ್ ಇಂಜಿನೀಯರ (ಜನರಲ್) ಖರ್ಚು ಮಾಡುವದು ಸುಮಾರು 5–6 ಕೋಟಿಯವರೆಗೆ ಬರುತ್ತೆ. ಅಲ್ಲಿಂದ ಇರಿಗೇಷನ್ನಿನವರು ಸುಮಾರು 7–8 ಕೋಟಿಯಷ್ಟು ಮಾಡುತ್ತಾರೆ ಇನ್ನೊಬ್ಬರಿಗೆ ರೋಡು ಬಿಲ್ಡಿಂಗ್‌ಗಳಿಗಾಗಿ ಸುಮಾರು 20–22 ಕೋಟಿಯವರೆಗೆ ಬರುತ್ತದೆ. ಇಷ್ಟೆಲ್ಲಾ ನೋಡಿದರೆ ಒಬ್ಬರಿಗೆ ಹೆಚ್ಚು ಕೆಲಸ ಇನ್ನೊಬ್ಬರಿಗೆ ಕಡಮೆ ಕೆಲಸ ಇರುವಂತೆ ಕಾಣುತ್ತದೆ. ಇದೇ ರೀತಿಯಾಗಿ ಈಗ ಆಂಧ್ರದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಮಾಡಿರುವಂತೆ ಅಲ್ಲಿ ಹೈವೇಸ್‌ಗಾಗಿ ಒಬ್ಬರು ಚೀಫ್ ಇಂಜನೀಯರು ಇದ್ದಾರೆ, ಬಿಲ್ಡಿಂಗ್ಸ್‌ಗಾಗಿಯೇ ಒಬ್ಬರು ಇದ್ದಾರೆ ಮತ್ತು ಇದರಿಂದ ಚೆನ್ನಾಗಿ ಹಾಗೂ ತ್ವರಿತವಾಗಿ ಕೆಲಸಗಳಾಗುತ್ತವೆ. ಅದರಂತೆ ಇಲ್ಲಿಯೂ ಮಾಡಬೇಕೆಂದು ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri S. M. KRISHNA (Maddur).—Sir, the Demands on General Administration, Irrigation and Power, in my humble opinion, are vital demands. It also gains added importance in view of the fact that the Chief Minister himself heads these Departments. I would like to start certain of my observations with General Administration.

It is accepted on all hands that there has been a steady deterioration in the administrative services. Demoralisation seems to have set in at all these stages in all the cadres in the administrative services. There have been talks of disappointment and frustration. Some of it is due to the fact that the Inter-State Seniority List has not been finalised. It is a common spectacle that almost every Gazetted Officer goes about with a Civil List in his hands. He is not sure about his own seniority all the time. The best of his attention is bestowed not on what is going on in the State but on his seniority, his promotion and his transfer. This is not a healthy development. One of the trends that we observe in the last 16 years of our independent existence is the political interference in the administrative procedure and set-up. I am not singling out any political party. I guess that all the political parties are equally reponsible for this deterioration in standards in public life. Not a day passes without non-official interference in the process of administration. A day will have to soon come when the public servant will be given the required freedom to act in consonance with his conscience within the framework of the letter and spirit of the rules and regulations that we have framed. All of us will do well to address a question to ourselves whether we have created such an atmosphere for our public servant in this State. Many questions have been asked here about the set-up of the Vigilance Commission. Only the other day the Finance Minister while replying to certain of the questions posed to him by this House said the entire set-up will be finalised in about a week's time. There are no two opinions in this State as well as in this country that while settling up standards in public life and even in governmental agencies, we have to take serious note of the fall in standards. In keeping with that the Union Minister for Home has set up a Vigilance Commission at the Union level and it was held out as a suggestion, if not as an advice, that the State Government also have to follow suit. Now I am beginning to get bewildered at the manner in which the State Governments have been moving in this direction of setting up Vigilance bodies. What is it that is in the way of the State Government for the creation of a Vigilance Commission? We hear that in principle the State Government has agreed to the idea of setting up this Vigilance Commission. Is it because the State Government has not been able to find one suitable enough to take charge of the post of Vigilance Commissioner? We are also by no means sure whether it is going to be a single-man Commission or it is going to be a Commission consisting of more than one person. These are some of the things which are bothering all of us for quite some time and I would like the Chief Minister to act vigorously in this field. I would also like him not to lose any further time in the setting up of this Vigilance Commission.

We have said before that this Secretariat is overcrowded with Ministers and Deputy Ministers. I feel sorry for the Deputy Ministers. They are in a way humiliated. Some of the Deputy Ministers have absolutely no work. I am not going to single out any one of them because what I have been saying in public these Deputy Ministers have

(SRI S. M. KRISHNA)

been feeling within their hearts that they have absolutely no work and their function has become merely ornamental. So I would like to call attention of the Chief-Minister that this also is not a very healthy development. Simply because you would like to accommodate certain members of your own party and you have got to place them in certain posts, it does not mean that they should not be given any work at all. Some of the heavy Departments like Health, Home and Revenue have no Deputy Ministers. The Department of Municipal Administration has been allotted a Deputy Minister. There should be a certain fairplay and a good deal for the Deputy Minister also. Otherwise in all consciousness with a stroke of your pen you can say tomorrow that you need no Deputy Ministers and we would be the first to congratulate the Chief Minister on that score. I hear that there is a training institute for administrative services in Mysore City. I have been making enquiries about this training institute. I am told that this is established on the lines of the administrative training centre in Mussorie. The other day I came to know that this Mysore City training institute has hardly any library. Moreover, it is not a residential institute. Some of the Tahsildars and Assistant Commissioners that you have recruited in the last year or two have been asked to go to Mysore City to get training. From whom do these young men get trained? They get trained by an Assistant Commissioner. This is a very sad state of affairs. If you want to train these young men, the training will have to be on certain scientific lines. The training will have to confine itself to certain administrative principles. Simply because there is an institute in Mussoorie, you would like to have a similar institute of training without proper equipment. That does not speak well of the intentions of Government. I would like the Chief-Minister to bestow his attention to this training institute also.

Much has been said about irrigation. Much has also been said over a period of time about Krishna waters, about Upper Krishna project, about Cauvery valley and all that. I would like to draw the pointed attention of the Government of Mysore to a salient feature.

10-00 P.M.

When the Union Minister made a statement in Lok Sabha about the sharing of waters, he also declared that they would constitute Inter-State River Boards. Inter-State River Boards will be constituted to co-ordinate the demands of various States and also to ascertain the needs of various States. Sir, with the change of personnel in the Union Ministry of Irrigation and Power, I fail to understand why the idea of the formation of the river boards have been given a go-by. I have not been able to understand what was good sometime back when Mr. Hafiz Mohammed Ebrahim made his statement in Lok Sabha, a responsible statement, is not feasible now. Many of us while participating in that discussion welcomed the formation of these river boards, with a view to settle these inter-State river water disputes amongst ourselves. But, now

Sir, recently Mr. K. L. Rao the present incumbent in the office made a statement that they are not going to establish these inter-State River Boards. I fail to understand why these river boards are not going to be established. I would like the State Government to bestow serious consideration on this thought. They must demand on the Central Government, they must agitate and they must impress on the Central Government the efficacy, the usefulness of having these inter-State River Boards.

We said before that the vital interests of Mysore State have been sacrificed with particular reference to the sharing of waters in Krishna River. We are all verry happy that technical sanction has been got to the Upper Krishna project. Only the other day, the Public Works Minister was so flattered—he was so proud that this Government has achieved this in two years of its existence, that it has got technical clearance to Upper Krishna project. So far, so good. But, from here, where, do we go? Now, getting technical sanction is not the end in itself. we have to go very many steps forward before we can satisfy the people of Bijapur, Gulbarga, Bidar, Raichur and so many other districts. The vital question still remains open. Allocation of water from the Union Ministry—would that be enough to complete this Upper Krishna project? Will we have 230 TMCft. of water to finish all the stages of Upper Krishna. That question has not been answered at all. According to our own calculation, there may be very little left out of 600 TMCft. of water. We have been using 92 TMCft. of water before 1957. We have been using about 280 TMCft. of water now. Then, we will have to reserve about 50 TMCft. of water for industrial development. And, Malaprabha will consume about 37 TMCft. of water. And then, Tungabhadra and various other miscellaneous projects will get 28 TMCft. of water. In all, were are using about 489 TMCft. of water, and only about 111 TMCFT of water will be left. 111 is a very inauspicious figure.

SRI S. NIJALINGAPPA.—It is very auspicious.

SRI S. M. KRISHNA.—According to me, it is very inauspicious. Our minimum requirements for Upper Krishna, according to the figures furnished by the State Government itself, is 226 TMCft. of water. Where do we get the rest of the water. On the one side, we have the belligerent Andhra Pradesh Government. They have been vocal; they have been organised; they have been united. Besides, they have a Minister there who will safeguard their vital interests. Now, Sir, whom have we here to safeguard our vital interests? We will have to depend upon the Leader of the House Sri Nijalingappa, with the weight he commands in Delhi. For two years we have depended on Sri Nijalingappa and with great respect, may I submit that we are disillusioned? We are disillusined because, the suspicion in some of us still remain that the vital interes of Mysore State are not safeguarded properly.

My friends have made reference to the White Paper on Sharavathi, and I am not going to make any observation on the White paper. Suffice for me to say that if at all any thing is proved according to the White Paper, it is that justness of our demand for a judicial enquiry. It has

(SRI S. M. KRISHNA)

been proved beyond all reasonable doubt. I would like Government to
reconsider its stand, in all propriety, to have a judicial enquiry into the
whole affairs of Sharavathi.

MR. SPEAKER.—If everybody deals with Sharavathi, where is the
agreement ? If all members like to have a talk wholesale, let us have a
full dress debate. We have to adhere to the agreement to which I am a
witness.

Sri S. M. KRISHNA.—Later on, it may not be said that the
Opposition did not demand a judicial enquiry......

MR. SPEAKER.—Sri Gopala Gowda has expressed on behalf of all of
the members......

Sri S. M. KRISHNA.—I am only strengthening the hands of
Sri Gopala Gowda when he said that we want a judicial enquiry.

[MR. DEPUTY SPEAKER in the Chair.]

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಇವತ್ತಿನ ದಿವಸ ಈ ಸಭೆಯ
ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ನನಗೆ ಕೊಟ್ಟಂಥ ಅಲ್ಪಸ್ವಲ್ಪ
ಸಮಯವನ್ನು ಜ್ಞಾಪಕದಲ್ಲಿಟ್ಟುಕೊಂಡು ಕೇವಲ ನಾನು ಘಟಪ್ರಭಾ ಮತ್ತು ಮಲಪ್ರಭಾ— ಈ
ಯೋಜನೆಗಳ ವಿಷಯವಾಗಿ ಸರ್ಕಾರದವರು ಹಣವನ್ನು ಒದಗಿಸಿರುವ ಬಗ್ಗೆ ಕೆಲವಾರು ಅಂಶ
ಗಳನ್ನು ಹೇಳುತ್ತೇನೆ. ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯ ವಿಚಾರದಲ್ಲಿ ಯೋಗ್ಯ
ವಾದ ಪಾಲನ್ನು ನಾವು ದೊರಕಿಸಿಕೊಳ್ಳಬೇಕೆಂಬ ವಿಷಯವಾಗಿ ಈ ಸಭೆಯ ಅನೇಕ ಮಾನ್ಯ ಸದ
ಸ್ಯರು ಮಾತನಾಡಿದ್ದಾರೆ. ಅಲ್ಲದೆ ರಾಜ್ಯಪಾಲರೂ ಸಹ ತಮ್ಮ ಭಾಷಣದಲ್ಲಿ ಮೈಸೂರು ರಾಜ್ಯ
ದಲ್ಲಿ ನೀರಾವರಿಯ ಅಭಿವೃದ್ಧಿಯ ಸಲುವಾಗಿ, ಈ ನೀರಿನ ಹಂಚಿಕೆ ವಿಚಾರದಲ್ಲಿ ನಮ್ಮ ಹಕ್ಕಿನ
ಪಾಲಾಂಶವನ್ನು ಪಡೆಯಲು ನಾವು ನಮ್ಮ ಪ್ರಯತ್ನವನ್ನು ಮುಂದುವರಿಸುವೆವು, ಎಂಬುದಾಗಿ
ಎತ್ತಿ ತೋರಿಸಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಕುರಿತು ಮಾನ್ಯ ಆರ್ಥಿಕ
ಮಂತ್ರಿಗಳು ಹೇಳಿದ್ದಾರೆ. ಆದರೆ ಆಂಧ್ರ ಸರ್ಕಾರಕ್ಕೆ 12 ಕೋಟಿ ರೂಪಾಯಿಗಳು ಸಿಕ್ಕುವಾಗ
ನಮಗೆ ಕೇವಲ 6 ಕೋಟಿ ರೂಪಾಯಿಗಳ ಗ್ರಾಂಟು ಸಿಗುವ ವಿಚಾರದ ಬಗ್ಗೆ ನಾನು ಚರ್ಚಿಸಲು
ಇಚ್ಛಿಸುವುದಿಲ್ಲ. ಏಕೆಂದರೆ ನಮ್ಮ ರಾಜ್ಯ ಸರ್ಕಾರದವರು ರಾಜ್ಯದ ಅಭಿವೃದ್ಧಿಗಾಗಿ ಕೇಂದ್ರ
ಸರ್ಕಾರದವರಿಂದ ಹೆಚ್ಚು ಗ್ರಾಂಟನ್ನು ತರುವ ಪ್ರಯತ್ನಮಾಡುತ್ತಾರೆಂಬ ಭರವಸೆ ನನಗಿದೆ.
ಈಗ ನಾನು ಮೊದಲನೆಯದಾಗಿ ಘಟಪ್ರಭಾ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರ ಹಣವನ್ನು
ಒದಗಿಸಿರುವ ವಿಚಾರವನ್ನು ಮಾತನಾಡಬೇಕೆಂದು ನಿಂತಿದ್ದೇನೆ. ನಮ್ಮ ಸರ್ಕಾರದವರು ಕೊಟ್ಟಿ
ರುವ ಬಡ್ಜೆಟ್ ಮೆಮೊರ್ಯಾಂಡಂ 92 ಮತ್ತು 93ನೇ ಪುಟದಲ್ಲಿ ಹೇಳಿದ ಪ್ರಕಾರ ನಾವು ಇಲ್ಲಿ ನೋಡಿ
ದಾಗ ನಮ್ಮ ದೇಶದ 32 ಯೋಜನೆಗಳಲ್ಲಿ 25 ಯೋಜನೆಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆ
ಯಿಂದ ಮುಂದುವರಿಸಿಕೊಂಡು ಬಂದಿದ್ದಾರೆ. ಅವುಗಳೊಳಗೆ ಕೆಲವು ಫಲವನ್ನು ಕೊಡುವುವು
ಮತ್ತೆ ಕೆಲವು ಫಲವನ್ನು ಕೊಡುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ನಮ್ಮ ದೇಶದಲ್ಲಿನ
ನೀರಾವರಿ ಯೋಜನೆಗಳಲ್ಲಿ ಈ ಘಟಪ್ರಭಾ ಒಂದೇ ಒಂದು ನಮಗೆ ಲಾಭದಾಯಕವಾಗಿ ಆಗಿದೆ
ಎನ್ನುವುದನ್ನು 92—93ನೇ ಪುಟದಲ್ಲಿ ಅವರು ಹೇಳಿದ್ದಾರೆ. ಧೂಪದಾಳ ಗೋಕಾಕ್ ಕನಾಲಿಗೆ
14 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಡಿಸಿದ್ದಾರೆ. ಇದರಿಂದ ನಮಗೆ ನೀರಿನ ತೆರಿಗೆ
ಮತ್ತು ಇತರ ತೆರಿಗೆಗಳಿಂದ ಕೇವಲ 14·48 ಲಕ್ಷ ರೂಪಾಯಿಗಳು ಎಂಬುದಾಗಿ ಗೊತ್ತಾಗುತ್ತದೆ.
ಕೇವಲ 18 ಸಾವಿರ ಎಕರೆಗಳಿಂದ ಉತ್ಪತ್ತಿ 14·48 ಲಕ್ಷ ರೂಪಾಯಿಗಳು ಬರುತ್ತವೆ. ಇದರಿಂದ
ನಿಜವಾಗಿ ಇತರ ಎಲ್ಲಾ ಯೋಜನೆಗಳೂ ಹಾನಿಯಾಗುತ್ತವೆಂದು ಕಂಡುಬರುತ್ತಾ ಇದೆ.
1964-65ನೇ ಇಸವಿಯ ಬಡ್ಜೆಟ್ ಮೆಮೋರಾಂಡಂನ ಪುಟ 92-93ರಲ್ಲಿ ತಾವು ಹೇಳಿರುವಂತೆ
ರಾಜ್ಯದ ಇತರ ನೀರಾವರಿ ಕಾಮಗಾರಿಗಳಿಂದ 42 ಲಕ್ಷ ರೂಪಾಯಿಗಳ ಉತ್ಪತ್ತಿ ಬರುತ್ತದೆ.
ಮತ್ತು ಒಟ್ಟು ನೀರಾವರಿ ಬಾಬುಗಳಿಂದ ನಮಗೆ 56.50 ಲಕ್ಷ ರೂಪಾಯಿಗಳು ಬರುತ್ತದೆ ಎಂದು
ಹೇಳಿದ್ದಾರೆ. ಆದರೆ ಕೇವಲ ಗೋಕಾಕ್ ಕೆನಾಲ್ ಪ್ರದೇಶಗಳಲ್ಲಿರುವ 1,800 ಎಕರೆ ನೀರಾವರಿ
ಕ್ಷೇತ್ರದಿಂದ 14 ಲಕ್ಷ ರೂಪಾಯಿಗಳು ಬರುತ್ತದೆ. ಇದನ್ನು ನೋಡಿದರೆ ರಾಜ್ಯದ ನೀರಾವರಿ

ಖಂಡಿತರಾಗಿ ಬರತಕ್ಕ ಹಣವಲ್ಲ ಕ್ಕೆ ದಷ್ಟು ಹಣ ಗೋಕಾಕ್ ಕ್ಯಾನಾಲ್‌ನಿಂದ ಬರುತ್ತದೆ ಎನ್ನುವುದು
ನೆನಪಿನಲ್ಲಿ ಇಡತಕ್ಕ ವಿಷಯ. ಅಲ್ಲಿ ಇಷ್ಟು ಹಣ ನೀರಾವರಿ ತೆರಿಗೆಯ ರೂಪದಿಂದ ಬರುತ್ತಿದ್ದರೂ
ಸಹ ಅಲ್ಲಿ ಏನೂ ಅಭಿವೃದ್ಧಿ ಕಾರ್ಯ ಆಗದೆ ಇರುವುದು ಕಳವಳಕಾರಕ. ಧೂಪದಾಳ ಮತ್ತು
ಗೋಕಾಕ್ ಕೆನಾಲ್ ಕಟ್ಟುವುದಕ್ಕೆ ಉಪಯೋಗಿಸಿದ ಹಣಕ್ಕೆ 3 ಪರ್ಸೆಂಟ್ ಬಡ್ಡಿಯಂತೆ ಬಂದು
ವರ್ಷಕ್ಕೆ 52,312 ರೂಪಾಯಿಗಳು ಆಗುವುದೆಂದು 1953–54ನೇ ಇಸವಿಯಲ್ಲಿ ಬೊಂಬಾಯಿನ
ಅಕೌಂಟೆಂಟ್ ಜನರಲ್ ಅವರು ಹೇಳಿದ್ದರು. ಮತ್ತು ಅಷ್ಟು ಹಣ ರಿಟರ್ನ್ ರೂಪದಲ್ಲಿ ಅಲ್ಲಿಂದ
ನಮಗೆ ಬಂದರೆ ಸಾಕು ಎನ್ನುವಂಥಾ ಒಂದು ಉದ್ದೇಶವನ್ನು ಅವರು ಇಟ್ಟುಕೊಂಡಿದ್ದರು. ಆದರೆ
ಈಗ ಆ ಪ್ರದೇಶದಿಂದ ಪ್ರತಿವರ್ಷವೂ ನೀರಾವರಿ ತೆರಿಗೆಯ ರೂಪದಿಂದ 14 ಲಕ್ಷ ರೂಪಾಯಿಗಳು
ವಸೂಲಾಗುತ್ತದೆ ಎಂದು ಲೆಕ್ಕ ಪತ್ರದಲ್ಲಿ ಕಂಡುಬರುತ್ತದೆ. ಅಲ್ಲಿ ಪ್ರತಿವರ್ಷವೂ 14 ಲಕ್ಷ
ರೂಪಾಯಿಗಳು ಬರುತ್ತಿರುವಾಗ ಆ ಪ್ರದೇಶದಲ್ಲಿ ನೀರಾವರಿ ಮುಂತಾದ ಅಭಿವೃದ್ಧಿ ಕಾರ್ಯಗಳ
ನ್ನೇನಾದರೂ ಮಾಡಿದ್ದಾರೆಯೆ ಎಂದು ನೋಡುವುದಾದರೆ ಅಲ್ಲಿ ಏನೇನು ಅಭಿವೃದ್ಧಿ ಕಾರ್ಯವನ್ನು
ಮಾಡಿಲ್ಲ. ಆ ಕೆನಾಲಿನ ಸಲುವಾಗಿ working expenses 47,000 ಸಾವಿರ ರೂಪಾಯಿಗಳು
ಮಾತ್ರ. ಹೀಗಿರುವಾಗ ಅಲ್ಲಿನ ಜನಗಳಿಂದ ಇಷ್ಟೊಂದು ಭಾರವಾದ ನೀರಾವರಿ ತೆರಿಗೆಯನ್ನು
ಏತಕ್ಕೆ ತಗೆದುಕೊಳ್ಳಬೇಕು?

ಧೂಪದಾಳ ಕಟ್ಟೆಯಲ್ಲಿ ನೀರನ್ನು ಉಪಯೋಗಿಸು
ಒಟ್ಟು ಗೋಕಾಕ್ ಚಾನಲ್‌ನಲ್ಲಿ ಮತ್ತು ಗೋಕಾಕ್ ಮಿಲ್ಲಿನವರು.
ವವರು ಇಬ್ಬರು ಮಾತ್ರ. ಅವರು ಯಾರೆಂದರೆ ರೈತರು ಮತ್ತು ಗೋಕಾಕ್
ಗೋಕಾಕ್ ಚಾನಲ್‌ನಲ್ಲಿ ರೈತರು 115 ಕ್ಯೂಸೆಕ್ಸ್ ನೀರನ್ನು ಉಪಯೋಗಿಸುತ್ತಿದ್ದಾರೆ. ರೈತರಿಗೆ ಒಂದು ವರ್ಷದಲ್ಲಿ
ಮಿಲ್ಲಿನವರು 68 ಕ್ಯೂಸೆಕ್ಸ್ ನೀರನ್ನು ಉಪಯೋಗಿಸುತ್ತಿದ್ದಾರೆ. ಒದಗಿಸುತ್ತಿದ್ದಾರೆ ಎನ್ನು
8 ತಿಂಗಳು ಮಾತ್ರ ನೀರನ್ನು ಕೊಟ್ಟು ಮಿಲ್ಲಿಗೆ 12 ತಿಂಗಳೂ ನೀರನ್ನು ಕೇವಲ 14,313 ರೂಪಾಯಿ
ವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹೀಗಿದ್ದಾಗ್ಯೂ ಮಿಲ್ಲಿನಿಂದ ಮಿಲ್ಲಿನವರು ಒಂದು
ಪ್ರತಿಫಲ ಬರುತ್ತದೆ. ನೀರಾವರಿ ತೆರಿಗೆಯ ಪ್ರಮಾಣವನ್ನು ನೋಡಿದರೆ 1962ನೇ ಇಸವಿ
ರೂಪಾಯನ್ನು ಕೊಟ್ಟರೆ ರೈತ 70 ರೂಪಾಯಿಗಳನ್ನು ಕೊಡಬೇಕಾಗುವುದು. ತರುತ್ತೇ
ಯಿಂದ ನಾವು ಜನತೆಗೆ ಹೇಳುತ್ತಾ ಬಂದಿದ್ದೇವೆ. water rateನಲ್ಲಿ ಏಕರೂಪತೆಯನ್ನು ಅವರಿಗೆ ನಾವು ಏನು
ವೆಂದು, ಸ್ವಾಮಿ ಜನಗಳು ಬರಿ ಆಶ್ವಾಸನೆಗಳ ಮೇಲೆ ಬದುಕುವುದಿಲ್ಲ. ಆದ್ದರಿಂದ ಇದನ್ನು ಲಕ್ಷ
ಭರವಸೆಯನ್ನ ಕೊಡುತ್ತೇವೆಯೋ ಅದನ್ನು ಕಾರ್ಯರೂಪಕ್ಕೆ ತರಬೇಕು. ಎಂದು ನಾನು
ದಲ್ಲಿಟ್ಟುಕೊಂಡು ಮೊದಲು ಅಲ್ಲಿ ಆಗತಕ್ಕಂಥ ಅನ್ಯಾಯವನ್ನು ದೂರಮಾಡಬೇಕು,
ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಒಂದು ಮಾತನ್ನು ನಾವು ಹೇಳುವುದಾದರೆ ನಮ್ಮ ಭಾಗದಲ್ಲಿ ಯಾವಾಗಲೂ 20 ಇಂಚಿ
ಗಿಂತಲೂ ಕಡಿಮೆ ಮಳೆ ಬರುತ್ತದೆ ಆದ್ದರಿಂದ ಅಲ್ಲಿ ಯಾವಾಗಲೂ ಬರಗಾಲವಿರುತ್ತದೆ ಎನುವುದನ್ನು
ಕೆಲವೊಂದು ಭಾಷಣದಲ್ಲಿ ಎತ್ತಿ ತೋರಿಸಿದ್ದಾರೆ. ಕೆಲವರು ಬಿಜಾಪುರ ಮಾತ್ರ ಬರಗಾಲ ಪೀಡಿತ
ಪ್ರದೇಶ ಎಂದು ಹೇಳಿ ಉಳಿದ ಭಾಗಗಳನ್ನು ಮರೆತುಬಿಡುತ್ತಾರೆ. ಇತರ ಭಾಗಗಳೂ ಕೂಡ ಅಷ್ಟೇ
ಭಯಾನಕವಾಗಿವೆ. ನಮ್ಮಲ್ಲಿಯೂ ಕೂಡ ಬರಗಾಲ ಇದೆ ಎನ್ನುವುದನ್ನು ನೆನಪಿನಲ್ಲಿ ಇಡಬೇಕು.
ಪುರಾಣಕಾಲದಲ್ಲಿ ಒಮ್ಮೆ ನಮ್ಮ ಭಾಗದ ಪ್ರತಿನಿಧಿಗಳು ಎಂದರೆ ಬೆಳಗಾಂ ಜಿಲ್ಲೆಯ, ರಾಮ
ದುರ್ಗ, ಗೋಕಾಕ್, ಅಥಣಿಯ ಪ್ರತಿನಿಧಿಗಳು ಹಿಂದೆ ಒಂದು ಸಾರಿ ಬ್ರಹ್ಮ, ವಿಷ್ಣು ಮತ್ತು
ಮಹೇಶ್ವರರ ಕಡೆಗೆ ಬರಗಾಲ ಪರಿಹಾರಕ್ಕಾಗಿ ಚರ್ಚಿಸುವುದಕ್ಕಾಗಿ ಹೋದಾಗ ಅಲ್ಲಿ ದೂರ್ವಾಸ
ಮುನಿಗಳು ಇದ್ದರು. ಅವರನ್ನು ವಂದಿಸದೆ ನಮ್ಮ ಪ್ರತಿನಿಧಿಗಳು ಮುಂದೆ ಹೋದಾಗ ಅಲ್ಲಿ
ಆಗ ಕಡು ಕೋಪಿಗಳಾದ ದೂರ್ವಾಸ ಮುನಿಗಳು ನಿಮ್ಮ ಭಾಗದಲ್ಲಿ ನಿಮಗೆ ನಿರಂತರ ಬರಗಾಲ
ಇರಲಿ ಅಂತ ಶಾಪವನ್ನು ಕೊಟ್ಟರು. ಈ ಪ್ರತಿನಿಧಿಗಳು ದೂರ್ವಾಸ ಮುನಿಗಳನ್ನು ಶಾಪವಿಮೋ
ಚನೆಗಾಗಿ ಬೇಡಿಕೊಂಡಾಗ್ಗೆ ಅವರು ಭಾರತ ದೇಶವು 1962ನೇ ಇಸವಿಯಲ್ಲಿ ಮೂರನೇ ಪಂಚ
ವಾರ್ಷಿಕ ಯೋಜನೆಯಲ್ಲಿ ಕಾಲಿಟ್ಟಾಗ ಶ್ರೀಮಾನ್ ನಿಜಲಿಂಗಪ್ಪನವರ ನಾಯಕತ್ವದಲ್ಲಿ ಮತ್ತು
ಶ್ರೀಮಾನ್ ಆಲೂರು ಹನುಮಂತಪ್ಪನವರು ಮೈನರ್ ಇರಿಗೇಷನ್ ಶಾಖೆಯ ಮಂತ್ರಿಗಳಾಗಿ
ಅವರು ಅದನ್ನು ನೋಡಿಕೊಳ್ಳುವಾಗ ನಿಮ್ಮ ಬರಗಾಲ ಪರಿಹಾರವಾಗುತ್ತದೆ ಅಂತಾ ಹೇಳಿದ್ದಾರೆ.
ಆದ್ದರಿಂದ ಈಗ ತಾವು ಆ ದೂರ್ವಾಸ ಮುನಿಗಳ ವಾಣಿಯನ್ನು ಸುಳ್ಳುಮಾಡಬೇಡಿ. ಮೈನರ್
ಇರಿಗೇಷನ್‌ಗೋಸ್ಕರ ಇಟ್ಟಿರುವಂಥ ಹಣವನ್ನು ಖರ್ಚುಮಾಡಿ ನಮ್ಮ ಭಾಗದಲ್ಲಿ ನೀರಾವರಿಯ
ಸೌಲಭ್ಯವನ್ನು ಒದಗಿಸಿಕೊಡಬೇಕು.

ಆಲೂರು ಹನುಮಂತಪ್ಪ.— ಬೆಳಗಾಂ ಜಿಲ್ಲೆಗೆ 84 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ
ಕೆಲಸಗಳನ್ನು ಮುಂಜೂರು ಮಾಡಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—20 ಇಂಚಿಗಿಂತ ಕಡಿಮೆ ಮಳೆ ಬೀಳತಕ್ಕ ಎಲ್ಲಾ ಪ್ರದೇಶಗಳಿಗೂ ಸರ್ಕಾರದವರು ಗಮನವನ್ನು ಕೊಡಬೇಕು. ನಮ್ಮ ರಾಜ್ಯದಲ್ಲಿ ನನ್ನ ಭಾಗದ ಆಹಾರದ ಪರಿಸ್ಥಿತಿಯನ್ನು ನೋಡಿದರೆ ರಾಜ್ಯದಲ್ಲಿರುವ ಅಭಿವೃದ್ಧಿ ಕಾರ್ಯ ನೋಡಿ ನಮ್ಮ ಭಾಗದಲ್ಲೂ ಅದೇ ರೀತಿಯಲ್ಲಿ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕೆಂಬ ಹುರುಪು ಮತ್ತು ಹುಮ್ಮಸ್ಸು ನಮಗೆ ಇದೆ. ಆದರೆ ನಮ್ಮ ಭಾಗದಲ್ಲಿ ಅಂಥಾ ಒಂದು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳ ಬೇಕು ಎನ್ನುವ ವಿಷಯದಲ್ಲಿ ನಮ್ಮ ಬುದ್ಧಿಶಕ್ತಿ ಎಲ್ಲಾ ಮರೆತುಹೋಗಿ ನಮಗೆ ಅದರ ಕಡೆಗೆ ಲಕ್ಷ್ಯ ಹೋಗದಂತಾಗಿದೆ. ಕಾರಣ ನಮ್ಮ ಹೊಟ್ಟೆ ಬರಿದೋ ಬರಿದು. ಆದ್ದರಿಂದ ದಯವಿಟ್ಟು ನಮ್ಮ ಭಾಗದಲ್ಲಿ ಮೈನರ್ ಇರಿಗೇಷನ್ ಸಲುವಾಗಿ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವೆಲ್ ಇರಿಗೇಷನ್‌ಗೋಸ್ಕರ ಸರ್ಕಾರದವರು ರೈತರಿಗೆ ಹಣವನ್ನೇನೋ ಕೊಡುತ್ತಿ ದ್ದಾರೆ. ಅದರಲ್ಲಿ 500 ರೂಪಾಯಿಗಳನ್ನು ರೈತನಿಗೆ ಸಬ್ಸಿಡಿಯೆಂದು ಕೊಡುತ್ತಾರೆ. ಅದು ರೈತನಿಗೆ ಸರಿಯಾಗಿ ಮುಟ್ಟುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ರೈತ ಆ ಹಣವನ್ನು ತೆಗೆದುಕೊಳ್ಳಬೇಕಾದರೆ ಆಫೀಸಿಗೆ ಯಾರಾದರೂ ಒಬ್ಬರು ಮಧ್ಯಸ್ತಗಾರರನ್ನು ಕರೆದು ಕೊಂಡು ಬರಬೇಕಾಗುತ್ತದೆ. ಆ 500 ರೂಪಾಯಿಗಳಲ್ಲಿ ಮಧ್ಯಸ್ತಗಾರರು ತಿಂದು ರೈತನ ಕೈಗೆ ನಿಜವಾಗಿ ಎಷ್ಟು ಹಣ ಸಿಕ್ಕುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡುವುದಾದರೆ, ರೈತನ ಕೈಗೆ ಅಷ್ಟು ಹಣ ತಲುಪುವುದಿಲ್ಲ. ಆದ್ದರಿಂದ ಸರ್ಕಾರದವರು ರೈತನಿಗೆ ಸಬ್ಸಿಡಿಯನ್ನು ಕೊಡಬೇಕೆಂಬ ಮನಸ್ಸಿದ್ದರೆ ಆ ಸಬ್ಸಿಡಿ ರೂಪದಲ್ಲಿ 500 ರೂಪಾಯಿಗಳನ್ನು ಕೊಡುವುದನ್ನು ತಪ್ಪಿಸಿ ಅದನ್ನು ಬಡ್ಡಿ ರೂಪದಲ್ಲಿ ರೈತನಿಗೆ ಕೊಡಬೇಕೆಂದು ನಾನು ಹೇಳುತ್ತೇನೆ. ಎಂದರೆ ಸರ್ಕಾರದವರು ರೈತನಿಗೆ ಸಾಲದ ರೂಪದಲ್ಲಿ ಹಣವನ್ನು ಕೊಡುವಾಗ ಅದನ್ನು ಕಡಿಮೆ ಬಡ್ಡಿ ದರದಲ್ಲಿ ಅವನಿಗೆ ಕೊಟ್ಟರೆ ಒಳ್ಳೆಯದು. ಆದ್ದರಿಂದ ರೈತನಿಗೆ ಅಂಥಾ ಒಂದು ಬಡ್ಡಿ ಸೌಲತ್ತನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ, ಲಿಫ್ಟ್ ಇರಿಗೇಷನ್ನಿಗೆ ಈಗ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಬಿಜಾಪುರ ಲಿಫ್ಟ್ ಇರಿಗೇಷನ್ ವಿಷಯದಲ್ಲಿ ಯಾವ ತೀರ್ಮಾನ ವನ್ನೂ ತೆಗೆದುಕೊಂಡಿಲ್ಲ. ಆ ಕಡೆ ಸರ್ಕಾರದವರು ಗಮನವನ್ನು ಕೊಟ್ಟಿಲ್ಲ. ಆ ಕಡೆ ಗಮನವನ್ನು ಕೊಡಬೇಕು. ಲಿಫ್ಟ್ ಇರಿಗೇಷನ್ನಿಗೆ ಹೆಚ್ಚಿನ ಸ್ಕೋಪನ್ನು ಕೊಡಬೇಕು ಮತ್ತು ನೀರಾವರಿಯ ಸೌಲಭ್ಯವನ್ನು ಒದಗಿಸುವ ಕಡೆ ಸರ್ಕಾರದವರು ತಮ್ಮ ಗಮನವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಧ್ಯಕ್ಷರೇ; ಸಭೆಯ ಮುಂದೆ ಇರುವ ಬೇಡಿಕೆಗಳ ಬಗ್ಗೆ ಮುಖ್ಯವಾಗಿ ಸಾಮಾನ್ಯ ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಆಡಳಿತ ದಿನೇ ದಿನೇ ಅಧೋಗತಿಗೆ ಇಳಿಯುತ್ತಿದೆ. ಹಳ್ಳಿಗಳಲ್ಲಿ ಜನ ಏನು ಹೇಳುತ್ತಿದ್ದಾರೆಂದರೆ ನಮಗೆ ಸ್ವರಾಜ್ಯ ಬೇಕು, ನಮಗೆ ಸ್ವರಾಜ್ಯ ಬಂದ ಮೇಲೆ ನಮ್ಮ ದೇಶದ ಆಡಳಿತ ಸುಧಾರಣೆಯಾಗುತ್ತದೆ, ನಮಗೆ ಬೇಕಾದಂತಹ ಸುಖಸಂಪತ್ತುಗಳು ಸಿಕ್ಕುತ್ತವೆ ಎಂದು ಜನ ಎಷ್ಟೋ ವರ್ಷಗಳಿಂದ ಆಶೆಯನ್ನು ಇಟ್ಟುಕೊಂಡಿದ್ದೆವು, ಆದರೆ ನಮಗೆ ಸ್ವರಾಜ್ಯ ಬಂದ ಮೇಲೆ ನಮ್ಮ ದೇಶದ ಆಡಳಿತವನ್ನು ನೋಡಿದರೆ ಹಿಂದೆ ಇದ್ದ ಬ್ರಿಟಿಷ್‌ನವರ ಸರ್ಕಾರವೇ ಚೆನ್ನಾಗಿತ್ತು ಎಂದು ಜನ ಆಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮತ್ತು ನಮ್ಮ ದೇಶದ ಆಡಳಿತ ನಮಗೆ ಏತಕ್ಕೆ ಸ್ವಾತಂತ್ರ್ಯ ಲಭಿಸಿತೋ ಎನ್ನುವ ಮಟ್ಟಕ್ಕೆ ಜನಗಳನ್ನು ಕೊಂಡೊಯ್ದಿದೆ. ನಮ್ಮ ದೇಶದ ಆಡಳಿತ ಈ ಮಟ್ಟಕ್ಕೆ ಬರಲು ನಾನಾ ಕಾರಣಗಳಿವೆ. ಇದಕ್ಕೆ ಅಧಿಕಾರಿಗಳೇ ಕಾರಣವಲ್ಲ. ದೇಶದಲ್ಲಿ ಇಡೀ ವಾತಾವರಣವೇ ಆಡಳಿತ ಸರಿಯಾಗಿರುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಮೊದಲು ಮಂತ್ರಿಗಳನ್ನು, ದಿವಾನರನ್ನು, ಕೌನ್ಸಿಲರ್ ಇವರನ್ನೇನಾದರೂ ನೋಡಬೇಕಾದರೆ ಒಂದು ತಾಲ್ಲೂಕಿನಲ್ಲಿ ಒಬ್ಬರು ಇಬ್ಬರು ಮಾತ್ರ ಬರುತ್ತಿದ್ದರು. ಇವೊತ್ತು ಏನಾಗಿದೆ ಎಂದರೆ ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ಎಂ.ಎಲ್.ಎ. ಇದ್ದೇ ಇದ್ದಾರೆ ಅವರ ಜೊತೆಗೆ ತಾಲ್ಲೂಕು ಬೋರ್ಡು ಮೆಂಬರುಗಳು, ಮಂಡಲ ಕಾಂಗ್ರೆಸ್ ಸಮಿತಿಯವರು ಹೀಗೆ ನೂರಾರು ಜನ ಮುಖಂಡರುಗಳು ಈ ದಿವಸ ಉದ್ಭವವಾಗಿ ಅವರೆಲ್ಲರೂ ಕೂಡ ಮಂತ್ರಿಗಳನ್ನು ಮತ್ತು ಅಧಿಕಾರಿ ಗಳನ್ನು ನೋಡುವುದಕ್ಕೆ ಬರುತ್ತಾರೆ. ಅವರು ಅಧಿಕಾರಿಗಳ ಮೇಲೆ ಏನುಬೇಕಾದರೂ ಹೇಳ ಬಹುದು. ಅದರಲ್ಲಿಯೂ ಕೂಡ ಮುಖ್ಯವಾಗಿ ಮಂಡಲ ಕಾಂಗ್ರೆಸ್ ಪ್ರೆಸಿಡೆಂಟ್ ಹೇಳಿದರೆ ನಾಲ್ಕು ಜನ ಶಾಸನ ಸಭಾ ಸದಸ್ಯರು ಹೇಳುವುದಕ್ಕಿಂತ ಮುಖ್ಯ. ಅಧಿಕಾರಿಗಳು ನ್ಯಾಯವಾಗಿದ್ದರೂ ಕೂಡ ಅವರು ಹೇಳುವುದನ್ನು ಕೇಳದೆ ಇದ್ದರೆ ಭಾಲ್ಕಿ, ಬಿದರೆ ಅಥವಾ ಗುಲ್ಬರ್ಗಕ್ಕೆ ಮುಳಬಾಗಲು

ಎಂದ ವರ್ಗಾಯಿಸುತ್ತಾರೆ. ಆದುದರಿಂದ ದೇಶದಲ್ಲಿ ಅಧಿಕಾರಿಗಳು ನಿಜವಾಗಿಯೂ ನ್ಯಾಯವಾಗಿ ತಮ್ಮ ಕೆಲಸಕಾರ್ಯಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗಿದೆ. ಅಧಿಕಾರಿಗಳು ಒಳ್ಳೆಯವರು ಎಂದು ಹೆಸರು ತೆಗೆದುಕೊಳ್ಳಬೇಕಾದರೆ ಅವರು ಸರ್ವಜನ ವಿರೋಧಿಗಳು, ರಾಥ ಬಡುಕರು ಮತ್ತು ಮಂತ್ರಿಗಳ ಬಂಧುಗಳು ಇವರಿಗೆಲ್ಲ ತಲೆಬಾಗಿ. ಅವರು ಹೇಳಿದಂತೆ ಕೆಲಸ ಮಾಡಿಕೊಂಡಿರಬೇಕು. ಹೀಗಿದ್ದರೆ ಮಾತ್ರ ಅವರು ಒಳ್ಳೆಯ ಅಧಿಕಾರಿಗಳು ಎಂದು ಹೇಳಿಸಿಕೊಳ್ಳುವುದಕ್ಕೆ ಅವಕಾಶ ವಾಗುತ್ತದೆ. ನಿಷ್ಪಕ್ಷಪಾತದಿಂದ ಕೂಡಿದ್ದು ನ್ಯಾಯವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಉಳಿಗಾಲವಿಲ್ಲ. ಈ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡುವುದಾದರೆ, ಆಡಳಿತವನ್ನು ಸರಿಪಡಿಸುತ್ತೇವೆ ಎನ್ನುವುದಾದರೆ, ಅದಕ್ಕೆ ಬರೀ ಅಧಿಕಾರಿಗಳೇ ಜವಾಬ್ದಾರಿ ಎಂದು ಹೇಳುವುದಕ್ಕಾಗುವುದಿಲ್ಲ, ಅವರೇ ಅದಕ್ಕೆಲ್ಲ ಜವಾಬ್ದಾರರಲ್ಲ. ಈ ಸರ್ಕಾರವನ್ನು ನಡೆಸತಕ್ಕ ಮಂತ್ರಿಗಳು ಮತ್ತು ಸರ್ಕಾರದ ನಾಯಕರಾಗಿರುವ ಮುಖ್ಯ ಮಂತ್ರಿಗಳು ಇವರಿಗೂ ಕೂಡ ತುಂಬ ಜವಾಬ್ದಾರಿ ಇದೆ. ಮುಖ್ಯ ಮಂತ್ರಿಗಳಿಗೆ ಯಾರಾದರೂ ಒಂದು ವಿಷಯವನ್ನು ಹೇಳಿದರೆ, ಈ ಅಧಿಕಾರಿ ಸರಿಯಾಗಿಲ್ಲ ಅಥವಾ ನಮ್ಮ ಮಾತು ಕೇಳುವುದಿಲ್ಲ ಎಂದರೆ ನ್ಯಾಯವಾಗಿರುವ ಅಧಿಕಾರಿಗಳನ್ನು ಸಹ ಆರು ತಿಂಗಳಲ್ಲಿಯೇ ವರ್ಗ ಮಾಡುತ್ತಾರೆ. ಬೆಂಗಳೂರು ಮತ್ತು ಕೆಲವು ಕಡೆ ಮೂರು ನಾಲ್ಕು ವರ್ಷವಾದರೂ ಅಧಿಕಾರಿಗಳು ಅಲ್ಲಿಯೇ ಇರುತ್ತಾರೆ. ಇದರಿಂದ ಅಧಿಕಾರಿಗೂ ಸಹ ನಾವು ಏಕೆ ನ್ಯಾಯವಾಗಿ ನಡೆದುಕೊಳ್ಳಬೇಕು, ಮಂತ್ರಿಗಳು ಫೋನ್ ಮಾಡಲಿ, ಯಾರಾದರೂ ದೊಡ್ಡ ಮನುಷ್ಯರು ಬಂದು ಹೇಳಲಿ ಹಾಗೆಯೇ ನಾವು ರೆವೆನ್ಯೂ ಬಾಬುಗಳಲ್ಲಿ ಜಡ್ಜ್‌ಮೆಂಟನ್ನು ಬರಿಯೋಣ ಹಾಗೆ ಮಾಡಿದರೆ ನಮಗೆ ಉಳಿಗಾಲವಿರುತ್ತದೆ, ಇಲ್ಲದೆ ಹೋದರೆ ಬೀದರಿಗೋ, ಗುಲ್ಬರ್ಗಕ್ಕೋ ವರ್ಗ ಮಾಡುತ್ತಾರೆ ಎನ್ನುವ ಮನೋಭಾವ ಮೂಡಿದೆ.

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಸ್ವಂತ ಅನುಭವದಿಂದ ಹೇಳುತ್ತೀರೋ.........

ಶ್ರೀ ಪಿ. ವೆಂಕಟಗಿರಿಯಪ್ಪ.—ಬೇಕಾದರೆ ನಿಮಗೆ ಉದಾಹರಣೆಗಳನ್ನು ಕೊಡುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಉದಾಹರಣೆಗಳನ್ನು ಕೊಡಿ, ನಿಮಗೆ ಏನಾದರೂ ಅನುಭವ ಇದ್ದರೆ ಅದನ್ನೂ ಹೇಳಿ.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಂದು ಉದಾಹರಣೆಯನ್ನು ಹೇಳುತ್ತೇನೆ. ಬೇಕಾದರೆ ವಿಚಾರಿಸಿಕೊಳ್ಳಿ. ನಮ್ಮ ತಾಲ್ಲೂಕಿನಲ್ಲಿ ಒಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿದ್ದರು. ಬಹಳ ನಿಷ್ಪಕ್ಷಪಾತವಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು.

ಉಪಾಧ್ಯಕ್ಷರು.—ಇಂಡಿವಿಜುಯಲ್ ಕೇಸಸ್ ಹೇಳಬೇಡಿ.

ಶ್ರೀ ಎಸ್. ನಿಜಲಿಂಗಪ್ಪ.—ಏನು ಇದೆಯೋ ಅದನ್ನು ಬರೆದು ಕೊಡಿ.

ಶ್ರೀ ಪಿ. ವೆಂಕಟಗಿರಿಯಪ್ಪ.—ನಾನು ಹಿಂದೆ ಒಂದು ಸಾರಿ ಮುಖ್ಯಮಂತ್ರಿಗಳಿಗೆ ಹೇಳಿದೆ. ನಮ್ಮ ಮುಖ್ಯ ಮಂತ್ರಿಗಳು ಹೇಗೆ ಎಂದರೆ ಒಂದು ಅವಿಭಕ್ತ ಕುಟುಂಬದ ಯಜಮಾನರಿದ್ದ ಹಾಗೆ. ಅವರ ರಾಜ್ಯದಲ್ಲಿ ಇತರ ಮಂತ್ರಿಗಳು ಏನು ಬೇಕಾದರೂ ಮಾಡಬಹುದು. ಇವರೆಲ್ಲ ಅವಿಭಕ್ತ ಕುಟುಂಬದ ಯಜಮಾನರಿಗೆ ಭಕ್ತಿಯನ್ನು ತೋರಿಸುವ ರೀತಿಯಲ್ಲಿ ಇವರನ್ನು ಮುಖ್ಯ ಮಂತ್ರಿಗಳು ಎಂದು ಒಪ್ಪಿಕೊಂಡು ಅವರ ಮುಂದೆ ವಿನಯದಿಂದ ನಡೆದುಕೊಂಡರೆ ಅಷ್ಟೇ ಸಾಕು. ಈ ಮಂತ್ರಿ ಮಂಡಲದಲ್ಲಿರುವ ಮಂತ್ರಿಗಳ ಬಗ್ಗೆ ನಾನು ಬರೆದು ತಿಳಿಸಿದರೆ ಇವರು ನಿಜವಾಗಿ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ? ಅವರು ಕ್ರಮ ತೆಗೆದುಕೊಳ್ಳುವುದಾದರೆ ನಾನು ಬರೆದು ತಿಳಿಸುವುದಕ್ಕೆ ಸಿದ್ಧನಾಗಿದ್ದೇನೆ. ಕೆಲವು ಜನ ಮಂತ್ರಿಗಳು ಯಾವ ಯಾವ ರೀತಿಯಲ್ಲಿ ಹಣ ಸಂಪಾದನೆ ಮಾಡಿದ್ದಾರೆ, ಅದಕ್ಕಾಗಿ ಅವರ ಸಂಬಂಧಿಗಳಿಗೆ ಸೈಟುಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಬೆಂಗಳೂರಿನ ಹತ್ತಿರ ಜಮೀನುಗಳ ಎಲಿಯನೇಷನ್ ಮಾಡಬಾರದು ಎಂದು ಬೇಕಾದಷ್ಟು ಕಾನೂನುಗಳನ್ನು ಮಾಡಿದ್ದರೂ ಅವರು ಜಮೀನುಗಳನ್ನು ತಮ್ಮ ಸಂಬಂಧೀಕರ ಹೆಸರಿಗೆ ಮಾಡಿ ಅದರಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡಿರುವ ನಿದರ್ಶನಗಳನ್ನು ಕೊಡಬಹುದು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಹಾಯ ಮಾಡದೆ ಇದ್ದರೆ ಅವರಿಗೆ ಉಳಿಗಾಲವಿಲ್ಲ. ಇಂಥ ಪರಿಸ್ಥಿತಿ ಮಂತ್ರಿ ಮಂಡಲದಲ್ಲಿದೆ ಎಂದು ನಾನು ಅವರ ಗಮನಕ್ಕೆ ತರುತ್ತೇನೆ. ಅವರು ಹೇಳಿದ್ದಾರಲ್ಲ ಬರೆದು ತಿಳಿಸಿ ಎಂದು. ಅದೇ ಪ್ರಕಾರವಾಗಿ ನಾನು ಕೆಲವು ವಿಷಯಗಳನ್ನು ಬರೆದು ತಿಳಿಸುತ್ತೇನೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನೋಡಬೇಕು ಎಂದು ಇದ್ದೇನೆ.

ಮಂತ್ರಿಗಳಲ್ಲಿ ಅಧಿಕಾರಿಗಳಿಗೆ ಬೇಕಾದ ಸಹಾಯ ಮಾಡುವ ಮನೋವೃತ್ತಿ ಇದೆ. ಒಕ್ಕಲಿಗ ಮಂತ್ರಿಗಳು ಒಕ್ಕಲಿಗ ಅಧಿಕಾರಿಗಳ ಸಂಬಂಧದಲ್ಲಿ ಏನೋ ಹೋಗಲಿ ಬಿಡಿ, ನಮ್ಮವರು ಒಕ್ಕಲಿಗರು ಎಂದು ಹೇಳುತ್ತಾರೆ, ಲಿಂಗಾಯಿತ ಮಂತ್ರಿಗಳು ಲಿಂಗಾಯಿತ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಾರೆ. ಮುಸಲ್ಮಾನ ಮಂತ್ರಿಗಳು ಮುಸಲ್ಮಾನ ಅಧಿಕಾರಿಗಳ ರಕ್ಷಣೆ ಮಾಡುತ್ತಾರೆ ಹೀಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ಅಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ಕೂಡ ನೇರವಾದ ಸಂಬಂಧವಿದ್ದು ಅವರು ತಮ್ಮ ಸ್ವಂತ
ಕೆಲಸಗಳನ್ನು ಮಾಡಲು ಈ ಅಧಿಕಾರಿಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಒಂದು ಉದಾಹರಣೆ
ಹೇಳಬೇಕಾದರೆ ಇತ್ತೀಚೆಗೆ ರಾಜ್ಯಸಭೆಗೂ ಮತ್ತು ವಿಧಾನ ಪರಿಷತ್ತಿಗೂ ಚುನಾವಣೆ ನಡೆ
ಯಿತು. ಅದರಲ್ಲಿ ಕೆಲವು ಜನ ಇಲಾಖೆಯ ಮುಖ್ಯಾಧಿಕಾರಿಗಳು ಕೂಡ ಭಾಗವಹಿಸಿ ರಾಜಕೀಯ
ವನ್ನು ನಡೆಸಿದರು ; ಅದರ ಬಗ್ಗೆ ಕೂಡ ಮುಖ್ಯ ಮಂತ್ರಿಗಳಿಗೆ ಬೇಕಾದರೆ ಬರೆದು ತಿಳಿಸುತ್ತೇನೆ. ಈ
ಚುನಾವಣೆಗಳಲ್ಲಿ ಅಧಿಕಾರಿಗಳು ಮತ್ತು ಮಂತ್ರಿಗಳು ಏನೇನು ಕ್ರಮವಾದ ನಡೆಸಿದರು ಎಂಬುದ
ನ್ನೆಲ್ಲ ನೋಡಿದೆವು. ಇದನ್ನು ನೋಡಿದ ಮೇಲೆ ಈ ಭ್ರಷ್ಟಾಚಾರ ಎನ್ನುವುದು ಕೇವಲ ಕಾಂಗ್ರೆಸ್
ಪಕ್ಷಕ್ಕೆ ಮೀಸಲಾಗಿರುವುದಲ್ಲ, ಈ ಭಾಗದಲ್ಲಿ ಕೂಡ ಭ್ರಷ್ಟಾಚಾರ ಅದೇ ಮಟ್ಟದಲ್ಲಿ ಬೆಳೆಯುತ್ತಿದೆ
ಎಂದು ನಾನಾದರೂ ಕೆಲವು ದಿನಗಳಿಂದ ನಡೆದ ಘಟನೆಗಳನ್ನು ನೋಡಿ ತೀರ್ಮಾನಕ್ಕೆ ಬಂದಿದ್ದೇನೆ.

ಜನ ದೇಶದಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ ಅಧಿಕಾರಿಗಳು ಮತ್ತು ಶಾಸನಸಭಾ
ಸದಸ್ಯರು ಎಲ್ಲ ಒಂದು ಕಂಪನಿಯನ್ನು ಮಾಡಿಕೊಂಡು ಬೇಕಾದ ಕೆಲಸಗಳನ್ನು ಮಾಡಿಕೊಂಡು
ಸಾಮಾನ್ಯ ಜನಗಳನ್ನು ಬಹಳ ಹೀನವಾಗಿ ನೋಡುತ್ತಾರೆ. ತಾಲ್ಲೂಕು ಆಫೀಸು ಅಥವಾ ಯಾವುದೇ
ಆಫೀಸನ್ನು ತೆಗೆದುಕೊಂಡರೂ ಮೊನ್ನೆ ಕೆಲವು ಸ್ನೇಹಿತರು ತಿಳಿಸಿದಂತೆ ಏನಾದರೂ ಕೆಲಸವಾಗ
ಬೇಕಾದರೆ ಅದಕ್ಕೆ ಅಸೆಂಬ್ಲಿ ಮೆಂಬರು ಹೋಗಬೇಕು ಅಥವಾ ಯಾರಾದರೂ ಮುಖಂಡರು ಹೋಗಿ
ಹೇಳಬೇಕು. ಒಬ್ಬ ಸಾಮಾನ್ಯ ಬಡ ಪ್ರಜೆ ಯಾವುದೇ ಅಧಿಕಾರಿಯ ಹತ್ತಿರ ಹೋಗಿ ಏನು ಕೆಲಸ
ವನ್ನೂ ಮಾಡಿಕೊಳ್ಳುವ ಪರಿಸ್ಥಿತಿ ಇಲ್ಲ. ನಿಜವಾದ ವಿಚಾರಗಳನ್ನು ನಮ್ಮ ಮುಖ್ಯ ಮಂತ್ರಿಗಳು
ತಿಳಿದುಕೊಳ್ಳಬೇಕು ಎಂದರೆ ಅವರು ಯಾವುದಾದರೂ ಒಂದು ಊರಿಗೆ ಹೋಗಿ ಸಾಮಾನ್ಯ ಜನರು
ಮಾತನಾಡಿಕೊಳ್ಳಲು ಕುಳಿತುಕೊಂಡಿರುವ ಜಾಗಕ್ಕೆ ವೇಷ ಮರೆಸಿಕೊಂಡು ಹೋಗಿ ಕೇಳಿದರೆ
ಶಾಸನ ಸಭಾ ಸದಸ್ಯರ ಮಂತ್ರಿಗಳ ಮತ್ತು ಅಧಿಕಾರಿಗಳ ಬಗ್ಗೆ ಏನು ಮಾತನಾಡುತ್ತಾರೆ ಎನ್ನು
ವುದು ಗೊತ್ತಾಗುತ್ತದೆ.

ಕೆಲವು ಇಲಾಖಾ ಮುಖ್ಯಾಧಿಕಾರಿಗಳು ಪಾಳೆಯಗಾರರಾಗಿದ್ದಾರೆ. ಮಂತ್ರಿಗಳು ಹೇಳಿ
ದ್ದನ್ನು ಸಹ ಮಾಡುವುದಕ್ಕೆ ತಯಾರಿಲ್ಲದೆ ಇರುವಂಥ ಅಧಿಕಾರಿಗಳೂ ಇದ್ದಾರೆ. ಇಲಾಖಾ
ಮುಖ್ಯಾಧಿಕಾರಿಗಳ ಹುದ್ದೆಗಳು ಸೆಲೆಕ್ಟೆಡ್ ಪೋಸ್ಟ್ಸ್ ಎಂದು ನಾನು ತಿಳಿದುಕೊಂಡಿದ್ದೇನೆ. ಚೀಫ್
ಇಂಜಿನಿಯರನ್ನು ನೇಮಕ ಮಾಡಬೇಕಾದರೆ, ಯಾವುದಾದರೂ ಇಲಾಖೆಯ ಮುಖ್ಯಾಧಿಕಾರಿಗಳನ್ನು
ನೇಮಕ ಮಾಡಬೇಕಾದರೆ ಸೀನಿಯಾರಿಟಿ ಪ್ರಶ್ನೆಯನ್ನು ತೆಗೆದುಕೊಳ್ಳಬೇಡಿ. ನಿಜವಾಗಿ ಒಬ್ಬ
ಮನುಷ್ಯನನ್ನು ಒಂದು ಇಲಾಖೆಯ ಮುಖ್ಯಾಧಿಕಾರಿಯಾಗಿ ನೇಮಿಸಬೇಕಾದರೆ ಎಷ್ಟು ದಿವಸದಿಂದ
ಕೆಲಸ ಮಾಡಿದ್ದಾನೆ, ಅವನ ಚರಿತ್ರೆ ಏನು, ಅವನು ಎಂಥ ಕಡೆಯಿಂದ ಬಂದಂಥ ಮನುಷ್ಯ ಕೆಲಸಕ್ಕೆ
ಸೇರುವುದಕ್ಕೆ ಮೊದಲು ಅವನಿಗೆ ಎಷ್ಟು ಆಸ್ತಿ ಇತ್ತು, ಇವತ್ತು ಎಷ್ಟು ಇದೆ ಎಂಬುದನ್ನು ತಿಳಿದು
ಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಒಬ್ಬ ಚೀಫ್ ಇಂಜಿನಿಯರು 60-70 ಲಕ್ಷ ರೂಪಾಯಿ ಹಣವನ್ನು
ಮಾಡಿದ್ದಾರೆ. ಅವರಿಗೆ ಈ ಹಣ ಎಲ್ಲಿಂದ ಬಂತು ! ಯಾವರೀತಿ ಅವರು ಇಷ್ಟು ಹಣವನ್ನು ಮಾಡು
ವುದಕ್ಕೆ ಸಾಧ್ಯವಾಯಿತು ! ಇದೆಲ್ಲವನ್ನೂ ವಿಚಾರಣೆ ಮಾಡುವುದಕ್ಕೆ ತಯಾರಿಲ್ಲದೆ ಇದ್ದರೆ ಅದನ್ನು
ಬೇರೆಯವರೂ ಕೂಡ ಕಲಿಯುತ್ತಾರೆ. ಇ ಲಾ ಖೆ ಯ ಮುಖ್ಯಾಧಿಕಾರಿಗಳನ್ನು ನೇಮಕಮಾಡು
ವಾಗ ಶ್ರೀ ಮುಕ್ಕಣ್ಣಪ್ಪನವರು ಹೇಳಿದರು, ಶ್ರೀ ಹುಚ್ಚಮಾಸ್ತಿಗೌಡರು ಹೇಳಿದರು, ಅಥವಾ
ಇನ್ನಾರೊ ಒಬ್ಬರು ಹೇಳಿದರು ಎಂದು ನೇಮಕ ಮಾಡಬೇಡಿ. ಯಾರ ಮಾತನ್ನೂ ಕೇಳಬೇಡಿ. ಯಾರು
ಸಚ್ಚಾರಿತ್ರ್ಯ ಉಳ್ಳವರಾಗಿರುತ್ತಾರೆ ಅಂಥವನ್ನು ಮಾತ್ರ ನೇಮಿಸಬೇಕು, ಇದು ಬಹಳ ಮುಖ್ಯ.
ಇಲಾಖೆಯ ಮುಖ್ಯಾಧಿಕಾರಿಗಳು ಸರಿಯಾಗಿ ಇಲ್ಲದೆ ನೀತಿಭ್ರಷ್ಟರಾಗಿದ್ದರೆ ಅವರೇ ಇಲಾಖೆಯಲ್ಲಿನ
ಭ್ರಷ್ಟಾಚಾರಕ್ಕೆ ಕಾರಣರಾಗುತ್ತಾರೆ. ಈ ದೃಷ್ಟಿಯಿಂದ ನಮ್ಮ ಮಂತ್ರಿಮಂಡಲದಲ್ಲಿ ಏನೇನು
ನಡೆಯುತ್ತದೆ, ಯಾವ ಮಂತ್ರಿಗಳು ದೇಶಕ್ಕೋಸ್ಕರ ಸಮಾಜವಾದಿ ರಾಷ್ಟ್ರ ನಿರ್ಮಾಣ ಮಾಡತಕ್ಕ
ಗುರಿಯನ್ನು ಮುಂದಿಟ್ಟುಕೊಂಡು ಕೆಲಸಮಾಡುವುದಿಲ್ಲ. ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ,
ಭ್ರಷ್ಟಾಚಾರವನ್ನು ಹರಡುತ್ತಿದ್ದಾರೆ. ಭ್ರಷ್ಟಾಚಾರ ಇನ್ನೂ ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶ
ವನ್ನು ಯಾರು ಕೊಡುತ್ತಾರೆ ಅಂಥ ಅಕಾರಿಗಳ ಬಗ್ಗೆ ಮಂತ್ರಿಗಳ ಬಗ್ಗೆ ಖಂಡತವಾಗಿಯೂ ಕೂಡ
ದಿಟ್ಟತನದಿಂದ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಾಗೆ ಕ್ರಮ ತೆಗೆದುಕೊಳ್ಳದೆ
ಇದ್ದರೆ ಭ್ರಷ್ಟಾಚಾರ ಕಡಮೆಯಾಗುವುದಿಲ್ಲ, ಆಡಳಿತ ಸರಿಯಾಗಿ ನಡೆಯುವುದಿಲ್ಲ, ಸಾಮಾನ್ಯ ಜನರ
ಕಷ್ಟ ನೀಗಿ ರಾಜ್ಯದಲ್ಲಿ ಸರ್ವತೋಮುಖ ಏಳಿಗೆಯಾಗುವುದಿಲ್ಲ. ಆದುದರಿಂದ ನಾನು ಮುಖ್ಯ
ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ:- ಕೆಲವು ವಿಷಯಗಳನ್ನು ಬರೆದು ತಿಳಿಸಿದ್ದೇವೆ ಎಂದು

ಹೇಳಿದ್ದಾರೆ, ಇನ್ನು ಕೆಲವು ದಿವಸಗಳಲ್ಲಿ ನಾನು ಬರೆದು ತಿಳಿಸುತ್ತೇನೆ, ಅದರ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳದಿದ್ದರೆ ಯಾವ ಕಾರಣದಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂಬುದನ್ನು ಹೇಳಬೇಕೆಂದು ಪ್ರಾರ್ಥಿಸುತ್ತೇನೆ.

10-30 A.M.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಮ್ಮ ಮುಂದಿರತಕ್ಕ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಬೇಡಿಕೆಗೆ ನನ್ನ ಬೆಂಬಲವನ್ನು ಕೊಡುತ್ತಾ ಈ ಬಗ್ಗೆ ಕೆಲವು ವಿಷಯಗಳನ್ನು ಹೇಳಲಪೇಕ್ಷಿಸುತ್ತೇನೆ. ಮೊದಲು ನಮ್ಮ ಮೈಸೂರು ದೇಶ ಒಂಬತ್ತು ಜಿಲ್ಲೆಗಳಿಂದ ಕೂಡಿ ಚಿಕ್ಕದಾಗಿದ್ದು ಆಡಳಿತ ನಡೆಯುತ್ತಿತ್ತು. ಈಗ ಇದು ವಿಶಾಲವಾದ ಆಡಳಿತ ವ್ಯವಸ್ಥೆಯಿಂದ ಕೂಡಿರುವ ಒಂದು ದೊಡ್ಡ ಪ್ರಾಂತವಾಗಿದೆ. ಈ ಪ್ರಾಂತದ ಅಭಿವೃದ್ಧಿಯಾಗಬೇಕಾದರೆ, ಈ ದೇಶದ ಜನತೆ ಏನನ್ನು ನಿರೀಕ್ಷೆಮಾಡಿ ಈ ಮೈಸೂರು ವಿಶಾಲವಾಯಿತೋ ಆ ಉದ್ದೇಶ ಸಫಲವಾಗಬೇಕಾದರೆ ಈ ಸಾಮಾನ್ಯ ಆಡಳಿತ ಬಹಳ ಪ್ರಮುಖ್ಯವಾದುದು. ದೇಶದಲ್ಲಿ ಉತ್ತಮ ಆಡಳಿತವನ್ನು ನಿರೀಕ್ಷೆ ಮಾಡಬೇಕಾದರೆ ಉತ್ತಮ ಅಧಿಕಾರಿಗಳು ಮತ್ತು ಆ ಅಧಿಕಾರಗಳಿಗೆ ಬರತಕ್ಕವರ ಅನುಕೂಲಗಳು ಇವನ್ನು ನಾವು ನ್ಯಾಯವಾದ ರೀತಿಯಲ್ಲಿ ವಿಮರ್ಶೆ ಮಾಡುವುದು ಬಹಳ ಅಗತ್ಯ. ಈ ವಿಷಯವಾಗಿ ಇದುವರೆಗೆ ಅನೇಕ ಮಾನ್ಯ ಸದಸ್ಯರು ಪ್ರಾಸ್ತಾಪ ಮಾಡಿದ್ದಾರೆ. ಅಧಿಕಾರಿಗಳ ಸೀನಿಯಾರಿಟಿ ಪ್ರಶ್ನೆ ಭೂತಾಕಾರವಾಗಿದೆ. ಶ್ರೀಮಾನ್ ದೊಡ್ಡಮೇಟಿಯವರು ಈ ವಿಷಯವನ್ನು ಅಸೆಂಬ್ಲಿ ಸದಸ್ಯರ ಮುಂದೆ ಹೇಳಬಾರದು, ಅವರು ಕೇಳಲೂ ಬಾರದು ಎಂದು ಹೇಳಿದರು. ಉತ್ತಮ ಆಡಳಿತ ನಮಗೆ ಬೇಡವೆಂದು ನಮಗನಿಸಿದರೆ ಆಗ ಇದು ಬೇಡ ಎನ್ನಬಹುದು. ಎ.ಜಿ.ಆರ್. ಅವರ ಎಕಾನಮಿ ಮತ್ತು ರಿಸೋರ್ಸಸ್ ಕಮಿಟಿಯವರು ಒಂದು ವಿಷಯ ಹೇಳಿದ್ದಾರೆ. ಒಬ್ಬ ಅಧಿಕಾರಿಯನ್ನು ಜಿಲ್ಲಾಧಿಕಾರಿಯಾಗಿ ನೇಮಕ ಮಾಡಬೇಕಾದರೆ, ಸುಮಾರು ಹತ್ತು ವರ್ಷಗಳಾದರೂ ಕೆಲಸ ಮಾಡಿ, ಉತ್ತಮ ಆಡಳಿತಾನುಭವ ಬಂದಿರುವವರಿಗೆ ಆ ಸ್ಥಾನವನ್ನು ಕೊಟ್ಟರೆ ಆಗ ಉತ್ತಮವಾದ ಆಡಳಿತವನ್ನು ಕಾಣಬಹುದು. ಒಂದು ಜಡ್ಜ್‌ಮೆಂಟನ್ನು ಬರೆಯುವುದಕ್ಕೇ ಬಾರದೇಯಿರುವವರಿಗೆ ಕೇಸನ್ನು ವಿಚಾರಣೆ ಮಾಡಬೇಕೆಂದು ವಹಿಸಿದರೆ ಏನಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. ಹಿಂದೆ ಡೆಪ್ಯುಟಿ ಕಮೀಷನರ ಹುದ್ದೆಗೆ ಬರಬೇಕಾಗಿದ್ದರೆ ಪೋಲೀಸ್ ಇಲಾಖೆ, ಅಕೌಂಟ್ಸ್ ಇಲಾಖೆ, ರೆವಿನ್ಯೂ ಇಲಾಖೆ ಮುಂತಾದ ಎಲ್ಲ ಇಲಾಖೆಗಳ ಕೆಲಸಗಳಲ್ಲಿಯೂ ಶಿಕ್ಷಣ ಹಾಗೂ ಅನುಭವ ಹೊಂದಿರಬೇಕಾಗಿತ್ತು, ಅಂತಹ ಉತ್ತಮ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಸೇವೆ ಮಾಡಿ ಇದನ್ನು ಮಾದರಿ ಮೈಸೂರಾಗಿ ಮಾಡಿದರು. ಆದರೆ ಅದಕ್ಕೆ ಪ್ರತಿಯಾಗಿ ಯಾರು ಬೇಕೋ ಅವರನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಕ ಮಾಡಿದರೆ ಒಳ್ಳೆಯ ಆಡಳಿತ ಬರುವುದಕ್ಕೆ ಸಾಧ್ಯವಿಲ್ಲ. ಉತ್ತಮ ಅಧಿಕಾರಿಗಳಿಂದ ಉತ್ತಮ ಕೆಲಸವನ್ನು ನಿರೀಕ್ಷಿಸಬಹುದು. ಈ ದೃಷ್ಟಿಯಿಂದ ಅಧಿಕಾರಿಗಳಲ್ಲಿರುವ ಅಲಸ್ಯ ಮನೋಭಾವವನ್ನು ನಿವಾರಿಸಲು, ಕೆಲವರಿಗಾಗಿರುವ ಅನ್ಯಾಯವನ್ನು ಪರಿಹಾರ ಮಾಡುವುದರ ಕಡೆ ಸರಕಾರ ನಿಗಾ ಕೊಡಬೇಕು. ಐದು ಭಾಗಗಳಿಂದ ಬಂದ ಅಧಿಕಾರಿಗಳಿರುವುದರಿಂದ ಆಡಳಿತದಲ್ಲಿ ಇಂತಹ ತೊಂದರೆ ಬರುವುದು ಸ್ವಾಭಾವಿಕ. ಆದರೂ ಇದರ ನಿವಾರಣೆ ತಡವಾಗಲು ಅವಕಾಶ ಕೊಡಬಾರದು. ವಿಶೇಷ ಅನುಭವ ಪಡೆದಿರುವ ಮುಖ್ಯ ಕಾರ್ಯದರ್ಶಿಗಳು ನಮ್ಮ ರಾಜ್ಯಕ್ಕೆ ಬಂದಿದ್ದಾರೆ, ಅವರ ಜೊತೆಗೆ ಇತರ ಅಧಿಕಾರಿಗಳೂ ಕುಳಿತು ಅನ್ಯಾಯವಾಗದಂತೆ ಸೀನಿಯಾರಿಟಿ ಪಟ್ಟಿಯನ್ನು ತೀರ್ಮಾನ ಮಾಡಬೇಕು.

ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಸರಕಾರದವರು ಗೇಣಿದಾರರ ಶಾಸನವನ್ನು ಜಾರಿಗೆ ತಂದಿದ್ದಾರೆ, ಇನಾಮ್ ರದ್ದಿಯಾತಿ ಶಾಸನದಮೇರೆಗೆ ಇನಾಮ್ ರದ್ದು ಮಾಡಿದ್ದಾರೆ. ಆದರೆ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕನ್ನಾಪುರ, ನಾಗಲಾಪುರ, ಕಂಚೇನಹಳ್ಳಿ ಬೂದಿಕೆ ಈ ಗ್ರಾಮಗಳಲ್ಲಿ ಇನಾಮ್ ರದ್ದಿಯಾತಿ ಕೇಸುಗಳು ಇನ್ನೂ ವಿಲೇವಾರಿಯಾಗಿಲ್ಲ. ತತ್ಪರಿಣಾಮವಾಗಿ ಅಲ್ಲಿ ಕೆಲಸ ಮಾಡುತ್ತಿದ್ದ ಜನರು ಬೇರೆ ಕಡೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೂಲಿ ಕೂಡ ಸಿಕ್ಕುವುದಿಲ್ಲ. ಅಲ್ಲಿ ಇನಾಮ್ ರದ್ದು ಮಾಡಿದ್ದರಿಂದ ರೈತರಿಗೆ ತೊಂದರೆಯಾಯಿತು. ಕಾನೂನು ಜಾರಿಗೆ ಬರಲಿಲ್ಲ. ನಮ್ಮ ಮೈಸೂರಿನ ಸೆಕ್ರೆಟೇರಿಯಟ್‌ನಲ್ಲಿ ಮೊದಲಿನಿಂದಲೂ ಉತ್ತಮ ಅಧಿಕಾರಿಗಳು ಕೆಲಸಮಾಡಿದ್ದಾರೆ. ಆಗ ಇಲಾಖೆಗೊಬ್ಬರು ಸೆಕ್ರೆಟರಿ ಇರುತ್ತಿದ್ದರು. ಈಗ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಹೀಗೆ ಬೇಕಾದಷ್ಟು ಅಧಿಕಾರಿಗಳು ನಿರ್ಮಾಣವಾಗಿದ್ದಾರೆ. ಅನೇಕ ಹುದ್ದೆಗಳು ಹೊಸದಾಗಿ ಬಂದಿವೆ. ಆದರೆ ದೇಶದ ಕೆಲಸ ಕಾರ್ಯಗಳು ಜಾಗ್ರತೆ ಆಗುತ್ತಿಲ್ಲ. ಕಾಗದಪತ್ರಗಳು ಬೇಗ ವಿಲೇವಾರಿಯಾಗುತ್ತಿಲ್ಲ. ಇದರ ಕಾರಣವೇನೆಂದು ನೋಡಿ ಇದರ ನಿವಾರಣೆಯ ಕಡೆ ಸರಕಾರ ನಿಗಾ ಕೊಡಬೇಕು. ಪಬ್ಲಿಕ್ ವರ್ಕ್ಸ್

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಇಲಾಖೆಯನ್ನು ತೆಗೆದುಕೊಂಡರೆ, ಪ್ರತಿಯೊಂದು ಬಾಬಿಗೂ ಚೀಫ್ ಇಂಜಿನಿಯರುಗಳಿದ್ದಾರೆ, ಆದರೂ ಕೆಲಸಕಾರ್ಯಗಳು ಚುರುಕಾಗಿ ನಡೆಯುತ್ತಿಲ್ಲ. ಒಂದು ಕೆಲಸಕ್ಕೆ ಅಂದಾಜು 1958 ರಲ್ಲಿ ಮೂರು ಲಕ್ಷಕ್ಕೆ ಮಾಡಿದ್ದುದು 1961 ರಲ್ಲಿ ಹತ್ತು ಲಕ್ಷ ರೂಪಾಯಿ ಆಗಿದೆ. ಹೀಗಾದರೆ ದೇಶದ ಆಯವ್ಯಯದ ತಕ್ಕಡಿ ತಲೆಕೆಳಗಾಗುತ್ತದೆ ಮೂರೂವರೆ ಲಕ್ಷವಿದ್ದುದು ಹತ್ತು ಲಕ್ಷವಾದರೆ ಆಯವ್ಯಯ ಪಟ್ಟಿಯಲ್ಲಿ ಹೇಗೆ ಹಣವನ್ನೊದಗಿಸುವುದು ? ಮಂಜೂರಾಗಿರುವ ಕೆಲಸಗಳು ಜಾಗ್ರತೆ ನಡೆದರೆ ಸರಕಾರದ ಉದ್ದೇಶ ಸಾರ್ಥಕವಾಗುತ್ತದೆ ಮತ್ತು ಜನತೆಯಲ್ಲಿಯೂ ಒಳ್ಳೆಯ ಅಭಿಪ್ರಾಯ ಬರುತ್ತದೆ, ಇಲ್ಲದಿದ್ದರೆ ಆಡಳಿತದಲ್ಲಿ ಏನೋ ನ್ಯೂನತೆ ಇದೆ ಎಂಬ ಮನೋಭಾವ ಅವರಲ್ಲಿ ಬರುತ್ತದೆ. ಆದುದರಿಂದ ಆಡಳಿತಯಂತ್ರ ಸುಗಮವಾಗಿ ನಡೆಯುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತಿದ್ದೇನೆ. ಮೊದಲಿನ ಮೈಸೂರು ದೇಶವಿದ್ದಾಗ ಮಲೆನಾಡು ಹಿಂದುಳಿದಿದೆಯೆಂದು ಅದರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಇಂಗ್ಲಿಷರ ಆಡಳಿತದ ಕಾಲದಲ್ಲಿಯೂ ಮಲೆನಾಡಿನ ಅಭಿವೃದ್ಧಿಗೆ ವಿಶೇಷ ಗ್ರಾಂಟು ಕೊಡುತ್ತಿದ್ದುದಲ್ಲದೆ ಅಲ್ಲಿ ಕೆಲಸಮಾಡುವ ಅಧಿಕಾರಿಗಳಿಗೂ ಮತ್ತು ಅಲ್ಲಿನ ವಿದ್ಯಾರ್ಥಿಗಳಿಗೂ ಹೆಚ್ಚಿನ ಅನುಕೂಲ ಕೊಡುತ್ತಿದ್ದರು. ಆದರೆ ಸ್ವಾತಂತ್ರ್ಯ ಬಂದಮೇಲೆ ಮಲೆನಾಡು ಹಿಂದುಳಿದಿದೆ. 1956ರಲ್ಲಿ ನಡೆಯುತ್ತಿದ್ದ ಕೆಲಸಗಳು ಅರ್ಧಕ್ಕೆ ನಿಂತಿವೆ. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಅವರು ಮುಖ್ಯ ಮಂತ್ರಿಗಳಾಗುವ ಮುನ್ನ ಮಲೆನಾಡಿಗೆ ವಿಶೇಷ ಗಮನಕೊಡುತ್ತಿದ್ದರು. ಈಗ ಅವರ ಹೆಚ್ಚು ಕೆಲಸಗಳ ದೆಸೆಯಿಂದ ಪೂರ್ತಿಯಾಗಿ ಅವನ್ನು ಕೈಬಿಟ್ಟಿದ್ದಾರೆ. ಅಲ್ಲದೆ, ಏಕೆ ವ್ಯತ್ಯಾಸಮಾಡಬೇಕು ಎಂದು ಹೇಳುತ್ತಿದ್ದಾರೆ. ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಮಲೆನಾಡಿನ ಸಂಪತ್ತನ್ನು ಮಲೆನಾಡಿನವರೇ ತಿಂದರೆ ಅಜೀರ್ಣವಾಗುತ್ತದೆ ಎಂದು ಹೇಳಿದರು. ನಮ್ಮ ಉದ್ದೇಶವೇನೂ ಹಾಗಿಲ್ಲ. ಮಲೆನಾಡಿನ ಸಂಪತ್ತನ್ನು ಅಭಿವೃದ್ಧಿ ಮಾಡಿ ದೇಶದ ಜನರಿಗೆಲ್ಲ ಅನುಕೂಲಮಾಡಿ ಎಂದು ಕೇಳುತ್ತಿದ್ದೇವೆ. 1961ರಲ್ಲಿ ಮಲೆನಾಡಿನಲ್ಲಿ ಹರಿಯುವ ಅನೇಕ ಹಳ್ಳಗಳಿಗೆ ಸೇತುವೆಕಟ್ಟುವುದು ಅಗತ್ಯವೆಂದು ಕಂಡುಬಂದು ಒಂದು ಲಕ್ಷದ ಅರವತ್ತೆಂಟು ಸಾವಿರ ರೂಪಾಯಿಗೆ ಅಂದಾಜು ತಯಾರಾಗಿ ಅದು ಎಗ್ಸಿಕ್ಯುಟಿವ್ ಇಂಜಿನಿಯರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಬಂತು 1961 ರಿಂದ ಈ ಹೊತ್ತಿನವರೆಗೂ ಮಂಜೂರಾತಿಯ ಬಗ್ಗೆ ಕಳುಹಿಸದಿರಲು ಕಾರಣವೇನು ? ಹೀಗೆ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡದಿದ್ದರೆ ದೇಶದ ಕೆಲಸ ಹೇಗೆ ನಡೆಯುತ್ತದೆ ಎಂದು ಪ್ರಶ್ನಿಸಬೇಕಾಗಿದೆ. ಇದನ್ನು ಸರಿಪಡಿಸಬೇಕು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರಿನ ಹತ್ತಿರ ನಮ್ಮ ದೇಶಕ್ಕೆ ಅಗತ್ಯವಾದ ಕಬ್ಬಿಣದ ಅದುರು ಸುಮಾರು ಒಂದು ಲಕ್ಷ ಮಿಲಿಯನ್ ಟನ್‌ನಷ್ಟಿದೆ. ಇದು ದೇಶಕ್ಕೆ ಸಂಪತ್ತನ್ನು ಕೊಡುವುದು. ಇದನ್ನು ಅಭಿವೃದ್ಧಿ ಮಾಡಬೇಕಾದರೆ ಏನಾಗಬೇಕೆಂದು ವರದಿಯನ್ನು ತರಿಸಿ ಅಲ್ಲಿ ಒಂದು ಪಿಗ್ ಐರನ್ ಪ್ಲಾಂಟ್ ಹಾಕಬೇಕು. ಅಲ್ಲಿ ಎಂದರೆ, ಜೇನುಸುರಿಗುಡ್ಡ ಮತ್ತು ಸಿದ್ಧರಗವಿಯಲ್ಲಿ ಸಿಕ್ಕುವ ಅದುರಿನಲ್ಲಿ ಶೇಕಡ 67 ರಿಂದ 70ರಷ್ಟು ಕಬ್ಬಿಣದ ಅಂಶವಿದೆಯೆಂದು ತಿಳಿದುಬಂದಿದೆ. ಅಲ್ಲಿ ಒಂದು ಪಿಗ್ ಐರನ್ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಅಲ್ಲಿನ ಜನರಿಗೆ ಅನುಕೂಲವಾಗುವುದಲ್ಲದೆ ದೇಶಕ್ಕೆ ಸಂಪತ್ತನ್ನೂ ಕೊಡುತ್ತದೆ. ಆದುದರಿಂದ ಇದಕ್ಕೆ ಆದಷ್ಟು ಬೇಗ ಗಮನ ಕೊಟ್ಟು ಕಾರ್ಯಗತ ಮಾಡಬೇಕು. ನಾನಾಗಲೇ ಹೇಳಿದಂತೆ ನಮ್ಮಲ್ಲಿ ಅರ್ಧಾಂತಕವಾಗಿ ನಿಂತಿರುವ ಕೆಲಸಗಳನ್ನು ಪೂರ್ತಿಮಾಡಬೇಕೆಂದು ಹೇಳುತ್ತ, ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗಾ).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬೇಡಿಕೆಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಲು ಬಯಸುತ್ತೇನೆ. ದೊಡ್ಡ ನೀರಾವರಿ ವಿಚಾರದಲ್ಲಿ ಹೇಳುವುದಾದರೆ ತುಂಗಭದ್ರಾ ಯೋಜನೆಯಲ್ಲಿ ಅನೇಕ ಗ್ರಾಮಗಳು ಮುಳುಗಿ ಹೋದವು. ಮುಳುಗಿ ಹೋದ ಗ್ರಾಮಗಳಲ್ಲಿ ವಾಸಿಸುವವರು 25 ಸಾವಿರ ಜನ ಇದ್ದಾರೆ. ಅವರಿಗೆ ಏನು ಪರಿಹಾರ ಕೊಡಬೇಕಾಗಿತ್ತೋ ಅದನ್ನು ಸರಕಾರ ಸರಿಯಾಗಿ ಕೊಟ್ಟಿಲ್ಲ. ಇದರಿಂದ ಅನೇಕ ಅನನುಕೂಲತೆ ಉಂಟಾಗಿದೆ. ಸರಕಾರದ ಮುಂದೆ ಅನೇಕ ಸಾರಿ ಈ ಬೇಡಿಕೆಗಳನ್ನು ಇಟ್ಟಿದ್ದೇವೆ. ಅನೇಕ ಶಿಷ್ಟ ಮಂಡಳಗಳು ಬಂದು ಮಂತ್ರಿಗಳಿಗೆ ಅನೇಕ ಮನವಿಗಳನ್ನು ಅರ್ಪಣೆ ಮಾಡಿರುತ್ತಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ ಹೊರತು ಇದು ವರೆಗೆ 15 ವರ್ಷಗಳಾಗಿ ಹೋಗಿದ್ದರೂ ಕೂಡ ಈ ನಿರಾಶ್ರಿತರ ಬಗ್ಗೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಲಕ್ಷ್ಯಕೊಡದೆ ಅಲಕ್ಷ್ಯ ಮಾಡುತ್ತಿದ್ದಾರೆ ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ

ಮುಂದೆ ಹೇಳಬಯಸುತ್ತೇನೆ. ತುಂಗಭದ್ರಾ ನದಿ ಯೋಜನೆಯಿಂದ 8 ಲಕ್ಷ ಎಕರೆ ಭೂಮಿ ನೀರಾವರಿಯಾಗಬೇಕಾಗಿದೆ. ಇದು ವರೆಗೆ 2 ಲಕ್ಷ ಎಕರೆ ಭೂಮಿ ನೀರಾವರಿಯಾಗಿದೆ. ಇನ್ನೂ 6 ಲಕ್ಷ ಎಕರೆ ನೀರಾವರಿ ಮಾಡುವುದಕ್ಕೆ ಸರಕಾರದ ಕಡೆಯಿಂದ ಸಾಧ್ಯವಾಗಿಲ್ಲ ಎಂಬುದು ವಿಷಾದ ಪಡತಕ್ಕ ಮಾತಾಗಿದೆ. ನಮ್ಮ ಜಿಲ್ಲೆಯಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಹತ್ತು ಸಾವಿರ ಎಕರೆ ಭೂಮಿ ನೀರಾವರಿಯಾಗಬೇಕಾಗಿದೆ. ಕಾಲುವೆ ಇದೆ, ನೀರು ಹರಿಯುತ್ತದೆ ಆದರೆ ಎಲ್ಲರಿಗೆ ನೀರು ಮುಟ್ಟಿಸುವುದಕ್ಕೆ ಸಾಧ್ಯವಾಗಿಲ್ಲ. ಸಿಂಧನೂರು ತಾಲ್ಲೂಕಿನಲ್ಲಿ ಕಾಲುವೆ ಇದೆ ಆದರೆ ನೀರು ಇಲ್ಲ. ಈ ಕಾಲುವೆ ನಾದುರಸ್ತಿಯಾಗಿದೆ. ಅದು ರಿಪೇರಿಯಾಗಿಲ್ಲ. ಆದರೂ ಕೂಡ ಜನರ ಕಡೆಯಿಂದ ಕಂದಾಯ ಮಾತ್ರ ಸರಕಾರದವರು ವಸೂಲ್ಮಾಡುತ್ತಿದ್ದಾರೆ. ಇದು ಸರಿಯಲ್ಲ. ಈ ವಿಷಯವನ್ನು ಸರಕಾರದ ಗಮನಕ್ಕೆ ತಂದಿದ್ದರೂ ಕೂಡ ಏನೂ ಮಾಡಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಮಲಪ್ರಭಾ ನದಿ ಯೋಜನೆ ವಿಷಯ. ಈ ಯೋಜನೆ ಕೈಕೊಳ್ಳುವ ಬಗ್ಗೆ ಸರಕಾರ ನಿರ್ಣಯ ಮಾಡಿದೆ. ಈ ಮಲಪ್ರಭಾ ನದಿಗೆ ಅಣೆಕಟ್ಟು ಕಟ್ಟುವ ಬಗ್ಗೆ ಹಿಂದಕ್ಕೆ ಮುಂಬಯಿ ಸರಕಾರ ಒಂದು ಯೋಜನೆ ಮಾಡಿತ್ತು. ಆ ಯೋಜನೆ ಪ್ರಕಾರ ಕಟ್ಟತಕ್ಕ ಅಣೆಕಟ್ಟಿನ ಎತ್ತರವನ್ನು ಸ್ವಲ್ಪ ಹೆಚ್ಚಿಸಿದರೆ ಕುಷ್ಟಗಿ ಗಂಗಾವತಿ ತಾಲ್ಲೂಕುಗಳಲ್ಲಿ ನೀರಾವರಿಗೆ ಅನುಕೂಲವಾಗಬಹುದು ಎಂಬ ಒಂದು ಅಭಿಪ್ರಾಯ ಇದೆ. ಆದುದರಿಂದ ಈ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವುದಕ್ಕೆ ಸರಕಾರದವರು ಒಂದು ಸರ್ವೆ ಮಾಡಿಸಬೇಕು ಮತ್ತು ವಿಚಾರಣೆ ನಡೆಸಬೇಕು ಎಂದು ಹೇಳುತ್ತೇನೆ.

ಈಗ ಕೃಷ್ಣಾ ನದಿಗೆ ಮೊದಲು ಎಲ್ಲಿ ಅಣೆಕಟ್ಟು ಕಟ್ಟಬೇಕು ಎಂಬುದಕ್ಕೆ ವಾದವಿವಾದ ನಡೆದಿದೆ. ಆಲಮಟ್ಟಿಯಲ್ಲಿ ಮೊದಲು ಕಟ್ಟಬೇಕೋ ಅಥವಾ ನಾರಾಯಣಪುರದಲ್ಲಿ ಮೊದಲು ಅಣೆಕಟ್ಟು ಕಟ್ಟಬೇಕೋ ಎಂಬ ವಿವಾದದ ಬಗ್ಗೆ ಸರಕಾರಕ್ಕೆ ಒಂದು ಎಚ್ಚರಿಕೆಯ ಮಾತು ತಿಳಿಸಲು ನಾನು ಸಾಹಸ ಮಾಡುತ್ತೇನೆ. ಮಂತ್ರಿ ಮಂಡಳದಲ್ಲಿ ವಿಜಾಪೂರ ಜಿಲ್ಲೆಯವರು ಮೂರು ಜನ ಮಂತ್ರಿಗಳು ಇದ್ದಾರೆ. ಗುಲಬರ್ಗಾದವರು ಒಬ್ಬರು ಮಂತ್ರಿ ಇದ್ದಾರೆ. ಇವರೆಲ್ಲರೂ ಕೂಡಿಕೊಂಡು ಒಟ್ಟಾಗಿ ಸಮ ಮಾಡಿ ಮೊದಲು ಆಲಮಟ್ಟಿಯಲ್ಲಿ ಕೃಷ್ಣಾ ನದಿಗೆ ಅಣೆಕಟ್ಟು ಕಟ್ಟುವುದಕ್ಕೆ ಮನಸ್ಸು ಮಾಡಿ ಗುಲಬರ್ಗಾ ಮತ್ತು ವಿಜಾಪೂರ ಜಿಲ್ಲೆಗೆ ನೀರು ಒದಗಿಸುವುದಕ್ಕೆ ಮನಸ್ಸು ಮಾಡಿದಂತೆ ಕಾಣುತ್ತದೆ. ನಾರಾಯಣ ಪುರದಲ್ಲಿ ಆಗಬೇಕಾದ ಅಣೆಕಟ್ಟಿನ ಬಗ್ಗೆ ಅಲಕ್ಷ್ಯಮಾಡಿ ಅದನ್ನು ಹಿಂದಕ್ಕೆ ಹಾಕಿದರೆ ರಾಯಚೂರು ಜಿಲ್ಲೆಗೆ ನೀರು ಸಿಕ್ಕುವುದಿಲ್ಲ. ನಾರಾಯಣಪುರ ಅಣೆಕಟ್ಟಿನ ಬಗ್ಗೆ ಸರಕಾರ ಏನಾದರೂ ಉಪೇಕ್ಷೆ ಮಾಡಿದರೆ ರಾಯಚೂರು ಜಿಲ್ಲೆಗೆ ನೀರು ದೊರೆಯದೇ ಇರುವುದರಿಂದ ನಾವು ತೀವ್ರ ಪ್ರತಿಭಟನೆ ಮಾಡುತ್ತೇವೆ. ನಾರಾಯಣಪುರ ಅಣೆಕಟ್ಟು ಕಲಸ ತೆಗೆದುಕೊಳ್ಳುವ ಬಗ್ಗೆ ಅಲಕ್ಷ್ಯ ಮಾಡಿದರೆ ನಾವು ಸರ್ವ ತ್ಯಾಗ ಮಾಡುವುದಕ್ಕೆ ಯಾವಾಗಲೂ ಸಿದ್ಧರಾಗಿದ್ದೇವೆ ಎಂದು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಸರಕಾರ ಈ ಯೋಜನೆ ತಯಾರು ಮಾಡಿರುವ ಹಾಗೆ ಕೇಂದ್ರ ಸರಕಾರದ ಅಭಿಪ್ರಾಯದ ಪ್ರಕಾರ ಎರಡೂ ಕಡೆ ಅಣೆಕಟ್ಟು ಕಟ್ಟಿಸಬೇಕು ಎಂದು ಈ ಸಮಯದಲ್ಲಿ ನನ್ನ ಅಭಿಪ್ರಾಯ ವ್ಯಕ್ತ ಮಾಡುತ್ತೇನೆ.

ಇನ್ನು ವಿದ್ಯುತ್ ಶಕ್ತಿ ವಿಷಯ. ನಮ್ಮ ತುಂಗಭದ್ರಾ ಯೋಜನೆಯಲ್ಲಿ ನಮ್ಮ ತಾಲ್ಲೂಕಿನ 37 ಹಳ್ಳಿಗಳು ಮುಳುಗಡೆಯಾಗಿದ್ದರೂ ಕೂಡ ನಮ್ಮ ತಾಲ್ಲೂಕಿನಲ್ಲಿ ಕೊಪ್ಪಳಕ್ಕೆ ವಿದ್ಯುತ್ ಶಕ್ತಿ ಒದಗಿಸಿಲ್ಲ. ನೀರಾವರಿ ಭಾವಿಗಳಿಗೆ ವಿದ್ಯುತ್ ಶಕ್ತಿ ಪೂರೈಸುವುದಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ. ಯಲಬುರ್ಗಾ, ಗಂಗಾವತಿ ಮುಂತಾದ ಸ್ಥಳದಲ್ಲಿಯ ರಾಯಚೂರು ಜಿಲ್ಲೆಯ ಜನರು ಸುಮಾರು 1,000 ಜನ ರೈತರು ನೀರಾವರಿ ಭಾವಿಗಳಿಗೆ ವಿದ್ಯುತ್ ಶಕ್ತಿ ಪೂರೈಸಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಆದರೂ ಕೂಡ ನೀರಾವರಿ ಭಾವಿಗಳಿಗೆ ವಿದ್ಯುತ್ ಶಕ್ತಿ ಪೂರೈಸುವುದಕ್ಕೆ ಆಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದಕ್ಕೆ ತೀವ್ರ ಗಮನಕೊಟ್ಟು ಹೆಚ್ಚು ವಿದ್ಯುತ್ ಶಕ್ತಿ ಉತ್ಪಾದನೆ ಮಾಡಿ ರೈತರಿಗೆ ನೀರಾವರಿ ಭಾವಿಗಳಿಗೆ ವಿದ್ಯುತ್ ಶಕ್ತಿ ಪೂರೈಸುವುದಕ್ಕೆ ಹಿಂದು ಮುಂದೆ ನೋಡದೆ ಪೂರೈಸುವ ಕಾರ್ಯ ಮೊದಲು ಮಾಡಬೇಕು ಎಂದು ಸರಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಂದರೆ ಸರಕಾರದ ಘನ ಉದ್ದೇಶ ಸಫಲವಾಗುತ್ತದೆ.

ಇನ್ನು ಸಾಮಾನ್ಯ ಆಡಳಿತ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಸರಕಾರದ ಆಡಳಿತ ವೆಚ್ಚ ಬಹಳ ಹೆಚ್ಚಾಗಿದೆ. ಒಂದು ಪಕ್ಷದ ಸರಕಾರ ರಚನೆಯಾಗಿದೆ. ಈ ವಿಚಾರ ಅನೇಕ ಸಲ ಈ ಮಾನ್ಯ ಸಭೆಯಲ್ಲಿ ಹೇಳುತ್ತಾ ಬಂದಿದ್ದೇವೆ. ಒಂದು ಪಕ್ಷದ ಸರಕಾರ ಇರುವುದು ಈ ಸಮಯದಲ್ಲಿ ಒಳ್ಳೆಯದಲ್ಲ. ಒಂದು ಪಕ್ಷದ ಸರಕಾರ ಇದ್ದರೆ ಅದು ಅಹಿತಕರವಾಗುತ್ತದೆ. ಆದುದರಿಂದ ಈ ಸಮಯದಲ್ಲಿ ಪಕ್ಷಾತೀತ ಸರಕಾರ ರಚನೆಯಾಗಬೇಕಾದುದು ಅಗತ್ಯ. ಯಾಕಂದರೆ ಜಾತ್ಯಾತೀತ ರಾಷ್ಟ್ರನಿರ್ಮಾಣವಾಗಬೇಕಾಗಿದೆ. ಪಕ್ಷಾತೀತ ಸರಕಾರ ರಚನೆಯಿಂದ ರಾಷ್ಟ್ರಕ್ಕೆ ಒಳ್ಳೆಯದಾಗುತ್ತದೆ ಎಂದು ಈ ಮಹಾ ಸಭೆಯ ಗಮನಕ್ಕೆ ತರುತ್ತೇನೆ. ಇಂದು ಪಕ್ಷ ರಹಿತವಾದ ಸರಕಾರದ ಆವಶ್ಯಕತೆ ಇದೆ.

(ಶ್ರೀ ವೀರಭದ್ರಪ್ಪ ಈರಪ್ಪ)

ಮಾನ್ಯ ಮುಖ್ಯಮಂತ್ರಿಗಳು ಮನಸ್ಸುಮಾಡಿ ಆಡಂಬರದ ಮಂತ್ರಿ ಮಂಡಳ ಕಡಿಮೆ ಮಾಡಿ 10 ಜನ ಮಂತ್ರಿಗಳು ಇರುವ ಒಂದು ಪಕ್ಷಾತೀತ, ಪಕ್ಷರಹಿತ ಸರಕಾರ ಈ ಸಮಯದಲ್ಲಿ ಸ್ಥಾಪನೆ ಮಾಡಬೇಕು ಎಂದು ಈ ಮಹಾ ಸಭೆಯ ಗಮನಕ್ಕೆ ತರುತ್ತೇನೆ.

ಇದುವರೆಗೆ ಕರ್ನಾಟಕ ಎಂದು ರಾಜ್ಯದ ಹೆಸರನ್ನು ಬದಲು ಮಾಡುವುದಕ್ಕೆ ಮನಸ್ಸು ಮಾಡದೇ ಇರುವುದು, ಪ್ರಯತ್ನ ಮಾಡದೇ ಇರುವುದು ಬಹಳ ವಿಷಾದದ ಮಾತು. ಅನೇಕ ರಾಜ್ಯಗಳು ಭಾಷಾವಾರು ಪ್ರಾಂತರಚನೆಯ ನಂತರ ತಮ್ಮ ತಮ್ಮ ರಾಜ್ಯದ ಭಾಷೆಯ ಹೆಸರಿನಲ್ಲಿ ರಾಜ್ಯಭಾರ ನಡೆಸುತ್ತಿವೆ. ಕರ್ನಾಟಕ ರಾಜ್ಯಕ್ಕೆ ಮಾತ್ರ ಇನ್ನೂ ತನಕ ತನ್ನ ಹೆಸರನ್ನು ಬದಲು ಮಾಡುವುದಕ್ಕೆ ಸಾಧ್ಯವಾಗಿಲ್ಲ, ಇದು ವಿಷಾದಕರ.

ಇನ್ನೊಂದು ಮಾತು. ಅರ್ಧ ಕೋಟಿ ಜನ ಕನ್ನಡಿಗರು ನಮ್ಮ ರಾಜ್ಯದಲ್ಲಿ ಬಾರದೆ ಇದುವರೆಗೆ ಹೊರ ಪ್ರದೇಶದಲ್ಲಿ ಬೇರೆ ರಾಜ್ಯದಲ್ಲಿ ಇದ್ದಾರೆ. ಅವರನ್ನು ನಮ್ಮ ರಾಜ್ಯದಲ್ಲಿ ತೆಗೆದುಕೊಳ್ಳುವುದಕ್ಕೆ ಈ ಸರಕಾರ ಯಾವ ತರಹದ ಪ್ರಯತ್ನ ಮಾಡಿಲ್ಲ ಎಂದು ಬಹಳ ವಿಷಾದದಿಂದ ಈ ಸಭೆಯಲ್ಲಿ ಹೇಳ ಬಯಸುತ್ತೇನೆ. ಅವರು ನಮ್ಮ ರಾಜ್ಯದಲ್ಲಿ ಬೇಗನೆ ಬರುವುದಕ್ಕೆ ಪ್ರಯತ್ನ ಮಾಡಬೇಕು.

ಕೊನೆಯದಾಗಿ ಎಲ್ಲ ಮಹತ್ವದ ಅಂಶಗಳ ಬಗ್ಗೆ ಕೊಟ್ಟಿರುವ ಸಲಹೆ ಸೂಚನೆಗಳನ್ನು ಸರಕಾರ ಗಮನದಲ್ಲಿಟ್ಟುಕೊಂಡು ತೀವ್ರ ಪರಿಹಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಅವಲರೆಡ್ಡಿ (ಶಿಡ್ಲಘಟ್ಟ).—ಮಾನ್ಯ ಸಭಾಪತಿಗಳೇ, ನಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ಅನುಮೋದನೆ ಕೊಡುತ್ತಾ ನಾಲ್ಕಾರು ಮಾತು ಗಳನ್ನು ಆಡಲು ಬಯಸುತ್ತೇನೆ. ಈ ವರ್ಷ ಬಜೆಟ್ ಅಧಿವೇಶನದಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆಯ ಮಂತ್ರಿಗಳು ನೀರಾವರಿ ಯೋಜನೆ ವಿಷಯದಲ್ಲಿಯೂ ಇಲೆಕ್ಟ್ರಿಸಿಟಿ ವಿಷಯದಲ್ಲಿಯೂ ಬಹಳ ಆಶಾದಾಯಕವಾದ ಭಾಷಣ ಮಾಡಿ ಈ ಸಭೆಯ ಮುಂದೆ ಮಾತನಾಡಿದ್ದಾರೆ. ಕೃಷ್ಣಾ ವಾಟರ್ ವಿಷಯದಲ್ಲಿ ಮೊದಲಿನಿಂದಲೂ ನನ್ನ ವಾದ ಏನಿದೆ ಎಂಬುದನ್ನು ಸಭೆಯ ಮುಂದೆ ನಾನು ಇಡುತ್ತಾ ಬಂದಿದ್ದೇನೆ. ನಮ್ಮ ಮಂತ್ರಿಗಳು ಯಾವ ಲೆಕ್ಕಾಚಾರ ಹಾಕಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಈಗ ಪ್ಲಾನಿಂಗ್ ಕಮಿಷನ್ ಅವರು ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದ್ದಾರೆ. 230 ಕೋಟಿ ಯೋಜನೆ ಮಾಡತಕ್ಕವರು ಇದ್ದೇವೆ. ನಿನ್ನೆಯ ದಿನ ನಮ್ಮ ಸ್ನೇಹಿತರಾದ ಅಣ್ಣಾರಾವ್ ಅವರು ಮಾತ ನಾಡುತ್ತಾ ಕೆಲವು ಅಂಕಿ ಅಂಶಗಳನ್ನು ಸರಕಾರಕ್ಕೆ ಒದಗಿಸಿದ್ದಾರೆ. ಅವುಗಳನ್ನು ಮಂತ್ರಿಗಳು ಒಪ್ಪಬೇಕು. ಅದರ ಲೆಕ್ಕಾಚಾರ ಪ್ರಕಾರ ನಮಗೆ ಪುರಾತನ ಕಾಲದಿಂದ ಎಷ್ಟು ಟಿ.ಎಂ.ಸಿ.ಎಫ್.ಟಿ. ನೀರು ಬರಬೇಕು ಎಂಬುದನ್ನು ಹೇಳಿದ್ದಾರೆ. ಈಗ ಇರತಕ್ಕಂಥ ಅಣೆಕಟ್ಟು ಕಟ್ಟತಕ್ಕಂಥಾದ್ದನ್ನು ಪೂರೈಸಿದ ಮೇಲೆ ನಾವು 478 ಟಿ.ಎಂ.ಸಿ.ಎಫ್.ಟಿ. ನೀರು ಉಪಯೋಗಿಸುವುದಕ್ಕೆ ಹೋಗುತ್ತಿದ್ದೇವೆ. ನಮಗೆ ಕೇಂದ್ರ ಸರಕಾರದಿಂದ ಕೊಟ್ಟಿರತಕ್ಕಂಥಾದ್ದು 600 ಟಿ.ಎಂ.ಸಿ.ಎಫ್.ಟಿ. ನೀರು. ಇದರಲ್ಲಿ ನಾವು ಉಪಯೋಗಿಸುವ ನೀರು ಕಳೆದರೆ 122 ಟಿ.ಎಂ.ಸಿ.ಎಫ್.ಟಿ. ನೀರು ಟೆಂಟೇಟಿವ್ ಆಗಿ ಅಲಾಟ್‌ಮೆಂಟ್ ಸಿಕ್ಕಿರತಕ್ಕಂಥ ನೀರು ಉಳಿಯುತ್ತದೆ. ಈ ನೀರು ಉಪಯೋಗಿಸುವುದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ ಎಂಬ ವಿವರ ಸಭೆಯ ಮುಂದೆ ಇಟ್ಟಿದ್ದಾರೆ. ಈ ವಾದ ನನಗೆ ಅರ್ಥವಾಗುವುದಿಲ್ಲ. ಪದೇ ಪದೇ ಈ ಸಭೆಯ ಮುಂದೆ ನನ್ನ ವಾದ ನಾನು ಇಡುತ್ತಿದ್ದೇನೆ. ಕೃಷ್ಣಾ ನದಿ ನಮ್ಮ ದೇಶದಲ್ಲಿ ಹರಿಯುತ್ತದೆ. ಅದರ ಕ್ಯಾಚ್‌ಮೆಂಟ್ ಏರಿಯಾ ನಮ್ಮ ದೇಶದಲ್ಲಿ ಇರುತ್ತದೆ.

ಇದರಲ್ಲಿ ಎಷ್ಟು ನೀರು ಬರುತ್ತದೆ ಅಂತ ಹೇಳಿ ಗುಲಹಾಟಿ ಕಮಿಟಿಯವರು ಎಸ್ಟಿಮೇಟು ಹಾಕಿದ್ದಾರೆ. ನಮಗೆ ಹೆಚ್ಚಾಗಿ ಬರತಕ್ಕ ನೀರಿನ ಹಕ್ಕನ್ನು ನಾವು ಸಾಧಿಸಬೇಕು. ನಾವು 1,200 ಟಿಎಂಸಿ ನೀರನ್ನು ಉಪಯೋಗಿಸಲು ನಮಗೆ ಕೇಂದ್ರ ಸರಕಾರ ಹಣವನ್ನು ಒದಗಿಸಬೇಕು. ಒಂದು ಲೆಕ್ಕಾಚಾರಹಾಕಿ ಆಂಧ್ರ ಸರಕಾರ ಮತ್ತು ಮದ್ರಾಸು ಸರಕಾರ ಅನೇಕ ಪ್ರಾಜೆಕ್ಟುಗಳನ್ನು ಕಟ್ಟಿದ್ದಾರೆ. ಅವರು ಹಣ ಹೇಗೆ ಹಾಕಿದ್ದಾರೆ? ಕೇಂದ್ರ ಸರಕಾರ ಅವರಿಗೆ ಕೊಡಲಿಲ್ಲವೆ? ಮೈಸೂರಿಗೆ ಕೇಂದ್ರ ಎಷ್ಟು ಕೋಟಿ ಕೊಟ್ಟಿದೆ? ಮದ್ರಾಸಿಗೆ ಇರಿಗೇಷನ್ ಡೆವಲಪ್‌ಮೆಂಟಿಗೆ, ಎಷ್ಟು ಕೋಟಿ ಕೊಟ್ಟಿದ್ದಾರೆ? ಆಂಧ್ರ ಸರಕಾರಕ್ಕೆ ಇರಿಗೇಷನ್ ಡೆವಲಪಮೆಂಟಿಗೆ ಎಷ್ಟು ಕೋಟಿ ಕೊಟ್ಟಿದ್ದಾರೆ? ಮೈಸೂರಿಗೆ ಎಷ್ಟು ಕೊಟ್ಟಿದ್ದಾರೆ ಎಂದು ನಮ್ಮ ಮುಂದೆ ಪಟ್ಟಿ ಇಟ್ಟಿದ್ದಾರಲ್ಲ, ಆ ಕಂಪ್ಯಾರೆಟೀವ್ ಫಿಗರ್ಸ್ ನೋಡಿಕೊಂಡರೆ ಮೈಸೂರು ಸಂಸ್ಥಾನವನ್ನು ಕೇಂದ್ರ ಸರಕಾರ ಪುಷ್ಟೀಕರಿಸಿಲ್ಲ ಅಂತಹೇಳಿ ನಮಗೆ ಅರ್ಥವಾಗುತ್ತದೆ. ಅವರಿಗೆ ಕೊಟ್ಟಿರುವ ಪ್ರಕಾರ ನಮಗೆ ಕೇಂದ್ರ ಹಣ ಕೊಟ್ಟಿಲ್ಲ. ಕಂಪ್ಯಾರಟೀವ್ ಫಿಗರ್ಸ್ ತೆಗೆದುಕೊಂಡು, ಕೇಂದ್ರಕ್ಕೆ ಹೇಳಿ, ಎಂದು ನಾನು ಬೇಷ•

ಮಿನಿಸ್ಟರಿಗೆ ಮತ್ತು ಪಿ.ಡಬ್ಲ್ಯೂ.ಡಿ. ಮಿನಿಸ್ಟರಿಗೆ ಹೇಳುತ್ತೇನೆ. ಅವರು ದೆಹಲಿಯಲ್ಲಿ 3 ತಿಂಗಳು ಕೂತುಕೊಳ್ಳಬೇಕು. ದೆಹಲಿಯಲ್ಲಿ ಕೇಂದ್ರ ಸರಕಾರದಲ್ಲಿ ಮತ್ತು ಪವರ್ ಮತ್ತು ಇರಿಗೇಷನ್ ಕಮಿಷನ್ ಮುಂದೆ ಸತ್ಯಾಗ್ರಹ ಮಾಡಬೇಕು ; ನಮಗೆ ಇನ್ನೂ 600 ಟಿಎಂಸಿ ಜಾಸ್ತಿ ನೀರು ಬೇಕು, ಇದರ ಜೊತೆಗೆ ಹಣವನ್ನೂ ಕೊಡಬೇಕೆಂದು ಕೇಳಬೇಕು. ಸತ್ಯಾಗ್ರಹ ಮಾಡಿದರೆ ಮಾತ್ರ ನಮ್ಮ ಹಕ್ಕನ್ನು ಸಾಧಿಸುವುದಕ್ಕೆ ಸಾಧ್ಯ. ನೀವು ನಮ್ಮ ಹಕ್ಕನ್ನು ಸಾಧಿಸಿಕೊಳ್ಳದಿದ್ದರೆ ಮುಂದಿನ ಪೀಳಿಗೆಯನ್ನು ತೊಂದರೆಗೆ ಈಡುಮಾಡುತ್ತೀರಾ ಮತ್ತು ಅವರ ಶಾಪಕ್ಕೆ ಗುರಿಯಾಗುತ್ತೀರಾ. ನಮ್ಮ ಹಕ್ಕನ್ನು ಸಾಧಿಸುವುದಕ್ಕೆ ನಮ್ಮ ಚೀಫ್ ಮಿನಿಸ್ಟರು ಕ್ರಾಂತಿಯನ್ನು ಎಬ್ಬಿಸುತ್ತಾರೆ ಎಂಬ ನಂಬಿಕೆ ಇದೆ. ಅದಕ್ಕೆ ಅವರು ದೆಹಲಿಯಲ್ಲಿ ಸತ್ಯಾಗ್ರಹವನ್ನು ಹೂಡಬೇಕು. ನಮ್ಮ ಬೇಡಿಕೆ ಸರಿಯಾಗಿ ಇರುವುದರಿಂದ, ಏನು ತೊಂದರೆ ಬಂದರೂ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕೇಳುತ್ತಿದ್ದೇನೆ. ಇದಕ್ಕೆ ಭಯ ಏಕೆ ಇರಬೇಕು ? ಎರಡು ವರ್ಷದಿಂದ ಹೊಡೆದಾಡಿದರೂ 600 ಟಿ ಎಂ ಸಿ ಗಿಂತ 1 ಟಿ ಎಂ ಸಿ ಹೆಚ್ಚಿಗೆ ನಮಗೆ ಅಲಾಟ್ ಮಾಡಲಿಲ್ಲ. ಆಂಧ್ರದ ಮಹಾ ಪ್ರಾಜ್ಞರಾದ ಕೆ. ಎಲ್. ರಾವ್ ರವರು ಕೇಂದ್ರದ ಮಂತ್ರಿಗಳಾಗಿರುವುದರಿಂದ, ಅವರು ಒಂದು ಚೂರೂ ಹೆಚ್ಚಿಗೆ ಕೊಡುವಂಥ ಆಶೆ ನನಗಿಲ್ಲ, ಬರುವುದೂ ಇಲ್ಲ.

ಕಾವೇರಿ ನದಿ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕಾಗಿದೆ. ಈಗಾಗಲೆ ಪಿ.ಡಬ್ಲ್ಯೂ.ಡಿ. ಮಂತ್ರಿಗಳು 10 ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುತ್ತೇವೆಂದು ಅಪ್ಪಣೆ ಕೊಡಿಸಿದರು. ಇದಕ್ಕೆ ಸ್ವಲ್ಪ ಹಣಕಾಸಿನ ಕೊರತೆ ಇರುವುದರಿಂದ ಇನ್ನು 10 ವರ್ಷದಲ್ಲಿ ಅವುಗಳನ್ನು ಮಾಡುವುದಕ್ಕೆ ಸಾಧ್ಯವೆ ಎಂದು ನನ್ನ ಪ್ರಶ್ನೆ. 1925ರ ಅಗ್ರಿಮೆಂಟ್ ಆಗಿ 40 ವರ್ಷಗಳಾಗಿದ್ದಾಗ್ಯೂ ಕೂಡ, ಈಗಲಾದರೂ ಒಂದು ವಾದವನ್ನು ಮದ್ರಾಸು ಸರಕಾರದ ಮುಂದಿಡಬೇಕು. ನಮ್ಮ ಅಗ್ರಿಮೆಂಟ್ ಪ್ರಕಾರ ಮದ್ರಾಸು ಪ್ರಾಂತ್ಯದಲ್ಲಿ ಎಷ್ಟು ನೀರಾವರಿ ಯೋಜನೆಗಳನ್ನು ಅವರು ಕಟ್ಟಿದ್ದಾರೆ, ಅವುಗಳಿಗೆ ನಮ್ಮ ಸರಕಾರ ಅಪ್ಪಣೆ ಕೊಟ್ಟಿದ್ದಾರೆಯೆ ? ಅದನ್ನು ಸರಕಾರದ ಗಮನಕ್ಕೆ ತಂದಿದ್ದರೆ ಈ ಸಭೆಗೆ ತಿಳಿಸಬೇಕು. ಏಕೆಂದರೆ ಆ ಅಗ್ರಿಮೆಂಟ್ ಪ್ರಕಾರ ಮದ್ರಾಸು ಸರಕಾರ ಯಾವ ಯೋಜನೆಗಳನ್ನು ಪ್ರಾರಂಭಮಾಡಿದರೂ ಕೂಡ ನಮ್ಮ ಸರಕಾರ ಅವಕ್ಕೆ ಒಪ್ಪಿಗೆ ಕೊಡಬೇಕು. ಈ ಷರತ್ತು ಇದೆಯೆಂದು ಕೆಲವು ಮುಖ್ಯಾಧಿಕಾರಿಗಳಿಂದ ತಿಳಿದುಕೊಂಡಿದ್ದೇನೆ. ಹಿಂದಿನ ಮೈಸೂರು ಮಂತ್ರಿಗಳು ಮದರಾಸಿನಲ್ಲಿ ಏನೇನು ಕೆಲಸಮಾಡಿದ್ದಾರೆಂದು ಪರಿಶೀಲನೆ ಮಾಡಲು ಅಪ್ಪಣೆಯನ್ನು ಬೇಡಿದಾಗ, ಮದ್ರಾಸು ಸರಕಾರದವರು ಅದನ್ನು ನಿರಾಕರಿಸಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮದ್ರಾಸು ಸರಕಾರಕ್ಕೆ ಬರೆದು ನಮ್ಮ ಚೀಫ್ ಇಂಜನಿಯರು ಫಾರ್ ಇರ್ರಿಗೇಷನ್ ಅವರನ್ನು ಅಲ್ಲಿಗೆ ಕಳುಹಿಸಿ ಕೊಟ್ಟು, ಅವರು ಎಷ್ಟು ಕಟ್ಟೆಗಳನ್ನು ಕಟ್ಟಿದ್ದಾರೆ, ಎಂದು ಇನ್‌ಸ್ಪೆಕ್ಷನ್ ಮಾಡಿಸಿ, ಅವುಗಳಿಗೆ ಎಷ್ಟು ನೀರನ್ನು ಉಪಯೋಗಿಸಿದ್ದಾರೆ, ಅದಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದಾರೆಯೆ ಎಂದು ವಿಚಾರಿಸಿ, ಅವನ್ನೆಲ್ಲಾ ಈ ಸಭೆಯಮುಂದೆ ಇಡಬೇಕು. ಅವರು ಅಗ್ರೀಮೆಂಟು ಪ್ರಕಾರ ನಡೆಯದೆ, ಮೀರಿ ನಡೆಯುತ್ತಾ ಇದ್ದರೆ ಆ ಅಗ್ರೀಮೆಂಟು ಪೀರಿಯಡ್ಡನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅದನ್ನು ಕಾರಣ ಮಾಡಿಕೊಂಡು ಜಗಳ ಹೂಡಬೇಕು. ಏನಾದರೂ ಆಗಲಿ, ನೀರನ್ನು 10 ವರ್ಷದಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗದಿದ್ದರೆ, ಇನ್ನು ಎಷ್ಟು ಕಾಲಾವಧಿಯಲ್ಲಿ ಅದನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬಹುದೊ, ಅಷ್ಟುಕಾಲಾವಧಿವರೆಗೆ ಅಗ್ರಿಮೆಂಟ್ ಪೀರಿಯಡ್ ಎಳೆಯಬೇಕು.

ಮೈನರ್ ಇರಿಗೇಷನ್ ನಮ್ಮ ಸಂಸ್ಥಾನದಲ್ಲಿ ಬಹಳ ಪ್ರಗತಿದಾಯಕವಾಗಿ ನಡೆದಿದೆ ಎಂದು ನಾನು ನಿಜವಾಗಿಯೂ ಒಪ್ಪುತ್ತೇನೆ. ಅನೇಕ ಕೆರೆಗಳನ್ನು ಕಟ್ಟಲು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈನರ್ ಇರಿಗೇಷನ್ನಿಗೆ ಕೋಟ್ಯಾಂತರ ರೂಪಾಯಿ ಒದಗಿಸಿದ್ದಾರೆ. ಅನೇಕ ಕೆರೆಗಳು ರೆಸ್ಟೋರ್ ಆಗಿವೆ. ಅನೇಕ ಹೊಸ ಕೆರೆಗಳನ್ನು ಕಟ್ಟುತ್ತಾ ಇದ್ದಾರೆ.

ಅಲ್ಪ ಮಳೆ ಬರತಕ್ಕಂಥ ಜಿಲ್ಲೆಗಳಲ್ಲಿ ಹಲವಾರು ನದಿಗಳು ಹರಿಯುತ್ತಿವೆ. ಆದ್ದರಿಂದ ಸಬ್‌ಸಾಯಿಲ್ ವಾಟರು, ಸ್ಪ್ರಿಂಗ್ ವಾಟರು ಇದೆ. ಚೀಫ್ ಮಿನಿಸ್ಟರು ಇದರಿಂದ ತೆಗೆದುಕೊಳ್ಳಲು 1 ಕೋಟಿ ರೂಪಾಯಿ ಸಹಾಯ ದೆಹಲಿಯಿಂದ ಬರುತ್ತದೆಂದು ಹೇಳಿದ್ದರಮೇಲೆ, ಎಲ್ಲ ಜಮೀನುದಾರರುಗಳು ಕಮ್ಯೂನಿಟಿ ವೆಲ್ಲುಗಳಿಗೆ ಸಹಾಯ ಮಾಡಬೇಕೆಂದು ಅರ್ಜಿಗಳನ್ನು ಹಾಕಿಕೊಂಡಿದ್ದನ್ನು ತೆಗೆದುಕೊಂಡಿದ್ದಾರೆ. ಆದರೆ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಅದರ ಬಗ್ಗೆ ಯಾವ ವಿಷಯವನ್ನೂ ಎತ್ತಿಲ್ಲ. ಲಿಫ್ಟ್ ಇರಿಗೇಷನ್ ಅಲ್ಪ ಮಳೆ ಬೀಳತಕ್ಕ ಜಿಲ್ಲೆಗಳಿಗೆ ಬಹು ಉಪಯೋಗವಾಗುವ ವಿಷಯ. ಕೋಲಾರಜಿಲ್ಲೆಯಲ್ಲಿ 4–5 ನದಿಗಳು ಹರಿಯುತ್ತವೆ. ಸಬ್‌ಸಾಯಿಲ್ ವಾಟರನ್ನು ಈಗಾಗಲೇ ರೈತರು ಸ್ವಂತ ಖರ್ಚಿನಿಂದ ಪಂಪು, ಕಪಿಲೆ ಹಾಕಿಕೊಂಡು ಉಪಯೋಗ ಮಾಡುತ್ತಿದ್ದಾರೆ, ಅದನ್ನು ಇಂಜನಿಯರಿಂಗ್ ಡಿಪಾರ್ಟುಮೆಂಟಿನವರು ನೋಡಿದ್ದಾರೆ. ನಮ್ಮ ಸರಕಾರ

(ಶ್ರೀ ಎಸ್. ಅವಲರೆಡ್ಡಿ)

ದವರು ಕಾಮನ್‌ವೆಲ್ಸ್ ಹಾಕಿ ಪಂಪುಸೆಟ್ಟುಗಳನ್ನು ಒದಗಿಸಿಕೊಟ್ಟರೆ, ಒಂದೊಂದು ಪಂಪುಸೆಟ್ಟಿನಿಂದ 100 ಎಕರೆಗೆ ನೀರು ಒದಗಿಸಬಹುದು ಎಂದು ಸರಕಾರಕ್ಕೆ ಹೇಳಿ, ಅದಕ್ಕೆ ಹಣವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ವಿಷಯದಲ್ಲಿ ಒಂದೆರಡು ಮಾತನ್ನು ಆಡಬೇಕಾಗಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಮಾನ್ಯಸದಸ್ಯರು ಅನೇಕ ಜನ ಸ್ವಲ್ಪ ತುಚ್ಛವಾದ ರೀತಿಯಲ್ಲಿ ಮಾತನಾಡಿದ್ದಾರೆ. ಅದನ್ನು ಕಠಿಣವಾಗಿ ಟೀಕೆ ಮಾಡಿದರು. ಎಲೆಕ್ಟ್ರಿಸಿಟಿ ಬೋರ್ಡ್ ಬಂದಲಾಗಾಯಿತು ನಮ್ಮ ಸಂಸ್ಥಾನದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕೆಲಸ ಪ್ರಗತಿದಾಯಕವಾಗಿ ಜರುಗುತ್ತಾ ಇದೆ. ಪಂಪುಸೆಟ್ಟುಗಳಿಗೆ ಬೇಕಾದ ವಿದ್ಯುತ್ ಒದಗಿಸಲು ಟ್ರಂಕ್‌ಲೈನನ್ನು ಹಾಕಿದ್ದಾರೆ. ನಮ್ಮ ಸರಕಾರದವರೂ ಇರಿಗೇಷನ್ ವೆಲ್ಲುಗಳಿಗೆ, ಪಂಪುಸೆಟ್ಟುಗಳಿಗೆ ಧಾರಾಳವಾಗಿ ಹಣಕೊಡುತ್ತಾ ಇದ್ದಾರೆ. ಸಾವಿರಾರು ಪಂಪುಸೆಟ್ಟುಗಳು ಹಾಕುವ ಹಾಗೆ ಟ್ರಂಕ್‌ಲೈನನ್ನು ಎಳೆದಿದ್ದಾರೆ. 3 ಸಾವಿರ ಒಂದು ವಾರದಲ್ಲಿ ಕೊಡುತ್ತೇವೆ, ಸ್ಕೀಮು ತೆಗೆದುಕೊಂಡಿದ್ದೇವೆ ಎಂದು ಅಧಿಕಾರಿಗಳೂ ಹೇಳಿದ್ದರಮೇಲೆ ಹಾಹಾಕಾರ ಉಂಟಾಗಿದೆ. ಮೂರು ತಿಂಗಳಾದರೂ ಇನ್ನೂ ಬರಲಿಲ್ಲ. ಅದಕ್ಕೆ ತಕ್ಕ ಏರ್ಪಾಡುಗಳನ್ನು ಸರಕಾರದವರು ಮಾಡುತ್ತಾರೆ ಎಂದು ಆಶೆ ಮಾಡುತ್ತೇನೆ.

ಶರಾವತಿ ವಿಷಯದಲ್ಲಿ ವೈಟ್‌ಪೇಪರ್ ಹೊರಡಿಸಿದ್ದಾರೆ ಸರಕಾರದವರು. ಆದರೂ, ಅದರಲ್ಲಿ ಅನುಮಾನಗಳು ಜಾಸ್ತಿಯಾಗುತ್ತಿವೆ. ಇದರ ಬಗ್ಗೆ ಎರಡು ವಾದಗಳಿವೆ. ಒಂದು, ಈ ಯೋಜನೆಯಲ್ಲಿ ಸರಕಾರ ತಪ್ಪು ಮಾಡಿದೆಯೆಂದು. ಇನ್ನೊಂದು ಸರಕಾರದವರು ಸರಿಯಾಗಿ ನಡೆದುಕೊಂಡಿದ್ದಾರೆಂದು. ಈ ಎರಡು ವಾದಗಳನ್ನೂ ಈ ಸಭೆಯಲ್ಲಿ ಚರ್ಚೆಮಾಡುವುದು ಒಳ್ಳೆಯದಲ್ಲ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವಯಿರಿ ಮಾಡಿದರೆ ನಿಜಾಂಶ ಹೊರಗೆ ಬೀಳುತ್ತದೆ. ಜುಡಿಷಿಯಲ್ ಎನ್‌ಕ್ವಯಿರಿಯಲ್ಲಿ ಏನೂ ತಪ್ಪಿಲ್ಲ ಎಂದು ತೀರ್ಪುಬಂದರೆ ಎಲ್ಲರೂ ಬಾಯಿ ಮುಚ್ಚಿಕೊಂಡಿರಬೇಕಾಗುತ್ತದೆ. ಆವಾಗ ಸರಕಾರಕ್ಕೂ ಬಹಳ ಗೌರವ ಬರುತ್ತದೆ. ಇಲ್ಲದಿದ್ದರೆ ಹಣ ದುರುಪಯೋಗವಾಗಿದೆ ಅನ್ನುವ ಅಪವಾದನೆಗಳನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಜುಡಿಶಿಯಲ್ ಇನ್‌ಕ್ವಯರಿ ಮಾಡಿಸಬೇಕೆಂದು ಸರಕಾರವನ್ನು ಬೇಡಿಕೊಳ್ಳುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಅನೇಕ ತೊಂದರೆಗಳನ್ನು ಸರಕಾರದ ಗಮನಕ್ಕೆ ನಾನಾ ವಿಧದಲ್ಲಿ ತಂದಿದ್ದಾರೆ. ಇಂಟಗ್ರೇಷನ್ ಆದಮೇಲಂತೂ ನಮ್ಮ ಸರಕಾರಿ ನೌಕರರುಗಳಲ್ಲಿ ನಾನಾ ತರಹ ಸಮಸ್ಯೆಗಳು ಉಂಟಾಗಿವೆ. ಸೀನಿಯಾರಿಟಿ ಲಿಸ್ಟು ಫೈನಲೈಸ್ ಆಗದೆ ಇರುವುದು ಇದಕ್ಕೆ ಕಾರಣ ಅಂತ ಹೇಳಿ ಹೇಳಿ ಈ ಸಭೆಯಲ್ಲಿ ಹೇಳುತ್ತಾರೆ. ಅದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಥಮತಃ ಗಮನಕೊಟ್ಟು, ಕೇವಲ ಒಂದೆರಡು ತಿಂಗಳುಗಳಲ್ಲಿ ಅದನ್ನು ಪೂರೈಸಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೊ ಅವುಗಳನ್ನು ತೆಗೆದುಕೊಳ್ಳಬೇಕು. ಅವರ ಸರ್ವೀಸು, ಗ್ರೇಡು, ಕೇಡರ್ ಎಲ್ಲದರ ಬಗ್ಗೆ ವಿಚಾರಣೆ ನಡೆಸಿ, ಕೂಲಂಕಷವಾಗಿ ಪರಿಶೀಲನೆಮಾಡಿ, ಜಾಗ್ರತೆಯಾಗಿ ಒಂದು ತೀರ್ಮಾನಕ್ಕೆ ಬಂದರೆ ಮಾತ್ರ ನಿಮ್ಮ ಅಧಿಕಾರವರ್ಗ ದೇಶಕ್ಕಾಗಿ ದುಡಿಯುತ್ತಾರೆ. ಇಲ್ಲದಿದ್ದರೆ ದುಡಿಯುವುದಿಲ್ಲ. ಅವರ ವಿಷಯದಲ್ಲಿ ಕೇಂದ್ರದಲ್ಲಿ ಏನಾದರೂ ಚರ್ಚೆಮಾಡಬೇಕಾಗಿದ್ದರೂ, ನಮ್ಮ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿ ಕೂತು ಅಲ್ಲಿ ಚರ್ಚೆಮಾಡಿ, ವಿಷಯಗಳನ್ನೆಲ್ಲಾ ಕ್ರೋಢೀಕರಿಸಿ, ಒಂದು ಫೈನಲ್ ಡಿಸಿಶನ್ನಿಗೆ ಬರತಕ್ಕದು, ನಮ್ಮ ದೇಶದ ದೃಷ್ಟಿಯಿಂದ, ಆಡಳಿತದೃಷ್ಟಿಯಿಂದ ಬಹಳ ಒಳ್ಳೆಯದು. ಫಾರೆಸ್ಟು, ರೆವಿನ್ಯು, ಅಗ್ರಿಕಲ್ಚರ್, ಪ್ರೆಸ್. ಪ್ರತಿಯೊಂದು ಇಲಾಖೆಯಲ್ಲಿಯೂ ಈ ಲಿಸ್ಟಿನ ಬಗ್ಗೆ ಕಾತುರತೆ ಇದೆ. ಆದ್ದರಿಂದ ನಮ್ಮ ಮುಖ್ಯಮಂತ್ರಿಗಳು ಇದಕ್ಕೆ ತೀವ್ರ ಗಮನ ಕೊಡಬೇಕೆಂದು ಕೇಳಿಕೊಂಡು, ಕುಳಿತುಕೊಳ್ಳುತ್ತೇನೆ.

11-00 A.M.

ಶ್ರೀ ಗೋಪಾಲ ಸಾಲೆನ್ಸ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಇಂದು ಹಲವಾರು ತೆರಿಗೆಗಳನ್ನು ಜನರ ಮೇಲೆ ಹಾಕಿ, ಅದನ್ನು ಕೊಡುವ ಶಕ್ತಿಯನ್ನು ಜನತೆ ಕಳೆದುಕೊಂಡಿದೆ ಎಂಬುದನ್ನು ತಿಳಿಯದೆ ರಾಜ್ಯದ ಎಲ್ಲಾ ಜನರೂ ಹಾಗೂ ಪಕ್ಷಾತೀತವಾಗಿ ಈ ಸಭೆಯ ಸದಸ್ಯರೂ ಕೂಡ ಅನೇಕ ಬಾರಿ ಸ್ಪಷ್ಟಪಡಿಸಿದ್ದು ಆಗಿದೆ. ಈಗಾಗಲೇ ಹೊರಿಸಲಾಗಿರುವಂತಹ ಕಟ್ಟಡದ ತೆರಿಗೆಯು ಒಂದು ಬಹಳ ದೊಡ್ಡ ಕಳವಳಕ್ಕೆ ಕಾರಣವಾಗಿದೆ. ಇಡೀ ರಾಜ್ಯದಲ್ಲಿ ಇದನ್ನು ವಿರೋಧ ಮಾಡುವುದಕ್ಕೆ ಸಾರ್ವಜನಿಕರು ತಯಾರಾಗುತ್ತಾ ಇದ್ದಾರೆ ಅಷ್ಟೇ ಮಾತ್ರವಲ್ಲ ರಾಜ್ಯ ಮಟ್ಟದಲ್ಲೂ ಕೂಡ ಬಲವಾದ ಚಳವಳಿಯೊಂದನ್ನು ಸಿದ್ಧಗೊಳಿಸಿ ಅದಕ್ಕಾಗಿ ಒಂದು ಕನ್‌ವೆನ್

ಷನ್‌ನ್ನು ಸಧ್ಯದಲ್ಲೇ ಕರೆಯಲಿದ್ದಾರೆ. ಹೀಗೆ ಒಂದು ದೊಡ್ಡ ಆಂಧೋಳನದ ರೂಪವಾಗಿ ಈ ತೆರಿಗೆಯನ್ನು ಜನತೆ ವಿರೋಧಿಸುತ್ತಾಇದೆ. ಅದರಲ್ಲಿ ಒಂದು ಸಾವಿರ ಚದುರ ಅಡಿಗೆ ಕೊಟ್ಟಂತಹ ರಿಯಾಯಿತಿಯಾವುದು ಇದ.- ಅದು ಸಾಧಾರಣ ಜನತೆಗೆ ನಿಷ್ಪ್ರಯೋಜನ ಎಂದು ಹೇಳಬಹುದು. ಇದು ಬಹಳ ನಿರ್ಲಕ್ಷ್ಯವಾದ ಅಂಶವಾಗುತ್ತದೆ ಸಣ್ಣಗುಡಿಸಲನ್ನು ಕಟ್ಟಿಕೊಂಡಿದ್ದವರಿಗೆ ಪ್ರಯೋಜನ ವಾಗುತ್ತದೆ. ಅವನ್ನು ಕಟ್ಟಡವೆಂದೇ ಕರೆಯಲಾಗುವುದಿಲ್ಲ. ಸಾಮಾನ್ಯವಾದ ಒಂದು ಅಚ್ಚು ಕಟ್ಟಾದ ಬಡವರ ಮನೆಗೆ ಅದು ಲಗಾವು ಆಗುವುದಿಲ್ಲ. ಆದ್ದರಿಂದ ಆ ರಿಯಾಯಿತಿಯನ್ನು ಇನ್ನೂ ಸ್ವಲ್ಪ ಹೆಚ್ಚಿಗೆ ಮಾಡಲು ಪರಿಶೀಲನೆ ಮಾಡಬೇಕು ಮತ್ತು ಹೇಳಿಕೆಗಳ ಹೆಚ್ಚುಕಡಿಮೆಯಿದ್ದಲ್ಲಿ ಕಟ್ಟು ನಿಟ್ಟಾಗಿ ಶಿಕ್ಷೆ ಮಾಡಬೇಕೆಂಬ ಶಿಕ್ಷಾರ್ಹವಾದ ಸೆಕ್ಷನ್ ಏನಿದೆ ಅದನ್ನು ಸ್ವಲ್ಪಸಡಿಲಿಸಬೇಕು ಎಂದು ಹೇಳುತ್ತೇನೆ. ಇನ್ನು ಬಹುಸಂಖ್ಯಾತ ಬಡಜನರಿಗೆ ರಿಯಾಯಿತಿ ಕೊಡುವಂತಹ ವಿಚಾರದಲ್ಲಿ ಮಾನ್ಯ ಸರ್ಕಾರದವರು ಕೂಡಲೇ ಗಮನವನ್ನುಕೊಟ್ಟು ಆಂದೋಳನ, ಚಳುವಳಿ ಮಾಡುವುದಕ್ಕೆ ಅವಕಾಶ ಕೊಡಬಾರದು. ವಿದ್ಯಾರ್ಥಿಗಳ ಚಳುವಳಿಯಲ್ಲಿ ಸರ್ಕಾರದವರು ಸೋತು ಹೋದಂತಹ ಪರಿಸ್ಥಿತಿ ಇಲ್ಲೂ ಬರಬಾರದು. ಆ ರೀತಿ ಸೋಲುವಂತಹ ಪರಿಸ್ಥಿತಿ ಬಂದು ರಾಜ್ಯಸರ್ಕಾರದವರ ಘನತೆ ಯೋಗ್ಯತೆಯನ್ನು ಕಡಿಮೆಮಾಡಿಕೊಳ್ಳುವುದಕ್ಕಿಂತ ಆ ವಿಚಾರವನ್ನು ಮುಂದಾಗಿಯೇ ಆಲೋಚನೆ ಮಾಡುವುದು ಅತ್ಯಗತ್ಯ ಎಂದು ನಾನು ಅವರನು ಕೇಳಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರವನ್ನು ಹೇಳುವುದಾದರೆ ಇಲ್ಲೂ ಕೂಡ ಜನತೆಯ ಜೀವಾಳ ವಾದ ಪ್ರಗತಿಯನ್ನು ಸಾಧಿಸಬೇಕಾದ ವ್ಯವಸ್ಥೆಗಳನ್ನು ಮಾಡಬೇಕಾಗಿದೆ, ಅವರಿಗೆ ಸಿಕ್ಕಬೇಕಾದ ಅನುಕೂಲಗಳು ಸಿಕ್ಕುವುದು ಕಷ್ಟವಾಗಿದೆ. ತಾವೇನೋ ವೈರ್‌ಸನ್ನು ಹಾಕಿದ್ದೀರಿ, ಕಂಬಗಳನ್ನು ಕೊಟ್ಟಿದ್ದೀರಿ ಆದರೆ ಮಾತ್ರ ಅದರ ನಿತ್ಯ ಉಪಯೋಗವನ್ನು ಮಾಡಿಕೊಳ್ಳಲಾರದಂತಹ ಪರಿಸ್ಥಿತಿ ಉಂಟಾಗಿದೆ, ಅದರ ಕಡೆಗೆ ಗಮನವನ್ನು ಕೊಡಬೇಕು. ಆದಷ್ಟು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಹಳ್ಳಿ ಜನರಿಗೆ ಮುಖ್ಯವಾಗಿ ರೈತರಿಗೆ ಸಿಕ್ಕುವಂತೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡೂ ಕೂಡ ಸರ್ಕಾರದ ಹಣದಿಂದ ನಡೆಯುವಂತಹ ಸಂಸ್ಥೆ. ಅಲ್ಲಿ ಹೆಗ್ಗಣಗಳು ಜಾಸ್ತಿಯಾಗಿವೆ ಎಂದು ಭಾಸ್ಕರಶೆಟ್ಟರು ಹೇಳುತ್ತಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಹೆಗ್ಗಣಗಳನ್ನು ಪತ್ತೆ ಮಾಡಬೇಕು ಬಯಲಿಗೆ ತರಬೇಕು, ಶುದ್ಧೀಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂತಹ ಬೋರ್ಡುಗಳನ್ನು ರಚನೆ ಮಾಡುವಾಗ ಅಲ್ಲಿ ಕೆಲಸ ಮಾಡುವಂತಹ ನೌಕರರಿಗೆ ನ್ಯಾಯ ಸಿಕ್ಕುವುದಿಲ್ಲ ಎಂಬ ದೂರು ಬಲವಾಗಿ ಬರುತ್ತಾ ಇದೆ. ಈಗಾಗಲೇ ಕೆಲವರು ಹೈಕೋರ್ಟಿಗೆ ರಿಟ್ ಹೋಗುತ್ತಾ ಇದ್ದಾರೆ. ಅಲ್ಲಿ ಒಂದೇ ಜಾತಿಯವರು ಡಾಮಿನೇಟ್ ಮಾಡುತ್ತಾಇದ್ದಾರೆ. ಅಕೌಂಟ್ಸ್ ಇಲಾಖೆ ತೆಗೆದುಕೊಂಡರೆ ಅಲ್ಲಿ 14 ಜನರು ಅಕೌಂಟ್ ಆಫೀಸರುಗಳು ಇದ್ದಾರೆ ಅವರೆಲ್ಲರೂ ಒಂದೇ ಕೋಮಿನವರು ಎಂದು ಹೇಳುತ್ತಾ ಇದ್ದಾರೆ, ಸತ್ಯಾಂಶ ಇದ್ದರೆ ಅದನ್ನು ಪರಿಶೀಲನೆ ಮಾಡಬೇಕು. ಮತ್ತು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಅವರಿಗೆ ಸರ್ಕಾರದವರು ಮಂಜೂರುಮಾಡಿ ಕೊಡಲಿಲ್ಲ, ಅಲ್ಲೂ ಕೂಡ ಡೈರೆಕ್ಟ್ ರಿಕ್ರೂಟ್‌ಮೆಂಟ್ ಪದ್ಧತಿ ಸರ್ಕಾರದ ಆಜ್ಞೆಪ್ರಕಾರ ಜಾರಿಯಲ್ಲಿ ಇದೆ. ಯೋಗ್ಯತೆ ಇರತಕ್ಕ ಜನರಿಗೆ ಸಿಕ್ಕಬೇಕಾದ ಸೌಲತ್ತು ಸಿಕ್ಕುತ್ತ ಇಲ್ಲ ಎಂಬ ದೂರು ಬರುತ್ತಾಇದೆ ಸ್ವಜನಪಕ್ಷಪಾತ, ಜಾತೀಯತೆ ಇದನ್ನೆಲ್ಲಾ ತಡೆಕಟ್ಟಿ ಸಮಾನವಕಾಶ ಕಲ್ಪಿಸುವಂತೆ ಇದನ್ನ ಸರಿಪಡಿಸಬೇಕು.

ಇನ್ನು ಆಡಳಿತದಲ್ಲಿ ಎಲ್ಲಿ ನೋಡಿದರೂಕೂಡ ಬಹಳ ಕೆಳಮಟ್ಟದ ಅಥವಾ ಉನ್ನತವಾದ ಅಧಿಕಾರಿಗಳಲ್ಲೂ ಕೂಡ ಅಸಮಾಧಾನ ಇದೆ, ಅವರು ತಮ್ಮ ಶ್ರಮ ಮತ್ತು ಯೋಗ್ಯತೆಗಳಿಗೆ ಗಮನ ವಿರುವುದಿಲ್ಲವೆಂದರೆ ಬಹಳ ದುಃಖ ಮತ್ತು ವೇದನೆ ಪಡುತ್ತಾ ಇದ್ದಾರೆ. ಅಂಥವರು ಅವರ ನಿತ್ಯ ಕೆಲಸಕ್ಕೆ ಮನಸ್ಸು ಕೊಡಲಿಕ್ಕೆ ಅವರಿಗಾಗುತ್ತಿರುವ ಅನ್ಯಾಯಗಳು ಹೆಚ್ಚೆಚ್ಚಾಗುತ್ತಿರುವುದರಿಂದ ಆಗಿಲ್ಲ. ಏಕೆ ಹೀಗೆ ಆಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಒಂದುಕಡೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಆಗಿಲ್ಲ ಎಂದು ಹೇಳುತ್ತಾರೆ. ಅದೂ ಅಲ್ಲದೆ ಒಳಗಿಂದ ಒಳಗೆ ತಮ್ಮವರನ್ನೇ ನೇಮಿಸುವಂತೆ ಲೋಕಲ್ ಕ್ಯಾಂಡಿಡೇಟ್ಸನ್ನು ಭರ್ತಿಮಾಡುತ್ತಾ ಇದ್ದಾರೆ. ಇದರಿಂದ ಸಾಮಾನ್ಯವಾಗಿ ಯೋಗ್ಯ ನಿಷ್ಠಾವಂತ ನೌಕರರಿಗೆ ಅನ್ಯಾಯವಾಗುತ್ತದೆ ಎಂದು ಬಹಳ ದುಃಖ ಪಡುತ್ತಾ ಇದ್ದಾರೆ ಈ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಇನ್ನು ಹಲವಾರು ರೆಕ್ರೂಟ್‌ಮೆಂಟ್ ಕಮಿಟಿ ಎಂದು ಮಾಡಿದ್ದೀರಿ. ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿ, ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿ, ಪಿ.ಎಸ್.ಸಿ. ಹೀಗೆಲ್ಲಾ ಏನೇನು ಇವೆ ಇವನ್ನು ಜನತೆ ತಿಳಿದುಕೊಳ್ಳಲಿಕ್ಕೆ ಕಷ್ಟವಾಗಿದೆ. ಸೆಕೆಂಡ್ ಡಿವಿಜನಲ್ ಕ್ಲಾರ್ಕ್ ಕೆಲಸಕ್ಕೆ ಅರ್ಜಿಹಾಕಿ ಇಂಟರವ್ಯೂವಿಗೆ ಡಿವಿಜನ್ ಲೆವಲ್‌ಗೆ ಬರಬೇಕು. ಇದಕ್ಕೆ ಬದಲಾಗಿ ಡಿಸ್ಟ್ರಿಕ್ಟ್ ಲೆವಲ್‌ನಲ್ಲೇ ಅವರ ಯೋಗ್ಯತೆ ಪರಿಶೀಲಿಸುವಂತೆ ಏಕೆ ಅವರಿಗೆ

(ಶ್ರೀ ಗೋಪಾಲ ಸಾಲೆನ್ಸ)

ಒಂದು ಸೌಕರ್ಯವನ್ನು ಒದಗಿಸಿಕೊಡಬಾರದು ? ಮಂಗಳೂರಿನವರನ್ನು ತೆಗೆದುಕೊಂಡು ಹೋಗಿ ಮೈಸೂರಿಗೆ, ಗುಲ್ಬರ್ಗಾಕ್ಕೆ ಬಿಜಾಪುರಕ್ಕೆ ಅಥವಾ ಬೆಳಗಾಂಗೆ ಹಾಕಿದರೆ ಅವರು ಸೆಕೆಂಡ್ ಡಿವಿಜನ್ ಕ್ಲಾರ್ಕ್ ಆಗಿ ಅಲ್ಲಿಗೆ ಹೋಗುವುದಾದರೂ ಹೇಗೆ ? ಅಲ್ಲಿ ಸೇರಿದರೆಂದರೆ ಅವರ ಹೆತ್ತವರನ್ನಾಗಲಿ ಕುಟುಂಬದವರನ್ನಾಗಲಿ ಮತ್ತೊಮ್ಮೆ ಕಾಣುವ ಸುಯೋಗವೆಲ್ಲ ಮತ್ತು ಹೇಗೆ ? ಇದನ್ನು ಸರ್ಕಾರದವರು ಪರಿಶೀಲನೆಮಾಡಿ ಮಾನವೀಯತೆಯ ದೃಷ್ಟಿಯಿಂದ ಅವರ ಕಷ್ಟವನ್ನು ತಪ್ಪಿಸಬೇಕೆಂದು ಸರ್ಕಾರದವರನ್ನು ಒತ್ತಾಯಿಮಾಡುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನ ಹಾಗೆ ಇನ್ನೂ ಬೇರೆಬೇರೆ ಕಾಯಿದೆ ಬಗ್ಗೆ ಬೋರ್ಡುಗಳು ಇವೆ, ಉದಾಹರಣೆಗೆ ಖಾದಿ ಬೋರ್ಡು ಇದೆ. ಅಂತಹ ಕಡೆ ಬಹಳವಾಗಿರುವ ಮೇಲೆ ವಿವರಿಸಿದಂತಹ ಭ್ರಷ್ಟಾಚಾರವನ್ನು ತೆಗೆದುಹಾಕಬೇಕಾಗಿದ್ದರೆ—ಎಲ್ಲಾ ಕಡೆಯೂ ಹೆಚ್ಚು ನಿಗಾಕೊಟ್ಟು ಶ್ರಮಪಟ್ಟು ಸೇವೆಮಾಡತಕ್ಕ ನೌಕರ ವರ್ಗದವರಿಗೆ ನೀವು ಅವರ ಜೀವನಹಿತ ಮತ್ತು ಸೌಖ್ಯವನ್ನು ನೋಡಬೇಕಾಗಿದೆ. ಪರದೇಶಗಳವರಿಂದ ಬಂದವರನ್ನು ಅನೇಕರನ್ನು ನಾನು ವಿಚಾರಿಸಿದೆ, ಅವರಿಗೆ ಸಿಕ್ಕತಕ್ಕ ಸಂಬಳ, ಅಲೋಯನ್ಸ್ ಇತರ ಸವಲತ್ತುಗಳು ಮತ್ತು ಅಲ್ಲಿ ಅವರಿಗೆ ಆಗತಕ್ಕ ಖರ್ಚು ಎಷ್ಟು ಎಂದು ಅನೇಕವೇಳೆ ವಿಚಾರಿಸಿದ್ದೆನು ಇಲ್ಲಿ ಜೀವನದ ಖರ್ಚಿಗೆ ತಿಂಗಳಿಗೆ ಎಷ್ಟು ಅವಶ್ಯವೋ ಅದಕ್ಕಿಂತ ಮೂರುಪಾಲು ಹೆಚ್ಚು ಸಂಬಳ ಅಲ್ಲಿ ಸಿಗುತ್ತದೆ ಎಂದು ಅವರು ಹೇಳುತ್ತಾ ಇದ್ದರು. ಹಾಗೆ ಏಕೆ ಮೂರು ಪಾಲು ಜಾಸ್ತಿ ಸಂಬಳ ಎಂದರೆ ಒಂದು ಪಾಲು ಅವರ ದೈನಂದಿನ ಖರ್ಚಿಗೆ, ಇನ್ನೊಂದು ಪಾಲು ಅವರ ಭವಿಷ್ಯದ ಕಷ್ಟನಿಷ್ಠೂರಗಳಿಗೆ, ಮೂರನೆಯದು ಅವರ ವಿದೇಶದಲ್ಲಿರುವ ಅವರ ಕುಟುಂಬದ ರಕ್ಷಣೆಗೆ ಎಂದು ಕೊಟ್ಟು ಅವರಿಗೆ ಮಾನಸಿಕವಾಗಿ ಯಾವ ತೊಂದರೆಯೂ ಇರಬಾರದು ಎಂಬ ದೃಷ್ಟಿಯಿಂದ ನೋಡಿಕೊಳ್ಳುತಾ ಇದ್ದಾರೆ ಎಂದು ತಿಳಿಸಿದ್ದರು. ಆ ರೀತಿ ಮಾಡಿದ್ದೇ ಆದರೆ ಆಡಳಿತವು ದಕ್ಷತೆಯಿಂದ ನಡೆಯುತ್ತದೆ, ಯಾವ ಅಪಾದನೆಗೂ ಕೂಡ ಅವಕಾಶವಿರುವುದಿಲ್ಲ ಎಂದು ಹೇಳುತ್ತಾರೆ. ಅದೇ ತತ್ವವನ್ನು ನಮ್ಮ ಸರ್ಕಾರದವರೂ ಏಕೆ ಯೋಚನೆ ಮಾಡಬಾರದು ? ಸ್ವತಂತ್ರ ಸುಖವೆಂಬುದು ಮತ್ತಾರಿಗೆ ? ಅದಕ್ಕೆ ಹಣ ಹೆಚ್ಚಾಗಿ ಬೇಕಾಗುತ್ತದೆ ಎಂದರೆ ಇವತ್ತು ಇರತಕ್ಕ ವಿಶಾಲವಾದ ಮಂತ್ರಿಮಂಡಲವನ್ನು ಕಡಿಮೆಮಾಡಿ ಅದರಿಂದ 10-13 ಲಕ್ಷ ರೂಪಾಯಿಗಳ ಉಳಿತಾಯವಾಗುತ್ತದೆ. ಆ ರೀತಿ ಏಕೆ ಮಾಡಬಾರದು ಎಂದು ತಮ್ಮನ್ನು ಕೇಳುತ್ತೇನೆ.

ಇನ್ನು ಕೆಲವು ಇಲಾಖೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು ನೌಕರಿಯಿಂದ ಹೊರಗೆ ಬರುತ್ತಾರೆ. ದೋಷಾರೋಪಣೆಗಳು ಇನ್ನೂ ಇತ್ಯರ್ಥವಾಗಿರುವುದಿಲ್ಲ, ಅಥವಾ ಅವರು ಏನು ಮಾಡಿದರು ಎಂಬುದು ಯಾವುದೂ ಗೊತ್ತಿರುವುದಿಲ್ಲ, ಅಥವಾ ಅದು ಇನ್ನೂ ತನಿಖೆ ಆಗುವ ಮಟ್ಟದಲ್ಲಿ ಇರುತ್ತದೆ, ಅಂತಹ ಸಂದರ್ಭಗಳಲ್ಲಿ ಯಾವ ಅಧಿಕಾರಿಗಳೇ ಆಗಲಿ ರಾಜೀನಾಮೆಕೊಟ್ಟರೆ ಅದನ್ನು ಸ್ವೀಕರಿಸಬಾರದು ಎಂದು ಹೇಳುತ್ತೇನೆ. ಈಗ ಆ ರೀತಿ ಹಲವು ರಾಜಿನಾಮೆ ಸ್ವೀಕರಿಸಿದ್ದೀರಿ, ಉದಾಹರಣೆಗೆ ಶರಾವತಿಯಲ್ಲಿ ಚೀಫ್ ಇಂಜನಿಯರು ಆಗಿದ್ದವರ ರಾಜೀನಾಮೆಯನ್ನು ಹೇಗೆ ಸ್ವೀಕಾರ ಮಾಡಿದಿರಿ ? ಎಂಬುದು ಒಂದು ದೊಡ್ಡ ವಿಚಾರ. ಹಾಗೆ ಯಾರ ಮೇಲೆ ಅಪಾದನೆ ಮತ್ತು ದೂಷಣೆ ಇದೆ, ತನಿಖೆಯಾಗುತ್ತಾ ಇದೆ ಅಂತಹವರು ರಾಜೀನಾಮೆಕೊಟ್ಟರೆ ಅದನ್ನು ಅವರು ಅನಾಚಾರ ಭ್ರಷ್ಟಾಚಾರಗಳಿಂದ ತಪ್ಪಿತಸ್ಥರಲ್ಲವೆಂದು ತೀರ್ಮಾನವಾಗುವತನಕ ಅಂಗೀಕಾರ ಮಾಡಬಾರದು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಸಣ್ಣ ನೌಕರರ ವಿಚಾರದಲ್ಲಿ ನೋಡುವುದಾದರೆ ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲೇ ಕೆಲವು ಕಡೆ 3-4 ವರ್ಷ ಕೆಲಸಮಾಡಿದ್ದರೂ ಕೂಡ ಇನ್ನೂ ಸರ್ವೀಸ್ ರಿಜಿಸ್ಟರ್‌ಗಳನ್ನು ತೆಗೆದಿಲ್ಲ ಮುಖ್ಯ ದಲಿತವರ್ಗದ ನೌಕರರಿಗೆ ಈರೀತಿ ತೊಂದರೆ ಮತ್ತು ಉಪದ್ರವಕೊಟ್ಟು ಎಲ್ಲಾ ಅನ್ಯಾಯವಾಗುತಾ ಇದೆ. ಮಂಗಳೂರಿನಲ್ಲಿರುವ ಮಹಿಳಾಕೇಂದ್ರವೇ ಇದಕ್ಕೆ ನಿದರ್ಶನ. ಇನ್ನು ಕೆಲವು ಕಡೆ ಸಣ್ಣ ವಿಚಾರಗಳಿಗೆ ಅವರನ್ನು ಸಸ್ಪೆಂಡ್‌ಮಾಡಿ ತನಿಖೆಕೂಡಾ ನಡೆಸದೆ ಒಂದೂವರೆ ವರ್ಷದಿಂದ ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದೀರಿ. ಇದು ಏನು ಅನ್ಯಾಯ ? ಹೆಗ್ಗಡದೇವನ ಕೋಟೆಯಲ್ಲಿ ಮೂರು ಜನರನ್ನು ಷೋಕಾಸ್ ನೋಟಿಸು ಇಲ್ಲದೆ ಒಂದೂವರೆ ವರ್ಷದಿಂದ ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದೀರಿ, 6 ತಿಂಗಳ ಮೇಲೆ ತನಿಖೆ ಪೆಂಡಿಂಗ್ ಇಡಬಾರದು ಮತ್ತು ತನಿಖೆ ಪೂರ್ತಿ ಮಾಡಬೇಕೆಂದು ನಿಯಮ ಇದ್ದರೂ ಈ ರೀತಿ ಮಾಡುವುದು ಇದು ಏನು ಅನ್ಯಾಯ ಎಂದು ಕೇಳುತ್ತೇನೆ. ಅಲ್ಲಿಯ ಜಿಲ್ಲಾ ಡೆಪ್ಯೂಟಿ ಕಮೀಷನರನ್ನು ಕೂಡಲೇ ವಿಚಾರಣೆಗೆ ಗುರಿಪಡಿಸಬೇಕು.

ಕೇರಳದಲ್ಲಿ ಸರಕಾರಿ ನೌಕರಿಯ ಹಲವು ಮಂದಿ ಕನ್ನಡಿಗರು ಬಹಳ ಕಷ್ಟಪಡುತ್ತಿದ್ದಾರೆ. ಅವರ ಕುಟುಂಬ ಮತ್ತು ಮಕ್ಕಳು ಈ ರಾಜ್ಯದಲ್ಲಿದ್ದು ಅವರು ಇಲ್ಲಿಗೆ ಬರಬೇಕೆಂದು ಬಹಳವಾಗಿ ಕೇಳಿಕೊಳ್ಳುತ್ತಿದ್ದಾರೆ. ಕೇರಳ ಸರಕಾರದವರು ಬಿಟ್ಟುಕೊಡಲು ಒಪ್ಪಿದ್ದಾರೆ. ಅಂಥವರ ವಿಚಾರದಲ್ಲಿ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಇವತ್ತಿನವರೆಗೆ ಕಾರ್ಯಗತ ಏನೂ ಆಗಿಲ್ಲ. ಕೆಲವರು ಲೋಯರ್ ಡಿವಿಜನ್ ಕ್ಲಾರ್ಕುಗಳ ಮಟ್ಟದವರೇನಿದ್ದಾರೆ ಅವರಲ್ಲಿ ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ಇದ್ದಾರೆ, ಒಬ್ಬರು ಮಂಗಳೂರಿನಲ್ಲಿದ್ದರೆ ಇನ್ನೊಬ್ಬರು ತಿರುವಾಂಕೂರಿನಲ್ಲಿದ್ದಾರೆ. ಇವರಿಗೆ ರಕ್ಷಣೆ ಕೊಡದೆ ಹೀಗಾದರೆ ಹೇಗೆ ? ಕರ್ಣಾಟಕವಾದುದೇಕೆ ! ಏಕೆ ಅಂಥಹ ಬಡ ಜೀವಿಗಳಿಗೆ ಅವರು ಒಂದೇ ಕಡೆ ಇರಲು ಅವಕಾಶ ಕೊಡಬಾರದು ! ಈ ವಿಚಾರಕ್ಕೆ ಕೂಡಲೆ ಗಮನಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್.. ಎಂ. ಗುರೆಡ್ಡಿ (ಮುದ್ದೇಬಿಹಾಳ).—ನಮ್ಮ ಮುಂದಿರುವ ಬೇಡಿಕೆಗಳಿಗೆ ಅನುಮೋದನೆಯನ್ನು ನೀಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ತ್ವರಿತವಾಗಿ ನಡೆಯುತ್ತಿವೆ. ಆ ಕಾರ್ಯಗಳು ನಿಜವಾಗಿಯೂ ಕಾರ್ಯರೂಪಕ್ಕೆ ಬರಬೇಕಾದರೆ ಆಡಳಿತ ಯಂತ್ರ ಚೆನ್ನಾಗಿರಬೇಕು. ಈಗ ಆಡಳಿತದಲ್ಲಿ ಅತೃಪ್ತಿ, ಅಸಮಾಧಾನ ತಲೆದೋರುತ್ತಿದೆ. ಇನ್ನೂ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆಗಿಲ್ಲ, ಪ್ರತಿಯೊಂದು ಇಲಾಖೆಯಲ್ಲೂ ಒಂದು ಆಶಾದಾಯಕವಾದ ಚಿತ್ರವಿಲ್ಲ ಎಂದು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ತಿಳಿಸಿದ್ದಾರೆ. ಇದರ ಸಲುವಾಗಿ ವಿಶೇಷ ಹೇಳದೆ ನಡೆದಿರುವ ಸಂಗತಿಯನ್ನು ವಿನಂತಿಮಾಡಿಕೊಳ್ಳುತ್ತೇನೆ. ಎಂಟು ವರ್ಷಗಳು ಕಳೆದರೂ ಕೂಡ ಪಟ್ಟಿ ತಯಾರಾಗಿಲ್ಲವಾದ್ದರಿಂದ ಅಧಿಕಾರಿಗಳಲ್ಲಿ ಕೆಲಸ ಮಾಡುವಂಥ ಹುಮ್ಮಸ್ಸು ಕುಗ್ಗಿ ಅಭಿವೃದ್ಧಿ ಕಾರ್ಯಗಳ ಎಷ್ಟು ತೀವ್ರವಾಗಿ ಚೆನ್ನಾಗಿ ಆಗಬೇಕೆಂಬ ಅಪೇಕ್ಷೆಯಿತ್ತೋ ಅದರಂತೆ ಆಗುವುದಕ್ಕೆ ಸಾಧ್ಯವಿಲ್ಲವಾಗಿದೆ ಎಂದು ತಿಳಿಸಬಿಚ್ಛಿಸುತ್ತೇನೆ. ಇನ್ನೊಂದು ಆಡಳಿತ ಸುಗಮವಾಗಿದೆಯೇ, ಇಲ್ಲವೇ ಎಂದು ತಿಳಿಯಬೇಕಾದರೆ ಜನಸಾಮಾನ್ಯರಲ್ಲಿ ಆಡಳಿತ ಸಂಬಂಧ ಅವರ ಭಾವನೆ ಹೇಗಿದೆಯೆಂಬುದನ್ನು ತಿಳಿದುಕೊಳ್ಳಬೇಕು. ಹಳ್ಳಿಯಿಂದ ಬೆಂಗಳೂರು ಸೆಕ್ರೆಟೇರಿಯಟ್ಟಿನವರೆಗೆ ಯಾರನ್ನು ಕೇಳಿದರೂ ಆಡಳಿತ ಸರಿಯಾಗಿಲ್ಲ, ದಕ್ಷತೆಯಿಂದ ಕೂಡಿದ ಆಡಳಿತ ಬೇಕು, ಪ್ರತಿಯೊಂದಕ್ಕೂ ವೈಯಕ್ತಿಕವಾಗಿ ಹೋಗಿದ್ದರೆ ಯಾವ ಕೆಲಸವೂ ಆಗುವುದಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಆದಕಾರಣ ಈ ನ್ಯೂನತೆಯನ್ನು ಹೋಗಲಾಡಿಸಲು ನಮ್ಮ ನಾಯಕರು ವಿಶ್ವ ಪ್ರಯತ್ನ ಮಾಡಿ ಕೆಲವು ಸಮಯ, ತಮ್ಮ ಎಲ್ಲ ಕೆಲಸವನ್ನೂ ಬದಿಗೊತ್ತಿ ಆಡಳಿತ ಸುಧಾರಿಸುವುದಕ್ಕೆ ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನೀರಾವರಿಯ ಸಲುವಾಗಿ ಹೇಳುವುದಾದರೆ ಕೃಷ್ಣ ಮೇಲುದಂಡೆ ಯೋಜನೆ, ಹಾರಂಗಿ ಯೋಜನೆ, ಕಂಬದಕಡ ಯೋಜನೆ ಮುಂತಾದುವನ್ನೆಲ್ಲಾ ಕಾರ್ಯರೂಪಕ್ಕೆ ತರಬೇಕಾದರೆ ಹಣ ಅವಶ್ಯಕವಾಗಿ ಬೇಕು. ಅದನ್ನು ಎಲ್ಲಿಂದ ತರಬೇಕೆಂಬುದೇ ಮೂಲವಾದ ಪ್ರಶ್ನೆ. ಇದರ ಜೊತೆಗೆ ಕೃಷ್ಣ ಮೇಲುದಂಡೆ ಯೋಜನೆಯನ್ನು ಮಾಡುವಾಗ ಆಲಮಟ್ಟಿ ಮತ್ತು ನಾರಾಯಣಪುರದ ಎರಡು ಯೋಜನೆಗಳನ್ನೂ ಮಾಡೇ ತೀರುತ್ತೇವೆಂದು ನಮ್ಮ ನಾಯಕರು ಹೇಳಿದ್ದರು. ಅದರಲ್ಲಿ ನಮ್ಮ ಸಂಶಯವೇನೂ ಇಲ್ಲ. ಆದರೆ ಈಗ ಮನೆಯಲ್ಲಿ ನಡೆದ ಚರ್ಚೆ, ಹೊರಗಡೆ ನಡೆಯುತ್ತಿರುವ ಚರ್ಚೆ ಮತ್ತು ಕೇಂದ್ರ ಸರ್ಕಾರ ಆಗಾಗ್ಯೆ ಕೊಡುವ ಹೇಳಿಕೆ ನೋಡಿದರೆ ನಮಗೆ ಸಂಶಯ ಬರುತ್ತಿದೆ. ಕೇಂದ್ರ ಸರ್ಕಾರದವರು ನಮಗೆ 600 ಟಿ.ಎಂ.ಸಿ.ಎಫ್.ಟಿ. ನೀರನ್ನು ದೊರಕಿಸಿದ್ದಾರೆ. ಈಗಾಗಲೇ ಕೆಲವರು ಹೇಳಿದಹಾಗೆ 478 ಖರ್ಚಾಗಿ ಕೇವಲ 122 ಉಳಿದಿದೆ ಅಥವಾ 111 ಉಳಿದಿದೆ ಎಂದು ಗೊತ್ತಾಗುತ್ತದೆ. ಇದನ್ನು ನೋಡಿದರೆ ನಾರಾಯಣಪುರ ಮತ್ತು ಆಲಮಟ್ಟಿ ಯೋಜನೆಗಳೆರಡನ್ನೂ ತೆಗೆದುಕೊಳ್ಳಲು ಸಾಧ್ಯವೆ ಎಂಬ ಸಂಶಯ ಬರುತ್ತಿದೆ. ಇದು ನಮ್ಮ ಬೇಡಿಕೆಗನುಸಾರವಾಗಿದೆಯೆ ಎಂದು ಪ್ರಶ್ನೆ ಮಾಡುತ್ತೇನೆ. ನಮ್ಮ ನಾಯಕರು ನ್ಯಾಯವಾಗಿ ನಮಗೆ ದೊರೆಯಬೇಕಾದ ಪಾಲನ್ನು ದೊರಕಿಸುತ್ತೇವೆಂದು ಹೇಳುತ್ತಿದ್ದಾರೆ. ಅದರ ಸಲುವಾಗಿ ಯಾವ ಹೆಜ್ಜೆ ಇಟ್ಟಿದ್ದಾರೆ, ಎಷ್ಟು ಪ್ರಗತಿಯಾಗಿದೆ ಎಂದು ಹೇಳಿಕೆ ಇವತ್ತು ಕೊಟ್ಟು ನಮ್ಮ ಸಂಶಯ ನಿವಾರಣೆ ಮಾಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇನ್ನೊಂದು—ನಾರಾಯಣಪುರ ಮತ್ತು ಆಲಮಟ್ಟಿ ಯೋಜನೆಗಳ ಪ್ರಶ್ನೆ ರಾಜ್ಯದಲ್ಲಿ ಅಸಂತೋಷವನ್ನುಂಟುಮಾಡಿದೆ. ಈಗ ನಾರಾಯಣಪುರ ಯೋಜನೆಗೆ ಕ್ಲಿಯರೆನ್ಸ್ ಸಿಕ್ಕಿರುವಾಗ ಆಲಮಟ್ಟಿ ಯೋಜನೆಗೆ ಕ್ಲಿಯರೆನ್ಸ್ ಸಿಕ್ಕಿರುವುದಿಲ್ಲ ! ಆಲಮಟ್ಟಿ ಯೋಜನೆಗೆ ಅಂದಾಜು ವಗೈರೆ ನಮ್ಮ ಸರ್ಕಾರ ಮಾಡಿ ಕಳುಹಿಸಲಿಲ್ಲವೇ ! ಕೇವಲ ನಾರಾಯಣಪುರ ಯೋಜನೆಗೆ ಮಾತ್ರ ಕಳುಹಿಸಿದ್ದರೇ ! ಆಲಮಟ್ಟಿ ಯೋಜನೆಯಾಗುತ್ತದೆಯೇ ! ಈಗ ಬಡ್ಜೆಟ್ಟಿನಲ್ಲಿ 1964-65ನೆಯ ಸಾಲಿಗೆ ಇದಕ್ಕಾಗಿ 1-2 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸುವುದಾಗಿ ಜತ್ತಿಯವರು ಹೇಳುತ್ತಿದ್ದಾರೆ. ಈ ಎರಡು ಡ್ಯಾಮುಗಳಿಗೂ ಕೂಡಿ 120 ಕೋಟಿ ರೂಪಾಯಿಗಳ ಅಂದಾಜಾಗಿದೆ. ಅದು 200 ಕೋಟಿಯವರೆಗೂ ಹೋಗು,

(ಶ್ರೀ ಎಸ್. ಎಂ. ಗುರೆಡ್ಡಿ)

ಬಹುದು. ಪ್ರತಿ ವರ್ಷ 1–2 ಕೋಟಿ ಕೊಡುತ್ತಾ ಬಂದರೆ ಈ ಕೆಲಸ ಮುಗಿಯಲು ನೂರು ವರ್ಷ ಬೇಕು. ಹೀಗೆ ಹಣ ಒದಗಿಸುತ್ತ ಹೋದರೆ ಯಾವ ಯೋಜನೆಗಳೂ ಸಂಪೂರ್ಣ ತೀವ್ರ ಮುಗಿಯುವುದಿಲ್ಲ. ಇನ್ನು ಕೃಷ್ಣ ಮೇಲ್ದಂಡೆ ಯೋಜನೆಯಲ್ಲದೆ ಬೇರೆ ಯೋಜನೆಗಳಿವೆ; ಮಧ್ಯಮ ತರಗತಿಯ ಯೋಜನೆಗಳಿವೆ. ಅವುಗಳ ಕಾರ್ಯ ಸಾಧಿಸುವುದಕ್ಕೆ ನಮಗೆ ಶಕ್ತಿಯಿದೆಯೇ ಹೇಗೆ ಎಂಬುದನ್ನು ತಿಳಿಸಬೇಕು. ಇನ್ನೊಂದು ಪ್ರಶ್ನೆ—ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಹಣದ ಸಲುವಾಗಿ ಯಾವ ತೀರ್ಮಾನ ಮಾಡಿದ್ದಾರೆ? ನಮಗೆ ಕೇದ್ರದವರು 1964–65ಕ್ಕೆ ಕೇವಲ ಆರು ಕೋಟಿಯನ್ನು ಕೊಡುತ್ತಿದ್ದಾರೆ. ಅದೇ ನಮ್ಮ ನೆರೆಯ ರಾಜ್ಯವಾದ ಆಂಧ್ರಕ್ಕೆ 12 ಕೋಟಿ ಕೊಟ್ಟರು. ಈ ಮಲತಾಯಿ ಧೋರಣೆಯೇಕೆ ? ಮೈಸೂರು ನೀರಾವರಿಯಲ್ಲಿ ಹಿಂದುಳಿದ ಪ್ರದೇಶ; ಕೇವಲ ಶೇಕಡ 7ರಷ್ಟು ನೀರಾವರಿ ಪಡೆದಿದೆ. ಆಂಧ್ರದಲ್ಲಿ ಶೇಕಡ 27, ಮದ್ರಾಸಿನಲ್ಲಿ 47 ನೀರಾವರಿಯಿದ್ದರೂ ಅಲ್ಲಿಗೆ ನೀರಾವರಿ ಸಲುವಾಗಿ ಜಾಸ್ತಿ ಕೊಡುವುದು, ನಮಗೆ ಕಡಮೆ ಕೊಡುವುದು ಹೀಗೆ ಮಾಡುವುದಕ್ಕೆ ಕಾರಣವೇನು ? ಇದನ್ನು ಪರಿಶೀಲಿಸಬೇಕು. ಈ ರಾಜ್ಯದ ಆಗುಹೋಗುಗಳನ್ನು ನೋಡಿಕೊಳ್ಳಲು, ರಾಜ್ಯಕ್ಕೆ ಬರಬೇಕಾದ ಹಣ ಮುಂತಾದವುಗಳಲ್ಲಿ ಸರಿಯಾದ ಪಾಲು ಪಡೆಯಲು ಮಂತ್ರಿಗಳು ದೆಹಲಿಯಲ್ಲಿ ಕುಳಿತು ರಾಜ್ಯಕ್ಕೆ ಬೇಕಾದ ಹಣದ ಸೌಕರ್ಯಗಳನ್ನೊದಗಿಸಿಕೊಳ್ಳಲು ಸತತ ಪ್ರಯತ್ನಪಡಬೇಕು. ನಾಯಕರಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆ, ಈ ಅವಕಾಶ ಕಳೆದುಕೊಂಡರೆ ಮುಂದೆ ನಮಗೆ ನ್ಯಾಯವಾಗಿ ಬರಬೇಕಾದ್ದನ್ನು ಪಡೆಯಲು ಬಹಳ ತೊಂದರೆಯಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಂಡು ನಮ್ಮ ನಾಯಕರು ನಾನು ಹೇಳಿದ ಸಲಹೆಯನ್ನು ಕಾರ್ಯರೂಪಕ್ಕೆ ತರುತ್ತಾರೆಂದು ನಂಬಿದ್ದೇವೆ.

ಇನ್ನು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಒಂದೆರಡು ಮಾತನ್ನು ಹೇಳುತ್ತೇನೆ—ಕಳೆದಸಲ ಮುಖ್ಯ ಮಂತ್ರಿಗಳು ಬಿಜಾಪುರ ಜಿಲ್ಲೆಯ ಜನರ ಮುಂದೆ ಒಂದು ಆಶಾದಾಯಕವಾದ ಹೇಳಿಕೆ ಕೊಟ್ಟಿದ್ದರು. ಆ ಜಿಲ್ಲೆಗೆ 1963ರಲ್ಲಿ ಅಥವ 1964ರಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದೂ, ಸುಗ್ಗಿ ಕಾಲದಲ್ಲಿ ಪೋಲ್ಸ್ ಹಾಕುವುದಕ್ಕಾಗುವುದಿಲ್ಲ, ಸುಗ್ಗಿಯಾದಮೇಲೆ ಬೇಸಗೆಯಲ್ಲಿ ಹಾಕುತ್ತೇವೆ ಎಂದು ಹೇಳಿದ್ದರು. ಆದರೆ ಇನ್ನೂ ಆ ಬಗ್ಗೆ ಯಾವ ಕಾರ್ಯವೂ ನಡೆದ ಹಾಗೆ ಕಾಣುವುದಿಲ್ಲ. ಶರಾವತಿಯಿಂದ ನೇರವಾಗಿ ಮೊದಲು ಬೆಂಗಳೂರಿಗೆ ಒದಗಿಸಿ ಅಲ್ಲಿನ ಅವಶ್ಯಕತೆಯನ್ನು ಪೂರೈಸಿ ಅನಂತರ ಬಿಜಾಪುರ ಮತ್ತು ಇತರ ಭಾಗಗಳಿಗೆ ಕೊಡುತ್ತಾರೆಂದು ಹೇಳುತ್ತಿದ್ದಾರೆ. ಅವಶ್ಯಕತೆ ಇದ್ದರೆ ಅಲ್ಲಿಗೆ ಕೊಡಲಿ. ಆದರೆ ಬಿಜಾಪುರ ಜಿಲ್ಲೆ ನೀರಿನ ಬರಗಾಲ, ಪವರ್‌ನ ಬರಗಾಲ ಮತ್ತು ಅನೇಕ ಬರಗಾಲಗಳಿಗೆ ತುತ್ತಾಗುತ್ತಿರುವುದರಿಂದ ಅಲ್ಲಿಗೆ ಹೆಚ್ಚಿನ ಗಮನಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. P. KADAM (Karwar).—Sir, I will not dilate upon the points referred to by the other Hon'ble Members.

Even though some sums allotted were slashed, the amount allotted for major and minor irrigation schemes were directed to be utilised to the fullest extent by the Government of India because they help the grow more food campaign which is so vital for the economy of the country and for stopping the vast import of foodgrains from America and other countries. I would like to know how many works under major and minor irrigation have been taken up in the North Kanara District and particularly in the Karwar, Supa and Haliyal taluks. I have put questions in this behalf on the floor of this House to which the reply given was that something is being done. Even the Hon'ble the Chief Minister said pointing his fingers towards his heart, "Have faith in me." I have been approaching the Executive Engineers concerned for the last so many years and every time I approach them they say that something will be done. But till today to my knowledge not a single work has been taken up in any of these three taluks of Karwar, Supa and Haliyal. As regards the two schemes proposed to be taken up in Supa Taluka, till the middle of last month, nothing has been done.

About transfer of officers, the A.G.R. Committee has stated that the officers must not be frequently transferred because it involves huge delay and loss of an experienced officer to the area concerned. I pointed out to the Minister concerned last year that the report has made a specific reference to the District of North Kanara where nearly 8 Deputy Commissioners have been transferred after the Re-organisation. The Hon'ble Finance Minister, Sri Jatti then told me that the Government has taken a decision not to transfer district officers within a couple of years but within 15 days of the assurance, the Deputy Commissioner of North Kanara was transferred even though he had not completed nine months. The topographical and actual conditions of North Kanara require great experience to carry out the work and an officer takes about 9 to 10 months to grasp the problems of the district and to cary on the administration in the intrest of the public. I want to ask specifically whether the assurance given on the floor of the House has any sanctity. Why are the officers so frequently transferred. By such frequent transfers, Government suffers a huge loss by way of T.A. and so on and that too when the State is facing financial stringency. Therefore, I propose in all seriousness that the expenses incurred by way of T.A., etc., must be deducted from the allowances accumulated by the ministers.

About transfer of certain officers to certain particular areas, this matter deserves certain consideration. The officers pertaining to certain casts, even though they are transferred to particular areas, come here with a good deal of pomp and say, 'I am going to get my transfer cancelled' and within 10 days they return to the place and say, "I have got my transfer cancelled". Why this particular attitude towards officers of particular castes? Officers who have representation in the Cabinet or who have some Godfathers here will get some good areas. There are several minor castes which have no representation in the Cabinet? What will be their fate? Let there be no benevolent assurances in this behalf. If no justice can be meted out, let there be particular areas marked out for these officers who have no representation in the Cabinet. Let them not talk about democratic justice and other high-sounding things. With these observations, I conclude my speach.

ಶ್ರೀಮತಿ ನಾಗಮ್ಮ (ಕಲ್‌ಮಾಲಾ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಮಂಡಿಸಿರುವ ಡಿಮ್ಯಾಂಡುಗಳ ಮೇಲೆ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ಇಚ್ಛಿಸುತ್ತೇನೆ.

ನಮ್ಮ ಸರಕಾರ ಬೇಕಾದಷ್ಟು ದುಡ್ಡು ಖರ್ಚು ಮಾಡಿ ದೊಡ್ಡ ದೊಡ್ಡ ಡ್ಯಾಂಗಳು, ಬಾವಿಗಳು ಎಂದು ಬೇಕಾದಷ್ಟು ಮಾಡಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿಯೂ ಮಾಡಿದ್ದಾರೆ, ಸೀನಿಯಾರಿಟಿ ಪ್ರಕಾರ ನಮ್ಮ ರಾಜ್ಯದ ಎಲ್ಲ ಜನರಿಗೂ ಪ್ರಮೋಷನ್ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಅಧಿಕಾರಿಗಳನ್ನು ಟ್ರಾನ್ಸ್‌ಫರು ಮಾಡಬೇಕಾದರೆ ಒಂದು, ಎರಡು ವರ್ಷ, ಆರುತಿಂಗಳಿಗೊಮ್ಮೆ ಎಂದು ಮಾಡುತ್ತಿರುತ್ತಾರೆ, ಹೀಗೆಲ್ಲಾ ಮಾಡುವುದು ಚನ್ನಾಗಿರುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಕೊನೆಯ ಪಕ್ಷ ಮೂರು ನಾಲ್ಕು ವರ್ಷ ಕೆಲಸ ಮಾಡಿರುವ ಅಧಿಕಾರಿಗಳನ್ನು ಮಾತ್ರ ಟ್ರಾನ್ಸ್‌ಫರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ. ಇಲ್ಲಿ ನಮ್ಮ ವಿರೋಧಪಕ್ಷದ ನಾಯಕರು ಆಗಾಗ್ಗೆ ಇದರ ಬಗ್ಗೆ ಮಾಡುತ್ತಿರುವ ಟೀಕೆಗಳನ್ನು ಕೇಳುತ್ತಿರಬಹುದು. ಇದನ್ನು ತಪ್ಪಿಸಬೇಕಾದರೆ ಈ ರೀತಿ ಟ್ರಾನ್ಸ್‌ಫರುಗಳನ್ನು ಮಾಡುವುದು ಸರಿಯಾಗಿರುತ್ತದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ರೈತರ ಬಗ್ಗೆ ಹೇಳಬೇಕಾದರೆ ನಮ್ಮ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಹಳ ಬಡವರಿದ್ದಾರೆ. ಅವರಿಗೆ ಜಮೀನುಗಳನ್ನು ಕೊಡಲು ಸಹಾಯ ಮಾಡಬೇಕು ಮತ್ತು ಇನ್ನಿತರ ಎಲ್ಲ ಸಹಾಯಗಳನ್ನೂ ಮಾಡಿಕೊಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ.

(ಶ್ರೀಮತಿ ನಾಗಮ್ಮ)

ಇನ್ನು ನಮ್ಮ ಆಫೀಸುಗಳಲ್ಲಿ ಕಾಗದದ ಫೈಲುಗಳು ಸರಿಯಾಗಿ ಓಡಾಡುತ್ತಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಕಾಶೀಮಠ ರವರು ಹೇಳಿದಂತೆ ನಾನೂ ಅದನ್ನು ಒಪ್ಪುತ್ತೇನೆ. ಫೈಲು ಗಳು ಯಾವ ಟೇಬಲ್ಲಿನ ಮೇಲೆ ಇರುತ್ತವೋ ಅಲ್ಲಿಯೇ ಇರುತ್ತವೆ. ರೈತರು ಊರುಗಳಿಂದ ಎಷ್ಟೋ ವೇಳೆ ಬಂದು ಅಧಿಕಾರಿಗಳನ್ನು ಕಂಡರೂ ಅವರ ಕೆಲಸ ಆಗುತ್ತದೆ, ಇಲ್ಲ ಎನ್ನುವುದಕ್ಕೆ ಬದಲನ್ನೇ ಹೇಳ ವುದಿಲ್ಲ. ಅವರುಗಳು ಕಳಕಳಿಯಿಂದ ಸರಕಾರದಲ್ಲಿ ಕೇಳುವುದು ತಮ್ಮ ಕೆಲಸಗಳು ಬೇಗನೆ ಆಗಬೇಕು ಎನ್ನುವುದು. ಆದರೆ ಅದಕ್ಕಾಗಿ ಎಂ.ಎಲ್.ಎ. ರಂತಹವರನ್ನೂ ಕರೆದುಕೊಂಡು ಹೋದರೂ ಫೈಲುಗಳು ಅಲ್ಲಿಂದ ಕದಲುವುದೇಇಲ್ಲ. ಹೀಗಾದರೆ ರೈತರಿಗೆ ಬಹಳ ತೊಂದರೆ ಯಾಗುತ್ತದೆ. ಆದುದರಿಂದ 19 ಜಿಲ್ಲೆಗಳಲ್ಲಿರುವ ಜಿಲ್ಲಾಧಿಕಾರಿಗಳಿಗೂ ಇದರ ಬಗ್ಗೆ ಸರಿಯಾದ ತಿಳುವಳಿಕೆ ಕೊಡಬೇಕೆಂದು ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾವ ಡಿಪಾರ್ಟ್ ಮೆಂಟಿನಲ್ಲಾದರೂ ಕೂಡ ಇಷ್ಟು ದಿನಗಳ ಮೇಲೆ ಫೈಲುಗಳು ಉಳಿಯಬಾರದು ಎನ್ನುವಂತೆ ಕಟ್ಟು ನಿಟ್ಟಾಗಿ ಹೇಳಿದರೆ ಆಗ ಕೆಲಸಗಳು ಉತ್ತಮವಾಗಿ ನಡೆಯಲು ಅನುಕೂಲವಾಗುತ್ತದೆ. ಆ ರೀತಿ ಆದೇಶ ಕೊಡಬೇಕೆಂದು ಇಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮಂತ್ರಿಮಂಡಲ ದಲ್ಲಿರುವ ಎಲ್ಲ ಮಂತ್ರಿಗಳನ್ನೂ ಕರೆದು 19 ಜಿಲ್ಲೆಗಳ ಕಡೆಯಿಂದ ಬಂದಿರುವ ಎಲ್ಲ ಎಂ.ಎಲ್.ಎ. ಗಳು ಏನೇನು ಕೆಲಸಗಳು ಆಗಬೇಕೆಂದು ಹೇಳುತ್ತಾರೋ ಅವನ್ನೆಲ್ಲಾ ಪರಿಶೀಲನೆ ಮಾಡಿ ಅದರ ಬಗ್ಗೆ ಸರಿಯಾದ ನಿಗಾ ಕೊಡಬೇಕೆಂದು ಹೇಳಬೇಕು ಎಂದು ನಾನು ಇಲ್ಲಿ ಸೂಚನೆ ಮಾಡುತ್ತೇನೆ. ಮತ್ತು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಆಲಮಟ್ಟಿ ಹಾಗೂ ನಾರಾಯಣಪುರ ಅಣೆಕಟ್ಟೆ ಗಳನ್ನು ಆದಷ್ಟು ಬೇಗನೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

11-30 A.M.

Sri N. O. SAMAJI (Belgaum-II)—[Spoke in Marathi].

† ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ನೀರಾವರಿ ವಿದ್ಯುಚ್ಛಕ್ತಿ ಮತ್ತು ಸಾಮಾನ್ಯ ಆಡಳಿತ ಇವುಗಳ ಬೇಡಿಕೆಯನ್ನು ಅನುಮೋದಿಸುತ್ತಾ ಬೆಂಬಲ ನೀಡುತ್ತ ನಮ್ಮ ಒಂದು ಭಾಗಕ್ಕೆ ಅನ್ವಯಿಸತಕ್ಕಂಥ ಮಲಪ್ರಭಾ ಯೋಜನೆಯ ಬಗ್ಗೆ ಈ ಮಾನ್ಯ ಸಭೆಯ ಮುಂದೆ ಒಂದೆರಡು ವಿಷಯಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಮೊಟ್ಟ ಮೊದಲನೆಯ ದಾಗಿ ಮುಂಬೈ ಸರ್ಕಾರದವರು ಈ ಮಲಪ್ರಭಾ ಯೋಜನೆಯನ್ನು ಮಂಜೂರು ಮಾಡಿದರು. ಇದರ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿದ್ದರು. ಅಷ್ಟರಲ್ಲೇ ರಾಜ್ಯಗಳ ಪುನರ್ವಿಂಗಡಣೆಗಳ ಪ್ರಸಂಗವೊದಗಿತು. ಅದಾದ ನಂತರ ನಮ್ಮ ಈಗಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಇದನ್ನು ಪೂರ್ಣವಾಗಿ ಪರಿಶೀಲನೆ ಮಾಡಿ ಈ ಹಿಂದೆ ಭೂಕೇವಾಡಿ ಎಂತ ಅಂದಾಜು ಮಾಡಿದ್ದ ಒಂದೂವರೆ ಲಕ್ಷ ಎಕರೆಗಳ ಪ್ರಾಜೆಕ್ಟನ್ನು ಪೂರ್ಣವಾಗಿ ಬದಲಾಯಿಸಿ 3 ಲಕ್ಷ ಎಕರೆಗೆ ನೀರಾಗತಕ್ಕಂಥ ಒಂದು ದೊಡ್ಡ ಯೋಜನೆಯನ್ನಾಗಿ ಇದನ್ನು ಪರಿವರ್ತನೆ ಮಾಡಿದರು. ಇದು ಬಹಳ ಮಹತ್ವಪೂರಿತವಾದ ವಿಚಾರ. ಈಗ ಇದು ಒಂದು ಎಕರೆಗೆ 500 ರೂಪಾಯಿಗಳ ತನಕ ಖರ್ಚಾಗತಕ್ಕಂಥ ಒಂದು ಯೋಜನೆ ಯಾಗಿದೆ. ಆದರೆ ಈ ಯೋಜನೆಗೆ ಸಂಬಂಧಪಟ್ಟ ಅನೇಕ ಕೆಲಸಕಾರ್ಯಗಳನ್ನು ಮುಂದುವರಿಸಲು ಸಾಕಷ್ಟು ಹಣ ಸಿಗದೆ ಈ ಕಾರ್ಯ ಬಹಳ ಮಂದಗತಿಯಿಂದ ಸಾಗುತ್ತಿದೆಯೆಂಬ ವಿಚಾರ ಎಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಇಲ್ಲಿಯತನಕ ಈ ಯೋಜನೆ ಏನೇನೂ ಕಾರ್ಯಗತವಾಗದೆ ಹಾಗೇ ನಿಂತು ಹೋಗಿದೆ. ಅಲ್ಲಿರತಕ್ಕ ಸೂಪರಿಂಟೆಂಡಿಂಗ್ ಇಂಜಿನಿಯರುಗಳೂ ಮತ್ತು ಎಗ್ಸಿಕ್ಯುಟೀವ್ ಇಂಜಿನಿ ಯರುಗಳೂ ಮತ್ತು ಇನ್ನಿತರ ಸಿಬ್ಬಂದಿ ವರ್ಗವೆಲ್ಲಾ ಸುಮ್ಮನೆ ಅಲ್ಲಿ ಮಲಗಿ, ಇಲ್ಲವೇ ಅತ್ತಿತ್ತ ಅಡ್ಡಾಡಿಕೊಂಡು ಕಾಲವನ್ನು ಕಳೆಯುತ್ತಿದ್ದಾರೆ. ಅವರನ್ನು ಏಕೆ ಹೀಗೆ ಇಲ್ಲಿ ಕೆಲಸ ಕಾರ್ಯಗಳು ನಿಧಾನವಾಗಿವೆಯೆಂದರೆ ಅವರು ಮೇಲಿನಿಂದ ಹಣ ಬರುವಹಾಗಿಲ್ಲ ಎಂದು ಹೇಳುತ್ತಿದ್ದಾರೆ. ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಒದಗಿಸಿರತಕ್ಕ ಹಣಕಾಸಿನ ಬಗ್ಗೆ ಅಂಕಿ ಅಂಶಗಳನ್ನು ನೋಡಿದರೆ—ಇದಕ್ಕೆ ಇಲ್ಲಿಯವರೆಗೆ 3 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸ ಲಾಗಿದೆ. 22 ಕೋಟಿ ರೂಪಾಯಿಗಳ ವೆಚ್ಚದ ಬಾಬಿಗೆ ಹೀಗೆ ಒಂದು ಕೋಟಿ, ಒಂದುವರೆ ಕೋಟಿ ಒದಗಿಸಿದರೆ ಇನ್ನಿಂಥ 10 ಯೋಜನೆಗಳಾದರೂ ಈ ಕೆಲಸ ಮುಗಿಯುವಂತಿಲ್ಲ. ಇನ್ನು ಈ ವರ್ಷ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ ಸಿಬ್ಬಂದಿ ವೆಚ್ಚಕ್ಕೆ 10 ಲಕ್ಷ

ಹೋಗುತ್ತದೆ. 50 ಲಕ್ಷದಲ್ಲಿ ಸಿಬ್ಬಂದಿಗೆ 10 ಲಕ್ಷ ಖರ್ಚು ಮಾಡಿ 40 ಲಕ್ಷದಲ್ಲಿ ಈ ಯೋಜನೆಯನ್ನು ಮುಗಿಸಬೇಕೆಂಬ ಪ್ರಸಂಗ ನಡೆದಿದೆ. ಇತ್ತ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳ ಲಕ್ಷ್ಯ ಜಾಸ್ತಿಯಾಗಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಈ ಮಲಪ್ರಭಾ ಯೋಜನೆಯ ನೀರಾದರೋ ಇದು ಯಾವ ಭಾಗಕ್ಕೆ ಹೋಗಬೇಕಾಗಿದೆಯೋ ಆ ಭಾಗದಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಬರಬಿದ್ದು ಜನರಿಗೆ ಅಲ್ಲಿ ಅನೇಕ ರೀತಿಯಿಂದ ತುಂಬಾ ತೊಂದರೆಯಾಗಿದೆ. ಆ ಜನರಲ್ಲಿ ಇಲ್ಲಿಯತನಕ ಏನೊಂದು ಆಶಾಕಿರಣವಿತ್ತೋ, ಈ ಯೋಜನೆ ಒಂದೆರಡು ವರ್ಷಗಳಲ್ಲೇ ಬೇಗ ಮುಗಿದು ಅವರೆಲ್ಲರಿಗೂ ಅನುಕೂಲವಾಗುವುದು ಎಂಬ ಆ ಆಶಾ ಇಂದು ಅವರಲ್ಲಿ ಮಾಯವಾಗಿದೆ. ಇನ್ನು ಮೊನ್ನೆ ತಾನೇ ಹೋದ ವರ್ಷದ ಜುಲೈನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಇದರ ಅಡಿಗಲ್ಲನ್ನು ಹಾಕಿದರು, ಇದರ ಅಧ್ಯಕ್ಷತೆಯನ್ನು ಶ್ರೀಮಾನ್ ನಿಜಲಿಂಗಪ್ಪನವರು ವಹಿಸಿದ್ದರು. ಇಲ್ಲಿಯತನಕ ಅಲ್ಲಿ ಆಗಿರತಕ್ಕ ಕೆಲಸವೆಂದರೆ ಆ ಒಂದು ಅಡಿಗಲ್ಲನ್ನಿಟ್ಟಿರುವುದನ್ನು ಬಿಟ್ಟರೆ ಬೇರೇನೂ ಕೆಲಸವಾಗಿಲ್ಲ. ಎಲ್ಲಾ ಕೆಲಸಗಳೂ ಹಾಗೇ ನಿಂತುಹೋಗಿವೆ. ಅಲ್ಲಿ ಆಗಬೇಕಾಗಿದ್ದ 2-3 ಮೈಲಿಗಳ ಒಂದು ಟನಲ್ ಕೆಲಸ ಸಹಿತ ಆಗದೆ ಹಾಗೇ ನಿಂತುಹೋಗಿದೆ. ಇದಕ್ಕೆ ಅನೇಕ ಬೇರೆ ಯಂತ್ರಗಳ ಸಹಾಯಬೇಕು............

ಇವತ್ತು ಹೊಸದಾಗಿ ಆಗಬೇಕಾದರೆ 6-8 ವರ್ಷಗಳಾಗುತ್ತವೆ. ಇದನ್ನು ತ್ವರಿತ ಗತಿಯಿಂದ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಇತ್ತ ಕಡೆಗೆ ಹೆಚ್ಚಿಗೆ ಲಕ್ಷ್ಯ ಕೊಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಮಲಪ್ರಭಾ ಯೋಜನೆಗಾಗಿ ಕೂಡಿ ಹಾಕಿದ್ದ ಕಚ್ಚಾ ಮಾಲುಗಳನ್ನು ಬೇರೆ ಯೋಜನೆಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಅದಕ್ಕೊದಗಿಸಿದ್ದ ಸಿಬ್ಬಂದಿಯನ್ನು ಸಹಿತ ಭದ್ರಾ ಜಲಾಶಯದ ಕಡೆಗೆ ಕಳುಹಿಸಿದ್ದಾರೆ. ಅಂದಮೇಲೆ ಇದು ಮುಂದೆ ಯಾವರೀತಿ ಆಗುತ್ತದೆಂಬ ಬಗ್ಗೆ ಅನೇಕ ಸಂಶಯಗಳು ಬಂದಿವೆ. ಮಲಪ್ರಭಾ ಯೋಜನೆ ಯಾವ ರೀತಿ ಮುಂದುವರಿಯುತ್ತದೆ ಎನ್ನುವ ಬಗ್ಗೆ ಸರ್ಕಾರದವರು ಭರವಸೆ ಕೊಟ್ಟರೆ ಅಲ್ಲಿಯ ಜನಗಳಿಗೆ ಒಂದು ರೀತಿಯ ತೃಪ್ತಿಯುಂಟಾಗುತ್ತದೆಂದು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ನವಿಲು ತೀರ್ಥದ ಹತ್ತಿರ ಈ ಯೋಜನೆ ತೆಗೆದುಕೊಳ್ಳಬೇಕೆಂದು ಇದೆ. ಈಗ ಸುತ್ತುಮುತ್ತಲಿನ ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ. ಕೆರೆ, ರಸ್ತೆಗಳ ಕಾಮಗಾರಿಗಳನ್ನು ಮಾಡಿದ್ದರೆ ಬಹಳ ಚೆನ್ನಾಗಿತ್ತು. ಕಾಲುವೆ ಕೆಲಸಗಳನ್ನು ಕೂಡಲೇ ಶುರು ಮಾಡಿದರೆ, ಅಲ್ಲಿ ನೀರಾವರಿ ಕೆಲಸಗಳನ್ನು ಶುರು ಮಾಡಿದರೆ ಬಡವರಿಗೆ ಕೂಲಿ ಕೆಲಸ ಸಿಗುತ್ತದೆಂದು ನಾನು ಸೂಚನೆ ಮಾಡುತ್ತೇನೆ. ಸಾಮಾನ್ಯ ಆಡಳಿತದ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಬೇಕೆಂಬ ಇಚ್ಛೆ ನನಗಿದೆ. ಮೊದಲನೆಯದಾಗಿ ತಾಲ್ಲೂಕನ್ನು ನೋಡಿದರೆ ಅಲ್ಲಿನ ತಹಸೀಲುದಾರರು ಇಡೀ ತಾಲ್ಲೂಕಿನ ಬಹು ಭಾಗದ ಕೆಲಸಗಳನ್ನು ಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ಜಿಲ್ಲೆಯೊಳಗೆ ಡೆಪ್ಯುಟಿ ಕಮಿಷನರ್ ಇಡೀ ಜಿಲ್ಲೆಯ ಬಹು ಭಾಗದ ಕೆಲಸಗಳನ್ನು ಮಾಡುತ್ತಿದ್ದಾರೆ. ಈಗ ಎರಡು ವಿಭಾಗಗಳಾಗಿವೆ. ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮಾಡುತ್ತಾರೆ. ಇವರಿಗೂ ಅವರಿಗೂ ಸಾಮರಸ್ಯವಿಲ್ಲದೆ ಹೋದುದರಿಂದ ಅನೇಕ ಕೆಲಸ ಕಾರ್ಯಗಳು ಸರಾಗವಾಗಿ ನಡೆಯದೆ ಹಾಗೆಯೇ ಉಳಿದಿವೆ. ಅಮಲ್ದಾರರು ಡೆವಲಪ್‌ಮೆಂಟ್ ಆಫೀಸರು ಕೂಡಾ ಕೆಲಸ ಮಾಡಿದರೆ ತ್ವರಿತಗತಿಯಿಂದ ಆ ಕೆಲಸ ಕಾರ್ಯಗಳು ನಡೆಯುತ್ತವೆ. ಆದ ಕಾರಣ ರೆವಿನ್ಯೂ ಅಧಿಕಾರಿಗಳನ್ನು ಪೂರ್ಣವಾಗಿ ತೆಗೆದುಹಾಕಬೇಕೆಂದು ಹೇಳುತ್ತೇನೆ. ಏಕೆಂದರೆ ರೆವಿನ್ಯೂ ಕಚೇರಿಗಳಲ್ಲಿ ಏನು ನಡೆಯುತ್ತಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಎಷ್ಟೋ ಸಂದರ್ಭದಲ್ಲಿ ಕಾನೂನು ಕಾಯಿದೆ ಪ್ರಕಾರ ಅಧಿಕಾರಿಗಳು ನಡೆಯುವುದಿಲ್ಲ. ಕಟ್ಟಳೆ ಪ್ರಕಾರ ಸರಿಯಾಗಿ ಕೆಲಸಗಳನ್ನು ನಡೆಸುವುದೂ ಇಲ್ಲ. ಕಾಯಿದೆಗಳ ಪ್ರಕಾರ ಅನೇಕ ಕೆಲಸಗಳು ತೀರ್ಮಾನವಾಗುವುದಿಲ್ಲವೆಂದು ವಿಶೇಷವಾಗಿ ದೂರುಗಳು ಸರ್ಕಾರಕ್ಕೆ ಬಂದಿರಬಹುದು. ಅವರ ಹತ್ತಿರವಿರತಕ್ಕ ಕಾಯಿದೆಯ ಆಡಳಿತವನ್ನು ಪೂರ್ಣವಾಗಿ ಸಿವಿಲ್ ಕೋರ್ಟಿಗೆ ಕೊಟ್ಟು ಅದನ್ನು ಬದಲಾಯಿಸಬೇಕು. ಹಿಂದಿನ ಕಾಲಕ್ಕೆ ಇದ್ದಂಥ ರೆವಿನ್ಯೂ ಆಡಳಿತ ಪೂರ್ಣ ಬದಲಾವಣೆಯಾಗಬೇಕು. ಅದರಲ್ಲಿ ಮಾರ್ಪಾಡು ಆಗಬೇಕು. ಈಗ ಗೋರ್ವಾಲ ಸಮಿತಿಯವರು ಒಂದು ಮಾತನ್ನು ಹೇಳಿದ್ದಾರೆ. ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಕಲೆಕ್ಟರ್ ಹುದ್ದೆಯೊಳಗೆ ಬದಲಾವಣೆ ಮಾಡುವ ಸೂಚನೆಯನ್ನು ಗೋರ್ವಾಲ ಸಮಿತಿಯವರು ಕೊಟ್ಟಿದ್ದಾರೆ. ಇದೇ ರೀತಿ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ರೆವಿನ್ಯೂ ಆಡಳಿತವನ್ನು ಬದಲಾಯಿಸಿ ಅದನ್ನು ಮಾರ್ಪಾಡು ಮಾಡಿ ಹಿಂದೆ ಒಂದೇ ಜನರಲ್ ಅಡ್ಮಿನಿಸ್ಟ್ರೇಷನ್ ಇದ್ದ ಹಾಗೆ ಈಗ ಇರಬೇಕೆಂದು ಹೇಳುತ್ತೇನೆ. ಅಧಿಕಾರಿಗಳು ಅಲ್ಲಿ ಬಹಳ ಹೆಚ್ಚಾಗಿದ್ದಾರೆಯೇ ಹೊರತು ಏನೂ ಪ್ರಯೋಜನವಿಲ್ಲ. ಸಾಮಾನ್ಯವಾಗಿ ಅಸಿಸ್ಟೆಂಟ್ ಕಮಿಷನರ್ ಹತ್ತಿರ 2-3 ತಿಂಗಳು ಇರುತ್ತದೆ. ಡಿವಿಜನಲ್ ಕಮಿಷನರ್ ಹತ್ತಿರ 5-6 ಂಗಳು ಇರುತ್ತದೆ. ಹೀಗೆ ಎಷ್ಟೋ ಕೆಲಸಗಳು ಅನೇಕ ರೀತಿಯಲ್ಲಿ ವಿಳಂಬವಾಗುತ್ತಿರುತ್ತವೆ. ಸರ್ಕಾರದವರು

(ಶ್ರೀ ಎ. ಎಸ್. ಪಾಟೀಲ್)

ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಬೇಕು. ಗ್ರಾಮ ಪಂಚಾಯಿತಿ ಬಗ್ಗೆ ಮಾನ್ಯ ಶ್ರೀ ಕೊಂಡಜ್ಜಿ ಬಸಪ್ಪನವರ ವರದಿ ಇದೆ. ಅದರ ಪ್ರಕಾರ ಕಾಯಿದೆ ಬರುತ್ತದೆ. ಈಗ ತಾಲ್ಲೂಕು ಮತ್ತು ಜಿಲ್ಲಾ ಆಡಳಿತ ಯಾವ ರೀತಿ ಆಗಬೇಕೆಂಬುದು ಬಹಳ ಮಹತ್ವವಾದಂಥ ಮಾತು. ಇದರಿಂದ ಎಷ್ಟೋ ಉಳಿತಾಯವಾಗುವುದು ಇದೆ. ಇದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಡಿ. ಪಾಟೀಲ್ (ಇಂಡಿ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಾನು ನೀರಾವರಿ ಸಲುವಾಗಿ ಕೆಲವು ಮಾತುಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ನಮ್ಮ ಬರಗಾಲ ಪೀಡಿತ ಪ್ರದೇಶವಾದ ಬಿಜಾಪೂರ ಜಿಲ್ಲೆಯಲ್ಲಿ ಎಷ್ಟೋ ಹಳ್ಳಿಗಳಲ್ಲಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ. ಕಾರಣ ನಮ್ಮ ಆಲಮಟ್ಟಿ ಯೋಜನೆಯನ್ನು ತ್ವರಿತವಾಗಿ ಮಾಡುವವರೆಗೂ ಅನ್ನ ಸತ್ಯಾಗ್ರಹ ಮಾಡಿಯೇ ತೀರುತ್ತೇವೆಂಬುದಾಗಿ ಹೇಳುತ್ತಿದ್ದಾರೆ. ಯಾವಾಗಲೂ ಬರಗಾಲ ಪೀಡಿತ ಪ್ರದೇಶವೆಂದರೆ ಬಿಜಾಪುರ ಜಿಲ್ಲೆ. ಈ ಆಲಮಟ್ಟಿ ಯೋಜನೆಯಿಂದ ಮಾತ್ರ ಅವರಿಗೆ ಅನುಕೂಲವೇ ಹೊರತು ಮತ್ತಾವ ಯೋಜನೆಯಿಂದಲೂ ನಮ್ಮ ಜಿಲ್ಲೆಯ ಬರಗಾಲ ನಿವಾರಣೆಯಾಗುವುದಿಲ್ಲವೆಂಬುದು ತಮಗೇ ಗೊತ್ತಿದೆ. ಇಂತಹ ಸಂದರ್ಭದಲ್ಲಿ ಜನತೆಯ ವಿಶ್ವಾಸವನ್ನು ಕಳೆಯದೆ ನಮ್ಮ ಜಿಲ್ಲೆಯವರಾದಂಥ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಮತ್ತು ವಿದ್ಯಾ ಸಚಿವರು—ಇವರೆಲ್ಲರೂ ಕೂಡ ಜನತೆಯಲ್ಲಿ ಉಂಟಾಗಿರತಕ್ಕ ಅಸಂತೋಷವನ್ನು ನಿವಾರಿಸಬೇಕೆಂದು ನಾನು ಹೇಳುತ್ತೇನೆ. ಇದಕ್ಕೆ ಅವರಿಗೆ ತಕ್ಕ ಅವಕಾಶವಿದೆ. ಆದಕಾರಣ ಮುದ್ದೇಬಿಹಾಳ, ಬಿಜಾಪುರ, ಬಾಗೇವಾಡಿ–ಇತ್ಯಾದಿ ತಾಲ್ಲೂಕುಗಳಲ್ಲಿ ಅನೇಕರು ಉಪವಾಸವ್ರತಗಳನ್ನು ಕೈಗೊಂಡಿದ್ದಾರೆ. ಇದಕ್ಕೆ ದುಡ್ಡಿನ ತೊಂದರೆ ಇದೆ. ನನ್ನ ಸ್ನೇಹಿತರಾದ ಮಾನ್ಯ ಶ್ರೀ ಗುರೆಡ್ಡಿಯವರು ಹೇಳಿದಂತೆ ಈ ಯೋಜನೆಯಿಂದ ಪ್ರತಿಫಲ ಪಡೆಯುವುದು ಅಷ್ಟಾಗಿ ಸಾಧ್ಯವಿಲ್ಲ. ನಮ್ಮ ಆಯುಸ್ಸಿನಲ್ಲಿ ಇದನ್ನು ಕಾಣುತ್ತೇವೋ ಇಲ್ಲವೋ ಎಂಬ ಸಂಶಯ ಬರುತ್ತಿದೆ. ಇದಕ್ಕಾಗಿಯೇ ನಮ್ಮ ಜಿಲ್ಲೆಯ ಎಷ್ಟೋ ಜನರು ಉಪವಾಸ ಕೈಗೊಂಡಿದ್ದಾರೆ. ನಮ್ಮಲ್ಲಿ ತ್ಯಾಗಿಗಳಿದ್ದಾರೆ. ಉಪವಾಸಮಾಡಿ ಅನ್ನ ಸಂಪಾದನೆ ಮಾಡೋಣವೆನ್ನುತ್ತಾರೆ. ಯೋಜನೆಗಳಿಂದ ನಾವು ಹೆಚ್ಚಿನ ಅನುಕೂಲಗಳನ್ನು ಪಡೆಯೋಣವೆನ್ನುವವರು ನಮ್ಮಲ್ಲಿದ್ದಾರೆ. ಹಣ, ಬಂಗಾರಗಳನ್ನು ಎಲ್ಲಾ ಜಿಲ್ಲೆಗಳಿಗಿಂತಲೂ ಬಹಳವಾಗಿ ಕೊಟ್ಟು ಹೆಸರುವಾಸಿಯನ್ನು ಪಡೆದಿರುವ ಜಿಲ್ಲೆ ನಮ್ಮದು. ಅನೇಕ ಕಡೆಗಳಿಂದ ಏತಕ್ಕೆ ಈ ಜಿಲ್ಲೆ ಹಿಂದಾಗುತ್ತಿದೆ ಎಂಬುದಾಗಿ ಸಂಶಯಬಂದಿದೆ. ನಮ್ಮದು ಬಂಗಾರದ ಜಿಲ್ಲೆ ಅದರಂತೆ ನಮ್ಮ ಜನರ ಮನಸ್ಸೂ ಸಹ ಬಂಗಾರದಂತಿದೆ. ಜನರ ಮನಸ್ಸಿನಂತೇ ನಡೆಯಿಸಿ, ಅಲ್ಲಿನ ಜನರ ಕಷ್ಟ ಸುಖಗಳನ್ನು ಸರಿಯಾಗಿ ಅರಿತು ಅವೆಲ್ಲವೂ ಸರಿಹೋಗುವಂತೆ ಮಾಡಬೇಕು. ಅದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಉಪವಾಸ ಕೈಗೊಂಡಿರತಕ್ಕವರಿಗೆ ನಮ್ಮ ಭಾಗದ ಮುಂದಾಳುಗಳಾದ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ತಕ್ಕ ಆಶ್ವಾಸನೆಯನ್ನು ಕೊಟ್ಟು ಆಲಮಟ್ಟಿ ಯೋಜನೆ ವಿಷಯದಲ್ಲಿ ಹಣದ ತೊಂದರೆ ಎಷ್ಟೇ ಇದ್ದರೂ ಕೇಂದ್ರದಲ್ಲಿ ತಮ್ಮ ಪ್ರಭಾವ ಬೀರಿ ಹಣವನ್ನು ತಂದು ಆ ಅಣೆಕಟ್ಟನ್ನು ಪೂರ್ತಿಯಾಗಿ ಆದಷ್ಟು ಜಾಗ್ರತೆಯಾಗಿ ನಿರ್ಮಿಸುತ್ತಾರೆಂದು ನಾನು ಆಶೆ ಮಾಡುತ್ತೇನೆ. ಅದೂ ಅಲ್ಲದೆ ಈ ಆಲಮಟ್ಟಿ ಅಣೆಕಟ್ಟಿನ ಯೋಜನೆ ಕೆಲಸಕ್ಕೆ ಪೂರ್ತಿಯಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬರುವವರೆಗೂ ಎಷ್ಟೋ ಜನ ಉಪವಾಸ ಬಿಡುವುದಿಲ್ಲವೆಂದು ಕಾಣುತ್ತದೆ. ಆದ್ದರಿಂದ ಯಾರ್‍ಯಾರು ಈ ಬಗ್ಗೆ ಉಪವಾಸ ಮಾಡುತ್ತಿದ್ದಾರೋ ಅವರೆಲ್ಲರೂ ಪೂರ್ತಿಯಾಗಿ ಉಪವಾಸವನ್ನು ಬಿಡಬೇಕೆಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಕೇಳಿಕೊಳ್ಳಬೇಕೆಂದು ನನ್ನ ಆಶೆ ಇದೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri BAPU RAO ANANDA RAO HULSURKER (Hulsur).—Mr. Speaker, Sir, now I will deal only with irrigation facilities available in Bidar District. First of all, I say much has been said regarding the development of border areas. I know, Sir, Bidar borders Maharashtra and so many assurances and promises were given on the floor of this House that this backward area will be given facilities but looking to the facts and figures furnished by the Government, I find very little is done. I will say nothing is done here when compared to other Districts of the

State. Special steps should be taken to improve this backward area. We are no longer satisfied with mere assurances but we want something concrete in the direction of improving our area. I will take up one specific instance. In the former Hyderabad State there was a proposal to construct the Karanja project in Bidar district. Even after Reorganisation, we do not know what steps have been taken to carry out the projects. There are no minor or major or medium projects in Bidar district. If the Government wants to carry out its assurance of developing backward, border areas, it becomes their duty to take up the Karanja project, which would to some extent solve the economic problems of the area. The project when executed would bring large areas under irrigation. I will also propose that the Marathi speaking area might be developed by having a project on the Manjra river. Plans and estimates ought to be prepared for this.

Sir, irrigational facilities are very poor in the district and more amounts should be allotted for repair of tanks, specially minor tanks. Hydel power should be made available to Bidar. When the Hon'ble Chief Minister visited Bhalki, he assured that the Kangra project would be taken up. I request him to carry out this assurance which he gave before the public of Bhalki.

ಶ್ರೀ ಜೆ. ದೇವಯ್ಯ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಇವೊತ್ತು, ನಮ್ಮ ಮುಂದಿರತಕ್ಕ ಬೇಡಿಕೆಗಳಲ್ಲಿ ನೀರಾವರಿ ಬೇಡಿಕೆಗೆ ಸಂಬಂಧಪಟ್ಟಹಾಗೆ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈ ಕಾಂಗ್ರೆಸ್ ಸರ್ಕಾರ ಬಂದಲಾಗಾಯಿತು ಸುಮಾರು 17 ವರ್ಷಗಳಿಂದಲೂ ಪದೇ ಪದೇ ವರ್ಷೇ ವರ್ಷೇ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಅದೇನೆಂದರೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಎಷ್ಟೆಷ್ಟು ಉತ್ಪತ್ತಿಯಾಗುತ್ತದೆ, ಎಷ್ಟೆಷ್ಟು ಖರ್ಚಾಗುತ್ತದೆ ಎನ್ನುವ ಅಂಕಿ ಅಂಶಗಳನ್ನು ಶೇಖರಣೆ ಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಕ ಮಾಡಿ ಅವರಿಂದ ಆ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಆಯಾಯ ಡಿಸ್ಟ್ರಿಕ್ಟಿನಲ್ಲಿ ಏನು ಉತ್ಪತ್ತಿಯಾಗುತ್ತದೆಯೋ ಆ ಒಂದು ಆಧಾರದ ಮೇಲೆ ಸರ್ಕಾರದವರು ಹಣವನ್ನು ಖರ್ಚುಮಾಡುವುದಾದರೆ ಆಗ ಅದು ಸಾರ್ಥಕವಾಗುತ್ತದೆ. ಆ ರೀತಿ ಮಾಡಲು ಸರ್ಕಾರದವರು ಇದುವರೆಗೂ ಯಾವ ಪ್ರಯತ್ನವನ್ನೂ ಮಾಡಿಲ್ಲ.

ಇನ್ನೊಂದು ವಿಷಯ.—ಹೆಚ್ಚು ಮಾತನಾಡಲು ನನಗೆ ಕಾಲಾವಕಾಶವನ್ನು ಕೊಟ್ಟಿಲ್ಲವಾದುದರಿಂದ ಕೇವಲ ಕೆಲವು ನಿಮಿಷಗಳಲ್ಲಿ ಒಂದೆರಡು ವಿಚಾರಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ ಕೃಷ್ಣರಾಜಸಾಗರದಲ್ಲಿ ಹೆಚ್ಚು ನೀರು ಇದೆ. ಸುಮಾರು 50 ಸಾವಿರ ಎಕರೆಗಳಿಗೆ ನೀರು ಆಗುತ್ತದೆ. ಮೇ ಮತ್ತು ಜೂನ್ ತಿಂಗಳು ಆಖೈರುವರೆವಿಗೂ ವ್ಯವಸಾಯಕ್ಕೆ ನೀರು ಬರುತ್ತದೆ ಎನ್ನುವ ಒಂದು ನಂಬಿಕೆ ನಮಗೆ ಇವೆ. ಈ ವಿಷಯದಲ್ಲಿ ಸರ್ಕಾರದವರ ಅಭಿಪ್ರಾಯವೇನು, ಎಲ್ಲಿಯವರೆಗೆ ಅದರಲ್ಲಿ ನೀರು ಸಿಕ್ಕುತ್ತದೆ ಎನ್ನುವ ವಿಷಯದಲ್ಲಿ ಜವಾಬು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಅದೇನೆಂದರೆ ಆಯಾಯಾ ತಾಲ್ಲೂಕಿನ ಇಂಜಿನಿಯರುಗಳನ್ನು ಆಯಾಯ ತಾಲ್ಲೂಕಿಗೇ ನೇಮಕ ಮಾಡಿ ಆಯಾಯಾ ತಾಲ್ಲೂಕಿಗೆ ಸಂಬಂಧಪಟ್ಟ ಕಂಟ್ರಾಕ್ಟರುಗಳಿಗೆ ಕೆಲಸಗಳ ಕಂಟ್ರಾಕ್ಟು ಕೊಟ್ಟರೆ ಬೇಗ ಬೇಗ ಕೆಲಸಗಳಾಗುತ್ತವೆ ಎಂದು ನಾನು ಹೇಳುತ್ತೇನೆ. ಇಂಜಿನಿಯರಿಂಗ್ ಇಲಾಖೆ ಮತ್ತು ರೆವಿನ್ಯೂ ಇಲಾಖೆ ಈ ಇಲಾಖೆಯ ಆಫೀಸುಗಳಿಗೆ ನೌಕರರನ್ನು ನೇಮಿಸುವಾಗ ಆಯಾಯ ತಾಲ್ಲೂಕಿನಲ್ಲಿ ಹುಟ್ಟಿಬೆಳೆದವರನ್ನೇ ಆಯಾಯ ತಾಲ್ಲೂಕಿನ ಆಫೀಸುಗಳಿಗೆ ನೇಮಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ರೀತಿ ಮಾಡುವುದರಿಂದ ಕೆಲಸಗಳು ಬೇಗ ಬೇಗ ಆಗುತ್ತವೆ. ಏತಕ್ಕೋಸ್ಕರ ನಾನು ಈ ವಿಷಯವನ್ನು ಹೇಳುತ್ತಿದ್ದೇನೆಂದರೆ ಒಬ್ಬ ಇಂಜಿನಿಯರನ್ನು ಒಂದು ತಾಲ್ಲೂಕಿನಿಂದ ಮೂರು ಸಾರಿ ವರ್ಗಮಾಡಿ ಮೂರು ಸಾರಿ ಕ್ಯಾನ್ಸಲ್ ಮಾಡಿ ಅವರನ್ನು ಅಲ್ಲಿಯೇ ನಿಲ್ಲಿಸಲಾಗಿದೆ. ಆ ತಾಲ್ಲೂಕಿನಲ್ಲಿ ಹಣ ಕೊಡುವ ಸಂಬಂಧದಲ್ಲಿ ವ್ಯವಹಾರ ಮಾಡುವುದಕ್ಕಾಗಿ ಅವರು ಆ ತಾಲ್ಲೂಕನ್ನು ಬಿಡುವುದಕ್ಕೆ ಅವಕಾಶವೇ ಇಲ್ಲ. ಮತ್ತು ಆ ಸಂಬಂಧಕ್ಕೋಸ್ಕರ ತಮ್ಮ

(ಶ್ರೀ ಜೆ. ದೇವಯ್ಯ)

ಸಂಬಂಧೀಕರಿಗೇ ಕಂಟ್ರಾಕ್ಟ್ ಕೊಡುವುದು, ಇದು ಎಲ್ಲಾ ಏನು ಸ್ವಾಮಿ! ಸರ್ಕಾರದವರು ಖರ್ಚುಮಾಡತಕ್ಕಂಥ ಹಣ ಯಾವ ರೀತಿ ಖರ್ಚಾಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ದಕ್ಷರಾದ ಅಧಿಕಾರಿಗಳನ್ನು ನೇಮಕಮಾಡಿ ದಕ್ಷತೆಯಿಂದ ಕೆಲಸಗಳನ್ನು ಮಾಡಬೇಕು. ಇದರಲ್ಲಿ ಇನ್ನೊಂದು ವಿಷಯವೇನೆಂದರೆ ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರಿನ ಅಭಾವ ಇರುವುದರಿಂದ ಬೇರೆ ಕೆರೆಗಳಿಗೆ ನೀರನ್ನು ಕೊಡುವುದನ್ನು ನಿಲ್ಲಿಸಬೇಕು. ಅಲ್ಲಿ ಕೆಲವರು ಕಾರುಬತ್ತವನ್ನು ಬೆಳೆಯುವುದ ಕ್ಕೋಸ್ಕರ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈಗ ಅಲ್ಲಿರತಕ್ಕ ಒಂದು ಕೆರೆ ಏನಾಗಿದೆ ಎಂದರೆ ಅದು ಒಡೆದುಹೋಗಿದೆ. ಅದರ ಒಳಗೆರೆಯಲ್ಲಿ ಕೆಲವರು ಹೇಳದೆ ಕೇಳದೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅದನ್ನು ತಪ್ಪಿಸಿ ಆ ಕೆರೆಯನ್ನು ರಿಪೇರಿಮಾಡಿ ಅದರಲ್ಲಿ ನೀರು ನಿಲ್ಲುವಂತೆ ಏರ್ಪಾಡು ಮಾಡಬೇಕೆಂದು ನನ್ನ ಕೋರಿಕೆ.

ಇನ್ನೊಂದು ವಿಷಯ. ದೇಶದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯ. ಪ್ರತಿಯೊಂದು ಜಿಲ್ಲೆಯಲ್ಲಿ ರೈತರಿಗೆ ಸಾಕಷ್ಟು ನೀರಾವರಿ ಸೌಲಭ್ಯ ವನ್ನು ಒದಗಿಸತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ. ನಾನು ಈ ಒಂದು ಉದಾಹರಣೆಯನ್ನು ಹೇಳುತ್ತೇನೆ. 1950ನೇ ಇಸವಿಯಲ್ಲಿ ಕಾವೇರಿ ನದಿಯ ಒಣಗಿ ಹೋಗಿತ್ತು. ನಾನು ಅದು ಏತಕ್ಕೋಸ್ಕರ ಆರೀತಿ ಒಣಗಿ ಹೋಗಿತ್ತು ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಹಾರಂಗಿ ಮತ್ತು ಕಂಬದ ಕಡ ಅಣೆಕಟ್ಟುಗಳನ್ನು ಕಟ್ಟು ವುದರಿಂದ ಕೃಷ್ಣರಾಜಸಾಗರಕ್ಕೆ ಬರುವ ನೀರು ಕಡಿಮೆಯಾಗುತ್ತದೆ. ಕಪಿಲಾ ಪ್ರಾಜೆಕ್ಟಿನಿಂದ ಶಿವನ ಸಮುದ್ರಕ್ಕೆ ನೀರನ್ನು ತರುತ್ತೇವೆ. ಇದರಿಂದ ಕೃಷ್ಣರಾಜಸಾಗರದಿಂದ ಶಿವನ ಸಮುದ್ರಕ್ಕೆ ನೀರನ್ನು ತರುವುದು ತಪ್ಪುವುದರಿಂದ, ಅದರಲ್ಲಿ ನೀರು ನಿಲ್ಲುತ್ತದೆ ಎಂದು ಮಾನ್ಯ ಲೋಕೋಪ ಯೋಗಿ ಶಾಖೆಯ ಮಂತ್ರಿಗಳು ಹೇಳಿದರು. ಈ ವಿಷಯದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದುವೇಳೆ ಕಪಿಲಾ ಪ್ರಾಜೆಕ್ಟಿನಿಂದ ಶಿವನ ಸಮುದ್ರಕ್ಕೆ ನೀರನ್ನು ತಂದರೂ ಕೂಡ ಹಾರಂಗಿ ಮತ್ತು ಕಂಬದಕಡ ಅಣೆಕಟ್ಟುಗಳನ್ನು ಕಟ್ಟುವುದರಿಂದ ಕೃಷ್ಣರಾಜಸಾಗರಕ್ಕೆ ನೀರು ಕಡಿಮೆಯಾಗುತ್ತದೆ. ಹೀಗಿರುವಾಗ ಅದರಿಂದ ಎಷ್ಟು ನೀರು ಕಡಿಮೆಯಾಗುತ್ತದೆ ಎನ್ನುವುದನ್ನು ಅಂದಾಜುಮಾಡಿ ಅದಕ್ಕೆ ಏನು ಮಾಡಬೇಕೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾರ ದಾಕ್ಷಿಣ್ಯಕ್ಕೂ ಒಳಗಾಗಬಾರದು. ನಮ್ಮ ಮುಖ್ಯಮಂತ್ರಿಗಳು ಬಿಜಾಪುರದವರು ಏನಾದರೂ ಆಗಬೇಕು ಎಂದು ಹೇಳಿದರೆ 'ಹೂ' ಎಂದು ಹೇಳುತ್ತಾರೆ. ಅಥವಾ ಬೇರೆ ಇನ್ನೂ ಯಾರಾದರೂ ಏನಾದರೂ ಆಗಬೇಕು ಎಂದು ಹೇಳಿದರೆ 'ಹೂ' ಎಂದು ಹೇಳುತ್ತಾರೆ. ಹೀಗಿರುವಾಗ ಅವರು ಯಾರ ದಾಕ್ಷಿಣ್ಯಕ್ಕೂ ಒಳಗಾಗ ಬಾರದು. ಒಳ್ಳೆಯ ದಕ್ಷರಾದಂತಹ ಅಧಿಕಾರಿಗಳನ್ನು ಇಟ್ಟುಕೊಳ್ಳಬೇಕು. ಇಂಜನಿಯರಿಂಗ್ ಇಲಾಖೆಯಲ್ಲಿ ದಕ್ಷರಾದಂತಹ ಅಧಿಕಾರಿಗಳು ಇದ್ದಾರೆ. ವಿಧಾನಸೌಧವನ್ನು ಕಟ್ಟಿದವರು, ಕೃಷ್ಣರಾಜಸಾಗರವನ್ನು ಕಟ್ಟಿದವರು, ವಿಶ್ವೇಶ್ವರಯ್ಯನಾಲೆಯನ್ನು ಕಟ್ಟಿದ ದಕ್ಷರಾದಂತಹ ಅಧಿ ಕಾರಿಗಳು ಇದ್ದಾರೆ. ದಕ್ಷರಾದಂತಹ ಅಧಿಕಾರಿಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ನಿಜ ವಾಗಿಯೂ ಕೂಡ ದಕ್ಷರಾದ ಅಧಿಕಾರಿಗಳಿಗೆ ಉತ್ತೇಜನವನ್ನು ಕೊಡಬೇಕು. ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ವಿಚಾರದಲ್ಲಿ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

12 NOON

ನೀರಾವರಿ ವಿಚಾರದಲ್ಲಿ ಕೋಟಿಗಟ್ಟಲೆ ಖರ್ಚು ಮಾಡುವಾಗ ದಾಕ್ಷಿಣ್ಯಕ್ಕೆ ಒಳಗಾಗದೆ ಸರಿ ಯಾದ ಇಂಜನಿಯರುಗಳಿಂದ ಬೇಕಾದ ಕೆಲಸಗಳನ್ನು ಮಾಡಿಸಬೇಕು. ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಪಿಕಪ್ಪುಗಳನ್ನು ಕಟ್ಟಿದ್ದಾರೆ. 10 ಸಾವಿರ ರೂಪಾಯಿ ಖರ್ಚಾಗಿದ್ದರೂ ಒಂದು ಎಕರೆ ಕೂಡ ನೀರಾವರಿಯಾಗುವುದಿಲ್ಲ. ನನ್ನ ಸಂಗಡ ಮಂತ್ರಿಗಳು ಬಂದರೆ ನಾನು ತೋರಿಸುತ್ತೇನೆ. ಇಂಜಿ ನಿಯರುಗಳು ಸ್ಥಳದ ಪ್ರಭಾವಶಾಲಿಗಳಾದ ಮುಖಂಡರಿಗೆ ಮತ್ತು ಕೆಲವು ಸದಸ್ಯರಿಗೆ ಹೆದರಿ ಕೊಂಡು ಅವರು ಹೇಳಿದಂತೆ ಕೆಲಸಗಳನ್ನು ಮಾಡುತ್ತಾರೆ. ಅವರು ಹೇಳಿದಂತೆ ಮಾಡದೆ ಹೋದರೆ ಬಿಜಾಪುರಕ್ಕೆ ಎಲ್ಲಿ ವರ್ಗ ಮಾಡಿಸುತ್ತಾರೆಯೋ, ಎಲ್ಲಿ ಎಕ್ಸ್‌ಟೆನ್‌ಷನ್ ಕೊಡುವುದಿಲ್ಲವೋ, ಇನ್‌ಕ್ರಿಮೆಂಟ್ ಕೊಡುವುದಿಲ್ಲವೋ ಎಂದು ಹೆದರುತ್ತಾರೆ. ಅಧಿಕಾರಿಗಳಲ್ಲಿ ಈ ತರಹ ಹೆದರಿಕೆ

ಯನ್ನು ತಪ್ಪಿಸಬೇಕು. ನಾನು ಒಂದು ಸಲ ಚೀಫ್ ಇಂಜಿನಿಯರ ಅವರ ಹತ್ತಿರ ಹೋದೆ. ಅವರ ಮೇಜಿನ ಸುತ್ತಲೂ 10 ಜನ ಕುಳಿತಿದ್ದರು. ನಾನು ಏನು ಮಾತನಾಡುವುದಕ್ಕೂ ಅವಕಾಶವಾಗದೆ ಹೊರಟು ಬಂದೆ.

ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರು ಇನ್‌ಸ್ಪೆಕ್ಷನ್ ಮಾಡಿಕೊಂಡು, ಅಂದಾಜುಗಳನ್ನು ಮಾಡಿಸಿ, ಆ ಕೆಲಸ ಆಗಬೇಕು ಎಂದು ಆಫೀಸರಿಗೆ ಕಳಿಸಿಕೊಟ್ಟರು. ಆ ಅಧಿಕಾರಿಗಳು ಅದನ್ನು ಹಿಂದಕ್ಕೆ ಹಾಕಿದರು. ಒಂದು ಸಾರಿ ಫೈಲು ಹಿಂದಕ್ಕೆ ಬಂದರೆ ಪುನಃ ಹೋಗಬೇಕಾದರೆ ಒಂದು ವರ್ಷವಾಗುತ್ತದೆ. ಕೆಲಸ ಮಾತ್ರ ಆಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಎಸ್ಟಿಮೇಟುಗಳನ್ನು ಸಣ್ಣಪುಟ್ಟ ಕಾರಣಗಳಿಗಾಗಿ ವಾಪಸು ಹಾಕಿದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬಂದಾಗ ಅವರನ್ನು ಬೇಕಾದರೆ ವಿಚಾರಿಸಿ ಅಂದಾಜುಗಳು ಜಾಗ್ರತೆ ಫೈನಲಾಗುವಂತೆ ಏರ್ಪಾಡು ಮಾಡಬೇಕು ಎಂದು ಹೇಳಿ, ಅಧ್ಯಕ್ಷರು ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ವಾಣಿಜ್ಯ ಬೆಳೆಗಳೂ ಬಹಳ ಮುಖ್ಯ. ಒಂದಾನೊಂದು ಕಾಲದಲ್ಲಿ ಆಹಾರ ಬೆಳೆಗಳು ಮುಖ್ಯ ಎಂಬ ಆರ್ಗುಮೆಂಟಿತ್ತು. ಈಗ ಹಣ ಗಳಿಸಬೇಕಾಗಿದೆ. ಸುಮಾರು 500 ಕೋಟಿ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುತ್ತಿದ್ದೇವೆ, ಎಣ್ಣೆ ಬೀಜ 89 ಕೋಟಿ ರೂಪಾಯಿನಷ್ಟು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಶುಗರ್ 40 ಕೋಟಿ, ಕಾಶ್ಯುನಟ್ಸ್ 30 ಕೋಟಿ, ಕಾಫಿಸೀಡ್ಸ್ 45 ಕೋಟಿ ರೂಪಾಯಿನಷ್ಟು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಬಾಳೇಹಣ್ಣು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ.. We have to earn foreign exchange to build up our industries in the country so that at least our future generation will have enough of work and production in the country, instead of looking to their own stomaches.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಭತ್ತದ ಬೆಳೆಗೆ ಹೆಚ್ಚು ಪ್ರಮಾಣದಲ್ಲಿ ಖಾಹಿರೆ ಬಂದು, ಒಣಗಿಹೋಗಿ ಬಹಳ ಲುಕ್ಸಾನು ಆಗುತ್ತಾ ಇದೆ. ಹೆಲಿಕಾಪ್ಟರುಗಳಿಂದ ಸ್ಪ್ರೇ ಮಾಡುವುದು ಕಂಡುಹಿಡಿದಿದ್ದಾರೆ, ಸಸಿ ಸಂರಕ್ಷಣ ಅಂಗದವರು. ಅದರ ಉಪಯೋಗವನ್ನು ರೈತರಿಗೆ ದೊರಕಿಸಿಕೊಡಲು ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೆಲಿಕಾಪ್ಟರು ಇಡದೆ ಇದ್ದರೂಕೂಡ, ಬೇರೆ ಪ್ಲೇನುಗಳನ್ನು ಉಪಯೋಗಿಸಲು ಅವಕಾಶವಿದೆ. ಹತ್ತಿ ಬೆಳೆಗೆ ರೋಗ ಬಂದು ನಾಶವಾಗುತ್ತಿದ್ದ ಸಂದರ್ಭದಲ್ಲಿ, ಅದು ಎಲ್ಲೆಲ್ಲಿ ತಲೆದೋರಿತ್ತೋ ಅಲ್ಲಲ್ಲಿ ಬೊಂಬಾಯಿನ ಒಂದು ಕಂಪೆನಿಯವರು ಬಂದು ಸಹಾಯ ನೀಡಿದ್ದರು. ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡುವ ಶಕ್ತಿ ಸರಕಾರಕ್ಕೆ ಬಂದಿಲ್ಲ. ಸೆಂಟ್ರಲ್ ಗವರ್ನ್‌ಮೆಂಟಿನವರು ಏರೋಪ್ಲೇನು ಇಟ್ಟಿದ್ದಾರೆ. ಬೊಂಬಾಯಿಯ ಒಂದು ಕಂಪೆನಿಯೂ ಪ್ಲೇನು ಇಟ್ಟಿದೆ. ಬೇರೆ ಏರಿಯಾಗಳಿಗೆ ಬೇಕಾದರೆ ಅವರು ಬಂದು ಸ್ಪ್ರೇ ಮಾಡುತ್ತಾರೆ. ಸರಕಾರದವರು ಆ ಖರ್ಚನ್ನು ಸಬ್‌ಸಿಡೈಸ್ ಮಾಡುತ್ತಾರೆ.

Assistance given to the Bus owners, when the Road Transport was nationalised in Hassan District.

*Q.—509. Sri B. H. LAKSHMANIAH (Belur).—

Will the Government be pleased to state :—

(*a*) the number of bus owners along with the Number of buses that were running when Road Transport in Hassan District was nationalised ;

(*b*) the nature of assistance given to these bus owners when the Road Transport in Hassan District was nationalised ;

(SRI B. H. LAKSHMANIAH)

(*c*) the Number of employees who became unemployed on account of nationalisation ;

(*d*) out of them the Number employed and the type of employment provided to them ?

A.—Sri D. DEVARAJ URS (Minister for Labour, Housing and Transport).—

(*a*) (i) Number of bus owners ... 150
(ii) Number of buses ... 165+15 spare buses

(*b*) Compensation as stipulated under Section 68-G of the Motor Vehicles Act was paid to such of the operators as were eligible for it.

(*c*) Not available. The Number of persons who approached the Road Transport Corporation for employment is 743.

(*d*) Out of 743 persons approached, 477 have been employed and the details of employment provided are : 156 conductors, 206 Drivers, 52 Supervisory staff such as Traffic Controllers, Assistant Traffic Inspectors, etc., 34 Mechanical staff and 29 Ministerial Staff.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ ಬಸ್ ಮಾಲೀಕರುಗಳ ಸಂಖ್ಯೆ 150 ಮತ್ತು ಬಸ್ಸುಗಳ ಸಂಖ್ಯೆ 165+15 ಎಂದು ಹೇಳಿದ್ದೀರಿ. ಪರಿಹಾರವನ್ನು ಕೊಡುವಾಗ ಅರ್ಹರಾಗಿದ್ದಂಥ ಮಾಲೀಕರುಗಳಿಗೆ ಮಾತ್ರ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅರ್ಹರಾಗಿದ್ದವರು ಯಾರು ಅನರ್ಹರಾಗಿದ್ದವರು ಯಾರು ಮತ್ತು ನಿಗದಿ ಮಾಡಿದ ಮೊಬಲಗು ಎಷ್ಟು ?

†ಶ್ರೀ ಡಿ. ದೇವರಾಜ ಅರಸ್.—ಮಾಲೀಕರ ಸಂಖ್ಯೆ ಕೊಡುವುದರಲ್ಲಿ ಸ್ವಲ್ಪ ತಪ್ಪು ಆಗಿದೆ, ಅದನ್ನು ತಿದ್ದಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದು 105 ಎಂದು ಇರಬೇಕಾಗಿತ್ತು ಇಲ್ಲಿ 150 ಎಂದು ಇದೆ. ಒಟ್ಟು 24 ಜನ ಆಪರೇಟರ್ಸ್ ಅರ್ಹತೆಯನ್ನು ಪಡೆದಿದ್ದರು ಎಂದರೆ ಪರಿಹಾರವನ್ನು ಪಡೆಯುವುದಕ್ಕೆ ಅರ್ಹರಾಗಿದ್ದರು ಅದರಲ್ಲಿ 15 ಜನಕ್ಕೆ ಪರಿಹಾರವನ್ನು ಕೊಟ್ಟಿದೆ. ಇನ್ನು ಉಳಿದ ಜನ ಬೇರೆ ಆಲ್ಟರ್ನೇಟ್ ರೂಟ್ಸನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಪರಿಹಾರವನ್ನು ಕೊಡಬೇಕಾದ ಅಗತ್ಯ ಇಲ್ಲ ಎಂದು ವೆಹಿಕಲ್ ಆಕ್ಟಿನಲ್ಲೇ ಇದೆ. ಮತ್ತು ಯಾರಿಗೆ ಪರಿಹಾರವನ್ನು ಕೊಡಬೇಕೆನ್ನುವುದೂ ಮೋಟಾರ್ ವೆಹಿಕಲ್ ಆಕ್ಟಿನ 68 (ಜಿ)ನಲ್ಲಿ ನಮೂದು ಆಗಿದೆ. ಇನ್ನು ಯಾರು ಲೈಸೆನ್ಸ್ ತೆಗೆದುಕೊಳ್ಳುವ ಕಾಲಕ್ಕೆ ಅವರ ಪೀರಿಯಡ್ ಮುಗಿದುಹೋಗಿತ್ತು ಅಂತಹವರು ಪರಿಹಾರಕ್ಕೆ ಅರ್ಹರು ಆಗುವುದಿಲ್ಲ. ನಾವು ರಾಷ್ಟ್ರೀಕರಣ ಮಾಡುವ ಕಾಲಕ್ಕೂ ಅದಕ್ಕೂ ಸಿಂಕ್ರೊನೈಸ್ ಆದದ್ದರಿಂದ ಪುನಃ ಅವರಿಗೆ ಲೈಸೆನ್ಸ್ ಕೊಡಲಿಲ್ಲ ಮತ್ತು ಅವರು ಪರಿಹಾರಕ್ಕೆ ಅರ್ಹರೂ ಕೂಡ ಆಗುವುದಿಲ್ಲ. ಒಟ್ಟು ಮೊತ್ತ 16,543-44 ಎನ್.ಪಿ.ಯನ್ನು 15 ಜನಕ್ಕೆ ಪರಿಹಾರವಾಗಿ ಕೊಡಲಾಗಿದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಉದ್ಯೋಗ ದೊರಕಿಸಬೇಕೆಂದು 743 ಅರ್ಜಿಗಳು ಬಂದಿದ್ದರಲ್ಲಿ 477 ಮಂದಿಗೆ ಮಾತ್ರ ಕೆಲಸವನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ಇನ್ನು ಉಳಿದವರಿಗೆ ಏಕೆ ಕೊಡಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಎಲ್ಲರಿಗೂ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕೆ ಮುಖ್ಯ ಕಾರಣ ಏನೆಂದರೆ ಯಾವ ಕೆಲಸ ಮಾಡುವುದಕ್ಕೂ ಅರ್ಹತೆಗಳು ಇವೆ ಅವನ್ನು ನೋಡಿಕೆ ಡಬೇಕಾಗುತ್ತದೆ. ಇಂತಿಂತಹ ಕೆಲಸಕ್ಕೆ ಇಂತಿಂತಹ ಕ್ವಾಲಿಫಿಕೇಷನ್ ಅಂತ ಗದಿಯಾಗಿರುತ್ತವೆ. ಅದು ಇಲ್ಲದೇ ಇದ್ದವರಿಗೂ ಕೂಡ ಸೇರಿಸಿಕೊಳ್ಳಬೇಕೆಂದರೆ ಅವರಿಗೆ ಕೆಲಸ ಒದಗಿಸುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಇನ್ನು ಕೆಲವರು ಟೈಂಗೆ ಸರಿಯಾಗಿ ಬರಲಿಲ್ಲ. ಯಾವ ದಿವಸ ಸರ್ವೀಸ್‌ಗೆ ಬರಬೇಕೆಂದು ನಿರೀಕ್ಷೆ ಮಾಡಿದೆವೋ ಆ ದಿವಸ ಬರಲಿಲ್ಲ ಅದೂ ಒಂದು ಕಾರಣವಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಿಂದೆ ಮಾಲೀಕರಾಗಿದ್ದವರು ಈಗ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಕೆಲಸಗಾರರಾಗಿರುವವರು ಎಷ್ಟು ಜನ ?

ಶ್ರೀ ಡಿ. ದೇವರಾಜ ಅರಸ್.—ಯಾರೂ ಇಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—477 ಮಂದಿಗೆ ಮಾತ್ರ ಕೆಲಸ ಕೊಟ್ಟು ಇನ್ನು ಉಳಿದವರಿಗೆ ಕೆಲಸ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಆಗಲೇ ಉತ್ತರವನ್ನು ಹೇಳಿದೆ. ಇನ್ನೂ ಒಂದು ಸಾರಿ ಹೇಳಬೇಕೆಂದರೆ, ಕೆಲಸ ಎಂದರೆ ನಾನಾ ತರಹ ಕೆಲಸ ಇದೆ. ಕಂಡಕ್ಟರ್ ಕೆಲಸ ಇದೆ, ಡ್ರೈವರ್ ಕೆಲಸ ಇದೆ, ಕ್ಲಾರ್ಕ್ ಕೆಲಸ ಇದೆ, ಆರ್ಟಿಸಾನ್ಸ್ ವಗ್ಯೆರೆ ವಗ್ಯೆರೆ ಇರುತ್ತದೆ. ಯಾವ ಕ್ವಾಲಿಫಿಕೇಷನ್ ಕೂಡ ಇಲ್ಲದೇ ಕೆಲಸ ಮಾಡುವುದು ಎಂದರೆ ಜವಾನನ ಕೆಲಸ ಮತ್ತು ವಾಚ್‌ಮನ್ ಇಷ್ಟು ಮಾತ್ರ ಮಾಡಬಹುದು, ಬಾಕಿದೆಲ್ಲಕ್ಕೂ ಒಂದು ಕ್ವಾಲಿಫಿಕೇಷನ್ ಇದ್ದೇ ಇರುತ್ತದೆ. ಕಂಡಕ್ಟರ್ ಕೆಲಸ ಮಾಡಬೇಕಾದರೆ ಫಸ್ಟ್ ಎಡ್ ಬಗ್ಗೆ ಸ್ವಲ್ಪ ವಿಷಯ ತಿಳಿದುಕೊಂಡಿರಬೇಕು, ಅದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕು, ಮೊದಲೇ ಲೈಸೆನ್ಸ್ ಪಡೆದವನಾಗಿರಬೇಕು. ಹಿಂದೆ ಎಂ.ಜಿ.ಆರ್.ಟಿ.ಡಿ. ಆಗಿದ್ದಾಗಲೂ ಕೂಡ ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಹಾಕಿದ್ದರು ಎಂದು ಹೇಳಿ ನನಗೆ ಜ್ಞಾಪಕ ಇದೆ. ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಇಲ್ಲದೇ ಇದ್ದವರನ್ನು ಕಂಡಕ್ಟರ್ ಆಗಿ ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇರಲಿಲ್ಲ. ವಯಸ್ಸಿನ ಮಿತಿ ಏನೇ ಇದ್ದರೂ ಕೂಡ ಅದನ್ನು ವೇವ್ ಮಾಡಿ ತೆಗೆದುಕೊಳ್ಳಬಹುದಾಗಿತ್ತು ಆದರೆ ಆರ್ಟಿಸಾನ್ಸ್‌ನ್ನು ಕ್ವಾಲಿಫಿಕೇಷನ್ ಇಲ್ಲದೇ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಟೆಕ್ನಿಕಲ್ ಜಾಬ್ಸ್‌ಗೆ ಯಾರಾದರೂ ಬಂದರೆ ಅವರಿಗೆ ಕ್ವಾಲಿಫಿಕೇಷನ್ ಇಲ್ಲದೆ ಕೆಲಸ ಕೊಡುವುದಕ್ಕೆ ಆಗುವುದಿಲ್ಲ ಆದ್ದರಿಂದ ಯಾರಿಗೆ ಅರ್ಹತೆ ಇತ್ತೋ ಅವರಿಗೆ ಕೆಲಸ ಕೊಟ್ಟಿದೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—477 ಮಂದಿಗೆ ನೇಮಕ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಅದರಲ್ಲಿ ಹಿಂದಿನ ಪ್ರೈವೇಟ್ ಓನರ್ಸ್ ಹತ್ತಿರ ಇದ್ದಾಗ ಮಾಡಿದ ಸರ್ವಿಸನ್ನು ಅವರಿಗೆ ಕೂಡಿಸಿ ಕೊಟ್ಟಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಸರ್ವೀಸ್ ಕೂಡಿಸಿಕೊಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಸನ ಜಿಲ್ಲೆಯಲ್ಲಿ ಕಂಡಕ್ಟರುಗಳ ಷಾರ್ಟೇಜ್ ಇದ್ದು ಬಸ್ ನಡೆಸುವುದಕ್ಕೆ ತೊಂದರೆಯಾಗಿದೆ ಆದ್ದರಿಂದ ಹಿಂದೆ ಇದ್ದ ಬಸ್ ಮಾಲೀಕರ ಹತ್ತಿರ ಕೆಲಸದಲ್ಲಿ ಇದ್ದು ಎಲ್. ಎಸ್. ಫೇಲ್ ಆದವರು ಯಾರಾದರೂ ಇದ್ದರೆ ಅಂತಹವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಆಲೋಚನೆ ಸರ್ಕಾರದವರಿಗೆ ಏನಾದರೂ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಇಲ್ಲ.

ಶ್ರೀ ಎಸ್. ಶಿವಪ್ಪ.—ಹಾಸನ ಜಿಲ್ಲೆಯಲ್ಲಿ ರಾಷ್ಟ್ರೀಕರಣವನ್ನು ಸಂಪೂರ್ಣವಾಗಿ ಮಾಡಿದ್ದರ ಫಲವಾಗಿ ನೂರಾರು ಜನ ತಮ್ಮ ಸಂಸಾರದ ಜೀವನೋಪಾಯದ ವೃತ್ತಿಯನ್ನು ಕಳೆದುಕೊಂಡು ಬೀದಿಯಲ್ಲಿ ಭಿಕಾರಿಗಳಾಗಿ ಅಲೆಯುತ್ತಾ ಇದ್ದಾರೆ. ಅಂತಹವರಿಗೆ ಬೇರೆ ಒಂದು ಜೀವನ ವೃತ್ತಿಯನ್ನು ಕಲ್ಪನೆ ಮಾಡಿಕೊಡುವುದು ಸರ್ಕಾರದ ಒಂದು ಕರ್ತವ್ಯವಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಅವರಿಗೆ ಬೇರೆ ಜೀವನದ ವೃತ್ತಿಯನ್ನು ಕಲ್ಪನೆ ಮಾಡಿಕೊಡಬೇಕೆನ್ನುವ ಕರ್ತವ್ಯವನ್ನು ಎಲ್ಲೂ ಹೇಳಿಲ್ಲ.

ಶ್ರೀ ಎಸ್. ಶಿವಪ್ಪ.—ಈ ಜೀವನದ ವೃತ್ತಿಯನ್ನು ಕಳೆದುಕೊಂಡಿರತಕ್ಕ ಈ ಸಂಸಾರದವರಿಗೆ ಸರ್ಕಾರದವರು ಏನೊಂದು ಕಾರ್ಯಕ್ರಮವನ್ನು ಹಾಕಿ ಅವರೆಲ್ಲರಿಗೂ ಜೀವನದ ವೃತ್ತಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಆ ಕಾರ್ಯಕ್ರಮವೇನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮತ್ತೆ ಮತ್ತೆ ಅದೇ ಹೇಳಬೇಕಾಗಿದೆ. ಎರಡು ವಿಧವಾದ ಜನ ಅಲ್ಲಿ ಇದ್ದಾರೆ. ಯಾರು ಕೆಲಸವನ್ನು ಕಳೆದುಕೊಂಡಿದ್ದಾರೆ ಅವರಲ್ಲಿ ಯಾರು ಅರ್ಹರಾಗಿದ್ದರೋ ಅವರೆಲ್ಲರಿಗೂ ಕೆಲಸಗಳನ್ನು ಕೊಟ್ಟಿದ್ದೇವೆ, ಇನ್ನು ಕೆಲವರು ಕೆಲಸಬೇಕೆಂದು ಕೇಳಿದವರು ಕೂಡ ಸಕಾಲಕ್ಕೆ ನಮ್ಮ ಹತ್ತಿರ ಬರಲಿಲ್ಲ. ಇನ್ನು ಕೆಲವರು ಇಂಟರ್ ಡಿಸ್ಟ್ರಿಕ್ಟ್ ರೂಟ್ಸನ್ನು ತೆಗೆದುಕೊಂಡಿದ್ದಾರೆ. ನೆನ್ನೆ ಮೊನ್ನೆಯವರೆಗೂ ಕೂಡ ಅಲ್ಲಿ ಯಾರು ಬಸ್‌ಗಳನ್ನು ಓಡಿಸುತ್ತಾ ಇದ್ದರೋ ಅವರಿಗೇ ಆ ರೂಟ್ಸನ್ನು ಕೊಡುತ್ತಾ ಇದ್ದೇವೆ. ಇನ್ನು ಬಸ್ ಮಾಲೀಕರು ಬಸ್ಸುಗಳನ್ನು ಕಳೆದುಕೊಂಡಿದ್ದಾರೆ ಅವರಿಗೆ ಜೀವನೋಪಾಯಕ್ಕೆ ಕಲ್ಪಿಸಿ ಕೊಡಿ ಎಂದು ಆ ರೀತಿ ಕಲ್ಪಿಸಬೇಕಾದ ಅಗತ್ಯ ಇಲ್ಲ, ಕಲ್ಪಿಸಬೇಕೆಂದು ಯಾವ ಕಾನೂನಿನಲ್ಲೂ ಇಲ್ಲ.

Sri S. SIVAPPA.—Sir, the Hon'ble Minister was pleased to say that it is not the responsibility of the Government to create alternative employment for those bus owners who have lost the lines. Is this the

(SRI S. SIVAPPA)

principle of nationalisation ? When they have taken over the earnings of these people, should they not provide them with alternative employment ?

Sri D. DEVARAJ URS.—Sir, at the time of nationalisation all those who are entitled for compensation under the Act, will get compensation —nothing more, nothing less. Simply because a person is allowed to have a State carriage permit, it does not mean that Governmens has undertaken for all times to make a permanent bus operator. If he loses his job, it is his duty to find a job elsewhere.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರಾಷ್ಟ್ರೀಕರಣವಾದಾಗ ಖಾಸಗಿ ಮಾಲೀಕರು ಅವರಲ್ಲಿದ್ದ ಬಸ್ಸುಗಳನ್ನು ಕೊಟ್ಟರೆ ತೆಗೆದುಕೊಂಡಿದ್ದೀರಾ ? ಹಾಗೆ ತೆಗೆದುಕೊಂಡಿದ್ದರೆ ಎಷ್ಟು ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ತೆಗೆದುಕೊಳ್ಳುತ್ತೇವೆಂದು ಹೇಳಿದೆ, ಕೊಟ್ಟರೆ ತೆಗೆದುಕೊಳ್ಳುತ್ತೇವೆ. ಹಾಸನದಲ್ಲಿ ರಾಷ್ಟ್ರೀಕರಣವಾದಾಗ ಯಾರೂ ಕೊಡಲಿಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಬಸ್ ರೂಟುಗಳನ್ನು ಕಳೆದುಕೊಂಡವರಲ್ಲಿ ಎಷ್ಟು ಜನ ಕೆಲಸಕ್ಕೆ ಅರ್ಜಿ ಹಾಕಿದರು ? ಅವರಲ್ಲಿ ಎಷ್ಟು ಜನರಿಗೆ ಬೇಕಾದ ಅರ್ಹತೆ ಇತ್ತು ? ಎಷ್ಟು ಜನರನ್ನು ಆರಿಸಿಕೊಂಡಿರಿ ?

ಶ್ರೀ ಡಿ. ದೇವರಾಜ ಅರಸ್.—ಬಸ್ ಮಾಲೀಕರಲ್ಲಿ ಯಾರೂ ಕೆಲಸ ಬೇಕೆಂದು ಕೇಳಿರುವುದು ನನಗೆ ಜ್ಞಾಪಕವಿಲ್ಲ. ಬೇಕೆಂದು ಕೇಳಿದರೆ ಅರ್ಹತೆ ಇದ್ದರೆ ಕೆಲಸ ಖಾಲಿ ಇದ್ದಾಗ ಕೊಡಲು ಅಭ್ಯಂತರವಿಲ್ಲ.

ಶ್ರೀ ಎಸ್. ಶಿವಪ್ಪ.—10-20 ವರ್ಷಗಳ ಕಾಲ ಈ ವೃತ್ತಿಯನ್ನವಲಂಬಿಸಿರುವ ಬಸ್ ಮಾಲೀಕರು ಮತ್ತು ಕೆಲಸಗಾರರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಅವಕಾಶ ಕೊಡಬೇಕೆಂದು ಮತ್ತು ವ್ಯವಸಾಯಕ್ಕೆ ಭೂಮಿ ಕೊಡಬೇಕೆಂದು ನೆರವು ಕೇಳಲು ಎಷ್ಟು ಜನ ಬಂದಿದ್ದರು ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಈಗ ತಿಳಿಸಲು ಸಾಧ್ಯವಿಲ್ಲ, ಬೇಕಾದರೆ ಮುಂದೆ ತಿಳಿಸುತ್ತೇನೆ. ಆಲ್ಟರ್ನೇಟಿವ್ ಎಂಪ್ಲಾಯ್‌ಮೆಂಟ್ ಬೇಕೆಂದು ಬಹಳ ಜನರು ಮುಂದೆ ಬಂದಿಲ್ಲ. ಅನೇಕರಿಗೆ ಬೇರೆ ಆಲ್ಟರ್ನೇಟಿವ್ ರೂಟ್ಸ್ ಇತ್ತೆಂದು ಕಾಣುತ್ತದೆ. ಒಂದು ವೇಳೆ ಅವರು ನಿರುದ್ಯೋಗಿಗಳಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಪ್ರಾರಂಭಿಸುತ್ತೇವೆ, ವ್ಯವಸಾಯ ಮಾಡುತ್ತೇವೆ ಸಹಾಯ ಮಾಡಿ, ಜಮೀನು ಕೊಡಿ ಎಂದು ಕೇಳಿದರೆ ಅವರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

Sri S. SIVAPPA.—In view of the special circumstances prevailing in Hassan district on account of complete nationalisation, will the Government think of any feasibility of giving some concessions for these people who come to them for help ?

Mr. SPEAKER.—Why does the member speak about Hassan only ?

Sri S. SIVAPPA.—Sir, because of various influences, Bellary was not taken up, South Kanara was not taken up. But in Hassan, it is complete nationalisation.

Sri D. DEVARAJ URS.—Sir, he says, due to various influences; it is an insinuation and I refute it.

ಶ್ರೀ ಟಿ. ಎನ್. ಮಾದಪ್ಪಗೌಡ.—ರಾಷ್ಟ್ರೀಕರಣ ಮಾಡಿರುವುದರಿಂದ ಅನೇಕ ಬಸ್ ಮಾಲೀಕರಿಗೆ ತೊಂದರೆಯಾಗಿದೆ. ಆದುದರಿಂದ ಆ ವಿಷಯ ಚರ್ಚಿಸಲು ಅರ್ಧ ಗಂಟೆ ಅವಕಾಶ ಕೊಡಲು ಸಾಧ್ಯವೇ ?

Mr. SPEAKER.—The Hon'ble Member knows the rules.

ಶ್ರೀ ಹೆಚ್. ಡಿ. ದೇವೇಗೌಡ.—ಹಾಸನ ಡಿವಿಜನ್ನಿನಲ್ಲಿ ರಾಷ್ಟ್ರೀಕರಣವಾದಮೇಲೆ ಕಂಡಕ್ಟರ್ ಕೆಲಸಗಳು ಪೂರ್ಣವಾಗಿ ಭರ್ತಿ ಮಾಡಲ್ಪಡದಿರುವುದರಿಂದ ಸಕಾಲದಲ್ಲಿ ಬಸ್ಸುಗಳನ್ನು ಓಡಿಸಲು ತೊಂದರೆಯಾಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಿಂದೆ ಹಾಸನದ ಬಸ್ ಟ್ರಾನ್ಸ್‌ಪೋರ್ಟಿನ ವಿಚಾರ ಅವ್ಯವಸ್ಥೆಯಾಗಿತ್ತೆಂದು ಪತ್ರಿಯವರು ಹೇಳುತ್ತಿದ್ದರು. ಅದನ್ನು ಸರಿಪಡಿಸಲು ಏನು ಕ್ರಮ ಕೈಕೊಳ್ಳಲಾಗಿದೆ ?

ಅಧ್ಯಕ್ಷರು.—ಅದು ಹೇಗೆ ಇಲ್ಲಿ ಉದ್ಭವಿಸುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ವಿದ್ಯಾರ್ಹತೆಯ ವಿಷಯದಲ್ಲಿ ನಿರ್ಬಂಧ ವಿಧಿಸಿರುವುದರಿಂದ ಕಂಡಕ್ಟರ ಹುದ್ದೆಗಳನ್ನು ಪೂರ್ಣವಾಗಿ ಭರ್ತಿಮಾಡಲು ಅವಕಾಶವಾಗಿಲ್ಲವೆಂಬುದು ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಎಲ್. ಎಸ್. ಆದವರನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿದೆ. ಪ್ರೈವೇಟ್ ಆಪರೇಟರ್ಸ್ ಯಾರಾದರೂ ಎಲ್. ಎಸ್. ಆದವರು ಅರ್ಜಿ ಹಾಕಿದರೆ ಅವರನ್ನು ತೆಗೆದುಕೊಳ್ಳಲು ಅಭ್ಯಂತರವಿಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಪ್ರೈವೇಟ್ ಆಪರೇಟರುಗಳ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಏನಾದರೂ ಅನುಕೂಲ ಕಲ್ಪಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಆಗಲೇ ಹೇಳಿದ್ದೇನೆ, ಸ್ಟ್ಯಾಟ್ಯೂಟರಿ ಆಬ್ಲಿಗೇಷನ್ ಸರ್ಕಾರಕ್ಕಿಲ್ಲ, ಆದರೂ ಅಂಥ ತೊಂದರೆಯೇನಾದರೂ ಇದ್ದರೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—743 ಜನರ ಪೈಕಿ ಹಲವರು ಅನೇಕವೇಳೆ ತಪ್ಪುಮಾಡಿ ಶಿಕ್ಷೆಗೆ ಗುರಿಯಾಗಿರುವುದರಿಂದ ಆ ಕಾರಣದಿಂದ ಅವರನ್ನು ಕೈಬಿಡಲಾಗಿದೆಯಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಆ ಕಾರಣವೂ ಇದೆ.

Rules for the Recruitment of Officials for the Public Works Department.

*Q.—5. Sri J. SREENIVASA REDDY (Bangalore South).—

Will the Government be pleased to state:—

(a) whether there are any rules for the recruitment of officials for the Public Works Department, and if so, when they were published;

(b) the percentage or number of posts specified in the G. O. for the promotion of Diploma Holders and Junior Engineers to the Cadre of Assistant Engineers;

(c) whether it is a fact that only Diploma Holders are recently promoted to the Cadre of Assistant Engineers to make up the number of post specified for them as per the recent G. O. of 1960;

(d) whether they are aware that Junior Engineers who have put in more taan 8 years of service have not been promoted by giving effect to 1960 Government Order?

A.—Sri G. B. SHANKAR RAO (Parliamentary Secretary to the Minister for Public Works).—

(a) Yes. First published on 3rd December 1960 and sub-sequently amended on 23-10-1961, 8-6-1962, 13-8-1962, 22-10-1962, 11-4-1963 and 17-6-1963.

(b) 70 Posts for Diploma Holders. 347 posts for Junior Engineers.

(c) No.

(d) Yes.

ಶ್ರೀ ಜೆ. ಶ್ರೀನಿವಾಸರೆಡ್ಡಿ.—(ಈ) ಪ್ರಶ್ನೆಗೆ ಉತ್ತರವಾಗಿ ತಿಳಿಸಿರುವಂತೆ 8 ವರ್ಷಗಳಿಗಿಂತಲೂ ಹೆಚ್ಚು ಸರ್ವಿಸ್ ಆಗಿರುವ ಜೂನಿಯರ್ ಇಂಜಿನಿಯರುಗಳಿಗೆ ಇಂಜಿನಿಯರುಗಳಾಗಿ ಪ್ರಮೋಷನ್ ಕೊಡದಿರುವುದಕ್ಕೆ ಕಾರಣವೇನು ?

†Sri G. B. SHANKAR RAO.—Sir, promotions are governed by the Cadre and Recruitment Rules. They will have to wait for their chance.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಡಿಪ್ಲೊಮಾ ಅದವರಿಗೆ ಪ್ರಮೋಷನ್ ಕೊಟ್ಟು ಜೂನಿಯರ್ ಇಂಜಿನಿಯರುಗಳಿಗೆ ಕೊಡದಿರುವುದಕ್ಕೆ ಕಾರಣವೇನು ?

Sri B. D. JATTI.—Sir, certain percentage to the Diploma Holders has been fixed after serving for 10 or 12 years. The percentage is 4.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಅದನ್ನು ಗಮನಕ್ಕೆ ತಂದರೆ ಪ್ರಮೋಷನ್ ದೊರಕಿಸಿಕೊಡುತ್ತೀರಾ ?

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Construction of Kottamudi Bridge on the Cauvery River at Napoklu in Coorg District.

*Q.—326. Sri A. P. APPANNA (Virajpet).—

Will the Government be pleased to state :—

(a) the progress work of the construction of Kottamudi Bridge on the Cauvery River at Napoklu in Coorg District ;

(b) the time required to complete the same ?

A.—Sri VEERENDRA PATIL (Minister for Public Works).—

(a) work on sinking of wells for foundation is nearing completion and an outlay of Rs. 1.2 lakhs has been incurred so far.

(b) By August 1965.

Setting up of an Integrated Steel Plant in the South.

*Q.—396. Sri ANNARAO GANAMUKHI (Afzalpur).—

Will the Governmet be pleased to state :—

(a) whether the National Council of Applied Economic Research has said in its recent report, that there is an adequate warrant for setting up an integrated steel plant in the South to meet the growing needs of the four Southern States ;

(b) if the answer to (a) is in the affirmative, what is the sector-wise, category-wise and size-wise demand of Mysore State during the III and IV Plans ;

(c) whether the State Government impressed upon the Central Government on the need to locate the Steel Plant in Bellary District or any suitable place in Mysore State ?

A.—SRI K. MALLAPPA (Minister for Industries and Commerce).—

(*a*) Yes.

(*b*) Particulars are not readily available but the demand for finished steel in the Southern Region is expected to be 2.4 million tons by 1970-71.

(*c*) Yes.

Graduate Second Division Clerks working in P. W. D., Revenue and G. A. D.

**Q.*—503. SRI B. H. LAKSHMANAIAH (Belur).—

Will the Government be pleased to state :—

(*a*) the number of Graduate II Division Clerks working in Public Works Department, Revenue and General Administration Departments in in the State at present ;

(*b*) what is the difference in pay scale between Local candidate I Division Clerks and those permanent Graduate IInd Division Clerks ?

A.—SRI S. NIJALINGAPPA (Chief Minister).—

(*a*) This information is not readily available.

(*b*) The scale of pay of a I Division clerk is Rs. 130—270 in the Secretariat and Rs. 110—220 in other offices (except in few Departments like State Accounts, Treasuries, Registrar of High Court, where it is Rs. 120—240). The scale of pay of a II Division clerk is Rs. 80—150.

---

4 P.M.

Member's Representation.

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ನಾನು ಪ್ರಶ್ನೆಗಳನ್ನು ಕಳುಹಿಸಿ ಬಹು ದಿನಗಳಾದರೂ ಇನ್ನೂ ಅದಕ್ಕೆ ಉತ್ತರ ಬರಲಿಲ್ಲ. ಅದಕ್ಕಾಗಿ ಇಲ್ಲಿ ತಮ್ಮ ಗಮನವನ್ನು ಸೆಳೆಯಬೇಕೆಂದು ಇಚ್ಛಿಸುತ್ತೇನೆ.

MR. SPEAKER.—I will look into it. I have asked for a report. Supposing I get replies from Government, I cannot put more than 12 Questions, unless the House agrees.

ಶ್ರೀ ಎಸ್. ಭೀಮಣ್ಣ.—ಪ್ರತಿ ಸೆಷನ್ನಿಗೂ 10 ಪ್ರಶ್ನೆಗಳನ್ನು ಮಾತ್ರ ಕಳುಹಿಸಬೇಕೆಂದು ಇದೆ. ಇದಕ್ಕೆ ಉತ್ತರ ಬಾರದೇ ಇದ್ದರೆ ಇದು ಲ್ಯಾಪ್ಸ್ ಆಗುತ್ತದೆ. ಮುಂದೆ ನಾವು ಹತ್ತಕ್ಕೆ ಬದಲಾಗಿ 20 ಪ್ರಶ್ನೆಗಳನ್ನು ಕಳುಹಿಸಲು ಅವಕಾಶ ಮಾಡಿಕೊಡುತ್ತೀರಾ, ಹೇಗೆ?

MR. SPEAKER.—I will try to help the member. I will issue a general circular.

SIXTH REPORT OF THE COMMITTEE ON PRIVATE MEMBER'S BILLS AND RESOLUTIONS.

Presentation.

Sri A. R. PANCHAGAVI (Chairman).—I beg to present the Sixth Report of the Committee on Private Member's Bills and Resolutions.

Mr. SPEAKER.—The Sixth Report of the Committee on Private Members' Bills and Resolutions is presented.

Sri A. R. PANCHAGAVI.—I beg to move:

"That this Assembly agrees with the Sixth Report of the Committee on Private Members' Bills and Resolutions."

Mr. SPEAKER.—The question is.

"That this Assembly agrees with the Sixth Report of the Committee on Private Members' Bills and Resolutions."

The motion was adopted.

THE MYSORE APPROPRIATION (No. 2) BILL, 1964

[*Introduction*]

Sri B. D. JATTI (Minister for Finance).—Sir, I introduce the Mysore Appropriation (No. 2) Bill, 1964, which has been published in the *Mysore Gazette*, dated 29th March 1964, under Rule 61 of the Rules of Procedure and Conduct of Business in the Mysors Legislative Assembly.

Mr. SPEAKER.—The Mysore Appropriation (No. 2) Bill, 1964, is introduced.

Motion to consider.

Sri B. D. JATTI.—Sir, I beg to move:

"That the Mysore Appropriation (No. 2) Bill, 1964, be taken into consideration."

Mr. SPEAKER.—Motion moved:

"That the Mysore Appropriation (No. 2) Bill, 1964, be taken into consideration."

I suppose the Hon'ble Members know the convention in this matter. We should not take more than 5 or 10 minutes on this subject...

Sri C. J. MUCKANNAPPA (Sira).—My friend, Sri J. B. Mallaradhya, when he was the Leader of the Opposition in this House, has taken three hours to discuss this Appropriation Bill, when my friend, Sri B. D. Jatti, was the Chief Minister.

Mr. SPEAKER.—I believe, the Hon'ble Member Sri C. J. Muckannappa, knows the convention well.

† Sri B. D. JATTI.—Sir, I placed before this Hon'ble House a true financial position and I want to reiterate that while the revenue account may show the largest surplus with the implementation of the revised rates of land revenue as a result of resurvey and re-settlement, the overall Budget shows a deficit of Rs. 10 crores. For the entire Plan period, there may be a deficit of Rs. 50 crores as I have already explained. The reasons for short-fall are five: (1) revision of scales of pay, (2) increase in repayment of loans to the Centre, (3) increase of debt service charges, (4) non-realisation of revenue from new taxes to the extent anticipated due to late implementation, and (5) non-realisation of contributions from public undertakings and local bodies to the extent anticipated.

The Appropriation Bill now placed before you includes Demands voted by the Assembly of Rs. 162, 41, 37, 100 and appropriation, that is charged section, of Rs. 84, 45, 05, 800 making a total of Rs. 246, 86, 42, 900. Hon'ble Members will appreciate that this includes Demands under Suspense, Recoveries, etc., and when these are excluded the net booking will be Rs. 227,19,90,400 only. This is the total amount which we will have now to accept in this House. We have approached the Government of India to give us some additional amount to accommodate us temporarily till our position improves in recovering more dues and also in adding our resources from different projects. While the Hon'ble Chief Minister was replying yesterday, perhaps he forgot to reply on one point. He has spoken on various occasions. I want to mention that. The members of the Planning Commission and the Government of India have been good enough or kind enough to give us an additional ammount of Rs. 2½ crores to develop the backward areas, and again we hope that they are likely to give us one crore more very shortly. The Chief Minister had a talk with the persons concerned. We should not forget the additional help that we have received from the Planning Commission and the Government of India. I am thanking them for doing this on behalf of the Chief Minister.

Regarding the suggestion made here or in the Upper House, I have also borne in mind the need for economy and shall try to effect the economy in expenditure to the extent possible without detriment to efficiency. Otherwise, the Departments will suffer and will not get the results as expected. Therefore, during the year 1964-65, the Departments do not come up unnecessarily for supplementary estimates unless they are covered by additional Central assistance or receipts or crresponding savings under other heads or Demands becoming necessary on technical grounds. One of the Hon'ble Members pointed out certain defects in the books which have been printed and distributed. If I do not clarify, they may carry with them some doubts. I will take only two minutes for clarifying those points. They referred to the omission of certain serial numbers with the Head of Account at page 240 of the Budget Estimates for 1964-65. These three serial numbers are as under:

-VI Schemes in the Second Five-Year Plan.

(SRI B. D. JATTI)

XVIII Short-term Courses.

XXI Opening of Hostels for backward classes.

These have been omitted as no expenditure has been incurred during 1962–63 and no provision has been proposed during the years 1963-64 or 1964-65. The correct Head of Account is 'XIX–Training College for Men'. The word 'Men' was omitted in printing, but this is correctly noted at page 256 of the Budget Estimates. These were the slight omissions. Perhaps, we may call them 'Printers Devil'. These are the corrections which the Members will please keep in mind. With that, I do not want to say anything more. I wish the Hon'ble the Leader of the Opposition will be fully satisfied and will pass the Appropriation Bill.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ). –ಮಾನ್ಯ ಸಭಾಪತಿಗಳೇ, ಈಗ ತಾನೆ ನಮ್ಮ ಆರ್ಥಿಕ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಒಂದು ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಕಾಣಿಸಿರುವಂತೆ 246 ಕೋಟಿ, 86 ಲಕ್ಷ 42 ಸಾವಿರದ 900 ರೂಪಾಯಿಗಳನ್ನು ಖರ್ಚುಮಾಡತಕ್ಕ ಅಧಿಕಾರವನ್ನು ಪಡೆಯುತಕ್ಕ ಉದ್ದೇಶದಿಂದ ಈಗ ಸಭೆಯ ಮುಂದೆ ಇಟ್ಟಿರತಕ್ಕ ಮಸೂದೆಯ ತತ್ಸಂಬಂಧದಲ್ಲಿ ಇಲ್ಲಿಗೆ ಸುಮಾರು 2-3 ವಾರಗಳಿಂದ ದೀರ್ಘ ಚರ್ಚೆನಡೆದು ಈ ವಿಚಾರದಲ್ಲಿ ವಿರೋಧ ಪಕ್ಷಕ್ಕೆ ಸೇರಿರತಕ್ಕ ನಾವು ಕೊಟ್ಟ ಅನೇಕ ಸಲಹೆಗಳಲ್ಲಿ ಕೆಲವನ್ನಾದರೂ ಸರ್ಕಾರದವರು ಅಂಗೀಕರಿಸಿ ಇದರಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ ತರಬಹುದಾಗಿತ್ತು. ಆದರೆ ನಾವು ಹೇಳಿದ್ದ ಯಾವ ಒಂದು ಸಲಹೆಯ ಬಗ್ಗೆಯೂ ಸರ್ಕಾರ ಅದನ್ನು ಮನಸ್ಸಿಗೆ ತೆಗೆದುಕೊಂಡಂತೆ ಕಾಣುತ್ತಿಲ್ಲ, ಅದಕ್ಕಾಗೇ ಈ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಯಾವ ಒಂದು ಬದಲಾವಣೆಯೂ ಆಗಿಲ್ಲ.

Mr. SPEAKER.—Is there anything, new which the Hon'ble member wants to say at this stage whatever the member, what he wanted to say, he has already said it.

ಶ್ರೀ ಎಸ್. ಶಿವಪ್ಪ.—ಆದರೆ ನಾನು ಹೇಳುವುದಿಷ್ಟೆ: ನಾವು ಹೇಳತಕ್ಕ ವಿಚಾರಗಳಲ್ಲಿ ಎಷ್ಟೋ ಅವರ ಮನಸ್ಸಿನಲ್ಲೇ ಇರುತ್ತವೆ. ಅಂಥ ವಿಚಾರಗಳನ್ನಾದರೂ ಅವರು ಒಪ್ಪಬಹುದಾಗಿತ್ತು. ಆದರೆ ಹಾಗೆ ಸರ್ಕಾರದವರು ಮಾಡದಿರುವುದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಾನು ಈಗ ಈ ಅಪ್ರೋಪ್ರಿಯೇಷನ್ ಮಸೂದೆಯನ್ನು ವಿರೋಧಿಸುವುದಕ್ಕೆ ನಿಂತಿದ್ದೇನೆ. ಯಾವಾಗ ಸರ್ಕಾರದವರು ನಾವು ಹೇಳಿದ್ದನ್ನು ಒಪ್ಪುವುದಿಲ್ಲವೋ; ಅವರು ಹೇಳಿದ್ದನ್ನು ನಾವು ಒಪ್ಪುವುದಿಲ್ಲವೆಂದು ಹೇಳುವುದಕ್ಕೂ ಅವಕಾಶವಿದ್ದೇ ಇದೆ. ಸರ್ಕಾರದವರ ನೀತಿ ಒನ್‌ವೇ ಟ್ರಾಫಿಕ್ಕಾಗಿದೆ: ಈ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಇದೇ ಸಭೆಯಲ್ಲಿ ಈ ಸಂಬಂಧದಲ್ಲಿ ಮಾಡಿರತಕ್ಕ ಭಾಷಣಗಳನ್ನು ಕೂಲಂಕಷವಾಗಿ ನಾವೆಲ್ಲರೂ ಕೇಳಿದ್ದೇವೆ. ಈ ಮಾತನ್ನು ನಾನು ಹೇಳುವಾಗ ಈ ಸಭೆಯಲ್ಲಿ ಏನೊಂದು ಎದ್ದು ಕಾಣುತ್ತಿತ್ತೆಂದರೆ: ಹಣವನ್ನು ಸರ್ಕಾರದವರು ದೇಶಾಭಿವೃದ್ಧಿಗೆ ಉಪಯೋಗಮಾಡುವಾಗ, ಅದನ್ನು ವಿನಿಯೋಗಿಸುವಾಗ ಪ್ರದೇಶ, ಪ್ರದೇಶಕ್ಕೆ ಒಂದೊಂದು ರೀತಿಯಲ್ಲಿ ತಾರತಮ್ಯ ಉಂಟಾಗಬಹುದೆಂಬ ಒಂದು ಶಂಕೆಯನ್ನು ಶಭೆಯಲ್ಲಿ ವ್ಯಕ್ತಪಡಿಸಿರುತ್ತಾರೆ. ಈ ಶಂಕೆಯನ್ನು ನಿವಾರಣೆಮಾಡತಕ್ಕ ಜವಾಬ್ದಾರಿ ಸರ್ಕಾರದವರ ಮೇಲಿದೆ. ನಮ್ಮ ಸರ್ಕಾರಕ್ಕೆ ಭಾವೈಕ್ಯತೆಯನ್ನು ಸಾಧಿಸತಕ್ಕ ಒಂದು ಶಕ್ತಿಯನ್ನು ಸಂಪಾದಿಸಬೇಕಾಗಿದ್ದರೆ—ಅವರು ಈ ಶಂಕೆಗೆ ಅವಕಾಶ ಕೊಡಬಾರದು. ಈ ದಿವಸ ಅಂಥಾ, ಒಂದು ಜವಾಬ್ದಾರಿ ನಮ್ಮ ಹಣಕಾಸಿನ ಮಂತ್ರಿಗಳ ಮೇಲೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಮೇಲೂ ಬಿದ್ದಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳವರು ನಮ್ಮ ರಾಜ್ಯವನ್ನು ಒಂದು ಸುಂದರ ನಾಡನ್ನಾಗಿ ಮಾಡಬೇಕೆಂದು ಒಂದು ದೊಡ್ಡ ಮಾತನ್ನಾಡಿದ್ದಾರೆ. ಈ ದಿವಸ ದೇಶದಲ್ಲಿರತಕ್ಕ ಎಲ್ಲಾ ಕನ್ನಡಿಗರ ಬಾಳು ಉತ್ತಮವಾಗಬೇಕಾಗಿದೆ, ಇದಕ್ಕಾಗಿ ದೇಶದ ಸಂಪತ್ತು ಜಾಸ್ತಿಯಾಗಬೇಕು. ಹೀಗೆ ದೇಶದ ಸಂಪತ್ತನ್ನು ಹೆಚ್ಚಿಸಿ ನಾಡನ್ನು ಸುಂದರವಾಗಿ ಮಾಡಬೇಕು. ಇಷ್ಟೆಲ್ಲಾ ಒಂದೇ ರೀತಿಯಾಗಿ ಸಮಗ್ರಭಾಗದಲ್ಲೂ ನಡೆದರೆ ಆಗ ದೇಶದಲ್ಲಿ ಭಾವೈಕ್ಯತೆ ಬಂದೇ ಬರುತ್ತದೆ. ಈ ಭಾವೈಕ್ಯತೆಯ ಮಾತನ್ನು ಹೇಳತಕ್ಕ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲಿಚ್ಛಿಸು

ತ್ತೇನೆ: ಈ ಭಾವೈಕ್ಯತೆಯ ವಿಚಾರದಲ್ಲಿ ಒಬ್ಬ ಕವಿಗಳು ಒಂದು ಕಥೆಯನ್ನು ಹೇಳಿದ್ದಾರೆ: ಅದು ತೋಳ ಕುರಿಮರಿಯ ಕಥೆ. ತೋಳನು ಕುರಿಗಳನ್ನು ಕರೆದು ನೀವುಗಳ್ಯಾರೂ ಹೆದರಬೇಕಾದ್ದಿಲ್ಲ, ಭಯಪಡಬೇಕಾದ್ದಿಲ್ಲ, ನೀವೆಲ್ಲರೂ ಸುರಕ್ಷಿತವಾಗಿರಬೇಕಾಗಿದ್ದರೆ ನೀವೆಲ್ಲರೂ ಬಂದು ನಮ್ಮಲ್ಲಿ ಐಕ್ಯವಾಗಿಬಿಡಿ, ಆಗ ನೀವೆಲ್ಲರೂ ಭಯವಿಲ್ಲದೆ ಸುರಕ್ಷಿತವಾಗಿರಬಹುದು ಎಂದು ಕುರಿಗಳಿಗೆ ಆ ತೋಳನು ಹೇಳಿದಂತಾದರೆ ನಾವು ಈ ಭಾವೈಕ್ಯತೆಯನ್ನು ಸಾಧಿಸಿದಂತಾಗುವುದಿಲ್ಲ. ಆ ರೀತಿ ಆಗಬಾರದೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಾವು ಜನರಲ್ಲಿ ಒಂದು ಒಳ್ಳೆಯ ಭಾವನೆಯನ್ನುಂಟುಮಾಡಬೇಕು ಅಂಥ ಒಂದು ಒಳ್ಳೆಯ ವಾತಾವರಣದಲ್ಲಿ ಭಾವೈಕ್ಯತೆಯನ್ನು ಸಾಧಿಸತಕ್ಕ ನಮ್ಮ ಮಂತ್ರಿಗಳೆಲ್ಲರ ಮೇಲೂ ಬಿದ್ದಿದೆ. ಆದರೆ ಈ ದಿವಸ ಶ್ರೀಮಾನ್ ಜತ್ತಿಯವರೂ ಮತ್ತು ಶ್ರೀಮಾನ್ ಕಂಠಿಯವರೂ ಭಾವೈಕ್ಯತೆಯನ್ನು ಸಾಧಿಸಿದ್ದೇವೆಂದು ಅವರು ತಮ್ಮ ತಮ್ಮ ಭುಜಗಳನ್ನು ತಾವೇ ತಟ್ಟಿಕೊಳ್ಳುವುದಿಲ್ಲ, ಈ ವಿಚಾರದಲ್ಲಿ ಸಂಶಯಾತ್ಮಕ ವಿಚಾರಗಳನ್ನೆತ್ತಿರುವ ಶ್ರೀ ಮುಕ್ಕಣ್ಣಪ್ಪನವರೂ ಮತ್ತು ಶ್ರೀ ಟಿ. ಎನ್. ಮಾದಪ್ಪಗೌಡರೂ ಭುಜ ತಟ್ಟಿದರೆ ಅದಕ್ಕೆ ಮಾನ್ಯತೆಯಿದೆ. ಆ ರೀತಿ ತಾವು ದಿನ ಚರಿಯ ಕೆಲಸಕಾರ್ಯಗಳನ್ನು ತೋರಿಸಿದಲ್ಲಿ ಅವರು ಮುಂದಿನ ಇದೇ ಬಡ್ಜೆಟ್ ಅಧಿವೇಶನದಲ್ಲಿ ತಮ್ಮ ನಿಷ್ಪಕ್ಷಪಾತವಾದ ಕಾರ್ಯಾಚರಣೆಯಿಂದ ಅವರು ತಮ್ಮ ಭುಜ ತಟ್ಟುವಂತೆ ಕೆಲಸಮಾಡಿ ತಾವು ಈ ಭಾವೈಕ್ಯತೆಯನ್ನು ಸಾಧಿಸಿ ಆ ಒಂದು ಕೀರ್ತಿಪಡೆಯುವಂತೆ ಕೆಲಸಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಾನನಿರೋಧದ ವಿಚಾರದಲ್ಲಿ ಒಂದು ಮಾತನ್ನು ಇಲ್ಲಿಯವರೆಗೆ ಯಾರೂ ಹೇಳಿಲ್ಲ. ಅದಕ್ಕಾಗಿ ನಾನು ಒಂದು ವಿಚಾರವನ್ನು ಈಗ ತಿಳಿಸಬೇಕಾಗಿದೆ. ಈಗ ಈ ಪಾನ ನಿರೋಧ ದೇಶದ ಎಲ್ಲಾ ಭಾಗಗಳಲ್ಲೂ ಜಾರಿಯಲ್ಲಿದೆ. ಆದರೆ ಈ ಬೆಂಗಳೂರು ನಗರದಲ್ಲಿ ಮಾತ್ರ ಜಾರಿಯಲ್ಲಿಲ್ಲ. ಈ ಸಭೆಯ ಕೆಲಸ ಕಾರ್ಯಗಳು ಸುಗಮವಾಗಿ ಶಾಂತರೀತಿಯಿಂದ ನಡೆಯಬೇಕಾದರೆ ಕನಿಷ್ಟಪಕ್ಷ ಈ ವಿಧಾನ ಸೌಧಕ್ಕೆ ಒಂದು ಮೈಲಿ ಫಾಸಲೆಯೊಳಗೆಲ್ಲೂ ಈ ಪಾನಮಾಡತಕ್ಕದ್ದು ಇರಬಾರದೆಂದು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ದೇಶದ ಆಶೋತ್ತರಗಳನ್ನು ಈಡೇರಿಸತಕ್ಕ ಜನಸಮುದಾಯ ಬಂದು ಸೇರತಕ್ಕ ಕಡೆಯಲ್ಲಿ, ಆಡಳಿತ ಪಕ್ಷದವರಿಗೆ ಮಹಾತ್ಮಾ ಗಾಂಧಿಯವರ ತತ್ವದಲ್ಲಿ ನಂಬಿಕೆಯಿದ್ದಲ್ಲಿ ಈ ಕೂಡಲೇ ಸರ್ಕಾರದವರು ಇದೊಂದನ್ನಾದರೂ ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಅಧ್ಯಕ್ಷರು ಅನವಶ್ಯಕವಾದ ಚರ್ಚೆಬೇಕಾಗಿಲ್ಲವೆಂದು ಹೇಳಿದ್ದಾರೆ. ಆ ಮಾತಿಗೊಳಪಟ್ಟು ನಾನು ಇನ್ನೊಂದು ವಿಚಾರವನ್ನು ತಮ್ಮ ಮುಂದಿಡಬಯಸುತ್ತೇನೆ. ಇನ್ನು ಸರ್ಕಾರದವರೇ ನೇಮಕ ಮಾಡಿರತಕ್ಕ ಅನೇಕ ಕಮಿಟಿಗಳಲ್ಲಿ ಒಂದಾದ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ನೋಡಿದರೆ ಸರ್ಕಾರದವರು ನಾವೇನು ಇಲ್ಲಿ ಒಂದು ಒಪ್ಪಿಗೆಯನ್ನು ಹಣದ ವಿನಿಯೋಗದ ವಿಚಾರದಲ್ಲಿ ಕೊಡುತ್ತೇವೋ ಅದಕ್ಕೆ ಮೀರಿ ಹೋಗಿ ಅವರು ಹಣವನ್ನು ಖರ್ಚು ಮಾಡಿರತಕ್ಕ ನಿದರ್ಶನಗಳು ಅನೇಕವಿವೆ. ಇದನ್ನು ತಪ್ಪಿಸಲೇಬೇಕು, ಯಾವ ಒಂದು ಇಲಾಖೆಯೇ ಆಗಲಿ ಹಣದ ಮಿತಿಯನ್ನರಿತು ಖರ್ಚುಮಾಡಬೇಕು. ಈ ಒಂದು ನೇಮವನ್ನು ಆರ್ಥಿಕ ಸಚಿವರು ಕಟ್ಟುನಿಟ್ಟಾಗಿ ಪಾಲಿಸಲೇಬೇಕು, ಇಲ್ಲದಿದ್ದರೆ ಈ ಬಡ್ಜೆಟ್ಟಿಗಿರತಕ್ಕ ಪಾವಿತ್ರತೆ ಹೋಗುತ್ತದೆ. ಆಡಳಿತ ಪಕ್ಷದವರು ವಿರೋಧ ಪಕ್ಷದವರನ್ನು ತಮ್ಮ ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ನಾವು ಎಷ್ಟು ದುಡ್ಡನ್ನು ಖರ್ಚುಮಾಡುವುದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೋ ಅಷ್ಟನ್ನು ಅವರು ಖರ್ಚುಮಾಡಲಿ. ಮತ್ತು ನಾವು ಖರ್ಚುಮಾಡಲು ಕೊಡತಕ್ಕ ಹಣದಲ್ಲಿ ಅವರು ಒಂದು ಕಾಸನ್ನೂ ಉಳಿಸಬಾರದು. ಈ ಒಂದು ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳುತ್ತೇನೆ. ಆದರೆ ನಾವುಗಳೆಲ್ಲರೂ ಇಲ್ಲಿಯತನಕ ಹೇಳಿದ್ದು ಬೋರ್ಕಲ್ಲಮೇಲೆ ಮಳೆಸುರಿದಂತಾಗಬಾರದು. ಈಗಾಗಲೇ ಆ ಬೊಂಬಾಯಿ ಸರ್ಕಾರದಲ್ಲಿ ಅಲ್ಲಿಯ ಅಡ್ಮಿನಿಸ್ಟ್ರೇಷನ್ನಿನಲ್ಲಿ ಅಲ್ಲಿಯ ವಿರೋಧ ಪಕ್ಷದವರನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಒಂದು ರೈಟ್‌ವಿಂಗ್, ಒಂದು ಲೆಫ್ಟ್‌ವಿಂಗ್ ಇದ್ದಹಾಗೆ, ಆ ಮದರೆ ಪಾರ್ಲಿಯಮೆಂಟಿನಲ್ಲಿದ್ದಹಾಗೆ ಇಲ್ಲಿಯ ಕೆಲಸ ಕಾರ್ಯಗಳು ನಡೆಯುವಂತೆ ಮಾಡಬೇಕಾದ್ದು ಅತ್ಯಗತ್ಯ. ಇಷ್ಟನ್ನು ಮಾಡದಿದ್ದರೂ ಕೊನೆಯಪಕ್ಷ ಪ್ರತಿಯೊಂದು ಇಲಾಖೆಗೂ ಎಲ್ಲ ಸದಸ್ಯರುಗಳನ್ನೊಳಗೊಂಡ ಒಂದೊಂದು ಸಮಿತಿಯನ್ನಾದರೂ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಇದನ್ನು ಕನ್‌ಸಲ್ಟೇಟೀವ್ ಕಮಿಟಿಯೆಂತಲಾದರೂ ಕರೆಯಿರಿ. ಅದಕ್ಕೆ ನನ್ನ ವಿರೋಧವಿಲ್ಲ. ಈ ಒಂದು ಸಲಹೆಯನ್ನಾದರೂ ಸರ್ಕಾರದವರು ಕಾರ್ಯಗತಮಾಡಬೇಕೆಂದು ಹೇಳಿ, ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(*Sri B. R. Sunthankar rose*)

MR. SPEAKER.—I suppose that Sri Sunthankar heard what I told Sri Shivappa. Let him not violate the convention.

† Sri B. R. SUNTHANKAR (Belgaum City).—Sir, I only want to putforward two or three points.

My first point is regarding the Social and Developmental Services under the Head D—Annual Financial Statements. Sir, there are a number of heads in this major head—education, medical, public health, agricultural, co-operation and so on. All these heads are very important from the point of view of a Welfare State. for this year *i.e.*, 1964-65, the amount allotted is Rs. 52.85 crores.

But if we look to the performance in respect of social and developmental services during the last 6 years, it is very disappointing. It has been found out that the budget provisions are not fully utilised under this head. From 1958-59 to 62-63 I have calculated some figures and year after year there has been a shortfall in expenditure. In the year 58-59 under this head "social and developmental services" there has been a shortfall of Rs. 372 lakhs. In 1959-60, there has been a shortfall of Rs. 441 lakhs; in 1960-61 the shortfall is less; it is Rs. 18 lakhs. In 1961-62 the shortfall is Rs. 425 lakhs and in 1962-63 it is a maximum-Rs. 1043 lakhs. According to the revised estimates, there has been a slight increase under this head. Looking to this performance it seems that Government is not paying the attention that it deserves to these developmental services and they are very important, particularly agriculture and animal husbandry. Under agriculture and allied heads there has been a shortfall in expenditure to the extent of 27 per cent in the Second Five Year Plan. That is why all the targets of agricultural production could not be reached. That is one of the reasons why all the targets could not be reached in the Second Five Year Plan. If we look to the figures for the six years from 1958-59 the total budget provision under the head 'Agriculture' was Rs. 1326 lakhs and the actuals that were spent was Rs. 1178 lakhs. So there was a shortall of Rs. 250 lakhs during all these six years. The same case with Animal Husbandry. Under Animal Husbandry in the Second Plan, only 56 per cent of the plan outlay was spent. That means, nearly 44 per cent remained unutilised.

Mr. SPEAKER.—Does the Hon'ble Member want all the money to be spent this time ?

Sri B. R. SUNTHANKAR.—Yes. One more point about ports and Pilotage. This State has a coast of 200 miles and we have been boasting about it, but we have been doing nothing for the coast. We are not sea minded...

Sri C. J. MUCKANNAPPA.—Is it C or C/2 ?

Mr. SPEAKER.—What does he want to know about the sea ? Let him be thrown into the sea, if he wants to know anything about it.

Sri C. J. MUCKANNAPPA.—I know swimming.

Sri B. R. SUNTHANKAR.—If we are to utilise and explore all the possibilities, the administration will have to be sea-minded. So let us hope that the Finance Mininister will see that all the budget provisions

under all the different heads under the social and developmental services are fully utilised so that the people of the State may get maximun benefit from out of all the social services.

My second point is regarding agricultural production. The Revenue Minister Sri Krishnappa, a short while ago, admitted that it has notbeen possible to keep pace with the schedule. A time has come to ponder very seriously over this food problem. On the food front, we will have to do something more and very radical. In this connection I would like to make these suggestions. One is that some incentive should be given. There is no provision at present for incentive. Suppose a cultivator shows good results, shows some better results and produces extraordir nary crop. In that case, some incentive should be given to him, say incentive in the form of remission in land revenue. Government should consider my suggestion.

MR. SPEAKER.—Is the provision made for that in the Budget ?

Sri B. R. SUNTHANKAR.—There is no provision there. If a cultivator shows better...........

Sri B. D. JATTI.—How can we go against the budget provision now ?

Sri B. R. SUNTHANKAR.—That is my suggestion. Government should think over it. My second suggestion is, there should be some compulsion and for that compulsion, some legislative measure should be introduced. We have passed the Land Reforms Bill. We have been looking to the aspect of social justice. Land to the tiller, that is the slogan, but if land is given to the tiller, there is no obligation on his part to increase the agricultural production. There is nothing of that sort. There should be legislative measure to force a cultivator......

Sri ANGADI CHANNABASAPPA (Hadagali).—There cannot be any presumption about that.

Sri B. R. SUNTHANKAR.—In the MadrasLand Utilisation Act, there is a provision for transferring land for a period to those make proper use of it. In case a cultivator is found to neglect his land and not show good results, there is a provision to tranfer the land for a period to a person who would make proper use of it. I may quote another instance from Britain. In 1947 when the first Labour Government came into power, they passed a legislation giving power to the Agriculture Commission to remove inefficient farmers. Some such legislative measure should be adopted by this Government and if Government intends to bring such a measure here, we will support the Government in this respect.

My third point is regarding unemployment The aim of the Planning Commission is to reduce unemployment and give more and more scope for employment. In the Third Five Year Plan there is a target to provide employment for 5.67 lakhs of persons. Looking to the achievements in the three years of the Third Plan, the achievment is very disappointing. I will only make reference to the industrial

(SRI B. R. SUNTHANKAR)

growth. During the five years from 1956 to 1961, the factories in the State have grown from 635 to 23,011. There has been an increase of 41.3 per cent in factories, but if we look to the figures about the average daily employment, the employment has not been commensurate with the increase in factories.

4-30 P.M.

In 1956, the averge daily employment was 1,72,000 but in 1961 the average daily employment rose only to 1,78,000. There was an increse of 3.5 percent only. If we look to the other Statees, in the same period, Madras showed an increas of 17.1 per cent Andhra Pradesh 11.18 per cent Kerala 4.2 per cent. Our State could show an increase of only 3.5 per cent. That means we have not been able to provide more and more employment. That would be a serious problem and Government will have to see that greater opportunities are given to the unemployed.

There were a number of important and valuable reports. The Planning Commission as well as the Central Government have appointed some committees and their reports are published. I will mention only 2 or 3 reports. The first is the Nalgar Committee in respect of agriculture and agricultural production. I want to know what action this Government has taken on that report. There is a scheme regarding implementation of the recommendations of the Nalgar Committee. But the achievement as shown in the volume supplied to us is nil. Nothing has been done by this Government to implement those recommendations. Another important report is the Seed multiplication committee. I want to know from the Government what action they have taken on the recommendations of this committee ? There are separate reports, one report for the whole of India and another for Mysore State. I want to know what action this Government has taken on the reoommendations of that committee. There is a third report regarding my district, the report on Industrial Development Potentialities of Belgaum district. I do not know if such reports are available in respect of other districts. This report was prepared at the instance of the Planing Commission and the economic investigation branch of the Small scale. Industries Instititute, Bombay, conducted this survey of the district. The recommendations in the report say that there is a possibility of expansion of agricultral implements production, ceremic ware, and of starting new industries as starboard. This report was submitted to Government in 1959. I want to know what the Goverement has done regarding these recommendations. Has Government formulated any scheme ? My grievance is that the Government is not looking into the valuable recommendations of these reports. Government should set-up a machinery to formulate schemes to implement the recommendations.

Mr. SPEAKER.—There was a loud discussion going on about the rules relating to Appropriation Bills and their discussion. I will read the relevant portions of the rule.

> "(4) the debate on an Appropriation Bill shall be restricted to matters of public importance or administrative policy implied in the grants covered by the Bill which have not already been raised while the relevant demands for grants were under consideration."
>
> "(5) The Speaker may, in order to avoid repetition of debate, require members desiring to take part in discussion on an Appropriation Bill to give advance intimation of the specific points they intend to raise, and he may withhold permission for raising such of the points as in his opinion appear to be repetitions of the matters discussed on a demand for grant or as may not be of sufficient public importance."

Therefore the scope of discussion is clear. I am cautious only to the extent that it lies in my power to see that the rights of the House are sufficiently protected.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ ಈ ವರ್ಷದ ಬಡ್ಜೆಟ್ ಪುಸ್ತಕದ ಪುಟ 40ರಲ್ಲಿ ಕೊಟ್ಟಿರತಕ್ಕ ಫಿಗರ್ಸ್ ತಪ್ಪು ಇದೆ. 79 ಲಕ್ಷ ರೂಪಾಯಿಗಳು ಎಂದು ಇದೆ. ಅದು ಸರಿಯೇ ಹೇಗೆ ಎಂಬುದನ್ನು ಸ್ವಲ್ಪ ನೋಡಿ.

Mr. SPEAKER.—It may be a printing error.

Sri B. D. JATTI.—I thank him.

† **ಶ್ರೀ ಸಿ. ಜೆ. ಮುಕ್ಕಣ್ಣಪ್ಪ.**—ಮಾನ್ಯ ಅಧ್ಯಕ್ಷರೇ ಈಗ ಈ ಸಭೆಯ ಮುಂದಿರುವ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಒಂದೆರಡು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ಈಗ ಅಧ್ಯಕ್ಷರು ಈ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ರೂಲನ್ನು ವಿಧಿಸಿದ ಮೇಲೆ ನಾನು ಸ್ವಲ್ಪ ಎಚ್ಚರವಾಗಿಯೇ ಮಾತನಾಡಬೇಕಾಗಿದೆ. ಈಗ 5-6 ವರ್ಷಗಳಿಂದಲೂ ಸಹ ಅಪ್ರೋಪ್ರಿಯೆಷನ್ ಬಿಲ್ ಈ ಸಭೆಯ ಮುಂದೆ ಬಂದಾಗ ಅದನ್ನು ನಾವು ಚರ್ಚೆ ಮಾಡಿದ್ದೇವೆ. ಹೋದವರ್ಷ ನಾವು ಅಪ್ರೋಪ್ರಿಯೇಷನ್ ಬಿಲ್ಲನ್ನು ಚರ್ಚೆ ಮಾಡುವಾಗ ನಾನು ಇಲ್ಲಿ ಇದ್ದೆನೋ ಅಥವಾ ಇಲ್ಲವೋ ಗೊತ್ತಿಲ್ಲ. ಈ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡಬೇಕಾದರೆ ಹಿಂದಿನ ಅಧ್ಯಕ್ಷರು ನಮಗೆ ಒಂದು ರೂಲನ್ನು ಕೊಟ್ಟಿದ್ದರು. ಅದು ಏನೆಂದರೆ ಹಿಂದೆ ಹೇಳಿದ್ದನ್ನೇ ರಿಪೀಟ್ ಮಾಡಬೇಡಿ. ಏನಾದರೂ ಹೊಸ ವಿಷಯಗಳು ಇದ್ದರೆ ಹೇಳಿ ಎಂದು ಈಗ ತಾವೂ ಕೂಡ ಅದೇ ರೀತಿ ಆಜ್ಞೆ ಮಾಡಿದ್ದೀರಿ.

ಅಧ್ಯಕ್ಷರು.—ನಾನು ಆಜ್ಞೆ ಮಾಡಲಿಲ್ಲ. ರೂಲ್ಸಿನಲ್ಲಿ ಇರುವುದನ್ನು ಹೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಈಗ ಪ್ರೊಹಿಬಿಷನ್ ಮತ್ತು ನ್ಯಾಷನಲೈಜೇಷನ್ ಆಫ್ ರೋಡ ಟ್ರಾನ್ಸ್‌ಪೋರ್ಟ್ ಈ ಎರಡು ವಿಷಯಗಳ ಮೇಲೆ ಸ್ವಲ್ಪ ಮಾತನಾಡಬೇಕಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಾಗ, ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆ ನಡೆದಾಗ ಮತ್ತು ಡಿಮ್ಯಾಂಡುಗಳ ಮೇಲೆ ಚರ್ಚೆ ನಡೆದಾಗ ಯಾವಾಗಲೂ ಸಹ ಪ್ರೊಹಿಬಿಷನ್ ಏನು ಮಾಡುತ್ತಾರೆ, ಇದರ ಬಗ್ಗೆ ಖಚಿತವಾದ ಸರ್ಕಾರದ ನಿಲುವು ಏನು ಎನ್ನುವುದನ್ನು ಹೇಳಲಿಲ್ಲ. ಆದ್ದರಿಂದ ಈ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲಾದರೂ ಆ ಬಗ್ಗೆ ಸರ್ಕಾರದವರ ನಿಲುವು ಏನು ಎಂಬುದನ್ನು ಹೇಳಬೇಕು. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಡಿಮ್ಯಾಂಡಿನ ಮೇಲೆ ಚರ್ಚೆ ನಡೆಯುತ್ತಿರುವಾಗ ನಾವು ಈ ಪ್ರೊಹಿಬಿಷನ್ ವಿಷಯದಲ್ಲಿ ಕೇಳಿದಾಗ ಅದರ ಬಗ್ಗೆ ಈ ಸಭೆಯಲ್ಲಿ ಸರ್ಕಾರದ ಕಡೆಯಿಂದ ಒಂದು ಸರಿಯಾದ ಹೇಳಿಕೆ, ಒಂದು ಸರಿಯಾದ ಅಭಿಪ್ರಾಯ ಬರಲಿಲ್ಲ. ರೋಡ ಟ್ರಾನ್ಸ್‌ಪೋರ್ಟ್ ನ್ಯಾಷನಲೈಜೇಷನ್ ವಿಷಯದಲ್ಲಿ ಬೇಕಾದಷ್ಟು ಪ್ರಶ್ನೋತ್ತರಗಳಾಗಿ ಅದರ ಬಗ್ಗೆ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಹರಕುಮುರಕು ಉತ್ತರವನ್ನು ಹೇಳಿದ್ದಾರೆ. ರೋಡ ಟ್ರಾನ್ಸ್‌ಪೋರ್ಟನ್ನು ನ್ಯಾಷನಲೈಜೇಷನ್ ಮಾಡುವಾಗ ಸರ್ಕಾರದವರ ಖಚಿತವಾದ ನಿಲುವು ಏನು ಎಂಬುದನ್ನು ಹೇಳಲಿಲ್ಲ. ಇದುವರೆಗೆ ಸರ್ಕಾರದವರು ಎಷ್ಟು ರೂಟುಗಳನ್ನು ರಾಷ್ಟ್ರೀಕರಣ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಿದ್ದಾರೆ, ಆದರಿಂದ ಬಂದ ಆದಾಯವೆಷ್ಟು, ಆದರ ಮೇಲೆ ಎಷ್ಟು ಹಣವನ್ನು ಇನ್‌ವೆಸ್ಟ್ ಮಾಡಿದ್ದಾರೆ ಇತ್ಯಾದಿಗಳ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡಲಿಲ್ಲ. ಇದರ ಮೇಲೆ ನಾನು ಇನ್ನು ಹೆಚ್ಚು ಮಾತನಾಡದೆ, ಇನ್ನು ಪ್ರೊಹಿಬಿಷನ್ ವಿಷಯವನ್ನು ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ.

ಪಾನನಿರೋಧದ ಬಗ್ಗೆ ಏನು ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ ಎನ್ನುವುದನ್ನು ಖಚಿತವಾಗಿ ತಿಳಿಸಬೇಕು. ರಾಜ್ಯಾದ್ಯಂತ ಪಾನ ನಿರೋಧವನ್ನು ಜಾರಿಗೆ ತರುತ್ತೀರಾ, ಅಥವಾ ಬೊಂಬಾಯಿನಲ್ಲಿ ಮಾಡಿರುವಂತೆ ರಿಲ್ಯಾಕ್ಸ್ ಮಾಡುತ್ತೀರಾ ಹೇಗೆ? ಪ್ರೊಹಿಬಿಷನ್ ಏರಿಯಾದಲ್ಲಿ ಮರಗಳನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟು ಅಲ್ಲಿಯ ಜನಗಳನ್ನು ಕುಡಿಯಬೇಡಿ ಎಂದು ಒಂದು ಕಡೆ ಹೇಳುತ್ತ ಮತ್ತೊಂದು ಕಡೆ ಕುಡಿಯುವುದಕ್ಕೆ ಅವಕಾಶ ಮಾಡಿಕೊಡುವ ನೀತಿ ಸರಿಯೇ ಎಂದು ಕೇಳುತ್ತೇನೆ.

ರೋಡ ಟ್ರಾನ್ಸ್‌ಪೋರ್ಟ್ ಇವತ್ತಿನ ದಿವಸ ಏನು ವ್ಯವಹಾರ ಮಾಡುತ್ತಿದೆ ಎಂದು ನೋಡಿದರೆ ಯಾವ ಮಾರ್ಗದಲ್ಲಿ ಹೋಗಲಿ ಆ ಮಾರ್ಗ ರಾಷ್ಟ್ರೀಕರಣ ಯೋಜನೆಗೆ ಸೇರಿದೆ. ಒಂದು ಸಾರಿ ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ಬಿ. ಟಿ. ಎಸ್. ಮಾರಾಟ ಮಾಡುತ್ತೇವೆ ಎಂದು. ಅದನ್ನು ಕೊಂಡು ಕೊಳ್ಳುವುದಕ್ಕೆ ಮಂಗಳೂರಿನ ಒಬ್ಬರು ಬಂದು ಮಾತುಕತೆ ಕೂಡ ನಡೆಸಿದ್ದರು. ಈ ರೀತಿ ನಡೆದಿರುವುದು ನಿಜವೇ ಎಂದು ಸಾರಿಗೆ ಮಂತ್ರಿಗಳನ್ನು ಕೇಳಿದಾಗ ಅವರು ಆ ರೀತಿ ಮಾತ ನಾಡಲಿಲ್ಲ ಎಂದು ಹೇಳಿದರು. ಪ್ರಶ್ನೋತ್ತರಗಳ ಕಾಲದಲ್ಲಿ ಕೂಡ ಅದೇ ರೀತಿ ಹೇಳಿದರು, ರಾಷ್ಟ್ರೀಕರಣದ ವಿಷಯ ಬಂದಾಗ ಒಂದು ಸಲ ಒಂದು ಕಡೆ ಮಾಡುತ್ತೇವೆ ಎನ್ನುತ್ತಾರೆ, ಇನ್ನೊಂದು ಕಡೆ ಮಾಡುತ್ತೇವೆ ಇನ್ನೊಂದು ಸಲ ಹೇಳುತ್ತಾರೆ. ಹೀಗಾದರೆ ಹೇಗೆ? ಈ ಸ್ಕೀಮನ್ನು ಹೇಗೆ ಮಾಡುತ್ತೀರಿ? ಹಾಸನ ಜಿಲ್ಲೆಯ ಮಾರ್ಗಗಳಲ್ಲಿ ರಾಷ್ಟ್ರೀಕರಣವಾಗಬೇಕಾದರೆ ಮೂರು ವರ್ಷ ಗಜಗರ್ಭ ಪ್ರಸವದಂತೆ ಆಗಬೇಕಾಯಿತು. ರಾಷ್ಟ್ರೀಕರಣ ನೀತಿಯಲ್ಲಿ ನಿಮಗೆ ಬೇಕಾದ ವರನ್ನು ಬಿಟ್ಟು ಬೇಡವಾದವರಿಗೆ ತೊಂದರೆ ಮಾಡಬೇಕೆಂಬ ಉದ್ದೇಶದಿಂದ ಅದನ್ನಾದರೂ ಹೇಳಿ. ಇಲ್ಲದೆ ಹೋದರೆ ಯಾವ ಸ್ಕೀಂ ಅಪ್ರೂವ್ ಮಾಡಿದ್ದೀರಿ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಿ.

ತುಮಕೂರು ಜಿಲ್ಲೆಯ ನ್ಯಾಷನಲ್ ಹೈವೇ ನಂಬರ್ 13—ಬೆಂಗಳೂರು—ಹೊನ್ನಾಳಿ ರಸ್ತೆಯಲ್ಲಿ ಮಾತ್ರ ಬಸ್ ಹಾಕಿದರು. ಮೈಸೂರಿನಿಂದ ಬೆಂಗೂರಿಗೆ ಖಾಸಗಿಯವರಿಗೆ ಬಸ್ ಓಡಿಸಲು ಅವಕಾಶ ಕೊಟ್ಟಿದ್ದಾರೆ, ಸರ್ಕಾರದವರೂ ಓಡಿಸುತ್ತಿದ್ದಾರೆ. ಚಿತ್ರದುರ್ಗದಲ್ಲಿ ಎಲ್ಲಾ ತೆಗೆದು ಹಾಕಿದರು. ಚಿತ್ರದುರ್ಗದಲ್ಲಿ ಒಂದು ಡಿಪ್ಪೋ, ಹುಬ್ಬಳ್ಳಿಯಲ್ಲಿ ಒಂದು ಡಿಪ್ಪೋ, ಬಿಜಾಪುರದಲ್ಲಿ ಒಂದು ಡಿಪ್ಪೋ ಹೀಗೆ ಎಲ್ಲ ಕಡೆ ಡಿಪ್ಪೋಗಳನ್ನು ಇಟ್ಟು ಈ ರಾಜ್ಯದಲ್ಲಿ ಒಂದು ಕಡೆ ಬಿಡುವುದು, ಇನ್ನೊಂದು ಕಡೆ ಸರ್ಕಾರದ ವತಿಯಿಂದ ನಡೆಸುವುದು ಹೀಗೆ ಮಾಡುತ್ತಿದ್ದಾರೆ. ಒಂದು ಸಾರಿ ಸಾರಿಗೆ ಸಚಿವರು ಹೇಳಿದರು ಕಾಂಪಿಟಷನ್ ಇರುವುದರಿಂದ ನಷ್ಟ ಭರಿಸಬೇಕಾಗಿದೆ. ಇನ್ನೊಂದು ಸಾರಿ ಹೇಳಿದರು ಕಾಂಪಿಟಷನ್ ಇದ್ದರೂ ಕೂಡ ನಮಗೆ ಲಾಭ ಬರುತ್ತಿದೆ ಎಂದು. ಮೊನ್ನೆಯ ದಿನ ಹೇಳಿದರು ಟಿಕಟ್‌ಲೆಸ್ ಟ್ರಾವಲಿಂಗ್ ಚೆಕ್ ಮಾಡಿದ್ದರಿಂದ ತಕ್ಷಣ ಲಕ್ಷಾಂತರ ರೂಪಾಯಿ ಖಜಾನೆಗೆ ಬಂತು ಎಂದು. ಇವರು ಮ್ಯಾಜಿಕ್ ವ್ಯಾಂಡ್ ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ರಾಷ್ಟ್ರೀಕರಣ ಮಾಡುವವರಿದ್ದರೆ ಎಲ್ಲ ಕಡೆಗೂ ಮಾಡಿ. ಈಗ ಕೆಲವು ಕಡೆ ಥರ್ಮಲ್ ಸ್ಟೇಷನ್ ಗಳನ್ನಿಟ್ಟುಕೊಂಡು ಎಷ್ಟೋ ಲಾಭ ಪಡೆಯುತ್ತಿದ್ದಾರೆ. ಅದರ ಹೈಡ್ರೊ ಎಲಕ್ಟ್ರಿಕ್ ಸ್ಕೀಮನ್ನು ಇಟ್ಟುಕೊಂಡು ಎಲೆಕ್ಟ್ರಿಸಿಟಿ ಬೋರ್ಡಿನಿಂದ ಎಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದೀರಿ. ಇದನ್ನು ನಾನು ಒಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ. ನಿಮ್ಮ ರಾಷ್ಟ್ರೀಕರಣ ಯೋಜನೆ ಹೇಗಿದೆ ಎಂದರೆ ಹರಕು ದೋಸೆ ಇದ್ದಹಾಗೆ, ಆ ಪ್ರಕಾರವಾಗಿ ರಾಷ್ಟ್ರೀಕರಣ ಮಾಡುತ್ತಿದ್ದೀರಿ. ರಾಷ್ಟ್ರೀಕರಣ ಮಾಡುವ ಹಾಗೆ ಇದ್ದರೆ ಧೈರ್ಯವಾಗಿ ಎಲ್ಲ ಕಡೆಗೂ ತನ್ನಿ, ಇಲ್ಲದೆ ಹೋದರೆ ಅದನ್ನು ಯಾರಿಗಾದರೂ ಕೊಡಿ.

ಸರ್ಕಾರದವರು ಈ ಪಾನ ನಿರೋಧ ನೀತಿ ಮತ್ತು ರಾಷ್ಟ್ರೀಕರಣದ ವಿಷಯದಲ್ಲಿ ಸರ್ಕಾರದ ಖಚಿತವಾದ ನಿಲುವು ಏನು ಎನ್ನುವುದನ್ನು ಈ ಸಭೆಗೆ ತಿಳಿಸಬೇಕು, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಂಗಡಿ ಚನ್ನಬಸಪ್ಪ.—ಸ್ವಾಮಿ, ತಾವು ಅಪ್ಪಣೆ ಕೊಡಿಸಿದಿರಿ. ಯಾವ ವಿಷಯದ ಮೇಲೆ ಮಾನ್ಯ ಸದಸ್ಯರು ಮಾತನಾಡಲಿಲ್ಲ ಅಥವಾ ಸಲಹೆ ಕೊಡಲಿಲ್ಲ ಅದರ ಬಗ್ಗೆ ಮಾತ್ರ ಈ ಅಪ್ರೋಪ್ರಿಯೆಷನ್ ಬಿಲ್ ಮೇಲೆ ಮಾತನಾಡಬಹುದು ಎಂದು. ನಾನು ಅದಕ್ಕೆ ಒಪ್ಪಿಕೊಳ್ಳುತ್ತೇನೆ;

ನಾನು ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ಅಸ್ಪದ ಸಿಕ್ಕಲಿಲ್ಲವೆಂದು ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಮೊನ್ನೆ ಗ್ರ್ಯಾಂಟ್-ಇನ್-ಎಡ್ ಕೋಡ್ ವಿಷಯ ಬಂತು. ನಾನು 400 ಜನ ಅನಾಥ ಬಾಲಕರಿಗೆ ಅನುಕೂಲ ಮಾಡಲು ಭಿಕ್ಷೆ ಬೇಡಿ; ಸರ್ಕಾರವನ್ನು ಬೇಡಿ ಸಹಾಯ ದೊರೆಯುತ್ತದೆ ಎಂದು ಸಾಲ ಶೂಲ ಮಾಡಿ 25 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ವ್ಯವಸ್ಥೆ ಮಾಡಿದ್ದೇನೆ. ಆ ಹಣವನ್ನು ಕೊಡಿರಿ ಎಂದರೆ ನಮಗೆ ಬಡ್ಜೆಟ್ ಪ್ರಾವಿಷನ್ ಇರುವುದು 11 ಸಾವಿರ ರೂಪಾಯಿ ಹೇಗೆ ಮಾಡುತ್ತೀರಿ ಎಂದು ಕೇಳಿದರು. ನಿಮಗೆ ದುಡ್ಡು ಬೇಕು ಅಂದರೆ ಪ್ರಾವಿಷನ್ ಇರುವುದನ್ನು ತೆಗೆದುಕೊಳ್ಳಿ, ಅಡಿಷನಲ್ ಬಡ್ಜೆಟ್ ಕೊಡುವುದಕ್ಕೆ ಬರುವುದಿಲ್ಲ: ಬಿಟ್ಟರೆ ಇದೂ ಲ್ಯಾಪ್ಸ್ ಆಗುತ್ತದೆ ಎಂದು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ಹೇಳಿದರು. ನಾನು ಬಹಳ ತಾಪತ್ರಯದಿಂದ ಗುಲ್ಬರ್ಗ ಡೆಪ್ಯುಟಿ ಡೈರೆಕ್ಟರವರಿಗೆ ಫೋನ್ ಮಾಡಿ ಒಬ್ಬ ಮನುಷ್ಯನನ್ನು ಅಲ್ಲಿಗೆ ಕಳಿಸಿದೆ. 50 ಸಾವಿರ ರೂಪಾಯಿ ಅಡಿಷನಲ್ ಅಲಾಟ್‌ಮೆಂಟು ಸಹ ಕೊಟ್ಟಿದ್ದಾರೆ. ನಮ್ಮ ಬಿಲ್ ಪಾಸಾಯಿತೋ ಇಲ್ಲವೋ ಗೊತ್ತಿಲ್ಲ. ಕಳೆದ ವರ್ಷ 17,900 ರೂಪಾಯಿಗಳನ್ನು ಕೊಟ್ಟಿದ್ದರಿ. ಈ ವರ್ಷ 11,000 ರೂಪಾಯಿ ಅಂದಾಜು ಮಾಡುವ ಪ್ರಸಂಗ ಹೇಗೆ ಬಂತು? ಮಾಮೂಲಾಗಿ ಹುಡುಗರು ಹೆಚ್ಚಾಗುತ್ತ ಇರುತ್ತಾರೆಯೇ ಹೊರತು ಕಡಿಮೆ ಯಾಗುವದಿಲ್ಲ ಯಾವಾಗ ಅಂದಾಜು ಸ್ವಲ್ಪ ಹೆಚ್ಚಾಗಿ ಮಾಡಬೇಕು. ಕಡಿಮೆ ಮಾಡಿ ಆಖೈರಿನಲ್ಲಿ ತಾಪತ್ರಯ ಪಡುವ ಹಾಗೆ ಮಾಡಬಾರದು. ಈ ರೀತಿ ಮಾಡುವುದು ಚೆನ್ನಾಗಿರುವುದಿಲ್ಲ.

ವಿದ್ಯಾಖಾತೆಗೆ ಸಂಬಂಧಪಟ್ಟ ವಿಚಾರ ಒಂದಿದೆ. ಸರ್ಕಾರಿ ಎಲಿಮೆಂಟರಿ ಸ್ಕೂಲುಗಳಲ್ಲಿ ಕ್ವಾಲಿಫೈಡ್ ಆದಂಥ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದಾರೆ. ಇವರ ಸ್ಥಳದಲ್ಲಿ ಬೇರೆಯವರನ್ನು ನೇಮಕ ಮಾಡಿ ಏನು ಹೇಳುತ್ತಾರೆಂದರೆ: ಹೊಸದಾಗಿ ರಿಕ್ರೂಟ್‌ಮೆಂಟ್ ಕಮಿಟಿಯ ಮುಂದೆ ನೀವು ಅಪ್ಲಿಕೇಷನ್ ಹಾಕಲಿಲ್ಲವಾಗಿ ನಿಮ್ಮ ಸರ್ವಿಸ್ ಟರ್ಮಿನೇಟ್ ಮಾಡುತ್ತೇವೆಂದು ಹೇಳುತ್ತಾರೆ. ನೋಟಿಫಿಕೇಷನ್ ಬಂದು ಎರಡು ವರ್ಷಗಳ ಮೇಲಾಯಿತು. ಆ ವಿಚಾರವನ್ನು ಸಂಬಂಧಪಟ್ಟ ಉಪಾಧ್ಯಾಯರುಗಳಿಗೂ ತಿಳಿಸಿ ನೀವೂ ಇದಕ್ಕೆ ಅಪ್ಲಿಕೇಷನ್‌ಗಳನ್ನು ಹಾಕಬೇಕು ಎಂದು ಹೇಳಲಿಲ್ಲ. You are also entitled for filing application for appointment ಎಂದು ಹೇಳಲಿಲ್ಲ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಇವರಿಗೆ ದಯಮಾಡಿ ಏನಾದರೂ ಮಾಡಿರಿ, ಇವರಿಗೆ ವಯೋ ಪರಿಮಿತಿಯ ಬಗ್ಗೆ ರಿಯಾಯಿತಿಗಳನ್ನು ಕೊಡಲು ಅವಕಾಶವಿದೆ, ದಯವಿಟ್ಟು ಅದನ್ನು ಮಾಡಿರಿ, ಇಲ್ಲಿಯವರೆಗೂ ಮಾಡಲಿಲ್ಲ. ಈಗಲಾದರೂ ಮಾಡಿರಿ ಎಂದು ಹೇಳುತ್ತೇನೆ.

ಬರಗಾಲದ ವಿಷಯದಲ್ಲಿ ಹೇಳುವುದಕ್ಕೆ ನನಗೇನೋ ಅವಕಾಶ ಸಿಕ್ಕಲಿಲ್ಲ. ನಮ್ಮ ಬಳ್ಳಾರಿ ಜಿಲ್ಲೆಯ ವಿಷಯ ಈ ಸಭೆಯಲ್ಲಿ ಬರಲಿಲ್ಲ. ನಿಜವಾಗಿ ಹೇಳಬೇಕಾದರೆ ಬಳ್ಳಾರಿ ಜಿಲ್ಲೆಯಲ್ಲಿ ಭಯಂಕರವಾದ ಬರಗಾಲವಿದೆ. ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಸೂಚನೆ ಕೊಡುವುದು ಏನೆಂದರೆ ಅವರು ಖುದ್ದಾಗಿ ಬಂದು ಅಲ್ಲಿ ಪರಿಶೀಲಿಸಿ ಆ ಭಾಗಕ್ಕೆ ಬೇಕಾದ ಅನುಕೂಲಗಳನ್ನು ಒದಗಿಸಿ, ರೆವಿನ್ಯೂ ಸರ್ಚಾರ್ಜ್ ವಸೂಲಿ ವಿಷಯದಲ್ಲಿ ಸಂಬಂಧಪಟ್ಟವರಿಗೆ ತಿಳಿವಳಿಕೆಯನ್ನು ಕೊಡಬೇಕು ಎಂದು ಹೇಳುತ್ತೇನೆ.

† **Sri ANNARAO GANAMUKHI** (Afzalpur).—Sir, I want to make a few remarks on the Appropriation Bill. It was said that we are incurring more expenditure on developmental activities. As the Finance Minister has already stated, there is a deficit of about Rs. 10 crores and over the Plan period he wants about Rs. 50 crores more, *i.e.*, he has to incur a debt of about Rs. 60 crores over the Plan Period. In a developing economy, there should not be any limit in incurring any debt, but at the same time, I don't think he should exceed the safe margin. Article 293 of the Constitution provides that the State Legislature should set a limit to the incurring of debt by the Executive Government of the State. I know that we should not restrict the scope of incurrning debt, but at the same time this House should know as to how much debt are they going to incur.

Mr. SPEAKER.—I suppose the member has voted for all the Demands.

Sri ANNARAO GANAMUKHI.—I think, the State Government has already exceeded the limit. Whatever debt was to be incurred during the Five Year Plan period, within three years they have exceeded the limit. There are comments that Mysore State is experiencing great distress in financial matters. I do not come in the way of the State Government incurring any amount of debt, but it must bear some relation to the annual revenue of the State. The State Legislature has got powers to set a limit. The Executive Government should have taken the initiative and the Finance Minister, at least, should give an indication with regard to the limit of incurring debts, what will be the ratio of the debt to the net revenue of the State and how much sinking fund he should provide. The Finance Minister must be prepared to provide some amount out of the revenue of the State to repay the loans. He should not repay the loans from the debts which he incur from the Government of India or public undertakings. Therefore, a policy has to be apprehended by the State Government without bringing any restrictive law under the—Constitution.

Mr. SPEAKER.—Does the member expect the Government to bring it and bind its hands?

Sri ANNARAO GANAMUKHI.—It is the Executive Government that should bring. It is law.

Mr. SPEAKER.—Why was this point missed by the member in the course of the debate?

Sri ANNARAO GANAMUKHI.—If the Government does not want to bring any law, that is a different thing. But the Finance Minister must bear in mind that he should not exceed a safe limit because he has got on-hand developmental activities. He is in a very tight corner. He should enunciate the policy as to how he is going to incur debts, how much money is required and what will be its relationship to the general revenue of the State.

Mr. SPEAKER.—The Hon'ble member may see paragraph 31 of the Budget speech—Ways and Means position—at page 33 which says:

> "There will be a shortfall in resources to the extent of Rs. 50 to 60 crores for financing a Plan programme of Rs. 250 crores, due to the reasons already explained. The ways and means advance outstanding at the end of this year is expected to come to about Rs. 25 crores and this can be cleared out of the Securities held in the General Investment Account and the Sinking Fund. For the next two years, on accunt of the gap created by the heavy capital outlay and re-payments of loans, we have to seek special loan assistance from the Government of India. The Government of India have been apprised of the entire financial position."

Sri ANNARAO GANAMUKHI.—Thank you, Sir.

Sri B. D. JATTI.—I have made it very clear.

MR. SPEAKER.—Since the time allotted for Appropriation Bill is over, I extend the time by thirty minutes.

† SRI M. N. NAGHNOOR (Sampagaon II).—Sir, my friend Sri B. R. Sunthankar has made a case that the employment potential in Mysore State is not to that standard which it ought to be. As compared to the nighbouring States, our employment potential is far below. The reasons, many of our friends have raised in this House, as to how it could be remedied. For example, the public sector and private industrial concerns functioning in Mysore, harnessing the Mysore natural resources and utilising the finances of Mysore State, are not giving any return—adequate employment potential to the young men of Mysore State. As an example, I may mention the industrial concerns of Hindustan Aircraft Ltd., Bharat Electronics Ltd., etc. I suppose, the Hon'ble Chief Minister said not only on the floor of this House, but elsewhere that he is going to see that the citizens of the State are given more preference. In this regard, the Governments of Orrisa Bihar and Madhya Pradesh, have gone far ahead and they have said that the Public Service Commission should have the jurisdiction to employ and provide employment to all categories of posts carrying a certain amount of pay, say about Rs. 300 or Rs. 500 and all such posts carring such salaries shall have the jurisdiction of the Public Service Commission. So, I suggest that the Government of Mysore may make a proposal to the Government of India to see that all appointments carrying high pay scales are done through the Public Service Commission in the industrial undertakings. There are many private industrial concerns in Mysore, investing crores of rupees and harnessing, as I said, the wonderful natural resources of Mysore State. Unfortunately, they are not considering to employ the local skill. This is a very unfortunate state of affairs. There are concerns coming from non-Mysore areas, utilising the maximum resources of the State and taking out the maximum profits, but still they have very little to give in return to us. Therefore, I suggest that the Public Service Commission may have a jurisdiction in the matter of appointment and the service conditions, and that would go a long way to provide employment to the unfortunate young men who are wandering without employment.

† SRI ANGADI CHANNABASAPPA.—On a point of order, Sir. I know as a student of Politics, History and Economics, that the meaning of democracy is political homogeneity, joint responsibility and...........

MR. SPEAKER.—What is the point of order ?

SRI ANGADI CHANNABASAPPA.—I will explain.

5-00 P.M.

I believe, Sri Naghnoor is a Member of the Congress Party. I am not bothered about which party it is. We are not here to waste time on Party factions or the differences between one group and the other group

(SRI ANGADI CHANNABASAPPA)

ಶ್ರೀ ಪಿ. ವೆಂಕಟಗಿರಿಯಪ್ಪ.—ನವಂಬರ್ 1962ರಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ ಅವತ್ತಿನಿಂದ ಇದುವರೆಗೂ ಏಕೆ ಸೈಟ್ಸನ್ನು ಡಿಸ್‌ಪೋಸ್ ಮಾಡಲಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಐನೂರು ಅರ್ಜಿಗಳು ಬಂದಿವೆ ಅದನ್ನು ವಿತರಣೆ ಮಾಡುವುದಕ್ಕೆ ಯಾರಿಗೆ ಅರ್ಹತೆ ಇದೆ ಎಂಬುದನ್ನು ತೀರ್ಮಾನ ಮಾಡಲು ಪುರಸಭೆಯವರು 24ನೇ ಏಪ್ರಿಲ್ 1963ರಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸಮಿತಿ ನೇಮಕ ಮಾಡಿದ್ದರೂ ಕೂಡ ಇಷ್ಟು ದಿವಸದವರೆಗೂ ಅವರು ಏಕೆ ತೀರ್ಮಾನವನ್ನು ತೆಗೆದುಕೊಂಡಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಏಕೆ ತೆಗೆದುಕೊಳ್ಳಲಿಲ್ಲ ಎಂದು ನಾನೂ ಕೇಳುತ್ತೇನೆ. ಅಲ್ಲಿರತಕ್ಕ ಜನರೂ ಕೂಡ ಕೇಳಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೊದಲು ಈ ಜಮೀನನ್ನು ಬೀಡಿ ವರ್ಕರ್ಸ್ ಮತ್ತು ಮೋಟಾರ್ ವರ್ಕರ್ಸ್ ಅನುಕೂಲಕ್ಕಾಗಿ ಅಕ್ವೈರ್ ಮಾಡಿಕೊಂಡಿದ್ದರು. ಆದರೆ ಮುಸಲ್ಮಾನರಿಂದ ಬಂದಿರುವ ಇತರ ಅರ್ಜಿಗಳೊಡನೆ ಬೀಡಿ ಕಾರ್ಮಿಕರ ಕೋರಿಕೆಗಳನ್ನೂ ತಾವು (ಇ)ಗೆ ಉತ್ತರಕೊಡುತ್ತಾ ಪರಿಶೀಲನೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಗಾದರೆ ಇದರಲ್ಲಿ ಮುಸ್ಲಿಮರಿಗೆ ಮಾತ್ರ ಸೈಟು ಕೊಡುವುದು ಎಂದು ಅರ್ಥವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಪುರಸಭೆಯವರು ಮುಸಲ್ಮಾನರಿಗೆ ಕೊಡಬೇಕೆಂದು ಅಕ್ವೈರ್ ಮಾಡಿಕೊಂಡಿದ್ದರೂ ಇರಬಹುದು, ಆದರೆ ಯಾವುದೇ ಒಂದು ವರ್ಗದ ಜನರಿಗೆ ಅಥವಾ ಒಂದು

ಕೋಮಿನ ಜನರಿಗೆ ಯಾವುದಾದರೂ ಒಂದು ಬಡಾವಣೆ ಮೀಸಲಾಗಿ ಇಡುವುದು ಸರಿಯಲ್ಲ ಎಂಬುದು ಸರ್ಕಾರದ ಅಭಿಪ್ರಾಯ, ಡೆಪ್ಯುಟಿ ಕಮೀಷನರೂ ಕೂಡ ಅದನ್ನು ತಿಳಿಸಿದ್ದಾರೆ. ಮುಸ್ಲಿಂರ ಅರ್ಜಿಗಳು ಅಲ್ಲದೇ ಬೇರೆ ಇತರ ಬಡ ಜನರಿಂದ ಕೂಡ ಅರ್ಜಿಗಳು ಬಂದಿವೆ ಎಂದು, ಅಲ್ಲಿ ಸೈಟು ಮಾಡಿರುವದೇ 30-40 ಚಿಕ್ಕ ಸೈಟುಗಳನ್ನು ಮಾಡಿದ್ದಾರೆ. ಬಡವರಾಗಿರುವವರು ಯಾವುದೇ ಕೆಲಸ ಮಾಡುತ್ತಾ ಇರಲಿ, ಯಾವ ಕೋಮಿಗೆ ಸೇರಿರಲಿ ಅವರ ಅರ್ಜಿಗಳನ್ನು ಪರಿಶೀಲನೆ ಮಾಡಬೇಕಾದ್ದು ಅಗತ್ಯ ಎಂದು ಅವರಿಗೆ ತಿಳಿಸಲಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಒಂದುವೇಳೆ ಪುರಸಭೆಯವರು ಬರೀ ಮುಸಲ್ಮಾನರಿಗೇ ಕೊಟ್ಟಿದ್ದರೆ ಅದನ್ನು ರದ್ದುಪಡಿಸುತ್ತೀರಾ ?

ಅಧ್ಯಕ್ಷರು.—ಕೊಟ್ಟಿದ್ದರೆ ಮಾಡುತ್ತೀರಾ ಎಂದರೆ ಅದು ಹೈಪೊಥಿಟಿಕಲ್ ಪ್ರಶ್ನೆ ಆಯಿತು.

ಶ್ರೀ ಇ. ನಾರಾಯಣಗೌಡ.—ಮೊದಲು ಬೀಡಿ ವರ್ಕರ್ಸ್ ಮತ್ತು ಮೋಟಾರ್ ವರ್ಕರ್ಸ್ ಸೈಟ್‌ಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದರು ಆದ್ದರಿಂದ ಮೊದಲು ಅವರ ಅರ್ಜಿಗಳನ್ನು ಕನ್‌ಸಿಡರ್ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಸೈಟ್ ವಿಂಗಡಣೆ ಮಾಡಿರುವುದು 30-40, ಸಾಮಾನ್ಯವಾಗಿ ಬಡವರು ವಾಸ ಮಾಡುವುದಕ್ಕೆ ಲಾಯಕ್ಕಾಗಿರುವಂತಹ ಸೈಟುಗಳನ್ನೇ ಮಾಡಿದ್ದಾರೆ. ಬಡವರು ಯಾವುದೇ ವರ್ಗಕ್ಕೆ ಸೇರಿರಲಿ ಯಾವ ಕೋಮಿನವರೇ ಆಗಿರಲಿ ಅವರ ಅರ್ಜಿಗಳನ್ನು ಪರಿಶೀಲನೆ ಮಾಡಬೇಕಾದ್ದು ಅಗತ್ಯ, ಅದೂ ಅಲ್ಲದೇ ಅದಕ್ಕೆ ಲಗತ್ತಾಗಿ ಇನ್ನಷ್ಟು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕೆಂಬ ವಿಚಾರದಲ್ಲೂ ಕೂಡ ವ್ಯವಹಾರ ನಡೆಯುತ್ತಾ ಇದೆ. ಬಹುಶಃ ಅದರಿಂದ ಎಲ್ಲರ ಅವಶ್ಯಕತೆಗಳನ್ನೂ ಕೂಡ ಪೂರೈಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ನಿರೀಕ್ಷಣೆ ಮಾಡುತ್ತೇನೆ.

Number of Deaf and Dumb Girls residing in the Vocational Institute at Mysore.

*Q.—142. Smt. K. S. NAGARATHNAMMA (Gundlupet).—

Will the Government be pleased to state :—

(a) the number of deaf and dumb girls residing in the Vocational Institute, Mysore;

(b) whether they have made any arrangements to give training in the said Institute to the physically handicapped, so as to enable them to eke out their livelihood ;

(c) whether any other institution has come forward to provide training to the physically handicapped in the State ?

A.—Sri S. R. KANTHI (Minister for Education).—

(a) 19 Deaf Girls.

(b) Industrial sections have been opened in the physically handicapped Institutions in order to provide training in crafts.

(c) Three private agencies have come forward to start Institutions for the phisically handicapped.—

(1) Janapada Seva Trust, Melkote.
(2) Mathru Mandali, Temple Road, V. V. Mohalla, Mysore-2.
(3) The Academy of General Education, Manipal, South India.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದಕ್ಕೆ ಸಂಬಂಧಪಟ್ಟಂತೆ ನಾನು ಇನ್ನೂ ಒಂದಿಷ್ಟು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕಳುಹಿಸಿದ್ದೆ.

Mr. SPEAKER.—What all she had sent has been passed on to the Hon'ble Minister.

†Sri S. R. KANTHI.—The first question is how much is paid to each one of them for boarding and lodging. We are paying Rs. 15 per boarder per month for 10 months. The next question is how many are residing in the hostel, and how many are outside. In the Vocational Institute for Girls there are 19 girls who are residing outside, 19 are residing in the Institute itself. There are in all 13 boarders including this institution and they are all residing in the Institution itself. The next question is whether Janapath Seva Trust and Mathru Mandali and Academic General Education has started any institution or the handicapped and if so how many persons are there, and how many are outsiders and how many are residing in the Institution. Sir, in respect of these three institutions, the Government have not yet recognised them and the Government is not aware how many are outsiders and how many others. As regards whether they are treated like animals or members of the Institution, the answer is no.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕೇಳಿದ ಪ್ರಶ್ನೆ ಇಷ್ಟೆ: ಕುರುಡರು ಮತ್ತು ಮೂಗರು ಆ ಇನ್‌ಸ್ಟಿಟ್ಯೂಷನ್ ನಲ್ಲಿ ಎಷ್ಟು ಜನ ಇದ್ದಾರೆ ಎಂದು ಅದನ್ನು ಅವರು ಹೇಳಲಿಲ್ಲ.

Sri S. R. KANTHI.—18 are blind and 19 are deaf girls.

Smt. K. S. NAGARATHNAMMA.—What about dumb ?

Sri S. R. KANTHI.—19.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರಿಗೆ ಸ್ಪೆಷಲೈಸ್ಡ್ ರೀತಿಯಲ್ಲಿ ಶಿಕ್ಷಣ ಕೊಡಲು ತರಪೇತಾದ ಉಪಾಧ್ಯಾಯರು ಮತ್ತು ಟೀಚಿಂಗಿಗೆ ಬೇಕಾದ ಇತರ ಎಲ್ಲಾ ವಿಧವಾದ ಸೌಲತ್ತುಗಳನ್ನೂ ಒದಗಿಸಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಅದರಲ್ಲಿ ಒಬ್ಬರು ಟ್ರೈನ್ಡ್ ಟೀಚರ್ ಇದ್ದಾರೆ, ಮತ್ತೊಬ್ಬರು ಡಿಪ್ಲೊಮಾ ಹೋಲ್ಡರ್ ಇದ್ದಾರೆ. ಎಕ್ವಿಪ್‌ಮೆಂಟ್ ನನಗೆ ಬಂದಂತಹ ಸಮಾಚಾರದ ಪ್ರಕಾರ ಸಾಕಾದಷ್ಟು ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನೇನು ಎಕ್ವಿಪ್‌ಮೆಂಟ್ ಇದೆ. ಮೈಕ್ರೋಸ್ ಇದೆಯೇ, ಇಯರ್ ಫೋನ್ ಇದೆಯೇ ? ಎಕ್ವಿಪ್‌ಮೆಂಟ್ ಎಂದರೆ ಏನು ?

ಶ್ರೀ ಎಸ್. ಆರ್. ಕಂಠಿ.—ಆ ವಿವರಗಳನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಹೇಳುತ್ತಾ ಇದ್ದೇನೆ. ಅವರಿಗೆ ಏನೇನೂ ಎಕ್ವಿಪ್‌ಮೆಂಟ್ ಕೊಟ್ಟಿಲ್ಲ, ಇಷ್ಟು ದೊಡ್ಡ ಸಭೆಯಲ್ಲಿ ಎಕ್ವಿಪ್‌ಮೆಂಟ್ ಸಾಕಾದಷ್ಟು ಇದೆ ಎಂದರೆ ಹೇಗೆ ? You are treating them like animals.

ಶ್ರೀ ಎಸ್. ಆರ್. ಕಂಠಿ.—ಅದು ನನಗೆ ಬಂದಿರುವ ಸಮಾಚಾರದ ಪ್ರಕಾರ ಸಾಕಾದಷ್ಟು ಎಕ್ವಿಪ್‌ಮೆಂಟ್ ಇದೆ ಎಂದು ತಿಳಿದುಬಂದಿದೆ. ಮಾನ್ಯ ಸದಸ್ಯರು ಇಲ್ಲ ಎಂದು ಹೇಳುತ್ತಾರೆ ಅದನ್ನು ನೋಡಿಸುತ್ತೇನೆ. ಇನ್‌ವೆಸ್ಟಿಗೇಟ್ ಮಾಡಿಸುತ್ತೇನೆ. ಅನಿಮಲ್ಸ್ ಅಂತ ಟ್ರೀಟ್ ಮಾಡುತ್ತಾ ಇದ್ದಾರೆ ಎಂದು ಹೇಳಿದರು ನನಗೆ ಬಂದ ಸಮಾಚಾರದಂತೆ ಆ ರೀತಿ ಇಲ್ಲ, ಚೆನ್ನಾಗಿ ಟ್ರೀಟ್ ಮಾಡುತ್ತಾ ಇದ್ದಾರೆ, ಎಂದು ತಿಳಿದು ಬಂದಿದೆ, ನಾನೇ ಸ್ವತಃ ನೋಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಮಂತ್ರಿಗಳು ಮೈಸೂರಿಗೆ ಆಗಿಂದಾಗ್ಗೆ ಹೋಗುತ್ತಾ ಇರುತ್ತಾರೆ, ಯಾವಾಗಲಾದರೂ ಈ ಸಂಸ್ಥೆಗೆ ಅವರು ಭೇಟಿ ಕೊಟ್ಟಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಹುಡುಗಿಯರ ಸಂಸ್ಥೆಗೆ ಹೋಗಿಲ್ಲ, ಗಂಡುಹುಡುಗರ ಸಂಸ್ಥೆಗೆ ಹೋಗಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ಆ ತಾರತಮ್ಯವೇಕೆ?

ಶ್ರೀ ಎಸ್. ಆರ್. ಕಂಠಿ.—ನಾನು ಹೋಗುವುದಕ್ಕೆ ಅವಕಾಶವಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರಿಗೆ ಕಡ್ಡಾಯ ಶಿಕ್ಷಣ ಅನ್ವಯಿಸುವುದಿಲ್ಲವೇ? ಅವರಿಗೆ ಟ್ರೈನಿಂಗ್ ಕೊಡಬೇಕೆಂದು ಹೇಳುತ್ತಿದ್ದೀರಿ. ಹಾಗಿರುವಾಗ ಟ್ರೈನಿಂಗ್ ಆಗಿರುವವರಿಗೆ ಕೆಲಸ ಒದಗಿಸಲು ಏರ್ಪಾಡು ಮಾಡಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಕಡ್ಡಾಯ ಶಿಕ್ಷಣ ಜಾರಿಗೆ ತರಬೇಕೆಂಬ ಅಭಿಪ್ರಾಯವೇನೋ ಇದೆ, ಅದನ್ನು ಬಹಳ ಎಚ್ಚರಿಕೆಯಿಂದ ಜಾರಿಗೆ ತರಬೇಕಾಗಿದೆ. ಅದನ್ನು ಕೆಳಗಿನ ಕ್ಲಾಸಿನಿಂದ ಮಾಡಬೇಕು. ಅವರಿಗೆ ಇಂಡಸ್ಟ್ರಿಯಲ್ ಟ್ರೈನಿಂಗ್ ಕೊಡುತ್ತಿದ್ದಾರೆ, ಜನರಲ್ ಎಜುಕೇಷನ್ ಮತ್ತು ಇಂಡಸ್ಟ್ರಿಯಲ್ ಟ್ರೈನಿಂಗ್ ಎರಡೂ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಟ್ರೈನಿಂಗ್ ಆದವರಿಗೆ ಕೆಲಸ ಕೊಡುತ್ತಿದ್ದೀರಾ? ಕೊಡಲು ಅವಕಾಶವಿರುವ ಸ್ಥಳಗಳಲ್ಲಾದರೂ ಕೊಡದಿದ್ದರೆ ಅವರು ಭಿಕ್ಷೆ ಮಾಡಬೇಕಾಗುತ್ತದೆ. ಹಾಗೆ ಕೆಲವರು ಮಾಡುತ್ತಿರುವುದು ಗೊತ್ತೇ?

ಶ್ರೀ ಎಸ್. ಆರ್. ಕಂಠಿ.—ಅವರು ಹೇಳುವುದರಲ್ಲಿ ಸ್ವಲ್ಪ ಅರ್ಥವಿದೆ. ಅವರಿಗಾಗಿ ಇಷ್ಟೆಲ್ಲಾ ಖರ್ಚು ಮಾಡಿದ ಮೇಲೆ ಅವರಿಗೆ ಕೆಲಸ ಸಿಕ್ಕದಿದ್ದರೆ ಭಿಕ್ಷೆ ಬೇಡುವ ಪ್ರಶ್ನೆ ಇದೆ, ಅದನ್ನು ಯೋಚನೆ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಂಗವಿಕಲರೆಷ್ಟಿದ್ದಾರೆಂಬುದಕ್ಕೆ ಅಂಕಿ ಅಂಶವಿದೆಯೇ?

ಶ್ರೀ ಎಸ್. ಆರ್. ಕಂಠಿ.—1951 ರ ಸೆನ್ಸಸ್‌ನಲ್ಲಿ ಅದನ್ನು ಸೇರಿಸಿಲ್ಲ. ಆದಾದ ಮೇಲೆ ಎರಡು ಸಲ ವಿಚಾರ ಮಾಡಿದಾಗ 8 ಸಾವಿರ ಜನರಿದ್ದಾರೆಂದು ಗೊತ್ತಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದವರಿಗೆ ಕೈಗಾರಿಕಾ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸೂಚಿಸಲು ಸಾಧ್ಯವೆ?

ಶ್ರೀ ಎಸ್. ಆರ್. ಕಂಠಿ.—ಆ ಸೂಚನೆ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗೆಂದರೆ ಅರ್ಥವೇನು? ಬರೀ ಸೂಚನೆ ಮಾತ್ರ ಇದೆಯೇ?

Mr. SPEAKER.—Whenever it is brought to their notice, they do it. It is not the Education Minister. But it is the Minister for Labour, who is in charge of Labour and Employment. At least that was what I was doing when I was in charge.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕುರುಡರು ಮತ್ತು ಮೂಗರಿಗೆ ಮಾತ್ರ ವ್ಯವಸ್ಥೆ ಮಾಡಿದ್ದೀರಾ? ಕುಂಟರು ಮತ್ತು ಫಿಸಿಕಲಿ ಡಿಸೇಬಲ್ಡ್ ಇಂಥವರಿಗೇನು ಮಾಡಿದಿರಿ?

ಶ್ರೀ ಎಸ್. ಆರ್. ಕಂಠಿ.—ಕುಂಟರು, ಹೆಳವರು ಎಲ್ಲರೂ ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಎಂಬುದರಲ್ಲಿ ಬರುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೂರು ಏಜೆನ್ಸಿಗಳು ಮುಂದೆ ಬಂದಿವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಅವು ಬಂದು ಎಷ್ಟು ದಿವಸಗಳಾದುವು? ಇದುವರೆಗೆ ಇದರಿಂದೇನು ಸಹಾಯವಾಗಿದೆ?

ಶ್ರೀ ಎಸ್. ಆರ್. ಕಂಠಿ.—ನಾನು ಮೇಲುಕೋಟೆಗೆ ಹೋಗಿ ಅಲ್ಲಿರುವ ಸಂಸ್ಥೆಯನ್ನು ನೋಡಿದ್ದೇನೆ. ಉಳಿದ ಕಡೆ ಹೋಗಿಲ್ಲ, ಆ ಸಮಾಚಾರ ತಿಳಿಯದು.

SHORT NOTICE QUESTION

Resetting of optional History Paper

Q.—17. Sri S. M. KRISHNA (Maddur).—

Will the Goverment be pleased to state:—

(*a*) whether the Optional History question paper of the S.S.L.C. Examination has been reset;

(SRI S. M. KRISHNA)

(*b*) whether telegrams have been sent to various Examiners to collect the reset question paper from the District Educational Officers in the State in the last twenty-four hours ;

(*c*) the amount spent on the telegrams ;

(*d*) the reasons for the leakage of puestion paper ;

(*e*) what steps have the Government taken to ensure the sanctity and secrecy of the question papers ?

A.—SRI S. R. KANTHI (Minister for Education).—

(*a*), (*b*) and (*c*) It is not in the public interest to disclose the details.

(*d*) Government are not aware of any leakage of the question paper.

(*e*) Adequate steps have been taken by Government.

MR. SPEAKER.—The next item on the Agenda is Short Notice question given notice of by Sri S. M. Krishna. Before I allow that to be put, what is the position to-day, because we are beyond the 30th. It was mentioned that two sets of papers had leaked out. One, I was told was not correct. I passed on the papers to Hon'ble Member Sri Muckannappa. Those papers have not been given back to me. He said that one question was similar. I asked him to make it complete, and state whether it tallied 75 per cent or 50 per cent or 25 per cent. The Hon'ble Member will kindly bring it and pass it on to me. What about the History paper ?

SRI S. R. KANTHI.—History paper was given to the boys and we have found there is no leakage. I have made enquiries from the moment this news was released here and I have found that there is no leakage. To my knowledge and the knowledge of the dapartment we have not been able to find out that.

MR. SPEAKER.—Does Sri Krishna know any questions ? So far as I remember, it was stated on the floor of the House that three hundred telegrams were issued not to distribute question papers. The Hon'ble Member also said that "Identically worded or actual questions were received by him by post". Therefore, I want to make the position clear. Had Hon'ble Member Sri Krishna got any question in his hand at the time when this question was put ?

SRI S. M. KRISHNA.—The very fact that Government did not give a clear cut answer—if the Government had sent telegrams to various examiners in the State asking them to come and get set papers—adds to my contention that the history papers have been leaked out.

MR. SPEAKER.—Absolutely bad logic. Does he know for what reason they could have asked them to come and take the papers ? To urge only on that ground is not consistent with logic. Has the Hon'ble Member got any question similar to the one found in the question paper ? 30th is over, and those questions are out and I wanted to test it in that fashion.

Sri S. M. KRISHNA.—I gave notice of this question four days back. Immediately I came to know that Government took an extreme step of issuing instructions to the examiners to take the paper on Monday. If this question has come up before that I would have produced that question paper that was alleged to have been leaked out.

Mr. SPEAKER.—He must be in a better position now to produce the question paper.

Sri S. M. KRISHNA.—Now, it becomes purely an academic issue. I would like to know from the Government why it is that every year that some of these allegations are made and why give room to such allegations.

Mr. SPEAKER.—How is the Government responsible for the allegations ?

Sri S. M. KRISHNA.—Nobody will simply get up and make an allegations that the History paper is out or that the Mathematics paper is out unless it has leaked out.

Mr. SPEAKER.—I want to know if the Hon'ble Member had any thing in his hands when the question was put. If he had the same on the 30th, he would be in a better position today. I am saying that for guidance in the future. Otherwise, it creates a scare in the minds of the public, and the students who may have a desire to get examinations postponed might be induced to invoke this method.

Sri S. M. KRISHNA.—Have the Government sent some of these telegrams ? What prevented the Government from saying that nothing has been done ? Why should they take shelter under public interest and all that ? That only lend support to my submission that such a thing has happened.

Mr. SPEAKER.—Has the Hon'ble Minister got a copy of the question paper distributed to students on the 30th ?

Sri S. R. KANTHI.—I can produce it if you want. I have not got it, but I can produce in one hour or so.

Mr. SPEAKER.—Can the Hon'ble Member Sri Krishna produce the question paper that he had before the 3 th ?

Sri S. M. KRISHNA.—If the Hon'ble Minister can give answers to my questions, a, b, c, I will produce the question paper.

Mr. SPEAKER.—Let us not attach conditions. If somebody begins to attach conditions to the position taken, then I will also have to attach conditions.

Sri S. M. KRISHNA.—It is one of the clever manouvres of the Government.

Mr. SPEAKER.—I will hold it over for tomorrow. But I would like to have a copy of the question paper.

Sri S. R. KANTHI.—The question paper is now given to the students. What is the use of saying that the Hon'ble Member should submit a copy. A copy can be made and submitted to you.

Mr. SPEAKER.—I refuse to accept that reflection that an Hon'ble Member will copy and give me the question paper.

Sri S. R. KANTHI.—It is no reflection, Sir. It is a possibility.

Sri S. NIJALINGAPPA.—Some of the Hon'ble Members are so gullible and innocent. They seem to bring papers just because they receive them.

Mr. SPEAKER.—They may be doing it *bona-fide.*

Sri S. NIJALINGAPPA.—Of course, I said gullible, Sir.

Sri S. M. KRISHNA.—If anybody is gullible, it is the Government and not the members.

Mr. SPEAKER.—This is not the time for exchange of compliments. I want to have something more precise for my guidance for the future. 30th is over. I do not think anything serious has happened as to endanger the purity of examinations. For the future, anybody or a student who may be interested in postponement may do some such thing. The Hon'ble Members should have more positive information so that I should have more positive information before asking the Government to look into it.

Otherwise when the notice is given if I do not admit it, members will feel that some chance has been denied; but if I have to admit without any data it is not fair either for me or for the House. I wish things of this type are handled delicately. They can come to me and in confidence discuss about questions that are said to be similar to the one found in the question paper Simply because telegrams have been sent it is not correct to raise it. But, any way tha is over.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವ ಸದಸ್ಯರೆಲ್ಲ 'ಇನೊಸೆಂಟು, ಗಲ್ಲಿಬಲ್' ಎನುವ ಶಬ್ದ ಉಪಯೋಗಿಸಿದರು. ಅಂತಹ ಸದಸ್ಯರುಗಳು ಯಾರು ಎನ್ನುವುದನ್ನೂ ಹೇಳಿದ್ದರೆ ಸರಿಯಾಗಿರುತ್ತಿತ್ತು.

Mr. SPEAKER.—He did not say all. He said some.

ಶ್ರೀ ಎಸ್. ಗೋಪಾಲ ಗೌಡ.—ಕೆಲವರು ಎಂದು ಹೇಳಿದರು. ಏಕೆ, ನಿಮಗೆ ಇದರಲ್ಲಿ ಏನು ದೋಷ ಕಾಣುತ್ತದೆ? ನನಗೇನೂ ಇದರಲ್ಲಿ ಕಾಣುತ್ತಿಲ್ಲ. ಇಂತಹ ರಿಮಾರ್ಕು ತಪ್ಪುಗೂ ಅಲ್ಲ ಎಂದು ನನಗನಿಸುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಟೆಲಿಗ್ರಾಂ ಕಳುಹಿಸಿದ್ದಾರೆಂದು ಇದೆ. ಸಾರ್ವಜನಿಕರ ದೃಷ್ಟಿಯಿಂದ ಇದಕ್ಕಾದರೂ ಉತ್ತರ ಹೇಳಲು ಅವಕಾಶ ಕೊಡಬೇಕೆಂದು ಕೇಳುತ್ತೇನೆ.

Sri S. SIVAPPA.—Sir, more relevant questions have been answered.

Mr. SPEAKER.—I said, it is over.

Sri S. SIVAPPA.—Sir, you have admitted the question.

Mr. SPEAKER.—I have said that it is over.

Sri S. SIVAPPA.—I want an information. If you are satisfied with the relevancy of my question you may please allow.

Mr. SPEAKER.—I said it is over.

Sri S. SIVAPPA.—Has it come to the notice of the Government hat last year when the questions were out, re-examinations were held and an enquiry committee was appointed to go into the whole question of leakage of questions. May I know what steps have been taken on the Enquiry Committee's report and whether anybody has been punished?

Mr. SPEAKER—This relates to a particular question paper to be answered by the students on the 30th. The Hon'ble member's supplementary does not relate to this year at all. It is a past event which is known to the entire House.

—

Sri S. SIVAPPA.—May I know what action the Government have taken on the report?

Mr. SPEAKER.—He can put a separate question.

Sri H. R. KESHAVA MURTHY.—Sir, there is time. I request you to kindly put question No. 115 because it is important.

Mr. SPEAKER.—All right. There is time. I put question 115.

Constitution of the Board of Mineral Development

*Q.—115. Sri M. N. NAGHNOOR (Sampagaon-II).—

Will the Government be pleased to state :—

(a) when the Board of Mineral Development was constituted;

(b) what is the capital investment on it so far?

(c) the profit and loss account year-wise for the past 3 years;

(d) the total quantity of mineral ore extracted so far year-wise statement of mineral ores handled for the past 3 years may be furnished?

A.—Sri K. MALLAPPA (Minister for Industries and Commerce).—

(a) During 1957

(b) Rs. 196.11 lakhs as on 31st March 1963.

(c)

	1960-61	1961-62	1962-63
	Rs.	Rs.	Rs.
Gross Profit	6·82 lakhs	11·73 lakhs	13·67 lakhs.

(d) *Vide* Statement appended.

Production of Minerals during the last three years in lakh Tons

			1960–61	1961–62	1962–63
1	Iron Ore	...	0.49	1.91	3.48
2	Manganese Ore	...	0.20	0.50	0.58
3	Raw Clay	...	0.21	0.26	0.28
4	China Clay	...	0.02	0.02	0.02
5	Aluminous Clay	...	0.05	0.06	0.07
6	Chromite (High Gr.)	...	0.02	0.03	0.09
7	Feldspar	...	0.006	0.01	0.02
8	Graphite	...	—	0.005	0.005
9	Quartz	...	0.02	0.02	0.01
10	Soap Stone Bricks	...	0.06	0.81	0.69

Sri H. R. KESHAVA MURTHY.—May I know the net profit earned during the last three years ?

†Sri K. MALLAPPA.—For 1960-61 : 9·7 lakhs, 1961-62 : 2·56 lakhs and 1962-63 : 2·83 lakhs.

Sri H. R. KESHAVA MURTHY.—Is it a fact that the Board of Mineral Development have purchased a number of lorries and they are going to lose nearly 2 crores due to depreciation and all that ?

Sri K. MALLAPPA.—Depreciation is allowed and the net profit is calculated.

Sri H. R. KESHAVA MURTHY.—What are the steps the B.M.D. have taken to exploit copper and corondum during these years ?

Sri K. MALLAPPA.—The figures are given. The Board of Mineral Development is a commercial concern. The question of copper is still under investigation. A very minute quantity is traced and it is not properly investigated. Before that is done, the B.M.D. cannot take action. B.M.D. is a commercial undertaking of the Government.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈಗ ಯಾರೋ ಒಬ್ಬರಿಗೆ ಬಿ.ಎಂ.ಡಿ. ಯವರು ಓರ್ಸ್ ತೆಗೆಯುವುದಾಗಿ ಬಂದರು ಎಂದು ಅವರಿಗೆ ಅವಕಾಶವನ್ನು ಕೊಟ್ಟಿರುವುದರಿಂದ ಸರಕಾರಕ್ಕೆ ಏನೂ ಲಾಭಲಾಗದೇ ಅವರೂ ಕೆಲಸ ಮಾಡದೇ ಇರುವುದರಿಂದ ನಷ್ಟವಾಗುತ್ತಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಮಿನರಲ್ಲುಗಳನ್ನು ತೆಗೆಯುವುದಕ್ಕಾಗಿ ಮೈನುಗಳನ್ನು ಮಾಡುತ್ತೇವೆಂದು ಪರ್ಮಿಷನ್ನನ್ನು ಪಡೆದಿದ್ದಾರೆ. ಅವರೇನೂ ಕೆಲಸಗಳನ್ನು ಮಾಡದೇ ಹೋದರೆ ಅವರಿಂದ ಡೆಡ್ ರೆಂಟು ಎಂದು ರಿಕವರಿ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಇದರಿಂದ ಸರಕಾರಕ್ಕೆ ಲಾಭವಾಗದೇ ತೊಂದರೆಯಾಗುವುದಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕಾನೂನು ಹಾಗೆ ಇದೆ, ಅದಕ್ಕೆ ನಾನೇನು ಮಾಡುವುದು ? Mineral Concession Rules are like that.

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿ ಲಾಭ ಏನು ಬರುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಇಲ್ಲಿ 60-61ರಲ್ಲಿ 6·82 ; 61-62ರಲ್ಲಿ 11·73 ಮತ್ತು 62-63ರಲ್ಲಿ 13·67 ಲಕ್ಷದಷ್ಟು ಲಾಭ ಬರುತ್ತದೆ ಎಂದು ಹೇಳುವಾಗ ಇದರ ಬಂಡವಾಳದ ಮೇಲೆ ಹಾಕಿರುವ ಲೆಕ್ಕವೋ ಅಥವಾ ಎಲ್ಲ ಸರ್ವಿಸ್ಸುಗಳಿಗಾಗಿ, ಸಂಬಳ ಸಾರಿಗೆಗಳಿಗಾಗಿ ಎಂದು ಕೊಟ್ಟು ಉಳಿಕೆಯಾದವುಗಳ ಮೇಲೆ ಹಾಕಿರುವ ಲಾಭವೋ ಹೇಗೆ ?

ಶ್ರೀ ಕೆ. ಮಲ್ಲಪ್ಪ.—ಖರ್ಚಾಗಿರತಕ್ಕದ್ದನ್ನು ಕಳೆದುಕೊಂಡು ಅದರ ಮೇಲೆ ಉಳಿಕೆಯಾಗಿ ಲೆಕ್ಕ ಹಾಕಿರುವುದನ್ನು ಲಾಭ ಬಂದುದು ಎಂದು ಹೇಳಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಓಡಾಡುತ್ತಿರುವ ಲಾರಿಗಳನ್ನು ಈಗ ಮಾರಾಟ ಮಾಡಬೇಕೆಂದಿದ್ದಾರೆಂದು ತಿಳಿದು ಬರುತ್ತದೆ. ಇದರ ಬಗ್ಗೆ ವಿವರಗಳೇನಾದರೂ ಇದ್ದರೆ ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಲಾರಿಗಳನ್ನು ಮಾರಾಟ ಮಾಡಬೇಕೆಂದು ಬಿ.ಎಂ.ಡಿ. ಯವರು ಏರ್ಪಾಡು ಮಾಡುತ್ತಿದ್ದಾರೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ವೇಳೆಯಾಯಿತು.

QUESTIONS FOR ANSWERS ON THE DAY

(but not taken up)

The number of posts of Deputy Conservator of Forests that are vacant.

**Q.*—54. Sri K. H. RANGANATH (Mudigere).—

Will the Government be pleased to state :—

(*a*) the total number of posts of Deputy Conservator of Forests that are vacant without being filled up by promoting qualified persons according to cadre and recruitment rules of the Forest Department and the respective dates on which they became vacant;

(*b*) whether any in charge arrangements as temporary measure to work in these vacancies have been made if so, since when;

(*c*) whether the persons put in charge of these vacancies are qualified to cadre and recruitment rules of the Department;

(*d*) the number of per ons qualified and eligible as per cadre and recruitment rules available in the Department to hold these posts and when did they become eligible and qualified (detailed information in respect of all officials to be furnished)?

A.—Sri B. RACHAIAH (Minister for Forests and Fisheries).—

(*a*) Five. February 1961 onwards.

(*b*) Yes. Incharge arrangements have been made by posting the Senior most Assistant Conservator of Forests from February 1961 onwards.

(*c*) No.

(*d*) Thirteen. Out of whom 12 from 30th September 1962 and one from 17th December 1962.

Fixing of boundary limits of Mandya Town.

**Q.*—292. Sri J. DEVAIAH (Mandya).—

Will the Government be pleased to state :—

(*a*) whether it has come to their notice that the boundary limits of Mandya Town, which is developing day by day are not fixed properly and consequently this has caused hindrance to the proper expansion of the town;

(*b*) whether they are aware that unauthorised buildings are being raised round about the town as the boundary limits have not been fixed which has obstructed the further growth of the town in an orderly manner;

(*c*) whether they have contemplated to take suitable steps in this behalf?

A.—Sri K. PUTTASWAMY (Minister for Municipal Administration).—

(*a*) Yes.
(*b*) No.
(*c*) Suitable steps are being taken in this behalf.

Declaring of Hosadurga-Ajjampura area as a Mining area.

**Q.*—410. Sri G. T. RANGAPPA (Hosadurga).—

Will the Government be pleased to state :—

(*a*) whether it has come to their notice that the ores are being transported through lorries from Madadakere Hobli, Hosadurga Taluk, to Mangalore *via* Hosadurga-Ajjampura and if so, whether they have declared this area as a Mining area ;

(*b*) the amount of financial assistance, if any, given by the Central Government to improve these ore carrying roads ?

A.—Sri MAQSOOD ALI KHAN (Deputy Minister for Mines and Geology). –

(*a*) No.
(*b*) Nil.

General Hospital at Tiptur.

**Q.*—497. Sri K. P. REVANNASIDDAPPA (Tiptur).—

Will the Government be pleased to state :—

(*a*) when the General Hospital at Tiptur was started ;
(*b*) whether quarters have been constructed for the same ;
(*c*) the number of in-patients and out patients at present ;
(*d*) the total cost of the Hospital building ;
(*e*) the number of doctors and nurses required for the hospital and whether the required strength of doctors and nurses are working at present ?

A.—Dr. K. NAGAPPA ALVA (Minister for Health).—

(*a*) On 4th July 1963.
(*b*) Quarters have not been constructed so far.
(*c*) Average in-patients 49.8 (monthly) and the average daily out-patients is 84.
(*d*) Rs. 2.18 lakhs.
(*e*) Doctors 2
Nurses 3
No.

NON-OFFICIAL BUSINESS RESOLUTIONS

Full Utilisation of potential resources of Cauvery Waters.

1-00 P.M.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ ನನ್ನ ನಿರ್ಣಯ ಈ ರೀತಿ ಇದೆ :- "ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಾವೇರಿ ನೀರಿಂದ ದೊರಕುವ ಸಾಧನ ಸಂಪತ್ತುಗಳನ್ನು ಪೂರ್ತಿಯಾಗಿ ಉಪಯೋಗಿಸುವಂತೆಯೂ, ಈ ಬಗ್ಗೆ ಅವಶ್ಯಕ ಯೋಜನೆಗಳನ್ನೆಲ್ಲಾ ಕಾರ್ಯಗತಗೊಳಿಸಲು ಎಲ್ಲ ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆಯೂ ಈ ಸಭೆಯುವರು ಸರ್ಕಾರದವರಿಗೆ ಶಿಫಾರಸ್ಸು ಮಾಡುತ್ತಾರೆ"

Mr. SPEAKER.—Resolution moved:

> "That this House recommends to the Government to take all necessary steps to utilise to the full extent the potential resources of Cauvery waters and also to implement all the schemes necessary in this behalf within the Fourth Five-Year Plan period."

Before the Hon'ble Member begins his speech, I would like to know how much time he would require?

Sri H. D. DEVE GOWDA.—One hour.

Mr. SPEAKER.—Under the Rules, he is entitled only to 30 minutes. If the House agrees to give him one hour, I have no objection. Is it the desire that the Mover of the Resolution be given one hour.

Sri V. S. PATIL.—Sir, where is the necessity to put it to the House? It is not necessary; nobody is grumbling. When the occasion arised for extending, if there is any grumbling, at that time the Chair may put it to the House.

Mr. SPEAKER.—That is a good suggestion. The Hon'ble Member may go on for half an hour and then we thall see

†ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ ಪ್ರಪ್ರಥಮವಾಗಿ ಈ ಖಾಸಗೀ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವುದಕ್ಕಾಗಿ ನನಗೆ ಅವಕಾಶಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ. ಸ್ವಾಮಿ, ಈ ದಿವಸ ನಮ್ಮ ಮುಂದಿರತಕ್ಕ ನಿರ್ಣಯವನ್ನು ಮಂಡಿಸತಕ್ಕ ಈ ಸಂದರ್ಭದಲ್ಲಿ ನಾನು ಕೆಲವು ಅಂಕೀಅಂಶಗಳ ಮೂಲಕ ಸರ್ಕಾರದವರ ಗಮನವನ್ನು ಇತ್ತಕಡೆಗೆ ಸೆಳೆಯಬೇಕೆಂದಿದ್ದೇನೆ. ಈ ಹಿಂದೆ 1924 ರಲ್ಲಿ ಮೈಸೂರು ಸರ್ಕಾರಕ್ಕೂ ಮತ್ತು ಮದ್ರಾಸ್ ಸರ್ಕಾರಕ್ಕೂ ಆಗಿರತಕ್ಕ ಆ ಒಂದು ಒಪ್ಪಂದದಲ್ಲಿ ಆ ಅವಧಿಯೊಳಗೇ ಆ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕೆಂದು ಹೇಳಿರತಕ್ಕ ವಿಚಾರದತ್ತ ನಾನೀಗ ಸರ್ಕಾರದವರ ಗಮನವನ್ನು ಸೆಳೆಯಬಚ್ಛಿಸುತ್ತೇನೆ. ಭಾರತ ದೇಶದ ದಕ್ಷಿಣಕ್ಕಿರತಕ್ಕ ಮಹಾನದಿಗಳಲ್ಲಿ ಕಾವೇರಿಯೂ ಒಂದಾಗಿದೆ. ಈ ಒಂದು ನದಿಯ ನೀರು ನಮ್ಮ ಹಳೇ ಮೈಸೂರು ಪ್ರದೇಶದಲ್ಲಿರತಕ್ಕ—ಹಾಸನ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, ಬೆಂಗಳೂರು ಮತ್ತು ಕೊಡಗು-ಇಷ್ಟು ಜಿಲ್ಲೆಗಳಲ್ಲಿರತಕ್ಕ ಜನರ ಅಭ್ಯುದಯಕ್ಕೆ ಈ ನದಿಯೊಂದು ಜೀವನಾಡಿಯಾಗಿದೆ. ಆದ್ದರಿಂದ ಈ ನದಿಯಲ್ಲಿ ದೊರೆಯತಕ್ಕ ಸಂಪೂರ್ಣ ನೀರನ್ನು ಆ ಅಗ್ರೀಮೆಂಟಿನ ಅವಧಿ ಮುಗಿಯುವುದರೊಳಗೇ ಹಳೆ ಮೈಸೂರಿನ ಈ 7 ಜಿಲ್ಲೆಗಳ ಜನರ ಅಭ್ಯುದಯಕ್ಕೆ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡದಿದ್ದರೆ ಈ ಜನರೆಲ್ಲರೂ ನಾಳೆ ಈ ಸರ್ಕಾರವನ್ನು ಶಪಿಸಬೇಕಾದ ಪ್ರಸಂಗಬರಬಹುದೆಂಬುದನ್ನು ತಿಳಿಸುತ್ತಾ ಅವರಿಗೊಂದು ಎಚ್ಚರಿಕೆಯನ್ನು ಈ ಮೂಲಕ ಕೊಡುತ್ತಿದ್ದೇನೆ. ಏತಕ್ಕೆಂದರೆ; ಅವರು ಕಳೆದ ಈ 6 ವರ್ಷಗಳಲ್ಲಿ ಅಂದರೆ ನಮಗೆ ಸ್ವಾತಂತ್ರ್ಯ ಬಂದ 16 ವರ್ಷಗಳ ನಂತರ, ಈ ರಾಜ್ಯಾಡಳಿತ ಇವರ ಕೈಗೆ ಬಂದಮೇಲೆ ಈ ನೀರನ್ನು ಉಪಯೋಗಿಸತಕ್ಕ

(ಶ್ರೀ ಎಚ್. ಡಿ. ದೇವೇಗೌಡ)

ವಿಚಾರದಲ್ಲಿ ಸರ್ಕಾರ ತಾಳಿರುವ ಮನೋಭಾವನೆ ಈ ನೀರನ್ನು ಅವಧಿ ಪೂರೈಸತಕ್ಕ ಆ 1974 ರೊಳಗೇ ಸಂಪೂರ್ಣವಾಗಿ ಉಪಯೋಗ ಮಾಡತಕ್ಕ ಧೋರಣೆಯನ್ನು ತಾಳಿದಂಥ ಧಾಟಿ ಕಂಡುಬರುತ್ತಿಲ್ಲ. ಅಂಥಾ ಒಂದು ಶಂಕೆ ನಮಗೆ ಕಾಣಬರುತ್ತಿದೆ. ಈ ಬಗ್ಗೆ ನಾನು ಸಾಕಷ್ಟು ಅಂಕೀಅಂಶಗಳನ್ನು ಕೊಟ್ಟು ರುಜುವಾತುಮಾಡಬಲ್ಲೆ; ಧೃಡಪಡಿಸಲೂ ಬಲ್ಲೆ. ನಾನು ಹೇಳತಕ್ಕ ಅಂಕೀ ಅಂಶಗಳನ್ನು ಯಾರಾದರೂ ತುಲನ ಮಾಡಿನೋಡಿದರೆ ನಮ್ಮ ಸರ್ಕಾರಕ್ಕೆ ಈ ವಿಚಾರದಲ್ಲಿ ಒಂದು ಆಲಸ್ಯ ಮನೋಭಾವನೆಯಿದೆ ಎಂಬುದು ಎಲ್ಲರಿಗೂ ಎದ್ದು ಕಾಣುತ್ತದೆ. 1924 ರಲ್ಲಿದ್ದ ಸರ್ಕಾರಕ್ಕೆ ಈ ನದಿಯಲ್ಲಿ ನಮಗಿದ್ದ ನೀರಿನ ಹಕ್ಕನ್ನು ದೊರೆಕಿಸಿಕೊಳ್ಳಲು ತೋರಿಸಿರತಕ್ಕ ಆಸಕ್ತಿಯನ್ನು ನಾವು ಪರಿಶೀಲನೆಮಾಡಿನೋಡಿದರೆ—ಆಗ ಆ ಸರ್ಕಾರಕ್ಕಿದ್ದ ಆಸಕ್ತಿಗೂ ಈಗ 16 ವರ್ಷಗಳ ನಂತರ ಆಡಳಿತ ನಡೆಸುತ್ತಿರುವ ಸರ್ಕಾರಕ್ಕಿರತಕ್ಕ ಆಸಕ್ತಿಗೂ ಹೋಲಿಕೆಯನ್ನು ಮಾಡಿ ನೋಡಿದರೆ ಇಂದಿನ ಸರ್ಕಾರದ ನೋಟ ಈ ವಿಚಾರದಲ್ಲಿ ತುಂಬಾ ಮಂದವಾಗಿದೆಯೆಂಬುದನ್ನು ನೋಡಿ ನನಗೆ ಬಹಳ ಆಶ್ಚರ್ಯವೂ ಶೋಚನೀಯವೂ ಉಂಟಾಗಿದೆ, ಎಂಬುದನ್ನು ನಾನು ಬಹಳ ಕಳಿಕಳಿಯಿಂದ ಹೇಳಬೇಕಾಗಿದೆ. ಆದರೆ ನಾನು ಈ ವಿಚಾರದಲ್ಲಿ ಮಂತ್ರಿಮಂಡಲ ಒಂದನ್ನೇ ಟೀಕೆ ಮಾಡುತ್ತಿಲ್ಲ. ಅಧಿಕಾರದಲ್ಲಿದ್ದ ಎಲ್ಲಾ ಮಂತ್ರಿಮಂಡಲಗಳನ್ನೂ ಅವು ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸಲಿಲ್ಲವೆಂದು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. 1924 ರಲ್ಲಿ ಅಗ್ರೀಮೆಂಟಾಗಿದ್ದರೂ ಇಲ್ಲಿಯತನಕ ಈ ರಾಜ್ಯಸ್ವಾತಂತ್ರ್ಯವನ್ನು ಗಳಿಸಿ 16 ವರ್ಷಗಳನ್ನು ಕಳೆದಿದ್ದಾಗ್ಯೂ ಇಲ್ಲಿಗೆ ಸುಮಾರು 40ವರ್ಷಗಳಿಂದ ಈ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಮಾಡಲು ನಮ್ಮ ಸರ್ಕಾರ ಪ್ರಯತ್ನಮಾಡಿಲ್ಲ ಈ ಸರ್ಕಾರ ಬಂದಮೇಲಾದರೂ ಈ 16 ವರ್ಷಗಳಲ್ಲಿ ಏನು ಕೆಲಸಕಾರ್ಯಗಳನ್ನು ಮಾಡಿದ್ದಾರೆಂದು ನಾನು ಪ್ರಶ್ನೆಮಾಡಲಚ್ಛಿಸುತ್ತೇನೆ ? ಇದು ಬಹಳ ಖಂಡನೀಯವಾದ್ದು. ಇನ್ನು ನಮಗೆ ಆ ಕರಾರಿನ ಪ್ರಕಾರ ಉಳಿದಿರತಕ್ಕದ್ದು ಕೇವಲ 8 ವರ್ಷಗಳು ಮಾತ್ರ. ಅಷ್ಟರಲ್ಲೇ ಈ ನೀರನ್ನು ಸಂಪೂರ್ಣವಾಗಿ ಉಪಯೋಗಿಸಲು ಸರ್ಕಾರದವರು ಇತ್ತ ಅವರ ಮನಸ್ಸನ್ನು ಹರಿಸಬೇಕೆಂದು ನಾನು ಇದನ್ನು ಒತ್ತಿಹೇಳುತ್ತಿದ್ದೇನೆ. ಇಲ್ಲವಾದರೆ ಹಳೇ ಮೈಸೂರಿನವರು ಸರ್ಕಾರವನ್ನು ಶಪಿಸತಕ್ಕ ಅವಕಾಶವಾಗಬಹುದು. ಆ ಅಗ್ರೀಮೆಂಟಿನ 6ನೇ ಕ್ಲಾಜಿನಲ್ಲಿ ಹೀಗೆ ಹೇಳಿದೆ:

> "It is suggested that the present limitation in regard to the extension of new irrigation as in paragraph 2 above shall hold good for a period of 50 years; at the end of that period it may be subject to reconsideratiou."

ಸ್ವಾಮಿ, ಈ ಒಂದು ವಿಚಾರ ಈ ಅಗ್ರೀಮೆಂಟಿನಲ್ಲಿ ಸ್ಪೆಸಿಫಿಕ್ಕಾಗಿ ನಮೂದಾಗಿದೆ. ಅಂದರೆ ಈ 50 ವರ್ಷಗಳು ಕಳೆದು ಹೋದಮೇಲೆ, ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳೇನೋ ಬಹಳ ಆಶಾವಾದಿಗಳು, ಈ ನದಿಯ ನೀರಿನಲ್ಲಿ ನಮಗೇನು ಒಂದು ಹಕ್ಕಿದೆ ಅದು ಎಂದಿಗೂ ಹೋಗತಕ್ಕದ್ದಲ್ಲ ಎಂದು ಅವರು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪುತ್ತಿಲ್ಲ. ನಮಗೆ ಇರತಕ್ಕ 45 ಟಿ. ಎಂ. ಸಿ. ಎಫ್.ಟಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಲು ಇಲ್ಲಿಯತನಕ ನಮಗೆ ಸಾಧ್ಯವಾಗಿಲ್ಲ ಎಂದು ಹೇಳುತ್ತಿರುವ ಕಾಲದಲ್ಲಿ, ನಮಗೆ ಈ ನೀರಿನ ಹಕ್ಕು ನಾವು ಅದನ್ನು ಬಳಸಲಿ ಬಳಸದಿರಲೀ ಇದ್ದೇ ಇರುತ್ತದೆಂದು ಹೇಳುತ್ತಿರುವ ವಾದದಲ್ಲಿ ನನಗಷ್ಟು ನಂಬಿಕೆಯಿಲ್ಲ, ಹೀಗಿರುವಾಗ ಮುಂದೆ ಈ ಹಕ್ಕು ನಮಗೆ ಹೇಗೆ ಉಳಿಯುತ್ತದೆ ಎಂದು ಕೇಳುತ್ತೇನೆ ? ಶ್ರೀಮಾನ್ ನಿಜಲಿಂಗಪ್ಪನವರೇನೋ ಅಧಿಕಾರದಲ್ಲಿದ್ದಾರೆ, ಅವರು ಹಾಗೆ ಹೇಳಿದರೂ ಹೇಳಬಹುದು. 1974ನೇ ಇಸ್ವಿ ಕಳೆದಮೇಲೆ ನಮಗೆ ಈ 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಪಡೆಯತಕ್ಕ ಹಕ್ಕು ನಮಗೆ ಉಳಿಯುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಅಷ್ಟೇ ಅಲ್ಲದೆ 1974ರಲ್ಲಿ ಈಗಿರತಕ್ಕ ಶ್ರೀ ಎಸ್. ನಿಜಲಿಂಗಪ್ಪನವರೇ ಆಗಲೂ ಮುಖ್ಯಮಂತ್ರಿಗಳಾಗಿರುತ್ತಾರೆಂಬುದಕೆ ಅವಕಾಶವೆಲ್ಲಿದೆ !

ಏಕೆಂದರೆ ಅವರು ಕೈಲಿ ಮಾಡುವ ಕೆಲಸವನ್ನು ಮಾಡದೆ 1974 ರವರೆಗೂ ಹೋಗಿದೆ ಎಂಬುದಾಗಿ ತಿಳಿಸುತ್ತಿದ್ದಾರೆ. ಆ ಒಂದು ಧೋರಣೆ ಏನಿದೆ ಅದು ಖಂಡನೀಯವಾದುದು ಎಂದು ಹೇಳಿ ಸರ್ಕಾರ ಆ ಒಂದು ತನ್ನ ದಾಟಿಯನ್ನು ಬದಲಾಯಿಸವೆ ಹೋದರೆ ಪ್ರಾಯಶಃ ಹಳೆಯ ಮೈಸೂರಿನ ಜನರಿಗೆ ತುಂಬಾ ಕಿರುಕುಳವನ್ನು ಕೊಟ್ಟಂತಾಗುವುದಿಲ್ಲವೇ ? ನಾನು ಹೇಳಿದ ಹಾಗೆ ಇದು ಒಂದು ಪಕ್ಷದ ಮೇಲೆ ಟೀಕೆ ಮಾಡುವ ಪ್ರಶ್ನೆಯಲ್ಲ. ಎಲ್ಲಾ ಪಕ್ಷದವರೂ ಇದಕ್ಕೆ ಜವಾಬ್ದಾರರಾಗಿರಬೇಕಾಗುತ್ತದೆ. ಇಲ್ಲವಿದ್ದರೆ ಜನತೆ ಈ ಸಭೆಯನ್ನು ಖಂಡನೆ ಮಾಡಿ ಶಪಿಸುತ್ತದೆಂದು ನಾನು

ಹೇಳುತ್ತೇನೆ. ಮೊನ್ನೆ ದಿವಸ ಈ ಸಭೆಯಲ್ಲಿಯೇ ನನ್ನ ಸ್ನೇಹಿತರಾದಂಥ ಶ್ರೀಮಾನ್ ವೀರೇಂದ್ರ ಪಾಟೀಲರು ನನ್ನ ಪ್ರಶ್ನೆಗೆ ಉತ್ತರವಾಗಿ ಒಂದು ಮಾತನ್ನು ಹೇಳಿದರು. 1974 ರೊಳಗೆ ಕರಾರಿನ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಐದನೆಯ ಪಾಂಚವಾರ್ಷಿಕ ಯೋಜನೆಯೊಳಗೆ 17ಟಿ.ಎಂ.ಸಿ.ಯಷ್ಟು ನೀರನ್ನು ಕಾವೇರಿ ಬೇಸಿನ್ನಿನಲ್ಲಿ ಸಿಗುತ್ತದೆ, ಅದನ್ನು 1974 ರವರೆಗೂ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ, ಐದನೆಯ ಪಾಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಇನ್ನೂ 18 ಯೋಜನೆಗಳನ್ನು ಹಾಕಿದ್ದೇವೆ, ಆ ಹದಿನೆಂಟು ಯೋಜನೆಗಳಿಗೂ ತ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂಬುದಾಗಿ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ನನ್ನ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಸರ್ಕಾರವನ್ನು ಕೇಳುತ್ತೇನೆ. ಈ 50 ವರ್ಷಗಳ ಅವಧಿಯಲ್ಲಿ ಅಂದರೆ ಕರಾರಿನಲ್ಲಿಯೇ 42 ವರ್ಷಗಳು ಕಳೆದಿರುವಾಗ ಈ ಸರ್ಕಾರ ಏನು ಇವತ್ತು ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವ ಸರ್ಕಾರ ಇದಾಗಿದೆ. ಜನತೆಯ ಅಭಿಪ್ರಾಯವನ್ನು ಈ ವಿಚಾರದಲ್ಲಿ ಇವರು ತೆಗೆದುಕೊಂಡ ಹಾಗೆ ಕಾಣಲಿಲ್ಲ. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂಬ ವಾದ ಇತ್ತೀಚೆಗೆ ಕೇಳಿ ಬರುತ್ತಾ ಇರುವುದು ಈಗ ಈ ಸಭೆಯ ಮುಂದೆ ಬಂದಿದೆ. ಕೆಲವರು ಮೈಸೂರು ಸಂಸ್ಥಾನವನ್ನು ವಿಭಾಗ ಮಾಡುವ ಬಗ್ಗೆ ಈಗ ಪ್ರಸ್ತಾಪ ಮಾಡುವುದು ಬೇಡವೆಂದು ಹೇಳಿದರು. ಇದರಿಂದ ಕರ್ಣಾಟಕ ರಾಜ್ಯಕ್ಕಾಗಿ ದುಡಿದಂಥ ಕರ್ಣಾಟಕದ ಹಿರಿಯ ಮುಖಂಡರಾದ ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿಯೂ ಸ್ವಲ್ಪ ನೋವು ಆಗಿರಬಹುದು. ಕಾವೇರಿ ನದಿಯ ಪಾತ್ರದಿಂದ ಹಳೆಯ ಮೈಸೂರಿನ ಏಳು ಜಿಲ್ಲೆಗಳಿಗೆ ಆಗತಕ್ಕ ನೀರಿನ ಅನುಕೂಲವನ್ನು ಒದಗಿಸುವ ಬಗ್ಗೆ ಇವರು ಎಷ್ಟರಮಟ್ಟಿಗೆ ತಮ್ಮ ಕೆಲಸವನ್ನು ನೆರವೇರಿಸಿದ್ದಾರೆಂಬುದನ್ನು ನಾನು ಕೇಳಬೇಕಾಗಿದೆ. ಈಗ ಈ ದೇಶ ಹರಿದು ಹಂಚಿ ಹೋಗುತ್ತಿರುವ ಸಂದರ್ಭದಲ್ಲಿ ನಾನು ಅವರಿಗೆ ಒಂದು ಪ್ರಶ್ನೆ ಹಾಕುತ್ತೇನೆ. ಇವತ್ತು ಕಾವೇರಿ ಬೇಸಿನ್ನಿನಲ್ಲಿ ಕೃಷ್ಣರಾಜಸಾಗರ, ಮತ್ತು ಹೆಬ್ಬಹಳ್ಳ ಯೋಜನೆಗಳನ್ನು ಕಟ್ಟಬೇಕಾಗಿದೆ. ಕೃಷ್ಣರಾಜ ಸಾಗರ ಅಣೆಕಟ್ಟು ಯೋಜನೆ ಇಂಪ್ಲಿಮೆಂಟಾಗಿ ಬಹಳ ವರ್ಷಗಳಾಗಿವೆ. ಈಚೆಗೆ ಸ್ವಾತಂತ್ರ್ಯ ಬಂದ ಮೇಲೆ ಈ ಹೆಬ್ಬಹಳ್ಳ, ಮತ್ತು ನುಗು ಯೋಜನೆಗಳನ್ನು ಕಾರ್ಯಗತ ಮಾಡಿದರೆ ಒಟ್ಟು ಪೊಟೆಂಷಿಯಲ್ ಸುಮಾರು 52 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದೆಂದು ಹೇಳಬಹುದು. ಇದರಲ್ಲಿ 27 ಟಿ.ಎಂ.ಸಿ. ಉಪಯೋಗಿಸುವ ಅವಕಾಶವಿದ್ದರೂ ಕೇವಲ 25 ಮಾತ್ರ ಉಪಯೋಗಿಸುವ ಬಗ್ಗೆ ಏತಕ್ಕೆ ಮುಂದೆ ಹೋಗಿದ್ದೀರೆಂದು ನಾನು ಕೇಳುತ್ತೇನೆ. ಇನ್ನು ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಿ ಇಲ್ಲಿಗೆ 47-50 ವರ್ಷಗಳಾದುವು. ಹಿಂದೆ ಕಟ್ಟಿದ್ದಂತಹ ರಿಜರ್ವಾಯರ್‌ನಿಂದ ಕೇವಲ 25 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ಇವರಿಗೆ ಶಕ್ತಿ ಇಲ್ಲವೆಂದು ಹೇಳಿದರೆ, ಈ ಸರ್ಕಾರದ ಧೋರಣೆ, ಶಕ್ತಿ ಏನಿದೆಯೆಂಬುದನ್ನು ಸಂಬಂಧಪಟ್ಟಂಥ ಮುಖ್ಯ ಮಂತ್ರಿಗಳಲ್ಲಿ ಹಾಗೂ ಸಚಿವರಲ್ಲಿ ಕೇಳಲು ಇಚ್ಛಿಸುತ್ತೇನೆ. ಕರಾರಿನಲ್ಲಿ ಸೇರಿರತಕ್ಕ ಐದು ನದಿಗಳಲ್ಲಿ ಇವತ್ತು 45 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಸರ್ಕಾರ ಎಷ್ಟೆಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಐದು ಯೋಜನೆಗಳನ್ನು ಕರಾರಿನ ಪ್ರಕಾರ ಬರತಕ್ಕದ್ದಿವೆ. ಅವುಗಳು ಯಾವುವೆಂದರೆ ಹೇಮಾವತಿ, ಕಂಬದಕಡ, ಸುವರ್ಣಾವತಿ, ಯಗಚಿ, ಜಲಾಶಯದ ಯೋಜನೆಗಳು ಮತ್ತು ಲಕ್ಷ್ಮಣ ತೀರ್ಥ ಜಲಾಶಯದ ಯೋಜನೆ. ಇನ್ನೂ ಬೇಕಾದಷ್ಟು ಯೋಜನೆಗಳಿವೆ. ಕೇವಲ 24 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಹಾಗೆ ಅಂದಾಜುಗಳನ್ನು ತಯಾರು ಮಾಡತಕ್ಕ ಒಂದು ಶಕ್ತಿಗೆ ಇವರು ಹೋಗುತ್ತಿದ್ದಾರೆ. ಆದರೆ ಪೂರ್ತಿಯಾಗಿ ನಮಗೆ ಬರಬೇಕಾದ ನೀರನ್ನು ಉಪಯೋಗಿಸಬೇಕೆಂಬ ಹಂಬಲ ಮತ್ತು ಆಸಕ್ತಿ ಇದೆಯೆಂಬುದನ್ನು ಸರ್ಕಾರದವರು ಸ್ಪಷ್ಟವಾಗಿ ತಿಳಿಸಬೇಕು ' ಸಂಸ್ಥಾನವನ್ನು ವಿಭಾಗವಾಗಿ ಒಡೆಯಬೇಕು ಎಂಬುದಾಗಿ ಇವರ ಮನಸ್ಸು......

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು 42 ವರ್ಷಗಳೆಂದು ಏಕೆ ಹೇಳುತ್ತಾರೆ? ಈ ದೇಶಕ್ಕೆ ಸ್ವಾತಂತ್ರ ಬಂದುದೆ 1947ನೆ ಇಸವಿ. ಕೇವಲ 17 ವರ್ಷಗಳಾದುವು. ಈ ನದಿಯ ನೀರಿನ ಬಗ್ಗೆ ಕರಾರು ಆಗಿರುವುದು 1924ನೇ ಇಸವಿಯಲ್ಲಿ.

ಶ್ರೀ ಎಚ್. ಡಿ. ದೇವೇಗೌಡ.—ಸುಮಾರು 17 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತವನ್ನು ತೆಗೆದುಕೊಂಡು ಈ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಈ ಸರ್ಕಾರದ ಗಮನ ಹೋಗಿದೆಯೇ? ಈ 24 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಇವರು ಇನ್ನೂ ಅಂಬೆಗಾಲು ಇಡುತ್ತಿದ್ದಾರೆ, ಇದರಿಂದ ಸರ್ಕಾರದವರು ನಿಜವಾಗಿ ಹಳೆಯ ಮೈಸೂರಿನ ಬಗ್ಗೆ ಅಗೌರವವನ್ನು ತರತಕ್ಕಂತಾದ್ದು ನ್ಯಾಯವೇ ಎಂಬುದನ್ನು ನಾನು ಬಹಳ ಕಳಕಳಿಯಿಂದ ಕೇಳುತ್ತೇನೆ. ಈಗ 24 ಟಿ.ಎಂ.ಸಿ.ಯಷ್ಟು ನೀರನ್ನು ತೆಗೆದು ಕೊಳ್ಳುವುದಕ್ಕೆ, ರಾಜ್ಯ ಸರ್ಕಾರ ಈ ಮೈಸೂರು ದೇಶದ ಜನತೆಗೆ ಅದರ ಸೌಲಭ್ಯವನ್ನು ಒದಗಿಸಿಕೊಡುವ ಕಾಲದಲ್ಲಿ ಇವತ್ತು ಆಡಳಿತದಲ್ಲಿದ್ದು ಮನೆಗೆ

(ಶ್ರೀ ಎಚ್. ಡಿ. ದೇವೇಗೌಡ)

ಹೋಗಿರುವವರ ಬಗ್ಗೆ ಯಾವ ಅನುಮಾನವೂ ಇಲ್ಲ. ಆದರೆ 24 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸುವುದರ ಬಗ್ಗೆ ಕೇವಲ ಇಂತಹ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿಯೂ ಕೂಡ ರಾಜಕೀಯ ಸನ್ನಿವೇಶದಲ್ಲಿ ಬಂದಿದ್ದಾರೆ. ಇನ್ನು 21 ಟಿ.ಎಂ.ಸಿ.ಯಷ್ಟು ಷೆಡ್ಯೂಲ್ಡ್ ನೀರನ್ನು ಉಪಯೋಗಿಸುವುದರಲ್ಲಿ ಯಾವ ವಿಧವಾದ ಕರಾರನ್ನೂ ಹಾಕಿಕೊಂಡಿಲ್ಲ. ಇದರಲ್ಲಿ ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಏಕೆಂದರೆ ಒಂದುವೇಳೆ 1974ನೇ ಇಸವಿಯ ಕರಾರಿನ ಕಾಲಕಳೆದರೂ ನಮಗೆ ಹಕ್ಕು ಇದೆಯೆಂದು ಹೇಳುತ್ತಾರೆ. ಇವತ್ತು ನಮಗೆ ಏನು ಈ ಕರಾರಿನಲ್ಲಿ ನಮೂದಾಗಿದೆಯೋ ಆ ಒಂದು 45 ಟಿ.ಎಂ.ಸಿ. ಜೊತೆಗೆ ಮದ್ರಾಸ್ ಸರ್ಕಾರದವರು ಹೊಸ ಹೊಸ ಯೋಜನೆಗಳನ್ನು ಕಟ್ಟಿ ಆ ಯೋಜನೆಗಳಲ್ಲಿ ಎಷ್ಟು ನೀರನ್ನು ಉಪಯೋಗಿಸುತ್ತಾರೋ ಅದರ ಶೇಕಡ 50 ಭಾಗದ ನೀರನ್ನು ಉಪಯೋಗಿಸುವ ಶಕ್ತಿ ಸಹ ನಮಗೆ ಒದಗಲಿಲ್ಲ. ಈ ಗಳಿಕೆಯಿಂದ ಶೇಕಡ 60 ರಷ್ಟು ಹೊಸ ಯೋಜನೆಗಳನ್ನು ಹಾಕಿದರೆ, ಇದನ್ನು ಕಾರ್ಯಗತ ಮಾಡುವ ಬಗ್ಗೆ ಇವರಿಗೆ ಏನು ಸಾಮರ್ಥ್ಯವಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡಬೇಕಾಗಿದೆ. ಆದ್ದರಿಂದ ನಮ್ಮ ನೀರಿನ ಪಾಲನ್ನು ದೇಶದ ಜನತೆಗೆ ಅದರಲ್ಲೂ ಹಳೆಯ ಮೈಸೂರಿನ 7 ಜಿಲ್ಲೆಗಳಿಗೆ ಒದಗಿಸುವ ಬಗ್ಗೆ ನಮಗೆ ಒಂದು ಶಂಕೆ ಉದ್ಭವವಾಗಿದೆ. ಇನ್ನು ನಾನ್-ಅಗ್ರಿಮೆಂಟ್ ಜೋನಿನಲ್ಲಿ ಬರತಕ್ಕ 19 ನದಿಗಳಿಗೆ ಇವತ್ತು ಸರ್ಕಾರದವರು ಯೋಜನೆಗಳನ್ನು ಹಾಕಬೇಕೆಂದು ಇದ್ದಾರೆ. ಅವು ಯಾವುವೆಂದರೆ, ಹಾರಂಗಿ, ಅರ್ಕಾವತಿ, ಗುಂಡಾಲ್, ತಾರಕ, ಉಡುತೊರೆಹಳ್ಳ, ಪೊಟೆಹೊಳೆ, ಕಿರಾರ ಪಿಕಪ್ಪು, ತಟ್ಟೆಹಳ್ಳ, ಹೆಬ್ಬಹಳ್ಳ, ಅಡ್ಡವಾಗಿ ಅಣೆಕಟ್ಟು, ಸಾಗರ ದೊಡ್ಡಕೆರೆ ದೊಡ್ಡಹಳ್ಳ, ಹೆಬ್ಬಹಳ್ಳ ಜಲಾಶಯದ ಯೋಜನೆಗಳು ಮತ್ತು ಯಗಚೀ ನದಿಯ ನೀರನ್ನು ವೇದಾವತಿ ಜಲಾನಯನ ಪ್ರದೇಶಕ್ಕೆ ತಿರುಗಿಸುವುದು ಹೀಗೆ ಈ ಒಂದು ನಾನ್-ಅಗ್ರೀಮೆಂಟ್ ಜೋನಿನಲ್ಲಿ 13 ರಿಜರ್‌ವಾಯಿರ್‌ಗಳಿಂದ ಮತ್ತು ಉಪನದಿಗಳಿಂದ ನಮಗೆ ದೊರಕುವ ನೀರು ಕೇವಲ 34 ಟಿ.ಎಂ.ಸಿ. ಯಷ್ಟಿದೆ. ಆ ನೀರನ್ನು ನಮ್ಮ ಸರ್ಕಾರ ಉಪಯೋಗಿಸುವ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಹಾಕುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೆ.ಆರ್.ಎಸ್., ನುಗು, ಕಪಿಲ ಮತ್ತು ಹೆಬ್ಬಹಳ್ಳ–ಈ ನಾಲ್ಕು ಯೋಜನೆಗಳನ್ನು ಪೂರ್ಣಮಾಡುವುದಕ್ಕೆ ಅದರಲ್ಲೂ ಆ ಒಂದು ಸ್ಕೀಮಿನಲ್ಲಿ ಅಭಿವೃದ್ಧಿ ಮಾಡಿದ್ದು ಕೇವಲ 25 ಟಿ.ಎಂ.ಸಿ.ಯಷ್ಟು ನೀರು ಷೆಡ್ಯೂಲ್ಡ್ ನದಿಗಳಿಂದ. 45 ಟಿ.ಎಂ.ಸಿ.ಯಷ್ಟು ನೀರಿನ ಉಪಯೋಗ ನಾನ್-ಷೆಡೂಲ್ಡ್ ನದಿಗಳಿಂದ, ಆಗುತ್ತದೆ. ಆದ್ದರಿಂದ ಈ 13 ಯೋಜನೆಗಳಿಗೆ 34 ಟಿ.ಎಂ.ಸಿ ಯಷ್ಟು ನೀರನ್ನು 1974 ರೊಳಗೆ ಉಪಯೋಗಿಸುವ ಬಗ್ಗೆ ಸರ್ಕಾರ ಎಷ್ಟು ಮುಂದೆ ಹೋಗಬಹುದೆಂಬುದನ್ನು ತಿಳಿಸಬೇಕು.

ಇವೊತ್ತು ಪ್ರಾಯಶಃ ಈ ಎಲ್ಲಾ ನೀರನ್ನು ಉಪಯೋಗಿಸಿದರೆ ಹಳೆಯ ಮೈಸೂರಿನ 7 ಜಿಲ್ಲೆಗಳಲ್ಲಿ 3 ಲಕ್ಷ ಎಕರೆಗಳಿಗೆ ನೀರನ್ನು ಒದಗಿಸಬಹುದು ಎಂದು ಸ್ಪಷ್ಟವಾಗಿದೆ. ಇದನ್ನು ನಾನು ಅಥಾರಿಟೇಟೀವ್ ಆಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 176 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಬಗ್ಗೆ ಸರ್ಕಾರದ ಮನಸ್ಸನ್ನು ಸೆಳೆದರೆ, ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ ಅಷ್ಟು ಜಮೀನನ್ನು ನೀರಾವರಿಗೆ ತರುವುದಕ್ಕೆ ಸಾಧ್ಯ. ಅದಕ್ಕೆ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಎನ್ನುವ ಒಂದು ಅಂದಾಜು ನಮ್ಮ ಮುಂದೆ ಇದೆ. ಅದರ ಬಗ್ಗೆ ಆರ್ಥಿಕ ಪರಿಸ್ಥಿತಿಯನ್ನು ಹೇಳುವುದಾದರೆ ಅದಕ್ಕೆ ಮುಂದೆ ಬರುತ್ತೇನೆ. ಇವೊತ್ತು ಅದರ ಬಗ್ಗೆ ನಮ್ಮಲ್ಲಿ ಯೋಜನೆಗಳು ಇವೆಯೋ ಎಂದು ಸ್ಪಷ್ಟವಾಗಿ ಕೇಳಬೇಕಾಗುತ್ತದೆ. ಇವೊತ್ತು ಸುಮಾರು ನೂರಾರು ಜನ ಇಂಜಿನಿಯರಿಂಗ್ ಡಿಪ್ಲೊಮೋ ಹೋಲ್ಡರ್ಸ್ ಮತ್ತು ಗ್ರಾಜುಯೇಟ್‌ಗಳು ಕೆಲಸ ಇಲ್ಲದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಇದನ್ನು ನಾವು ಕಣ್ಣಿನಲ್ಲಿ ನೋಡುತ್ತಿದ್ದೇವೆ. ತಾಂತ್ರಿಕ ಶಿಕ್ಷಣವನ್ನು ಹೊಂದಿರತಕ್ಕ ಜನತೆಯಿಂದ ಅಂದಾಜುಗಳನ್ನು ತಯಾರು ಮಾಡುವ ಬಗ್ಗೆ ಈಗ 17 ವರ್ಷಗಳಿಂದ ಸರ್ಕಾರದ ಮನಸ್ಸು ಏತಕ್ಕೆ ಹರಿಯಲಿಲ್ಲ ಎಂದು ನಾನು ಕೇಳುತ್ತೇನೆ. ಈಗ ನೀವು ಅಧಿಕಾರದಲ್ಲಿದ್ದೀರಿ, ನಿಮ್ಮನ್ನು ನಾನು ಟೀಕೆ ಮಾಡಬೇಕೆಂದಿಲ್ಲ. ಈಗ 17 ವರ್ಷಗಳಿಂದ ಸರ್ಕಾರದ ಆಡಳಿತ ಸೂತ್ರವನ್ನು ಹಿಡಿದಿರುವಂತಹವರು ಯಾರೋ ಅವರೇ ಇದಕ್ಕೆ ಜವಾಬ್ದಾರರು. ಅವರು ಈ ಒಂದು ಟೆಂಪೋವನ್ನು ಕ್ರಿಯೇಟ್ ಮಾಡಿ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. 176 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಬಗ್ಗೆ ಏನು ಟೆಂಪೋವನ್ನು ಕ್ರಿಯೇಟ್ ಮಾಡಿದ್ದೀರಿ ! 176 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಬಗ್ಗೆ ಅಂದಾಜನ್ನು 1974ನೇ ಇಸವಿಯಲ್ಲಿ ತಯಾರು ಮಾಡುವುದಕ್ಕೆ ಸಾಧ್ಯವಿಲ್ಲ ಎನುವ ಬಗ್ಗೆ ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತು ಸರ್ಕಾರದ ಧೋರಣೆ ಹೇಗಿದೆ ಎನ್ನುವುದನ್ನು ಪ್ರಶ್ನೆ ಮಾಡತಕ್ಕ ಸನ್ನಿವೇಶಕ್ಕೆ ನಾನು ಹೋಗುತ್ತಿದ್ದೇನೆ. 1964-65ನೇ ಇಸವಿಯ ಬಡ್ಜೆಟ್ಟನ್ನು ನಾವು ಸ್ವಲ್ಪ ಲೆಕ್ಕಾಚಾರ

ಹಾಕಿ ನೋಡಿದರೆ ನಮಗೆ ಕಾಣುತ್ತದೆ. ಮೊನ್ನೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ರಾಜ್ಯದ ಇಬ್ಭಾಗದ ಮಾತು ಬೇಡಿ ಎಂದು. ಅವರು ಹೇಳಿದಂತಾ ಮಾತನ್ನು ನಾನು ಶಿರಸಾವಹಿಸಿ ಕೇಳುವುದಕ್ಕೆ ಒಪ್ಪುತ್ತೇನೆ. ಒಂದು ವಿಚಾರವನ್ನು ನಾನು ಅವರನ್ನು ಪ್ರಶ್ನೆ ಮಾಡುತ್ತೇನೆ. ಏನು ನೋವಿನಿಂದ ಅವರು ಅವರ ಭಾಷಣದಲ್ಲಿ ತಿಳಿಸಿದರೋ ಆ ನೋವನ್ನುಂಟು ಮಾಡತಕ್ಕ ಚುಚ್ಚು ಮಾತನ್ನು ಏತಕ್ಕೆ ಸದಸ್ಯರು ಮಾತನಾಡುತ್ತಾರೆ ಎನ್ನುವ ಬಗ್ಗೆ ಅವರ ಮನಸ್ಸನ್ನು ಸೆಳೆಯಲು ನಾನು ಇಚ್ಛೆಪಡುತ್ತೇನೆ. 1964 65 ನೇ ಸಾಲಿನ ಬಡ್ಜೆಟ್ಟನ್ನು ತಿರುವಿ ಹಾಕಿ ನೋಡಿದರೆ ಅರ್ಥವಾಗುತ್ತದೆ. ಹಳೆಯ ಮೈಸೂರಿನ ಪ್ರಾಂತದಲ್ಲಿ ಅಡಕವಾಗಿರತಕ್ಕ, ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರಿ ಎಂಬುದನ್ನು ತಿಳಿಸಬೇಕು. ಇದರ ಅರ್ಥವೇನು? ಇದರ ಅಭಿಪ್ರಾಯವೇನು ? ಇದು ಯಾವ ಕಂಡೀಷನ್‌ನಲ್ಲಿದೆ ಅದರ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳುವ ಮನೋಭಾವನೆ ಸರ್ಕಾರಕ್ಕೆ ಇದೆಯೋ? ಹಾಗಿದ್ದರೆ ಏತಕ್ಕೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕ ಯೋಜನೆಗಳಿಗೆ ಇಷ್ಟು ಸಣ್ಣ ರೀತಿಯಲ್ಲಿ ಮೊತ್ತವನ್ನು ಇಟ್ಟು ಆ ಕೆಲಸಗಳನ್ನು ಪೂರ್ಣಮಾಡತಕ್ಕ ಬಗ್ಗೆ ತಮ್ಮ ಗಮನವನ್ನು ಕೊಟ್ಟಿಲ್ಲ ಎಂಬುದನ್ನು ತಿಳಿಸಬೇಕು. ಈ ವಿಷಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುದ ಬಗ್ಗೆ ತಮ್ಮ ಆಸಕ್ತಿ ಎಷ್ಟರಮಟ್ಟಿಗೆ ಹೋಗಿದೆ ಎಂಬುದನ್ನು ತಿಳಿಸಬೇಕು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರದೆ ಇರತಕ್ಕ ಕೃಷ್ಣ ಮೇಲ್ದಂಡೆಯ ಬಗ್ಗೆ ವಾದ ಏಳುವುದಿಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರದೆ ಇದ್ದಂತಹ ಅಪ್ಪರ್ ಕೃಷ್ಣಾ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವ ಬಗ್ಗೆ ಸರ್ಕಾರ ಯಾವ ಧಾಟಿಯಲ್ಲಿ ಹೋಗಿದೆ ಎಷ್ಟು ಆಸಕ್ತಿಯನ್ನು ಹೊಂದಿದೆ ಎನ್ನುವ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಮೂರನೇ ಯೋಜನೆಯಲ್ಲಿ ಸೇರದೆ ಇರುವ ಅಪ್ಪರ್ ಕೃಷ್ಣಾ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವುದಕ್ಕೆ ಯಾವ ರೀತಿ ಆಸಕ್ತಿಯನ್ನು ವಹಿಸಿದ್ದೀರೋ ಅದೇ ರೀತಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕ ಕಾವೇರಿ ಬೇಸಿನ್ನಿನ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಲು ಆಸಕ್ತಿಯನ್ನು ಏತಕ್ಕೆ ವಹಿಸಿಲಿಲ್ಲ ಎಂಬುದನ್ನು ತಿಳಿಸಬೇಕು. ತಮ್ಮಲ್ಲಿ ಬೇಧ ಭಾವನೆ ಇದೆಯೆಂದು ನಾನು ಹೇಳುತ್ತಾ ಇಲ್ಲ. ಸರ್ಕಾರದ ಯಂತ್ರ ಎಷ್ಟರಮಟ್ಟಿಗೆ ಸಾಗುತ್ತಾ ಇದೆ ಎಂದರೆ ಟೆಕ್ನಿಕಲ್ ಕ್ಲಿಯರೆನ್ಸನ್ನು ಪಡೆಯುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕ ಕಾಗದ ಪತ್ರಗಳು ಎಷ್ಟು ತಡವರಿಸಿ ಹೋಗುತ್ತಿವೆ ಎಂಬುದನ್ನು ಯೋಚನೆ ಮಾಡಬೇಕು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದಂತ ಕಾವೇರಿ ಬೇಸಿನ್ನಿನ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆದಿಲ್ಲ ಎಂದು ಹೇಳಿದರೆ ಪ್ರಾಯಶಃ ಈ ಸರ್ಕಾರದಲ್ಲಿ ಇರತಕ್ಕ ಒಂದು ಧೋರಣೆ ಏನು ಎಂದು ನಾನು ವಿಷಾದದಿಂದ ಅದನ್ನು ಖಂಡಿಸಬೇಕಾಗಿ ಬರುತ್ತದೆ. ಇದರ ಬಗ್ಗೆ ತಮ್ಮ ಗಮನವನ್ನು ಹರಿಸಬೇಕು. ವಿಶಾಲ ಮೈಸೂರಿನ ಜನತೆ ಏಕೈಕ ಮುಖಂಡರಾದ ತಮ್ಮ ಮುಖಂಡತ್ವವನ್ನು ಹಂಬಲಿಸುತ್ತಿದೆ. ಇದರ ಬಗ್ಗೆ ಕಳಂಕವನ್ನು ತರುವ ಬಗ್ಗೆ ತಮ್ಮ ಮನಸ್ಸು ಹೋಗಬಾರದು ನಾನು ಮನನೊಂದು ಈ ವಿಷಯವನ್ನು ಹೇಳುತ್ತಿದ್ದೇನೆ. ಹಳೆಯ ಮೈಸೂರಿನ ಏಳು ಜಿಲ್ಲೆಗಳಿಗೆ ಜೀವನಾಡಿಯಾಗಿರುವ ನದಿಯ ನೀರಿನ್ನು ಉಪಯೋಗಿಸಿ ಕೊಳ್ಳಲು ತಮ್ಮ ಗಮನವನ್ನು ಪೂರ್ಣವಾಗಿ ಹರಿಸಬೇಕೆಂದು ನಾನು ಹೇಳಲು ಇಚ್ಛೆಪಡುತ್ತೇನೆ. ಇದರಲ್ಲಿ ರಾಜಕೀಯ ಇದೆ, ತಮ್ಮ ಹಿಂದೆ ಇದ್ದವರು ಇದಕ್ಕೆ ಕಾರಣ ಅಥವಾ ತಾವು ಕಾರಣ ಎಂದು ಹೇಳುವ ಬಗ್ಗೆ ನಾನು ಇಷ್ಟಪಡುವುದಿಲ್ಲ. ನಾನು ತಮಗೆ ಒಂದು ನಿದರ್ಶನವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಹಾರಂಗಿ ಪ್ರಾಜೆಕ್ಟ್ ಏನಿದೆ ಅದರಲ್ಲಿ ಬಹಳ ರಾಜಕೀಯ ಇದೆ ಎಂದು ತಾವೇ ಈ ಸಭೆಯೊಳಗೆ ಹೇಳಿದ್ದೀರಿ, ಇದನ್ನು ಕಾರ್ಯಗತ ಮಾಡುವ ಬಗ್ಗೆ ಅನೇಕ ಅಡ್ಡಿ ಆತಂಕಗಳು ಇದೆ ಎಂಬುದನ್ನು ತಾವೇ ತಿಳಿಸಿದ್ದೀರಿ. ತಮ್ಮನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಏನು ನಿಮ್ಮ ಅಧಿಕಾರಿಗಳು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಯೋ ಆ ಅಂಕಿ ಅಂಶಗಳೆಲ್ಲಾ ಪ್ರಾಯಶಃ ಇಂಡಿಯಾ ದೇಶದಲ್ಲಿ ಕಾರ್ಯಗತ ಮಾಡುತ್ತಿರುವ ಅನೇಕ ಪ್ರಾಜೆಕ್ಟುಗಳಿಗಿಂತ ಇದು ಒಳ್ಳೆಯ ರೆಮ್ಯುನರೇಟೀವ್ ಪ್ರಾಜೆಕ್ಟ್ ಆಗಿದೆ. ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ ತಿಳಿಸಿದ್ದಾರೆ. ಅಧಿಕಾರಿಗಳು ಕೊಟ್ಟಂತ ಒಂದು ಅಭಿಪ್ರಾಯದ ಮೇರೆ ಮೊದಲು ಇದ್ದಂತಹ ಒಂದು ಎಸ್ಟಿಮೇಟನ್ನು ಬದಲಾಯಿಸಿ ಅದನ್ನು ಎರಡು ಭಾಗಮಾಡಿ ಒಂದು ಕಡೆ ಅಣೆ ಕಟ್ಟು ಇನ್ನೊಂದು ಕಡೆ ಡ್ಯಾಮ್ ಹಾಕುವ ಒಂದು ರಿಪೋರ್ಟನ್ನು ಕೊಡತಕ್ಕ ಬಗ್ಗೆ ಅಧಿಕಾರಿಗಳ ಗಮನ ಏತಕ್ಕೆ ಹರಿಯಬೇಕು ಎಂಬುದನ್ನು ಕೇಳಲು ನಾನು ಇಚ್ಛೆಪಡುತ್ತೇನೆ. ನನಗೆ ತಿಳಿದ ಮಟ್ಟಿಗೆ ಅನೇಕ ಜನ ಅಧಿಕಾರಿಗಳು ಒಂದು ಪ್ರಾಜೆಕ್ಟ್ ಕಟ್ಟತಕ್ಕ ಬಗ್ಗೆ ಯಾವ ಒಂದು ದಾಕ್ಷಿಣ್ಯಕ್ಕೂ ಒಳಗಾಗದೆ ತಮ್ಮ ಒಂದು ಸ್ವಂತ ಅಭಿಪ್ರಾಯವನ್ನು ಕೊಡತಕ್ಕ ಬಗ್ಗೆ ಅವರಿಗೆ

(ಶ್ರೀ ಎಚ್. ಡಿ. ದೇವೇಗೌಡ)

ಸಾಮರ್ಥ್ಯವಿಲ್ಲ. ಇದಕ್ಕೆ ಸರ್ಕಾರವೇ ಕಾರಣ ಎಂದು ನಾನು ನೊಂದು ಹೇಳಬೇಕಾಗಿದೆ. ಅಧಿಕಾರಿಗಳಿಗೆ ಏನಾಗಿದೆ ಎಂದರೆ ಅವರು ರಾಜಕೀಯ ಒತ್ತಡಕ್ಕೆ ಸಿಕ್ಕಿ ನುಚ್ಚು ನೂರಾಗುವ ಸಂದರ್ಭ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದ ಮೇಲೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ 2,000 ಎಕರೆ ಕಾಫೀ ತೋಟವನ್ನು ಉಳಿಸುವ ಸಂದರ್ಭದಲ್ಲಿ ಏನು ಪರಿಸ್ಥಿತಿ ಬಂತು ಎಂಬುದನ್ನು ತಿಳಿಸಿದ್ದಾರೆ. ಎರಡು ಸಾವಿರ ಎಕರೆ ಕಾಫಿ ತೋಟದ ಮಾಲೀಕರು ಎಷ್ಟು ಜನ ಇದ್ದಾರೋ ಅವರ ಒಂದು ಪ್ರಭಾವಕ್ಕೆ ಒಳಗಾಗಿ ಅವರ ಸಂಸಾರದ ಹಿತಚಿಂತನೆಯಿಂದ ಎರಡು ಸಾವಿರ ಎಕರೆ ಕಾಫೀ ತೋಟದವರ ಪ್ರಭಾವದ ಕಡೆ ತಮ್ಮ ಗಮನ ಹರಿಯಿತೇ ಹೊರತಾಗಿ ಒಂದು ಲಕ್ಷ 5 ಸಾವಿರ ಎಕರೆ ಇರಿಗೇಟ್ ಆಗತಕ್ಕಂಥಾದ್ದಕ್ಕೆ ತಮ್ಮ ಗಮನ ಹರಿಯಲಿಲ್ಲ. ಇವೊತ್ತು ಇನ್ನೊಂದು ಯೋಜನೆಯ ಅಂದಾಜನ್ನು ರಿವೈಜ್ ಮಾಡುವುದಾದರೆ 85 ಸಾವಿರ ಎಕರೆ ನೀರಾವರಿಯಾಗುತ್ತದೆ. ಈಗ ಅದರಲ್ಲಿ 35 ಸಾವಿರ ಎಕರೆಯಲ್ಲಿ ಫಲವನ್ನು ಊಟ ಮಾಡತಕ್ಕ ಸಂಸಾರದ ಕಡೆಗೆ ತಮ್ಮ ಗಮನ ಹರಿಯಲಿಲ್ಲ. ತಾವು ಯೋಚನೆಮಾಡಿ. ಇದು ನಿಮ್ಮ ಹಿಂದೆ ಇದ್ದಂಥ ಆಡಳಿತ ಸೂತ್ರವನ್ನು ಹಿಡಿದಿದ್ದಂತಹ ವ್ಯಕ್ತಿಯ ಪ್ರತಿಷ್ಠೆ, ಸರ್ಕಾರದ ವ್ಯಕ್ತಿಯ ಪ್ರತಿಷ್ಠೆ, ರಾಜಕೀಯ ವ್ಯಕ್ತಿಗಳ ಪ್ರತಿಷ್ಠೆ. ಇದಕ್ಕೆ ಅವಕಾಶವನ್ನು ಕೊಡಬಾರದು. ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1-30 P.M.

ಹಾರಂಗಿ ವಿವಾದವೇನಿದೆ ಅದರ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಧೋರಣೆಯನ್ನು ಬದಲಾವಣೆ ಮಾಡುವುದು ಸೂಕ್ತ ಎಂದು ನಾನು ಅದರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ಮುಖ್ಯಮಂತ್ರಿಗಳ ಛೇಂಬರಿನಲ್ಲಿ ಕೇಳಿದಾಗ ಇನ್ನೂ ಟೆಕ್ನಿಕಲ್ ಕ್ಲಿಯರನ್ಸ್ ಬರಲಿಲ್ಲ, ಕೆಲಸ ಕಾರ್ಯ ಮಾಡುತ್ತ ಬರೋಣ, ಪುನರ್ಪರಿಶೀಲನೆ ಮಾಡುವುದರ ಬಗ್ಗೆ ಪ್ರಯತ್ನ ಮಾಡೋಣ, ಅಲ್ಲಿಯವರೆಗೂ ಸಮಾಧಾನವಾಗಿ ಇರಿ ಎಂದು ಹೇಳಿದರು. ನಾನು ಅವರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ನಾಲ್ಕು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿ ಎರಡು ಸಾವಿರ ಎಕರೆ ಕಾಫಿ ತೋಟದ ಮಾಲೀಕರನ್ನು 10-20 ಕುಟುಂಬಗಳವರನ್ನು ಉಳಿಸುವುದಕ್ಕೋಸ್ಕರ ಯೋಜನೆಯನ್ನು ಬದಲಾಯಿಸಬೇಕಾಗಿತ್ತೇ ಎಂದು ಕೇಳುತ್ತೇನೆ. ಎರಡು ಸಾವಿರ ಕಾಫಿ ತೋಟದ ಬೆಲೆ ಎರಡು ಕೋಟಿ ರೂಪಾಯಿ ಆಗಬಹುದು. ಅಷ್ಟು ಹಣವನ್ನು ಅವರಿಗೆ ಪರಿಹಾರವಾಗಿ ಕೊಟ್ಟಿದ್ದರೆ ಬೇರೆ ಕಡೆ ಕಾಫಿ ತೋಟವನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪನೆ ಮಾಡಿಕೊಡಬಹುದಾಗಿತ್ತು. ಅದು ಸಾಧ್ಯವಿಲ್ಲದ ಪ್ರಶ್ನೆಯಲ್ಲ. ನಾನು ಹಿಂದೆ ಇದ್ದ ಮಂತ್ರಿಮಂಡಲದ ಪರವಾಗಿಯೂ ಮಾತನಾಡುತ್ತಿಲ್ಲ, ಈಗಿನ ಮಂತ್ರಿಮಂಡಲವನ್ನು ಟೀಕೆ ಮಾಡಬೇಕಾದ ಅಗತ್ಯವೂ ಇಲ್ಲ. ಸುಮಾರು 35 ಸಾವಿರ ಎಕರೆ ಜಮೀನು ಹೆಚ್ಚಾಗಿ ನೀರಾವರಿಯಲ್ಲಿ ಬರುತ್ತಿತ್ತು; ಹರದೂರು ಬಳಿ 125 ಅಡಿ ಎತ್ತರದ ಅಣೆಕಟ್ಟನ್ನು ಕಟ್ಟಿದ್ದಾರೆ. ಇದನ್ನು ಈಗ ಹುದಗೂರು ಬಳಿ ಕಟ್ಟಬೇಕೆಂದು ಮಾಡಿದ್ದಾರೆ. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ. ಇದನ್ನೆಲ್ಲ ಯೋಚನೆ ಮಾಡಬೇಕು. ಇದು ಸರ್ಕಾರದ ಕರ್ತವ್ಯ.

ಸರ್ಕಾರ ತನ್ನ ಧೋರಣೆಯನ್ನು ಬದಲಾಯಿಸದೆ ಕಂಬದಕಡ ಪ್ರಾಜೆಕ್ಟನ್ನು ಕಟ್ಟಿದರೆ ಅದರಿಂದ 5 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳತಕ್ಕ ಯೋಜನೆಯಾಗುತ್ತದೆ. ಒಟ್ಟು 45 ಟಿ.ಎಂ.ಸಿ. ನೀರಿನಲ್ಲಿ 24 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಪ್ರತ್ಯೇಕವಾದ ಯೋಜನೆಗಳನ್ನು ಹಾಕಿದ್ದಾರೆ. ಇನ್ನು 21 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕು. ಇದರಲ್ಲಿ 11 ಟಿ.ಎಂ.ಸಿ. ನೀರನ್ನು ಕಂಬದಕಡ ಪ್ರಾಜೆಕ್ಟ್‌ನಲ್ಲಿ ಉಪಯೋಗಿಸಿಕೊಳ್ಳತಕ್ಕ ಅಭಿಪ್ರಾಯ ಸರ್ಕಾರದಲ್ಲಿದೆ. ಈ ರೀತಿ 11 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಯೋಜನೆಯನ್ನು ಸರ್ಕಾರ ಇಟ್ಟುಕೊಂಡಿದ್ದರೆ ಕಂಬದಕಡ ಪ್ರಾಜೆಕ್ಟ್ ಪ್ರದೇಶದಲ್ಲಿ ಅದಕ್ಕೆ ಅಚ್ಚುಕಟ್ಟು ಸಿಕ್ಕುವುದಿಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ಆ ಕ್ಷೇತ್ರದ ಪ್ರತಿನಿಧಿಗಳಾಗಿದ್ದಾರೆ. ಅವರಾದರೂ ಇದನ್ನು ತಿಳಿಸಬೇಕು. ಕಂಬದಕಡ ಎಡಭಾಗದಲ್ಲಿ ತೆಗೆಯತಕ್ಕ ನಾಲೆಗೆ ಸಾಕಷ್ಟು ಅಚ್ಚುಕಟ್ಟು ಸಿಕ್ಕುವುದಿಲ್ಲ. ಹಾರಂಗಿ ಅಣೆಕಟ್ಟೆಯಿಂದ ತೆಗೆಯುವ ಬಲಭಾಗದ ನಾಲೆಗೆ ಎಲ್ಲ ಅಚ್ಚುಕಟ್ಟೂ ಇರುವುದರಿಂದ ಕಂಬದಕಡ ಎಡಭಾಗದ ನಾಲೆಗೆ ಅಚ್ಚುಕಟ್ಟು ಇರುವುದಿಲ್ಲ. ಇದು ಓವರ್‌ಲ್ಯಾಪ್ ಆಗುತ್ತದೆ. ಕಂಬದಕಡದಲ್ಲಿ 11 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಹಾರಂಗಿ ಯೋಜನೆಯ ಬಲಭಾಗದ ನಾಲೆಯನ್ನು ವಿಸ್ತೀರ್ಣ ಮಾಡಿ ಅದರ ಮೈಲೇಜ್ ಜಾಸ್ತಿ ಮಾಡಬೇಕು. ಸರ್ಕಾರ ಈ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಎಂದು ತಿಳಿಸುತ್ತೇನೆ.

ಹಾರಂಗಿ ಯೋಜನೆಗೆ ಸಂಬಂಧಪಟ್ಟಂತೆ ಶ್ರೀ ಕೆ. ಎಂ. ದೇವಯ್ಯನವರು ಹೇಳಿದರು. ಅದನ್ನು ಕಟ್ಟುವುದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ, ಸರ್ಕಾರ ಅನೇಕ ಯೋಜನೆಗಳನ್ನು ಒಂದೇ ಸರಿ ಹಾಕಿದ್ದರಿಂದ ಕೊಡಗು ಎಲ್ಲಿ ಮುಳುಗಿಹೋಗುತ್ತದೆಯೋ ಎನ್ನುವ ಆತಂಕವನ್ನು ವ್ಯಕ್ತಪಡಿಸಿದವು ಎಂದು ತಿಳಿಸಿದರು. ಆ ಕ್ಷೇತ್ರದ ಸದಸ್ಯರು ತಮ್ಮ ಅಭಿಪ್ರಾಯವನ್ನು ಈ ಸಭೆಯಲ್ಲಿ ತಿಳಿಸಿದ್ದಾರೆ. ಕೈಗಾರಿಕಾ ಮಂತ್ರಿಗಳಾಗಿರುವ ಮಲ್ಲಪ್ಪನವರೂ ಸಹ ಹಾರಂಗಿ ಅಣೆಕಟ್ಟು 120 ಅಡಿ ಎತ್ತರವಾಗುವುದಕ್ಕೆ ಹರದೂರಿನ ಬಳಿ ಅಣೆಕಟ್ಟನ್ನು ಕಟ್ಟುವುದಕ್ಕೆ ನಮ್ಮ ಅಡ್ಡಿ ಇಲ್ಲ ಎಂಬುದಾಗಿ ಹೇಳಿದ್ದಾರೆಂದು ತಿಳಿದಿದ್ದೇನೆ. ಹಾರಂಗಿ ಅಣೆಕಟ್ಟನ್ನು ಇನ್ನೂ ಎತ್ತರಿಸಿ ಹಿಂದೆ ಮಾಡಿದ್ದಂತೆ 180 ಅಡಿ ಕಟ್ಟಬೇಕು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಪುನರ್ಪರಿಶೀಲನೆ ಮಾಡಬೇಕು. ನಾನು ಇದನ್ನು ಸ್ವಲ್ಪ ಸ್ವಾರ್ಥದಿಂದಲೂ ಹೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಈ ದಿವಸ 40 ಸಾವಿರ ಪ್ರಜಾಸಂಖ್ಯೆ ಇರುವ ಒಂದು ಹೋಬಳಿಯಲ್ಲಿ ಕುಡಿಯಲು ನೀರಿಲ್ಲ. ಇದರಲ್ಲಿ ಸುಳ್ಳು ಇದ್ದರೆ ನನ್ನ ಸದಸ್ಯತನಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಈ ಹೋಬಳಿಗೆ ಯಾವುದೇ ತರಹ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಬಾವಿಗಳನ್ನು ತೆಗೆಯಬೇಕು ಎಂದರೆ 30-40 ಅಡಿ ಆಳ ಹೋದರೂ ನೀರು ಬರತಕ್ಕ ಸನ್ನಿವೇಶ ಕಂಡುಬರುವುದಿಲ್ಲ. ಎರಡು ಸಾವಿರ ಎಕರೆ ಕಾಫಿ ತೋಟವನ್ನು ಹೊಂದಿರತಕ್ಕ ಹತ್ತಾರು ಜನರಿಗೆ ತೊಂದರೆಯಾಗುತ್ತದೆ ಎಂದು 40 ಸಾವಿರ ಜನರನ್ನು ಬಲಿಕೊಡಬೇಕು ಎನ್ನುವ ಧೋರಣೆಯನ್ನು ಬಿಟ್ಟು ಇದನ್ನು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಿ. ಇದು ಅಗ್ರಿಮೆಂಟಿಗೆ ಒಳಪಡುವ ನೀರನ್ನು ಉಪಯೋಗಿಸಿಕೊಳ್ಳಲು ತೆಗೆದುಕೊಳ್ಳುವ ಯೋಜನೆಯಲ್ಲ. 1974ರ ಒಳಗೆ ಕಟ್ಟಬೇಕಾದ ಅವಸರದ ಪ್ರಶ್ನೆ ಇಲ್ಲ. ಅಧಿಕಾರಿಗಳು ಯಾರ ಪ್ರಭಾವಕ್ಕೂ ಬೀಳದೆ ತಮ್ಮ ಅಭಿಪ್ರಾಯವನ್ನು ಇದರ ಬಗ್ಗೆ ಕೊಡುವಂತೆ ಮಾಡಬೇಕು ಮತ್ತು ಇದನ್ನು ಸರ್ಕಾರ ಪುನರ್ಪರಿಶೀಲನೆ ಮಾಡಬೇಕು. ಹಾರಂಗಿ ಪ್ರಾಜೆಕ್ಟನ್ನು 180 ಅಡಿ ಕಟ್ಟಿ, 120 ಅಡಿ ಎತ್ತರ ಕಟ್ಟಿ ಕೊನೆಗೆ 100 ಅಡಿ ಆದರೂ ಕಟ್ಟಿ. ಇದರಿಂದ ಬೇಗ ಜನತೆಗೆ ಅನುಕೂಲವಾಗುವಂತೆ ಮಾಡಿ ಎಂದು ಹೇಳುತ್ತೇನೆ.

ಹೇಮಾವತಿ ಯೋಜನೆಗೆ ಅಡ್ಮಿನಿಸ್ಟ್ರೇಟಿವ್ ಮಂಜೂರಾತಿಯನ್ನು ಕೊಟ್ಟಿದ್ದಾರೆ, ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ಇದರಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಕೇಳುತ್ತೇವೆ. ಟೆಕ್ನಿಕಲ್ ಕ್ಲಿಯರೆನ್ಸ್ ಬೇಗ ದೊರಕಿಸಿಕೊಂಡು ಇದರ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಮುಂದಿನ ತಿಂಗಳು ಹಾರಂಗಿ ಪ್ರಾಜೆಕ್ಟಿನ ಅಸ್ತಿಭಾರ ಶಿಲೆಯನ್ನು ಹಾಕುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬರತಕ್ಕ ಕಾಲದಲ್ಲಿ ಹೇಮಾವತಿ ಪ್ರಾಜೆಕ್ಟಿನ ಅಸ್ತಿಭಾರ ಶಿಲೆಯನ್ನೂ ಹಾಕಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕಟ್ಟಬೇಕೆಂದು ಯೋಚನೆ ಮಾಡಿದ್ದಾರೆ. ಇದು ಈ ಮಾನ್ಯ ಸಭೆಯ ಸದಸ್ಯರ ಅಭಿಪ್ರಾಯವಾದರೆ, ಅವರ ಅಭಿಪ್ರಾಯಕ್ಕೆ ನಾನು ಅಡ್ಡಿ ಬರುವುದಿಲ್ಲ. ಅದೇ ಜಿಲ್ಲೆಯವರಾದ ಶ್ರೀಮಾನ್ ತಿಮ್ಮಪ್ಪಗೌಡರೂ ಸಭೆಯಲ್ಲಿದ್ದಾರೆ. ಇದರಿಂದ ಅಲ್ಲಿರತಕ್ಕ ಜನರಿಗೆ ತೊಂದರೆಯಾದರೆ ಅವರಿಗೆ ಆದಷ್ಟು ಬೇಗ ಪರಿಹಾರ ಕೊಡಬೇಕು. ಅವರಿಗೆ ಯಾವ ಯಾವ ರೀತಿ ಸೌಲಭ್ಯಗಳನ್ನು ಒದಗಿಸಬೇಕೋ ಅದನ್ನೊದಗಿಸಲಿ, ಅದು ಸರಕಾರಕ್ಕೆ ಬಿಟ್ಟ ವಿಷಯ. ಆದಷ್ಟು ಜಾಗ್ರತೆ ನಿರ್ಣಯ ತೆಗೆದುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ ಇದನ್ನು ಎರಡು ಹಂತಗಳಲ್ಲಿ ಕಟ್ಟುವುದು ಬೇಡ ಒಂದೇಸಾರಿ ಪೂರ್ತಿ ಯೋಜನೆಯನ್ನು ಕೈಕೊಳ್ಳುವುದು ಒಳ್ಳೆಯದು. ಸರಕಾರ ತನ್ನ ಧೋರಣೆಯನ್ನು ಸ್ವಲ್ಪ ಬದಲಾಯಿಸಬೇಕೆಂದು ಹೇಳುತ್ತೇನೆ. ಹಂತ ಹಂತದಲ್ಲಿ ಮಾಡುವುದು ಬೇರೆ; ಆದರೆ ಒಪ್ಪಂದದ ಪ್ರಕಾರ ಈ ಯೋಜನೆಯನ್ನು ಕಾರ್ಯಗತ ಮಾಡಬೇಕಾದುದು ಅಗತ್ಯ. 1974ರೊಳಗೆ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡು ಪೂರೈಸಬೇಕು. ಈ ದೃಷ್ಟಿಯಿಂದ ಪೂರ್ತಿ ಯೋಜನೆಯನ್ನು ಒಂದೇ ಹಂತದಲ್ಲಿ ತೆಗೆದುಕೊಂಡು ಪೂರ್ಣ ಮಾಡಬೇಕು. ಟೆಕ್ನಿಕಲ್ ಕ್ಲಿಯರೆನ್ಸ್ ಆದಷ್ಟು ಜಾಗ್ರತೆ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

[Mr. Deputy Speaker in the Chair.]

ಯಗಚಿ ಡೈವರ್ಷನ್ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ಇದನ್ನು ಮಾಡುವುದು ಶ್ಲಾಘನೀಯವಾದ ವಿಷಯ. ಇದರಿಂದ ನಲವತ್ತು ಸಾವಿರ ಎಕರೆಗಳವರೆಗೆ ನೀರು ಕೊಡಬಹುದು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬಿಚ್ಛಿಸುತ್ತೇನೆ. ಕೇವಲ ಈ ನೀರನ್ನು ಡೈವರ್ಟ್ ಮಾಡಿ ವಾಣಿ ವಿಲಾಸ ಸಾಗರಕ್ಕೆ ತೆಗೆದುಕೊಂಡು ಹೋಗುವ ಯೋಚನೆಯಿದ್ದರೆ, ಹಾಸನದಲ್ಲಿ ಇಪ್ಪತ್ತರಿಂದ ಇಪ್ಪತ್ತೈದು ಸಾವಿರ ಎಕರೆ ನೀರಾವರಿಯಾಗುವ ವಿಷಯಕ್ಕೆ ಗಮನ ಕೊಡಬೇಕು. ಬೇಲೂರಿನಿಂದ ಮೇಲಕ್ಕೆ ಬರುವ ಭಾಗ ಒಪ್ಪಂದಕ್ಕೊಳಪಡುವುದಿಲ್ಲ. ಕೆಲಸ ನಡೆಯತಕ್ಕ ಹಾಸನ ಜಿಲ್ಲೆಗೂ ನೀರಾವರಿ ಸೌಲಭ್ಯ ಇದರಿಂದ ಒದಗತಕ್ಕ ಬಗ್ಗೆ ಅಂದಾಜಿನಲ್ಲಿ ಸೂಕ್ತ ಬದಲಾವಣೆಯಾಗ

(ಶ್ರೀ ಎಚ್. ಡಿ. ದೇವೇಗೌಡ)

ಬೇಕು. ಒಟ್ಟಿನಲ್ಲಿ 186 ಟಿ.ಎಂ.ಸಿ. ಎಫ್.ಟಿ. ನೀರು ಉಪಯೋಗವಾಗಬೇಕು. ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯತಕ್ಕ ಬಗ್ಗೆ, ಅಂದಾಜು ಮಾಡತಕ್ಕ ಬಗ್ಗೆ, ಸಾಕಷ್ಟು ಕೇಂದ್ರ ಸರ್ಕಾರದಿಂದ ಹಣ ಸಹಾಯ ಪಡೆಯತಕ್ಕ ಬಗ್ಗೆ ನಮ್ಮ ಸರಕಾರ ಆಸಕ್ತಿ ವಹಿಸಬೇಕು. 1974ನೆಯ ಇಸವಿಯ ಅಂತ್ಯದೊಳಗೆ, ನಾಲ್ಕನೆಯ ಯೋಜನೆಯೊಳಗೆ ಮಾಡಲು ಮನಸ್ಸು ಮಾಡಬೇಕು. ಈ ಎಲ್ಲ ಯೋಜನೆಗಳು ಕಾರ್ಯಗತವಾದರೆ ಸುಮಾರು ಏಳು ಜಿಲ್ಲೆಗಳ ಜನರಿಗೆ ಅನುಕೂಲವಾಗುತ್ತದೆ. ಕಾವೇರಿ ನದಿ ಹಳೆಯ ಮೈಸೂರಿನ ಜನರ ಜೀವನಾಡಿ; ಇದರ ಪೂರ್ಣಫಲ ಜನಾಗೆ ದೊರಕಬೇಕು. ನಾವು ಉಪಯೋಗ ಮಾಡಬಹುದಾದ ನೀರಿನ ಪ್ರಮಾಣವನ್ನು ಪೂರ್ತಿಯಾಗಿ ಉಪಯೋಗ ಮಾಡುವ ಶಕ್ತಿ ನಮ್ಮ ಸರಕಾರಕ್ಕೆ ಬರಲಿ ಎಂದು ಹಾರೈಸಿ, ಈ ಮಾನ್ಯ ಸಭೆ ಈ ನಿರ್ಣಯವನ್ನು ಅಂಗೀಕಾರ ಮಾಡಿ, ಸರಕಾರದ ಗಮನವನ್ನು ಸೆಳೆಯುವ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟುದಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಜಿ. ಎ. ತಿಮ್ಮಪ್ಪ ಗೌಡ (ಅರಕಲಗೂಡು)—ಮಾನ್ಯ ಸಭಾಪತಿಗಳೆ. 1924ನೆಯ ಇಸವಿಯ ಒಪ್ಪಂದದ ಪ್ರಕಾರ, ಮೈಸೂರು ಮತ್ತು ಮದರಾಸು ರಾಜ್ಯಗಳ ನಡುವೆ ಆದ ಕರಾರಿನಂ ನಮ್ಮ ಮೈಸೂರು ಸರಕಾರದವರು ಕಾವೇರಿ ಮತ್ತು ಅದರ ಉಪನದಿಗಳಿಂದ ಸುಮಾರು 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ; ಮತ್ತು ಒಂದು ಲಕ್ಷದ ಹತ್ತು ಸಾವಿರ ಎಕರೆ ಜಮೀನನ್ನು ನೀರಾವರಿಗೆ ತರುವುದಕ್ಕೆ ಇವರಲ್ಲಿ ಅವಕಾಶವಿದೆ. ಅನೇಕ ಕಾರಣಗಳಿಂದ ಇದುವರೆಗೆ ನಮ್ಮ ಭಾಗಕ್ಕೆ ಬಂದಿರುವ ನೀರಿನ ಪ್ರಮಾಣದಲ್ಲಿ ಬಹು ಭಾಗವನ್ನು ನಾವು ಉಪಯೋಗಿಸುವುದಕ್ಕೆ ಸಾಧ್ಯವಾಗಿಲ್ಲ. ಕಾವೇರಿ ಮತ್ತು ಉಪನದಿಗಳಲ್ಲಿ ಅಣೆಗಳನ್ನು ಕಟ್ಟಿ ಕೆಲಸವನ್ನು ಪೂರೈಸಿಲ್ಲ, ಇದಕ್ಕಾಗಿ ನಮ್ಮ ಸರಕಾರದವರು ಕಾವೇರಿ ಮತ್ತು ಅದರ ಉಪನದಿಗಳಿಗೆ ಸಂಬಂಧಪಟ್ಟ ಹಾಗೆ, ಹಾರಂಗಿ, ಕಂಬದಕಡ ಮತ್ತು ಗೊರೂರು ಬಳಿ ಹೇಮಾವತಿ ಈ ಮೂರು ಜಲಾಶಯಗಳನ್ನು ಕಟ್ಟಿ 45 ಟಿ ಎಂ ಸಿ ಎಫ್ ಟಿ ನೀರಿನಲ್ಲಿ ಬಹು ಭಾಗವನ್ನು ಉಪಯೋಗಿಸಿಕೊಳ್ಳುವ ಯೋಜನೆಯನ್ನು ಮಾಡಿದ್ದಾರೆ. ನನಗೊಂದು ಸಂದೇಹವಿದೆ. 1974ಕ್ಕೆ ಈ ಒಪ್ಪಂದದ ವಾಯಿದೆ ಪೂರೈಸುತ್ತದೆ, ಅಷ್ಟರಲ್ಲಿ 45 ಟಿ ಎಂ ಸಿ ಎಫ್ ಟಿ ನೀರನ್ನು ಉಪಯೋಗಿಸಿ ಒಂದು ಲಕ್ಷದ ಹತ್ತು ಸಾವಿರ ಎಕರೆ ನೀರಾವರಿಗೆ ಬರಬೇಕಾದರೆ, ಇದನ್ನು ಸಾಧನೆ ಮಾಡಬೇಕಾದರೆ ಸರಕಾರಕ್ಕಿರುವ ಹಣಕಾಸಿನ ಸೌಲಭ್ಯ ಮತ್ತು ಇತರ ಸೌಲಭ್ಯಗಳನ್ನು ಗಣನೆಗೆ ತೆಗೆದುಕೊಂಡರೆ ಇದು ಸಾಧ್ಯವಾಗುತ್ತದೆಯೆ ಎನ್ನುವ ಸಂಶಯ ನನಗುಂಟಾಗುತ್ತಿದೆ. ಆದುದರಿಂದ ನಮ್ಮ ಮೈಸೂರು ಸರಕಾರದವರು ಕೇಂದ್ರ ಸರಕಾರದ ಸಹಾಯವನ್ನು ಪಡೆದು ಮದರಾಸು ಸರಕಾರದೊಡನೆ ಮಾತನಾಡಿ 1924ರ ಒಪ್ಪಂದವನ್ನು ಪುನರ್ವಿಮರ್ಶೆ ಮಾಡಿ ಕಾಲಾವಕಾಶವನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಈ ಒಪ್ಪಂದವನ್ನು ಮಾಡಿ ಕೊಂಡೆವು. ಈ ಹೊತ್ತು ನಾವೆಲ್ಲರೂ ಒಂದೇ ರಾಷ್ಟ್ರ ಸರಕಾರದಲ್ಲಿರುವುದರಿಂದ ಈ ಒಪ್ಪಂದವನ್ನು ಆಯಾ ಸರಕಾರದ ಅನುಕೂಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳುವುದು ಅಷ್ಟು ಕಷ್ಟವಲ್ಲವೆಂದು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ನಮ್ಮ ಸ್ನೇಹಿತರು ಹೇಳುವ ಹಾಗೆ ಈ ನೀರನ್ನು ಗೊತ್ತಾಗಿರುವ ಅವಧಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಸರಕಾರಕ್ಕೆ ಸಾಧ್ಯವಿಲ್ಲ, ಇವರು ಹಿಂದಿದ್ದಾರೆ ಎನ್ನುವ ಭಯ ನನಗಿಲ್ಲ. ಪ್ರಾಮುಖ್ಯವಾದ ಈ ಮೂರು ಜಲಾಶಯಗಳಲ್ಲಿ ಹಾರಂಗಿ ಬಹು ಮುಖ್ಯವಾದುದು. ಹೆಚ್ಚಿನ ನೀರನ್ನು ಶೇಖರ ಮಾಡುವ ದೃಷ್ಟಿಯಿಂದಲೂ ಮತ್ತು ಹೆಚ್ಚಿನ ಜಮೀನನ್ನು ನೀರಾವರಿಗೆ ತರುವ ದೃಷ್ಟಿಯಿಂದಲೂ ಹಾರಂಗಿಗೆ ಪ್ರಥಮ ಸ್ಥಾನ ಸಿಕ್ಕುತ್ತದೆ. ಹಿಂದಿನ ಸರಕಾರದವರು ಹಾರಂಗಿ ಯೋಜನೆಯನ್ನು ಹರದೂರು ಬಳಿ ಅಣೆ ಕಟ್ಟುವುದಕ್ಕೆ ಯೋಜನೆ ಮಾಡಿ ಅದಕ್ಕೆ ಸರಕಾರದ ಅನುಮತಿ ದೊರಕಿ, ಕೇಂದ್ರ ಸರಕಾರದ ಅನುಮತಿ ದೊರಕಿ ಟೆಕ್ನಿಕಲ್ ಕ್ಲಿಯರೆನ್ಸ್ ದೊರಕಬೇಕಾಗಿತ್ತು. ಅದಕ್ಕೆ ಕೇಳಿಕೊಂಡಿದ್ದೆವು. ಕಾರಣಾಂತರದಿಂದ ಕೆಲವು ತಕರಾರುಗಳು ಬಂದು, ಮೊದಲು ಹರದೂರು ಬಳಿ ಸೈಟನ್ನು ಆರಿಸಿ ಅಲ್ಲಿ ಅಣೆ ಕಟ್ಟಿ ಹೆಚ್ಚು ನೀರನ್ನುಪಯೋಗಿಸಬೇಕೆಂದಿದ್ದುದು ಬದಲಾವಣೆಯಾಗಿ ಹರದೂರು ಮತ್ತು ಹುದಗೂರು ಎರಡು ಜಾಗಗಳಲ್ಲಿಯೂ ಕಟ್ಟಬೇಕೆಂದು ಸರಕಾರದವರು ನಿರ್ಧಾರ ಮಾಡಿದ್ದಾರೆಂದು ಕಾಣುತ್ತದೆ. ಈ ಎರಡರ ಸಂಬಂಧವಾದ ಅಂಕಿ ಅಂಶಗಳನ್ನೂ ನೋಡಿದರೆ ಮೊದಲಿನ ನಿರ್ಧಾರವನ್ನು ಬದಲಾಯಿಸುವುದಕ್ಕೆ ಯಾವ ಪ್ರಬಲವಾದ ಕಾರಣವೂ ಇಲ್ಲವೆಂದು ನನಗೆ ಕಾಣುತ್ತದೆ. ಮೊದಲು ಯೋಜನೆ ಮಾಡಿದ ಪ್ರಕಾರ ಹರದೂರು ಬಳಿ ಅಣೆಕಟ್ಟು ಕಟ್ಟಿದರೆ ಒಂದು ಲಕ್ಷ ಐದು ಸಾವಿರ ಎಕರೆ ಭೂಮಿ ನೀರಾವರಿಗೆ ಬರುತ್ತವೆ. ಮುಳುಗಡೆಯಾಗತಕ್ಕಂಥ ಪ್ರದೇಶ 5,010 ಎಕರೆ ಆಗುತ್ತದೆ. ಸರಕಾರ ಒದಗಿಸಿರುವ ಅಂಕಿ

ಅಂಶಗಳ ಆಧಾರದ ಮೇಲೆ ಇದನ್ನು ಹೇಳುತ್ತಿದ್ದೇನೆ. ಇದರಲ್ಲಿ ಖಾಸಗಿಯವರಿಗೆ ಸೇರಿದ ಜಮೀನು 4,566 ಎಕರೆ ಇದೆ. 1,074 ಎಕರೆ ಭತ್ತ ಬೆಳೆಯತಕ್ಕ ಭೂಮಿ ಇದೆ. 2,000 ಎಕರೆ ಭೂಮಿ ಡ್ರೈ ಕಂ ವೆಟ್ ಲ್ಯಾಂಡ್ಸ್ ಇದೆ. ಈ ಯೋಜನೆಯಲ್ಲಿ ಮುಳುಗಡೆಯಾಗತಕ್ಕ ಗ್ರಾಮ ಒಂದೇ ಒಂದು ಇದೆ. ಈ ಗ್ರಾಮದಲ್ಲಿ ಒಟ್ಟು ವ ಊರು ಕುಟುಂಬಗಳು ಇವೆ. ಈ ಎಲ್ಲ ಅಂಶ ಗಮನದಲ್ಲಿಟ್ಟುಕೊಂಡರೆ ಈ ಯೋಜನೆ ಮಾಡುವುದರಿಂದ ನಷ್ಟ ಬಹಳ ಕಡಿಮೆಯಾಗುತ್ತದೆ. ನಾನು ಅನೇಕ ನೀರಾವರಿ ಯೋಜನೆಗಳನ್ನು ನಮ್ಮ ಮೈಸೂರು ರಾಜ್ಯದಲ್ಲಿಯೂ ಮತ್ತು ಬೇರೆ ಕಡೆ ಸಹ ನೋಡಿದ್ದೇನೆ. ಮುಳುಗಡೆಯಾಗುವ ಪ್ರದೇಶ, ಖರ್ಚು, ನೀರಾವರಿಯಾಗುವ ಭೂಮಿ ಇವುಗಳನ್ನು ಹೋಲಿಕೆ ಮಾಡಿ ನೋಡಿದರೆ ಈ ಯೋಜನೆಯಲ್ಲಿ ಅಣೆಕಟ್ಟು ಕಟ್ಟುವ ಕೆಲಸ, ಬಹಳ ಕಡಿಮೆ ಖರ್ಚಿನಲ್ಲಿಯಾಗುವುದಲ್ಲದೆ ನೀರಾವರಿ ಪ್ರದೇಶ ಹೆಚ್ಚಾಗಿ ಹೆಚ್ಚು ಪ್ರಯೋಜನವಾಗುತ್ತದೆ ಎಂದು ತಿಳಿದು ಬಂದಿದೆ. ಒಟ್ಟಿನಲ್ಲಿ ಮುಳುಗಡೆಯಾಗತಕ್ಕ ಪ್ರದೇಶ ಬಹಳ ಕಡಿಮೆ. ವ್ಯವಸಾಯಕ್ಕೆ ಬರತಕ್ಕಂಥಾದ್ದು ಅಪಾರವಾದುದು. ಅತಿ ಕಡಿಮೆ ಖರ್ಚಿನಲ್ಲಿ ಹೆಚ್ಚು ನೀರಾವರಿಯಾಗತಕ್ಕ ಯೋಜನೆ ಇಡೀ ಇಂಡಿಯಾ ದೇಶದಲ್ಲಿ ಇದನ್ನು ಬಿಟ್ಟರೆ ಬೇರೆ ಯಾವ ಯೋಜನೆಯೂ ಇಲ್ಲಾ ಎಂದು ಹೇಳಬಹುದು. ಹಾಗೆ ಇದ್ದರೂ ಕೂಡ ಇದನ್ನು ಬದಲಾವಣೆ ಮಾಡಿ ಈಚೆಗೆ ಹುದುಗೂರು ಮತ್ತು ಹರದೂರು ಹತ್ತಿರ ಒಂದು ಪಿಕ್-ಅಪ್ ಹಾಗು ಒಂದು ಸಣ್ಣ ಡ್ಯಾಂ ಕಟ್ಟಬೇಕೆಂದು ಮಾಡಿದ್ದಾರೆ. ಇದರಿಂದ 81,000 ಎಕರೆ ನೀರಾವರಿಯಾಗುತ್ತದೆ ಮತ್ತು ಇದಕ್ಕೆ 12 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಮುಳುಗಡೆಯಾಗತಕ್ಕ ಪ್ರದೇಶ 1,558 ಎಕರೆ ಇದೆ ಅಂದರೆ 3,000 ಎಕರೆ ಒಟ್ಟಿನಲ್ಲಿ ಕಡಿಮೆ ಮುಳುಗಡೆಯಾಗುತ್ತದೆ. ನೀರಾವರಿಯಾಗತಕ್ಕ ಪ್ರದೇಶ 25 ಸಾವಿರ ಎಕರೆ ಮಾತ್ರ. ಇದು ಈ ಯೋಜನೆಯಲ್ಲಿ ಕಡಿಮೆಯಾಗುತ್ತದೆ. ವ್ಯವಸಾಯ ಮಾಡತಕ್ಕ ಜಮೀನು ಕಡಿಮೆಯಾಗಬಹುದು. ಒಟ್ಟಿನಲ್ಲಿ ಈ ಬದಲಾವಣೆ ಮಾಡುವುದಕ್ಕೆ ಯಾವ ಪ್ರಬಲವಾದ ಕಾರಣಗಳೂ ಇಲ್ಲ. ಮೊದಲು ಮಾಡಿದ ಯೋಜನೆಯಲ್ಲಿ ಏನಾದರೂ ಅನಾಹುತವಾಗಬಹುದಾಗಿದ್ದರೆ ಅಥವಾ ಪ್ರತಿಫಲ ಕಡಿಮೆ ದೊರೆಯುವ ಹಾಗೆ ಇದ್ದರೆ ಅಂಥ ಸಮಯದಲ್ಲಿ ಹೆಚ್ಚಿನ ಲಾಭ, ಪ್ರತಿಫಲ ಬರುವುದಕ್ಕೆ ಯೋಜನೆ ಬದಲಾವಣೆ ಮಾಡಬಹುದಾಗಿತ್ತು. 5 ಪರ್ಸೆಂಟ್ ರಿಟರ್ನ್ ಒರಿಜಿನಲ್ ಸ್ಕೀಂನಿಂದ ಬರುತ್ತದೆ. ಈಗ ಬದಲಸಿದ ಯೋಜನೆಯಿಂದ ಎರಡು ಜಾಗದಲ್ಲಿ ಅಣೆಕಟ್ಟು ಕಟ್ಟುವುದರಿಂದ ಸುಮಾರು 3.5 ರಿಟರ್ನ್ ಬರುತ್ತದೆ ಎಂದು ಅಂದಾಜು ಮಾಡಲಾಗಿದೆ. ನೀರು ಶೇಖರಣೆ ವಿಷಯದಲ್ಲಿಯೂ ಕೂಡ ಮೊದಲಿನ ಯೋಜನೆಯ ಪ್ರಕಾರ ಹರದೂರಿನಲ್ಲಿ ಅಣೆಕಟ್ಟು ಕಟ್ಟುವುದರಿಂದ 12.4 ಟಿ. ಎಂ. ಸಿ. ಎಫ್. ಟಿ. ನೀರು ಸ್ಟೋರೇಜ್ ಮಾಡಬಹುದು ಎಂದಿದೆ. ಈ ಅಲ್ಟರ್ನೇಟಿವ್ ಸ್ಕೀಂನಲ್ಲಿ ಕೇವಲ 4.5 ಟಿ.ಎಂ.ಸಿ.ಎಫ್.ಟಿ. ನೀರು ಶೇಖರಣೆಯಾಗುತ್ತದೆ. 1924 ರಲ್ಲಿ ಕಾವೇರಿ ನದಿ ನೀರಿನ ಬಗ್ಗೆ ಮಾಡಿರುವ ಅಗ್ರಿಮೆಂಟ್ ಪ್ರಕಾರ ಹೆಚ್ಚು ನೀರು ಸ್ಟಾಕ್ ಮಾಡಿ ನೀರು ಉಪಯೋಗಿಸಬಹುದು ಎಂದು ಜನಸಾಮಾನ್ಯರ ತಿಳುವಳಿಕೆ ಇತ್ತು. ಅದಕ್ಕೂ ಕೂಡ ಈ ಬದಲಾವಣೆ ಮಾಡಿದ ಯೋಜನೆಯಿಂದ ಅಡ್ಡಿ ಮಾಡಿದಂತೆಯಾಗುತ್ತದೆ. ಈಗ ಕಾವೇರಿ ನದಿ ನೀರು ಉಪಯೋಗಿಸುವುದಕ್ಕೆ ಅವಕಾಶ ಕಡಿಮೆ ಇರುವುದರಿಂದ ಹಾರಂಗಿ ಯೋಜನೆಯಲ್ಲಿ 12.4 ಟಿ. ಎಂ ಸಿ. ಎಫ್. ಟಿ. ನೀರು ಉಪಯೋಗಿಸಿ ಒಂದು ಲಕ್ಷ ಎಕರೆ ಭೂಮಿ ನೀರಾವರಿಯಾಗುವಂತೆ ಯೋಜನೆ ಮಾಡಿದ್ದರೆ ಬಹಳ ಉತ್ತಮವಾಗುತ್ತಿತ್ತು. ಕಾಫಿ ತೋಟಗಳುಳ್ಳ ಪ್ರದೇಶ ಮುಳುಗಡೆಯಾಗುವುದು ಎಂದು ಹೇಳುತ್ತಾರೆ. ಆದರೆ ರೈತರಿಗೆ ಒಂದೆರಡು ವರ್ಷದವರೆಗೆ ಹೆಚ್ಚು ಉತ್ತೇಜನ ಕೊಟ್ಟು ಹೆಚ್ಚು ವ್ಯವಸಾಯಕ್ಕೆ ಅನುಕೂಲ ಮಾಡಿ ಕೊಟ್ಟಿದ್ದರೆ ದುಡ್ಡು ಸಂಪಾದನೆಗೆ ಅಷ್ಟು ಕಷ್ಟವಾಗಿರಲಿಲ್ಲ. ಕಾಫಿ ಬೆಳೆಯಿಂದ ಫಾರಿನ್ ಎಕ್ಸಚೇಂಜ, ಡಾಲರ್ ಅರ್ನಿಂಗ ಇದೆ ಎಂದು ಹೇಳುವುದು ನಿಜವಾದರೂ ಭತ್ತ, ಕಬ್ಬು ಇತ್ಯಾದಿಗಳನ್ನು ಬೆಳೆಯುವುದರಿಂದ ಅಷ್ಟು ಹಣ ಸಂಪಾದನೆ ಮಾಡಬಹುದಾಗಿತ್ತು. ಕಾಫಿ ತೋಟದಿಂದ ಸಂಪಾದನೆ ಯಾಗುವ ಡಾಲರಿಗಿಂತ ಹೆಚ್ಚು ಸಂಪಾದನೆ ಮಾಡಬಹುದಾಗಿದೆ. ಏಕೆಂದರೆ ಈಗ ಭತ್ತ ಗೋಧಿ ಮುಂತಾದ ಆಹಾರ ಧಾನ್ಯ ಕೊಂಡುಕೊಳ್ಳುವುದಕ್ಕೆ ಅಮೇರಿಕಾ ದೇಶಕ್ಕೆ ದುಡ್ಡು ಕೊಡಬೇಕಾಗಿವೆ. ಅಷ್ಟು ಹಣ ಕೊಡುವುದನ್ನು ಉಳಿಸಬಹುದು. ಕಾಫಿ ತೋಟ ಮುಳುಗಡೆಯಾಗುವುದರಿಂದ ನಾಲ್ಕೈದು ಜನ ದುಡ್ಡು ಇರತಕ್ಕಂಥ ಶ್ರೀಮಂತರಿಗೆ ಅಷ್ಟೇ ಹಾನಿಯಾಗುತ್ತಿತ್ತು. ಅದರಿಂದ ಅವರಿಗೆ ಅಷ್ಟು ತೊಂದರೆಯಾಗುವುದಿಲ್ಲ. ಏಕೆಂದರೆ ಅವರಿಗೆ ಸಾವಿರಾರು ಎಕರೆ ಭೂಮಿ ಇರುತ್ತದೆ. ಬೇಕಾದಷ್ಟು ದುಡ್ಡು ಅವರ ಹತ್ತಿರ ಇದೆ. ಅಂಥವರಿಗೆ ಕಾಂಪೆನ್‌ಸೇಷನ್ ಕೊಡಬಹುದು. ಅವರು ಬೇರೆ ಕಡೆ ಅಷ್ಟು ಹಣ ಸಂಪಾದನೆ ಸುಲಭವಾಗಿ ಮಾಡಿಕೊಳ್ಳುತ್ತಾರೆ. ಕೇವಲ ಬಡವರ ಹಾಗು ಸಣ್ಣ ಸಣ್ಣ ರೈತರ ಜಮೀನು ಮುಳುಗಡೆಯಾದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಈ ಅಲ್ಟರ್ನೇಟಿವ್ ಸ್ಕೀಂ ಹಾಕಿಕೊಂಡಿರುವುದರಲ್ಲಿ ಕೇವಲ ಬಡವರ ಜಮೀನು ಮುಳುಗಡೆಯಾಗುವುದರಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಗಮನಕ್ಕೆ ತರುವುದಕ್ಕೆ ಅವಕಾಶವಿರಲಿಲ್ಲ. ಯಾಕೆಂದರೆ

(ಶ್ರೀ ಜಿ. ಎ. ತಿಮ್ಮಪ್ಪ ಗೌಡ)

ಇನ್ನೂ ಟೆಕ್ನಿಕಲ್ ಸ್ಯಾಂಕ್ಷನ್ ಬಂದಿಲ್ಲ. ಅದನ್ನು ಪಡೆಯುವುದು ಕಷ್ಟವಾಗಿದೆ. ಏಕೆಂದರೆ ಈ ಯೋಜನೆಯಲ್ಲಿ ಮುಳುಗಡೆಯಾಗುವ ಪ್ರದೇಶದ ಜನರ ಪುನರ್ ವ್ಯವಸ್ಥೆ ಮಾಡುವುದು ಬಹಳ ಕಷ್ಟವಾಗುತ್ತದೆ. ಇದನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಹೇಮಾವತಿ, ಕಂಬದಕಡ, ಹಾರಂಗಿ ಯೋಜನೆಗಳನ್ನು ಹಿಂದಿನ ಪಿ ಡಬ್ಲ್ಯು ಡಿ ಮಂತ್ರಿಗಳು ಬಹಳ ಹೆಚ್ಚಿನ ಉತ್ಸಾಹದಿಂದ, ಬಹಳ ತ್ವರಿತವಾಗಿ, ಮೂರನ್ನೂ ಕೂಡ ಒಂದೇ ಸಾರಿ ಕಟ್ಟಬೇಕೆಂದು ಬಹಳ ವೇಗವಾಗಿ ಹೊರಟ್ಟದ್ದರಿಂದ, ಕೊಡಗಿನಲ್ಲಿ ಭೀತಿ ಹುಟ್ಟಿ ವಿರೋಧ ಮಾಡುವುದಕ್ಕೆ ಕಾರಣ ವಾಯಿತು. ಈಚೆಗೆ ಅಷ್ಟು ತೀವ್ರವಾದ ವಿರುದ್ಧ ಮಾಡುತ್ತಿದ್ದಾರೆಯೆ ಎನ್ನುವುದು ಅನುಮಾನದ ವಿಚಾರ. ಅಲ್ಲಿಯ ಪ್ರತಿನಿಧಿಗಳು ಹಾರಂಗಿ ಕಟ್ಟುವುದರಲ್ಲಿ ತಮ್ಮದೇನೂ ಅಡ್ಡಿ ಇಲ್ಲ. ಒರಿಜನಲ್ ಸ್ಯೆಟಿನಲ್ಲಿ ಕಟ್ಟಲು ತಮ್ಮದು ಆಕ್ಷೇಪಣೆ ಇಲ್ಲವೆನ್ನುತ್ತಾರೆ. 190 ಅಡಿ ಒಂದೇ ಸಾರಿ ಕಟ್ಟುವುದಕ್ಕೆ ಹೋಗಬೇಡಿರಿ ಎನ್ನುತಿದ್ದಾರೆ. 120 ಅಡಿ ಈಗ ಕಟ್ಟಿ; ಅಮೇಲೆ 190 ಅಡಿಗೆ ಎಕ್ಸ್‌ಟೆಂಡ್ ಮಾಡಿ ಕೊಳ್ಳುವುದಕ್ಕೆ ಫೌಂಡೇಷನ್ ಹಾಕಿಕೊಳ್ಳಿ; ಇದರ ವಾಟರ್ ಆಕ್ಷನ್ ಏನಾಗುತ್ತದೆಂದು ನೋಡಿಕೊಂಡು 190 ಅಡಿ ಮಾಡಿ ಕೊಳ್ಳುವುದಕ್ಕೆ ಅಲ್ಲಿಯ ಜನಗಳದ್ದು ಆಕ್ಷೇಪಣೆ ಇಲ್ಲ. ಅಲ್ಲಿಯ ಪ್ರತಿನಿಧಿಗಳು ಏನು ಹೇಳಿದ್ದಾರೆಯೋ ಅದನ್ನು ಗಮನಕ್ಕೆ ತೆಗೆದುಕೊಂಡು ಆ ರೀತಿ ಮಾಡಬೇಕು.

2-00 P.M.

ಇನ್ನೊಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ವ್ಯಕ್ತಪಡಿಸಿರುವವರು ಲೇಪೀಪಲ್ ಅಲ್ಲ ಕೆಲವರು ಇಂಜನಿಯರುಗಳು 4.5 ಟಿ.ಎಂ.ಸಿ ಎಫ್.ಟಿ. ನೀರು ಉಪಯೋಗಿಸಿಕೊಂಡು 80 ಸಾವಿರ ಎಕರೆಗೆ ಉಪಯೋಗಿಸುವುದು ಅಸಾಧ್ಯ, ನೀರು ಸಾಕಾಗುವುದಿಲ್ಲವೆಂದು ಹೇಳಿದ್ದಾರೆ. ಆರು ತಿಂಗಳೂ ನೀರು ಸಪ್ಲೈ ಮಾಡುವುದಕ್ಕಾಗುವುದಿಲ್ಲ, ಕೊನೆಯ ತಿಂಗಳು ನೀರು ಸಾಕಾಗುವುದೇ ಇಲ್ಲ ವೆಂದು ಹೇಳಿದ್ದಾರೆ ಎರಡನೆಯದಾಗಿ, 4.5 ಟಿಎಂಸಿ ಫೀಟ್ ನೀರು ಉಪಯೋಗಿಸಿ ಕೊಳ್ಳಬೇಕಾದರೆ ನ್ಯಾಚುರಲ್ ಫ್ಲೋವನ್ನು ಸೇರಿಕೊಳ್ಳಬೇಕು. ನ್ಯಾಚುರಲ್ ಫ್ಲೋವನ್ನು ಸೇರಿಕೊಳ್ಳುವುದಕ್ಕೆ ಹೋದರೆ, 80 ಸಾವಿರ ಎಕರೆವರೆಗೆ ಕೊಡುವುದಕ್ಕೆ ಹೋದರೆ, ಕೆಳಗಿರತಕ್ಕಂಥ ಪ್ರಾಜೆಕ್ಟುಗಳಾದ ಕೃಷ್ಣರಾಜಸಾಗರ, ವಗ್ಗೈರೆಗಳಿಗೆ, ನೀರು ಸಾಲದೆ ಬರಬಹುದು ಎಂಬತಕ್ಕಂಥ ಶಂಕೆಯನ್ನೂ ವ್ಯಕ್ತಪಡಿಸಿದ್ದಾರೆ. ತಜ್ಞರು ವ್ಯಕ್ತಪಡಿಸಿರುವ ಈ ಸಂದೇಹವನ್ನೂ, ಪಾಯಿಂಟನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮಾನ್ಯ ಸ್ನೇಹಿತರು ಮಾತನಾಡಿದ ಧಾಟಿ ನೋಡಿದರೆ ದೊಡ್ಡವರ ಜಮೀನುಗಳು ಮುಳುಗಡೆಯಾಗುವ ಹಾಗಿದ್ದರೆ ಪರವಾಗಿಲ್ಲ, ಆ ಪ್ರಾಜೆಕ್ಟು ತೆಗೆದುಕೊಳ್ಳಬಹುದು, ಬಡವರ ಜಮೀನುಗಳಿದ್ದರೆ ಬಿಟ್ಟು ಬಿಡೋಣ ಎನ್ನುವ ಹಾಗಿತ್ತು. ಅಪ್ಪರ್‌ಕೃಷ್ಣ ಆಲಮಟ್ಟಿ ನಾರಾಯಣಪುರದ ಹತ್ತಿರ ಕಟ್ಟಬೇಕಾದರೆ ಸಾವಿರಾರು ಎಕರೆ ಮುಳುಗಡೆಯಾಗುತ್ತದೆ, ಸಾವಿರಾರು ಸಂಸಾರಗಳಿಗೆ ಅನಾನುಕೂಲವಾಗುತ್ತದೆ, ಅಲ್ಲಿ ಬಹಳಜನ ಬಡವರ ಜಮೀನುಗಳು ಮುಳುಗಡೆಯಾಗುತ್ತವೆ. ಅದಕ್ಕೋಸ್ಕರ ಬಿಡುವುದಕಾಗುತ್ತದೆಯೆ ! ಅದು ದೇಶಕ್ಕೆ ಹೆಚ್ಚಿಗೆ ಉಪಯೋಗವಾಗುವ ಯೋಜನೆ. ಅದೇ ರೀತಿ ಹಾರಂಗಿ, ಕಂಬದಕಡ ಯೋಜನೆಗಳೂ ಮತ್ತೊಂದು ಕಡೆ ಉಪಯೋಗವಾಗುವವು. ಇಂಥದ್ದು ಮುಳುಗಡೆಯಾಗುತ್ತದೆ, ಇಂಥದ್ದು ಮುಳುಗಡೆಯಾಗುವುದಿಲ್ಲ ಅನ್ನುವುದು ಪ್ರಾಧಾನ್ಯವಲ್ಲ, ಅದರ ಫೀಸಿಬಿಲಿಟಿ ಮುಖ್ಯ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಾನ್ಯ ಮಂತ್ರಿಗಳು ನನ್ನ ವಾಕ್‌ಸರಣಿಯನ್ನು ಫಾಲೋ ಮಾಡಲಿಲ್ಲ. ನಾನು ಹೇಳಿದ್ದು, ನೀವು ಸ್ಯೆಟನ್ನು ಚೇಂಜ್ ಮಾಡುವ ಬಗ್ಗೆ ಹೊರಗಿನ ಜನಗಳಿಂದು ವಿರೋಧ ಬಂದಿದೆ. ಕಾಫಿತೋಟಗಳು ಹೆಚ್ಚಾಗಿ ಸಬ್‌ಮರ್ಷನ್ ಆಗುತ್ತವೆ, ಅದನ್ನು ತಪ್ಪಿಸುವುದಕ್ಕೆ ಬೇರೆ ಸ್ಯೆಟನ್ನು ಚುನಾಯಿಸುತ್ತಾ ಇದ್ದೀರಿ ಅಂತ ಆ ಕಾರಣ ಸಕಾರ್ಣವಾಗಿಲ್ಲ; ಅದು ನಿರಾಧಾರವಾದುದು. ಜಮೀನು ಯಾವುದು ಹೆಚ್ಚಿಗೆ ಹೋಗುವುದು, ಶ್ರೀಮಂತರಿಗೆ ಎಷ್ಟರ ಮಟ್ಟಿಗೆ ಅನಾನುಕೂಲವಾಗುವುದು, ಆ ಕಾರಣ ಪ್ರಬಲವಾದುದಲ್ಲ, ನಮ್ಮ ಸರ್ಕಾರದ ತಜ್ಞರು ಇಂಜನಿಯರುಗಳು ಮತ್ತು ಕೇಂದ್ರ ಸರ್ಕಾರದ ಇಂಜನಿಯರುಗಳು ಬಂದಾಗ ಜಿಜ್ಞಾಸೆ; ಚರ್ಚೆಯಲ್ಲಿತ್ತು, ಅವರು 3 ಸ್ಯೆಟುಗಳನ್ನು ವಿಮರ್ಶೆ ಮಾಡಿ ಕೊಟ್ಟ ಅಭಿಪ್ರಾಯ ಸರ್ಕಾರದವರು ಒದಗಿಸಿರತಕ್ಕ ಬುಕ್‌ಲೆಟ್ಟಿನಲ್ಲಿ ಈ ರೀತಿ ಇದೆ: It will thus be seen that the Harangi Project is most economic from the point of view of submergence of land villages, displacement of personnel, etc., as compared with other projects

of magnitude in Mysore.'' ಆಮೇಲೆ ಈ 3 ಸೈಟುಗಳನ್ನೂ ಟೆಕ್ನಿಕಲ್ ಅಡ್‌ವೈಸರಿ ಕಮಿಟಿ ಯವರು ಎಕ್ಸಾಮಿನ್ ಮಾಡಿದ್ದಾರೆ. ಮತ್ತು ಹೀಗೆ ಹೇಳಿದ್ದಾರೆ. ''Hardur site was selected site as the best for storage dam on considerations of economy, technical suitability, extensive command and minimum submersion.'' ಇಷು ಎಲ್ಲಾ ಹೇಳಿದ್ದಾರೆ. ಹಿಂದೆ ಇಂಜನಿಯರುಗಳು ಕೊಟ್ಟಿರುವ ಅಭಿಪ್ರಾಯವಿದು : The name of the brochure is ''A Note on the salient features of the Irrigation Projects included in the Third Five Year Plan for the utilisation of the waters of Cauvery, Hemavathi and Harangi Rivers.''

Mr. DEPUTY SPEAKER.—Is it a Goverament publication ?

Sri G. A. THIMMAPPA GOWDA.—Yes.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇರಿಗೇಷನ್‌ಗೆ ಸಂಬಂಧಪಟ್ಟ ಮಂತ್ರಿಗಳು ಯಾರೂ ಕಾಣುವು ದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಾನು ಇದ್ದೇನೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಹೇಮಾವತಿ ವಿಚಾರದಲ್ಲಿ ನಮ್ಮ ಸ್ನೇಹಿತರಿಗೆ ಗೊತ್ತಿದೆ. ಹಿಂದಿ ನಿಂದಲೂ ಇದು ಅಷ್ಟೊಂದು ಲಾಭದಾಯಕವಾದಂಥ ಪ್ರಾಜೆಕ್ಟು ಅಲ್ಲ, ಇದರಿಂದ ಲಾಭಕಿಂತ ಲುಕ್ಸಾನು ಹೆಚ್ಚಾಗಿದೆ, ಸಬ್‌ಮರ್ಷನ್ ಆಗತಕ್ಕಂಥ ಎಕ್ಸ್‌ಟೆಂಟು, ಇರ್‍ರಿಗೇಟ್ ಆಗತಕ್ಕಂಥದ್ದಕ್ಕೆ ಕಂಪೇರ್ ಮಾಡಿದರೆ, ಬಹಳ ಹೆಚ್ಚು ಪ್ರಯೋಜನವಿಲ್ಲ ಎಂದು ಒಂದು ಅಭಿಪ್ರಾಯವಿದೆ. ಅದರೂ ಕೂಡ ದೇಶದ ಹಿತದೃಷ್ಟಿಯಿಂದ, ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಅಗ್ರೀಮೆಂಟ್ ಪ್ರಕಾರ ಅವಶ್ಯಕತೆ ಇದೆ ಎಂದು ಕಂಡುಬಂದದ್ದರಿಂದ, ಅಷ್ಟೊಂದು ಲಾಭದಾಯಕವಾದ ಪ್ರಾಜೆಕ್ಟು ಅಲ್ಲದೆ ಇದ್ದರೂ ಕೂಡ ವಿಧಿ ಇಲ್ಲದೆ ಒಪ್ಪಿಕೊಂಡಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಈಗ ಸಭೆ ಯಲ್ಲಿ ಹಾಜರಿಲ್ಲ. ಇದರಲ್ಲಿ ಒಂದು ಮುಖ್ಯ ವಿಚಾರವನ್ನು ಅವರ ಗಮನಕ್ಕೆ ತರಲು ಇಚ್ಛಿಪಡು ತ್ತೇನೆ. ಈ ಪ್ರಾಜೆಕ್ಟುಗಳು ಎಲ್ಲಾ ಇವೆ. ಅಪ್ಪರ್ ಕೃಷ್ಣ, ಮಲಪ್ರಭಾ ಮುಂತಾದ ಅನೇಕ ಪ್ರಾ ಜೆಕ್ಟುಗಳಿಗೆ ನೂರಾರು ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ನಮ್ಮ ಹಣಕಾಸಿನ ವಿಷಯ ವನ್ನು ತೆಗೆದುಕೊಂಡರೆ, ಇವೆಲ್ಲವನ್ನೂ ಒಮ್ಮೆಯೆ ಕೈಗೊಳ್ಳುವುದಕ್ಕೆ ನಿಗದಿಯಾದ ಕಾಲಕ್ಕೆ ಸಿದ್ಧ ಗೊಳಿಸುವುದಕ್ಕೆ, ಪೂರೈಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದರ ಬಗ್ಗೆ ಸಂದೇಹ ಪಡಬೇಕಾ ಗಿದೆ. ಸುಮಾರು 300—400 ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ಒಟ್ಟಿಗೆ ತೆಗೆದುಕೊಂಡರೆ ನನ್ನದು ಒಂದು ಸಲಹೆ. ಸುಮ್ಮನೆ ಕೆಲವೊಂದು ಒತ್ತಾಯಕ್ಕೆ ಒಳಗಾಗಿದ್ದೇವೆ, ಯಾವಯಾವ ಪ್ರಾಜೆಕ್ಟಿನಿಂದ ಹೆಚ್ಚು ರಿಟರ್ನು ಬರುತ್ತದೆ, ಹೆಚ್ಚು ಲಾಭದಾಯಕವಾಗುತ್ತದೆ, ಅವುಗಳನ್ನು ಮಾತ್ರ ಒಂದು ಪ್ರಯಾರಿಟಿ ಬೇಸಿಸ್ ಮೇಲೆ ತೆಗೆದುಕೊಳ್ಳಿ. ಹಾರಂಗಿ ಬಹಳ ಚನ್ನಾಗಿ ಕಂಡರೆ. ಹಾರಂಗಿಯಿಂದ ಹೆಚ್ಚಿಗೆ ಜಮೀನು ನೀರಾವರಿಯಾಗುತ್ತದೆ, ಖರ್ಚು ಕಡಿಮೆಯಾಗುತ್ತದೆ ಎಂದು ಕಂಡರೆ ಅದನ್ನು ತೆಗೆದುಕೊಳ್ಳಿ, ಅಪ್ಪರ್ ಕೃಷ್ಣ ಚೆನ್ನಾಗಿ ಕಂಡರೆ, ಅದನ್ನು ತೆಗೆದುಕೊಳ್ಳಿ. ಬಹಳ ವರ್ಸ್ಟ್ ಪ್ರಾಜೆಕ್ಟಾಗಿ, ರಿಟರ್ನ ಬಹಳ ಕಡಿಮೆಯಾಗಿದ್ದರೆ ನಿಧಾನವಾಗಿ ತೆಗೆದುಕೊಳ್ಳಿ. ಒಂದು ಪ್ಲಾನ್ಡ್ ವೇನಲ್ಲಿ ನೀರಾವರಿ ಕಾಂಗಾರಿಕೆಗಳ ಪ್ರೋಗ್ರಾಂ ಹಾಕಿಕೊಂಡು ಅದರ ಪ್ರಕಾರ ನಿಗದಿ ಯಾದ ಕಾಲಕ್ಕೆ ಪೂರೈಸಬೇಕಾದುದು ಅವಶ್ಯಕವಾಗಿದೆ. ಇದರಲ್ಲಿ ನಮ್ಮದು ಮುಖ್ಯ ಅಂಶವೆ ನೇಂದರೆ ಪಾಜೆಕ್ಟು ಕೆಲಸಗಳನ್ನು ತೆಗೆದುಕೊಳ್ಳುವುದು ಎಷ್ಟು ಮುಖ್ಯವೋ, ಅದರ ಕೆಳಗಡೆ ಮುಳುಗಡೆಯಾಗತಕ್ಕಂಥ ಜಮೀನಿನ ಜನಗಳಿಗೆ ಪುನರ್ವಸತಿಗೆ ಕಲ್ಪನ ಮಾಡತಕ್ಕಂಥ ಕಾರ್ಯವೂ ಕೂಡ ಅಷ್ಟೇ ಮುಖ್ಯವಾದುದು. ಈ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶ ವಾದರೂ, ಹೆಚ್ಚಿನ ಜಮೀನುಗಳು ನೀರಾವರಿಗೆ ಬಂದು, ಹೆಚ್ಚಿನ ಆಹಾರವನ್ನು ಒದಗಿಸಬೇಕೆಂದು ಅದು ಮುಖ್ಯವಾದುದು.

ಇದೇ ರೀತಿಯಲ್ಲಿ ನೀರಾವರಿ ಕೆಲಸ ಕಾರ್ಯಗಳನ್ನು, ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಕಲಸ ಪ್ರಾರಂಭಮಾಡುವುದಕ್ಕೆ ಮುಂಚೆಯೇ ಎಲ್ಲಿ ಮುಳುಗಡೆಯಾಗತಕ್ಕ ಜಮೀನಿನ ಜನರು ಇದ್ದಾರೋ ಅವರಿಗೆ ಪುನರ್‌ವಸತಿಯನ್ನು ಏರ್ಪಾಡು ಮಾಡುವುದು ಅತಿ ಮುಖ್ಯವಾದ ಕಾರ್ಯ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಅವರಿಗೆ ಸಕಾಲದಲ್ಲಿ ಬೇರೆ ಕಡೆ ಜಮೀನನ್ನು ಕೊಟ್ಟು ಅವರಿಗೆ ಮನೆ ಮಠಗಳನ್ನು ಕಟ್ಟಿಕೊಳ್ಳುವುದಕ್ಕೆ ಸೌಕರ್ಯವನ್ನು ಮಾಡಿಕೊಟ್ಟು ಅವರು ಅದರಿಂದ ಉತ್ಪನ್ನ ಮಾಡಿಕೊಳ್ಳುವುದಕ್ಕೆ ಏರ್ಪಾಡನ್ನು ಮಾಡದಿದ್ದರೆ ಯಾವ ಒಂದು ನೀರಾವರಿ ಯೋಜನೆಯನ್ನು ಮಾಡಿ ದರೂ ಕೂಡ ಅದು ಫಲ ಕೊಡುವುದಕ್ಕೆ ಮುನ್ನ ಎಷ್ಟು ಸಾವಿರ ಸಂಸಾರಗಳಿಗೆ ಇರತಕ್ಕ ಜಮೀನು ಮುಳುಗಡೆಯಾಗುತ್ತದೆಯೋ ಮತ್ತು ಅವರು ಆ ಜಮೀನಿನಿಂದ ಎಷ್ಟು ಆಹಾರವನ್ನು ಉತ್ಪಾದನೆ

(ಶ್ರೀ ಜಿ.ಎ. ತಿಮ್ಮಪ್ಪ ಗೌಡ)

ಮಾಡುತ್ತಾ ಇದ್ದರೋ ಅಷ್ಟೂ ತಪ್ಪಿಹೋಗಿ ದೇಶಕ್ಕೆ ನಷ್ಟವಾಗುತ್ತದೆ. ಆದ್ದರಿಂದ ಗೊರೂರು ಆಗಲಿ, ಹಾರಂಗಿ ಆಗಲಿ ಈ ಪ್ರಾಜೆಕ್ಟಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಅಲ್ಲಿ ಮುಳುಗಡೆಯಾಗತಕ್ಕ ಜನರಿಗೆ ವಸತಿ ಏರ್ಪಾಡು ಮಾಡುವುದು ಅತ್ಯಗತ್ಯ. ಅದರಲ್ಲೂ ಕೂಡ ಹೇಮಾವತಿ ನದಿ ಹರಿಯುತಕ್ಕ ಪ್ರದೇಶದಿಂದ ನಾನ ಬಂದಿರತಕ್ಕವನಾಗಿದ್ದೇನೆ. ಹೇಮಾವತಿ ಪ್ರಾಜೆಕ್ಟಿನ ಪ್ರಿಲಿಮಿನರಿ ವರ್ಕ್ಸ್ ಎಂದರೆ ರೋಡ್ ಮತ್ತು ಕಟ್ಟಡಗಳನ್ನು ಕಟ್ಟುವ ಕೆಲಸವನ್ನು ಕೈಕೊಂಡಿದ್ದಾರೆ. ಅದಕ್ಕೆ ಒದಗಿಸಿರತಕ್ಕದ್ದು 3 ಲಕ್ಷ ರೂಪಾಯಿಗಳು ಮಾತ್ರ ಈ ಹಣದಿಂದ ಎಷ್ಟು ಮಾತ್ರ ಕೆಲಸ ಮಾಡುತ್ತಾರೆಯೋ ಗೊತ್ತಿಲ್ಲ. ಆರಂಭಶೂರತ್ವ ಎನ್ನುವ ಹಾಗೆ ಅಧಿಕಾರಿಗಳು ಅಲ್ಲಿ ಹೋಗಿ ಜನರಿಗೆ ಇದ್ದ ಮನೆ ಮಠಗಳನ್ನು ಕಿತ್ತು ಹಾಕಿ, ಅಕ್ವಿಸಿಷನ್‌ಗೆ ರೆಗ್ಯುಲರ್ ಪ್ರೊಸೀಡಿಂಗ್ಸನ್ನು ಅನುಸರಿಸದೇ ಕೆಲವರನ್ನು ಆ ಜಾಗದಿಂದ ಓಡಿಸುವುದಕ್ಕೂ ಕೂಡ ಪ್ರಯತ್ನ ಮಾಡಿದ್ದರು. ನಾವು ಅಲ್ಲಿಗೆ ಹೋಗಿ ಈಗ 15 ದಿವಸದ ಕೆಳಗೆ ಸಾಕಾರಷ್ಟು ಹಣವನ್ನು ಒದಗಿಸಿಲ್ಲ, ಸರ್ಕಾರದವರು, ಸರ್ಕಾರದ ಜಮೀನು ನೂರಾರು ಎಕರೆ ಗೋಮಾಳ ಇದೆ—ರಸ್ತೆಗಳನ್ನು ಹಾಕುವುದಾದರೆ, ಮನೆಗಳನ್ನು ಕಟ್ಟುವುದಾದರೆ ಆ ಸರ್ಕಾರಿ ಜಮೀನಿನಲ್ಲಿ ಹಾಕಿ ಅಲ್ಲಿರತಕ್ಕ ಜನರಿಗೆ ಬೇರೆ ಜಮೀನನ್ನು ಒದಗಿಸುವವರೆವಿಗೂ ಆ ರೀತಿ ಮಾಡಬೇಡಿ ಎಂದು ಹೇಳಿದೆವು ಮತ್ತು ಈ ವಿಷಯದಲ್ಲಿ ಡೆಪ್ಯೂಟಿ ಕಮಿಷನರ್ ಅವರನ್ನು ಕೂಡ ಕಂಡಿದ್ದೆವು ಮತ್ತು ಮುಖ್ಯ ಮಂತ್ರಿಗಳಿಗೂ ಆ ವಿಚಾರ ತಿಳಿಸಿದೆವು. ಹೇಮಾವತಿಯಲ್ಲಿ ಏನಾಗಿದೆ ಎಂದರೆ ಈಗತಾನೆ ಮಾತನಾಡಿದ ಶ್ರೀಮಾನ್ ದೇವೇಗೌಡರು ಮತ್ತು ಆ ಕಡೆಯಿಂದ ಬಂದಿರುವವರು ಅದರಿಂದ ಲಾಭ ತಡೆಯುವವರಾಗಿದ್ದಾರೆ. ಮುಳುಗಡೆಯಾಗಿರತಕ್ಕ ಜನರ ಕಷ್ಟ ಸುಖ ಅವರಿಗೇನು ಗೊತ್ತಾಗುತ್ತದೆ ? ನೀರು ಪಡೆಯುತಕ್ಕವರು ಅವರು ಸುಖ ಹೊಂದತಕ್ಕವರು ಅವರು ಆದರೆ ಅದರ ಕಷ್ಟನಷ್ಟವನ್ನು ಅನುಭವಿಸುವವರು ಮತ್ತೊಬ್ಬರು. ಆದ್ದರಿಂದ ಫಸ್ಟ್ ಸ್ಟೇಜ್ ಅಷ್ಟೇ ಏಕ ಸೆಕೆಂಡ್ ಸ್ಟೇಜ್ ಅನ್ನೂ ಕೂಡ ಈಗಲೇ ಮಾಡಿ ಎಂದು ಅವರು ಹೇಳುತ್ತಾ ಇದ್ದಾರೆ. ಅವರೇನೋ ಬಹಳ ಲೀಲಾಜಾಲವಾಗಿ ಮಾತನಾಡಬಹುದು, ಅದೇ ರೀತಿ ಶ್ರೀಮಾನ್ ರೇವಣ್ಣಸಿದ್ಧಪ್ಪನವರೂ ಕೂಡ ತಿಪಟೂರಿನವರೆವಿಗೂ ನೀರು ಬರುತ್ತದೆ ಎಂದು ಹೇಳಿ ಅವರು ಹೇಳುವುದನ್ನು ಒಪ್ಪಿಕೊಳ್ಳುತ್ತಾರೆ. ಅದು ಹೋಗಲಿ, ಯಾವ ರೀತಿ ಆಗಬೇಕೋ ಆ ರೀತಿ ಆಗುತ್ತದೆ. ಸರ್ಕಾರದವರು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈಗ ಖಚಿತವಾಗಿ ಎಷ್ಟು ವಿಸ್ತೀರ್ಣ ಮುಳುಗಡೆಗೆ ಬರುತ್ತದೆ ಅದರ ಲೆಕ್ಕಾಚಾರ ನೋಡೋಣ ದೇಶದ ಹಿತದೃಷ್ಟಿಯಿಂದ, ಅದನ್ನು ಮಾಡಲೇ ಬೇಕಾದರೆ ಮಾಡಬೇಕಾಗುತ್ತದೆ. ಆದ್ದರಿಂದ ಆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಅದರಲ್ಲೂ ಹೇಮಾವತಿಯ ವಿಷಯದಲ್ಲಿ ಏನಾಗಿದೆ ಎಂದರೆ ಗೊರೂರಿನಲ್ಲಿ ಅಣೆಕಟ್ಟು ಕಟ್ಟುತ್ತೇವೆ ಎಂದು ಹೇಳಿ 35 ವರ್ಷದಿಂದ ನಡೆಯುತ್ತಾ ಇದೆ. 30 ವರ್ಷದ ಹಿಂದೆ ಸರ್ವೆ ಆಯಿತು. ಕೆ. ಸಿ. ರೆಡ್ಡಿಯವರ ಕಾಲದಲ್ಲಿ ಈ ವಿಷಯ ಬಂತು ಆಗ ಏನೂ ಆಗಲಿಲ್ಲ. ಆಗಲೂ ಅದನ್ನು ಕೈಬಿಟ್ಟರು. ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿ ಬಂತು ಆಗಲೂ ಕೈಬಿಟ್ಟರು ಅದರ 30—40 ಮೈಲಿ ದೂರದಲ್ಲಿರತಕ್ಕ ಪ್ರದೇಶವೆಲ್ಲಾ ಮುಳುಗಡೆಯಾಗುತ್ತದೆ ಎಂಬ ವಿಷಯವನ್ನು ಅನೇಕರು ಆಗಲೇ ತಿಳಿದುಕೊಂಡು ಅದಕ್ಕೆ ಬೇಕಾದ ಬಂದೋಬಸ್ತನ್ನು ಮಾಡಿಕೊಂಡುಬಿಟ್ಟರು. ಸೆಮಿ ಮಲೆನಾಡಿನಲ್ಲಿದ್ದ ಪ್ರದೇಶದಲ್ಲಿ ಜನರು ಸಂಪದ್ಯುಕ್ತವಾಗಿದ್ದು ಜೀವನ ನಡೆಸುತ್ತಾ ಇದ್ದ ಆಲೂರು, ಸಕಲೇಶಪುರ ಇವುಗಳು ಬತ್ತದ ಕಣಜ ಆಗಿತ್ತು ಅಂತಹ ಪ್ರದೇಶಗಳು ಇವತ್ತು ಮುಳುಗಡೆಯಾಗುತ್ತದೆ. ಅಂತಹ ಪ್ರದೇಶವನ್ನು ಮುಳುಗಡೆ ಮಾಡಿ ಅವರಿಗೆ ಇದ್ದ ಒಂದು ಸಂಪತ್ತನ್ನೂ ಕೂಡ ಹಾಳು ಮಾಡಿದರೆ ಅದರಿಂದ ನಮ್ಮ ದೇಶಕ್ಕೆ ನಷ್ಟವಾಗುತ್ತದೆ. ಆದ್ದರಿಂದ ಈ ಕಟ್ಟೆಗಳನ್ನು ಪ್ರಾಜೆಕ್ಟುಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಆ ಜನಗಳಿಗೆ ಸರಿಯಾದ ಜಾಗವನ್ನು ತೋರಿಸಬೇಕು. ಆ ರೀತಿ ಮಾಡಬೇಕಾದರೆ ಅದರ ಹತ್ತಿರದಲ್ಲಿ ಎಲ್ಲೂ ಕೂಡ ಜಮೀನು ಇಲ್ಲ ಅಲ್ಲೆಲ್ಲಾ ಸರ್ಕಾರದ ಕಾಡು ಇದೆ. ಗೋಮಾಳ ಇದೆ. ಆ ಜಮೀನನ್ನು ಬಿಡುಗಡೆ ಮಾಡಿ ಅದನ್ನು ಆ ಜನರಿಗೆ ಕೊಡುವುದು ಅತ್ಯಂತ ಅವಶ್ಯಕವಾಗಿದೆ ಫಾರೆಸ್ಟ್ ಮಿನಿಸ್ಟರು ಇಲ್ಲ ಚೀಫ್ ಮಿನಿಸ್ಟರು ಉದಾರಿಗಳು. ಯಾರು ಮುಳುಗಡೆಗೆ ಒಳಗಾಗುತ್ತಾ ಇದ್ದಾರೋ ಯಾರು ತೊಂದರೆಗೆ ಒಳಗಾಗುತ್ತಾ ಇದ್ದಾರೋ ಆ ಜನಕ್ಕೆ ದೇಶದ ಹಿತದೃಷ್ಟಿಯಿಂದ ಪುನರ್ ವಸತಿಯನ್ನು ಏರ್ಪಡಿಸಿಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಆ ರೀತಿ ಮಾಡಿಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಫಾರೆಸ್ಟ್ ಜಮೀನನ್ನು ಕೊಡದೇ ಅವರಿಗೆ ಪುನರ್ ವಸತಿ ಸೌಕರ್ಯವನ್ನು ಮಾಡಿಕೊಡುವುದಕ್ಕೆ ಸಾಧ್ಯವೇ ಇಲ್ಲ. ಬೀಜಾಪುರದ ಫಾರೆಸ್ಟ್, ದಾಸನ ಫಾರೆಸ್ಟ್, ಬಳ್ಳಾಪುರದ ಫಾರೆಸ್ಟ್, ಗೊಬ್ಬಳ್ಳಿ ಫಾರೆಸ್ಟ್, ಹೊಂಗೇನಹಳ್ಳಿ ಫಾರೆಸ್ಟ್, ಹಂಚಿಹಳ್ಳಿ ಕಾವಲು ಇವುಗಳೆಲ್ಲಾ ಇವೆ. ಇಲ್ಲಿ ಸಾವಿರಾರು ಕುಟುಂಬಗಳವರಿಗೆ ವಸತಿ ಸೌಕರ್ಯವನ್ನು ಮಾಡಿಕೊಡುವುದು. ನಿಮ್ಮ ಆದ್ಯ

ಕರ್ತವ್ಯ. ಇಲ್ಲಿ ಜಮೀನನ್ನು ಕೊಡದೇ ಇದ್ದರೆ ಅವರು ನೂರಾರು ಮೈಲಿ ಹೋಗಬೇಕಾಗುತ್ತದೆ. ಅದರಿಂದ ಅವರಿಗೆ ವಿಪರೀತವಾಗಿ ಖರ್ಚಾಗುತ್ತದೆ, ಅಷ್ಟು ಖರ್ಚನ್ನು ಅವರು ವಹಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಸ್. ಗೌಡಯ್ಯ (ಕೃಷ್ಣರಾಜನಗರ್).—ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಸ್ನೇಹಿತರಾದ ದೇವೇಗೌಡರು ಬಹುಮುಖ್ಯವಾದ ಈ ಖಾಸಗೀ ನಿರ್ಣಯವನ್ನು ಈ ಸಭೆಯ ಮುಂದೆ ತಂದು ನಮಗೆ ಬಹಳ ಉಪಕಾರ ಮಾಡಿದ್ದಾರೆ ಎಂದು ಹೇಳಬಯಸುತ್ತೇನೆ. ಅವರು ಸ್ವಲ್ಪ ಬುದ್ಧಿವಂತಿಕೆಯನ್ನು ಉಪಯೋಗಿಸಿ ಕಾವೇರಿ ನೀರನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆ ಮುಗಿಯುವ ಅವಧಿಯಲ್ಲಿ ಉಪಯೋಗಿಸಿಕೊಳ್ಳಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆ ಮಾತನ್ನು ಅವರು ಸೇರಿಸುವಾಗ ಪ್ರಾಯಶಃ 1924ನೇ ಇಸವಿಯ ಒಪ್ಪಂದವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸೇರಿಸಿದ್ದಾರೆ ಎಂದು ನಾನು ಹೇಳುತ್ತೇನೆ. ಸ್ವಾಮಿ, ಕಾವೇರಿ ನದಿಯ ಬಯಲು ನಮ್ಮ ದಕ್ಷಿಣ ಮೈಸೂರಿನಲ್ಲಿ ಬಹಳ ದೊಡ್ಡದಾದ ಬಯಲು. ಅದರ ವಿಸ್ತೀರ್ಣ ಸುಮಾರು 12,805 ಚದುರ ಮೈಲಿ ಎಂಬುದಾಗಿ ಹೇಳುತ್ತಾರೆ. ಈ ಬಯಲಿನಲ್ಲಿ ಅನೇಕ ನದಿಗಳು ಉಪನದಿಗಳು ಹರಿಯುತ್ತವೆ. ಆದರೆ ಈ ನದಿಗಳು ಉಪನದಿಗಳಿಂದ ಎಷ್ಟು ನೀರು ಉತ್ಪತ್ತಿಯಾಗುತ್ತದೆ ಎಂಬುದನ್ನು ಶಾಸ್ತ್ರೀಯವಾಗಿ ಅಂಕಿಅಂಶಗಳನ್ನು ಸಂಗ್ರಹಿಸಿದ್ದಾರೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಕೃಷ್ಣಾ ಗೋದಾವರಿ ಬಯಲಿನಲ್ಲೂ ಕೂಡ ಗುಲ್‌ಹಾಟಿ ಕಮೀಷನ್ ವರದಿ ಪ್ರಕಾರ ಇಲ್ಲಿಯವರೆಗೂ ಶಾಸ್ತ್ರೀಯವಾಗಿ ಯಾವ ಅಂಕಿಅಂಶಗಳ ಸಂಗ್ರಹಣೆಯೂ ನಡೆದಿಲ್ಲ ಎಂಬುದಾಗಿ ಅವರು ಟೀಕೆ ಮಾಡಿದ್ದಾರೆ. ಅದೇ ಟೀಕೆ ನಮ್ಮ ಕಾವೇರಿ ನದಿ ಬಯಲು ಮತ್ತು ಉಪನದಿಗಳಿಗೂ ಕೂಡ ಅನ್ವಯಿಸುತ್ತದೆ. ಗುಲ್‌ಹಾಟಿ ಕಮೀಷನ್ ಅವರು ಅವರ ವರದಿಯಲ್ಲಿ ಕೃಷ್ಣಾ ಗೋದಾವರಿ ನದಿಗಳ ಮತ್ತು ಅದರ ಉಪನದಿಗಳ ಪ್ರತಿಯೊಂದು ಸಣ್ಣ ಸಣ್ಣ ಉಪನದಿಗಳ ನೀರಿನ ಉತ್ಪತ್ತಿ ಎಷ್ಟಾಗುತ್ತದೆ ಎನ್ನುವುದನ್ನು ಸ್ಥೂಲವಾಗಿ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ಕಾವೇರಿ ನದಿ ಅದರ ಉಪನದಿಗಳಿಂದ ಒಂದು ವರ್ಷಕ್ಕೆ ಎಷ್ಟು ನೀರು ಉತ್ಪತ್ತಿಯಾಗುತ್ತದೆ ಎಂಬುದು ಸರ್ಕಾರದಲ್ಲಿ ಅಂಕಿಅಂಶ ಇದೆಯೇ ಎಂಬುದಾಗಿ ನಾನು ಕೇಳಬಯಸುತ್ತೇನೆ. ಆ ರೀತಿ ಇಲ್ಲದಿದ್ದರೆ ಈಗಲಾದರೂ ಕೂಡ ಇದಕ್ಕೆ ಅಂಕಿಅಂಶ ಸಂಗ್ರಹಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಒಂದು ಅಧಿಕಾರಿಗಳ ತಂಡವನ್ನು ನೇಮಿಸಿ ಪ್ರತಿಯೊಂದು ಉಪನದಿಯಲ್ಲೂ ಈಗ ಎಷ್ಟು ನೀರು ಸಿಕ್ಕುತ್ತದೆ, ಎಷ್ಟನ್ನು ಶೇಖರಿಸಿ ಉಪಯೋಗಿಸುವುದಕ್ಕೆ ಸಾಧ್ಯ ಎಂಬುದನ್ನು ಕಂಡುಹಿಡಿದು ಮುಂದುವರೆಯಬೇಕು. 1961ನೆಯ ಇಸವಿಯಲ್ಲಿ ದೊಡ್ಡ ಪ್ರವಾಹ ಬಂತು. ಕಾವೇರಿ ನದಿಯಲ್ಲಿ ಆ ಪ್ರವಾಹ ಬಂದ ಕಾಲದಲ್ಲಿ ಎಷ್ಟು ನೀರು ಉಪಯೋಗವಾಗದೆ ಸಮುದ್ರಕ್ಕೆ ಹೋಯಿತು ಎಂಬ ವಿಚಾರದಲ್ಲಿ ಮದ್ರಾಸು ಸರ್ಕಾರ ಒಂದು ಹೇಳಿಕೆ ಕೊಟ್ಟಿದೆ. ಮೆಟ್ಟೂರು ಜಲಾಶಯದಲ್ಲಿ ಎಷ್ಟು ನೀರು ನಿಲ್ಲುತ್ತದೆಯೋ ಅದರ ಮೂರರಷ್ಟು ನೀರು ಪೋಲಾಯಿತೆಂದು ಹೇಳಿಕೆ ಕೊಟ್ಟಿದೆ. ಮೆಟ್ಟೂರು ಜಲಾಶಯದಲ್ಲಿ ಕೆಪ್ಯಾಸಿಟಿ ಇರುವುದು 95 ಟಿ.ಎಂ.ಸಿ.ಎಫ್.ಟಿ. ಆದುದರಿಂದ ಪ್ರವಾಹ ಬಂದಾಗ ಮೈಸೂರು ಮತ್ತು ಮದ್ರಾಸು ಸರ್ಕಾರಗಳು ಎಷ್ಟು ನೀರನ್ನು ಉಪಯೋಗಿಸಿವೆ ಎಂಬುದನ್ನು ಕಂಡುಹಿಡಿಯಬೇಕು. ಆಗ ಮತ್ತು ಇದುವರೆಗೆ ಉಪಯೋಗಿಸಿರುವ ನೀರಿನ ಪ್ರಮಾಣ ತಿಳಿದಮೇಲೆ ಮದ್ರಾಸು ಮತ್ತು ಮೈಸೂರು ಸರ್ಕಾರಗಳವರೆಷ್ಟು ಹೆಚ್ಚು ನೀರನ್ನುಪಯೋಗಿಸಿಕೊಳ್ಳಬಹುದೆಂದು ತಿಳಿಯುತ್ತದೆ. ಈಗ ಪ್ರತಿ ವರ್ಷವೂ ಕೂಡ ನಾವು ಮದ್ರಾಸು ಸರ್ಕಾರಕ್ಕೆ ಇಷ್ಟು ನೀರು ಕೊಡಬೇಕೆಂದು 1924ರ ಒಪ್ಪಂದದ ಪ್ರಕಾರ ಗೊತ್ತಾಗಿದೆ. ಅದಕ್ಕಿಂತ ಹೆಚ್ಚಾಗಿ ನಾವು ಮದ್ರಾಸಿಗೆಷ್ಟು ಕೊಡುತ್ತಿದ್ದೇವೆ, ಎಷ್ಟು ಪೋಲಾಗುತ್ತಿದೆ ಎಂಬುದನ್ನು ತಿಳಿಯಬೇಕು. ಹಾಗೆಯೇ ನಮ್ಮ ಗಡಿ ಪ್ರಾಂತದಲ್ಲಿ ಮದ್ರಾಸು ಮತ್ತು ಮೈಸೂರಿಗಿರುವ ಗಡಿ ಪ್ರಾಂತದಲ್ಲಿ ಶಿವನಸಮುದ್ರ ಇಂಥ ಆಯಕಟ್ಟು ಪ್ರಾಂತದಲ್ಲಿ ಕಾವೇರಿ ನೀರು ಮದ್ರಾಸಿಗೆ ಹೋಗುತ್ತಿದೆ ಎಂದು ಅಧಿಕಾರಿ ತಂಡವನ್ನು ಕಳುಹಿಸಿ ಕಂಡು ಹಿಡಿಯಬೇಕಾಗಿದೆ. 1924ನೆಯ ಇಸವಿಯ ಒಪ್ಪಂದದ ಪ್ರಕಾರ ಷೆಡ್ಯೂಲ್ಡ್ ರಿವರ್ಸ್ ಎಂದರೆ ಪಟ್ಟಿಯಲ್ಲಿ ಸೇರಿರುವ ನದಿಗಳು ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ, ಕಪಿನಿ, ಸುವರ್ಣಾವತಿ, ಯಗಚಿ ಹೊಳೆ—ಈ ನದಿಗಳಲ್ಲಿ ನೀರನ್ನು ಒಪ್ಪಂದದ ಪ್ರಕಾರ ಯಾವ ಅಣೆಕಟ್ಟಿಗೂ ಡೈವರ್ಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಜಲಾಶಯಗಳನ್ನು ಮಾಡಿ ಹೆಚ್ಚು ಮಳೆ ಬೀಳುವಾಗ ಹೆಚ್ಚು ನೀರನ್ನು ಶೇಖರಿಸಿ ಉಪಯೋಗಿಸುವುದಕ್ಕೆ ನಮಗೆ ಹಕ್ಕಿದೆಯೇ ಹೊರತು ಪ್ರತಿದಿನ ಹರಿಯುವ ನೀರನ್ನು ಡೈವರ್ಷನ್ ಮಾಡುವುದಕ್ಕೆ ಹಕ್ಕಿಲ್ಲ. ಈ ಒಂದು ಒಪ್ಪಂದಕ್ಕೆ ನಾವು ಕಟ್ಟುಬಿದ್ದಿರುವಾಗ ನಾವು ಈ ನದಿಗಳಿಂದ 1974ನೆಯ ಇಸವಿಯೊಳಗೆ 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿಕೊಳ್ಳಬೇಕು. ದೇವೇಗೌಡರು ಇಲ್ಲಿಯವರೆಗೆ 1924ರಲ್ಲಿ ಒಪ್ಪಂದವಾಯಿತು, ಅಲ್ಲಿಂದ ನಮ್ಮ ಸರ್ಕಾರ 45 ಟಿ. ಎಂ. ಸಿ. ಎಫ್. ಟಿ. ನೀರನ್ನುಪಯೋಗಿಸುವುದಕ್ಕೆ ಏನು

(ಶ್ರೀ ಕೆ. ಎಸ್. ಗೌಡಯ್ಯ)

ಪ್ರಯತ್ನ ಮಾಡಲಾಗಿದೆ ಎಂದು ಕಠಿಣವಾಗಿಯೇ ಸರ್ಕಾರವನ್ನು ಟೀಕೆಮಾಡಿದರು. ನುಗು ಜಲಾಶಯಕ್ಕೆ ಐದೂವರೆ ಟಿ. ಎಂ. ಸಿ. ಎಫ್. ಟಿ. ನೀರನ್ನುಪಯೋಗಿಸಿದ್ದಾರೆ. ಅನಂತರ ಕಪಿನಿ ಪ್ರಾಜೆಕ್ಟ್ ಮಾಡಿದ್ದಾರೆ, ಹಾಗೆಯೇ ಅಲ್ಲಲ್ಲಿ ಸಣ್ಣಸಣ್ಣ ಹೆಬ್ಬಳ್ಳ ಪಿಕಪ್ ಮುಂತಾದುವನ್ನು ತೆಗೆದುಕೊಂಡಿದ್ದಾರೆ. ಇವನ್ನೆಲ್ಲಾ ಸೇರಿಸಿದರೆ 20 ಟಿ. ಎಂ. ಸಿ. ಎಫ್. ಟಿ. ಗಿಂತ ಹೆಚ್ಚು ನೀರನ್ನು ಉಪಯೋಗಿಸಿದಂತಾಗುವುದಿಲ್ಲ. ಉಳಿದ 25 ಟಿ. ಎಂ. ಸಿ. ಎಫ್. ಟಿ. ನೀರನ್ನುಪಯೋಗಿಸಲು ಯಾವ ಕಾರ್ಯಕ್ರಮವೂ ಇಲ್ಲ. ಇತ್ತೀಚೆಗೆ ಕಾವೇರಿ ನದಿಗೆ ಅಡ್ಡಲಾಗಿ ಕಂಬದಕಡ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದಾರೆ, ಹೇಮಾವತಿ ಪ್ರಾಜೆಕ್ಟನ್ನೂ ಸೇರಿಸಿದ್ದಾರೆ, ಲಕ್ಷ್ಮಣತೀರ್ಥ ಪ್ರಾಜೆಕ್ಟ್ ಇದೆ ಕಂಬದಕಡ, ಹಾರಂಗಿ, ಲಕ್ಷ್ಮಣತೀರ್ಥ ಪ್ರಾಜೆಕ್ಟುಗಳನ್ನ ಇತ್ತೀಚೆಗೆ ಕೊಡಗು ಕನ್ನಡನಾಡಿಗೆ ಸೇರಿದಮೇಲೆ ತೆಗೆದುಕೊಳ್ಳಲು ಸಾಧ್ಯವಾಯಿತು. 1956 ಕ್ಕೆ ಮೊದಲು ಈ ಯೋಜನೆಗಳ ಪ್ರಶ್ನೆಯೇ ಇರಲಿಲ್ಲ, ಅವು ಹಳೆಯ ಮೈಸೂರಿಗೆ ಸೇರಿರಲಿಲ್ಲ. ಆದರೆ ಹೇಮಾವತಿ, ಕಪಿನಿ, ಸುವರ್ಣಾವತಿ ನದಿಗಳು ಮೊದಲಿಂದಲೂ ಹಳೆಯ ಮೈಸೂರಿನಲ್ಲೇ ಇದ್ದುವು. ಆ ನದಿ ನೀರನ್ನು ಉಪಯೋಗಿಸುವುದಕ್ಕೆ 1924 ರಿಂದ ನಮ್ಮ ಸರ್ಕಾರ ಪ್ರಯತ್ನ ಮಾಡಬಹುದಾಗಿತ್ತು. ಆದರೆ ದುರದೃಷ್ಟವಶಾತ್ ಏನೂ ಸರಿಯಾದ ಪ್ರಯತ್ನ ನಡೆದಿಲ್ಲ; ನಡೆದಿದ್ದರೂ ಕಾರ್ಯಗತವಾಗಿಲ್ಲ. ಈಗ ಸ್ವಲ್ಪಮಟ್ಟಿಗೆ ಕಾರ್ಯಗತವಾಗುತ್ತಿದೆ. ಕೊಡಗಿನ ಮಹಾ ಜನತೆ ಬಹಳ ಉದಾರ ಮನಸ್ಸಿನಿಂದ ಕನ್ನಡನಾಡಿಗೆ ಸೇರಿದರು; ಅವರು ಬಹಳ ಉದಾರಿಗಳು, ಧೈರ್ಯಶಾಲಿಗಳು, ನಮ್ಮ ಇಂಡಿಯಾದಲ್ಲಿ ಬೇಕಾದಷ್ಟು ದೇಶಸೇವೆಯನ್ನು ಮಾಡುತ್ತಿದ್ದಾರೆ; ಸೈನ್ಯದಲ್ಲಿ ಸೇರಿ ನಮ್ಮ ದೇಶದ ಸಂರಕ್ಷಣೆಯಲ್ಲಿ ಭಾಗವಹಿಸಿದ್ದಾರೆ. ಅನೇಕ ಕಾಫಿ ತೋಟಗಳನ್ನು ಬೆಳೆಸಿ ಅದರಿಂದ ಫಾರಿನ್ ಎಕ್ಸ್‌ಛೇಂಜಿಗೆ ಅನುಕೂಲ ಮಾಡಿದ್ದಾರೆ. ಇಷ್ಟು ಉದಾರವಾಗಿ ನಮ್ಮ ದೇಶ ಸೇವೆ ಮಾಡಿರುವ ಜನರ ಪರವಾಗಿ ನಾವು ಕೆಲವು ಯೋಜನೆಗಳನ್ನು ಕೈಕೊಳ್ಳಬೇಕಾಗಿದೆ. ಅವರು ಮನಸ್ಸು ಮಾಡದಿದ್ದರೆ ಕಾವೇರಿ ನದಿಯ ಹೆಚ್ಚು ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವೇ ಇಲ್ಲ. ಹಾರಂಗಿಯ ಒಂದು ದೊಡ್ಡ ಜಲಾಶಯ ಮಾಡುವುದಕ್ಕೆ ಒಪ್ಪಿಕೊಳ್ಳಬೇಕು, ಕಾವೇರಿ ನದಿಗೆ ಅಡ್ಡಲಾಗಿ ಕಂಬದಕಡದ ಹತ್ತಿರ ಅಥವ ಹೊಸಪಟ್ಟಣದ ಹತ್ತಿರ 20 ಟಿ.ಎಂ.ಸಿ.ಎಫ್.ಟಿ. ನೀರನ್ನುಪಯೋಗಿಸಲು ಒಪ್ಪಬೇಕು. ಲಕ್ಷ್ಮಣತೀರ್ಥ ಜಲಾಶಯವನ್ನು ನಿರ್ಮಿಸಲು ಒಪ್ಪಬೇಕು. ಒಪ್ಪದಿದ್ದರೆ ಕಾವೇರಿ ನೀರನ್ನು ಎಲ್ಲಾ ಕೃಷ್ಣಾರ್ಪಣ ಮಾಡಿದಂತಾಗುತ್ತದೆ ಎಂದು ಹೇಳುತ್ತಿದ್ದರು. ಕಾವೇರಿ ನೀರಿನ ಹೆಚ್ಚು ಜವಾಬ್ದಾರಿ ಕೊಡಗಿನವರ ಮೇಲೆ ಇದೆ, ಅವರನ್ನು ಕೇಳಿಕೊಳ್ಳಬೇಕಾಗಿದೆ ಯಾವರೀತಿ ಅವರು ದೇಶಸೇವೆಯನ್ನು ಮಾಡಿ ಒಂದು ಮಾರ್ಗದರ್ಶನ ಮಾಡುತ್ತಿದ್ದಾರೋ ಅದೇರೀತಿ ಇಲ್ಲೂ ಸಹ ದೊಡ್ಡ ಜಲಾಶಯಗಳನ್ನು ಮಾಡುವುದಕ್ಕೆ ಅವಕಾಶಕೊಟ್ಟು ಕನ್ನಡನಾಡನ್ನು ಸಂಪತ್ತಿನಿಂದ ಕೂಡಿದ ನಾಡನ್ನಾಗಿ ಮಾಡಬೇಕೆಂದು ಕೇಳಿಕೊಳ್ಳಬೇಕಾಗಿದೆ. ನಾವೆಲ್ಲರೂ ಅದಕ್ಕಾಗಿ ಅವರನ್ನು ಬೇಡಿಕೊಳ್ಳಬೇಕಾಗಿದೆ. ಈ ಕಾರ್ಯವನ್ನು ಮಾಡದಿದ್ದರೆ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಸ್ವಾಮಿ, ಹಾರಂಗಿ ಜಲಾಶಯದ ವಿಚಾರವಾಗಿ ಅನೇಕ ವಾದವಿವಾದಗಳೆದ್ದಿವೆ. ಕೊಡಗು ಪ್ರತ್ಯೇಕ ಪ್ರಾಂತವಾಗಿದ್ದಾಗ ಮೂರು ಕಡೆ ಪರಿಶೀಲನೆ ನಡೆದು ಹರದೂರಿನ ಹತ್ತಿರ ಜಲಾಶಯ ಮಾಡಬೇಕೆಂದು , ...

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ಕೆ. ಎಸ್. ಗೌಡಯ್ಯ.—ಇನ್ನೂ 20 ನಿಮಿಷವಾದರೂ ಬೇಕು.

2-30 P.M.

ಹಿಂದೆ ಮೈಸೂರು ಸರ್ಕಾರದವರು ಸಣ್ಣ ಒಂದು ಜಲಾಶಯವನ್ನು ನಿರ್ಮಾಣ ಮಾಡುವುದಕ್ಕೆ ಆಗ ಒಪ್ಪಿಕೊಳ್ಳಲಿಲ್ಲ. ಆದರೆ ಕೊಡಗಿನವರು ನಮ್ಮ ಮೈಸೂರೇ ಸೇರ್ಪಡೆಯಾದ ಮೇಲೆ ಈ ಒಂದು ಯೋಜನೆಯನ್ನು ತಯಾರು ಮಾಡಿದರು. ಅದರ ಹಾರಂಗಿ ನದಿಗೆ ಅಡ್ಡಲಾಗಿ ಹುದ್ಗೂರು ಎಂಬಲ್ಲಿ 207 ಅಡಿಗಳವರೆಗೆ ಒಂದರ ಕಟ್ಟೆ ಕಟ್ಟಬೇಕು ಮತ್ತು ಅದರಲ್ಲಿ 12·4 ಟಿ.ಎಂ.ಸಿ. ಫೀಟು ವಾಟರನ್ನು ಶೇಖರಣೆ ಮಾಡಬೇಕು ಮತ್ತು ಇದರಿಂದ ಸುಮಾರು ಒಂದು ಲಕ್ಷ ಐದುಸಾವಿರ ಎಕರೆಗಳಷ್ಟು ಭೂಮಿಗೆ ನೀರನ್ನು ಒದಗಿಸಬೇಕು ಎಂದು ಮಾಡಲಾಗಿತ್ತು. ಆದರೆ ಅಲ್ಲಿನ ಸ್ಥಳೀಯ ಕೆಲವು ಮುಖಂಡರುಗಳು ಇದನ್ನು ಕಟ್ಟುವುದರಿಂದ ಬಹಳ ದೊಡ್ಡದಾದ ಭೂಪ್ರದೇಶ ಮುಳುಗಡೆಯಾಗುತ್ತದೆ ಎಂದು ಇದಕ್ಕಾಗಿ ಒಂದು ದೊಡ್ಡ ಚಳುವಳಿಯನ್ನೇ ಹೂಡಿದರು ಮತ್ತು ನಮ್ಮ ಮೈಸೂರು ಸರಕಾರದವರು ಸೆಂಟ್ರಲ್ ವಾಟರ್ ಅಂಡ್ ಪವರು ಕಮಿಷನ್ನಿನವರೆಗೆ ಇದನ್ನು ಕಳುಹಿಸಿಕೊಟ್ಟರು

ಮತ್ತು ಆಗ ಇದು ಸ್ವಲ್ಪ ಹೆಚ್ಚು ಕಡಿಮೆಯಾಗಿ ವಾಪಸ್ಸು ಬಂದು ಇದಕ್ಕೆ ಬೇರೆ ಸ್ಥಳವನ್ನು ಪರಿಶೀಲನೆಮಾಡಿ ಕಳುಹಿಸಿಕೊಡಬೇಕೆಂದು ಹೇಳಿದರು. ಅದರಂತೆ ಬೇರೆ ಸ್ಥಳಗಳನ್ನೂ ಪರಿಶೀಲನೆಮಾಡಿ ಹರದೂರು ಬಳಿ 120 ಅಡಿಯ ಕಟ್ಟೆಯನ್ನು ಕಟ್ಟಬೇಕು ಮತ್ತು ಅಲ್ಲಿ ಸುಮಾರು 4·5 ಟಿ.ಎಂ.ಸಿ. ಯಷ್ಟು ನೀರನ್ನು ಶೇಖರಣೆ ಮಾಡುವುದಕ್ಕೆ ಮಾತ್ರ ಅವಕಾಶವಾಗುತ್ತದೆ ಮತ್ತು ಹರದೂರು ಹತ್ತಿರ ಒಂದು ಪಿಕ್‌ಅಪ್‌ನ್ನು ಸುಮಾರು 80 ಅಡಿಯಲ್ಲಿ ಕಟ್ಟಿ ಅಲ್ಲಿಂದ ನೀರನ್ನು ಡೈವರ್ಟ್ ಮಾಡುವುದಕ್ಕೆ ಈ ತರಹ ಅವಕಾಶಗಳನ್ನು ಮಾಡಿದ್ದಾರೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದು ಕಾಣುತ್ತೆ. ನದಿಯಿಂದ ಹೆಚ್ಚಾಗಿ ಹರಿಯುವ ನೀರು ಸಮುದ್ರಕ್ಕೆ ಹೋಗುತ್ತಿರುವುದನ್ನು ಪೋಲಾಗದಂತೆ ಉಪಯೋಗಿಸಿಕೊಳ್ಳುವುದಕ್ಕೆ ಯಾರೂ ಗಮನಿಸಿದಂತೆ ತೋರುತ್ತಿಲ್ಲ. 12·4 ದಶ ಲಕ್ಷ ಘನ ಅಡಿಯನ್ನು ನೀರನ್ನು ಶೇಖರಣೆ ಮಾಡಲಿಕ್ಕೆ ಅವಕಾಶವಿದೆ ಎಂದರೂ ಈಗ 102 ಅಡಿಯಷ್ಟು ನೀರನ್ನೂ ಶೇಖರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಈಗಿರತಕ್ಕ ಯೋಜನೆಯ ಪ್ರಕಾರ. ಹೆಚ್ಚು ಹೆಚ್ಚಾಗಿ ಮಳೆ ಬಿದ್ದಾಗ ಅದರಿಂದ ಬರುವ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಈಗ ಮೆಟ್ಟೂರು ಡ್ಯಾಂನಲ್ಲಿಯೂ ಕೂಡ ಹೆಚ್ಚು ಮಳೆಯಿಂದ ಬರುವ ನೀರು ಸಮುದ್ರಕ್ಕೆ ಹೋಗುತ್ತಿದೆ ಮತ್ತು ಅದನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡದೆ ಕೈಬಿಟ್ಟಿದ್ದಾರೆ. ಅದರಂತೆ ಇಲ್ಲಿಯೂ ಪೋಲಾಗಿ ಹೋಗುವ ನೀರನ್ನು ಕೈಬಿಟ್ಟಹಾಗೆ ಕಾಣುತ್ತದೆ. ಯಾವಾಗ ಜಲಾಶಯಗಳನ್ನು ಮಾಡಿದರೂ ಮುಂಗಾರು ಮಳೆಯಿಂದ ಮತ್ತು ಹಿಂಗಾರಿನ ಮಳೆಯಿಂದ ಬಂದ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ಅದು ಸಮುದ್ರಕ್ಕೆ ಪೋಲಾಗಿ ಹರಿದು ಹೋಗುತ್ತದೆ, ಈ ನೀರನ್ನು ಶೇಖರಣೆ ಮಾಡದೇ ಹೋದರೆ ನೀರಿನ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡಂತಾಗುವುದಿಲ್ಲ, ಇದು ಬಹಳ ಮುಖ್ಯವಾದ ಅಂಶವನ್ನುವುದನ್ನು ಯಾರೂ ಮರೆಯಬಾರದು. ಹರದೂರುಬಳಿ ಒಂದು ಕಟ್ಟೆ ಕಟ್ಟಿ 12·4 ಸಾವಿರ ದಶಲಕ್ಷ ಅಡಿ ನೀರನ್ನು ಶೇಖರಣೆಮಾಡಿ, ಹಾಗೇ ಹುದ್ಗೂರು ಬಳಿ ಒಂದು ಅಣೆಕಟ್ಟು ಕಟ್ಟಿ 4·5 ಸಾವಿರ ದಶಲಕ್ಷ ಅಡಿಯಷ್ಟು ನೀರನ್ನು ಶೇಖರಣೆ ಮಾಡಬಹುದು. ನಮ್ಮ ಕೊಡಗಿನ ಕಡೆಯವರು ಇದಕ್ಕೆ ಒಪ್ಪಿಕೊಂಡರೆ ಕಾವೇರಿ ನದಿಯ ನೀರನ್ನು ಹೆಚ್ಚಾಗಿ ಉಪಯೋಗಿಸುವಂತೆ ಆಗುತ್ತದೆ. ಇದನ್ನು ತಜ್ಞರು ಪರಿಶೀಲನೆ ಮಾಡಬೇಕು. ಹೊಸದಾಗಿ ಯೋಜನೆ ಮಾಡಿರುವಂತೆ ಮಾಡಿದರೆ ನೀರು ಎಲ್ಲಿ, 80,000 ಎಕರೆಗಳಿಗೆ ಸಿಕ್ಕುತ್ತದೆ? ಮತ್ತು ನೀರನ್ನು ಹೇಗೆ ಕೊಡುವುದಕ್ಕೆ ಸಾಧ್ಯ? ತಜ್ಞರ ಅಭಿಪ್ರಾಯವೇನೆಂದರೆ ಸಾವಿರ ದಶಲಕ್ಷ ಘನ ಅಡಿಗಳಷ್ಟು ನೀರಿದ್ದರೆ ಅದರಿಂದ ಸುಮಾರು 5,000 ಎಕರೆಗಳಷ್ಟು ಪ್ರದೇಶಕ್ಕೆ ನೀರು ಸಿಗಬಹುದು, ಅದರಂತೆ ಇಲ್ಲಿಯೂ ನೋಡುವುದಾದರೆ ಸುಮಾರು 28 ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ನೀರಿನ ಸೌಕರ್ಯ ಒದಗಿಸಬಹುದು? ಹಾಗೆ ಈ ಹಾರಂಗಿ ಯೋಜನೆಯಲ್ಲಿ 12·4 ದಶ ಲಕ್ಷ ಘನ ಅಡಿಗಳಷ್ಟು ನೀರಿನ ಶೇಖರಣೆಮಾಡಿ ಅದರಿಂದ ಒಂದು ಲಕ್ಷದ ಐವತ್ತು ಸಾವಿರ ಎಕರೆಗಳಷ್ಟು ಭೂಮಿಗೆ ನೀರನ್ನು ಕೊಡುವುದಕ್ಕೆ ಯಾವ ಭರವಸೆ ಇದೆ? 60,000 ಎಕರೆಗಳಷ್ಟು ನೀರಾವರಿ ಪ್ರದೇಶ ಬರಬಹುದು, ಆದರೆ ಒಂದು ಲಕ್ಷದ ಐವತ್ತು ಸಾವಿರ ಎಕರೆಗಳಷ್ಟಕ್ಕೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ಇದರಲ್ಲಿಯೂ ಉತ್ಪ್ರೇಕ್ಷೆ ಇದೆ, ಇದು ಹೇಗೆ ಸಾಧ್ಯ ಎನ್ನುವುದನ್ನು ತಜ್ಞರ ಅಭಿಪ್ರಾಯಕ್ಕೆ ಬಿಡಬೇಕು ಮತ್ತು ಅವರು ಪರಿಶೀಲನೆ ಮಾಡಬೇಕು, ಎಷ್ಟು ನೀರು ಬಂದರೆ-ಎಷ್ಟು ಎಕರೆಯಷ್ಟು ನೀರಾವರಿ ಪ್ರದೇಶಕ್ಕೆ ಒಳಪಡುತ್ತದೆ ಎನ್ನುವುದನ್ನು ಅವರು ತೀರ್ಮಾನ ಮಾಡಿ ಸರಕಾರಕ್ಕೆ ಕಳುಹಿಸಿದರೆ ಆ ತೀರ್ಮಾನಕ್ಕೆ ನಾವೆಲ್ಲರೂ ತಲೆಬಾಗಬೇಕೆಂದು ನಾನು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಈ ಹಾರಂಗಿ ಯೋಜನೆಯ ವಿಚಾರಗಳನ್ನು ರಾಜಕೀಯ ವ್ಯಕ್ತಿಗಳಿಗೆ ಬಿಡದೇ ತಜ್ಞರ ತೀರ್ಮಾನಕ್ಕೆ ಬಿಟ್ಟು ಅವರಿಂದ ಬರುವ ತೀರ್ಮಾನವನ್ನು ನಾವೆಲ್ಲಾ ಒಪ್ಪುವುದು ಸರಿಯಾಗಿರುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ತೀರ್ಮಾನ ತೆಗೆದುಕೊಂಡಿದ್ದಾಗಿದೆ.

ಡಾ|| ಕೆ. ಎಸ್. ಗೌಡಯ್ಯ.—ತೀರ್ಮಾನ ತೆಗೆದುಕೊಂಡಿರಬಹುದು. ಇನ್ನೂ ಅಣೆಕಟ್ಟಾಗಿಲ್ಲ. ಎಷ್ಟೋ ಸರಕಾರದ ಆರ್ಡರುಗಳನ್ನೇ ಬದಲು ಮಾಡಬಹುದು, ಇದನ್ನೂ ಅದರಂತೆ ಯೋಚಿಸಬಹುದು. ಈ ವಿಷಯದಲ್ಲಿ ಸರಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದು ಯಾವ ಜನರ ಪ್ರಭಾವಕ್ಕೂ ಒಳಗಾಗಬಾರದು ಮತ್ತು ಇದರಲ್ಲಿ ಬಡವರಿಗೆ ತೊಂದರೆಯಾಗುತ್ತದೆ, ಶ್ರೀಮಂತರಿಗೆ ಆಗುತ್ತದೆ ಎನ್ನುವ ಯಾವ ತಾರತಮ್ಯವನ್ನೂ ಮಾಡದೇ ಎಲ್ಲರೂ ತಜ್ಞರ ಅಭಿಪ್ರಾಯಕ್ಕೆ ತಲೆಬಾಗಬೇಕೆಂದು ಇಲ್ಲಿ ಒತ್ತಿಒತ್ತಿ ಹೇಳುತ್ತಿದ್ದೇನೆ. ಇನ್ನು ಹಾರಂಗಿಯ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಕಾವೇರಿ ನದಿಗಾಗಿ ಕೊಡಗಿನ ಪ್ರಾಂತದಲ್ಲಿ ಕಂಬದಕಡದ ಒಂದು ಯೋಜನೆ ತಯಾರಾಗಿದೆ, ಇದರಲ್ಲಿ 5 ಸಾವಿರ ದಶಲಕ್ಷ ಘನ ಅಡಿಗಳಷ್ಟು ನೀರನ್ನು ಶೇಖರಣೆ ಮಾಡುವುದಕ್ಕೆ ಅವಕಾಶವಿದೆ ಎಂದು ಇದೆ, ಇದರಿಂದ ಸುಮಾರು ಇಪ್ಪತ್ತೆರಡೂವರೆ ಸಾವಿರ ಎಕರೆಯಷ್ಟು ಪ್ರದೇಶಕ್ಕೆ ನೀರು

(ಡಾ|| ಕೆ. ಎಸ್. ಗೌಡಯ್ಯ)

ಸಿಗುವುದೂ ಕಷ್ಟ. ಇನ್ನೂ ಹೆಚ್ಚಿನ ನೀರು ಶೇಖರಣೆ ಮಾಡಬೇಕಾಗಿತ್ತು. ಹಿಂದೆ ಇದ್ದ 19 ಸಾವಿರ ದಶಲಕ್ಷ ಅಡಿಗಳ ಯೋಜನೆ ಏನಿತ್ತು ಆ ಯೋಜನೆಯನ್ನು ಕಾರ್ಯಗತ ಮಾಡಿದ್ದರೆ ಅದರಿಂದೇನಾದರೂ ಸುಮಾರು 65 ಸಾವಿರ ಎಕರೆಗಳಷ್ಟು ನೀರಾವರಿಗೆ ಒಳಪಡುವ ಪ್ರದೇಶಗಳಾಗುತ್ತಿತ್ತು ಮತ್ತು ಆಗ ಕಾವೇರಿ ನದಿಯ ನೀರನ್ನು ಉಪಯೋಗಿಸುವ ಒಂದು ಅವಕಾಶ ಸಿಗುತ್ತಿತ್ತು ಎಂದು ನಾನು ಹೇಳುತ್ತೇನೆ.

ಇನ್ನು ಅದೇ ರೀತಿ ಆ ಲಕ್ಷ್ಮಣ ತೀರ್ಥದ ಬಗ್ಗೆಯೂ 176 ದಶಲಕ್ಷ ಘನ ಅಡಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ಮೊನ್ನೆತಾನೆ ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರವರು ಹೇಳಿದರು. ಆದರೆ ಅಲ್ಲಿ ಅವರು ಹೇಳಿರತಕ್ಕ ಅಂಕೀ ಅಂಶಗಳೆಲ್ಲಾ ಸರಿಯೆಂತಲೂ ಹೇಳುವುದಕ್ಕಾಗುವುದಿಲ್ಲ. ಅಲ್ಲಿ ನಮಗೆ ದೊರೆಯತಕ್ಕ ನೀರಿನಂಶ 176 ಆದರೂ ಆಗಬಹುದು, ಇಲ್ಲವೆ 200 ಆದರೂ ಆಗಬಹುದು. ಅದನ್ನು ಇಷ್ಟೇ ಎಂದು ಅಂದಾಜಿನ ಮೇಲೆ ಹೇಳತಕ್ಕದ್ದು ಸರಿಯಲ್ಲ. ಇದನ್ನು ತಜ್ಞರಿಂದ ಪರಿಶೀಲನೆ ಮಾಡಿಸತಕ್ಕದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ಈ ಒಂದು ಸರಿಯಾದ ದಾರಿಯಲ್ಲಿ ನಾವು ಹೋಗದಿದ್ದರೆ ನಮ್ಮ ದೇಶದ ಸಂಪತ್ತನ್ನು ನಾವೇ ಹಾಳುಮಾಡಿಕೊಂಡಂತೆ ಆಗುವುದು. ಆದ್ದರಿಂದ ನಮ್ಮ ರಾಜ್ಯದಲ್ಲಿರತಕ್ಕ ನೀರಿನ ಎಲ್ಲಾ ಸಂಪನ್ಮೂಲಗಳನ್ನೂ ಸರಿಯಾಗಿ ವಿನಿಯೋಗಮಾಡಿಕೊಳ್ಳಲು ಪ್ರಯತ್ನಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ)—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಶ್ರೀ ದೇವೇಗೌಡರು ಮಂಡಿಸಿರತಕ್ಕ ನಿರ್ಣಯದಲ್ಲಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾವೇರಿ ನೀರಿನಿಂದ ದೊರಕುವ ಸಾಧನಸಂಪತ್ತುಗಳನ್ನು ಪೂರ್ತಿಯಾಗಿ ಉಪಯೋಗಿಸುವಂತೆಯೂ ಈ ಬಗ್ಗೆ ಅವಶ್ಯಕ ಯೋಜನೆಗಳನ್ನೆಲ್ಲಾ ಕಾರ್ಯಗತಗೊಳಿಸಲು ಎಲ್ಲ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಂತೆಯೂ ಈ ಸಭೆಯವರು ಸರ್ಕಾರದವರಿಗೆ ಶಿಫಾರಸ್ಸು ಮಾಡುತ್ತಾರೆ, ಎಂದು ಹೇಳಲಾಗಿದೆ. ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತಾ ನನ್ನ ಕೆಲವು ಅಂಕಿ ಅಂಶಗಳನ್ನು ಈ ಕಾವೇರಿ ನೀರಿಗೆ ಸಂಬಂಧಪಟ್ಟ ಹಾಗೆ ಈ ಸಭೆಯ ಮುಂದಿಡಲು ಇಷ್ಟಪಟ್ಟಿದ್ದೇನೆ.

ಇತರೇ ಎಲ್ಲ ನದಿಗಳ ಹಾಗೆ ಈ ಕಾವೇರಿಯೂ ಒಂದು ದೊಡ್ಡ ನದಿ. ಇದು ಹಿಂದಿನ ಕೊಡಗು ಸಂಸ್ಥಾನದಲ್ಲಿ ಅಂದರೆ ಈಗಿನ ಹೊಸ ಮೈಸೂರು ರಾಜ್ಯದ ಕೊಡಗಿನಲ್ಲಿ ಹುಟ್ಟಿ ಹಾಸನ-ಮೈಸೂರು ಜಿಲ್ಲೆಗಳ ಮಾರ್ಗವಾಗಿ ಹರಿದು ಮದ್ರಾಸ್ ಪ್ರಾಂತ್ಯವನ್ನು ಪ್ರವೇಶಮಾಡುತ್ತದೆ. ಇದಕ್ಕೆ ಅನೇಕ ಉಪನದಿಗಳೂ ಇವೆ; ಅವುಗಳಲ್ಲಿ ಉಪನದಿಗಳೂ ಮುಖ್ಯವಾದುವುಗಳೆಂದರೆ: ಕಪಿನಿ, ಲಕ್ಷ್ಮಣತೀರ್ಥ ಅರ್ಕಾವತಿ, ಸುವರ್ಣಾವತಿ, ಹೇಮಾವತಿ ಮತ್ತು ಯಗಚಿ ಇವು ಮುಖ್ಯವಾದುವುಗಳು. ಈ ಎಲ್ಲಾ ನದಿಗಳ ನೀರಿನಲ್ಲಿ ನಮಗೆ ಸೇರತಕ್ಕ ಅಂಶವೆಷ್ಟು ಎಂಬುದನ್ನು ಇಲ್ಲಿಯವರೆಗಿನ್ನೂ ತಜ್ಞರುಗಳೂ ಸೇರಿ ತೀರ್ಮಾನ ಮಾಡಿಲ್ಲವೆಂದು ಈ ಹಿಂದೆ ಮಾತನಾಡಿದ ಸದಸ್ಯರುಗಳು ಹೇಳಿದ್ದಾರೆ. ಆದರೆ ಈಗ ಈ ನದಿಯಿಂದ ನಮಗೆ ಸುಮಾರು 240 ಟಿ. ಎಂ. ಸಿ. ಎಫ್. ಟಿ. ನೀರು ಸಿಗುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ 450 ಟಿ. ಎಂ. ಸಿ. ಎಫ್. ಟಿ. ನೀರು ಎಂದರೆ ಇದು ಒಟ್ಟು ನೀರಿನ ಅಂಶದಲ್ಲಿ ಸ್ವಲ್ಪ ಹೆಚ್ಚುಕಡಮೆ ಶೇಕಡ 60ರಷ್ಟು, ಇಲ್ಲವೇ ಮುಕ್ಕಾಲು ಭಾಗವಾಗುತ್ತದೆಂದು ಹೇಳಬಹುದು. ಅಂದರೆ ಈ ಒಟ್ಟು ನೀರಿನ ಮುಕ್ಕಾಲು ಅಂಶದ ನೀರನ್ನು ಸರಬರಾಯಿ ಮಾಡತಕ್ಕ ಕ್ಯಾಚ್‌ಮೆಂಟ್ ಏರಿಯಾ ನಮ್ಮ ಮೈಸೂರು ರಾಜ್ಯದಲ್ಲಿದೆಯೆಂದು ಹೇಳಿದ ಹಾಗಾಯಿತು; ಅಂದಮೇಲೆ ನಾವು ಈಗ ಈ ನದಿಯ ನೀರನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಂಡಿದ್ದೇವೆಂಬುದನ್ನು ಅಥವಾ ಉಪಯೋಗಿಸಲು ನಾವೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಇದೀಗ ಬಹಳ ಮುಖ್ಯವಾದ ಅಂಶವೆಂದು ನಾನು ತಿಳಿದುಕೊಂಡಿದ್ದೇನೆ. ಅಥವಾ ಈ ನದಿಯ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲು ನಮ್ಮ ಅಗ್ರೀಮೆಂಟಿನಲ್ಲೇನಾದರೂ ಅಡ್ಡಿ ಅಡಚಣೆಗಳಿವೆಯೇ ಎಂಬುದನ್ನೂ ಸಹ ಆಲೋಚನೆ ಮಾಡಬೇಕಾಗಿದೆ. ಈಗ ಮೈಸೂರಿಗೂ ಮತ್ತು ಮದ್ರಾಸಿಗೂ ಆಗಿರತಕ್ಕ ಒಪ್ಪಂದದ ಪ್ರಕಾರ ಈ ನೀರನ್ನುಪಯೋಗಿಸಲು ಏನಾದರೂ ಅಡ್ಡಿ ಆತಂಕಗಳಿವೆಯೇ ಎಂಬುದನ್ನೂ ಪರಿಶೀಲಿಸಬೇಕಾಗಿದೆ. ಇದೇ ವಿಚಾರದಲ್ಲಿ ನಾನೊಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೆನು. ಅದರೆ ಅದಕ್ಕಿನ್ನೂ ಉತ್ತರ ಬಂದಿಲ್ಲ. ಅದಕ್ಕೆ ಉತ್ತರ ಬಂದಿದ್ದರೆ ಬಹಳ ಚೆನ್ನಾಗಿತ್ತು, ಈ ವಿವರಗಳೆಲ್ಲಾ ಗೊತ್ತಾಗುತ್ತಿದ್ದವು. ಆದರೆ ನನ್ನ ತಿಳುವಳಿಕೆಯ ಪ್ರಕಾರ ಆ 1924ರ ಅಗ್ರಿಮೆಂಟಿನಲ್ಲಿ ಇಂಥವರು

ಇಷ್ಟಿಷ್ಟೇ ನೀರನ್ನುಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಯಾವ ಒಂದು ಷರತ್ತನ್ನೂ ಹಾಕಿರಲಿಕ್ಕಿಲ್ಲವೆಂದು ನಾನು ಭಾವಿಸಿದ್ದೇನೆ. ಅದರಲ್ಲಿರತಕ್ಕ ಒಂದು ಮುಖ್ಯವಾದ ಅಂಶವೆಂದರೆ: ಏನೀಗ ಆ ನಮ್ಮ ಕೆ. ಆರ್. ಸಾಗರಕ್ಕೆ 59 ಟಿ. ಎಂ. ಸಿ. ಎಫ್. ಟಿ. ನೀರನ್ನು ಹಿಡಿದಿಟ್ಟುಕೊಳ್ಳುವ ಕ್ಯಾಪ್ಯಾಸಿಟಿ ಇದೆಯೋ ಅವರಲ್ಲೇ ಇನ್ನೂ 45 ಟಿ. ಎಂ. ಸಿ. ಎಫ್. ಟಿ. ಯಷ್ಟು ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯಿದೆ, ಅಷ್ಟು ನೀರನ್ನು ಅದಕ್ಕೆ ಮತ್ತೆ ಸೇರಿಸಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಆ ಅಗ್ರಿಮೆಂಟಿನಲ್ಲಿ ಅವಕಾಶವಿದೆಯೆಂದು ನನಗನಿಸುತ್ತದೆ. ಆದರೆ ಈ ಷರತ್ತುಗಳೆಲ್ಲಾ ಕೇವಲ ಷೆಡ್ಯೂಲ್ಡ್ ರಿವರ್ಸ್‌ಗಳಿಗೆ ಮಾತ್ರ ಅನ್ಯಾಯವಾಗುತ್ತವೆ. ಇನ್ನು ನಾನ್-ಷೆಡ್ಯೂಲ್ಡ್ ನದಿಗಳೂ ಬೇರೆ ಇವೆ. ಈ ನಾನ್-ಷೆಡ್ಯೂಲ್ಡ್ ನದಿಗಳಿಗೆ ನಾವು ಯಾವಾಗಬೇಕಾದರೂ ಅಡ್ಡಗಟ್ಟೆಯನ್ನು ಹಾಕಬಹುದು. ಆ ಅಗ್ರಿಮೆಂಟಿನಲ್ಲಿ ಇನ್ನೂ ಒಂದು ಕಂಡಿಷನ್ ಏನಿದೆಯೆಂದರೆ— ಆ ಮದ್ರಾಸ್ ಸರ್ಕಾರದವರು ಅವರ ಪ್ರದೇಶದಲ್ಲಿ ಹರಿಯತಕ್ಕ ಭವಾನಿ, ಅಮರಾವತಿ ಮತ್ತು ನೊಯ್ಯಿ ಈ ನದಿಗಳಿಗೇನಾದರೂ ಅಣೆಕಟ್ಟುಗಳನ್ನು ಹಾಕಿಕೊಂಡ ಪಕ್ಷದಲ್ಲಿ ಅಲ್ಲಿ ಆ ನದಿಗಳ ನೀರಿನಿಂದ ಎಷ್ಟು ಎಕರೆ ಭೂಮಿಯನ್ನು ಸಾಗುವಳಿಗೆ ತರಲಾಗುತ್ತದೆಯೋ ಅಷ್ಟು ಭೂಮಿಯನ್ನು ನಾವು ಇಲ್ಲಿ ಈ ಕಾವೇರಿ ನದಿ ನೀರನ್ನು ಉಪಯೋಗಿಸಿ ವ್ಯವಸಾಯಕ್ಕೆ ತರಬಹುದೆಂದು ಆ ಅಗ್ರಿಮೆಂಟಿನಲ್ಲಿ ಅಡಕಮಾಡಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಮ್ಮ ಸರ್ಕಾರ ಇಲ್ಲಿಯವರಗೆ ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಪ್ರಯತ್ನ ಮಾಡಿದೆ ಎಂಬುದನ್ನು ನಾವೀಗ ಪರಿಶೀಲನೆಮಾಡಬೇಕಾಗಿದೆ. ಮೊನ್ನೆತಾನೆ ನಮ್ಮ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಉತ್ತರಕೊಡತಕ್ಕ ಕಾಲದಲ್ಲಿ ಕಾವೇರಿಗೆ ಸಂಬಂಧಪಟ್ಟಹಾಗೆ 18 ಯೋಜನೆಗಳಿವೆ ಎಂದು ಹೇಳಿದರು. ಅವುಗಳನ್ನು ಕಾರ್ಯಗತಮಾಡಬೇಕೆಂದು ನಮ್ಮ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುವುದಾಗಿ ತಿಳಿಸಿದರು. ಆದರೆ ಈ ಯೋಜನೆಗಳೆಲ್ಲಾ ಇಲ್ಲಿಯುವರೆಗೆ ಎಷ್ಟರಮಟ್ಟಿಗೆ ನಮಗೆ ಫಲವನ್ನು ಕೊಟ್ಟಿರುತ್ತವೆ, ಸರ್ಕಾರ ಈ ಕಾರ್ಯದಲ್ಲಿ ಎಷ್ಟರಮಟ್ಟಿಗೆ ಸಾಫಲ್ಯವನ್ನು ಗಳಿಸಿದೆ ಎಂಬುದನ್ನು ನಾವು ಅವಲೋಕನ ಮಾಡಿದರೆ ನಾವು ನಿರೀಕ್ಷಿಸಿದ್ದ ಮಟ್ಟದಲ್ಲಿ ಕಾರ್ಯಸಾಧನೆಯಾಗಿಲ್ಲ. ನಾವು ಈವರೆಗೆ ಇಲ್ಲಿ I ಲಕ್ಷ 10 ಸಾವಿರ ಎಕರೆ ಜಮೀನನ್ನು ಆಬಾದಿಗೆ ತರಬೇಕಾಗಿತ್ತು, ಅಷ್ಟನ್ನು ತರಲು ಸಾಧ್ಯವಾಗಿಲ್ಲ. ನಾವು ಇನ್ನೂ ನಮ್ಮ ಗುರಿಯನ್ನು ಮುಟ್ಟಲಿಕ್ಕಾಗಿಲ್ಲವೆಂಬುದನ್ನು ಮಾತ್ರ ತಿಳಿಸಲಿಚ್ಛಿಸುತ್ತೇನೆ. ಆದರೆ ಅದನ್ನು ನಾವೂ ಒಂದು ದಿನ ಮುಟ್ಟುತ್ತೇವೆಂದು ಹೇಳಬಹುದು. ಈಗ ನಾವು ಈ 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿಕೊಳ್ಳಲು ಈ ಷೆಡ್ಯೂಲ್ಡ್ ರಿವರ್‌ಗಳ ಬಗ್ಗೆ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಈ ಹಾರಂಗಿ, ಕಂಬದಕಡ, ಹೇಮಾವತಿ, ಕಪಿನಿ, ಸುವರ್ಣಾವತಿ ಇವುಗಳ ನೀರನ್ನುಪಯೋಗಿಸಲು ಯಾವ ಒಂದು ಕಾರ್ಯವನ್ನೂ ಪ್ರಾರಂಭಮಾಡತಕ್ಕ ಚಿಹ್ನೆಗಳು ಕಂಡುಬಂದಿಲ್ಲ. ಇದಕ್ಕೆ ಕಾರಣ 45 ಟಿ. ಎಂ. ಸಿ. ಎಫ್. ಟಿ. ನೀರನ್ನು ಯಾವ ಒಂದು ಹೊಸ ಯೋಜನೆಯನ್ನೂ ಕೈಗೊಳ್ಳದೆ ಈ ನೀರನ್ನು ಹಾಗೆ ಉಪಯೋಗ ಮಾಡಿಕೊಳ್ಳಬೇಕೆಂಬ ಆಲೋಚನೆಯನ್ನು ಮಾಡುತ್ತಿರುವಂತೆ ಸರ್ಕಾರ ಅಭಿಪ್ರಾಯಪಟ್ಟಿದೆಯೆಂದು ನಾನು ಕೇಳುತ್ತಿದ್ದೇನೆ. ಏಕೆಂದರೆ ಈಗ ಇನ್ನೂ ಆ ಇನ್‌ವೆಸ್ಟಿಗೇಷನ್ ಸ್ಟೇಜ್ ಮುಗಿದಿಲ್ಲ, ಮುಗಿದಿದೆಯೆಂದು ಹೇಳಿದರೂ ಅದಕ್ಕೆ ಕ್ಲಿಯರೆನ್ಸ್ ಸ್ಟೇಜ್ ಮುಟ್ಟುವವರೆಗೇನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸದ್ಯದಲ್ಲೇ ನಾವು ಇಲ್ಲಿ ಕೆಲಸವನ್ನು ಪ್ರಾರಂಭಮಾಡುತ್ತೇವೆಂದು ಹೇಳತಕ್ಕ ಸಂದರ್ಭವಿಲ್ಲ. ನಾವು ಇದನ್ನು ಪರಿಶೀಲನೆ ಮಾಡಿದರೆ— 24 ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗಿಸಲು ಬೇರೆ ಯೋಜನೆಗಳೇನನ್ನೂ ಮಾಡದೆ ಹಾಗೇ ನೀರನ್ನು ಯಾವ ಯಾವ ರೀತಿ ಉಪಯೋಗ ಮಾಡಬೇಕೆಂದು ಮಾಡಿದ್ದಾರೆಂಬುದನ್ನು ನಾವೀಗ ಪರಿಶೀಲನೆಮಾಡಬೇಕಾಗಿದೆ. ಆ ಹೇಮಾವತಿ ಪ್ರಾಜೆಕ್ಟಿನಲ್ಲೇ ಇನ್ನೂ 8 ಟಿ. ಎಂ. ಸಿ. ಎಫ್ ಟಿ. ನೀರನ್ನು ತಡೆಯತಕ್ಕ ಯೋಜನೆಯನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಂದೂ, ಹಾಗೇ ಆ ಕಂಬದಕಡದ ಪ್ರಾಜೆಕ್ಟನ್ನೂ ಸ್ವಲ್ಪ ಬದಲಾವಣೆ ಮಾಡಿ ಅಲ್ಲಿ ಇನ್ನೂ ಹೆಚ್ಚಿಗೆ ನೀರನ್ನು ತಡೆಯತಕ್ಕ ಆಲೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆಂದೂ ಕೇಳಿಬರುತ್ತಿದೆ.

ಇನ್ನು ನಾನ್-ಷೆಡ್ಯೂಲ್ಡ್ ವಿಚಾರ ಹೇಳುವುದಾರೆ ಸುಮಾರು 12 ನಾನ್-ಷೆಡ್ಯೂಲ್ಡ್ ನದಿಗಳು ಇವೆ. ಅದರಲ್ಲಿ ಒಟ್ಟು 32 ಟಿ.ಎಂ.ಸಿ. ಯಷ್ಟು ನೀರನ್ನು ಅಲ್ಲಿ ಪಿಕಪ್‌ಗಳನ್ನು ಹಾಕುವುದರಿಂದ ಉಪಯೋಗ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತೇನೆ ಆದರೆ ಈ 32 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸುವುದರ ಬಗ್ಗೆ ಆ ಕಾರ್ಯವನ್ನು ಕಾರ್ಯಗತ ಮಾಡಿ ನೀರನ್ನು ಉಪಯೋಗಿಸಬೇಕೆಂಬ ಯೋಚನೆ ಇವರಿಗೆ ಇಲ್ಲ. ಅದರಲ್ಲಿ ಬಹಳ ಮುಖ್ಯವಾಗಿ ಹಾರಂಗಿ ಎಂಬ ಯೋಜನೆ 12 ನಾನ್-ಷೆಡ್ಯೂಲ್ಡ್ ನದಿಗಳಲ್ಲಿ ವಾದವಿವಾದಕ್ಕೆ ಒಳಗಾಗಿರತಕ್ಕದ್ದು. ಅದನ್ನು ಯಾವ ಸ್ಥಳದಲ್ಲಿ ಕಟ್ಟಬೇಕು ಎಂಬುದನ್ನು ಯೋಚನೆ ಮಾಡಬೇಕು. ಈಗ ಸರ್ಕಾರದವರು ಒಪ್ಪಿಗೆ ಕೊಟ್ಟಿರುವ ಸ್ಥಳದಲ್ಲಿ ಅದನ್ನು ಕಟ್ಟುವುದು ಸರಿಯಾಗಿದೆ. ಇದನ್ನು ಬಹಳ ಹಿಂದೆಯೇ ಮಾಡ

(ಶ್ರೀ ಎಂ. ಸಿ. ಬಸಪ್ಪ)

ಬೇಕಾಗಿತ್ತು. ನಾನು ಸುಮ್ಮನೆ ಈ ವಿಷಯದಲ್ಲಿ ಭಾಷಣ ಮಾಡುವ ಗೋಜಿಗೆ ಹೋಗುವುದಿಲ್ಲ. ನಮಗೆ ಬೇಕಾಗಿರುವುದು ನೀರು. ಸರ್ಕಾರದವರು ಅದರ ಸಾಧ್ಯತೆ ಯೋಚನೆ ಮಾಡಿ ನಾವು ಕೈಗೊಂಡಿರುವ ತೀರ್ಮಾನ ಸಾಧುವಾಗಿದೆಯೇ ಹೆಚ್ಚಿಗೆ ಇದರಿಂದ ಉಪಯೋಗವಾಗುತ್ತದೆಯೇ ಎಂದು ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಈಗಿರುವು ದನ್ನು ಬದಲಾವಣೆ ಮಾಡಬೇಡಿ. ಹಿಂದುಮುಂದು ನೋಡದೆ ಆದಷ್ಟು ಜಾಗ್ರತೆ ಇದನ್ನು ಕಾರ್ಯಗತ ಮಾಡುವುದು ಮುಖ್ಯ. ಏನು ಒಂದು ಅಂಶವನ್ನು ಸರ್ಕಾರದ ಮುಂದೆ ಇಡುತ್ತೇವೋ ಅದು ವಾದ ವಿವಾದಕ್ಕೆ ಎಡೆಕೊಡುವುದಕ್ಕೆ ಅವಕಾಶವನ್ನು ಕೊಡಬಾರದು. ಆ ರೀತಿ ಅವಕಾಶ ಕೊಟ್ಟರೆ ಕೆಲವು ಜನಗಳಿಗೆ ತುಂಬಾ ತೊಂದರೆಯಾಗುತ್ತದೆ. ಆಗ ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ವನ್ನು ಕೊಡುತ್ತಾರೆ. ಆ ರೀತಿಯಾಗಿ ಒಬ್ಬೊಬ್ಬರ ಒಂದೊಂದು ಅಭಿಪ್ರಾಯವನ್ನು ಕೇಳಿದರೆ ನಮ್ಮ ತೀರ್ಮಾನಗಳು ಅದಕ್ಕೆ ತಕ್ಕಂತೆ ಬದಲಾವಣೆಯಾಗುತ್ತವೆ. ಇದರಲ್ಲಿ ಸಾಧನೆ ಮಾಡುವುದು ಯಾವುದೂ ಇಲ್ಲ. ಕಾಲವನ್ನು ಸುಮ್ಮನೆ ಕಳೆಯಬೇಕಾಗಿದೆ. ಈಗ ಏನು ತೀರ್ಮಾನ ತೆಗೆದು ಕೊಂಡಿದ್ದಾರೋ ಅದು ತಜ್ಞರ ಅಭಿಪ್ರಾಯದಂತೆ ಬಂದಿರುವುದರಿಂದ ಅದನ್ನು ತಪ್ಪು ಎಂದು ವಾದ ಮಾಡುವುದಕ್ಕೆ ಬದಲು ನಮಗೆ ಅದರಿಂದಾಗತಕ್ಕ ಉಪಯೋಗವನ್ನು ಪಡೆಯೋಣವೆಂಬ ದೃಷ್ಟಿಯಿಂದ ಈ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡುವುದು ಮುಖ್ಯವೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ಡ್ ನದಿಗಳಲ್ಲಿ 5 ಪ್ರಾಜೆಕ್ಟುಗಳನ್ನು ಮಾಡಬೇಕೆಂದು ಯೋಚನೆ ಮಾಡು ತ್ತಿದ್ದಾರೆ. ಇದರಲ್ಲಿ ಎಲ್ಲಾ ಪ್ರಾಜೆಕ್ಟುಗಳನ್ನು ಇನ್‌ವೆಸ್ಟಿಗೇಟ್ ಮಾಡಿ, ಅಂದಾಜನ್ನು ಸಂಪೂರ್ಣ ವಾಗಿ ಮಾಡಿ ಅದನ್ನು ಸರ್ಕಾರದ ಮುಂದೆ ಇಡತಕ್ಕದ್ದು ಸರಿ. ಸುವರ್ಣಾವತಿ ಪ್ರಾಜೆಕ್ಟು ಕಾವೇರಿ ದಂಡೆಯಲ್ಲಿ ಬಹಳ ಮುಖ್ಯವಾದುದಾಗಿದೆ. ಈ ಸುವರ್ಣಾವತಿ ಪ್ರಾಜೆಕ್ಟ್ ನಮ್ಮ ಚಾಮರಾಜ ನಗರ ಮತ್ತು ಯಳಂದೂರು ತಾಲ್ಲೂಕುಗಳಿಗೆ ಬಹಳ ಆಶ್ರಯವನ್ನು ಕೊಡುವುದಾಗಿದೆ. ಸುಮಾರು 12 ಸಾವಿರ ಎಕರೆಗಳಷ್ಟು ನೀರಾವರಿಯಾಗತಕ್ಕ ಪ್ರಾಜೆಕ್ಟು ಇದು. ಈ ಪ್ರಾಜೆಕ್ಟಿನಿಂದ ಉತ್ಪತ್ತಿ 1 ಕೋಟಿ 60 ಲಕ್ಷ ರೂಪಾಯಿಗಳು ಆಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ಸಿದ್ದಯ್ಯನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ಈ ವಿಷಯದಲ್ಲಿ ಆಗಲೇ ಸರ್ಕಾರ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತೇನೆಂದು ಅಪ್ಪಣೆ ಕೊಡಿಸಿದರು. ಆದರೆ ಇವತ್ತಿನವರೆಗೂ ಆ ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ಬಹುಶಃ ಯಾವ್ಯಾವ ಕೆಲಸಗಳನ್ನು ಕಾರ್ಯಗತ ಮಾಡುವ ಸ್ಥಿತಿಯಲ್ಲಿವೆ, ಯಾವ ಅಂದಾಜನ್ನು ಮಂಜೂರು ಮಾಡಿ ಪ್ರಯತ್ನ ಮಾಡಬಹುದು, ಅಂಥಾದ್ದನ್ನೆಲ್ಲಾ ಆದಷ್ಟು ಜಾಗ್ರತೆ ಪ್ರಯತ್ನ ಮಾಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಒಟ್ಟಿನಲ್ಲಿ ಸುವರ್ಣಾವತಿ ನದಿ ಯೋಜನೆ ಒಂದಕ್ಕೆ ಆದಷ್ಟು ಜಾಗ್ರತೆ ಸರ್ಕಾರದವರು ಪೂರ್ಣ ಗಮನ ಕೊಡಬೇಕೆಂದು, ಅದಕ್ಕೆ ತಕ್ಕ ಪ್ರಯತ್ನಗಳನ್ನು ಸಹ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಶಂಕೆ. ಈ ವಿಚಾರವನ್ನು ಒಂದಲ್ಲ ಎರಡುಸಾರಿ ಹೇಳಿದ್ದೇನೆ. ದೊಡ್ಡ ನೀರಾವರಿ ಯೋಜನೆಗೆ ಇವರು ಕೊಟ್ಟಿರುವ ಪ್ರೋತ್ಸಾಹ ಎಷ್ಟು ಎಟ್ಟಿನದು ಎಂಬುದು ಬಡ್ಜೆಟ್ ಅಂಶ ನೋಡಿ ಹೇಳುತ್ತೇನೆ. ಬಡ್ಜೆಟ್ ಭಾಷಣದಲ್ಲಿ ನಾನು ಭಾಗವಹಿಸಿದ್ದಾಗಲೂ ಇದೇ ಮಾತನ್ನು ಸೂಚನೆ ಮಾಡಿದ್ದೇನೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಬಾಬಿಗೆ ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡದೇ ಇರುವುದರಿಂದ ಅನೇಕ ಕೆಲಸಗಳು ನಡೆಯುತ್ತಾ ಇಲ್ಲ. 40 ಕೋಟಿ ರೂಪಾಯಿಗಳಲ್ಲಿ 19 ಕೋಟಿ ರೂಪಾಯಿ ಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ. ಇನ್ನು ಎರಡು ವರ್ಷಗಳಲ್ಲಿ 11 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡುವುದಾಗಿ ಇಟ್ಟಿದ್ದಾರೆ. ಇನ್ನುಳಿದ 10 ಕೋಟಿ ರೂಪಾಯಿಗಳನ್ನು 3ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಖರ್ಚು ಮಾಡಬೇಕೆಂದಿಟ್ಟುಕೊಂಡಿದ್ದಾರೆ. ಅದು ನಿಜ ವಾಗಿ ಲ್ಯಾಪ್ಸ್ ಆಗುವ ಪ್ರಸಂಗ ಬರುತ್ತದೆಂದು ನಾನು ಹೇಳುತ್ತೇನೆ. ಇನ್ನು ಈಗ ನಾವು ಕೃಷ್ಣಾ ನದಿಯ ನೀರನ್ನು ಉಪಯೋಗಿಸಬೇಕಾದರೆ, ಕಾವೇರಿ ನದಿಯ ನೀರನ್ನು ಉಪಯೋಗಿಸ ಬೇಕಾದರೆ ಇವತ್ತು ನಮ್ಮ ಮೈಸೂರಿಗೆ ಬಹಳವಾಗಿ ಹಣದ ಕೊರತೆ ಇದೆ. ಅದನ್ನು ಈಡೇರಿಸ ಬೇಕಾದರೆ ನಾನಾರೂಪದಲ್ಲಿ ನಾವು ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದಿಂದ ನಾವು ಹೆಚ್ಚಿಗೆ ಹಣ ಸಹಾಯವನ್ನು ಕೇಳಬೇಕಾಗಿದೆ. ನಮ್ಮ ಸಂಸ್ಥಾನದ ಮಟ್ಟದಲ್ಲಿ ಏನೇನು ರಿಸೋರ್ಸಸ್ ಮೂಲಕ ಒದಗಿಸಬಹುದೋ ಅದನ್ನು ತೆರಿಗೆಗಳ ಮೂಲಕ ವರಮಾನವನ್ನು ಹೆಚ್ಚು ಮಾಡಬೇಕು. ಈ ರೀತಿ ಹಣವನ್ನು ನೀರಾವರಿಗಾಗಿ ಹಣ ಒದಗಿಸಿ ಕೊಟ್ಟರೆ ಮಾತ್ರ ನಾವು ಏನೊಂದು ಗುರಿಯನ್ನು ಇಟ್ಟುಕೊಂಡಿದ್ದೇವೋ ಅದನ್ನು ಸಾಧಿಸಬಹುದು. ಈ ವರ್ಷ 3½ ಕೋಟಿ ಮುಂದಿನ ವರ್ಷ 5 ಕೋಟಿ ಹೀಗೆ ತೆರಿಗೆಗಳಿಂದ ಬರಬಹುದೆಂದು ಒಂದು ಪ್ರೋಗ್ರಾಂ ಹಾಕಿ

ಕೊಂಡಿದ್ದಾರೆ. ಖಂಡಿತವಾಗಿ ಇವರಿಗೆ ಅದನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಕೇಂದ್ರದಿಂದ ನಮಗೆ ಬಂದಿರುವ ಪ್ಲಾನ್ ಪ್ರಕಾರ ನಮ್ಮ ರಿಸೋರ್ಸಸ್ ಚೆನ್ನಾಗಿದೆಯೆಂದು ಆದರಿಂದಾಗಿ ನಮಗೆ ಕಡಿಮೆ ಹಣ ಸಹಾಯ ಮಾಡುತ್ತಾರೆಂದು ಹೇಳಿದ್ದಾರೆ. ನಾವು ಕಳೆದ ಪಂಚವಾರ್ಷಿಕ ಯೋಜನೆಗಳೊಳಗೆ ನಮ್ಮ ಸಾಧನೆಗಳೇನು, ಸಂಸ್ಥಾನ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಸಾಧಿಸಿದ್ದಾರೆ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ನಿರ್ದಿಷ್ಟವಾಗಿ ಕೇಳಿದ್ದಾರೆಯೋ, ಅವರು ಗುರಿಯನ್ನು ಮುಟ್ಟುವ ಸ್ಥಿತಿಯಲ್ಲಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಪ್ಲಾನಿಂಗ್ ಕಮಿಷನ್ನಿನವರು ಗಣನೆಗೆ ತೆಗೆದುಕೊಂಡೇ ಈ ರೀತಿಯಾಗಿ ಸಂಸ್ಥಾನ ಸರ್ಕಾರಗಳಿಗೆ ಹಣವನ್ನು ಒದಗಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ರೀತಿಯಾಗಿ ಇದೊಂದು ಅಂಶವನ್ನು ಗಣನೆಗೆ ಅವರು ತೆಗೆದುಕೊಂಡು ಹಣವನ್ನು ಎಲ್ಲಾ ಸರ್ಕಾರಗಳಿಗೆ ಹಂಚಿದರೆ ಮುಂದಿನ ವರ್ಷದಲ್ಲಿ ಇಷ್ಟುಕೂಡ ಪಂಚವಾರ್ಷಿಕ ಯೋಜನೆಯಲ್ಲಿ ದೊರೆಯುವುದು ಕಷ್ಟವಾಗುತ್ತದೆ. ಆದ್ದರಿಂದ 40 ಕೋಟಿ ರೂಪಾಯಿಗಳನ್ನು ಮುಂದಿನ ವರ್ಷದಲ್ಲಿಯೇ ಮುಗಿಸಬೇಕು. ಇನ್ನು 5—5½ ಕೋಟಿ ರೂಪಾಯಿಗಳನ್ನು ಮುಂದಿನ ವರ್ಷ ಸಪ್ಲಿಮೆಂಟರಿ ಗ್ರಾಂಟು ರೂಪವಾಗಿ ಬೇಕೆಂದು ಕೇಳಿದ್ದಾರೆ. ಈ ವರ್ಷ ಮುಕ್ತಾಯವಾಯಿತು. ಇನ್ನು 10 ಕೋಟಿ ರೂಪಾಯಿಗಳಷ್ಟನ್ನಾದರೂ ಕೂಡ ನೀರಾವರಿ ಯೋಜನೆಗಳಿಗಾಗಿ ಖರ್ಚು ಮಾಡುವುದಕ್ಕೆ ಒದಗಿಸಬೇಕೆಂದು ಮಾಡಿದರೆ ಆಗ ಕಾವೇರಿ ನದಿಯನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬಹುದು.

ಇನ್ನೊಂದು ವಿಚಾರ. ಕರಾರಿನ ವಿಚಾರ. ಈ ವಿಚಾರದಲ್ಲಿ ನಾವು ತಿಳಿದುಕೊಂಡಿರತಕ್ಕ ಅಂಶ ಎಷ್ಟರ ಮಟ್ಟಿಗೆ ನಿಜವೋ ಅಥವಾ ಸುಳ್ಳೋ ಎಂಬುದನ್ನು ನಾನು ತಿಳಿಯುವುದಕ್ಕಾಗುವುದಿಲ್ಲ. ಹಿಂದೆ ನಮ್ಮ ಮೈಸೂರು ಸಂಸ್ಥಾನ ಒಂದು ದೇಶೀಯ ಸಂಸ್ಥಾನವಾಗಿತ್ತು. ಆಗ ಮದ್ರಾಸು ಸಂಸ್ಥಾನ ಬ್ರಿಟಿಷರ ಆಡಳಿತದಲ್ಲಿತ್ತು. ಆ ಸರ್ಕಾರಕ್ಕೂ ದೇಶೀಯ ರಾಜರಿಗೂ ಒಂದು ಕರಾರು ಈ ಬಗ್ಗೆ ಆಗಿತ್ತು. ಮೈಸೂರಿಗೆ ಏನೇನು ಅನುಕೂಲತೆಗಳು ಬೇಕೋ ಅವೆಲ್ಲವನ್ನು ಅಡಕಮಾಡುವುದಾಗಿ ಅದರಲ್ಲಿ ಹೇಳಿದ್ದರು. ಆದ್ದರಿಂದ ನಮ್ಮ ನೀರಿನ ಹಕ್ಕು ಮದ್ರಾಸಿಗೆ ಎಷ್ಟಿದೆ, ಯಾವರೀತಿ ಹಂಚಿಕೆ ಮಾಡಬೇಕೆಂಬ ದೃಷ್ಟಿಯಾಗಿರಲಿಕ್ಕಿಲ್ಲವೆಂದು ನನಗೆ ಒಂದು ಶಂಕೆ ಇದೆ. ಎರಡನೆಯದಾಗಿ 1924ರಲ್ಲಿ ಈ ಬಗ್ಗೆ ಒಂದು ಕರಾರು ಆಯಿತು. 1956ರಲ್ಲಿ ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ಕೊಡಗಿನ ಪ್ರದೇಶ ಬಂದಿದೆ. ಹೆಚ್ಚಿನ ಬದಲಾವಣೆಗಳು ಆಗಿರತಕ್ಕ ಪರಿಸ್ಥಿತಿ ಇದರಲ್ಲಿ ಆಗಿಲ್ಲವೆಂದು ನಾನು ತಿಳಿಯುತ್ತೇನೆ. 1924ರಲ್ಲಿ ಏನೊಂದು ಕರಾರು ಮಾಡಿಕೊಂಡು ಇದ್ದೆವೋ ಅದರಂತೆಯೇ ನಡೆಯಬೇಕೆಂದು ಹೇಳುವುದು ಮದ್ರಾಸಿಗೆ ಸೂಕ್ತವಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆಂಧ್ರ ಮತ್ತು ಮದ್ರಾಸ್ ಪ್ರಾಂತಗಳಿಗೆ ನೀರಿನ ಅಲೋಕೇಷನ್ ಆಗಿರುವುದನ್ನು ನೋಡಿದರೆ, ನಮ್ಮ ನ್ಯಾಯವಾದ ಹಕ್ಕಿಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ಈ ವಿಷಯದಲ್ಲಿ ಪುನಃ ರೀ-ಅಲೋಕೇಟ್ ಮಾಡಿದ ಮೇಲೆ ಟೆಂಟೆಟಿವ್ ಆಗಿ 650 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗಿಸಿ ಎಂದು ಹೆಚ್ಚಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಪ್ರಾಂತ ಪುನರ್ವಿಂಗಡಣೆಯಾದ ಮೇಲೆ ದೇಶದಲ್ಲಿ ಎಷ್ಟೋ ಬದಲಾವಣೆಗಳಾಗಿವೆ. ಅಂದ ಮೇಲೆ ಈ ಕರಾರಿಗೆ ನಮ್ಮ ಸರ್ಕಾರದವರು ಎಷ್ಟರ ಮಟ್ಟಿಗೆ ಬೆಲೆ ಕೊಡಬೇಕು ಎನ್ನುವುದು ಬಹಳ ಜಟಿಲವಾದ ಪ್ರಶ್ನೆ. ಕೇವಲ ಅಸೆಂಬ್ಲಿಯಲ್ಲಿ ಸೂಚನೆ ಕೊಡುವುದರ ಮೂಲಕ ಪರಿಹಾರವಾಗುತ್ತದೆಂದು ನಾನಂತೂ ನಂಬಿಕೊಂಡಿಲ್ಲ. ಇದು ಮಾನ್ಯ ಮುಖ್ಯ ಮಂತ್ರಿಗಳ ಮುಂದೆ ಚರ್ಚೆಯಾಗಬೇಕಾದುದು ಮುಖ್ಯವಿತ್ತು. ಅದಕ್ಕಾಗಿ ಇದನ್ನು ಅವರ ಗಮನಕ್ಕೆ ತಂದೆನು. ಈಗಿನ ಭಾರಿ ನೀರಾವರಿ ಯೋಜನೆಗಳನ್ನು ಇಮ್ಮಡಿ ಮಾಡಬೇಕು, ಕನಿಷ್ಠ ಪಕ್ಷ ಮೂರರಷ್ಟಾದರೂ ಮಾಡಬೇಕು. ಕೇಂದ್ರದ ನೆರವೂ ಸಹ ಹೆಚ್ಚಾಗಿ ಬರಬೇಕು. ಈ betterment contribution ಎಂದು ಏನು ತೆರಿಗೆಯನ್ನು ವಸೂಲು ಮಾಡುತ್ತಾರೋ ಅವೆಲ್ಲವನ್ನೂ ಒಂದು ಸ್ಪೆಷಲ್ ಸ್ಟ್ಯಾಫ್ ಕ್ರಿಯೇಟ್ ಮಾಡಿ ವಸೂಲು ಮಾಡಬೇಕೆಂದು ನಾನು ಹೇಳುತ್ತೇನೆ. ಇದರಲ್ಲಿ ಏನೂ ದಂಡವಿಲ್ಲ, ದೋಷವಿಲ್ಲ, ನೀರಿನ ಪ್ರಯೋಜನವನ್ನು ಪಡೆದುಕೊಂಡು ಏನು ಜನ ಇದುವರೆಗೆ ತೆರಿಗೆಯನ್ನು ಕೊಟ್ಟಿಲ್ಲವೋ ಅವನ್ನೆಲ್ಲಾ ಕೂಡ ವಸೂಲು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

Mr. DEPUTY SPEAKER.—The House will now rise for half-an-hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair.]

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಈ ಒಪ್ಪಂದದ ವಿಚಾರವಾಗಿ ಹೇಳಬೇಕಾದುದನ್ನು ಹೇಳಿದ್ದೇನೆ. ಒಂದು ಅಂಶವನ್ನು ಮಾತ್ರ ಅನೇಕ ಸದಸ್ಯರು ವ್ಯಕ್ತಪಡಿಸಿರುವುದನ್ನು ನಾವು ವಿಚಾರ ಮಾಡಬೇಕಾದುದು ಅಗತ್ಯ. 1974ನೆಯ ಇಸವಿಯೊಳಗಾಗಿ ಒಂದು ವೇಳೆ ನಾವು ನೀರನ್ನು ಉಪಯೋಗ ಮಾಡವಿದ್ದರೆ ನಮ್ಮ ರಾಜ್ಯದ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದು ನಿಜವಾಗಿಯೂ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ನನ್ನ ವೈಯಕ್ತಿಕವಾದ ಅಭಿಪ್ರಾಯವನ್ನು ಹೇಳಿದ್ದೇನೆ. ಅದು ದೇಶೀಯ ಸಂಸ್ಥಾನಕ್ಕೂ ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದ ಒಂದು ಪ್ರಾಂತಕ್ಕೂ ಆದ ಒಂದು ಒಪ್ಪಂದ. ಆ ಒಪ್ಪಂದದ ಷರತ್ತುಗಳು ಈ ಹೊತ್ತು ಕೂಡ ನಮ್ಮನ್ನು ಬಂಧಿಸುತ್ತವೆ ಎನ್ನುವುದನ್ನು ಒಪ್ಪುವುದಕ್ಕಾಗುವುದಲ್ಲ. 1956ರಲ್ಲಿ ಪ್ರಾಂತಗಳ ಪುನರ್ವಿಂಗಡಣೆ ಆದಮೇಲೆ ಹೆಚ್ಚಿನ ಬದಲಾವಣೆಯಾಗಿವೆ. ಹೇಗೆಂದರೆ, ಮಳೆ ಬಹಳ ಕಡಮೆ ಬೀಳತಕ್ಕ ಮತ್ತು ಕಾವೇರಿ ಪಾತ್ರದಲ್ಲಿರುವ ಕೊಳ್ಳೇಗಾಲ ನಮ್ಮ ರಾಜ್ಯಕ್ಕೆ ಬಂದಿದೆ. ಮದರಾಸು ರಾಜ್ಯದಿಂದ ಇಲ್ಲಿಗೆ ಬಂದಿದೆ. ಇದನ್ನೆಲ್ಲ ನೋಡಿದರೆ 1924ನೆಯ ಇಸವಿಯ ಒಪ್ಪಂದ ನಮ್ಮ ರಾಜ್ಯದ ಮೇಲೆ ಬೈಂಡಿಂಗ್ ಇಲ್ಲವೆಂಬ ವಾದವನ್ನು ನಾನು ಅನುಮೋದಿಸುತ್ತೇನೆ. ಆದರೆ ಇದೇ ವಾದವನ್ನು ಮುಂದಿಟ್ಟುಕೊಂಡು ನಾವು ಯಾವಾಗಲಾದರೂ ಕಟ್ಟಬಹುದು, ಈ ನೀರನ್ನು ಯಾವಾಗಲಾದರೂ ಉಪಯೋಗ ಮಾಡುವುದಕ್ಕೆ ನಮಗೆ ಹಕ್ಕಿದೆ ಎಂದು ನಾವು ನಿಧಾನ ಮಾಡಿದರೆ ಅದರ ಪರಿಣಾಮವೇನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಶೇಕಡ 45ಕ್ಕಿಂತ ಹೆಚ್ಚು ಭಾಗವನ್ನು ಮದರಾಸು ರಾಜ್ಯದಲ್ಲಿ ನೀರಾವರಿ ಮಾಡಿಕೊಂಡಿದ್ದಾರೆ. ಭಾರಿ ಅನೇಕ ನೀರಾವರಿ ಯೋಜನೆಗಳನ್ನು ಮಾಡಿರುವುದಲ್ಲದೆ ಸಣ್ಣ ಸಣ್ಣ ಪಿಕಪ್‌ಗಳನ್ನೂ ಹಾಕಿಕೊಳ್ಳುತ್ತಿದ್ದಾರೆ. ಈಗ ಹಂಗಾಮಿಯಾಗಿ ನೀರನ್ನೊದಗಿಸುವ ವ್ಯವಸ್ಥೆಯ ಮೇಲೆ ಫಸಲು ಬೆಳೆಯುತ್ತಿದ್ದಾರೆ. ಹೀಗೆಯೇ ಖಾಯಂ ಆಗಿ ಉಪಯೋಗ ಮಾಡಿದರೆ, ಆ ರಾಜ್ಯಕ್ಕೂ ಮತ್ತು ಜನರಿಗೂ ಪ್ರಿಸ್ಕ್ರಿಪ್ಟಿವ್ ರೈಟ್ಸ್ ಬರುತ್ತದೆ. ನಾವೇ ಈ ಅಧಿಕಾರವನ್ನು ಅವರಿಗೆ ಕೊಟ್ಟಂತಾಗುತ್ತದೆ. ಮುಂದೆ ನಮ್ಮ ರಾಜ್ಯ ಆ ಒಪ್ಪಂದಕ್ಕೆ ಬದ್ಧವಾಗಿಲ್ಲವೆಂದಿಟ್ಟುಕೊಂಡರೂ ಕೂಡ ಅವರು ಅನೇಕ ವರ್ಷಗಳಿಂದ ಪ್ರತಿ ವರ್ಷವೂ ಅನುಭವ ಮಾಡತಕ್ಕ ಹಕ್ಕನ್ನು ಎತ್ತಿಹಾಕಬೇಕೆಂದರೆ ಕಷ್ಟ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆ. ನಾವು ಎಲ್ಲಿ ಹೋದರೂ ಬಹಳ ದಿವಸಗಳಿಂದ ಅವರು ಅನುಭವಿಸಿಕೊಂಡು ಬಂದಿದ್ದಾರೆ, ಅವರನ್ನು ಅಡ್ಡಿ ಮಾಡುವುದಕ್ಕಾಗುವುದಿಲ್ಲ, ಸುಮ್ಮನೆ ಇರಿ ಎಂದು ನಮಗೇ ಹೇಳುತ್ತಾರೆ. ಯಾರಿಗಾದರೂ ಅವೇ ನ್ಯಾಯವೆಂದು ಕಂಡುಬರುತ್ತದೆ. ಅಂಥ ಪರಿಸ್ಥಿತಿಗೆ ಅವಕಾಶ ಕೊಡದೆ ನಾವು ಯಾವ ರೀತಿ ಆಸಕ್ತಿಯನ್ನು ವಹಿಸಿ ಚರ್ಚೆ ಮಾಡುತ್ತಿದ್ದೇವೋ, ಅಂದಾಜು ಮಾಡುತ್ತಿದ್ದೇವೋ, ಆ ಅಂದಾಜುಗಳು ಮಂಜೂರಾಗಬೇಕೆಂದು ಉತ್ಸಾಹ ತೋರಿಸುತ್ತಿದ್ದೇವೋ, ಇದೇ ಉತ್ಸಾಹದಲ್ಲಿ, ವೇಗದಲ್ಲಿ ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಿದರೆ ನಮಗೆ ದೊರಕಬೇಕಾದ ನೀರಿನ ಸೌಲಭ್ಯ ದೊರಕುತ್ತದೆ. ಅವರಿಗಿಂತ ಮುಂದೆಯೇ ನಮ್ಮ ಹಕ್ಕನ್ನು ಸ್ಥಿರೀಕರಿಸುವುದರಿಂದ ನಮಗೆ ಮುಂದೆ ತೊಂದರೆಯಾಗುವುದಿಲ್ಲ. ಈ ಹೊತ್ತು ನಾವು ಮಾಡಬೇಕಾದ ಇನ್‌ವೆಸ್ಟಿಗೇಷನ್, ಮಂಜೂರಾತಿ ಹಾಗೂ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೂ, ಮುಗಿಸುವುದಕ್ಕೂ ಹಣಕಾಸು ಬೇಕು, ಸಿಬ್ಬಂದಿ ಬೇಕು. ಇದಕ್ಕೆ ತಕ್ಕ ಏರ್ಪಾಡು ಮಾಡುವುದಲ್ಲದೆ, ಯಾವ ಯಾವ ಯೋಜನೆಗಳನ್ನು ಕಾರ್ಯಗತ ಮಾಡಬೇಕೋ ಅದರಲ್ಲಿ ಹೆಚ್ಚಿನ ಆಸಕ್ತಿಯನ್ನು ಸರಕಾರ ವಹಿಸಬೇಕಾಗಿದೆ. ಹತ್ತು ವರ್ಷಗಳಲ್ಲಿ ಮಾಡುವುದನ್ನು ಐದೇ ವರ್ಷಗಳಲ್ಲಿ ಮಾಡಿ ಮುಗಿಸಬೇಕು. ಹೀಗೆ ಮಾಡಿದರೆ ನಾವು ಕಾವೇರಿ ನದಿಯ ನೀರಿನ ಪೂರ್ಣ ಉಪಯೋಗವನ್ನು ಪಡೆಯಬಹುದು ಈ ವಿಚಾರದಲ್ಲಿ ಸರಕಾರ ಎಲ್ಲಾ ಏರ್ಪಾಡು ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

[SRI S. M. GURADDI (Chairman) in the Chair.]

†ಶ್ರೀ ಟಿ. ಎನ್ ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಶ್ರೀಮಾನ್ ದೇವೇಗೌಡರು ತಂದಿರತಕ್ಕಂಥ ಈ ನಿರ್ಣಯ ಮೈಸೂರಿನ ಜನಕ್ಕೆ ಅತಿ ಪ್ರಾಮುಖ್ಯವಾದುದು. ಕಳೆದ 50 ವರ್ಷಗಳಿಂದ ನಮ್ಮ ಜನ ಅದರಲ್ಲಿಯೂ ನಮ್ಮ ನಾಗಮಂಗಲ ತಾಲ್ಲೂಕಿನ ಜನ, ತುಮಕೂರು ಜಿಲ್ಲೆಯ ಜನ ಬರಗಾಲ ಹಾವಳಿಗೆ ತುತ್ತಾಗಿರತಕ್ಕಂಥ ಜನ ಕಾವೇರಿ ನದಿ ನೀರು ನಮಗೆ ಕೊಡುತ್ತಾರೆ ನಾಳೆಯ ದಿವಸ ನಾವು ಉತ್ತಮ ಸ್ಥಿತಿಗೆ ಬರಬಹುದು ಎಂದು ಅಂದುಕೊಂಡು ಬಹುಕಾಲದಿಂದ ಚಾತಕ ಪಕ್ಷಿಯ ಹಾಗೆ ನೀರಿಗಾಗಿ ಕಾದುಕೊಂಡು ಕುಳಿತಿದ್ದಾರೆಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ನಿಮಗೆಲ್ಲರಿಗೂ ಗೊತ್ತಿರುವ ಹಾಗೆ 35 ವರ್ಷಗಳ ಹಿಂದೆ ಒಂದು ಯೋಜನೆ

ಮಾಡಿದ್ದರು. ಹೇಮಾವತಿ ನದಿಗೆ ಒಂದು ಅಣೆಕಟ್ಟು ಕಟ್ಟಿ ಅಲ್ಲಿಂದ ನೀರನ್ನು ಚನ್ನರಾಯಪಟ್ಟಣ ನೆಲಮಂಗಲ, ತಿಪಟೂರುವರೆಗೆ ತರತಕ್ಕ ಏರ್ಪಾಡು ಇದ್ದಿತು ಎಂದು ನಾವು ಕೇಳಿದ್ದೆವು. ಈ ಹಿಂದೆ ಇರತಕ್ಕಂಥ ಸರಕಾರ ಒಬ್ಬ ರಿಟೈರ್ಡ್ ಚೀಫ್ ಎಂಜಿನಿಯರ್ ಅವರನ್ನು ನೇಮಕ ಮಾಡಿ ಈ ಯೋಜನೆ ಯಾವ ರೀತಿ ಮಾಡಿಸಬೇಕು ಎಂಬುದಕ್ಕೆ ಪ್ಲಾನ್ ಎಷ್ಟಿಮೇಟು ಮಾಡಿಸಿದ್ದರು. ಅವರು ಒಂದು ರಿಪೋರ್ಟ್ ಸಹ ಕೊಟ್ಟಿದ್ದರು. ಆದರೆ ಆ ರಿಪೋರ್ಟು ಏನಾಯಿತೋ ಗೊತ್ತಿಲ್ಲ. ಈ ಯೋಜನೆ ಕೆಲಸ ಸರಕಾರ ಏಕೆ ಕೈಕೊಳ್ಳಲಿಲ್ಲವೋ ನಮಗೆ ಗೊತ್ತಾಗುತ್ತಾ ಇಲ್ಲ. ಸುಮ್ಮನೆ ಇರುವುದರ ಬದಲು ಈ ಪ್ರಾಜೆಕ್ಟು ಆಗುತ್ತದೆ ಇಷ್ಟು ದಿವಸಗಳಲ್ಲಿ ನೀರು ಕೊಡುತ್ತೇವೆ ಇಂಥಿಂಥ ಪ್ರದೇಶದಲ್ಲಿ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಮೊದಲೇ ಜನಕ್ಕೆ ತಿಳಿಸತಕ್ಕದ್ದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಸುಮ್ಮನೆ ನೀರು ಬರುತ್ತದೆ, ನೀರು ಬರುತ್ತದೆ ಎಂದು ಹೇಳಿದರೆ ಜನ ಎಷ್ಟು ದಿನ ಕಾದು ನೋಡಬೇಕು ? ಒಂದು ವೇಳೆ ನೀರು ಬಾರದೇ ಹೋದರೆ ಜೀವನ ಮಾಡುವುದಕ್ಕೆ ಬೇರೆ ಮಾರ್ಗ ಕಲ್ಪಿಸಿಕೊಳ್ಳಬೇಕಾಗುತ್ತದೆ. ರೈತನಿಗೆ ಮೊದಲೇ ತಿಳುವಳಿಕೆ ಕೊಡುವುದು ಒಳ್ಳೆಯದು. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ನಮ್ಮಲ್ಲಿಯ ಜನ ಬಹುಮಟ್ಟಿಗೆ ಹೇಮಾವತಿ ಗೊರೂರು ಅಣೆಕಟ್ಟು ಕಟ್ಟಿ ನೀರು ಬರುತ್ತದೆ, ಜನರ ಬಡತನ ಹೋಗುತ್ತದೆ ಎಂದು ನಿಜವಾಗಿಯೂ ಜನ ನಂಬಿಕೊಂಡಿದ್ದಾರೆ. ಹೀಗೆ ಎಷ್ಟು ದಿನ ನಂಬಿಕೊಂಡು ಕೂತಿರುವುದು ಅರ್ಥವಾಗುವುದಿಲ್ಲ. ಮೊದಲನೇ ಹಂತದಲ್ಲಿ ಎಷ್ಟು ಕೆಲಸವಾಯಿತು, ಎರಡನೇ ಹಂತದಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆದಿದೆ, ನೀರು ಎಷ್ಟು ಶೇಖರಣೆಯಾಗುವುದು, ಎಷ್ಟು ಪ್ರದೇಶಕ್ಕೆ ನೀರು ಒದಗಿಸಿ ನೀರಾವರಿ ಮಾಡಲಾಗುವುದು ಎಂಬುದನ್ನು ಮೊದಲು ತಿಳಿಸತಕ್ಕದ್ದು ಒಳ್ಳೆಯದು. ಮೊನ್ನೆ ನಾನು ಈ ಮಾನ್ಯ ಸಭೆಯಲ್ಲಿ ಮಾತನಾಡುತ್ತಾ ಒಂದು ಮಾತು ಹೇಳಿದೆನು. ಹಳೇ ಮೈಸೂರು ಪ್ರದೇಶವನ್ನು ಸರಕಾರ ಕಡೆಗಣ್ಣಿನಿಂದ ನೋಡುತ್ತಿದ್ದಾರೆ ಆದುದರಿಂದ ಈ ದೇಶ ಎರಡು ಭಾಗ ಮಾಡಬೇಕೆಂದು ಹೇಳಿದೆನು. ಅದನ್ನು ನಮ್ಮ ಹಿತದೃಷ್ಟಿಯಿಂದ ಮಾಡಬೇಕಾಗಿದೆ ಎಂದು ನಾನು ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇನ್ನೊಂದು ವಿಷಯ ಈ ಸಭೆಯ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ವಿಜಾಪುರ ಜಿಲ್ಲೆ ಬರಗಾಲದ ತೌರೂರು ಆಗಿದೆ ಎಂದು ಹೇಳಿದರು. ಅದು ನಿಜ. ನಾನೂ ಸಹ ಅದನ್ನು ಒಪ್ಪುತ್ತೇನೆ. ಕೃಷ್ಣಾ ನದಿಗೆ ಅಣೆಕಟ್ಟನ್ನು ಆಲಮಟ್ಟಿಯಲ್ಲಿ ಮೊದಲು ಕಟ್ಟಬೇಕೋ ನಾರಾಯಣಪುರದಲ್ಲಿ ಕಟ್ಟಬೇಕೋ ಎಂಬ ವಾದ ಬಂದಿದೆ. ನೀರು ಕೊಡುವುದಕ್ಕೆ ಎರಡೂ ಸ್ಥಳಗಳಲ್ಲಿ ಅಣೆಕಟ್ಟು ಕಟ್ಟಬೇಕು ಎಂದು ಹೇಳತಕ್ಕಂಥ ಸರಕಾರ ಹಳೇ ಮೈಸೂರಿನ ಭಾಗಕ್ಕೆ ಏನು ಮಾಡಿದ್ದಾರೆ? ಒಂದೇ ಪ್ರಾಂತದಲ್ಲಿರತಕ್ಕಂಥ ಜನರಲ್ಲಿ ವಿಜಾಪುರದಲ್ಲಿ ಬೇರೆ ರೀತಿಯ ಬಡತನ ಇದೆಯೇ ? ಹಳೇ ಮೈಸೂರಿನಲ್ಲಿ ಇರತಕ್ಕಂಥವರಿಗೆ ಬೇರೆ ಬಡತನ ಬಂದಿದೆಯೇ ? ಎಲ್ಲರ ಬಡತನ ಒಂದೇ ಅಲ್ಲವೇ? ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಇಂಥ ಯೋಜನೆ ಕೈಕೊಳ್ಳುತ್ತೀದ್ದೀರಿ. ಅದನ್ನು ತೆಗೆದುಕೊಳ್ಳಲಿ, ಅದಕ್ಕೆ ಒಪ್ಪಿಗೆ ಕೊಡುತ್ತಾರೆ. ಆದರೆ ಮೊದಲನೇ, ಎರಡನೇ ಮೂರನೇ ಪಂಚವಾರ್ಷಿಕ ಯೋಜನೆಗಳಾಗಿದ್ದರೂ ಕೂಡ ಈ ಅವಧಿಯಲ್ಲಿ 35 ಕೋಟಿ ರೂಪಾಯಿ ವೆಚ್ಚದಲ್ಲಿ ಕಾವೇರಿ ನದಿ ನೀರು ತರುವುದಕ್ಕೆ ವೆಚ್ಚ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಕೆಲಸ ಪ್ರಾರಂಭ ಮಾಡಿಲ್ಲ. ಈ ರೀತಿ ಮೀನ ಮೇಷ ಏತಕ್ಕೆ ಮಾಡುತ್ತಾರೆ ? ನಾನು ಸರಕಾರಕ್ಕೆ ಒಂದು ಪ್ರಶ್ನೆ ಕೇಳುತ್ತೇನೆ. ಮದ್ರಾಸ ಸರಕಾರಕ್ಕೂ ನಮಗೂ ಆದಂಥ ಕಾವೇರಿ ನೀರು ಹಂಚಿಕೆಯ ಬಗ್ಗೆ ಮಾಡಿರುವ ಕೌಲು 1974ನೇ ಇಸವಿಗೆ ಕೊನೆಯಾಗುತ್ತದೆ. ಅದಕ್ಕೆ ಭಯ ಪಡಬೇಕಾಗಿಲ್ಲ. ಇದರ ಬಗ್ಗೆ ಪಂಚಾಯತಿ ಮಾಡಿ ಈ ಅವಧಿಯನ್ನು ಇನ್ನೂ ಸ್ವಲ್ಪ ಕಾಲ ಅದನ್ನು ಮುಂದುವರಿಸಿಕೊಂಡು ಹೋಗಬಹುದು. ಮದ್ರಾಸ್ ರಾಜ್ಯದ ಜನ ಬಹಳ ಚಾಣಾಕ್ಷರಾದವರು ಹಿಂದಿನ ಠರಾವು ಮುಗಿಯುವುದನ್ನು ಕಾಯ್ದುಕೊಂಡು ಕೂತಿದ್ದಾರೆ. ನಮಗೆ ಮುಂದೆ ನೀರು ದೊರೆಯುವ ಬಗ್ಗೆ ಬಹಳ ಸಂಶಯವಿದೆ. ಆದುದರಿಂದ ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹೇಮಾವತಿ ಯೋಜನೆಯಲ್ಲಿ ಮೊದಲನೇ ಸ್ಟೇಜ ಮತ್ತು ಎರಡನೇ ಸ್ಟೇಜನಲ್ಲಿ ಪ್ರದೇಶ ಮುಳುಗಡೆಯಾದ ನಂತರ ನೀರು ಪಡೆಯತಕ್ಕಂಥ ಪ್ರದೇಶಕ್ಕೂ ಮೂರನೇ ಸ್ಟೇಜನಲ್ಲಿ ಕೊನೆಗೆ ನೀರು ಕೊಡುವ ಪ್ರದೇಶಕ್ಕೂ ಅಷ್ಟು ಅಂತರವಿಲ್ಲ ಎಂದು ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದ್ದಾರೆ. ಎರಡನೇ ಸ್ಟೇಜಕ್ಕೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದನ್ನು ಟೆಕ್ನಿಕಲ್ ತಾಂತ್ರಿಕ ಜ್ಞಾನವುಳ್ಳವರು ಯೋಚನೆ ಮಾಡತಕ್ಕದ್ದು. ಆದರೆ ನಮಗೆ ಮುಖ್ಯವಾದದ್ದು ಅಂದರೆ ನಿನ್ನೆ ಮೊನ್ನೆ ಈ ಸಭೆಯಲ್ಲಿ ಮಾತನಾಡುತ್ತಾ ಮಾನ್ಯ ಮಂತ್ರಿಗಳು ಒಂದು ಮಾತು ಹೇಳಿದರು. ಹೇಮಾವತಿ ಯೋಜನೆಯಿಂದ ನೆಲಮಂಗಲದವರೆಗೆ ನೀರು ಬರುತ್ತದೆ ಎಂದು ಮಾತನಾಡಿದ್ದಾರೆ. ನೀರು ಬರುತ್ತದೆ ಎಂದು ಇಷ್ಟು ಜನ ನಂಬಿಕೊಂಡಿದ್ದಾರೆ. ಸಿಬ್ಬಂದಿ ಇಟ್ಟುಕೊಂಡು ಇಲಾಖೆ ಕೆಲಸ ಮಾಡುತ್ತಿದೆ. ಇಂಥ ಯೋಜನೆಯಿಂದ ಇಷ್ಟೇ ನೀರು ಶೇಖರಣೆಯಾಗುತ್ತದೆ, ಇಷ್ಟೇ

(ಶ್ರೀ ಟಿ. ಎನ್. ಮಾದಪ್ಪಗೌಡ)

ಪ್ರದೇಶಕ್ಕೆ ನೀರು ಕೊಡಲು ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಅವರಿಗೆ ಏನು ಕಷ್ಟ ಇದೆ? ಆದಷ್ಟು ಬೇಗ ಎಲ್ಲೆಲ್ಲಿ ಯಾವ ಯಾವ ಪ್ರಾಜೆಕ್ಟುಗಳು ಇವೆಯೋ ಅವುಗಳನ್ನು 1974ನೇ ಇಸವಿ ಯೊಳಗಾಗಿ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕು, ಹಣ ಖರ್ಚು ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಷ್ಟು ಪ್ರದೇಶಕ್ಕೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದಕ್ಕೆ ವಿವರಣೆ ಈಗಲೇ ಕೊಡಬೇಕು. ಇದಕ್ಕೆ ಬೇಕಾಗುವ ಎಲ್ಲಾ ಏರ್ಪಾಡು ಮಾಡಬೇಕಾದುದು ಅಗತ್ಯ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟ ಪಡುತ್ತೇನೆ ಎಗಚಿ ಹೊಳೆ ವೇದಾವತಿ ಹೊಳೆ ನೀರು ಉಪಯೋಗಿ ಸುವುದಕ್ಕೆ ಏರ್ಪಾಡು ಮಾಡಲು ಸರ್ವೆ ನಡೆಯುತ್ತಿದೆ ಎಂಬು ಈ ಸಭೆಯಲ್ಲಿ ಹೇಳಿದ ಅಭಿಪ್ರಾಯ ನಾವು ಕೇಳಿದ್ದೇವೆ. ಎಗಚಿ ಮತ್ತು ಹೇಮಾವತಿ ನದಿ ಯೋಜನೆಯ ಬಗ್ಗೆ ಜನರಿಗೆ ಇನ್ನೂ ಆಶೆ ಇದೆ. ಈ ಪ್ರಾಂತದಲ್ಲಿ ನೀರು ಬಂದು ರೈತರಿಗೆ ಅನುಕೂಲವಾಗುತ್ತದೆ. ಆದರೆ ಈ ನದಿಗೆ ಅಡ್ಡ ಕಟ್ಟೆ ಹಾಕಿ ನೀರು ಬೇರೆ ಕಡೆ ತಿರುಗಿಸಿದರೆ ಜನರ ಆಶೆ ನಿರಾಶೆಯಾಗುವುದಿಲ್ಲವೇ? ಆದುದರಿಂದ ಇದನ್ನು ಬಹಳ ಆಳವಾಗಿ ಯೋಚನೆ ಮಾಡಬೇಕಾದುದು ಸೂಕ್ತ. ಹಿಂದಕ್ಕೆ ಕೃಷ್ಣರಾಜಸಾಗರ ಒಮ್ಮೆ ಒಣಗಿ ಹೋಗಿತ್ತು. ಮಳೆ ಸಕಾಲದಲ್ಲಿ ಸರಿಯಾಗಿ ಬರುವುದಿಲ್ಲ. ಇತ್ತೀಚೆಗೆ ಬರಬರುತ್ತಾ ಮಳೆ ಕಡಿಮೆಯಾಗುತ್ತಾ ಇದೆ. ಆದುದರಿಂದ ಈ ಕಾವೇರಿ ನದಿ ಯೋಜನೆಯಿಂದ ದೊರೆಯುವ ನೀರಿನ ಮೇಲೆ ಜನರು ನಂಬಿಕೊಂಡಿದ್ದಾರೆ. ಆದುದರಿಂದ ನಮಗೆ ಬರತಕ್ಕಂಥ ನೀರನ್ನು ಬೇರೆ ಕಡೆ ತಿರುಗಿಸುವುದು ಸುತರಾಂ ಒಳ್ಳೆಯದಲ್ಲ. ನಮಗೆ ನೀರು ಬಂದರೆ ನಮ್ಮ ಮಕ್ಕಳು ಅನ್ನ ಕಂಡಾರು ಎಂಬ ಆಶೆ ಇದೆ. ನಮಗೆ ಹಾಗೆಯೇ ಬೇರೆಯವರೂ ಇದೇ ರೀತಿ ಆಶೆ ಇಟ್ಟುಕೊಂಡಿರುತ್ತಾರೆ. ಆದರೆ ಒಂದು ಭಾಗಕ್ಕೆ ಅನುಕೂಲ ಮಾಡಿ ಕೊಡುವಾಗ್ಗೆ ಇನ್ನೊಂದು ಭಾಗಕ್ಕೆ ತೊಂದರೆಯಾಗುವ ಪರಿಸ್ಥಿತಿ ಸರಕಾರ ದಯವಿಟ್ಟು ತರಬಾರದು ಎಂದು ಹೇಳಲು ಇಷ್ಟಪಡುತ್ತೇನೆ.

ಇನ್ನೊಂದು ಸಣ್ಣ ವಿಚಾರ. ಕಾವೇರಿ ಉಪನದಿಯ ಪ್ರದೇಶದಲ್ಲಿ ನಾನು ಇದ್ದೇನೆ. ಈ ನದಿಯ ವಿಚಾರದಲ್ಲಿ ಒಂದು ಸರಕಾರಿ ಆರ್ಡರ್ ಆಗಿದೆ ಎಂದು ಕೇಳಿದ್ದೇನೆ. ಈ ಕೆಲಸ ಅಷ್ಟಕ್ಕೆ ನಿಲ್ಲಿಸಬೇಕು ಎಂದು ಸರಕಾರ ಅಭಿಪ್ರಾಯ ಪಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಆಜ್ಞೆ ಹೊರಡಿಸಿ ಕಳಿಸಿದ್ದಾರೆಂದು ತಿಳಿದು ಬಂದಿದೆ. ಇದು ಹೀಗೆ ಆದರೆ ಬಹಳ ಅನ್ಯಾಯವಾಗುತ್ತದೆ.

ಆದರಿಂದ ನಮಗೆ ಯಾವ ರೀತಿಯಿಂದಲೂ ಅನ್ಯಾಯವಾಗದಂತೆ ಸರ್ಕಾರದವರು ನೋಡಿ ಕೊಳ್ಳಬೇಕು. ಅದರಲ್ಲಿ ಹೇಮಾವತಿ ಒಂದೇ ಅಲ್ಲ. ಲಕ್ಷ್ಮಣತೀರ್ಥ ಲೋಕಪಾವನಿ, ಸುವರ್ಣಾವತಿ ಈ ಎಲ್ಲಾ ಯೋಜನೆಗಳನ್ನೂ 1974ನೇ ಇಸವಿಯ ಒಳಗೇ ಕಾರ್ಯಗತ ಮಾಡಬೇಕು. ಈಗ ಕೃಷ್ಣಾ ಯೋಜನೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರೋ ಅಷ್ಟೇ ಪ್ರಾಮುಖ್ಯತೆಯನ್ನು ಈ ಯೋಜನೆಗಳಿಗೂ ಕೊಡಬೇಕು. ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಎಲ್ಲಿಂದಲಾದರೂ ಹಣವನ್ನು ತರುತ್ತೇವೆ ಆ ಕೆಲಸಗಳನ್ನು ಮಾಡುತ್ತೇವೆಂದು ಹೇಗೆ ಧೈರ್ಯವಾಗಿ ಹೇಳುತ್ತೀರೋ ಹಾಗೆಯೇ ಈ ಕಾವೇರಿ ಬೇಸಿನ್ನಿನ ಯೋಜನೆಗಳನ್ನೂ ಕಾರ್ಯಗತ ಮಾಡಿ. ಈ ಭಾಗದ ಜನಗಳನ್ನು ನಿಕೃಷ್ಟವಾಗಿ ಕಾಣ ಬೇಡಿ. ಇದೂ ಕೂಡ ಅಷ್ಟೇ ಪ್ರಾಮುಖ್ಯವಾದದ್ದು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ನನ್ನ ಮಾನ್ಯ ಸ್ನೇಹಿತರು ನೀರಾವರಿ ಸೌಲಭ್ಯವನ್ನು ಎಷ್ಟರ ಮಟ್ಟಿಗೆ ಒದಗಿಸಬೇಕೆಂಬ ವಿಚಾರದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಮ್ಮ ದೇಶದ ರೈತರಿಗೆ ನೀರಾವರಿ ಬಾವಿಗಳನ್ನು ಮತ್ತು ಬೋರ್‌ವೆಲ್‌ಗಳನ್ನು ಹೆಚ್ಚು ಹೆಚ್ಚಾಗಿ ತೋಡಿಸಿ ಕೊಟ್ಟು ಅವರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕು. ಬೇರೆ ಯಾವ ವಿಧವಾದ ನೀರಾವರಿ ಸೌಲಭ್ಯವೂ ಇಲ್ಲದೆ ಬರೀ ಬಾವಿಗಳನ್ನೇ ನಂಬಿಕೊಂಡಿರತಕ್ಕ ರೈತರಿಗೆ ಆದಷ್ಟು ಜಾಗ್ರತೆ ಬಾವಿಗಳನ್ನು ತೋಡಿಸುವುದಕ್ಕೆ ಸಹಾಯ ಮಾಡಿ ಅವರಿಗೆ ಇರತಕ್ಕಂಥ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕು ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಈ ನಿರ್ಣಯ ಬಹಳ ಸ್ವಾಗತಾರ್ಹವಾಗಿದೆ. ಈ ನಿರ್ಣಯದಲ್ಲಿ ಕಂಡಹಾಗೆ ಶ್ರೀಮಾನ್ ದೇವೇ ಗೌಡರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಾವೇರಿ ನೀರಿನಿಂದ ದೊರಕುವ ಸಾಧನ ಸಂಪತ್ತುಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವಂತೆಯೂ, ಈ ಬಗ್ಗೆ ಅವಶ್ಯಕ ಯೋಜನೆಗಳನ್ನೆಲ್ಲಾ ಕಾರ್ಯಗತ ಗೊಳಿಸಲು ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಮತ್ತು ಅದನ್ನು ಎಷ್ಟರಮಟ್ಟಿಗೆ ಉಪಯೋಗಿಸಬೇಕೋ ಅಷ್ಟು ನೀರನ್ನೂ ಸಂಪೂರ್ಣವಾಗಿ ನಿಗದಿಯಾದ ಕಾಲದಲ್ಲಿ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿ ಸರ್ಕಾರವನ್ನು ಒತ್ತಾಯ ಮಾಡಬೇಕು ಎಂದು ಹೇಳಿ ಸೂಚಿಸಿದ್ದಾರೆ. ಈ ಕಾವೇರಿ ನದಿಯು ನಮಗೆ ಅತ್ಯಂತ ಪವಿತ್ರವಾದ ನದಿಯೂ ಹೌದು.

ಅಷ್ಟೇ ಜೀವನಾಧಾರವಾದ ನದಿ. ಮೈಸೂರಿನ ಅನೇಕ ಜಿಲ್ಲೆಗಳನ್ನು ಉದ್ಧಾರ ಮಾಡತಕ್ಕ ನದಿ ಹಾಗೆಂದು ಹೇಳಿದರೆ ಅದೇನು ಅತಿಶಯೋಕ್ತಿಯಾಗಲಾರದು. ಈ ಕಾವೇರಿ ನದಿಯು ಮೈಸೂರಿಗೆ ತಾಯಿ ಇದ್ದ ಹಾಗೆ. ಆದ್ದರಿಂದ ಮೈಸೂರಿನ ಮಕ್ಕಳು ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವ ಆಶೆ ನಮ್ಮೆಲ್ಲರಿಗೂ ಇದೆ. ಈ ಒಂದು ದೃಷ್ಟಿಯಿಂದ ಕಾವೇರಿ ನದಿಯ ನೀರನ್ನು ನಮಗೆ ಎಷ್ಟು ಬೇಕೋ ಅಷ್ಟೆಲ್ಲಾ ಒಂದು ತೊಟ್ಟೂ ಕೂಡ ವ್ಯರ್ಥವಾಗದ ಹಾಗೆ ಉಪಯೋಗಿಸಿಕೊಳ್ಳಬೇಕು. ಒಂದು ವೇಳೆ ಆ ನೀರನ್ನು ಸಕಾಲದಲ್ಲಿ ಉಪಯೋಗಿಸಿಕೊಳ್ಳದೇ ಹೋದರೆ ನಮಗೆ ಕೆಟ್ಟದಾದೀತು ತೊಂದರೆಯಾದೀತು, ಮೈಸೂರಿಗೆ ಅಪಕಾರವಾದೀತೇನೋ ಎನ್ನು ಭಾವನೆಯಿಂದ ಈ ಮಾನ್ಯ ಸಭೆಯ ಮುಂದೆ ಈ ನಿರ್ಣಯವನ್ನು ಒತ್ತಿ ಒತ್ತಿ ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಯಾವಾಗ ಬೇಕಾದರೂ ಈ ನೀರನ್ನು ಉಪಯೋಗಿಸಿಕೊಳ್ಳಬಹುದು, ಕಾವೇರಿ ನಮ್ಮ ದೇಶದಲ್ಲಿ ಹುಟ್ಟಿ ಹರಿಯುತ್ತದೆ, ಕಾವೇರಿ ನಮಗೋಸ್ಕರ ಇದೆ ಎನ್ನುವ ಮನೋಭಾವನೆಯಿಂದ ಇದನ್ನು ಅಸಡ್ಡೆ ಮಾಡಿದರೆ ಅದರಿಂದ ನಮಗೆ ತೊಂದರೆಯಾಗುತ್ತದೆ ಎನ್ನುವ ಭಾವನೆಯಿಂದ ಕೂಡ ಅನೇಕ ಮಾನ್ಯ ಸದಸ್ಯರು ಊಹೆ ಮಾಡುತ್ತಾರೆ. ಈ ಊಹೆಯಿಂದ ತೊಂದರೆಯೇನು ಇಲ್ಲ ಎಂದು ಕೂಡ ಮನಸ್ಸಿನಲ್ಲಿ ತೋರುತ್ತದೆ. ಏತಕ್ಕೆಂದರೆ ನಮಗೆ ಆವಶ್ಯಕವಾಗಿ ಬೇಕಾಗಿರತಕ್ಕ ನೀರನ್ನು ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟನ್ನು ಉಪಯೋಗಿಸಿಕೊಳ್ಳದೆ ಹೋದರೆ ನಮ್ಮ ದಾರಿದ್ರ್ಯ ನೀಗುವುದಿಲ್ಲ. ನೆರೆಹೊರೆಯ ಪ್ರಾಂತದಲ್ಲಿ ನೀರಿನ ಸೌಕರ್ಯವನ್ನು ಉಪಯೋಗಿಸಿಕೊಂಡು ಜನಗಳು ಅಚ್ಚುಕಟ್ಟಾಗಿ ಬಾಳುತ್ತಿದ್ದಾರೆ. ಅದನ್ನು ನೋಡಿದರೆ ನಾವು ಕಿರುಕುಳಾವಸ್ಥೆಯಲ್ಲಿ ಬಾಳಬೇಕಾದ ಸಂದರ್ಭ ಒದಗುತ್ತನೆಯೋ ಏನೋ ಎಂದು ನಮಗೆ ಭಯವಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಮೈಸೂರು ದೇಶ ನೀರಾವರಿಯಲ್ಲಿ ಬಹಳ ಹಿಂದುಳಿದಿದೆ. ನೆರೆಹೊರೆಯ ಪ್ರಾಂತಗಳಾದ ಆಂಧ್ರ ಮತ್ತು ಮದ್ರಾಸು ರಾಜ್ಯಗಳನ್ನು ನಮ್ಮ ರಾಜ್ಯದೊಂದಿಗೆ ಹೋಲಿಕೆಮಾಡಿದರೆ ನಾವು ನೀರಾವರಿಯ ವಿಷಯದಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆ ಎಂಬುದು ವೇದ್ಯವಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಕೂಡ ಆದಷ್ಟು ತೀವ್ರವಾಗಿ ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎನ್ನತಕ್ಕ ವಾದವನ್ನು ಎಲ್ಲರೂ ಒಪ್ಪತಕ್ಕದ್ದು. ನಮಗೆ ಬಹು ಪ್ರಾಮುಖ್ಯವಾಗಿ ಸಂಶಯಾತ್ಮಕವಾಗಿರುವುದು ಏನೆಂದರೆ 1924ನೇ ಇಸವಿಯಲ್ಲಿ ನಮಗೂ ಮತ್ತು ಮದ್ರಾಸ್ ರಾಜ್ಯಕ್ಕೂ ಆದಂತಹ ಕರಾರು 1974ನೇ ಇಸವಿಗೆ ಮುಗಿಯುತ್ತದೆ. ಆ ಅವಧಿಯೊಳಗಾಗಿ ಕಾವೇರಿ ನದಿಯಿಂದ ನಮಗೆ ಬರಬೇಕಾದ ನೀರಿನ ಪಾಲನ್ನು ಉಪಯೋಗಿಸಿಕೊಳ್ಳದೆ ಹೋದರೆ ನಮ್ಮ ಹಕ್ಕು ಹೊರಟುಹೋಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆ ವಿಷಯದಲ್ಲಿ ಯಾರೂ ಏನೂ ಭೀತಿ ಪಡಬೇಕಾಗಿಲ್ಲ. ಆ ಅವಧಿಯೊಳಗಾಗಿ ನಮಗೆ ಕಾವೇರಿ ನದಿಯಲ್ಲಿ ಬರಬೇಕಾದ ನೀರಿನ ಪಾಲನ್ನು ಉಪಯೋಗಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎಂದು. ಇದರಲ್ಲಿ ನನಗೆ ಒಂದು ಕಾಣಿಸುತ್ತದೆ. ಅದೇನೆಂದರೆ ಮೈಸೂರು ದೇಶದಲ್ಲಿ ನಾವು ಕಾವೇರಿ ನದಿಯ ನೀರನ್ನು ಸಂಪೂರ್ಣ ಉಪಯೋಗಿಸಿಕೊಳ್ಳಬೇಕಾದರೆ ನಮಗೆ ಹೆಚ್ಚಿನ ಹಣಬೇಕು. ಹೆಚ್ಚಿನ ಶ್ರಮ ಬೇಕು. ಹೆಚ್ಚಿನ ಹಣ ಮತ್ತು ಇತರೇ ಸೌಲಭ್ಯಗಳನ್ನು ಒದಗಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಈ ಮಧ್ಯೆ ಮದ್ರಾಸಿನವರು ಏನು ಮಾಡುತ್ತಾರೆಂಬುದನ್ನೂ ನಾವು ನೋಡಬೇಕಾಗಿದೆ. 1924ನೇ ಇಸವಿಯಲ್ಲಿ ಆದಂತಹ ಒಂದು ಕರಾರಿನ ಪ್ರಕಾರ ಮದ್ರಾಸಿನವರು ಅವರಿಗೆ ಎಷ್ಟು ಭಾಗ ನೀರು ಸಲ್ಲಬೇಕೋ ಅಷ್ಟು ಭಾಗ ನೀರನ್ನು ಅವರು ಈಗಾಗಲೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ವಿಷಯ ನಮಗೆ ಗೊತ್ತಿದೆ. ಆದರೆ ನಾವು ಎಷ್ಟು ನೀರನ್ನು ಅದರಲ್ಲಿ ಉಪಯೋಗಿಸಿಕೊಳ್ಳಬೇಕೋ ಅಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ನಮಗೆ ಸಲ್ಲಬೇಕಾದ ನೀರಿನ ಯಾವ ಭಾಗವನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಆದರೆ ಮದ್ರಾಸಿನವರು ಮಾತ್ರಾ ಕಾವೇರಿ ನದಿಯಲ್ಲಿ ಅವರಿಗೆ ಸಲ್ಲಬೇಕಾದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಇನ್ನೂ ಸ್ವಲ್ಪ ಹೆಚ್ಚಿಗೆ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೋ ಏನೋ ಎನ್ನುವ ಸಂಶಯವನ್ನು ಕೂಡ ಅನೇಕರು ಹೇಳುತ್ತಿದ್ದಾರೆ. ಇದರಲ್ಲಿ ಮದ್ರಾಸಿನವರಿಗೆ ಕೆಲವು ಕಷ್ಟಗಳಿವೆ. ಅವು ಯಾವುವೆಂದರೆ ಕಾವೇರಿ ನದಿಯು ಮೈಸೂರು ದೇಶವನ್ನು ಬಿಟ್ಟು ಮದ್ರಾಸು ರಾಜ್ಯಕ್ಕೆ ಹೋದಮೇಲೆ ಅದು ಅಲ್ಲಿ ನಿಧಾನವಾಗಿ ಹರಿಯುತ್ತದೆ. ಮತ್ತು ಕೆಲವು ಭಾಗದಲ್ಲಿ ಸಮನಾಗಿರುವ ಭೂಮಿಯಲ್ಲಿ ಹರಿಯುತ್ತದೆ, ಕೆಲವು ಭಾಗದಲ್ಲಿ ಎತ್ತರವಾಗಿರುವ ಪ್ರದೇಶದಲ್ಲಿ ಹರಿಯುತ್ತದೆ. ಇದರಿಂದ ಅವರು ಯಾವ ಅಣೆಕಟ್ಟುಗಳನ್ನು ಕಟ್ಟದೆ ಸುಲಭವಾಗಿ ಕಡಿಮೆ ಖರ್ಚಿನಲ್ಲಿ ನೀರನ್ನು ಉಪಯೋಗಿಸಿಕೊಳ್ಳಬಲ್ಲರು. ಇದರ ದೆಸೆಯಿಂದ ಅವರು ಲಕ್ಷಾಂತರ ಎಕರೆ ಭೂಮಿಯನ್ನು ಸಾಗುಮಾಡುತ್ತಿದ್ದಾರೆ. ಅಂಥಾ ಅನುಕೂಲ ನಮ್ಮ ದೇಶದಲ್ಲಿ ಇಲ್ಲ; ಮದ್ರಾಸಿನವರು ಎಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಅವರು ಕಾವೇರಿ ನದಿಯಿಂದ ಎಷ್ಟು ಪ್ರಯೋಜನವನ್ನು ಪಡೆಯುತ್ತಿದ್ದಾರೆ, ನಮಗೆ ಏತಕ್ಕೆ ಅಷ್ಟು ಪ್ರಯೋಜನವಾಗು

(ಶ್ರೀ ಟಿ. ಮಾದಯ್ಯಗೌಡ)

ತ್ತಿಲ್ಲ ಎಂಬುದನ್ನು ನೋಡೋಣ ಎಂದರೆ ನನಗಾದರೂ ಒಂದು ವರ್ತಮಾನ ಬರುತ್ತಿದೆ ನಮ್ಮ ಇಂಜಿನಿಯರುಗಳು ಮದ್ರಾಸ್ ಪ್ರಾಂತಕ್ಕೆ ಹೋಗಿ ಅಲ್ಲಿ ಕಾವೇರಿ ನದಿಯಿಂದ ಅವರಿಗೆ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿದೆ, ಎಷ್ಟರಮಟ್ಟಿಗೆ ಅವರು ಈ ನೀರನ್ನು ಉಪಯೋಗಿಸಿಕೊಳ್ಳು ತ್ತಿದ್ದಾರೆ ಎನ್ನುವುದನ್ನು ನೋಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ ಎಂದು ನನಗೆ ಗೊತ್ತಾ ಗುತ್ತಿದೆ. ಈ ವಿಚಾರವನ್ನು ನನಗೆ ನನ್ನ ಸ್ನೇಹಿತರು ಹೇಳಿದರು. ಈಗ ಮದ್ರಾಸ್ ರಾಜ್ಯದವರು ಅವರ ಭಾಗ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. 1974ನೇ ಇಸವಿ ಆದ ಮೇಲೆ ಮದ್ರಾಸಿನವರು ನಾವು ನಮ್ಮ ಭಾಗದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಇನ್ನೂ ಇಷ್ಟು ಭಾಗ ನೀರನ್ನು ಇಷ್ಟು ಕಾಲದಿಂದ ಹೆಚ್ಚಿಗೆ ನೀರನ್ನು ನಾವು ಉಪಯೋಗಿಸಿಕೊಳ್ಳು ತ್ತಿದ್ದೇವೆ ಎಂದು ಅವರು ಹೇಳಿವರೆ ಅವರಿಗೆ ಒಂದು ಪ್ರಿಸ್‌ಕ್ರಿಪ್ಟಿವ್ ರೈಟ್ ಬರುತ್ತದೆ ಎನ್ನುವ ವಾದ ವಿವಾದಗಳಿಂದ ಕೂಡಿವೆ, ಇದರಿಂದ ನಮಗೆ ತೊಂದರೆಯಾಗುತ್ತದೆ ಎನ್ನುವ ಸಂಶಯವನ್ನು ಕೂಡ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ.

4 P.M.

ಇದನ್ನೂ ಕೂಡ ನಾವು ತಳ್ಳಿಹಾಕತಕ್ಕ ಮಾತಲ್ಲ. ಈಗಾಗಲೇ, ನಮ್ಮ ವರ್ತಮಾನ ನಿಜವಿದ್ದರೆ, ಮೆಟ್ಟೂರು ಜಲಾಶಯದಿಂದ ನೀರನ್ನು ಉಪಯೋಗ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಆ ರಿಸರ್ವಾಯರ್‌ನಲ್ಲಿರುವ ನೀರಿನಿಂದ ಅವರು ನೇರವಾಗಿ ಸಾಗುಮಾಡುವುದಕ್ಕೆ ಅವಕಾಶವಿಲ್ಲ. ಅವರು ಆ ನೀರನ್ನು ಬೇರೆ ರಿಸರ್ವಾಯರಿಗೆ ತೆಗೆದುಕೊಂಡು ಅಲ್ಲಿಂದ ಸಾಗುಮಾಡುವುದಕ್ಕೆ ಅವಕಾಶವಿದೆ. ಅವರು ಏನು ಮಾಡುತ್ತಿದ್ದಾರೆಂದರೆ ಮೈಸೂರಿನವರು ನಮ್ಮನ್ನು ಏನು ಕೇಳಬಲ್ಲರು ಎಂದೋ ಏನೋ ಸುರಂಗಗಳ ಮೂಲಕ ನೀರನ್ನು ತೆಗೆದುಕೊಂಡು ಹೋಗಿ ನೇರವಾಗಿ ಸಾಗುಮಾಡುವುದಕ್ಕೆ ಉಪಯೋಗಿಸುತ್ತಿದ್ದಾರೆ ಎಂದು ವರ್ತಮಾನ ಕೂಡ ನಮಗೆ ಗೊತ್ತಾಗುತ್ತಿದೆ. ಈ ಎಲ್ಲ ಕಾರಣ ಗಳಿಂದಲೂ 1975 ನೇ ಇಸವಿ ಆದಮೇಲೂ ನಾವು ಪುನಃ ಕುಳಿತುಕೊಂಡು ಎಷ್ಟು ನೀರನ್ನು ನಾವು ಉಪಯೋಗಿಸಿಕೊಂಡಿದ್ದೇವೆ; ಮದ್ರಾಸಿನವರು ಎಷ್ಟು ಉಪಯೋಗಿಸಿಕೊಂಡಿದ್ದಾರೆ, ಇದನ್ನೆಲ್ಲ ಆಲೋಚನೆ ಮಾಡಿ ಮಾತನಾಡಿ ನಮಗೆ ಯಾವ ವಿಧವಾದ ತೊಂದರೆಯೂ ಆಗದ ಹಾಗೆ ನಮ್ಮ ಮೈಸೂರು ರಾಜ್ಯದಲ್ಲಿ ಹರಿಯುತಕ್ಕ ನೀರಿನಲ್ಲಿ ನಮಗೆ ಎಷ್ಟು ಹಕ್ಕು ಇದೆಯೋ ಅಷ್ಟೂ ನಮಗೆ ಸಂಪಾದನೆಯಾಗುವುದರಲ್ಲಿ ಏನೂ ತೊಂದರೆ ಇಲ್ಲ ಎಂದು ಭಾವನೆ ಮಾಡುವುದು ಅಷ್ಟು ಯೋಗ್ಯ ವಲ್ಲವೇನೋ, ಸರಿಯಲ್ಲವೇನೋ ಎಂದು ನಾನು ಭಾವಿಸುತ್ತೇನೆ.

ಸ್ವಾಮಿ, ಮೈಸೂರು ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಬಂದಮೇಲೆ ಕಾವೇರಿ ಬೇಸಿನ್ ನಲ್ಲಿ ಇರತಕ್ಕ ಕೆಲವು ಮುಖ್ಯ ಉಪನದಿಗಳಿಗೆ ಅಣೆಕಟ್ಟುಗಳನ್ನು ಹಾಕಿ ನೀರನ್ನು ಉಪಯೋಗಿಸಿ ಕೊಳ್ಳತಕ್ಕ ಪ್ರಯತ್ನ ಸ್ವಲ್ಪಮಟ್ಟಿಗೆ ನಡೆದಿವೆ. ನುಗು ಮತ್ತು ಕಬ್ಬನಿ, ಈ ಅಣೆಕಟ್ಟುಗಳು ಈಗಾಗಲೇ ಪೂರ್ತಿಯಾಗುತ್ತ ಬರುತ್ತಿವೆ. ನುಗು ಜಲಾಶಯದಿಂದ ನೀರನ್ನು ಕೊಡುವುದಕ್ಕೆ ಪ್ರಾರಂಭಿಸಿದ್ದಾರೆಂದು ಗೊತ್ತಾಗಿದೆ. ನುಗು ಜಲಾಶಯ ಸುಮಾರು 20 ಸಾವಿರ ಎಕರೆಗೆ ನೀರಾವರಿ ಕೊಡತಕ್ಕದ್ದಾಗಿದೆ. ಅಲ್ಲಿ ನಾಲೆ ಇತ್ಯಾದಿಗಳೆಲ್ಲ ಪೂರ್ತಿಯಾದ ಮೇಲೆ ಸ್ವಲ್ಪಮಟ್ಟಿಗೆ ಅದರಿಂದ ಪ್ರಯೋಜನವಾಗುತ್ತದೆ ಎನ್ನುವುದರಲ್ಲಿ ಏನೇನೂ ಸಂಶಯವಿಲ್ಲ. ಕಬ್ಬನಿ ಹೊಳೆಗೆ ಒಂದು ಜಲಾಶಯವನ್ನು ಕಟ್ಟುತ್ತಿದ್ದಾರೆ. ಕಬ್ಬನಿ ಕಾವೇರಿ ಹೊಳೆಗೆ ಒಂದು ಪ್ರಾಮುಖ್ಯವಾದ ಉಪನದಿ. ಅಲ್ಲಿ ಸುಮಾರು 50 ಸಾವಿರ ಎಕರೆ ನೀರಾವರಿ ಆಗುವ ಹಾಗೆ ಹತ್ತು ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಕೆಲಸ ಮಾಡುತ್ತಿದ್ದಾರೆ. 19·7 ಟಿ.ಎಂ.ಸಿ. ನೀರು ಇಲ್ಲಿ ಒದಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅದನ್ನು ಆದಷ್ಟು ಬೇಗ ಮುಗಿಸಿ ನಮಗೆ ಅದರಿಂದ ಪ್ರಯೋಜನ ವಾಗುವ ಹಾಗೆ ಮಾಡುತ್ತಾರೆ ಎಂದು ನಾವಾದರೂ ಭರವಸೆಯನ್ನು ಇಟ್ಟುಕೊಳ್ಳಬೇಕಾಗಿದೆ. ಈಗ ಎಲ್ಲ ನೀರಾವರಿ ಕಾರ್ಯಗಳಲ್ಲಿಯೂ ಒಂದು ಅಡಚಣೆ ಏನು ಎಂದರೆ ಪ್ರಾರಂಭವಾದ ಮೇಲೆ ಸ್ವಲ್ಪ ಸ್ವಲ್ಪವಾಗಿ ಹಣವನ್ನು ಒದಗಿಸುವುದರಿಂದ ಜಾಗ್ರತೆಯಾಗಿ ಮುಗಿಯುವುದಿಲ್ಲ. ಅದರಿಂದ ಅಡಚಣೆ ಗಳು ಜಾಸ್ತಿಯಾಗುತ್ತವೆ. ಕಬ್ಬನಿಯಲ್ಲಿಯೂ ಇದೇ ಒಂದು ಕೊರತೆ ಇದೆ. ಇದರಿಂದಾಗಿ ಎಷ್ಟು ದಿನದಲ್ಲಿ ಮುಗಿಯಬೇಕೋ ಅಷ್ಟು ದಿನದಲ್ಲಿ ಮುಗಿಯುತ್ತಿಲ್ಲ.

ಇನ್ನು ಕೆಲವು ಪ್ರಾಜೆಕ್ಟುಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ಕೆಲವು ಕೆಲಸ ಗಳಾಗುತ್ತಿವೆ, ಇನ್ನೂ ಕೆಲವು ಆಗಬೇಕಾಗಿವೆ. ಹೆಬ್ಬಹಳ್ಳ ಮತ್ತು ಹೆಗ್ಗಡದೇವನಕೋಟೆ ಹತ್ತಿರ ತಾರಕ ಅಣೆಕಟ್ಟನ್ನು ಕಟ್ಟಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆ ಕೆಲಸ ಎಷ್ಟು ತ್ವರಿತವಾಗಿ

ಆಗಬೇಕೋ ಅಷ್ಟು ತ್ವರಿತವಾಗಿ ಆಗಿಲ್ಲ. 20 ಲಕ್ಷ ರೂಪಾಯಿ ಖರ್ಚಿನ ಕೆಲಸ. ಈಗ 25 ಲಕ್ಷ ರೂಪಾಯಿ ಖರ್ಚಾಗಿದೆ, ಇನ್ನೂ ಕೆಲಸ ಪೂರ್ತಿಯಾಗಿಲ್ಲ. ಹಾಗೆಯೇ ಕುಣಿಗಲ್ ತಾಲ್ಲೂಕಿನಲ್ಲಿ ಮಂಗಳ ಅಣೆಕಟ್ಟನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿ ಬಹಳ ದಿವಸವಾಯಿತು. ಅದು ಪೂರ್ತಿಯಾಗುವುದು ಎಂದಿಗೋ ಎನ್ನುವ ಸಂಶಯ ಬಂದಿದೆ. ಅದರಿಂದ ಕೂಡ ಸುಮಾರು ಎರಡು ಸಾವಿರ ಎಕರೆಗೆ ನೀರಾವರಿಯಾಗುತ್ತದೆ.

ಇನ್ನೊಂದು ಅರ್ಕಾವತಿ ಪ್ರಾಜೆಕ್ಟ್ ಕಟ್ಟಬೇಕು ಎನ್ನುವುದು. ಅರ್ಕಾವತಿ ನದಿಗೆ ಕನಕಪುರ ತಾಲ್ಲೂಕಿನಲ್ಲಿ ಹಾರೂಬೆಲೆ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಲು ಎರಡನೆಯ ಯೋಜನೆಯಲ್ಲಿ 85 ಲಕ್ಷ ರೂಪಾಯಿಗಳ ಅಂದಾಜು ಆಗಿತ್ತು. ಇದರಿಂದ ಎರಡು ಸಾವಿರ ಎಕರೆ ನೀರಾವರಿಯಾಗುತ್ತದೆ. ಹಾರೂಬೆಲೆ ಬಹಳ ಹಿಂದುಳಿದ ಪ್ರದೇಶ. ಅಲ್ಲಿ ಅರ್ಕಾವತಿ ಪ್ರಾಜೆಕ್ಟನ್ನು ಕಟ್ಟಬೇಕೆಂದು ಅನೇಕ ವರ್ಷಗಳಿಂದ ಇದ್ದರೂ ಕೂಡ ಇನ್ನೂ ಆ ಕೆಲಸವನ್ನು ತೆಗೆದುಕೊಂಡಿಲ್ಲ. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಮಂಜೂರಾತಿ ಕೂಡ ದೊರೆತಿಲ್ಲ ಎಂದು ಗೊತ್ತಾಗುತ್ತದೆ.

ಇನ್ನು ಮೂರನೆಯ ಯೋಜನೆಯಲ್ಲಿ ಕಾಣಿಸಿರುವ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಯೋಜನೆಗಳು ಎಂದರೆ ಹೇಮಾವತಿ, ಹಾರಂಗಿ ಮತ್ತು ಕಂಬದಕಡ ಇದರ ಕತೆಗಳನ್ನು ನಾವು ಕೇಳುತ್ತಿದ್ದೇವೆ. ಅಲ್ಲಿ ಕಟ್ಟಬೇಕೇ, ಇಲ್ಲಿ ಕಟ್ಟಬೇಕೇ, ಯಾವ ಸ್ಥಳದಲ್ಲಿ ಕಟ್ಟಬೇಕು, ಎಷ್ಟು ಎತ್ತರ ಕಟ್ಟಬೇಕು, ಎಷ್ಟು ಅಗಲ ಇರಬೇಕು, ಈ ವ್ಯವಹಾರದಲ್ಲಿಯೇ ಅನೇಕ ದಿವಸಗಳನ್ನು ಕಳೆಯುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಹಾಗೆ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಂಡು ಹೆಚ್ಚು ಜನಗಳಿಗೆ ಪ್ರಯೋಜನವಾಗುವ ಹಾಗೆ ಕೆಲಸಗಳನ್ನು ತುರ್ತಾಗಿ ಮಾಡತಕ್ಕದ್ದು ಸಾಧು ಎಂದು ಈ ಸಂದರ್ಭದಲ್ಲಿ ನಾನು ಸೂಚಿಸಲು ಅಪೇಕ್ಷೆಪಡುತ್ತೇನೆ.

ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಈ ಮೂರು ಪ್ರಾಜೆಕ್ಟುಗಳೂ ಬಹುಮಟ್ಟಿಗೆ ನಮ್ಮ ದೇಶದ ಆಹಾರಾಭಾವವನ್ನು ಹೋಗಲಾಡಿಸುವುದಕ್ಕೆ ಅನುಕೂಲವಾದ ಪ್ರಾಜೆಕ್ಟುಗಳು ಎನ್ನುವುದರಲ್ಲಿ ಏನೇನೂ ಸಂಶಯವಿಲ್ಲ. ಆದರೆ ಇವುಗಳ ವಿಚಾರದಲ್ಲಿ ಇಷ್ಟೊಂದು ವಾದ ವಿವಾದಗಳು ಹುಟ್ಟಿಕೊಂಡಿವೆಯಲ್ಲ ಎಂದು ನಾನಾದರೂ ಬಹಳ ವ್ಯಸನಪಡಬೇಕಾಗಿದೆ. ಮಾನ್ಯ ಮಂತ್ರಿಗಳು ಒಂದು ಸಲ ಅಪ್ಪಣೆ ಕೊಡಿಸಿದರು ತಜ್ಞರು ಏನು ಹೇಳುತ್ತಾರೆಯೋ ಅದರಂತೆ ಮಾಡೋಣ ವೆಂದರೆ ಜನಗಳಿಗೆ ಬಹಳ ಕಷ್ಟನಿಷ್ಠೂರಗಳಿವೆ, ಅದನ್ನು ತಿಳಿದುಕೊಳ್ಳಬೇಕಾದ್ದು ಅಗತ್ಯ, ಆ ಕಷ್ಟ ನಿಷ್ಠೂರಗಳು ತಪ್ಪಿದ್ದಲ್ಲ, ಕಡಮೆ ಕಷ್ಟ ನಿಷ್ಠೂರಗಳಿಂದ ಕೆಲಸ ನಡೆಯುವ ಹಾಗೆ ಆಲೋಚನೆ ಮಾಡಬೇಕು ಎಂದು ಹೇಳಿದರು. ಅದು ಒಳ್ಳೆಯ ಅಭಿಪ್ರಾಯ. ಈಗಾಗಲೆ ಜನಗಳ ಅಹವಾಲು ಏನಿವೆ, ಹೆಚ್ಚು ಜನಗಳಿಗೆ ಯಾವುದು ಅನುಕೂಲವಾಗುತ್ತದೆ. ದೇಶಕ್ಕೆ ಯಾವುದರಿಂದ ಹೆಚ್ಚು ಪ್ರಯೋಜನವಾಗುತ್ತದೆ ಎನ್ನುವುದನ್ನು ಇಷ್ಟರೊಳಗೇ ತೀರ್ಮಾನ ಮಾಡಬೇಕಾಗಿತ್ತು. ಎಂದು ನನಗಾದರೂ ಅನ್ನಿಸುತ್ತದೆ. ಜಲಾಶಯಗಳನ್ನು ಮಾಡಿದರೆ ಭೂಮಿಯ ಮೇಲೆ ನಾವು ಜಲಾಶಯಗಳನ್ನು ಕಟ್ಟಬೇಕೇ ಹೊರತು ಆಕಾಶದಲ್ಲಿ ಕಟ್ಟುವುದಕ್ಕಾಗುವುದಿಲ್ಲ. ಅನೇಕ ವಿಸ್ತೀರ್ಣವುಳ್ಳ ಜಮೀನುಗಳು ಕೆರೆಯ ಒಳಗಡೆ ಸಿಕ್ಕಿ ಹೋಗುತ್ತವೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ; ಮುಳುಗಡೆಗೆ ಒಳಗಾಗತಕ್ಕ ಪ್ರದೇಶದ ಜನಗಳಿಗೆ ತಕ್ಕ ಸೌಕರ್ಯಗಳನ್ನು ಮಾಡಿಕೊಡಬೇಕು. ಅದನ್ನು ಕೂಡ ತಪ್ಪಿಸುವುದಕ್ಕಾಗುವುದಿಲ್ಲ, ಯಾವುದನ್ನು ಮಾಡಬೇಕಾದರೂ ಕೂಡ ಹೆಚ್ಚು ಜನರಿಗೆ ತೊಂದರೆಯಾಗದಹಾಗೆ, ಹೆಚ್ಚು ಸಾಗುವಳಿ ಜಮೀನುಗಳು ನೀರಿನಲ್ಲಿ ಮುಳುಗಡೆಯಾಗದ ಹಾಗೆ, ಸುತ್ತುಮುತ್ತಲ ಜನಗಳ ಸೌಕರ್ಯಗಳನ್ನು, ಅವರ ಅಭಿಪ್ರಾಯವನ್ನು ತಿಳಿದು ಅದಕ್ಕೆ ಮನ್ನಣೆ ಕೊಟ್ಟು ಆ ಕಾರ್ಯವನ್ನು ತ್ವರಿತಗೊಳಿಸಬೇಕಾದ್ದು ಅಗತ್ಯ, ಇದಕ್ಕೆ ನಾವು ಮೀನ ಮೇಷ ಲೆಕ್ಕ ಮಾಡಿಕೊಂಡು ಕುಳಿತುಕೊಳ್ಳುವುದು ಸಾಧುವಲ್ಲ; ಮೀನ ಮೇಷ ಎಣಿಸಿಕೊಂಡು ಕುಳಿತುಕೊಂಡರೆ ನಮ್ಮ ಉದ್ದೇಶವೇನಿದೆ, ನಮ್ಮ ಗುರಿ ಏನಿದೆ ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಸ್ವಲ್ಪ ದಿವಸದಲ್ಲಿ ನನ್ನ ಮಿತ್ರರಾದಂಥ ಎಚ್. ಡಿ. ದೇವೇಗೌಡರು ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ; 18 ಕೆಲಸಗಳನ್ನು ತೆಗೆದುಕೊಂಡು ಕಾವೇರಿ ನದಿಯ ನೀರಿನ ಉಪಯೋಗವನ್ನು ಮಾಡಿಕೊಳ್ಳುತ್ತೇವೆ, ಅದರಿಂದ ಸುಮಾರು 176 ಟಿ.ಎಂ.ಸಿ. ಫೀಟು ನೀರು ನಮಗೆ ಒದಗುತ್ತದೆ ಅಂತ ಹೇಳಿದ್ದಾರೆ. ಈ 18 ಸ್ಕೀಮುಗಳಲ್ಲಿ ಹಾರಂಗಿ, ಹೇಮಾವತಿ, ಕಂಬದಕಡ, (ಈ 3 ಸ್ಕೀಮುಗಳು) 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಯಾಗಿವೆ. ನಾನು ಮೊದಲೇ ಹೇಳಿದ ಹಾಗೆ ಅರ್ಕಾವತಿ 2ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಯಾಗಿದ್ದರೂ ಕೂಡ, ಅದನ್ನು ತೆಗೆದುಕೊಂಡಿಲ್ಲ. ಲಕ್ಷ್ಮಣತೀರ್ಥದ ಗತಿಯೂ ಹಾಗೆಯೆ ಎಂದುಕೊಂಡಿದ್ದೇನೆ. ಈ ತಾವರಕ ಅನ್ನತಕ್ಕಂಥ ಹೊಳೆ ಹತ್ತಿರ ಕಟ್ಟತಕ್ಕಂಥ ಅಣೆಕಟ್ಟಿಗೆ ಹೆಬ್ಬಹಳ್ಳ ಅಣೆಕಟ್ಟು ಅನ್ನುತ್ತಾರೆ. ಹೆಬ್ಬಹಳ್ಳ ಅಣೆಕಟ್ಟನ್ನು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿ ಮಾಡಿದೆ. ಅದೂ ಅಲ್ಲದೆ ಈ ಪಟ್ಟಿ ಪ್ರಕಾರ ಸೀರಿಯಲ್ ನಂಬರು (14) ಮತ್ತು (17)ರಲ್ಲಿ

(ಶ್ರೀ ಟಿ. ಮಾದಯ್ಯಗೌಡ)

ಹೆಬ್ಬಹಳ್ಳಕ್ಕೆ ಅಡ್ಡವಾಗಿ ಅಣೆಕಟ್ಟು, ಹೆಬ್ಬಹಳ್ಳ ಪ್ರಾಜೆಕ್ಟು ಅಂತ ಇದೆ. ಮೂರು ಹೆಬ್ಬಹಳ್ಳಗಳು ಇವೆ. ಈ 18 ಯೋಜನೆಗಳಲ್ಲಿರುವ ಹೆಬ್ಬಹಳ್ಳಗಳು ಯಾವುವು ಅಂತ ನಿರ್ಧಾರವಾಗಿಲ್ಲ, ಅವುಗಳಿಂದ ಎಷ್ಟು ನೀರಾವರಿಯಾಗುತ್ತದೆ, ಅವುಗಳಿಗೆ ಎಷ್ಟು ಖರ್ಚಾಗುತ್ತದೆ, ಎಷ್ಟು ಟಿ.ಎಂ.ಸಿ. ಫೀಟು ನೀರು ನಮಗೆ ಒದಗುತ್ತದೆ ಅನ್ನುವ ವಿವರವಾದರೂ ಕೊಟ್ಟಿಲ್ಲ. 8ನೇ ನಂಬರಿನಲ್ಲಿ ಯಗಚಿ ಅಂತ ಇದೆ; ಯಗಚಿ ಅಂತ ಇನ್ನೊಂದು 18ನೇ ನಂಬರಿನಲ್ಲಿದೆ. ಅದು ಬೇರೆ ಯಗಚಿಯೆ? ಈ ಯಗಚಿ ಯಾವುವು ಅನ್ನತಕ್ಕಂಥಾದ್ದು ಯಾವುದು ಎಂದು ನಮ್ಮ ಸರಕಾರದವರು ಸ್ಪಷ್ಟವಾಗಿ ತಿಳಿಸಬೇಕು.

ಮದ್ದೂರು ಹತ್ತಿರ ಕೀಲಾರ ಪಿಕಪ್ಪು ಯಾವುದು ಅನ್ನುವುದು ಅರ್ಥವಾಗಿಲ್ಲ. ಇನ್ನೂ ಕೆಲವು ಸಣ್ಣ ಪ್ರಾಜೆಕ್ಟುಗಳನ್ನು ಅಲ್ಲಿ ಸೇರಿಸಿದ್ದಾರೆ. ಅದರಿಂದ ಎಷ್ಟರಮಟ್ಟಿಗೆ ನಮ್ಮ ಉದ್ದೇಶ ಸಾಧನೆ (176 ಟಿ.ಎಂ.ಸಿ. ಅಡಿ ನೀರು ಉಪಯೋಗಿಸಿಕೊಳ್ಳುವ ಉದ್ದೇಶಸಾಧನೆ) ನೆರವೇರುತ್ತದೆ ಅನ್ನುವುದನ್ನು ಹೇಳುವುದು ಕಷ್ಟ.

ಮತ್ತೊಂದು ಸಮಾಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನೆಗೆ ಉತ್ತರಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದರು. ಅದು ಏನೆಂದರೆ 176 ಟಿ ಎಂ ಸಿ ಫೀಟು ನೀರನ್ನು 5ನೆ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ನಾವು ಪಡೆದುಕೊಳ್ಳುತ್ತೇವೆ, ಅಂದರೆ 1976ಕ್ಕೆ ಆಗುತ್ತದೆ. ನಮ್ಮ 1924ರ ಕರಾರು ಏನಿದೆ ಅದು 50 ವರ್ಷದೊಳಗೆ ಪೂರೈಸುತ್ತದೆ. ಈ 50 ವರ್ಷದ ಅವಧಿಯಲ್ಲಿ ಎಷ್ಟು ಹೆಚ್ಚಿಗೆ ನೀರು ಕಾವೇರಿ ನದಿಯಿಂದ ನಮ್ಮ ಭಾಗಕ್ಕೆ ಬರಬೇಕೊ, ಉಪಯೋಗಿಸಿಕೊಳ್ಳಲು ಎಷ್ಟು ಹಕ್ಕು, ಅಧಿಕಾರವಿದೆಯೊ ಅಷ್ಟನ್ನೂ ಉಪಯೋಗಿಸಬೇಕು. 5ನೆ ಪಂಚವಾರ್ಷಿಕ ಯೋಜನೆ ಕೊನೆಯತನಕ ಅದಕ್ಕೆ ಕಾಯಬೇಕು ಅನ್ನತಕ್ಕಂಥಾದ್ದು ಸರಿಯಲ್ಲವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. 18 ಕೆಲಸಗಳ ಪಟ್ಟಿಯನ್ನು ಕೊಟ್ಟಿದ್ದೀರ. ಅದಕ್ಕೆ ಇನ್ನೂ ಕೆಲವು ಉತ್ತಮ ಪ್ರಾಜೆಕ್ಟುಗಳನ್ನು ಸೇರಿಸಿಕೊಳ್ಳಬೇಕಾಗಿತ್ತು. ಅವನ್ನು ಕೈಬಿಟ್ಟಿದ್ದಾರೆ ಎಂದು ನನಗನಿಸುತ್ತದೆ. ಕಾವೇರಿ ನದಿಗೆ ಹೇಮಾವತಿ, ಕಬಿನಿ ಮುಂತಾದ ಹೊಳೆಗಳು ಎಷ್ಟು ಪ್ರಾಮುಖ್ಯವೊ, ಶಿಂಷ, ಅರ್ಕಾವತಿ ನದಿಗಳೂ ಅಷ್ಟೆ ಪ್ರಾಮುಖ್ಯವಾದಂಥವು ಎಂದು ನಮ್ಮ ಮುಖ್ಯಮಂತ್ರಿಗಳು ಮನಗಾಣಬೇಕು. ಶಿಂಷ ನದಿಗೆ ಈಗಾಗಲೆ ಕೆಲವು ಅಣೆಕಟ್ಟುಗಳು ಆಗಿವೆ. ಇನ್ನೂ ಕೆಲವು ಅಣೆಕಟ್ಟುಗಳು ಆಗಬೇಕು. ಬೋಳೆಅರೆ ಹತ್ತಿರ ಪ್ರಾಜೆಕ್ಟು ಆಗಬೇಕು ಎಂದು ಹಿಂದೆ ಒಂದು ಪ್ರಶ್ನೆ ಬಂದಿತ್ತು. ಅದು 1962 ಜನವರಿಯಲ್ಲಿಯೆ ಸ್ಯಾಂಕ್ಷನ್ ಆಗಿತ್ತು. ಅದಕ್ಕೆ 19 ಲಕ್ಷ ಚಿಲ್ಲರೆ ಹಣ ಸ್ಯಾಂಕ್ಷನ್ ಆಗಿತ್ತು ಎಂದು ಕೇಳಿದ್ದೇನೆ. ಅದನ್ನು ಕೈ ಬಿಡಬೇಕಾದ ಅಗತ್ಯ ಕಂಡುಬಂದಿಲ್ಲ. ಬೋಳೆಅರೆ ಶಿಂಷ ನದಿಯ ಒಂದು ಭಾಗವಾದ್ದರಿಂದ ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆಂದು ನನ್ನದಾದರೂ ಭಾವನೆ.

ಮಳವಳ್ಳಿ ಹತ್ತಿರ ಮತ್ತು ಚನ್ನಪಟ್ಟಣ ತಾಲ್ಲೂಕಿಗೆ ಅನುಕೂಲವಾಗತಕ್ಕಂಥ ಶಿಂಷ ನದಿಗೆ ಅಣೆಕಟ್ಟು ಹಾಕಿ ಅಲ್ಲಿ ಸಾವಿರಾರು ಎಕರೆಗಳಿಗೆ ನೀರಾವರಿ ಸೌಕರ್ಯಗಳಿಗೆ ಒದಗಿಸಬೇಕು ಎಂದು ಮಾನ್ಯಸದಸ್ಯರು ಆಗಾಗ್ಗೆ ಮನವಿಗಳನ್ನು ಸಲ್ಲಿಸುತ್ತಾ ಇದ್ದಾರೆ. ಹಾಗೆ ಮಾಡುವುದಾದರೆ ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ, ಇವುಗಳಿಗೆ ಒಂದು ನೀರಿನ ಸೌಕರ್ಯ ಒದಗಿ ಜನಗಳಿಗೆ ತುಂಬ ಅನುಕೂಲವಾಗುತ್ತದೆ. ಈಗ ಈ ಹೋಬಳಿಗಳಲ್ಲಿ ಜನಗಳಿಗೆ ನೀರಿನ ಸೌಕರ್ಯ ಏನೇನೂ ಇಲ್ಲ. ಆದ್ದರಿಂದ ಶಿಂಷ ನದಿಗೆ ಅಣೆಕಟ್ಟು ಕಟ್ಟಿ ಹೆಬ್ಬಹಳ್ಳಕ್ಕೆ ನೀರು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ; ಹಾಗೇನೇ ಹೊಳೆನರಸೀಪುರ ತಾಲ್ಲೂಕಿನಲ್ಲಿ-ಬಹುಶಃ ದೇವೇಗೌಡರಿಗೆ ಗೊತ್ತಿದೆ-ಚಿಕ್ಕೇನಹಳ್ಳ ಸ್ಕೀಮು ಏನಾಯಿತೊ, ಗೊತ್ತಾಗಲಿಲ್ಲ. ಸುಮಾರು 19 ಲಕ್ಷ ರೂಪಾಯಿ ಖರ್ಚುಮಾಡಿ ಸಾವಿರಾರು ಎಕರೆಗೆ ನೀರಾವರಿ ಸೌಕರ್ಯ ಒದಗಿಸಬೇಕು ಅಂತ ಇತ್ತು. ಅದನ್ನು ಮಾಡತಕ್ಕಂಥಾದ್ದು ಅನುಕೂಲ.

ಹಾಗೇನೆ ಅರ್ಕಾವತಿ ನದಿಗೆ ಮಂಚನಬೆಲೆ ಹತ್ತಿರ ಒಂದು ಜಲಾಶಯವನ್ನು ನಿರ್ಮಾಣ ಮಾಡುವುದರಿಂದ ಎರಡು ಸೌಕರ್ಯಗಳನ್ನು ತಾವು ಒದಗಿಸಿದಂತಾಗುತ್ತದೆ. ಒಂದನೇದು, ರಾಮನಗರ ತಾಲ್ಲೂಕಿಗೆ ಹಾಗೂ ಇನ್ನೂ ಮುಂದಕ್ಕೆ ಕನಕಪುರ ತಾಲ್ಲೂಕಿಗೆ ನೀರಾವರಿ ಸೌಕರ್ಯವಾಗುತ್ತದೆ. ಅದಕ್ಕಿಂಥ ಮಿಗಿಲಾಗಿ, ರಾಮನಗರ ತಾಲ್ಲೂಕು ಮತ್ತು ಮುಂದಿನ ಪ್ರಾಂತ್ಯದಲ್ಲಿ ನೆರೆಯಿಂದ ಆಗತಕ್ಕಂಥ ಹಾವಳಿಯನ್ನು ತಪ್ಪಿಸುವುದಕ್ಕೆ ಅದು ಸಾರ್ಥಕವಾಗುತ್ತದೆ. ನೆರೆ ಹಾವಳಿ ಅರ್ಕಾವತಿಯಲ್ಲಿ ಆಗಾಗ್ಗೆ ಬಂದು ಜನಗಳಿಗೆ ಒಂದು ಹೆಚ್ಚಿನ ಅನಾಹುತವನ್ನು ಉಂಟುಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸಭೆಯ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಹೋದ ವರ್ಷ ಅರ್ಕಾವತಿ ಪ್ರವಾಹದಿಂದ ಉಂಟಾದ ಅನಾಹುತ ಮಾನ್ಯಸಭೆಗೆ ವೇದ್ಯವೇ ಇದೆ. ಸಾವಿರಾರು ಎಕರೆ ಜಮೀನುಗಳು ಮರಳಿನಲ್ಲಿ ಹೂತು ಹೋದುವು.

ಅಲ್ಲಿ ಪ್ರಾಮುಖ್ಯವಾದ ರೈತನ ಬೆಳೆಗೆ ತೊಂದರೆಯಾಯಿತು. ಅನೇಕ ಉಪಯುಕ್ತವಾದ ಮರಗಳೆಲ್ಲಾ ಆ ಪ್ರವಾಹದಲ್ಲಿ ಕೊಚ್ಚಿಹೋಯಿತು. ನೂರಾರು ಜಾನುವಾರುಗಳು ಹೊರಟು ಹೋದವು. ಸಾಲದ್ದಕ್ಕೆ ಇಬ್ಬರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು. ಅದರಿಂದ ಉಂಟಾಗಿರ ತಕ್ಕ ಕಷ್ಟದಿಂದ ಅಲ್ಲಿಯ ರೈತರು ಇನ್ನೂ ಚೇತರಿಸಿಕೊಳ್ಳುತ್ತಲೇ ಇದ್ದಾರೆ, ಸರ್ಕಾರದವರು ಅವರಿಗೆ ಬಹುಮಟ್ಟಿನ ಸಹಾಯವನ್ನು ಮಾಡಬೇಕು, ಇದು ಒಂದು ವರ್ಷ ಯಾವಾಗಲೋ ಬರತಕ್ಕ ಪ್ರವಾಹವಲ್ಲ ಆಗಿಂದಾಗ್ಗೆ ಈ ಪ್ರವಾಹ ಬಂದು ರಾಮನಗರ ತಾಲ್ಲೂಕಿನಲ್ಲಿ ಮತ್ತು ಕನಕಪುರ ತಾಲ್ಲೂಕಿನಲ್ಲಿ ಬಹಳ ತೊಂದರೆಯಾಗುತ್ತಾ ಇದೆ. ಆದಷ್ಟು ಜಾಗ್ರತೆ ಇದನ್ನು ನಿವಾರಣೆ ಮಾಡಬೇಕಾದ್ದು ಅಗತ್ಯ. ಈ ಪ್ರವಾಹದ ಹಾವಳಿಯನ್ನು ತಪ್ಪಿಸುವುದಕ್ಕೆ ಕೇಂದ್ರ ಸರ್ಕಾರದವರೂ ಕೂಡ ಹಣವನ್ನು ಒದಗಿಸುತ್ತಾರೆ. ಆದ್ದರಿಂದ ಈ ಯೋಜನೆಗಳನ್ನು ಅತಿತ್ವರಿತವಾಗಿ ಮಾಡಬೇಕಾದ್ದು ಅಗತ್ಯ. ಮೊದಲನೆಯದಾಗಿ ಇದನ್ನು ಕಟ್ಟುವುದರಿಂದ. ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರನ್ನು ಸ್ಟೋರ್ ಮಾಡಿಕೊಂಡು ಉಪಯುಕ್ತವಾದ ರೀತಿಯಲ್ಲಿ ನೀರಾವರಿ ಸೌಕರ್ಯವನ್ನು ಮಾಡುವುದಕ್ಕೆ, ನೆರೆ ಹಾವಳಿಯನ್ನು ತಪ್ಪಿಸುವುದಕ್ಕೆ, ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ.

ಸರ್ಕಾರದವರು ಯೋಜನೆಗಳನ್ನು ಸಾಧನೆ ಮಾಡುವುದಕ್ಕೆ ಕೆಲವು ಅಡಚಣೆಗಳನ್ನು ಮುಂದೊಡುತ್ತಾರೆ. ಆ ಅಡಚಣೆಗಳಲ್ಲಿ ಪ್ರಾಮುಖ್ಯವಾದವು ದ್ರವ್ಯದ ಅಭಾವ, ಹಣ ಇಲ್ಲ ಆದ್ದರಿಂದ ಈ ಯೋಜನೆಗಳನ್ನೆಲ್ಲಾ ಜಾಗ್ರತೆ ಮಾಡಿ ಮುಗಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಈಗ ಅನೇಕ ಸಂದರ್ಭಗಳಲ್ಲಿ ಈ ಯೋಜನೆಗಳಿಗೆ ಒದಗಿಸಿದ ಹಣನನ್ನೂ ಕೂಡ ಸಂಪೂರ್ಣವಾಗಿ ಖರ್ಚು ಮಾಡದೇ ಇರುವುದು ನಮ್ಮ ಗಮನಕ್ಕೆ ಬರುತ್ತದೆ. ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದರೆ ನಾನಾದರೂ ಹೇಳುತ್ತೇನೆ ಯಾವುದಾದರೂ ಒಂದು ಯೋಜನೆಯನ್ನು ಸರ್ಕಾರದವರು ಕೈ ಕೊಂಡರೆ ಅದನ್ನು ತ್ವರಿತವಾಗಿ ಆದಷ್ಟು ಜಾಗ್ರತೆ ಮುಗಿಸುವುದರಿಂದ ಹೆಚ್ಚು ಹಣ ಖರ್ಚಾಗುವುದಕ್ಕೆ ಅವಕಾಶವಿರುವುದಿಲ್ಲ ಮತ್ತು ಕೆಲಸವೂ ಕೂಡ ಅಚ್ಚುಕಟ್ಟಾಗಿ ನಡೆಯುತ್ತದೆ. ಈ ಒಂದು ವಿಚಾರವನ್ನು ಸರಕಾರದವರು ಸಂಪೂರ್ಣವಾಗಿ ಮನದಟ್ಟು ಮಾಡಿಕೊಳ್ಳಬೇಕಾದ್ದು ಅಗತ್ಯ ಎಂದು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ನಾವಾದರೂ ಏನು ಮಾಡುತ್ತೇವೆ ಎಂದರೆ ಅನೇಕ ಕಾಮಗಾರಿಗಳನ್ನು ತೆಗೆದುಕೊಳ್ಳುವುದು, ಪ್ರಾರಂಭಿಸುವುದು, ಅಲ್ಪ ಸ್ವಲ್ಪ ಕಟ್ಟುವುದು ಆಮೇಲೆ ನಿಧಾನವಾಗಿ ತೆವಳಿಕೊಂಡು ನಡೆಸುವುದು ಅದಕ್ಕೆ ನಮ್ಮಲ್ಲಿ ತಿರುಪತಿ ಕ್ಷೌರ ಎಂದು ಹೇಳುತ್ತಾರೆ ಆ ರೀತಿ ಆಗಬಾರದು. ನೂರಾರು ಯೋಜನೆಗಳು ಆಗಬೇಕಾಗಿರುವುದರಿಂದ ಮತ್ತು ಅವುಗಳಿಂದ ಜನತೆ ಯಾವ ಫಲವನ್ನು ನಿರೀಕ್ಷಿಸುತ್ತದೆಯೋ ಆ ಫಲ ದೊರೆಯ ಬೇಕಾದರೆ ಅವುಗಳು ಜಾಗ್ರತೆ ಕಾರ್ಯಗತವಾಗಬೇಕು ಇಲ್ಲದೇ ಇದ್ದರೆ ಅವುಗಳಿಂದ ಪ್ರತಿಫಲ ದೊರೆಯುವುದಿಲ್ಲ ಮಾತ್ರವಲ್ಲದೇ ಹಣವೂ ಕೂಡ ಲ್ಯಾಪ್ಸ್ ಆಗಿ ತೊಂದರೆಯಾಗುತ್ತದೆ ಆದ್ದರಿಂದ ಯಾವುದಾದರೂ ಒಂದು ಕೆಲಸವನ್ನು ತೆಗೆದುಕೊಂಡರೆ ಅದನ್ನು ತ್ವರಿತವಾಗಿ ಮಾಡಿ ಮುಗಿಸುವಂತಹ ಏರ್ಪಾಡನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಮತ್ತೊಂದು ವಿಚಾರ. ಈ ಪ್ರಾಜೆಕ್ಟುಗಳಿಗೆ ಕೇಂದ್ರದಿಂದ ಯಾವ ಒಂದು ಪರ್ಮಿಷನ್ ದೊರೆಯಬೇಕೋ—ಕ್ಲಿಯರೆನ್ಸ್—ಅದನ್ನು ಪಡೆಯುವುದರಲ್ಲಿ ನಿಧಾನವಾಗುತ್ತಿದೆ. ಸರಿಯಾದಂತಹ ಪ್ರಾಜೆಕ್ಟುಗಳು ಇರುತ್ತವೆ ಅದಕ್ಕೆ ಸರ್ವೇ ಇನ್‌ವೆಸ್ಟಿಗೇಷನ್ ಪ್ರತಿಯೊಂದನ್ನೂ ಮಾಡಿರುತ್ತಾರೆ ಹಾಗಿರುವಾಗ ಕ್ಲಿಯರೆನ್ಸ್ ಕೊಡುವುದಕ್ಕೆ ಏನು ಕಷ್ಟ ಇದೆ ಅಥವಾ ಅದನ್ನು ಪಡೆಯುವುದಕ್ಕೆ ಏಕೆ ಸಾವಕಾಶವಾಗುತ್ತದೆ ಎಂಬುದು ನನಗೆ ಬೇರೆ ಅರ್ಥವಾಗುತ್ತಾ ಇಲ್ಲ. ಯಾವುದಾದರೂ ಒಂದು ಯೋಜನೆಯನ್ನು ಸರಕಾರದವರು ಮಾಡಬೇಕೆಂದು ಇಟ್ಟುಕೊಂಡರೆ ಅದಕ್ಕೆ ಏನು ಸಿಬ್ಬಂದಿ ಬೇಕು ಎಂಬುದನ್ನು ಸಕಾಲದಲ್ಲಿ ಯೋಚನೆ ಮಾಡಿ ಅದನ್ನು ಒದಗಿಸಬೇಕು. ಸಿಬ್ಬಂದಿಯನ್ನು ಒದಗಿಸಿದರೂ ಹಣವನ್ನು ಒದಗಿಸದೇ ಹೋದರೆ ಕೆಲಸ ನಿಧಾನವಾಗುತ್ತದೆ. ಅದರಿಂದ ನಷ್ಟವಾಗುತ್ತದೆ. ತೊಂದರೆಯಾಗುತ್ತದೆ ಮತ್ತು ಪ್ರತಿಫಲ ಸಾಕಷ್ಟು ದೊರೆಯುವುದಿಲ್ಲ. ಮತ್ತೊಂದು ವಿಚಾರವನ್ನು ಸರಕಾರದವರು ಹೇಳುತ್ತಾರೆ, ಸಿಮೆಂಟಿನ ಅಭಾವ ಕಬ್ಬಿಣದ ಅಭಾವ, ಫಾರಿನ್ ಎಕ್ಸ್‌ಚೇಂಜ್ ಸಾಕಷ್ಟು ದೊರೆಯುವುದಿಲ್ಲ, ಬೇರೆ ಕಡೆಯಿಂದ ತರಿಸಬೇಕಾದ ಮಿಷಿನರಿ ಮುಂತಾದುವುಗಳ ಅಭಾವ ಬರುತ್ತದೆ ಎಂದು ಹೇಳುತ್ತಾರೆ. ಇದನ್ನು ಮೊದಲೇ ದೇಶದ ಮುಂದೆ ಇಡಬಾರದು ಎಂದು ನಾನು ಕೇಳುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಹೇಳಬೇಕಾದರೆ ಈ ನೀರಾವರೀ ಯೋಜನೆಗಳನ್ನು ಮಾಡುವಾಗ ಮುಳುಗಡೆಯಾಗತಕ್ಕ ಜನಗಳಿಗೆ ಒದಗಿಸತಕ್ಕ ಸೌಕರ್ಯ ಏನಿದೆ ಅದನ್ನೂ ಕೂಡ ಸರಿಯಾದಂತಹ ಕಾಲದಲ್ಲಿ ಒದಗಿಸಬೇಕು. ಅನೇಕ ಯೋಜನೆಗಳ ವಿಷಯದಲ್ಲಿ ಈ ಅಕ್ವಿಸಿಷನ್ ರೆಕಾರ್ಡನ್ನು ಸರಿಯಾಗಿ ನಡೆಸದೇ ವರ್ಷ ಎರಡು ವರ್ಷ ಮೂರು ವರ್ಷ ನಿಂತುಹೋಗಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ಯಾವಾಗ ಒಂದು ಯೋಜನೆಯನ್ನು ಹಾಕುತ್ತೇವೆಯೋ ಆ ತಕ್ಷಣದಲ್ಲೇ ಅಕ್ವಿಸಿಷನ್ ಪ್ರೊಸೀಡಿಂಗ್ಸನ್ನು ಮಾಡಿಸಬೇಕು. ಮತ್ತು ಯೋಜನೆಗಳು ಪೂರ್ತಿಯಾಗುವುದ

(ಶ್ರೀ ಟಿ. ಮಾದಯ್ಯಗೌಡ)

ರಲ್ಲಿ ಅದಕ್ಕೆ ಬೇಕಾದ ಕಾಲುವೆ, ಸಣ್ಣ ಪುಟ್ಟ ಕಾಲುವೆ ತಯಾರಾಗಿ ಯೋಜನೆ ಮುಗಿಯಿತು ಎಂದ ತಕ್ಷಣ ರೈತರಿಗೆ ಅವರ ಜಮೀನಿಗೆ ನೀರು ನೊರೆಯುವಂತಹ ಏರ್ಪಾಡು ಮಾಡತಕ್ಕ ಕೆಲಸವನ್ನೂ ಕೂಡ ಸಕಾಲದಲ್ಲಿ ಮಾಡುವುದು ಅಗತ್ಯ.

ಸ್ವಾಮಿ ಈ ದೊಡ್ಡ ನೀರಾವರಿ ಯೋಜನೆಗಳನ್ನು ಮೀಡಿಯಂ ತರಗತಿ ನೀರಾವರಿ ಯೋಜನೆಗಳನ್ನು ಮತ್ತು 1500 ಸಣ್ಣ ಪುಟ್ಟ ನೀರಾವರೀ ಯೋಜನೆಗಳನ್ನೂ ಕೂಡ ತೆಗೆದುಕೊಂಡಿದ್ದೀರಿ. ಇದಕ್ಕೆ ಸುಮಾರು 14 ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದೀರಿ ಎಂದು ಹೇಳುತ್ತಾ ಇದ್ದೀರಿ. ಇದರಿಂದಲೂ ಕೂಡ ಕಾವೇರಿ ಬೇಸಿನ್‌ನಲ್ಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ಅನುಕೂಲವಾಗುತ್ತದೆ. ಆದರೆ ಒಂದು ಯೋಜಿತ ರೀತಿಯಲ್ಲಿ ಈ ಕಾರ್ಯಗಳನ್ನು ಸಾಧಿಸಬೇಕು. ಸಣ್ಣ ಸಣ್ಣ ನೀರಾವರಿಯೋಜನೆಗಳ ವಿಷಯದಲ್ಲೂ ಕೂಡ ನಾನು ಈಗಾಗಲೇ ಹೇಳಿದಂತಹ ಕೊರತೆಗಳನ್ನು ನಿವಾರಣೆ ಮಾಡಿಕೊಂಡು ಅವುಗಳನ್ನು ತ್ವರಿತವಾಗಿ ಮಾಡಿ ಮುಗಿಸಬೇಕು. ಏನಾದರೂ ಒಂದು ಪ್ರಾಜೆಕ್ಟನ್ನು ಕೈಗೆ ತೆಗೆದುಕೊಂಡರೆ ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಅದರ ಪ್ರತಿಫಲ ರೈತರಿಗೆ ದೊರೆಯುವಂತೆ ಮಾಡಬೇಕು ಅಗಲೇ ನೀರಾವರಿ ಯೋಜನೆಗಳನ್ನು ಕೈ ಕೊಂಡದ್ದಕ್ಕೆ ಸಾರ್ಥಕವಾಗುತ್ತದೆ. ಎಷ್ಟು ನಿಧಾನವಾದರೆ ಅಷ್ಟೂ ಅಡಚನೆ, ಅಷ್ಟೂ ದ್ರವ್ಯನಷ್ಟ ಮತ್ತು ಆ ಪ್ರಾಜೆಕ್ಟುಗಳಿಗೆ ಬಲಹೀನತೆ ಯುಂಟಾಗುತ್ತದೆ ಎಂದು ಈ ಸಂದರ್ಭದಲ್ಲ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನೂತನವಾದ ಯುವಕ ಅಧ್ಯಕ್ಷರೇ, ಈ ಕಾವೇರಿ ಮತ್ತು ಇತರ ನದಿಗಳ ನೀರಿನ ಉಪಯೋಗವನ್ನು ಮೈಸೂರು ಸಂಸ್ಥಾನದವರು ಸಾಕಾದಷ್ಟು ಪಡೆದಿಲ್ಲ. ಅವನ್ನು ಪಡೆಯಬೇಕೆಂಬ ಆಕಾಂಕ್ಷೆಯಿಂದ-ಬಹಳ ಕ್ಷಾಮಕ್ಕೆ ತುತ್ತಾಗಿರತಕ್ಕ ಚನ್ನರಾಯಪಟ್ಟಣ, ತುಮಕೂರು ಈ ಜಿಲ್ಲೆಯ ಜನರು ಬಹಳ ದಿವಸದಿಂದ ಬೇಜವಾಬ್ದಾರಿ ಸರ್ಕಾರ ಎಂದು ಏನು ಹೇಳುತ್ತಾ ಇದ್ದರು. ಆ ಕಾಲದಿಂದಲೂ ಕೂಡ ಈ ಒಂದು ಕಾರ್ಯವನ್ನು ಮಾಡಬೇಕೆಂದು ಹೇಳುತ್ತಾ ಬಂದಿದ್ದಾರೆ. ಆದರೆ ಇದನ್ನು ಕಾರ್ಯಗತ ಮಾಡುವುದರಲ್ಲಿ ಮಾತ್ರ ಹಿಂದೆ ಬಿದ್ದಿದ್ದೀರಿ. ಪ್ರತಿ ಸಾರಿಯೂ ಸಹ ಚುನಾವಣೆಯ ಸಮಯದಲ್ಲ ತಾವು ಭಾಷಣಗಳನ್ನು ಮಾಡುವಾಗ ಈ ಎಲ್ಲಾ ಕಾರ್ಯಗಳನ್ನೂ ಕೂಡ ಮಾಡಿಯೇ ಮಾಡುತ್ತೇವೆ ಎಂದು ಹೇಳುತ್ತೀರಿ. ತಮ್ಮಲ್ಲಿ ತಾಂತ್ರಿಕ ಸಿಬ್ಬಂದಿ ಸಾಕಾದಷ್ಟು ಇದೆ ಮೈಸೂರು ದೇಶದ ಇಂಜನಿಯರುಗಳು ಬಹಳ ಹೆಸರುವಾಸಿಯಾದವರು. ಅಂತಹದರಲ್ಲೂ ಕೂಡ ನಾರಾಯಣ ಪುರ ಮತ್ತು ಆಲಮಟ್ಟಿ ವಿಷಯದಲ್ಲಿ ನಿಮ್ಮ ಒಂದು ಸ್ಟೇಟ್‌ಮೆಂಟ್ ಏನು, ನಿಮ್ಮ ಖಚಿತವಾದ ಅಭಿಪ್ರಾಯ ಏನು, ನಿಮ್ಮ ಇಂಜಿನಿಯರಿಂಗ್ ಇಲಾಖೆಯವರು ಏನು ಹೇಳಿದ್ದಾರೆ ಎಷ್ಟು ದುಡ್ಡು ಬೇಕು, ಎಷ್ಟು ಸಿಬ್ಬಂದಿ ಬೇಕು ಎನ್ನುವುದರ ಬಗ್ಗೆ ಇವತ್ತಿನವರೆಗೂ ಕೂಡ ನಿಮ್ಮಲ್ಲಿ ಯಾರಾದರೂ ಒಂದು ಸ್ಟೇಟ್‌ಮೆಂಟ್ ಮಾಡಿದ್ದೀರಾ ಎಂದರೆ ಯಾವ ಪೇಪರ್‌ನಲ್ಲೂ ಕೂಡ ಬಂದಿಲ್ಲ. ಮೊಗೆ ಮಾಡುವವನಿಗೆ ಗುಡಾರ ಒಂದು ಕೇಡು ಎನ್ನುವ ಹಾಗೆ ಇನ್ನು ಅದಕ್ಕೆ ಒಂದು ದೊಡ್ಡ ಕಚೇರಿ ಮಾಡಿ ಅದಕ್ಕೆ ಸ್ಪೆಷಲ್ ಆಫೀಸರುಗಳನ್ನು ಹಾಕುತ್ತೀರಿ, ? ಅದೇ ರೀತಿಯಲ್ಲಿ ಗೋರೂರು ಅಣೆ ಕಟ್ಟುವುದಕ್ಕೆ ದುಡ್ಡು ಎಷ್ಟು ಬೇಕು, ಸಿಬ್ಬಂದಿ ವರ್ಗ ಎಷ್ಟು ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಎಂದರೆ ಅವಕ್ಕೆ ಒದಗಿಸಿರತಕ್ಕ ಹಣ ಸುಮಾರು ಒಂದು ಲಕ್ಷ ರೂಪಾಯಿ ಆ ಒಂದು ಲಕ್ಷ ರೂಪಾಯಿನಲ್ಲಿ ಇವತ್ತು ಅಲ್ಲಿ ಏನಾಗಬಹುದು, ಎಷ್ಟು ಜನಕ್ಕೆ ಉಪಯೋಗವಾಗುತ್ತವೆ ಎಂಬುದನ್ನು ಲೆಕ್ಕಾ ಹಾಕಿದ್ದೀರಾ ? ತಮ್ಮಲ್ಲಿರತಕ್ಕ ಇಷ್ಟೊಂದು ಸಿಬ್ಬಂದಿ ವರ್ಗವನ್ನು ಯಾರನ್ನು ಎಲ್ಲಿಗೆ ಹಾಕಬೇಕು, ಎಷ್ಟು ಹಣ ಇದೆ ಎಂಬುದರ ತಿಳಿವಳಿಕೆ ತಮ್ಮಲ್ಲಿ ಯಾರಿಗೂ ಇಲ್ಲ ಉದಾಹರಣೆ ಹೇಳುವುದಾದರೆ ಯಾವುದಾದರೂ ಒಂದು ಯೋಜನೆಯ ವಿಷಯವನ್ನು ಕೇಳಿದರೆ ಕೆಲವು ಸಮಯದಲ್ಲಿ ಹಣ ಇಲ್ಲ ಎನ್ನುತ್ತೀರಿ, ಇನ್ನು ಕೆಲವು ಸಮಯಗಳಲ್ಲಿ ಸಿಬ್ಬಂದಿ ಇಲ್ಲ ಎನ್ನುತ್ತೀರಿ ?

4-30 P.M.

ಯೋಜನೆಯ ಹಣದಲ್ಲಿ ಬಹು ಭಾಗ ಸಿಬ್ಬಂದಿಗಾಗಿಯೇ ಖರ್ಚಾಗುತ್ತದೆ. ಯಾವುದೋ ಒಂದು ಪೈಲಟ್-ಪ್ರಾಜೆಕ್ಟಿನಲ್ಲಿ 3ಲಕ್ಷ ರೂಪಾಯಿ ಒದಗಿಸಿದ್ದರಲ್ಲಿ ಎರಡೂವರೆ ಲಕ್ಷ ಸಿಬ್ಬಂದಿಗೇ ಖರ್ಚಾಯಿತೆಂದು ಹೇಳಿದರು. 25 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯೇ ತಿಪಟೂರು ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳಿಗೆ ಅನುಕೂಲವಾಗುವಂತೆ ಒಂದು ಅಂದಾಜನ್ನು ತಯಾರಿಸಿದ್ದರು. ಅದನ್ನು ಕಳೆದರೋ ಏನೋ ಗೊತ್ತಿಲ್ಲ,

ಇದುವರೆಗೂ ಅದನ್ನು ಕಾರ್ಯರೂಪಕ್ಕೆ ತಂದಿರುವುದಿಲ್ಲ. ಒಳ್ಳೆಯ ತಜ್ಞರು ಅದನ್ನು ತಯಾರಿಸಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ 20 ವರ್ಷಗಳ ಕೆಳಗೆ ನೀರು ಮುಳುಗಡೆಯಾಗಿರುವ ಜಮೀನುಗಳಿಗೆ ಬದಲಾಗಿ ಬೇರೆ ಜಮೀನು ಕೊಟ್ಟಿಲ್ಲ, ನೀರಾವರಿ ಬಂದಿರುವ ಕೆಲವು ಜಮೀನುಗಳಿಗೆ ಇದುವರೆಗೆ ನೀರು ದೊರೆತಿಲ್ಲ. ಹಾಗಿರುವುದರಿಂದ ಯೋಜನೆ ಮಾಡಿ ಫಲವೇನು ? ಕೈಗೊಳ್ಳದಿರುವುದೇ ಉತ್ತಮ. ಇದುವರೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ ಎಂದು ಹೇಳುತ್ತೀರಿ. ಹಾಗಿರುವಾಗ ನಿಮ್ಮಿಂದ ಯೋಜನೆ ಪೂರೈಸುವುದಕ್ಕೆ ಸಾಧ್ಯವೇ ? 18 ಯೋಜನೆಗಳಿವೆ, 36 ಯೋಜನೆಗಳಿವೆ ಎಂದು ಸುಮ್ಮನೆ ಭಾಷಣ ಮಾಡುವುದರಿಂದ ಪ್ರಯೋಜನವೇನು ? ದೆಹಲಿಗೆ ಹೋಗುವಾಗ ಮಂತ್ರಿಗಳು ಹೇಗಿದರು ರಾಜಕೀಯವಾದರೂ ಮಾಡಿ ಅಥವಾ ಏನು ಬೇಕಾದರೂ ಮಾಡಿ, ನಮ್ಮ ದೇಶಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಪಡೆಯಿರಿ. ಅದಕ್ಕೆ ನಿಮಗೆ ಶಕ್ತಿ ಇದೆಯೋ ಅಥವಾ ಇಲ್ಲವೇ ? ಮಂತ್ರಿಮಂಡಲ ಆಗಾಗ್ಗೆ ಬದಲಾವಣೆಯಾಗುತ್ತದೆ, ಬದಲಾವಣೆಯಾದಾಗಲೆಲ್ಲಾ ಒಂದು ಮಂತ್ರಿಮಂಡಲ ಮಾಡಿದ ತೀರ್ಮಾನ ಬದಲಾವಣೆಯಾಗುತ್ತಾ ಹೋಗುತ್ತದೆ. ಭೂಮಿ ಮುಳುಗಡೆಯಾಗುತ್ತದೆಂದು ಬೇಕಾದವರು ಬಂದು ಹೇಳಿದರೆ ಮತ್ತೆ ಬದಲಾವಣೆ ಮಾಡುತ್ತೀರಿ. ಜನರು ಹಾಗೆ ಹೇಳುವುದು ಸ್ವಾಭಾವಿಕ. ಕಳೆದುಕೊಳ್ಳುವವರು ಯಾವಾಗಲೂ ತಮ್ಮ ಹಿತ ರಕ್ಷಿಸಿಕೊಳ್ಳಲು ಬೇಕಾದಂತೆ ಹೇಳುವರು. ಈಗಿನ ಮಂತ್ರಿಗಳೇ 50 ವರ್ಷ ಇರುತ್ತಾರೆಂಬುದಕ್ಕೆ ಯಾವ ಕರಾರೂ ಇಲ್ಲ. ಅವರ ಸ್ಥಾನ ಕ್ಷಣಿಕ. ಆದುದರಿಂದ ಒಂದು ಸಾರಿ ತೀರ್ಮಾನ ಮಾಡಿದಮೇಲೆ ಅದಕ್ಕೆ ಬದ್ಧರಾಗಿ ಕೆಲಸ ಪೂರ್ಣ ಮಾಡಲು ವ್ಯವಸ್ಥೆ ಮಾಡಬೇಕು. ಹಾಗೆ ಮಾಡದಿದ್ದರೆ ಏನೂ ಉಪಯೋಗವಾಗುವುದಿಲ್ಲ. ನಿಮಗೆ ಅನಾನುಕೂಲವಾದರೆ ಪ್ಲಾನಿಂಗ್ ಕಮಿಷನ್ ಛೇರ್‌ಮನ್ನರು ಎರಡನೆಯ ತಾರೀಖು ಬರುತ್ತಾರೆ, ನಾವು ಶಿಫಾರಸ್ಸುಮಾಡಿ ಬೇಕಾದ ಹಣ ಕೊಡಿಸುತ್ತೇವೆ, ನಿಮ್ಮ ಕೈಲಾಗದಿದ್ದರೆ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ತಾವು ಕೊಡಿಸುವುದಾದರೆ ಕೊಡಿಸಿ, ಈಗಲೂ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಸರಿ. ಆದರೆ ನಿಮ್ಮ ಹತ್ತಿರ ಪ್ಲಾನ್ ಇದೆಯೆ, ಅಂದಾಜಿದೆಯೆ, ಇದ್ದರೆ ತೋರಿಸಿ, ಬೇಕಾದಷ್ಟು ಕೊಡುತ್ತೇವೆ ಎಂದು ನಮಗೆ ಹೇಳಿದ್ದಾರೆ; ಕಾಗದ ಬರೆದಿದ್ದಾರೆ. ನಾಗಮಂಗಲ ಮತ್ತು ಇತರ ಕೆಲವು ತಾಲ್ಲೂಕುಗಳ ಜನರು ಜೀವನ ಮಾಡಲು ಕಷ್ಟವಾಗಿ ಭದ್ರಾವತಿ ಕಾರ್ಖಾನೆಗೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದಾರೆ, ಪ್ರತಿ ವರ್ಷ ಹೀಗೆ ಅನೇಕ ರೈತರು ಹೋಗುತ್ತಿದ್ದಾರೆ. 35 ವರ್ಷಗಳ ಹಿಂದೆ ಬೇರೆ ಸರ್ಕಾರ ಮಾಡಿರುವ ಪ್ರಾಜೆಕ್ಟುಗಳನ್ನು ಕೈಕೊಳ್ಳುವುದಕ್ಕಾಗದೆ ಈಗ ಹೊಸ ಪ್ರಾಜೆಕ್ಟುಗಳನ್ನು ಮಾಡುತ್ತಿದ್ದಾರೆ. ವೀರೇಂದ್ರ ಪಾಟೀಲರು ಹಳೆಯ ಮತ್ತು ಹೊಸ ಮೈಸೂರಿನಲ್ಲಾಗಿರುವ ಕೆಲಸಗಳು ವಗೈರೆ ವಿವರವನ್ನು ಮೊನ್ನೆ ಕೊಟ್ಟರು. ಈಗ ಕರ್ಣಾಟಕ ಇರುವುದು ಎಂಬ ಭಾವನೆ ಇದ್ದಿದ್ದರೆ ಅವರು ಹಾಗೆ ಬೇರೆ ಬೇರೆ ಅಂಕಿ ಅಂಶಗಳನ್ನು ಕೊಡುತ್ತಿರಲಿಲ್ಲ. ಇನ್ನೊಬ್ಬರಿಗೆ ಹಳೆಯ ಮೈಸೂರು ಹೊಸ ಮೈಸೂರು ಎಂಬ ಭಾವನೆ ಇರಬಾರದು, ಮೈಸೂರು ದೇಶವೆಲ್ಲಾ ಒಂದೇ ಎಂಬ ಭಾವನೆ ಇರಬೇಕು ಎಂದು ಹೇಳುವವರೇ ಹೀಗೆ ಮಾಡಿದರೆ ಇತರರನ್ನೇಕೆ ಆಕ್ಷೇಪಿಸಬೇಕು ? ಹಳೆಯದು ಹೊಸದು ಎಂದು ಹೇಳಬಾರದು, ಕರ್ಣಾಟಕದ ಒಂದು ಇಲಾಖೆ ಎಂದು ಹೇಳಬೇಕು. ಇದನ್ನು ನೋಡಿದರೆ ತಾಯಿಯಂತೆ ಮಕ್ಕಳು, ನೂಲಿನಂತೆ ಸೀರೆ ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. ಹಾರಂಗಿ ಮತ್ತು ಕಂಬದಕಡ ಯೋಜನೆಗಳ ಸಂಬಂಧದಲ್ಲಿ ಹಿಂದಿನ ಮಂತ್ರಿಗಳು ಮಾಡಿದ್ದ ತೀರ್ಮಾನವನ್ನು ಬದಲಾಯಿಸಲು ಕಾರಣವೇನು ? ಅದೇ ರೀತಿಯಲ್ಲಿ ಆಲಮಟ್ಟಿ ಮತ್ತು ನಾರಾಯಣ ಪುರ ಅಣೆಕಟ್ಟುಗಳ ವಿಚಾರದಲ್ಲಿ ರಾಜಕೀಯ ಕೈವಾಡ ಹೆಚ್ಚಾಗಿ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ನ್ಯಾಯವಾಗಿ ತಜ್ಞರ ಅಭಿಪ್ರಾಯ ಪ್ರಕಾರ ಮಾಡುವುದು ಒಳ್ಳೆಯದು. ಆಂಧ್ರ ಮತ್ತು ಮದ್ರಾಸಿನವರು ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳುತ್ತಿರುವಾಗ ನಾವು ಎಚ್ಚರಿಕೆಯಿಂದ ಬೇಗ ನಮ್ಮ ಕೆಲಸಗಳನ್ನು ಮಾಡಿಕೊಳ್ಳದಿದ್ದರೆ ಮುಂದೆ ನಮಗೆ ಒದಗಿಸಿರುವ ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶವಾಗುವುದಿಲ್ಲ. ಎಲ್ಲಾ ನದಿಗಳ ನೀರನ್ನೂ ಸಕಾಲದಲ್ಲಿ ಉಪಯೋಗ ಮಾಡಿಕೊಳ್ಳಲು ಬೇಗ ಸೂಕ್ತ ಕ್ರಮ ಕೈಕೊಳ್ಳಬೇಕು. ಕೆಲವು ಕಡೆ ಅಣೆಕಟ್ಟುಗಳನ್ನು ನಿರ್ಮಿಸಲು ಇನ್ನೂ ಸಾಧ್ಯವಾಗಿಲ್ಲ. ಅಣೆಕಟ್ಟುಗಳ ನಿರ್ಮಾಣವಾಗುವವರೆಗೆ ಭೂಕಂದಾಯ, ಸುಂಕ ವಸೂಲುಮಾಡುವುದನ್ನು ನಿಲ್ಲಿಸಿ ಸಬ್ಸಿಡಿ ಕೊಟ್ಟು ಸೌಲಭ್ಯ ಒದಗಿಸುವುದು ಸರ್ಕಾರದ ಕರ್ತವ್ಯ. ಜಾಗ್ರತೆಯಾಗಿ ನೀರಾವರಿ ಕೆಲಸಗಳನ್ನು ಪೂರ್ಣಮಾಡಲು ಮನಸ್ಸು ಮಾಡಬೇಕು. ಮುಳುಗಡೆಯಾಗುವ ಪ್ರದೇಶದವರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು. ಮೊದಲೇ ಸೌಕರ್ಯಮಾಡಿಕೊಡದೆ ಮನೆ ಬಡಿಸುವುದು ಯಾವ ಧರ್ಮ ?

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಎತ್ತು ಹಾರುವುದಕ್ಕೆ ಮುಂಚೆ ಗೋಣಿ ಹಾರಿತು ಎಂಬಂತೆ ಮಾಡಬಾರದು. ಎಲ್ಲವನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕಾವೇರಿ ನದಿಯ ನೀರಿನ ಪೂರ್ಣ ಉಪಯೋಗ ಪಡೆಯಬೇಕೆಂಬ ಪ್ರಶ್ನೆ ನಮ್ಮ ಮುಂದಿದೆ. ಇಂಥ ಕೆಲಸದ ಪ್ರಮಾಣ ಎಷ್ಟಿದೆ ಎಂದು ನಾವು ತಿಳಿದುಕೊಳ್ಳಬೇಕು. ಈ ಕೆಲಸದ ಪ್ರಮಾಣ ಹೆಚ್ಚು ಕಡಮೆ ಹಿಂದಿನ ರೀತಿನೀತಿಯಲ್ಲೇ ಮಾಡುವುದಾದರೆ ಸುಮಾರು ಒಂದು ಶತಮಾನದ ಕೆಲಸವಿದೆ. ಅಷ್ಟರೊಳಗೆ ಆಹಾರದ ಕೊರತೆ ಶಾಶ್ವತವಾಗಿ ಪರಿಹಾರವಾಗಬೇಕು, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ದೊರೆಯಬೇಕು, ಆಮೇಲೆ ನೀರಿನ ಸೌಕರ್ಯ, ರಸ್ತೆ ಸೌಕರ್ಯ ಆಗಬೇಕು. ನದಿ ಹುಟ್ಟಿ ಸಮುದ್ರಕ್ಕೆ ಹೋಗುತ್ತದೆ, ಇಲ್ಲಿ ಸಮುದ್ರ ಮಟ್ಟವಿದೆ. ಪಶ್ಚಿಮ ಘಟ್ಟದಲ್ಲಿ ನದಿ ಹುಟ್ಟುವಾಗ ಬೆಟ್ಟದ ಎತ್ತರ ಬಹಳವಿದ್ದರೂ ಬೆಟ್ಟದ ಸಾಲಿನ ಪಕ್ಕದಲ್ಲಿರುವ ಜಮೀನನ್ನು ನೋಡಿದರೆ ಹೆಚ್ಚು ಕಡಮೆ 40 ಮೈಲಿ ಅಗಲದಲ್ಲಿ ಉದ್ದವಾಗಿ ದಕ್ಷಿಣಕ್ಕಿರುವ ಪ್ರದೇಶದಲ್ಲಿ ಸುಮಾರು 3 ಸಾವಿರ ಅಡಿ ಎತ್ತರವಿದೆ. ಬರುಬರುತ್ತಾ 1200 ಅಡಿ ಬರುತ್ತದೆ. ಪೂರ್ವದ ಜಿಲ್ಲೆಗಳ ಎಲ್ಲೆಗಳನ್ನು ತೆಗೆದು ಕೊಂಡರೆ ಇವರ ಉಗಮದ ಜಾಗ ಇದರಲ್ಲಿದೆ. ಎಂದರೆ ಬರುಬರುತ್ತಾ ತಗ್ಗಿಗೆ ಹರಿಯುತ್ತಿದೆ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಹೆಚ್ಚಾಗಿ ಆಹಾರ ಉತ್ಪತ್ತಿಯಾಗುವುದು ಮೈದಾನದ ಪ್ರದೇಶ ಗಳಲ್ಲಿ. ಯಾವ ವರ್ಷಗಳಲ್ಲಿ ಆಹಾರದ ಧಾನ್ಯಗಳು ಸರಿಯಾಗಿ ಬೆಳೆಯುವುದಿಲ್ಲವೋ ಆಗ ಅಭಾವ ವುಂಟಾಗುತ್ತದೆ. ರೈತರು ಪ್ರಾಮುಖ್ಯವಾಗಿರುವ ನಮ್ಮ ದೇಶಕ್ಕೆ ಬಹಳ ಕೆಡಕಾಗುತ್ತದೆ. ಮುಖ್ಯವಾಗಿ ನಮ್ಮ ಪ್ರಶ್ನೆ ಏನೆಂದರೆ ಈಗ ಇರುವ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಕೋಲಾರ, ಬೆಂಗಳೂರು, ತುಮಕೂರು ಹಾಗೇ ಇನ್ನಿತರ ಈಸ್ಟರನ್ ಡಿಸ್ಟ್ರಿಕ್ಟುಗಳಲ್ಲಿ ಮಳೆ ಸಾಕಾದಷ್ಟು ಬೀಳದೆ ಇರುವುದರಿಂದ ನೀರಾವರಿ ಕಾಲುವೆಗಳನ್ನು ಕಾವೇರಿ ನದಿಗೆ ಕಟ್ಟೆಗಳನ್ನು ಕಟ್ಟಿ ಒದಗಿಸಿಕೊಳ್ಳಬೇಕಾಗುತ್ತದೆ, ಎರಡನೇದು ಅದರಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಬಳಸಿಕೊಳ್ಳುವದು, ಮೂರನೇದು ನೀರಿನ ಸಂಚಾರ ಮಾರ್ಗ ಕಲ್ಪಿಸುವುದು. ಈಗ ನಾವು ಸಮತಾವಾದದ ಸಮಾಜ ವಾದವನ್ನು ಮಾಡ ಬೇಕೆಂದು ಹೊರಟಿದ್ದೇವೆ. ಇದಕ್ಕಾಗಿ ಸೀರೀಸ್ ಆಫ್ ರಿಸೋರ್ಸುಗಳು ಯಾವುವು ಎನ್ನುವುದನ್ನೂ ಇಲ್ಲಿ ಹೇಳುತ್ತೇನೆ. ಕಟ್ಟೆಗಳನ್ನು ಕಟ್ಟುವಾಗ ಇನ್‌ಲೆಂಡ್ ವಾಟರು ವೇಸ್ ಎನ್ನುವುದನ್ನು ಕಟ್ಟಿ ಉಪಯೋಗವಾಗುವ ಹಾಗೆ ಮಾಡುತ್ತಾರೆ. ಮೈದಾನ ಪ್ರದೇಶಕ್ಕೆ ಈಗ ಬೀಳುತ್ತಿರುವ ಮಳೆ ಸಾಕಾಗದೆ ಇರುವುದರಿಂದ ಇಷ್ಟೆಲ್ಲ ವ್ಯವಸಾಯಕ್ಕಾಗಿ ನೀರು, ಕೈಗಾರಿಕೆಗೆ ಬೇಕಾಗುವ ವಿದ್ಯುಚ್ಛಕ್ತಿ ಮತ್ತು ಇನ್‌ಲೆಂಡು ವಾಟರು ಬೇಸು ಇಷ್ಟನ್ನೂ ಕಾವೇರಿ ನದಿಯಿಂದ ಮಾಡಬೇಕಾಗಿದೆ. ಆದರೆ ಈಗ ಹಾಕಿಕೊಂಡಿರುವ ಯೋಜನೆಗಳು ನಡೆಯುತ್ತಿರುವ ರೀತಿ ನೋಡಿದರೆ ಒಂದು ಕಡೆ ಹಣ ಸಾಕಾಗುವುದಿಲ್ಲ, ಇನ್ನೊಂದು ಕಡೆ ಎಷ್ಟು ಧನದ ರಾಶಿ ಇದೆ ಅಷ್ಟನ್ನೂ ತಂದುಕೊಟ್ಟರೂ ಅದು ದುರ್ವ್ಯವಹಾರಕ್ಕೆ ಅವಕಾಶವಾಗಿ ಅಣೆಕಟ್ಟುಗಳನ್ನು ಕಟ್ಟುವುದರಲ್ಲಿ ಇದರದೇ ಒಂದು ವೈಶಿಷ್ಟ್ಯ ಸಾಧನೆಯಾಗಿದೆ ಎನ್ನುವುದು ಸರ್ವವಿದಿತವಾದುದು. 1924ನೇ ಇಸವಿಯ ಒಪ್ಪಂದವು 1974ರ ವೇಳೆಗೆ ಮುಗಿಯುತ್ತದೆ. ಇದರ ಮೇಲೆ ವಿವರವಾಗಿ ಚರ್ಚೆ ಮಾಡಿ ಇಲ್ಲಿ ಆಗಲೇ ಎಷ್ಟೋ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದನ್ನು ನೀವು ಒಪ್ಪಿಕೊಳ್ಳುವುದೂ ಇಲ್ಲ. ನೀವು ಯಾವಾಗ ಆಡಳಿತವನ್ನು ಸರಿಮಾಡದೇ ಜನಜೀವನಕ್ಕೆ ಯಶಸ್ವಿಯಾಗುವಂತೆ ಮಾಡುವುದಕ್ಕಾಗುವುದಿಲ್ಲವೋ ಆಗ ಏನಾಗುತ್ತದೆ ಎಂದರೆ ನಮ್ಮ ಪಾಲಿನ ನೀರನ್ನೂ ಬೇರೆಯವರೇ ತೆಗೆದುಕೊಳ್ಳುತ್ತಾರೆ.

ಈ ದೃಷ್ಟಿಯಿಂದ ನನಗನಿಸುವುದು ಈ ಇಷ್ಟು ದೊಡ್ಡ ಬೃಹತ್ ಪ್ರಮಾಣದಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಮಾಡಬೇಕಾದರೆ ಅದನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದನ್ನು ಆಳವಾಗಿ ಯೋಚನೆ ಮಾಡಬೇಕು. ಒಂದು ಪ್ರಾಜೆಕ್ಟು ಕಟ್ಟಬೇಕಾದರೆ ಒಂದು ಗವರ್ನಮೆಂಟು ಬಂದು ಷುರು ಮಾಡಬೇಕು ಎಂದು ಷುರು ಮಾಡುತ್ತಾರೆ. ಆದರೆ ಅದನ್ನು ಕಟ್ಟಬಾರದು ಎಂದು ಅದಕ್ಕೆ ಅಡ್ಡಿಗಳೂ ಬರುತ್ತಿವೆ. ಅದಕ್ಕೆ ಕಾರಣವೇನು ಎಂದರೆ ಅದರಲ್ಲಿ ಆಸ್ತಿ ಬರುತ್ತದೆ. ಎಂದು ಒಬ್ಬರ ಮೇಲೆ ಇನ್ನೊಬ್ಬರು ಇಲ್ಲಿ ಕಟ್ಟೆಯನ್ನು ಕಟ್ಟಬಾರದು ಇದರಿಂದ ಹೆಚ್ಚು ಮುಳುಗಡೆಯಾಗುತ್ತದೆ ಮತ್ತು ನಿಮ್ಮ ಪಾರ್ಟಿಯೊಳಗಡೆ ಇರುವವರ ಪ್ರಭಾವದಿಂದಾಗಿ ಇದರಲ್ಲಿ ಆಸ್ತಿಯ ಪ್ರಶ್ನೆ ಹಾಗೂ ಮುಳುಗಡೆಯ ಪ್ರಶ್ನೆ ಬರುವುದರಿಂದಾಗಿ ಯಾವ ಒಂದು ಕೆಲಸವನ್ನು ಮಾಡಬೇಕೆಂದರೂ ಅದು ಅರ್ಧಂಬರ್ಧವಾಗಿಯೇ ಆಗಿ ಅಲ್ಲಿಗೇ ನಿಲ್ಲುತ್ತದೆ. ಇದರಿಂದೇನಾಗುತ್ತದೆ ಎಂದರೆ ಎಷ್ಟು ವೇಗದ ಪ್ರಮಾಣದಲ್ಲಿ ಕೆಲಸ ಮಾಡಬೇಕೆಂದು ಇದ್ದರೂ ಅದು ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಯಾವ ರೀತಿ ಮಾಡಬೇಕು ಎನ್ನುವುದು ಇಲ್ಲಿರುವ ಮುಖ್ಯ ಪ್ರಶ್ನೆ. ಇದಕ್ಕೆ ತಕ್ಕ ಪರಿಹಾರ ಕಂಡುಹಿಡಿಯಬೇಕು. ಇದಕ್ಕೆ ಪರಿಹಾರ

ಕಂಡುಹಿಡಿಯಲು ಸಾಧ್ಯವಿದೆ. ಯಾವಾಗಲೂ ಒಂದು ಪ್ರಾಜೆಕ್ಟು ಕಟ್ಟಬೇಕಾದರೆ ಅದಕ್ಕೆ ಮುಳುಗಡೆಯಾಗುವ ಪ್ರದೇಶಗಳು ಬರುತ್ತವೆ. ಅಂತಹ ಪ್ರದೇಶಗಳವರಿಗಾಗಿ ಮೊದಲೇ ಒಂದು ಟೌನ್‌ಷಿಪ್ಪು ಎಂದು ಬೇರೆ ಕಡೆ ಮಾಡಿ ಅವರಿಗೆ ವಾಸಕ್ಕೆ ಅನುಕೂಲವಾಂದ ಒಂದು ಮನೆ ಮತ್ತು ಇನ್ನೂ ಏನೇನು ಸೌಕರ್ಯಗಳು ಬೇಕೋ ಅವನ್ನೆಲ್ಲಾ ಒದಗಿಸಿಕೊಟ್ಟರೆ ಆಗ ಪ್ರಾಜೆಕ್ಟನ್ನು ಮಾಡಲು ಅನುಕೂಲಗಳು ಹೆಚ್ಚಾಗಿ ಬರುತ್ತದೆ ಮತ್ತು ಜನರೂ ಹೊಸದಾಗಿ ಕಟ್ಟುವ ಟೌನ್‌ಷಿಪ್ಪುಗಳಲ್ಲಿ ಬಂದು ವಾಸ ಮಾಡಲು ತಾವಾಗಿಯೇ ಬರುತ್ತಾರೆ. ಈಗ ಬಡ್ಜೆಟ್ಟಿನಲ್ಲಿ ಮುಳುಗಡೆಯಾದವರಿಗೆ ಪರಿಹಾರ ಕೊಡುವುದರ ಸಲುವಾಗಿ 58 ಕಡೆಗಳಲ್ಲಿರುವುದನ್ನು ಒಂದು ಕಡೆಯಲ್ಲಿ ಕ್ರೋಢೀಕರಿಸಿ ಒಂದು ತರಹದ ಇನ್‌ಸೆಂಟೀವ್ ಬೋನಸ್ ರೀತಿಯಲ್ಲಿ ಊರುಗಳನ್ನು ಕಟ್ಟಿ ಅಲ್ಲಿಗೆ ಮುಳುಗಡೆಗೆ ತೊಂದರೆಯಾದ ಜನರು ಬರಬೇಕೆಂದು ಹೇಳಿದರೆ ಆಗ ತಾವಾಗಿಯೇ ಅವರು ಸಂತೋಷದಿಂದ ಬಂದು ನೆಲಸುತ್ತಾರೆ. ಇದಕ್ಕಾಗಿ ಎಷ್ಟು ಹಣ ಕೊಟ್ಟಿದ್ದಾರೆನ್ನುವುದನ್ನು ಆಯಾ ಇಲಾಖೆಯಲ್ಲಿರತಕ್ಕ ಜನ ತಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿ ಮಾಡುವ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಅವರುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿ ಮಂತ್ರಿಮಂಡಲದವರಿಗೂ ಸರಿಯಾದ ವಿವರಗಳನ್ನು ತಿಳಿಸುತ್ತಿದ್ದರೆ ಅವರು ಸರಿಯಾಗಿ ಮಾಡಲು ಅವರಿಗೆ ಎಷ್ಟೋ ಪ್ರಭಾವಗಳು ಅಡ್ಡಿ ಆತಂಕಗಳು ಬರುತ್ತವೆ. ಇದರಿಂದೇನಾಗುತ್ತದೆ ಎಂದರೆ ಏನೋ ಒಂದು ರೀತಿಯಾಗಿ ಆಗುತ್ತದೆ ಎಂದು ನೋಡಿಕೊಂಡು ಹೋಗುತ್ತಾರೆ. ಅಲ್ಲದೆ ಮಂತ್ರಿಮಂಡಲದವರು ಕೂಡ ತಮ್ಮ ಜವಾಬುದಾರಿ ಎಂದು ಆಸಕ್ತಿ ವಹಿಸಿ ಯಾವ ರೀತಿಯಲ್ಲಿ ಈ ಪ್ರಾಜೆಕ್ಟನ್ನು ಮಾಡಬೇಕು ಎನ್ನುವುದಕ್ಕೆ ಕಷ್ಟಪಟ್ಟು ಕೆಲಸ ಮಾಡಿ ಒಮ್ಮತವಾಗಿ ಹೋಗಬೇಕು ಎನ್ನುವ ವಾತಾವರಣ ಅವರ ಮನಸ್ಸಿನಲ್ಲಿ ಬರಬೇಕು. ಈಗ ಹಾಲಿ ಇರುವ ಆಡಳಿತ ಪಕ್ಷದಲ್ಲಿ ಹೇಗಾಗಿದೆ ಎಂದರೆ ಇಲ್ಲಿ ಪ್ರಾಜೆಕ್ಟು ಮಾಡಿದರೆ ಇಲ್ಲಿಗೆ ಉತ್ತರ ಕರ್ಣಾಟಕದ ಭಾಗ ಬರುತ್ತದೆ, ಇನ್ನೊಂದು ಕಡೆ ಮಾಡಿದರೆ ಅಲ್ಲಿಗೆ ಬೇರೆ ಇನ್ನೊಂದು ಭಾಗದ ಕರ್ಣಾಟಕ ಬರುತ್ತದೆ ಹೀಗೆ ಎಷ್ಟೋ ದುಡ್ಡು ಪ್ರಾಜೆಕ್ಟಿಗಾಗಿ ಕಟ್ಟಿರುವುದು ಹಾಳಾಗಿ ಹೋಗುತ್ತದೆ. ಈ ತರಹದ ಒಂದು ದಾರುಣ ಪರಿಸ್ಥಿತಿ ಹಿಂದೆ ಒಂದು ಸಾರಿ ರಷ್ಯಾದಲ್ಲೂ ಬಂದಿತ್ತು. ಆಗ ಅವರು ನಮ್ಮ ದೇಶ ದೊಡ್ಡದು ಎಂದರು. ಆಮೇಲೆ ಅಮೆರಿಕಾ ದೇಶದವರು ನಮ್ಮ ದೇಶ ದೊಡ್ಡದು ಎಂದು ಬಂದರು. ಹೀಗೆ ಎಲ್ಲೆಲ್ಲಿಯೂ ಆಗ ಆಗಿತ್ತು. ಈಗ ಅಂತಹ ಸ್ಥಿತಿಯೇನೂ ಇಲ್ಲಿ ಬಂದಿಲ್ಲ. ನಮ್ಮ ಇಂಡಿಯಾ ದೇಶದಲ್ಲಿ ವಿದ್ಯಾವಂತರುಗಳಿದ್ದಾರೆ ಮತ್ತು ಇಂಜನೀಯರುಗಳಿದ್ದಾರೆ. ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿರುವ ಇಂಜನೀಯರುಗಳೇ ಬಹಳ ಹೆಚ್ಚಾಗಿದ್ದಾರೆ. ಇಂತಹ ಉತ್ತಮವಾದ ಇಂಜನೀಯರುಗಳನ್ನು ಇಟ್ಟುಕೊಂಡು ಸುತ್ತಮುತ್ತ ಇರುವ ಪ್ರಾಜೆಕ್ಟುಗಳನ್ನು ಮಾಡಿಕೊಳ್ಳದೇ ಹೇಡಿಗಳ ಕೈಯಲ್ಲಿ ಚಂದ್ರಾಯುಧ ಕೊಟ್ಟಂತೆ ಯಾರ ಕೈಯಲ್ಲಿಯೋ ಏಕೆ ಕೊಟ್ಟಿದ್ದಾರೆ ಎಂದು ನಾನು ಕೇಳುತ್ತೇನೆ.

ಸಮಾಜವಾದದ ತತ್ವವೇನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ನಾಲ್ಕನೆ ಪಂಚವಾರ್ಷಿಕ ಯೋಜನೆಯೊಳಗೆ ಕಾವೇರಿ ನದಿಯ ನೀರನ್ನೆಲ್ಲಾ ನಾವು ಉಪಯೋಗಮಾಡಿಕೊಳ್ಳಲೇಬೇಕು. ಆದರೆ ಈಗಾಗಲೇ ಹಾರಂಗಿ, ಕಂಬದಕಡ ಇವುಗಳ ಪ್ಲಾನ್ ಅನೇಕವೇಳೆ ಬದಲಾವಣೆಯಾಗಿದೆ, ಆದರೆ ಇವುಗಳನ್ನು ಆದಷ್ಟೂ ಎತ್ತರದಲ್ಲಿ ಕಟ್ಟಬೇಕು. ಅಲ್ಲಿಂದ ತಗ್ಗಿಗೆ ನೀರು ಹರಿಯುವಂತೆ ಮಾಡಬೇಕು. ಇಂಥಾ ಯೋಜನೆಗಳಿಂದಲೇ ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆ ಮಾಡುವುದಕ್ಕೆ ಸಾಧ್ಯ. ನಮ್ಮ ರಾಜ್ಯದಲ್ಲಿ ಇಂಥಾ ಯೋಜನೆಗಳನ್ನು ಹೆಚ್ಚು ಹೆಚ್ಚು ಮಾಡಿದರೆ ನಾವು ಇಡೀ ಇಂಡಿಯಾಕ್ಕೇ ಆಹಾರ ಸಾಮಗ್ರಿಗಳನ್ನು ಸರಬರಾಯಿಮಾಡಬಹುದು. ಅಂಥಾ ಯೋಜನೆಗಳನ್ನು ನಾವಿಲ್ಲಿ ನಿರ್ಮಾಣಮಾಡಬೇಕಾಗಿದೆ. ಈ ಕಾರ್ಯವನ್ನು ನಾವು ಯಶಸ್ವಿಗೊಳಿಸಬೇಕಾದರೆ ಇಲ್ಲಿ ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ನಿರ್ಮಿಸಬೇಕಾಗುವುದು. ನೀರಾವರಿ ಬೆಳೆಗಳಿಗೆ ಫರ್ಟಿಲೈಜರ್ಸ್‌ನ್ನು ತಯಾರಿಸಲು ಫರ್ಟಿಲೈಜರ್ಸ್ ಫ್ಯಾಕ್ಟರಿಗಳನ್ನು, ವಿದ್ಯುಚ್ಛಕ್ತಿ ಫ್ಯಾಕ್ಟರಿಗಳನ್ನು ಹೀಗೆಲ್ಲಾ ಅನೇಕ ಫ್ಯಾಕ್ಟರಿಗಳನ್ನು ಸರ್ಕಾರದವರು ಧೀರೋದ್ದಾತ ರೀತಿಯಲ್ಲಿ ತೆರೆಯಬೇಕಾಗುವುದು. ನಾವು ಇಷ್ಟೆಲ್ಲವನ್ನೂ ಸಾಧಿಸಬೇಕಾಗಿದ್ದರೆ ಆ ಸಮಾಜವಾದದ ತತ್ವಗಳೇನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕು. ಆದರೆ ಬಾಯಿನಲ್ಲಿ ಸುಮ್ಮನೆ ಅರ್ಥವಿಲ್ಲದ ಮಾತುಗಳನ್ನಾಡಿದರೆ ಪ್ರಯೋಜನವಿಲ್ಲ. ನಿಜವಾದ ಸಮಾಜವಾದ ತತ್ವಗಳೇನೆಂಬುದನ್ನು ತಿಳಿಯದೆ ಕೆಲವರು ಮಾತನಾಡುತ್ತಿರುವುದನ್ನು ನಾನು ಕೇಳಿದ್ದೇನೆ. ಈ ವಿಚಾರದಲ್ಲಿ ಈ ಸಭೆಯ ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಯಾವತ್ತಿನಂತೆ ಅವರು ಮಾಡಿದ್ದನ್ನೇ ಮಾಡುತ್ತಿದ್ದಾರೆ. ಇಂಥಾ ಒಂದು ತಾತ್ಸಾರ ಮನೋಭಾವನೆಯಿದ್ದರೆ ಇದರಿಂದ ಹಣ ವ್ಯರ್ಥಾ ಪೋಲಾಗುವುದೊಂದೇ ಅಲ್ಲ, ಇದರಿಂದ ಕೆಲಸಗಳೂ ಕೂಡ ಆಗುವುದಿಲ್ಲ. ಆದರೆ ನಮ್ಮ ಮಂತ್ರಿಗಳು ಫೈನಾನ್‌ಷಿಯಲ್ ಟಾರ್ಗೆಟ್ಟನ್ನು ಮುಟ್ಟಿದ್ದರೂ ಫಿಜಿಕಲ್ ಟಾರ್ಗೆಟ್ಟನ್ನಿನ್ನೂ ಮುಟ್ಟಿಲ್ಲವೆಂದು ಅವರೇ ಹೇಳಿದ್ದಾರೆ. ಈ ಅಂಶವನ್ನು ರಾಜ್ಯ

(ಶ್ರೀ ಎಂ. ವಿ. ದೇವ್)

ಪಾಲರ ಭಾಷಣದಿಂದ ಹಿಡಿದು ಎಲ್ಲಾ ಭಾಷಣಗಳಲ್ಲೂ ಸೇರಿಸಿ ಹೇಳಿದ್ದಾರೆ. ಯಾವಾಗ ಈ ಅಂಶ ಸರ್ಕಾರದವರಿಗೆ ತಿಳಿಯಿತೋ ಆಗ ಕೂಡಲೇ ಅವರೇಕೆ ಎದ್ದು ಕುಳಿತುಕೊಳ್ಳಲಿಲ್ಲ? ಈ ವಿಚಾರವನ್ನು ನಾನು ಒಂದೆ ಸಮನೇ ನಿವೃವಾಡದಂತೆ ಆಲೋಚನೆ ಮಾಡುತ್ತಿದ್ದೇನೆ. ಏಕೆಂದರೆ ನನಗೆ ಸಮಾಜವಾದ ತತ್ವದಲ್ಲಿ ವಿಶ್ವಾಸವಿದೆ ಸರ್ಕಾರದವರಿಗಿಲ್ಲ. ಆದುದರಿಂದರೇ ಅವರು ಯೋಚನೆಯಿಲ್ಲದೆ ತೆಪ್ಪಗಿದ್ದಾರೆ. ನನ್ನ ಹತ್ತಿರ ಈ ದಿವಸ ಒಂದು ಕೋಟಿ ರೂಪಾಯಿಗಳಿದ್ದರೆ, ನಾನು ಚೆನ್ನಾಗಿ ತಿಂದುಕೊಂಡಿರಬಹುದು. ಆದರೆ ಅವು ನನ್ನ ಮಕ್ಕಳಿಗೂ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ತಿಳಿದಿದ್ದರೆ ಅವರು ಈವರೆಗೆ ದೇಶದಲ್ಲಿ ಬೇಕಾದಷ್ಟು ನೀರಾವರಿ ಯೋಜನೆಗಳನ್ನೂ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನೂ ಮಾಡುತ್ತಿದ್ದರು. ಆದರೆ ಈ ದಿವಸ ಸರ್ಕಾರದವರು ಮಾಡಿರತಕ್ಕದ್ದು, ಯಾರಿಗೆ ನೋವುಂಟು ಮಾಡುವುದಿಲ್ಲ ಎಂದರೆ ಸಾಹುಕಾರರಿಗೆ ಮಾತ್ರ ಈ ದಿವಸ ನೋವಿಲ್ಲ. ಇನ್ನುಳಿದವರಿಗೆಲ್ಲಾ ತುಂಬಾ ನೋವಾಗಿದೆ. ಇದರಿಂದ ದೇಶವಲ್ಲ ಒಂದು ತೀವ್ರತಮವಾದ ಆರ್ಥಿಕಾಭಿವೃದ್ಧಿಗೆ ಧಕ್ಕೆ ಬಂದಿದೆ. ಈ ವಿಚಾರದಲ್ಲಿ ಇಲ್ಲಿಯವರೆಗೂ ಸರ್ಕಾರದವರು ಆಳವಾಗಿ ಆಲೋಚನೆ ಮಾಡಿಲ್ಲ, ಆದುದರಿಂದಲೇ ಇವರು ಅರ್ಥಹೀನವಾದ ಕೆಲಸಗಳನ್ನು ಮಾಡಿದ್ದಾರೆಂದು ನನಗೆ ಅನಿಸುತ್ತಿದೆ. ಸರ್ಕಾರದವರು ಹೀಗೆ ಒಬ್ಬರಿಗೆ ಅನುಕೂಲರಾಗಿ ಇನ್ನುಳಿದವರಿಗೆಲ್ಲಾ ಪೀಡೆಯಾಗುವುದರ ಬದಲು ಇವರು ಇಡೀ ದೇಶದಲ್ಲಿ ಐಶ್ವರ್ಯ ತುಂಬಿ ತುಳುಕುವಂತೆ ಮಾಡಬೇಕೆಂದು ಹೇಳುತ್ತೇನೆ. ಹೀಗೆ ಇವರು ಶಾಂತ ರೀತಿಯಿಂದ ಸಮಾಜೋದ್ಧಾರ ಮಾಡದಿದ್ದರೆ ಅದು ಕ್ರಾಂತಿಯಿಂದಲಾದರೂ ಅದೇ ಆಗುತ್ತದೆ. ಈ ಕೆಲಸವನ್ನು ಇಲಾಖೆಗಳ ಮೂಲಕ ಮಾಡುವುದಕ್ಕಾಗುವುದಿಲ್ಲ. ಇದನ್ನು ಒಂದು ಟೌನ್‌ಷಿಪ್ ಮೂಲಕ ಸಾಧಿಸಬೇಕಾಗಿದೆ. ಎಲ್ಲರೂ ಬಾಯಿನಲ್ಲಿ ಜಾತೀಯತೆಯನ್ನು ಮರೆಯಬೇಕೆಂದು ಹೇಳತಕ್ಕದ್ದೇ ಅವರಿಗೆಲ್ಲಾ ಅಂಥಾ ಒಂದು ಆತ್ಮೀಯಯಿಂದ ಆ ಮಾತನ್ನು ಹೇಳಿದ್ದೇ ಆಗಿದ್ದಲ್ಲಿ ಆ ಕಾರ್ಯವನ್ನು ಈ ಟೌನ್‌ಷಿಪ್‌ಗಳಲ್ಲಿ ಸುಲಭವಾಗಿ ಸಾಧಿಸಬಹುದು. ಇಲ್ಲಿ ಎಲ್ಲಾ ಕೋಮಿನವರನ್ನೂ ತುಂಬಹುದು. ಇದನ್ನು ಒಂದು ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡಬೇಕು. ಆದರೆ ಆ ವಾರ್ ಫುಟಿಂಗೆಂದರೇನು ಎಂಬುದೇ ಇವರಿಗೆ ಗೊತ್ತಿಲ್ಲ.

ಈಗ ಒಬ್ಬ ಸೋಲ್ಜರ್ ಇರುತ್ತಾನೆ. ಅವನನ್ನು ಎಲ್ಲಿಂದ ಎಲ್ಲಿಗೆಬೇಕಾದರೂ ವರ್ಗ ಮಾಡಬಹುದು. ಅವನೊಬ್ಬನ ವರ್ಗವಾಯಿತೆಂದರೆ ಅವನ ಹಿಂದೆ—ಕುಕ್ಸ್ ಸಮೇತ ಎಲ್ಲರಿಗೂ ವರ್ಗವೇ. ಇಂಥಾ ಒಂದು ಖಾಯಂ ಆದ ಪದ್ಧತಿಯ ಪ್ರಕಾರ ಕೆಲಸ ಮಾಡಿದರೆ ಸಮಾಜವಾದದ ತತ್ವಗಳು ಬೇರುಬಿಟ್ಟು ಇಡೀ ದೇಶಕ್ಕೆಲ್ಲಾ ಅನುಕೂಲವಾಗುತ್ತದೆ. ನಾವು ಇನ್ನೂ ಆ ಹಳೆಯ ಪದ್ಧತಿಯಲ್ಲೇ ಕೆಲಸ ಮಾಡುತ್ತಾ ಹೋದರೆ ನಾವು ಖಂಡಿತ ಏಳಿಗ್ಗೆ ಬರಲಾರೆವು. ಈ ದಿವಸ ಈ ರೀತಿಯಾಗಿ ನೀವು ಕಾರ್ಯ ಸಾಧನೆಮಾಡದಿದ್ದರೆ ನೀವು ಇಂದು ಅಧಿಕಾರ ಸ್ಥಾನದಲ್ಲೇ ಇರಲೀ ಅಥವಾ ಚಪ್ರಾಸಿಸ್ಥಾನದಲ್ಲೇ ಇರಲಿ ನಿಮಗೆ ಕೆಟ್ಟ ಹೆಸರು ತಪ್ಪುವುದಿಲ್ಲ. ಒಳ್ಳೆಯ ಹೆಸರು ಬರುವುದಿಲ್ಲ. ಕಾವೇರಿ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಈ ವರೆಗೆ ಬೇಕಾದಷ್ಟು ಮಾನಾಮೇಷಗಳು ನಡೆದಿವೆ. ಆದಕಾಗೇ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯೊಳಗೇ ಈ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗಿಸಬೇಕಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರದವರಿಂದ ಹೆಚ್ಚಿನ ಹಣವನ್ನು ಪಡೆಯಲು ಇಲ್ಲಿ ಅನೇಕ ಸಲಹೆಗಳನ್ನು ಕೊಡಲಾಗಿದೆ. ಇಲ್ಲಿ ನಾವು ಕೊಟ್ಟಿರತಕ್ಕ ಸಲಹೆಗಳನ್ನೆಲ್ಲಾ ವಿಮರ್ಶೆಮಾಡಿ ಸರ್ಕಾರದವರು ಒಂದು ಸೂಕ್ತ ಕಾರ್ಯಕ್ರಮವನ್ನು ಬೇಗ ಕೈಗೊಳ್ಳಬೇಕಾಗಿದೆ. ನಾನು ಮೊದಲಿಂದಲೂ ಆ ಹೇಮಾವತಿ ನದಿಯ ಅಣೆಕಟ್ಟನ್ನು ಸ್ವಲ್ಪ ಎತ್ತರವಾದ ಸ್ಥಳದಲ್ಲೇ ಕಟ್ಟಬೇಕೆಂದು ಹೇಳುತ್ತಿದ್ದೇನೆ. ಆ ರೀತಿ ಮಾಡಿದರೆ ನನ್ನ ಗ್ರಾಮವಾದ ಗುಬ್ಬಿ ತಾಲ್ಲೂಕಿನಲ್ಲಿರತಕ್ಕ ಚಿಕ್ಕನೆಟ್ಟಗುಂಟೆ ಗ್ರಾಮಕ್ಕೆ ನೀರು ದೊರೆಯುತ್ತದೆ. ಅಲ್ಲಿ ನನಗೊಬ್ಬನಿಗೇ ಮೂರುಮತ್ತೊಂದೆ ಕೆರೆಜಮೀನಿರುವುದು. ನಾನು ವಿದ್ಯವನ್ನೂ ಕಲಿತೆ, ಪ್ರಪಂಚವನ್ನೂ ತಿರುಗಿದೆ, ಆದರೆ ಈಗ ನಾನಿರತಕ್ಕ ನನ್ನ ಸ್ವಗ್ರಾಮದಲ್ಲಿ ಎತ್ತ ಸುತ್ತ ನೋಡಿದರೂ ಒಬ್ಬನಾದರೂ ಸರಿಯಾದ ಕಂಪ್ಯಾನಿಯನ್ ಇಲ್ಲ. ಮಾಡುವುದೇನು! ಅಲ್ಲಿರತಕ್ಕವರಿಗೆ ತಿನ್ನಲು ಅನ್ನವಿಲ್ಲ, ಉಡುವುದಕ್ಕೆ ಬಟ್ಟೆಯಿಲ್ಲ, ಅಂಥ ಗರೀಬರು ಅಲ್ಲಿದ್ದಾರೆ. ನಾನು ಅಲ್ಲಿ ಯಾವಾಗಲೂ ಬಳಿತಿರತಕ್ಕ ಆಡಕೆಯನ್ನಗಿಯತಕ್ಕದ್ದೇ ನನ್ನ ಕೆಲಸವಾಗಿದೆ. ಅಲ್ಲಿ ಸ್ವಲ್ಪ ಮಾನವೀಯತೆಯಿರತಕ್ಕಂಥ ಮನುಷ್ಯ ಒಬ್ಬ ಏನು ಮಾಡುವುದು?

5 P.M.

ನಾನು ಹೇಮಾವತಿ ಯೋಜನೆ ಬರಬೇಕು ಎಂದು ಹೇಳುವಾಗ ನಮ್ಮ ಹಳ್ಳಿಗೂ ನೀರು ಬರುವುದೇ ಎಂದು ಏಕೆ ಹೇಳುತ್ತಿದ್ದಾರೋ ಗೊತ್ತಿಲ್ಲ. ನಾನು ನನ್ನ ಸ್ವಂತ ವಿಚಾರ ಹೇಳುತ್ತಾ ಇಲ್ಲ. ದೊಡ್ಡ ಕಟ್ಟೆ ಕಟ್ಟಿ ಬೇರೆ ಕೆರೆಗಳಿಗೆ ಕಾಲುವೆಗಳಿಂದ ನೀರು ತೆಗೆದುಕೊಂಡು ಹೋಗಿ ಸಣ್ಣ ಕಾಲುವೆಗಳನ್ನು ಕಟ್ಟಬೇಕೆಂದು ಹೇಳುತ್ತಾ ಇಲ್ಲ. ಒಂದು ದೊಡ್ಡ ಕಾಲುವೆ ಮಾಡಬೇಕು. ವರ್ಷಕ್ಕೆರಡು ಸಲ ಕೋಡಿ ಬೀಳುವ ಹಾಗೆ ಮಾಡಿದರೆ ಅಲ್ಲಿಯ ಜನರಿಗೆ ಶಾಶ್ವತವಾಗಿ ಅನುಕೂಲವಾಗುತ್ತದೆ. ಆಹಾರ ಧಾನ್ಯಗಳನ್ನೂ ಕೂಡ ಹೆಚ್ಚಾಗಿ ಬೆಳೆಯಬಹುದು. ಈಗ ಇದಕ್ಕಾಗಿ ಫಾರಿನ್ ಎಕ್ಸ್‌ಚೇಂಜ್ ಖರ್ಚು ಮಾಡುತ್ತಿದ್ದೇವೆಂದು ಅವರು ಹೇಳುತ್ತಾರೆ. ಆಹಾರ ಧಾನ್ಯಗಳನ್ನು ಬೆಳೆಯುತ್ತಾ ಇರುವುದು ಮೈನರ್ ಕೆರೆಗಳಿರುವ ಪ್ರದೇಶಗಳಲ್ಲಿ ಮಾತ್ರ. ಈ ದೃಷ್ಟಿಯಿಂದ ನಾವು ಹೇಳುವುದು ಇಷ್ಟು. ಈ ಇಲಾಖೆಯಲ್ಲಿ ಸಮಾಜ ತತ್ವ ಪ್ರಕಾರ ಕೆಲಸ ಮಾಡಬೇಕು. ಕೊನೆಯದಾಗಿ ಒಂದು ಉದಾಹರಣೆಯನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನನ್ನ ತಂದೆಯವರು ಹೆಚ್ಚು ಕಡಿಮೆ ನನ್ನ ಒಂಭತ್ತನೇ ವಯಸ್ಸಿನಲ್ಲಿ ತೀರಿಹೋದರು. ಅವರು ಗತಿಸಿ ಹೋದಂಥ ಕಾಲದಲ್ಲಿ ಸುಮಾರು 7 ಎಕರೆ ಹೊಲ, 2¾ ಎಕರೆ ಗದ್ದೆ, 1¼ ಎಕರೆ ತೋಟ ಇತ್ತು. ಸಾಲಸೋಲ ಮಾಡಿಕೊಂಡು ಕೂಲಿಯಾಳುಗಳನ್ನು ಕರೆದುಕೊಂಡು ಬಂದು ಕೆಲಸ ಮಾಡಿಸುತ್ತಿದ್ದರು. ಸುಮಾರು 50-60 ಹಳ್ಳಿಗಳಿಂದ ಬರುವ ಅನೇಕ ಕೂಲಿಯಾಳುಗಳು ಅವರ ಹೆಸರನ್ನೇ ಹೇಳುತ್ತಿದ್ದಾರೆ. ಒಳ್ಳೆಯ ಕೂಲಿಯನ್ನು ಕೊಡುತ್ತಿದ್ದರು. ಕೂಲಿ ಕೊಡದೆ ಮನೆಗೆ ಕಳುಹಿಸುತ್ತಿರಲಿಲ್ಲ. ಆ ಕಾಲದಲ್ಲಿ ಒಬ್ಬ ಮನುಷ್ಯ ಕೆಲಸ ಮಾಡಿದರೆ ದಿನಗೂಲಿ 4 ಆಣೆ ಇತ್ತು. ಇವತ್ತಿಗೆ 4-5 ರೂಪಾಯಿಗಳು ಆಗುತ್ತದೆ. ಅಂತಹ ಕಾಲದಲ್ಲೂ ಹಣದುಬ್ಬರವಿದ್ದರೂ ಎಷ್ಟೋ ಕೊಟ್ಟು ಕೆಲಸ ಮಾಡಿಸುತ್ತಿದ್ದರು. ಅಗಾಧವಾಗಿ ಅಲ್ಲಿ ಕೆಲಸ ಮಾಡುತ್ತಿದ್ದುದಲ್ಲದೆ ಕೂಲಿಯಾಳುಗಳು ಹೆಚ್ಚಿನ ಅನುಕೂಲಗಳನ್ನು ಪಡೆಯುತ್ತಿದ್ದರು. ಆ ಕಾಲದಲ್ಲಿಯೇ 55 ಎಕರೆ ಸೀಲಿಂಗ್ ಮಾಡುತ್ತೇವೆಂದು ಹೇಳಿದರು. ಅದು ಇವತ್ತಿನವರೆಗೂ ಆಗಲಿಲ್ಲ. ಹಿಂದೆ ಅಗಾಧವಾದ ಕಾರ್ಯಕ್ಕೆ ಇಳಿಯಬೇಕಾದರೆ ಇಲಾಖೆಯ ಮೂಲಕ ಪರ್ಮನೆಂಟ್ ಅಥವಾ ಸೆಮಿ-ಪರ್ಮನೆಂಟ್ ಬೇಸಿಸ್ ಮೇಲೆ ಕೂಲಿ ಹೆಚ್ಚಿಗೆ ಕೊಟ್ಟು ಜನಗಳನ್ನು ನೇಮಿಸುತ್ತಿದ್ದರು. ಒಬ್ಬ ಕೂಲಿಗೆ ಕೊಟ್ಟ ಕೂಲಿಯಲ್ಲಿ ಅವನ ಹೊಟ್ಟೆ ಬಟ್ಟೆಗೆ ಒಂದು ಭಾಗ ಹೋಗುತ್ತದೆ. ಇನ್ನು ಮಿಕ್ಕದ್ದನ್ನು ಕೂಡಿಹಾಕುತ್ತಾನೆ. ಇದರಲ್ಲಿ ಸಮಾಜವಾದದ ತತ್ವ ಏನೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ಅದರಲ್ಲಿ ಅಚಲವಾದ ನಂಬಿಕೆ ಬರಬೇಕು. ಕೆಲಸ ಮಾಡಿದರೆ ಇಷ್ಟೇ ಪ್ರಯೋಜನವಾಗುತ್ತದೆಂಬುದನ್ನು ತಿಳಿಯಬೇಕು. ನಮಗೆ ಯಥೇಚ್ಛವಾಗಿ ನೀರಾವರಿ ಸೌಕರ್ಯಗಳು ವಿದ್ಯುಚ್ಛಕ್ತಿ, ಬೇಕು ಎಂಬುದಾಗಿ ಜನ ಹೇಳುತ್ತಾರೆ. ಯಾರಾದರೂ ಒಬ್ಬ ಪ್ರಾಮಾಣಿಕನಾದ ಮಂತ್ರಿಗಳು ಇದ್ದರೆಂದರೆ ಇವನು ಬಹಳ ಬುದ್ಧಿವಂತನಾಗಿರಬೇಕು, ಇಲ್ಲದಿದ್ದರೆ ಅವನ ಬಂಧುವರ್ಗ ಅಥವಾ ಅವನ ಹತ್ತಿರ ಇರುವವರು ಹೇಳಿದ ರೀತಿಯಲ್ಲಿ ಹೋಗುತ್ತಾನೆಂದು ಜನಗಳ ಮನಸ್ಸಿನಲ್ಲಿ ಬರುತ್ತದೆ. ನಾನು ಹೇಳುವುದಿಷ್ಟೆ. ಅಧಿಕಾರಕ್ಕೆ ಇವರು ಏಕೆ ಕಚ್ಚಿಕೊಳ್ಳಬೇಕು. ಇಲ್ಲಿರತಕ್ಕ ಒಬ್ಬ ಮಂತ್ರಿಯಾಗಲೀ ಅಥವಾ ಮಾನ್ಯ ಸದಸ್ಯರು ಯಾರೇ ಆಗಲೀ ಅವರಿಗೆ ಒಂದು ವಿಧದಲ್ಲಿ ಅಧಿಕಾರದಲ್ಲಿ ಕೂತುಕೊಳ್ಳಬೇಕೆಂಬ ಮನಸ್ಸು ಇದ್ದೇಇರುತ್ತೆ. ಇದರಿಂದ ಕೆಲವರಿಗೆ ಹೊಟ್ಟೆ ಉರಿಯುಂಟಾಗುತ್ತಾ ಇರುತ್ತದೆ. ಆರಿಸಿ ಬಂದವರಲ್ಲಿ ಕೆಲವರು ಮಂತ್ರಿಗಳಾಗಿದ್ದಾರೆ. ಕೆಲವರು ಈ ಕಡೆ ಇದ್ದಾರೆ. ಕೆಲವರು ಆ ಕಡೆ ಇದ್ದಾರೆ. ಪ್ರಾಮಾಣಿಕವಾಗಿ ನಿಮಗೆ ನಿರ್ದಿಷ್ಟವಾಗಿ ಖಚಿತವಾಗಿ ಸಲಹೆಗಳನ್ನು ನಾವು ಕೊಟ್ಟಿದ್ದೇವೆ. ಅವೆಲ್ಲವನ್ನೂ ನಿಮ್ಮ ಸುಬುದ್ಧಿಗೆ ಇನ್ನೂ ತೆಗೆದುಕೊಂಡಿಲ್ಲ. ನಿಮ್ಮ ತಪ್ಪುಗಳು ಏನಿವೆ ಎಂಬುದನ್ನು ಹೇಳುತ್ತಲೇ ಇದ್ದೇವೆ. ಅವರು ಅದನ್ನು ಯೋಚನೆಮಾಡಿ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ ಸಮಾಜಧ್ಯೇಯವನ್ನರಿತು ಸಮಾಜವನ್ನು ಎತ್ತುವುದಕ್ಕೆ ಪ್ರಯತ್ನಪಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಇನ್ನೊಂದು ಉದಾಹರಣೆ. ಲಕ್ಕವಳ್ಳಿ ವಿಷಯ. ಅಲ್ಲಿಗೆ ಬೇಕಾದಷ್ಟು ಇಂಜನಿಯರುಗಳನ್ನು ಹಾಕಿದ್ದಾರೆ. ಬೇಕಾದಷ್ಟು ಮೆಷಿನರಿಗಳು ಇರುತ್ತವೆ. ಆದರೂ ಸರಿಯಾಗಿ ಕೆಲಸ ಕಾರ್ಯಗಳು ಆಗುತ್ತಾ ಇಲ್ಲ. ವರ್ಷವೆಲ್ಲಾ ಕೆಲಸವಿಲ್ಲದೆ ಅವರಿಗೆ ಸಂಬಳ ಕೊಡುತ್ತಿದ್ದಾರೆ. "ಕೂತು ತಿನ್ನುವವನಿಗೆ ಕುಡಿಕೆ ಹಣ ಎಂದಿಗೂ ಸಾಧ್ಯವಿಲ್ಲ" ವೆಂದು ಹೇಳಿದ ಹಾಗಾಗುತ್ತದೆ. ನಾನು ಸಮಾಜವಾದ ತತ್ವಕ್ಕೆ ವಿರೋಧ ಬಯಸುವವನಲ್ಲ. ಕ್ಯೂಬಾದಲ್ಲಿ ಕ್ರಾಂತಿಯಾಯಿತು ಎಂಬುದು ತಮಗೆ ಗೊತ್ತಿದೆ. ನಿಜವಾಗಿ ಕನ್ನಡ ಜನತೆ ಸುಮ್ಮನಿರುವುದಿಲ್ಲ. ಈಗ ಇವರು ತಮ್ಮ ಮುಂದಿರುವ ಅನೇಕ ಸಮಸ್ಯೆಗಳನ್ನು ಸಾಧಿಸುವುದಕ್ಕೆ ಹೊರಟಿದ್ದಾರೆ. ಕಷ್ಟಪಟ್ಟು ಕೆಲಸಮಾಡಿದರೆ, ಪ್ರತಿಯೊಬ್ಬ ಮನುಷ್ಯನೂ ಕಾಲಕ್ರಮೇಣ ಬಹಳ ಕಡಿಮೆ ಕಾಲದಲ್ಲಿ ಐಶ್ವರ್ಯವಂತನಾಗಿ, ವಿದ್ಯಾ

(ಶ್ರೀ ಎಂ. ವಿ. ದೇವ್)

ವಂತನಾಗಿ, ಸುಸಂಸ್ಕೃತನಾಗುತ್ತಾನೆ. ಅದೇ ರೀತಿಯಾಗಿ ಜಾತ್ಯಾತೀತ ರಾಷ್ಟ್ರವೂ ಸಹ ನಿರ್ಮಾಣವಾಗುತ್ತದೆ. ರಕ್ತಪಾತವಾಗುವ ಸಂದರ್ಭ ಬಂದರೂ ಧೈರ್ಯವಾಗಿ ಹೋರಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವಾಗ ಸರ್ಕಾರದವರು ಈ ವಿಚಾರವನ್ನು ದೀರ್ಘವಾಗಿ ಯೋಚನೆ ಮಾಡಬೇಕು. ಇಲ್ಲಿ ಸಣ್ಣ ಸಣ್ಣ ಮಂತ್ರಿಗಳು ಕೂತಿದ್ದಾರೆ. ಅವರೆಲ್ಲರೂ ಧೈರ್ಯ ತೆಗೆದುಕೊಂಡು ಯಾರ್ಯಾರು ಇಲ್ಲಿ ಬಂದಿಲ್ಲವೋ ಅವರಿಗೆಲ್ಲಾ ಹೇಳಿ, ನಾನು ಹೇಳುವುದು ನನ್ನ ಕರ್ತವ್ಯವೆಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಇಷ್ಟು ಸಾವಧಾನವಾಗಿ ನನ್ನ ಭಾಷಣವನ್ನು ಕೇಳಿದ್ದಕ್ಕೆ ನಾನು ಅವರೆಲ್ಲರಿಗೂ ಮತ್ತು ನನಗೆ ಇಷ್ಟುಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ ಶ್ರೀಮಾನ್ ದೇವೇಗೌಡರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯದ ವಿಷಯದಲ್ಲಿ ನನಗೆ ತಿಳಿದ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ತರಲು ಅವಕಾಶವನ್ನು ತೆಗೆದುಕೊಂಡು ನಿಂತಿದ್ದೇನೆ. ಅದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈ ಯೋಜನೆಯ ಬಗ್ಗೆ ನಾವೆಲ್ಲರೂ ಕೂಡ ಗಮನದಲ್ಲಿ ಇಟ್ಟುಕೊಳ್ಳಬೇಕಾಗಿರತಕ್ಕದ್ದು ಮುಖ್ಯವಾಗಿ ಮೈಸೂರು ಮತ್ತು ಮದ್ರಾಸ್ ರಾಜ್ಯಗಳ ನಡುವೆ ಆಗಿರತಕ್ಕ 1924ನೇ ಇಸವಿಯ ಒಪ್ಪಂದ. ಮತ್ತು 1974ನೇ ಇಸವಿಯ ಅವಧಿಯಲ್ಲಿ ಮೈಸೂರು ರಾಜ್ಯಕ್ಕೆ 1924ನೇ ಇಸವಿಯ ಅಗ್ರೀಮೆಂಟ್ ಪ್ರಕಾರ ಇರತಕ್ಕ ಹಕ್ಕನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳದೆ ಹೋದರೆ ಆಗತಕ್ಕಂಥ ಪರಿಣಾಮ ಮತ್ತು ಮುಂದೆ ಹೊಸ ಮೈಸೂರಿಗೆ ಎಷ್ಟು ಹಕ್ಕು ಉಳಿಯುತ್ತದೆ ಎಂಬುದನ್ನು ಈ ಸಭೆ ತೀವ್ರವಾಗಿ ಗಮನಿಸಬೇಕಾಗಿದೆ. ಇವೊತ್ತು ಕಾವೇರಿ ನದಿಯು ಅಘಾದವಾದ ಪ್ರಮಾಣದಲ್ಲಿ ನೀರನ್ನು ತರತಕ್ಕ ನದಿಗಳನ್ನು ಹೊಂದಿರತಕ್ಕದ್ದಾಗಿದೆ. ಈ ನೀರನ್ನೆಲ್ಲಾ ನಾವು ಉಪಯೋಗಿಸಿಕೊಂಡಿದ್ದೇ ಆದರೆ ಮೈಸೂರು ಆಹಾರದ ವಿಷಯದಲ್ಲಾಗಲೀ ಯಾವ ವ್ಯವಸಾಯದ ಉತ್ಪನ್ನದ ವಿಷಯದಲ್ಲಾಗಲೀ ಹೆಚ್ಚುವರಿ ಬರುವಂತೆ ಮಾಡುವುದಕ್ಕೆ ಅವಕಾಶವಿದೆ ಎನ್ನುವುದನ್ನ ಚೆನ್ನಾಗಿ ಮನಗಾಣಬಹುದು. ಇದರಲ್ಲಿ ಬರತಕ್ಕ ನೀರು, ಮೈಸೂರಿನ ಅಗ್ರಿಮೆಂಟಿನಲ್ಲಿರತಕ್ಕ ಹಕ್ಕು ಇವುಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳತಕ್ಕ ದೃಷ್ಟಿಯಿಂದ ಈ ಸಭೆಯ ಮುಂದೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸತಕ್ಕದ್ದು ನನ್ನ ಕರ್ತವ್ಯವಾಗಿದೆ. ಈ ವ್ಯಾಲಿಯಲ್ಲಿ ಆಗಬೇಕಾದ ಎಲ್ಲಾ ಯೋಜನೆಗಳನ್ನೂ ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗುತ್ತದೆ. ಯಾವ ಕೆರೆ, ಪಿಕ್-ಅಪ್, ಯಾವುದೇ ರೀತಿಯಾಗಿರತಕ್ಕ ನೀರಾವರಿ ಯೋಜನೆಗಳನ್ನೂ ಲಿಫ್ಟ್ ಇರಿಗೇಷನ್ ಯಾವ ಯಾವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿದೆ, ಮೇಜರ್ ಟ್ಯಾಂಕ್, ಮೈನರ್ ಟ್ಯಾಂಕ್, ಲಿಫ್ಟ್ ಇರಿಗೇಷನ್ ಪಿಕಪ್ ಇವುಗಳನ್ನೆಲ್ಲಾ ಸರ್ವೆ ಮಾಡಿಸಿ ಪ್ರತಿಯೊಂದು ಯೋಜನೆಯ ಕೆಳಗಡೆ ಎಷ್ಟೆಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎನ್ನತಕ್ಕ ಸಮಗ್ರವಾಗಿರತಕ್ಕ ಯೋಜನೆಯನ್ನು ಅತ್ಯಲ್ಪ ಕಾಲದಲ್ಲಿಯೇ ತಯಾರುಮಾಡತಕ್ಕ ಕಾಲ ಈಗ ಬಂದಿದೆ. ಈ ಯೋಜನೆಗಳನ್ನೂ ತಯಾರು ಮಾಡಿ ರಾಜ್ಯ ಸರ್ಕಾರದವರು ಇದಕ್ಕೆ ಬೇಕಾದ ಹಣಕಾಸನ್ನು ಕೇಂದ್ರ ಸರ್ಕಾರದವರಿಂದ ಒದಗಿಸಿಕೊಂಡು, ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿನವರಿಂದ ಟೆಕ್ನಿಕಲ್ ಸ್ಯಾಂಕ್ಷನ್ ತೆಗೆದುಕೊಳ್ಳುವುದು ಮತ್ತು ಪ್ಲಾನಿಂಗ್ ಕಮಿಷನ್ನಿನವರಿಂದ ಈ ಯೋಜನೆಗೆ ಅನುಮತಿಯನ್ನು ಪಡೆದುಕೊಳ್ಳುವುದು ಇವುಗಳನ್ನೆಲ್ಲಾ ಮಾಡಿಕೊಳ್ಳಬೇಕಾದರೆ ಅನೇಕ ಕಾಲ ಬೇಕಾಗುತ್ತದೆ. ಅವುಗಳನ್ನೆಲ್ಲಾ ಒದಗಿಸಿಕೊಂಡು ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ನಮ್ಮ ಪಾಲಿನ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ನಮಗೆ ಇನ್ನು ಇರತಕ್ಕದ್ದು 10 ವರ್ಷಗಳ ಅವಧಿ. ಆದ್ದರಿಂದ ಆದಷ್ಟು ತೀವ್ರವಾಗಿ ವಾರ್ ಎಮರ್ಜೆನ್ಸಿ ಎಂದು ಈ ಯೋಜನೆಗಳನ್ನು ಸರ್ವೆ ನಡಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಮಾಡತಕ್ಕದ್ದು ಅಗತ್ಯ ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯದಿಂದ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಯೋಜನೆಯ ಸಂಬಂಧದಲ್ಲಿ ಮೊನ್ನೆತಾನೆ ಒಂದು ಪ್ರಶ್ನೆ ಈ ಸಭೆಯ ಮುಂದೆ ಒಂದು ಚರ್ಚೆಯಾದಂತಹ ಕಾಲದಲ್ಲಿ ಕೂಡ ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಕಾವೇರಿ ಮತ್ತು ಯಗಚಿ ನದಿಗಳಿಂದ ವೇದಾವತಿ ಕಣಿವೆಗೆ ನೀರು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ, ಅದನ್ನು ಸರ್ವೆ ಮಾಡಿಸುತ್ತಿದ್ದಾರೆಂದು ಅಪ್ಪಣೆ ಕೊಡಿಸಿದ್ದಾರೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಒಂದು ಕಣಿವೆಯಿಂದ ಇನ್ನೊಂದು ಕಣಿವೆಗೆ ನೀರನ್ನು ತೆಗೆದುಕೊಳ್ಳತಕ್ಕದ್ದು ಸರಿಯಲ್ಲ ಎಂದು ಹೇಳಿದರು. ಮತ್ತು ಸಂಬಂಧಪಟ್ಟ ಕಣಿವೆಯ ಜನಗಳಿಗೆ ನೀರು ಪೂರ್ಣವಾಗಿ ಉಪಯೋಗವಾಗದೆ ಅವರನ್ನು ಉಪವಾಸವಿಟ್ಟು ಬೇರೆಯವರ ಹೊಟ್ಟೆಯನ್ನು ತುಂಬಿಸುವುದಕ್ಕೆ ನೀರನ್ನು

ತೆಗೆದುಕೊಂಡು ಹೋಗತಕ್ಕದ್ದು ಸರಿಯಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈಗ ನನಗನ್ನಿಸುತ್ತದೆ ಈ ಕಾಲದಲ್ಲಿ ನಾವು ಒಂದು ಜಿಜ್ಞಾಸೆ, ಒಂದು ವಾಗ್ವಾದವನ್ನು ನಮ್ಮಲ್ಲಿ ಇಟ್ಟುಕೊಳ್ಳುವ ಪರಿಸ್ಥಿತಿಗೆ ನಾವು ಬರಬಾರದು. ಸಮಗ್ರವಾದ ಒಂದು ಸರ್ವೆ ನಡೆಯಲಿ ಅದೇ ವ್ಯಾಲಿಯಲ್ಲಿರತಕ್ಕ ಜನರಿಗೆ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅದನ್ನು ಉಪಯೋಗಿಸಿಕೊಂಡು ಉಳಿದ ನೀರನ್ನು ಮದ್ರಾಸ್ ರಾಜ್ಯಕ್ಕೆ ಬಿಟ್ಟುಕೊಡದೆ, ಅದನ್ನು ನಮ್ಮ ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಹಾಸನಾ ಡಿಸ್ಟ್ರಿಕ್ಟಿನಲ್ಲಿ ವೇದಾವತಿ ವ್ಯಾಲಿಯಲ್ಲಿ ಕೆಲವು ಭಾಗ ಬರುತ್ತದೆ. ಅದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಆದ್ದರಿಂದ ಹಾಸನ ಡಿಸ್ಟ್ರಿಕ್ಟಿಗೆ ಯಗಚಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ಅಧಿಕಾರ ಇದೆ. ಅವರು ಅದನ್ನು ಉಪಯೋಗಿಸಿಕೊಳ್ಳಬಹುದು. ಇದರ ಬಗ್ಗೆ ನಾವು ವಾಗ್ವಾದಗಳಿಗೆ ನಿಲ್ಲುವುದು ಬೇಡ. ಮೈಸೂರು ದೇಶದ ಎಲ್ಲಾ ಪ್ರತಿನಿಧಿಗಳೂ ಅದಕ್ಕೆ ಬೆಂಬಲವನ್ನು ಕೊಟ್ಟು ಕೇಂದ್ರ ಸರ್ಕಾರದವರೊಡನೆ ಹೊಡೆದಾಡಿ ಹಣಕಾಸನ್ನು ತಂದು ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಏರ್ಪಾಡನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಚರಿತ್ರೆಯ ಒಂದು ಮಾತನ್ನು ಹೇಳುತ್ತೇನೆ. ವಾಣೀವಿಲಾಸ ಕೆರೆಯನ್ನು ಕಟ್ಟುವಾಗ ಈಗ ಆಗಿರತಕ್ಕ ಕೆರೆಯ ನಿರ್ಮಾಣದಲ್ಲಿ ಕಾಲುವೆಯನ್ನು ಹೊಸದಾಗಿ ತೆಗೆಯುವಾಗ ಒಂದು ಲಕ್ಷ ಎಕರೆಗೆ ನೀರನ್ನು ಕೊಡುವ ಅವಕಾಶವಿದೆ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಅದನ್ನು ನಡೆಸಿದರು. ಆಮೇಲೆ ವಾಟರ್ ಗೇಜಿಂಗ್ ಮಾಡಿ ಸಾಕಷ್ಟು ನೀರು ಬರುವುದಿಲ್ಲ ಎಂದು ಅದರ ಅಚ್‌ಕಟ್ ಅನ್ನು ಇಪ್ಪತ್ತೈದು ಸಾವಿರ ಎಕರೆಗೆ ಲಿಮಿಟ್ ಮಾಡಿದರು. ಅದು ಇವೊತ್ತು ನಮ್ಮ ದೇಶದ ಒಂದು ಸ್ವತ್ತಾಗಿದೆ. ದೇಶದ ಒಂದು ಕಣ್ಣಾಗಿದೆ. ಆ ಅಣೆಕಟ್ಟಿನ ಕೆಳಗಡೆ ಇವೊತ್ತು ಸುಲಭವಾಗಿ ನಲವತ್ತು ಐವತ್ತು ಸಾವಿರ ಎಕರೆ ಜಮೀನನ್ನು ಸಾಗಿಗೆ ತರುವುದಕ್ಕೆ ಅವಕಾಶವಿದೆ. ಅದು ದೇಶಕ್ಕೆ ಒಂದು ಆಸ್ತಿಯಾಗಿದೆ. 1918 ರಿಂದ 1925ನೇ ಇಸವಿಯವರೆಗಿನ ಅವಧಿಯಲ್ಲಿ ವಾಣೀವಿಲಾಸ ಚರಿತ್ರೆಯನ್ನು ಬರೆಯುವ ಸಂದರ್ಭದಲ್ಲಿ ಬರೆದಿದ್ದಾರೆ. ಈ ಕೆರೆಗೆ ಬೇರೆ ಯಾವುದಾದರೂ ಒಂದು ನದಿನೀರನ್ನು ತೆಗೆದುಕೊಂಡು ಬರಲೇಬೇಕು ಇಲ್ಲದಿದ್ದರೆ ಇದನ್ನು ಉಳಿಸುವುದು ಕಷ್ಟ ಎಂದು ಹೇಳಿದ್ದಾರೆ. ಮತ್ತು ಯಗಚಿ ನದಿಯನ್ನು ಇದಕ್ಕೆ ಡೈವರ್ಟ್ ಮಾಡಬೇಕೆಂದು ಸರ್ವೆ ಮಾಡಿದ್ದಾರೆ. ಅದರ ಬಗ್ಗೆ ಒಂದು ಅಂದಾಜನ್ನು ಕೂಡ ಮಾಡಿ ಒಂದು ಯೂನಿಟ್ ವಾಟರಿಗೆ ಎಷ್ಟು ಎಕರೆ ಭೂಮಿಯನ್ನು ಸಾಗು ಮಾಡಬಹುದು ಎನ್ನುವುದನ್ನು ಕಂಡು ಹಿಡಿದಿದ್ದಾರೆ. ಆವೊತ್ತಿನ ಒಂದು ಟೆಕ್ನಿಕಲ್ ಕ್ಯಾಲ್‌ಕ್ಯುಲೇಷನ್ ಪ್ರಕಾರ ಅದು ಅಷ್ಟು ಲಾಭದಾಯಕವಾಗಿಲ್ಲ. ಅದು ಲಾಭದಾಯಕವಾಗುವ ಕಾಲ ಬಂದಾಗ ಅದನ್ನು ಯೋಚನೆ ಮಾಡೋಣ ಎಂದು ಅದನ್ನು ಮುಂದುವರಿಸಿದ್ದಾರೆ. ಅದನ್ನು ಆವೊತ್ತೇ ಮಾಡಿದ್ದರೆ ಇವೊತ್ತು ಈ ಪ್ರಶ್ನೆ ಉದ್ಭವಿಸುತ್ತಾ ಇರಲಿಲ್ಲ. ದುಡ್ಡಿನ ಅಭಾವ ದೃಷ್ಟಿಯಿಂದಲೂ ಅಲ್ಲಿ ಆಗ ನೀರಾವರಿ ಸಾಕಷ್ಟು ಆಗಿಲ್ಲ ಎನ್ನುವ ದೃಷ್ಟಿಯಿಂದಲೂ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವೊತ್ತಿನ ಸನ್ನಿವೇಶದಲ್ಲಿ ಅಲ್ಲಿಂದ ನೀರನ್ನು ತಂದರೆ ಲಾಭದಾಯಕವಾಗಿ ಆಗುತ್ತದೆ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಇದು ಹಾಸನ ಡಿಸ್ಟ್ರಿಕ್ಟಿನ ಮಾನ್ಯ ಸದಸ್ಯರಿಗೆ ಗೊತ್ತಿದೆ. ಯಗಚಿ ವ್ಯಾಲಿಯಲ್ಲಿ ರಣಗಟ್ಟ ಎಂಬಲ್ಲಿ ಒಡ್ಡನ್ನು ಹಾಕಿ ಇಪ್ಪತ್ತು ಇಪ್ಪತ್ತೈದು ಮೂವತ್ತು ಅಡಿ ಆಳವಿರುವ ಕಾಲುವೆಯನ್ನು ತೆಗೆದಿದ್ದಾರೆ. ಹಳೆ ಬೀಡು ಮತ್ತು ಕಳಸಾಪುರದ ಕೆರೆಗೆ ನೀರನ್ನು ಬಿಡುವುದಕ್ಕೆ ಕಾಲುವೆಯನ್ನು ತೆಗೆದಿದ್ದಾರೆ. ಹಳೇಬೀಡು ಮತ್ತು ಕಳಸಾಪುರದ ಕೆರೆಗಳಿಗೆ ನೀರನ್ನು ಬಿಡುವ ಕೆಲಸದ ಸಂಬಂಧದಲ್ಲಿ ಹೊಯ್ಸಳರ ಕಾಲದಲ್ಲಿಯೇ ಪ್ರಯತ್ನ ನಡೆದಿದೆ. ಆದರೆ ಆ ಕೆಲಸ ಹಾಗೆಯೇ ಉಳಿದಿತ್ತು. ಅದರ ಬಗ್ಗೆ ಸ್ವಲ್ಪ ತಿದ್ದುಪಡಿ ಮಾಡಿ ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಅವಕಾಶವಿದೆ. ಯಗಚಿ ನದಿಯ ನೀರನ್ನು ಉಪಯೋಗ ಮಾಡುವುದಕ್ಕೆ ಅವಕಾಶವಿದೆ. ಅದರ ಬಗ್ಗೆ ಬೇಕಾದರೆ ಟೆಕ್ನಿಕಲ್ ಪರಿಶೀಲನೆ ನಡೆಸಲಿ. ಯಗಚಿ ನದಿಯಲ್ಲಿ ಈಗ ಸಾಕಷ್ಟು ನೀರು ಇದೆಯೇ ಅಥವಾ ಇಲ್ಲವೇ ಎಂಬುದನ್ನು ಯೋಚನೆ ಮಾಡೋಣ. ಅದನ್ನು ಯೋಚನೆ ಮಾಡುವುದಾದರೆ ಯಗಚಿ ನದಿ ಎಲ್ಲಿ ಹುಟ್ಟಿ ಹರಿಯುತ್ತದೆ ಎಂದರೆ ಅರವತ್ತು ಇಂಚಿನಿಂದ ನೂರಇಪ್ಪತ್ತು ಇಂಚಿನವರೆಗೆ ಮಳೆ ಬೀಳುವ ಪ್ರದೇಶದಲ್ಲಿ ಅದು ಹುಟ್ಟಿ ಹರಿಯುತ್ತದೆ. ಸಾಮಾನ್ಯವಾಗಿ ಮಳೆಯ ನೀರಿನಿಂದಲೇ ಬತ್ತವನ್ನು ಬಿತ್ತಿ ಬೆಳೆಯತಕ್ಕ ರೈತಾಪಿ ಜನಗಳು ಅಲ್ಲಿ ಇದ್ದಾರೆ. ಅಂಥದ್ದರಲ್ಲಿ ಹೆಚ್ಚು ನೀರಿನ ಅವಶ್ಯಕತೆ ಅಲ್ಲಿ ಬೀಳುವುದಿಲ್ಲ. ನಾವು ಕೇಳತಕ್ಕ ಸ್ಥಳದಲ್ಲಿ ಮತ್ತು ಅಲ್ಲಿಂದ ಕೆಳಗಡೆ ಬೇಕಾದಷ್ಟು ನೀರು ಉತ್ಪತ್ತಿಯಾಗುತ್ತದೆ. ಅದರಲ್ಲಿ ಕೆಲವು ಭಾಗ ನೀರನ್ನು ನಮ್ಮ ಜಿಲ್ಲೆಯ ಕಡೆಗೆ ತಿರುಗಿಸಿದರೆ ಹಾಸನ ಜಿಲ್ಲೆಯ ಕಾವೇರಿ ಬೇಸಿನ್ನಿನಲ್ಲಿ ಬರತಕ್ಕ ರೈತರಿಗೆಲ್ಲ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ. ಅಭಾವಕ್ಕೆ ಒಳಗಾಗಿರುವ ಪ್ರದೇಶದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ 50-60 ವರ್ಷಗಳ ಹಿಂದೆ ಕಟ್ಟಿರುವ ವಾಣಿವಿಲಾಸ ಸಾಗರದ ಕೆಳಗೆ ಅಭಿ

(ಶ್ರೀ ವಿ. ಮಸಿಯಪ್ಪ)

ವೃದ್ಧಿ ಮಾಡಿ ಸಾಗುವಳಿಗೆ ತರತಕ್ಕ ಲಕ್ಷಾಂತರ ಎಕರೆ ಜಮೀನು ಹಿಂದುಳಿದಿದೆ. ಯಗಚಿ ನೀರು ವೇಸ್ಟ್ ಆಗುವುದನ್ನು ವಾಣಿವಿಲಾಸ ಸಾಗರದ ಕಡೆಗೆ ತಿರುಗಿಸಿದರೆ ವಾಣಿವಿಲಾಸ ಸಾಗರದ ಅಚ್ಚುಕಟ್ಟು ಏನಿದೆ ಅದಕ್ಕೆ ಮಾತ್ರವಲ್ಲದೆ ಅಲ್ಲಿಂದ ಮುಂದಕ್ಕೆ ಸಹ ಆ ನೀರಿನ ಅನುಕೂಲತೆಯುಂಟಾಗಿ ಚಳ್ಳಕೆರೆ ತಾಲ್ಲೂಕಿಗೆ ನೀರಾವರಿ ಸೌಕರ್ಯ ಉಂಟಾಗುತ್ತದೆ. ಚಳ್ಳಕೆರೆ ತಾಲ್ಲೂಕು ಮತ್ತು ಇನ್ನೂ ಕೆಲವು ಭಾಗಗಳು ಶಾಶ್ವತವಾಗಿ ಅಭಾವಕ್ಕೆ ಒಳಗಾಗಿರತಕ್ಕ ಪ್ರದೇಶಗಳು. ಇಲ್ಲಿ 14-15 ಅಂಗುಲಗಳಿಗಿಂತ ಹೆಚ್ಚಾಗಿ ಮಳೆಯಾಗುವುದಿಲ್ಲ. ಇದಲ್ಲದೆ ಮೊಳಕಾಲ್ಮೂರು ತಾಲ್ಲೂಕಿನ ಕೆಲವು ಭಾಗಗಳಿಗೆ ವ್ಯವಸಾಯಕ್ಕೆ ನೀರನ್ನು ಕೊಡಬಹುದು. ನೀರಿನ ಸೌಕರ್ಯ ಹೆಚ್ಚಾಗಿ ಹಳ್ಳಗಳಲ್ಲಿ ನೀರು ಹರಿದರೆ ಬಾವಿಗಳು ತುಂಬಿರುತ್ತವೆ. ಅದರಿಂದ ವ್ಯವಸಾಯಕ್ಕೆ ಬಹಳ ಅನುಕೂಲವಾಗುತ್ತದೆ. ಈಗ ಎಲ್ಲರೂ ಪಂಪ್ ಸೆಟ್ಟುಗಳನ್ನು ಹಾಕಿ ನೀರನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಬಾವಿಗಳು ಫೇಲ್ ಆಗುವ ಪರಿಸ್ಥಿತಿ ಇವೆ. ಹಳ್ಳಿಗಳಲ್ಲಿ ಮತ್ತು ನಾಲೆಗಳಲ್ಲಿ ನೀರು ಹರಿಯವುದಕ್ಕೆ ಬಿಟ್ಟರೆ ಅದರಿಂದ ಬಾವಿಗಳಲ್ಲಿ ಜಲವನತಿ ಹೆಚ್ಚಾಗಿ ವ್ಯವಸಾಯಕ್ಕೆ ಅನುಕೂಲವಾದೀತು ಎಂದು ಬಹಳ ಆಕಾಂಕ್ಷೆಯಿಂದ ಅಲ್ಲಿನ ಜನ, ಸದಾ ಬರಗಾಲಕ್ಕೆ ಒಳಗಾಗಿರುವ ಜನ, ವರ್ಷದಲ್ಲಿ ಎರಡು ಮೂರು ತಿಂಗಳು ಕೂಡ ಗಂಜಿ ಸಿಕ್ಕದೆ ಇರುವ ಜನ ಕಾದುಕೊಂಡಿದ್ದಾರೆ. ಅಮೃತೋಪಾದಿಯಲ್ಲಿ ಗಂಗೆ ಬಂದು ನಮ್ಮ ಪ್ರಾಣವನ್ನು ಉದ್ಧಾರ ಮಾಡುತ್ತದೆ ಎಂದು ಆಕಾಂಕ್ಷೆಯಿಂದ ಕಾದುಕೊಂಡಿರತಕ್ಕ ಜನಗಳ ಮೇಲೆ ಯಾವ ವಿಧವಾದ ಅನ್ಯಥಾ ಭಾವನೆಗಳನ್ನು ತೋರಿಸದೆ, ಅವರೂ ನಮ್ಮ ಸಹೋದರರು, ಅವರು ಬಹಳ ಹಿಂದುಳಿದಿರತಕ್ಕವರು ಮುಂದೆ ಬರಲಿ ಎನ್ನುವ ಭಾವನೆಯಿಂದ ಎಲ್ಲರೂ ಕೂಡ ಈ ಸಮಸ್ಯೆಯನ್ನು ಕನಿಕರ ದೃಷ್ಟಿಯಿಂದ ನೋಡಿ ಅಲ್ಲಿ ಉಳಿಯುತಕ್ಕ ನೀರನ್ನು, ಹೆಚ್ಚಾಗಿತಕ್ಕ ನೀರನ್ನು ನಮ್ಮ ಭಾಗಕ್ಕೆ ಕಳಿಸುವ ಬಗ್ಗೆ ಯಾರೂ ಭಿನ್ನ ಭಾವನೆಗಳನ್ನು ಇಟ್ಟುಕೊಳ್ಳದೆ ಒಮ್ಮನಸ್ಸಿನಿಂದ ಸಹಾಯ ಮಾಡಬೇಕು ಮತ್ತು ಇಂಥ ಯೋಜನೆಗೆ ಬೆಂಬಲ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಲೂರು ಹನುಮಂತಪ್ಪ.—ಯಗಚಿ ನೀರಿನ ವಿಚಾರದಲ್ಲಿ ಸರ್ವೆ ಕೆಲಸ ಆಗುತ್ತಿದೆ.

ಶ್ರೀ ವಿ ಮಸಿಯಪ್ಪ.—ಸರ್ವೆ ಆಗುತ್ತಿದೆ. ಸರ್ಕಾರ ಕೆಲವು ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಆ ಬಗ್ಗೆ ಸರ್ಕಾರಕ್ಕೂ ಮತ್ತು ಮುಖ್ಯ ಮಂತ್ರಿಗಳಿಗೂ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸಲು ಬಹಳ ಸಂತೋಷಪಡುತ್ತೇನೆ.

ನಾನು ನಮ್ಮ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಈ ವಿಷಯ ವಿವಾದಾದ್ಮಕವಾದ ಅಂಶವಾಗದೇ ಇರಲಿ, ಮುಂದೆ ಮದ್ರಾಸ್‌ನೊಡನೆ ವ್ಯವಹಾರ ನಡೆಸತಕ್ಕ ಸಂದರ್ಭ ಇದರಲ್ಲಿ ಬರುವುದರಿಂದ ನಮ್ಮ ನಮ್ಮಲ್ಲಿ ಬೇರೆ ಬೇರೆ ಮಾತುಗಳು ಬರದೆ ಇರಲಿ, ನಮ್ಮಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಬಂದರೆ ಅದನ್ನು ನಾವು ನಮ್ಮೊಳಗೇ ಬಗೆಹರಿಸಿಕೊಳ್ಳೋಣ, ಒಮ್ಮತದಿಂದ ನಾವು ಶ್ರಮಿಸೋಣ ಎಂದು ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

† ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೋಸ್ಕರವಾಗಿ ಸರ್ಕಾರದ ಗಮನವನ್ನು ಸೆಳೆಯುವ ಉದ್ದೇಶದಿಂದ ಶ್ರೀಮಾನ್ ಎಚ್. ಡಿ. ದೇವೇಗೌಡರು ಈ ಒಂದು ನಿರ್ಣಯವನ್ನು ತಂದಿರುವುದಕ್ಕಾಗಿ ಮೊದಲನೆಯದಾಗಿ ಅವರನ್ನು ವಂದಿಸುತ್ತೇನೆ. ಈಗಾಗಲೇ ಕಾವೇರಿ ನದಿ ನೀರನ್ನು ಆದ್ಯತೆಯಿಂದ, ಪ್ರಯಾರಿಟಿ ಬೇಸಿಸ್‌ನಲ್ಲಿ ಏತಕ್ಕೋಸ್ಕರ ಉಪಯೋಗಿಸಿಕೊಳ್ಳಬೇಕು ಎನ್ನುವುದಕ್ಕೆ ಏನು ಕಾರಣವಿದೆ ಎನ್ನುವುದನ್ನೆಲ್ಲ ನನಗಿಂತ ಮುಂಚೆ ಮಾತನಾಡಿರತಕ್ಕ ನನ್ನ ಸ್ನೇಹಿತರು ಸಭೆಯ ಮುಂದೆ ಇಟ್ಟಿದಾರೆ. ಮೈಸೂರಿಗೂ ಮತ್ತು ಮದ್ರಾಸಿಗೂ ಆಗಿರತಕ್ಕ ಒಪ್ಪಂದದ ಪ್ರಕಾರ 1974ರೊಳಗಾಗಿ ಕಾವೇರಿ ನದಿ ನೀರನ್ನು ನಾವು ಉಪಯೋಗಿಸಿಕೊಳ್ಳದೆ ಹೋದರೆ ನಮಗೆ ನೀರು ಖೋತಾ ಆಗುವ ಸಂಭವವಿದೆ ಎಂದು ಅತಿ ವಿಷಾದದಿಂದ ಹೇಳಬೇಕಾಗಿದೆ. ಇದಕ್ಕೋಸ್ಕರವಾಗಿ ಸರ್ಕಾರದವರು ಅತಿ ತ್ವರಿತವಾಗಿ ಈ ನದಿಯ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲೇಬೇಕು. ನಾಲ್ಕನೆಯ ಯೋಜನೆಯ ಒಳಗಾಗಿ ಎಲ್ಲ ನೀರನ್ನೂ ಉಪಯೋಗಿಸಿಕೊಳ್ಳಲೇಬೇಕು ಎಂದು ಒತ್ತಾಯ ಮಾಡುವುದು ಈ ನಿರ್ಣಯದ ಉದ್ದೇಶವಾಗಿದೆ. ಈ ಸಂದರ್ಭದಲ್ಲಿ ನನ್ನ ಕ್ಷೇತ್ರದ ಮತ್ತು ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಶ್ರೀಮಾನ್ ಮಸಿಯಪ್ಪನವರು ಹೇಳಿದ್ದಾರೆ.

ಸ್ವಾಮಿ, ವಾಣಿವಿಲಾಸ ಸಾಗರ ಬಹಳ ದೊಡ್ಡ ಅಣೆಕಟ್ಟೆಯಾಗಿ ಬಹಳ ನೀರನ್ನು ಇಟ್ಟುಕೊಳ್ಳುವ ಕೆಪಾಸಿಟಿಯನ್ನು ಹೊಂದಿದೆ. ಒಂದು ಲಕ್ಷ ಎಕರೆಗೆ ನೀರಾವರಿಗೆ ಬೇಕಾದಷ್ಟು ನೀರನ್ನು ಕೊಡಿಟ್ಟುಕೊಳ್ಳತಕ್ಕ ಕೆಪಾಸಿಟಿ ಇದೆ. ಆದರೆ ಕೇವಲ 25 ಸಾವಿರ ಎಕರೆಗೆ ಮಾತ್ರ ನೀರಿನ ಆಶ್ರಯ

ವಿದೆ. ಅದನ್ನು ಕಟ್ಟುವಾಗಲೇ ಸರ್ ಎಂ ವಿಶ್ವೇಶ್ವರಯ್ಯನವರು ಯಗಚಿ ನದಿ ನೀರನ್ನು ಇದಕ್ಕೆ ಹಾಯಿಸಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದರು. ಇದನ್ನು ಕಾರ್ಯಗತ ಮಾಡದೆ ಹೋದರೆ ಚಿತ್ರದುರ್ಗ ಜಿಲ್ಲೆಗೆ, ಆಗಾಗ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಕ್ಕೆ ಬಹಳ ತೊಂದರೆ ಯಾಗುತ್ತದೆ. ಯಗಚಿ ನದಿ ನೀರು ವಾಣಿವಿಲಾಸ ಸಾಗರಕ್ಕೆ ಬಂದರೆ ನಾವು ಜೀವನ ಮಾಡ ಬಹುದು ಎಂದು ಕೊನೆಯ ಜೀವ ಇಟ್ಟುಕೊಂಡು ಅದರ ಕಡೆ ಬಹಳ ಜನರು ಆಕಾಂಕ್ಷೆಯಿಂದ ನೋಡು ತ್ತಿದ್ದಾರೆ. ಈ ಹಿಂದೆಯೇ ಒಂದು ಹೈಲೆವಲ್ ಚಾನಲ್ ಮಾಡಿ ಒಂದು ಲಕ್ಷ ಎಕರೆ ಹೊಸದಾಗಿ ನೀರಾವರಿ ಮಾಡತಕ್ಕ ಒಂದು ಯೋಜನೆ ಸಿದ್ಧವಾಗಿದೆ. ಸುಮಾರು ಆರು ಕೋಟಿ ರೂಪಾಯಿ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆ. ಶ್ರೀಮಾನ್ ಮಸಿಯಪ್ಪನವರು ಅಭಿಪ್ರಾಯ ಪಟ್ಟ ರೀತಿಯಲ್ಲಿ ಈ ಒಂದು ಯೋಜನೆಯಿಂದ ಹಾಸನ ಡಿಸ್ಟ್ರಿಕ್ಟಿನಲ್ಲಿ ಯಗಚಿ ನದಿ ನೀರನ್ನು ಉಪಯೋಗಿಸಿ ಕೊಳ್ಳತಕ್ಕ ವಿಚಾರದಲ್ಲಿ ಸ್ಥಳೀಕರು ಯಾರು ಗಾಬರಿ ಪಡಬೇಕಾಗಿಲ್ಲ. ಇಂಜಿನಿಯರುಗಳು ಯೋಜನೆಯನ್ನು ಸಿದ್ಧಪಡಿಸಿರುವ ರೀತಿಯಲ್ಲಿ ಆ ಯೋಜನೆಯಲ್ಲಿ ನೂರಕ್ಕೆ 65 ಭಾಗ ನೀರನ್ನು ಅಲ್ಲಿ ಯವರೇ ಉಪಯೋಗಿಸಿಕೊಂಡು ಉಳಿದ 35 ಭಾಗ ನೀರನ್ನು ಮಾತ್ರ ವಾಣೀವಿಲಾಸ ಸಾಗರಕ್ಕೆ ಕೊಡಬೇಕಾಗುತ್ತದೆ. ಈ ತರಹ ಒಂದು ಯೋಜನೆ ಸಿದ್ಧವಾಗಿರುವುದರಿಂದ ಯಾರಿಗೂ ಅದರಿಂದ ತೊಂದರೆಯಾಗುವುದಿಲ್ಲ. ಮಾನ್ಯ ಮಸಿಯಪ್ಪನವರು ಹೇಳಿದಂತೆ ಇದರಿಂದ ಹೆಚ್ಚು ಖರ್ಚು ಇಲ್ಲದೆ ಜಮೀನು ನೀರಾವರಿಗೆ ಬರುವುದಾಗಿದೆ. ಹೊಸದಾಗಿ ನೀರಾವರಿಯನ್ನು ಮಾಡಬೇಕಾದರೆ ಒಂದು ಎಕರೆಗೆ ಒಂದು ಸಾವಿರದಿಂದ ಮೂರು ಸಾವಿರ ರೂಪಾಯಿವರೆಗೂ ಖರ್ಚು ಬೀಳತಕ್ಕ ನೀರಾವರಿ ಯೋಜನೆಗಳನ್ನು ನಾವು ನೋಡಿದ್ದೇವೆ. ಆದರೆ ಯಗಚಿ ನೀರನ್ನು ವಾಣೀವಿಲಾಸ ಸಾಗರಕ್ಕೆ ತಿರು ಗಿಸಿದರೆ ಒಂದು ಎಕರೆಗೆ 500 ರೂಪಾಯಿನಿಂದ ಒಂದು ಸಾವಿರ ರೂಪಾಯಿ ಒಳಗೆ ಖರ್ಚಾಗುತ್ತದೆ. ಇದು ಬಹಳ ಲಾಭದಾಯಕವಾದ ನೀರಾವರಿ ಯೋಜನೆಯಾಗುತ್ತದೆ. ದೇಶದಲ್ಲಿ ಅತಿ ಕಷ್ಟದಲ್ಲಿರತಕ್ಕ ಕಾರ್ಪಣ್ಯಕ್ಕೆ ಒಳಗಾಗಿರುವ, ಬಡತನ ಹೆಚ್ಚಾಗಿರತಕ್ಕ ಪ್ರಾಂತ್ಯವು ಇದರಿಂದ ಅಭಿವೃದ್ಧಿಯಾಗುತ್ತದೆ, ದಟ್ಟ ದಾರಿದ್ರ್ಯತೆಯಿಂದ ಕೂಡಿರುವ ರೈತರಿಗೆ ಅನುಕೂಲವಾಗುವುದರಿಂದ ಇದನ್ನು ಕೂಡಲೇ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಆ ರೀತಿ ಮಾಡದೆ ಹೋದರೆ ಆ ಜನಗಳು ಖಂಡಿತವಾಗಿಯೂ ಬೇರೆ ಕಡೆಗೆ ವಲಸೆ ಹೋಗತಕ್ಕ ಪರಿಸ್ಥಿತಿ ಇದೆ. ಈ ವಿಷಯವನ್ನು ಹತ್ತಾರು ಸಾರಿ ನಾವು ಸಭೆಯ ಗಮನಕ್ಕೆ ತಂದಿದ್ದೇವೆ. ಈ ಪ್ರಾಂತದಲ್ಲಿ ಯಾವತ್ತಿಗೂ ಮಳೆ ಬರುವುದಿಲ್ಲ. ಒಂದು ವರ್ಷದಲ್ಲ ಸರಾಸರಿ ಮಳೆ ಏಳೆಂಟು ಅಂಗುಲಗಳಾಗಬಹುದು. ಇದೂ ಸಹ ಒಂದು ಸಲ ಬೀಳದೆ ಯಾವ ವರ್ಷವೂ ಸರಿಯಾಗಿ ಮಳೆ ಬೆಳೆ ಆಗುವುದಿಲ್ಲ. ಇದು ಸರ್ಕಾರಕ್ಕೂ ಗೊತ್ತಿರುವ ವಿಚಾರ. ಪದೇ ಪದೇ ಬರುವ ಅಭಾವ ಅಥವಾ ಕ್ಷಾಮ ಪರಿಸ್ಥಿತಿಯನ್ನು ಹೋಗಲಾ ಡಿಸುವುದಕ್ಕೋಸ್ಕರ ವರ್ಷೇ ವರ್ಷೇ ತಾತ್ಕಾಲಿಕ ಪರಿಹಾರ ಕಾರ್ಯಗಳನ್ನು, ರಸ್ತೆಗೆ ಮಣ್ಣು ಹಡ ಕುವುದು, ಗೋಕಟ್ಟೆ ತೆಗೆಯುವುದು, ಆಹಾರ ಡಿಪೋಗಳನ್ನು ಪ್ರಾರಂಭ ಮಾಡುವುದು, ಗಂಜಿ ಕೇಂದ್ರಗಳನ್ನು ತೆರೆಯುವುದು ಇವುಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಲೇ ಇದ್ದಾರೆ? ಇದನ್ನೆಲ್ಲಾ ನಾವು ಲೆಕ್ಕ ಹಾಕಿ ನೋಡಿದರೆ ವಿಪರೀತ ಖರ್ಚಾಗುತ್ತಿದೆ. ಹೀಗಿರುವಾಗ ಯಗಚಿ ನದಿ ನೀರನ್ನು ದೊರಕಿಸತಕ್ಕ ಯೋಜನೆಯನ್ನು ಏಕೆ ಮಾಡಬಾರದು ಎಂದು ಪ್ರಶ್ನೆ ಮಾಡು ತ್ತೇನೆ. ತತ್ವಃಶಃ ಒಪ್ಪಿಕೊಂಡಿರುವ ಸರ್ಕಾರಕ್ಕೆ ಇದನ್ನು ಕಾರ್ಯಗತ ಮಾಡಲು ಬಂದಿರುವ ಕಷ್ಟ ವೇನು? ನಾನು ತಿಳಿದುಕೊಂಡಿರುವ ಮಟ್ಟಿಗೆ ಸರ್ಕಾರದ ಕಷ್ಟ ಹಣದ ತೊಂದರೆ ಎಂದು ಕಾಣು ತ್ತದೆ! ಅದನ್ನು ನಾವು ತಿಳಿದುಕೊಂಡಿದ್ದೇವೆ. ಆದರೆ ಬಹಳ ಹಿಂದುಳಿದಿರತಕ್ಕ ಪ್ರಾಂತದ ಜನ ಗಳಿಗೆ ಅನುಕೂಲವಾಗತಕ್ಕ ಇಂಥ ಒಂದು ಯೋಜನೆಗೆ ಸರ್ಕಾರ ಏನಾದರೂ ಉಪಾಯ ಮಾಡಿ ಹಣವನ್ನು ಒದಗಿಸುವುದು ಬಹಳ ಮುಖ್ಯ.

5-30 P.M.

ಸ್ವಾಮಿ, ನಾನು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳಬೇಕೆಂದರೆ, ಈ ಯೋಜನೆಯನ್ನು ಕೈ ಕೊಳ್ಳುವುದಾದರೆ ಕೆಲವು ರೈತರಾದರೂ ಮುಂಚಿತವಾಗಿ ತಮ್ಮ ಭಾಗದ ಕಾಂಟ್ರಿಬ್ಯೂಷನ್ ಕೊಡು ವುದಕ್ಕೆ ಸಿದ್ಧವಾಗಿದ್ದಾರೆ. ಸರಕಾರ ಇದನ್ನು ಶೀಘ್ರವಾಗಿ ಕಾರ್ಯಗತಮಾಡಬೇಕೆಂದು ಒತ್ತಾಯ ಪಡಿಸುತ್ತೇನೆ. ಈ ಒಂದು ನೀರಾವರಿ ಯೋಜನೆಯಿಂದ ಬರಗಾಲ ಪ್ರದೇಶಕ್ಕೆ ನೇರವಾದ ಅಚ್ಚು ಕಟ್ಟು ಒಂದು ಲಕ್ಷ ಎಕರೆ ಆದರೂ ಪರೋಕ್ಷವಾಗಿಯೂ ಸಹಾಯವಾಗುತ್ತದೆ. ಹೇಗೆಂದರೆ ಭೂಮಿ ಯಲ್ಲಿ ಜಲಮಾರ್ಗ ಹೆಚ್ಚಾಗಿ, ಪರ್‌ಕೊಲೇಷನ್‌ನಿಂದಲೂ ಸಹಾಯವಾಗುತ್ತದೆ. ಇದರಿಂದ ನೀರಾವ ರಿಗೆ ಅನುಕೂಲವಾಗುತ್ತದೆ. ಯಗಚಿ ನದಿಯ ನೀರನ್ನು ವೇದಾವತಿಯ ಪಾತ್ರಕ್ಕೆ ತರುವುದರಿಂದ ಬಹಳ ಹಿಂದುಳಿದ ಪ್ರದೇಶ ಮುಂದುವರಿಯುತ್ತದೆ. ಕಾವೇರಿ ನದಿಯನ್ನು ಉಪಯೋಗ ಮಾಡಿಕೊಳ್ಳುವ ಯೋಜನೆಯಲ್ಲಿ ಇದಕ್ಕೆ ಆದ್ಯತೆ ಕೊಡಬೇಕೆಂದೂ, ಕೂಡಲೇ ಇದನ್ನು ಪ್ರಾರಂಭ ಮಾಡಬೇಕೆಂದೂ

(ಶ್ರೀ ಬಿ. ಎಲ್. ಗೌಡ)

ಒತ್ತಾಯಪಡಿಸುತ್ತೇನೆ. ಹಾಲಿ ನಮ್ಮ ಕಡೆ ಬರಗಾಲವಿದೆ. ಹಂಗಾಮಿ ಪರಿಹಾರಕ್ಕೆ ಹಣ ಖರ್ಚು ಮಾಡುವುದಕ್ಕೆ ಬದಲು ಕೂಡಲೇ ಇದನ್ನು ಪ್ರಾರಂಭ ಮಾಡಿದರೆ ಖಾಯಂ ಪರಿಹಾರ ಮಾಡಬಹುದೆಂದು ಸರಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಯಗಚಿಯಿಂದ ವಾಣಿವಿಲಾಸ ಸಾಗರಕ್ಕೆ ತೆಗೆದುಕೊಂಡು ಹೋಗುವಾಗ ವೇದಾವತಿ ಕೆಳದಂಡೆಗೂ ನೀರನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಯಗಚಿಯ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾದರೆ, ಮೊದಲು ಅದು ಎಲ್ಲಿ ಹರಿಯುತ್ತದೆಯೋ ಅಲ್ಲಿಗೆ ಅದರ ನೀರನ್ನು ಕೊಟ್ಟು ಮಿಕ್ಕಿದನ್ನು ಇತರರಿಗೆ ಕೊಡಬಹುದು. ಶ್ರೀಮಾನ್ ರೇವಣ್ಣಸಿದ್ದಪ್ಪನವರು ಹೇಳಿದ ಹಾಗೆ ತಿಪಟೂರು, ಹೆಬ್ಬೂರು ಮುಂತಾದ ಎಲ್ಲ ಸ್ಥಳಗಳಿಗೂ ಕೊಡಲಿ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಸುಮ್ಮನೆ ಮಾತನಾಡುವುದಕ್ಕೆ ಬದಲು ಕಾರ್ಯಗತ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ಶ್ರೀ ಮಾರ್ ದೇವೆಗೌಡರು ಕಾವೇರಿ ನದಿಯ ನೀರಿನ ವಿಚಾರದಲ್ಲಿ ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಕಾವೇರಿ ನದಿ ಮೈಸೂರು ದೇಶದಲ್ಲೇ ಅಲ್ಲದೆ ಪ್ರಪಂಚದಲ್ಲೇ ಹೆಸರುವಾಸಿಯಾದ ನದಿ. ಈ ನದಿಯಿಂದ ನಮ್ಮ ಮೈಸೂರು ದೇಶ ಕೀರ್ತಿಗಳಿಸಿದೆ. ಯಾವ ರೀತಿ ಈ ಹೆಸರನ್ನು ಶಾಶ್ವತವಾಗಿ ಉಳಿಸಿಕೊಳ್ಳಬೇಕೆಂಬ ಯೋಚನೆ ಸರಕಾರಕ್ಕಿದೆ. ಕೃಷ್ಣರಾಜಸಾಗರಕ್ಕೆ ಕಾವೇರಿಯ ನೀರು ಎಷ್ಟು ಬರುತ್ತದೆ, ಅಲ್ಲಿ ಎಷ್ಟು ನಿಲ್ಲಿಸಬಹುದು, ಎಷ್ಟು ನಿಲ್ಲಿಸಿದರೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ನೀರಾವರಿಯಾಗುತ್ತದೆ, ಎಷ್ಟು ಮುಳುಗಡೆಯಾಗುತ್ತದೆ, ಶಿವಸಮುದ್ರದಲ್ಲಿ ಉಪಯೋಗವಾದ ನಂತರ ಮದರಾಸಿಗೆ ಎಷ್ಟು ನೀರು ಹೋಗುತ್ತದೆ, ಈ ಎಲ್ಲ ವಿಷಯಗಳನ್ನೂ ಯೋಚನೆ ಮಾಡಬೇಕಾಗಿದೆ. ಅಲ್ಲದೆ ಶ್ರೀರಂಗಪಟ್ಟಣ, ಮೈಸೂರು, ಕೃಷ್ಣರಾಜನಗರ, ದೇವರಾಜನಾಲೆ, ಸಿ ಡಿ ಎಸ್. ನಾಲೆ, ಕಾವೇರಿ ಬಲಭಾಗ, ವಿರಜಾನದಿ ಕೆಲವು ಭಾಗ, ಹೀಗೆ ಕೃಷ್ಣರಾಜ ಸಾಗರದಿಂದ ಬರತಕ್ಕ ಕಾವೇರಿ ನೀರಿನಲ್ಲಿ ಸಾವಿರಾರು ಎಕರೆಯಲ್ಲಿ ನೂರು-ನೂರೈವತ್ತು ವರ್ಷಗಳಿಂದ ತರಿ ಫಸಲು ಆಗುತ್ತಿದೆ. ಈಗ ಕಪಿಲಾ ಯೋಜನೆ ಮಾಡುತ್ತಿದ್ದಾರೆ. ಕಪಿಲಾ ಯೋಜನೆಯಿಂದ ಶಿವಸಮುದ್ರ, ಮದರಾಸು ಪ್ರಾಂತಕ್ಕೆ ಕೊಡುತ್ತಿರುವ ನೀರನ್ನು ಉಪಯೋಗ ಮಾಡಿ, ಕೆ ಆರ್ ಎಸ್ ನೀರನ್ನು ನಿಲ್ಲಿಸಿ ಅದರ ಮೇಲೆ ಹಾರಂಗಿ, ಕಂಬದಕಡ, ಅಣೆಗಳನ್ನು ಕಟ್ಟಿ ಉಪಯೋಗ ಮಾಡಬೇಕೆಂದು ಸರಕಾರದ ಯೋಚನೆ ಇದೆ. ಈಗ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಕಷ್ಟವಾಗಿರುವುದರಿಂದ ಈಗಾಗಲೇ ಸುಮಾರು 14 ಲಕ್ಷ ಜನಸಂಖ್ಯೆ ಇದ್ದು ಇನ್ನೂ ಬೆಳೆಯುತಕ್ಕ ನಗರಕ್ಕೆ ಕಾವೇರಿಯಿಂದ ನೀರನ್ನು ಕೊಡಬೇಕೆಂದು ಯೋಚನೆಯಿರುವುದರಿಂದ, ಎಷ್ಟು ನೀರು ಕಪಿಲಾ, ಹಾರಂಗಿ, ಕಂಬದಕಡ, ಕೆ. ಆರ್. ಎಸ್. ಇವುಗಳಲ್ಲಿ ನಿಲ್ಲುತ್ತದೆ ಇದರಲ್ಲಿ ವ್ಯವಸಾಯಕ್ಕೆ ಕೊಟ್ಟು ಮುಂದೆ ಎಷ್ಟು ನೀರು ಉಳಿಯುತ್ತದೆ ಎಂದು ನೋಡಿ ಕಾವೇರಿ ನದಿಯ ನೀರನ್ನು ಉಪಯೋಗ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಹಾರಂಗಿ ಮತ್ತು ಕಂಬದಕಡ ಯೋಜನೆಯ ಸಂಬಂಧವಾಗಿ ಎರಡು ಪಕ್ಷಗಳಿವೆ. ಇವನ್ನು ಕಟ್ಟಬೇಕೆಂದು ಒಂದು ಪಕ್ಷದವರು ಹೇಳಿದರೆ ಇನ್ನೊಂದು ಪಕ್ಷದವರು ಬೇಡವೆಂದು ಹೇಳುತ್ತಾರೆ. ನಾನು ಈ ಯಾವ ಪಕ್ಷಕ್ಕೂ ಸಂಬಂಧಪಟ್ಟವನಲ್ಲ. ನಾವು ಬದುಕುವುದನ್ನು ನಾವು ನೋಡಿಕೊಳ್ಳಬೇಕಾಗಿದೆ. ಕೃಷ್ಣರಾಜಸಾಗರದಲ್ಲಿರುವ ಒಂದು ಲಕ್ಷದ ಇಪ್ಪತ್ತೈದು ಸಾವಿರ ಎಕರೆಗೆ ಎಷ್ಟು ನೀರಾವರಿಯಾಗುತ್ತಿದೆ ಎನ್ನುವುದು ನನಗೆ 1932ನೆಯ ಇಸವಿಯಿಂದಲೂ ಅನುಭವವಿದೆ. ನಾನು ಯಾವ ಪಕ್ಷಕ್ಕೂ ಸೇರಿಲ್ಲ. ಮಂಡ್ಯ ಜಿಲ್ಲೆಯ ಜನಾಂಗ ಎಲ್ಲಿ ಹಾಳಾಗುತ್ತದೆಯೋ ಎನ್ನುವ ಯೋಚನೆ ಮನಸ್ಸಿನಲ್ಲಿ ಬಾಧಿಸುತ್ತಿದೆ. ಅಲ್ಲಿನ ರೈತರು ಹಾಕಿರುವ ಕಬ್ಬು ಏನಾಗುತ್ತದೆಯೋ, ಯಾವ ಸಮಯದಲ್ಲಿ ಆ ಜನರು ಸರಕಾರದ ಮುಂದೆ ಬರುತ್ತಾರೋ ಹೇಳುವಹಾಗಿಲ್ಲ. ಈ ವಿಚಾರವನ್ನು ಚೀಫ್ ಇಂಜಿನಿಯರ ಮುಂದೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಈ ವರ್ಷ 50 ಸಾವಿರ ಎಕರೆಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಕೆಳಗೆ ಕಬ್ಬು ಇದೆ. ಒಂದು ವೇಳೆ ಮುಂಗಾರು ಮಳೆ ಬಾರದಿದ್ದರೆ ಎರಡು ತಿಂಗಳಲ್ಲಿ ಆ ಕಬ್ಬು ಏನಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಹಾಗೇನಾದರೂ ಆದರೆ ಸರಕಾರ ಖಾತ್ರಿಯಾಗಿ ಆ ರೈತರಿಗೆ ನೀರನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆಯೇ ? ಈ ಸಭೆಗೆ ಸದಸ್ಯರಾಗಿ ಬಂದ ಮೊಟ್ಟಮೊದಲ ದಿನ ನಾವು ಸತ್ಯವಾಗಿ ನಡೆಯುತ್ತೇವೆಂದು ಪ್ರಮಾಣ ಮಾಡಿದ್ದೇವೆ. ಸಭಾಧ್ಯಕ್ಷರ ಮುಂದೆ ಪ್ರಮಾಣ ವಚನವನ್ನು ಹೇಳುವಾಗ ಆತ್ಮಸಾಕ್ಷಿಯಾಗಿ ಹೇಳಿದ್ದೇವೆ. ಅದರಂತೆ ನಾನು ಆತ್ಮಸಾಕ್ಷಿಯಾಗಿ, ಸತ್ಯವಾಗಿ ಹೇಳುವುದಕ್ಕೆ ನಿಂತಿದ್ದೇನೆ. ಈ ಸಭೆಯಲ್ಲಿರುವವರೆಲ್ಲರ ಪೂರ್ವೋತ್ತರವನ್ನು ಸರಕಾರ ಆಲೋಚನೆ ಮಾಡಬೇಕು. ಕೆಲವರಿಗೆ ದಕ್ಷತೆ ಇದೆ, ಐದು ನಿಮಿಷ

ಗಳಲ್ಲಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆ. ಕೆಲವರಿಗೆ ಅದು ಸಾಧ್ಯವಾಗುತ್ತದೆ, ಇನ್ನು ಕೆಲವರಿಗೆ ಅದು ಸಾಧ್ಯವಾಗುವುದಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ಒಂದು ಯೋಜನೆಯ ಪ್ಲಾನು ಎಸ್ಟಿಮೇಟು 15 ದಿವಸಗಳಲ್ಲಿ ತಯಾರು ಮಾಡಬಹುದು. ಯಾಕೆಂದರೆ ಇದರ ಬಗ್ಗೆ ನಮ್ಮ ಸ್ನೇಹಿತರ ಮೇಲೆನನಗೆ ಪೂರ್ತಿ ವಿಶ್ವಾಸವಿದೆ. ವಿಶಾಲ ಮೈಸೂರಿನ ಕೀರ್ತಿಗಳಿಸುವ ಬಗ್ಗೆ ಪ್ರಯತ್ನ ಪಟ್ಟವರಲ್ಲಿ ನಾನೂ ಒಬ್ಬ. ಆದುದರಿಂದ ಒಂದು ಮಾತು ಹೇಳುತ್ತೇನೆ. ಏನಾದರೂ ಒಂದು ಕೆಲಸ ವಾಗಬೇಕಾದರೆ ಮಂತ್ರಿಗಳು ಯಾವ ದಾಕ್ಷಿಣ್ಯಕ್ಕೂ ಒಳಗಾಗಬಾರದು. ಆಲಮಟ್ಟಿಯಲ್ಲಿ ಕಟ್ಟೆ ಮೊದಲು ಆಗಬೇಕು ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ನಾರಾಯಣಪುರದಲ್ಲಿ ಮೊದಲು ಕಟ್ಟೆಯಾಗಬೇಕೆಂದು ಹೇಳುತ್ತಾರೆ. ಎರಡೂ ಕಡೆ ಕಟ್ಟೆ ಮಾಡಬೇಕೆಂದು ಇನ್ನು ಕೆಲವರು ಹೇಳುತ್ತಾರೆ. ಇವಕ್ಕೆ ದುಡ್ಡು ಖರ್ಚಾಗುತ್ತದೆ. ಹೇಮಾವತಿ ಯೋಜನೆ ಮಾಡಿದ ಮೇಲೆ ಕೃಷ್ಣರಾಜ ಸಾಗರದಲ್ಲಿ ಸಾಕಷ್ಟು ನೀರು ಬರದೇ ಹೋದರೆ ಅನಾನುಕೂಲವಾಗುತ್ತದೆ. ಆದುದರಿಂದ ನೀರು ಬರುವ ಹಾಗೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಮಂಡ್ಯ ಡಿಸ್ಟ್ರಿಕ್ಟು ಕಾವೇರಿ ನದಿ ನೀರಿನ ಮೇಲೆ ಅವಲಂಬಿಸಿರುತ್ತವೆ. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಿಂದ ಮಂಡ್ಯದ ಷುಗರ್ ಕಂಪನಿಯಿಂದ ಸರಕಾರಕ್ಕೆ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹಿಂದೆ 1950ನೇ ಸಾಲಿನಲ್ಲಿ ಕೃಷ್ಣರಾಜಸಾಗರ ಒಣಗಿ ಹೋದ ಹಾಗೆ ಮತ್ತೆ ಒಣಗಿದರೆ ನಮ್ಮ ಗತಿ ಏನಾಗುತ್ತದೆ? ಸರಕಾರ ಉಳಿಯುತ್ತದೆಯೇ? ಜನ ಉಳಿಯುತ್ತಾರೆಯೇ? ನಮ್ಮ ಜಿಲ್ಲೆಯಲ್ಲಿ ಕಬ್ಬು ಬೆಳೆದವರು ಪಾಪರ್ ಆಗಿ ಹೋಗುತ್ತಾರೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸುವುದಕ್ಕೆ ಈಗ ಕಾವೇರಿ ನದಿಯಿಂದ ನೀರು ತಂದು ಪೂರೈಸುವ ಯೋಜನೆ ಮಾಡುತ್ತಿದ್ದಾರೆ, ಹೇಗೆ ನೀರು ತರಬೇಕು ಎಂಬುದನ್ನು ಯೋಚನೆ ಮಾಡುತ್ತಿದ್ದಾರೆ. ಈಗ ಹಾಕಿಕೊಂಡಿರುವ ಎಸ್ಟಿಮೇಟಿಗಿಂತಲೂ ಹೆಚ್ಚು ನೀರು ಇನ್ನು ಮುಂದೆ ಬೆಂಗಳೂರು ನಗರಕ್ಕೆ ಒದಗಿಸಬೇಕಾಗುತ್ತದೆ. ಈಗ ಇರತಕ್ಕ ಸರಕಾರದಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಮಂತ್ರಿಮಂಡಳ ಬದಲಾವಣೆ ಮಾಡಿ ಎಂದು ನಾನು ಹೇಳುವುದಿಲ್ಲ. ಯಾರು ಅಧಿಕಾರಕ್ಕೆ ಬಂದರೂ ಕೂಡ ಅವರನ್ನು ಕೇಳಿಕೊಂಡು ಕೆಲಸ ಮಾಡಿಸತಕ್ಕಂಥವನು ನಾನು. ಸರಕಾರದ ಧೋರಣೆಗೆ ವಿರೋಧವಾಗಿ ಮಾತನಾಡು ವವನು ನಾನಲ್ಲ. ಆದ್ದರಿಂದ ಒಂದು ವಿಷಯ ಮಂತ್ರಿಮಂಡಳಕ್ಕೆ ತಿಳಿಸಲು ಬಯಸುತ್ತೇನೆ. ಮುಖ್ಯವಾಗಿ ನನಗೆ ಕೆಲಸವಾಗಬೇಕು. ನಾವು ಎಲ್ಲರೂ ನಮ್ಮವರೇ ಎಂದು ನಾನು ಹೇಳುತ್ತೇನೆ. ಕಾರ್ಯಸಾಧನೆ ಮಾಡುವುದಕ್ಕೆ ಇತರರು ಹೇಳುವುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಹೀಗೆ ಹೇಳಿದ್ದಾರೆ ಅದು ಸರಿಯಾಗಿ ಇದೆಯೇ, ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಬೇಕು. ಗುಂಪು ಮನೋಭಾವನೆ ಇಟ್ಟುಕೊಳ್ಳಬಾರದು. ತಮ್ಮ ಪಕ್ಷಕ್ಕೆ ಮೆಜಾರಿಟಿ ಇದೆ ಎಂದು ಇನ್ನೊಂದು ಗುಂಪನ್ನು ತುಳಿಯಬಾರದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಎಂಜಿನಿಯರಿಂಗ್ ಇಲಾಖೆ ಯಲ್ಲಿ ಬಹಳ ಅನ್ಯಾಯವಾಗುತ್ತಿದೆ. ನೀರಾವರಿ ಯೋಜನೆಗಳಿಗಾಗಿ ಕೋಟಿಗಟ್ಟಲೆ ಹಣ ಸರಕಾರ ಖರ್ಚು ಮಾಡುತ್ತಿದೆ ಆದರೆ ಅದಕ್ಕೆ ಅಷ್ಟು ಪ್ರಮಾಣದಲ್ಲಿ ಲಾಭವಿಲ್ಲ. ಬೇಕಾದರೆ ಮಂತ್ರಿಗಳು ಅಥವಾ ಉಪ ಮಂತ್ರಿಗಳು ನಮ್ಮ ಮಂಡ್ಯ ಜಿಲ್ಲೆಗೆ ಬರಲಿ ನಾನು ಅವರಿಗೆ ತೋರಿಸುತ್ತೇನೆ. ಬೇಕಾದರೆ ಒಂದು ಲಿಸ್ಟ್ ಹಾಕಿಕೊಂಡು ಬರಲಿ. ಎಷ್ಟೆಷ್ಟು ಕೆಲಸ ಆಗಿದೆ, ಎಷ್ಟು ಕೆಲಸ ನಿಂತುಹೋಗಿದೆ, ಎಷ್ಟು ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ ಎಂಬುದನ್ನು ನಾನು ಅವರಿಗೆ ತೋರಿಸಿಕೊಡುತ್ತೇನೆ. ಎಷ್ಟು ಎಕರೆ ಜಮೀನಿನಲ್ಲಿ ಬತ್ತ ಬೆಳೆದಿದ್ದಾರೆ, ಕಬ್ಬು ಬೆಳೆದಿದ್ದಾರೆ, ಎಷ್ಟು ಎಕರೆ ಭೂಮಿಯಲ್ಲಿ ರಾಗಿ ಬೆಳೆದಿದ್ದಾರೆ, ಅವರು ತೋರಿಸಿ ಕೊಡಲಿ. ನಮ್ಮ ಮೈಸೂರು ಸಂಸ್ಥಾನದ ಹಿತ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಹಣ ಸರಿಯಾಗಿ ಉಪಯೋಗಿಸದೆ ಇದ್ದರೆ ಅದು ಸತ್ಕಾರ್ಯವಾಗುವುದಿಲ್ಲ ನಿಮಗೆ ಬೇಕಾಗಿರುವ ಕಂಟ್ರಾಕ್ಟುದಾರ ರಿಗೆ ಕೆಲಸ ಕೊಡುತ್ತೀರಿ. ಕಂಟ್ರಾಕ್ಟುದಾರರಿಗೆ ಕೆಲಸ ಕೊಡಲು ಕೆಲಸ ನಿರ್ಮಾಣ ಮಾಡುತ್ತೀರಿ, ಇದು ಸರಿಯಲ್ಲ. ನಿಮ್ಮ ಬಗ್ಗೆ ನನಗೆ ಅಸೂಯೆ ಇಲ್ಲ. ಜನರ ಹಿತ ದೃಷ್ಟಿಯಿಂದ ಬಹಳ ಕಳಕಳಿ ಯಿಂದ ನಾನು ಇದನ್ನು ತಮಗೆ ಹೇಳುತ್ತಿದ್ದೇನೆ. ನನ್ನ ಜೊತೆಗೆ ಬಂದರೆ ನಮ್ಮ ಜಿಲ್ಲೆಯಲ್ಲಿ ಏನೇನು ಕೆಲಸ ನಡೆದಿದೆ ತೋರಿಸುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಅಂಥಾದ್ದು ಯಾವುದಾದರೂ ನಿಮ್ಮ ಗಮನಕ್ಕೆ ಬಂದಿದ್ದರೆ ನನಗೆ ಕಾಗದ ಬರೆಯಿರಿ.

ಶ್ರೀ ಜಿ. ದೇವಯ್ಯ.—ನೀವು ನನ್ನ ಜೊತೆಗೆ ಬನ್ನಿ, ನಿಮಗೆ ನಾನು ತೋರಿಸುತ್ತೇನೆ. ನಿಮಗೆ ಕಾಗದ ಬರೆದರೆ ಅದು ನಿಮ್ಮ ಕೈಗೆ ಬರುವುದಿಲ್ಲ. ಎಲ್ಲಿಯೋ ಹೋಗಿ ಬಿದ್ದು ಬಿಡುತ್ತದೆ.

ಹಿಂದಕ್ಕೆ 1957ರಲ್ಲಿ ಶ್ರೀ ಎಚ್. ಕೆ. ವೀರಣ್ಣಗೌಡರವರು ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಆಗಿ ದ್ದಾಗ್ಗೆ ನಮ್ಮ ಜಿಲ್ಲೆಯಲ್ಲಿ ಲೋಕಪಾವನಿಗೆ ದೊಡ್ಡ ಗಂಗವಾಡಿ ಒಂದು ಚಿಕ್ಕ ಅಣೆಕಟ್ಟು ಕಟ್ಟುವ ಕೆಲಸ ಪ್ರಾರಂಭ ಮಾಡಿದರು. ಕಳೆದ 7 ವರ್ಷಗಳಿಂದ ಕೆಲಸ ನಡೆಯುತ್ತಲೇ ಇದೆ. ಏಳು ವರ್ಷ

(ಶ್ರೀ ಜೆ. ದೇವಯ್ಯ)

ವಾದರೂ ಕೂಡ ಕೆಲಸ ಪೂರೈಸಿಲ್ಲ. ಬನ್ನಿ, ನನ್ನ ಜೊತೆಗೆ, ಅದನ್ನು ತೋರಿಸುತ್ತೇನೆ. ಮೆಲ್ಕಂಡ ದೊಡ್ಡ ಗಂಗವಾಡಿ ಹತ್ತಿರ ಒಂದೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಕೆಲಸ ಮಾಡಲಾಗುತ್ತಿದೆ. ಸರ್ ವಿಶ್ವೇಶ್ವರಯ್ಯ ನಾಲಾ ಕೆಳಗೆ ಯಾವ ಯಾವ ಕೆಲಸ ಎಷ್ಟರ ಮಟ್ಟಿಗೆ ಆಗಿದೆ ದುಡ್ಡು ಎಷ್ಟು ಖರ್ಚಾಗಿದೆ ತನಿಖೆ ಮಾಡಿ ನೋಡಬೇಕು. ರೀವೆಟ್ ಮಾಡುವುದಕ್ಕೆ 22,000 ರೂಪಾಯಿ ಮಂಜೂರಾಗಿದೆ. ಪಿಕ್ ಅಪ್ ಛಾನಲ್ ಹಾಕಿ ಬೇಳುನೀರಿ ನೀರನ್ನು ಕೊಡುವುದಕ್ಕೆ 2 ಕೋ ರೂಪಾಯಿ ಎಸ್ಟಿಮೇಟ್ ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ತಯಾರು ಮಾಡಿ ಸರಕಾರಕ್ಕೆ ಕಳಿಸಿದ್ದಾರೆ. ಅದು ಏನಾಯಿತು ? ಕೆಲವು ಕಡೆ ಪಿಕ್ ಅಪ್ ಮಾಡಿ ಕೆಲವು ಜಮೀನುಗಳಿಗೆ ನೀರು ವಿಶ್ವೇಶ್ವರಯ್ಯ ನಾಲಾದಿಂದ ನೀರು ಕೊಟ್ಟಿದ್ದಾರೆ. ನಾಲಾದ ಪಕ್ಕದಲ್ಲಿ ಕೆಲವು ಕಡೆ ಲಿಫ್ಟ್ ಇರಿಗೇಷನ್ ಮೂಲಕ ನೀರು ಕೊಡಬೇಕೆಂಬ ಯೋಚನೆ ಏನಾಯಿತು, ಹೇಳಬೇಕು. ಒಂದು ಕಡೆ ನೀರು ಸಿಕ್ಕುತ್ತದೆ, ಇನ್ನೊಂದು ಕಡೆ ನೀರು ಸಿಕ್ಕುವುದಿಲ್ಲ. ಈಗ ಇರತಕ್ಕಂಥ ನೀರು ಉಪಯೋಗಿಸುವುದಕ್ಕೆ ಲಿಫ್ಟ್ ಇರಿಗೇಷನ್ ಮಾಡಿ ರೈತರಿಗೆ ಅನುಕೂಲಮಾಡಿ ಕೊಡಬೇಕು. ಕಾಳೇನ ಹಳ್ಳಿ ಹತ್ತಿರ ಎಡಗಡೆಗೆ ಕಾವೇರಿ ಬ್ರಾಂಚು ಹೋಗುತ್ತದೆ. ಮಂಡ್ಯ ನಗರದಿಂದ ನಾಲ್ಕು ಮೈಲಿ ದೂರದಲ್ಲಿ ನೀರು ಇಲ್ಲ. ಅಲ್ಲಿ ರಾಗಿ ಬೆಳೆಯುತ್ತಾರೆ. ಬಡವರಿಗೆ ತರೀ ಜಮೀನು ಅನುಕೂಲವಾಗಿ ನೀರು ಸಿಕ್ಕುವುದಿಲ್ಲ. ನಾಲಾ ಪ್ರದೇಶದಲ್ಲಿ ತರಿ ಭೂಮಿ ಅರ್ಧ ಎಕರೆ ಇದ್ದರೆ ಐದು ಖಂಡುಗ ಬತ್ತ ಬೆಳೆದು ರೈತ ಜೀವನ ಮಾಡುತ್ತಾನೆ. ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ. ತಮ್ಮ ತಮ್ಮ ನೆಂಟರಿಗೆ ಕೊಟ್ಟಿದ್ದಾರೆ. ಒಂದು ಲಿಸ್ಟ್ ಹಾಕಿ ರೆವೆನ್ಯೂ ಇನ್ಸ್‌ಪೆಕ್ಟರನ್ನು ಕರೆಸಿ ದರಖಾಸ್ತು ನೋಡಿದರೆ ಎಲ್ಲವೂ ಗೊತ್ತಾಗುತ್ತದೆ. ನನ್ನ ಜೊತೆಗೆ ಬನ್ನಿ ಕೆಲಸ ಎಷ್ಟು ಸರಿಯಾಗಿ ನಡೆದಿದೆ ಎಂಬುದನ್ನು ತೋರಿಸುತ್ತೇನೆ. ರೀವೆಟ್ ಮಾಡುವುದು ಎಂದರೆ ಕಲ್ಲು ಹಾಕಿ ಮನಸ್ಸಿಗೆ ಬಂದ ಹಾಗೆ ಮಾಡಿದ್ದಾರೆ. ಅದನ್ನು ಯಾರಾದರೂ ಚೆಕ್ ಮಾಡಿದ್ದಾರೆಯೇ ? ಇದಕ್ಕೆ ಅನ್ಯಾಯವಾಗಿ ಬಹಳ ದುಡ್ಡು ಖರ್ಚಾಗುತ್ತಿದೆ. ದಯವಿಟ್ಟು ಇದನ್ನು ತನಿಖೆ ಮಾಡಿ ನೋಡಬೇಕು ಎಂದು ಮುಖ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳಿಗೆ ಹೋಗಿ ಹೇಳಿದರೆ ಅವರು ಕೆಲಸ ಮಾಡಿ ಕೊಡುತ್ತಾರೆ. ಇನ್ನೊಬ್ಬರು ಯಾರಾದರೂ ಬಂದು ಹೇಳಿದರೆ ಕೆಲಸ ನಿಂತು ಹೋಗುತ್ತದೆ. ಜೆ. ದೇವಯ್ಯನವರು ಹೋಗಿ ಹೇಳಿದರೆ ಕೆಲಸ ಮಾಡಿ ಕೊಡುತ್ತೇನೆಂದು ಹೇಳುತ್ತಾರೆ. ಆಮೇಲೆ ಇನ್ನೊಬ್ಬರು ಕೆಲಸ ಮಾಡಬೇಡಿ ಎಂದು ಹೇಳುತ್ತಾರೆ. ದೇವರ ಮೇಲೆ ಭಾರ ಹಾಕಿ ನಾನು ಇದನ್ನು ಹೇಳುತ್ತಿದ್ದೇನೆ. ಪರಮಾತ್ಮನಿಗೆ ದಯೆ ಬಂದರೆ ಈ ಕೆಲಸವಾಗುವುದರಿಂದ ಅನೇಕ ಬಡ ರೈತರಿಗೆ ಬಹಳ ಅನುಕೂಲವಾಗುತ್ತದೆ. ಎಷ್ಟೋ ಜನರಿಗೆ ಸಹಾಯವಾಗುತ್ತದೆ. ಈ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಿಂತು ಹೋದರೆ ಇಲ್ಲಿಯ ಜನ ದಂಗೆ ಏಳುತ್ತಾರೆ.ಹಾರಂಗಿ ಕಟ್ಟೆಯಲ್ಲಿ ನೀರು ತುಂಬುವುದಿಲ್ಲ. ಕೃಷ್ಣರಾಜಸಾಗರ ಕಟ್ಟೆ ತುಂಬುವ ಹಾಗೆಯೇ ಇಲ್ಲ. ಈ ಸ್ಟೇಜು ಬರುತ್ತದೆ ನೋಡಿ, ಸದ್ಯದಲ್ಲಿಯೇ ಮಳೆ ಬರಬೇಕಾಗಿತ್ತು, ಬರಲಿಲ್ಲ. ಮಳೆ ಕಡಿಮೆಯಾಗುತ್ತಿದೆ. ಯುಗಾದಿ ಹೊತ್ತಿಗೆ ಬೀಳಬೇಕಾದ ಮುಂಗಾರು ಮಳೆ ಬೀಳಲಿಲ್ಲ. ನೋಡಿ, ಮಂಡ್ಯದ ರೈತರು ಲುಕ್ಸಾನು ಕಟ್ಟಿಕೊಡಿ ಅಂತ ಇಲ್ಲಿಗೆ ಇಳಿಯುತ್ತಾರೆ. ಮಳೆ ಹೋಯಿತು, ಕಬ್ಬು ಯಾವ ರೀತಿ ಒಣಗಿ ಹೋಗುತ್ತದೆ ಅನ್ನುವುದನ್ನು ಮುಂದೆ ನೋಡುತ್ತೀರ. ಮದ್ದೂರು ತಾಲ್ಲೂಕಿನವರು ಕಷ್ಟ ಅನುಭವಿಸಬೇಕಾಗುತ್ತದೆ. ಅವರ ಕಷ್ಟ ಈಗ ವಿವರಿಸುವುದಿಲ್ಲ ; ಏಕೆಂದರೆ ಸರ್ಕಾರದವರೇ ಸದ್ಯದಲ್ಲಿ ಬಂದು ಅದನ್ನು ನೋಡುತ್ತಾರೆ. ನಾನು ಇದನ್ನೆಲ್ಲಾ ಹೇಳಿ ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಕಾವೇರಿ ನದಿಗೆ ಎಲ್ಲೆಲ್ಲಿ ಅಣೆಕಟ್ಟು ಕಟ್ಟಬೇಕು ಎಂಬುದರ ಬಗ್ಗೆ ಸ್ವಲ್ಪ ಇನ್ನೂ ದೂರಾಲೋಚನೆ ಮಾಡಿ, ಚೆನ್ನಾಗಿ ಯೋಚನೆ ಮಾಡಿ ಎಲ್ಲೆಲ್ಲಿ ಕಟ್ಟೆ ಕಟ್ಟಿದರೆ, ಎಷ್ಟು ಎತ್ತರ ಮಾಡಿದರೆ ಎಷ್ಟು ನೀರು ಬರುತ್ತದೆ, ಎಷ್ಟು ಜನಕ್ಕೆ ಅನುಕೂಲವಾಗುತ್ತದೆ ಅನ್ನುವುದನ್ನೆಲ್ಲಾ ನೋಡಿ ಹಾರಂಗಿ, ಕಂಬದಕಡ ಯೋಜನೆಗಳನ್ನು ಇಟ್ಟುಕೊಂಡಿದ್ದೀರ. ಹಾರಂಗಿ ಯೋಜನೆಯಿಂದ ನೀರು ಬರುವುದಿಲ್ಲ, ಕೃಷ್ಣರಾಜಸಾಗದಿಂದಲೂ ಹೆಚ್ಚಿಗೆ ಬರುವುದಿಲ್ಲ. ಇದು ಖಂಡಿತ.

ಕಾವೇರಿ ಅನ್ನುವ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. ಆ ಹೆಸರಿನಲ್ಲಿ ಮೈಸೂರು ದೇಶದ ಜನತೆಗೆ ಬಹಳ ಪೂಜ್ಯ ಭಾವನೆ ಇದೆ. ಕಾವೇರಿ ಇಲ್ಲದಿದ್ದರೆ ಶೇಷಾದ್ರಿ ಅಯ್ಯರ್‌ರವರು ವಿದ್ಯುಚ್ಛಕ್ತಿ ಯೋಜನೆ ಮಾಡಿ, ಅದು ನಮಗೆ ಬರುತ್ತಿರಲಿಲ್ಲ. ಕಾವೇರಿಯಿಂದ ವಿಶ್ವೇಶ್ವರಯ್ಯನವರ ಆಸೆಯೂ ನಿವಾರಣೆಯಾಯಿತು. ವಿದ್ಯುಚ್ಛಕ್ತಿ ಇಲ್ಲದಿದ್ದರೆ ಅವರು ಈ ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಅಷ್ಟರಮಟ್ಟಿಗೆ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿರುತ್ತಾ ಇರಲಿಲ್ಲ. ವಿದ್ಯುಚ್ಛಕ್ತಿಯಿಂದ,

ಬಹಳವಾಗಿ ಭದ್ರಾವತಿ ಕಬ್ಬಿಣ ಕಾರ್ಖಾನೆ ಅಭಿವೃದ್ಧಿಯಾಯಿತು. ಕಬ್ಬಿಣದ ನಮ್ಮ ರಾಜ್ಯದಲ್ಲಿಯೇ ತಯಾರಾಗುತ್ತಿರುವುದರಿಂದ ವ್ಯವಸಾಯದ ಉಪಕರಣಗಳ ತಯಾರಿಕೆಗೆ ಬಹಳ ಅನುಕೂಲವಾಗಿದೆ. ಇದಕ್ಕೆಲ್ಲಾ ಕಾವೇರಮ್ಮನೇ ಕಾರಣ. ಆಕೆಯ ಸಹಾಯದಿಂದ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತಾ ಇರುವುದರಿಂದ ಸಿಮೆಂಟ್ ಕೈಗಾರಿಕೆ ಸ್ಥಾಪನೆ ಮಾಡಲೂ ಅನುಕೂಲವಾಯಿತು. ಭದ್ರಾವತಿ ಕಬ್ಬಿಣ ಕಾರ್ಖಾನೆಯಿಂದ ಆಗುತ್ತಿರುವ ಮಹದುಪಕಾರವನ್ನು ಕಣ್ಣಿಂದ ನೋಡುತ್ತಿದ್ದೇವೆ. ನಮ್ಮ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೂ ವಿದ್ಯುಚ್ಛಕ್ತಿ ಪ್ರಾಪ್ತಿಯೇ ಕಾರಣ. ಈ ಕಾರ್ಖಾನೆಯಿಂದ ಬೆಲ್ಲ ತಿನ್ನುತ್ತಿದ್ದ ರೈತರು ಸಕ್ಕರೆ ಕೇಳುತ್ತಿದ್ದಾರೆ, ಉಪಯೋಗಿಸುತ್ತಿದ್ದಾರೆ, ಅದೂ ಅಲ್ಲದೆ, ವಿಶ್ವೇಶ್ವರಯ್ಯ ನಾಲಾದಿಂದ ಪ್ರಯೋಜನ ಹೊಂದಿ, ನಮ್ಮ ಮಂಡ್ಯ ಡಿಸ್ಟ್ರಿಕ್ಟ್ ರೈತರುಗಳು ರಾಜ್ಯದಲ್ಲೇ ಎಲ್ಲರಿಗಿಂತ ಬಹಳ ಮುಂದೆ ಬಂದಿದ್ದಾರೆ, ಅವರ ಮಕ್ಕಳು ವಿದ್ಯಾವಂತರಾಗಿದ್ದಾರೆ; ನಮ್ಮ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆಯುತ್ತಾ ಇವೆ. ರೈತರುಗಳು ಅಲ್ಲಿ ತಮಗೆ ಮನೆ ಮಠಗಳನ್ನು ಕಟ್ಟಿಕೊಳ್ಳುತ್ತಾ ಇದ್ದಾರೆ ಮೈಸೂರು ದೇಶ ಉಳಿಯಬೇಕಾದರೆ, ಇರಬೇಕಾದರೆ ಮಂಡ್ಯ ಡಿಸ್ಟ್ರಿಕ್ಟ್‌ನಿಂದ :

Sri N. O. SAMAJI.—(Marathi)

Mr. DEPUTY SPEAKER.—Let him kindly read the resolution.

ಶ್ರೀ ಜೆ. ದೇವಯ್ಯ.—ಅವರು ಕಾವೇರಮ್ಮನ ಯೋಗಾನೇ ಕಾಣರು ; ಅವರು ಕಾವೇರಮ್ಮನನ್ನು ನೋಡಿದ್ದಾರೆಯೋ ಇಲ್ಲವೋ. ನಾವು ಕಾವೇರಮ್ಮನನ್ನು 365 ದಿವಸವೂ ನೋಡುತ್ತೇವೆ. 1940ನೇ ಇಸವಿಯಲ್ಲಿ ಫುಡ್ ಕಂಟ್ರೋಲ್ ಇದ್ದಾಗ, ಯುದ್ಧ ನಡೆಯುತ್ತಿದ್ದಾಗ, ಆಹಾರ ಅಭಾವವಿದ್ದ ಕಾಲದಲ್ಲಿ, ವಿಶ್ವೇಶ್ವರಯ್ಯ ನಾಲಾ ಕೆಳಗೆ ಸಮೃದ್ಧಿಯಾಗಿ ಬೆಳೆ ಬೆಳೆದು ಆನಂದವಾಗಿ ಊಟ ಮಾಡಿದ್ದೇವೆ, ಮತ್ತು ಬೇರೆ ಸ್ಥಳಕ್ಕೂ ಕೊಟ್ಟಿದ್ದೇವೆ. ಅವರು ಮೈಸೂರಿನ ನವರಾತ್ರಿ, ದಸರ ನೋಡಿದ್ದಾರೋ ಇಲ್ಲವೋ. ಕಾವೇರಮ್ಮನ ನೀರು ಇಲ್ಲದಿದ್ದರೆ, ಮೈಸೂರಿಗೆ ಪವರು, ಬೆಳಕು ಎಲ್ಲಿಂದ ಬರುತ್ತಿತ್ತು ? ಬೆಳಕಿಲ್ಲದೆ ವೈಭವವೆಲ್ಲಿರುತ್ತಿತ್ತು ? ಮೈಸೂರಿನ ದಸರ ನೋಡುವುದಕ್ಕೆ ದೇಶದ ಎಲ್ಲಾ ಕಡೆಗಳಿಂದ ಜನ ಬರುತ್ತಾರೆ. ಸಾಮಾಜಿಯವರು ನೋಡಲಿಲ್ಲ ಅಂತ ಕಾಣುತ್ತೆ. ಅವರಿಗೆ ಕಾವೇರಮ್ಮನ ಮಹತ್ವ ಗೊತ್ತಾಗುವುದಿಲ್ಲ. ಆದ್ದರಿಂದ ಹೊಸದಾಗಿ ಕಾವೇರಿ ನದಿ ನೀರನ್ನು ಉಪಯೋಗ ಮಾಡುವಾಗ, ಈಗ ಅದರಿಂದ ವ್ಯವಸಾಯ ಮಾಡುತ್ತಿರುವವರಿಗೆ ತೊಂದರೆಯಾಗುತ್ತದೆಯೇ, ಇಲ್ಲವೆ, ಅದರಿಂದ ಎಷ್ಟು ನೀರು ಉತ್ಪತ್ತಿಯಾಗುತ್ತದೆ, ಉತ್ಪತ್ತಿಯಾಗುವುದಿಲ್ಲ, ಮುಂತಾದುದನ್ನೆಲ್ಲಾ ಪರಿಶೋಧನೆ ಮಾಡಿಕೊಂಡು ಅದಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನನಗೆ ಮಾತನಾಡಲು ಯಾವಾಗಲೂ ಇಷ್ಟು ದೀರ್ಘ ಅವಕಾಶ ಕೊಟ್ಟಿರಲಿಲ್ಲ. ನನಗೆ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House now adjourns and will re-assemble tomorrow at 12 noon.

The House adjourned at Six of the Clock to meet again at Twelve of the Clock on Wednesday, the 1st April 1964.

WD 2598—GPB—900—22-6-64

MYSORE LEGISLATIVE ASSEMBLY

THIRTIETH DAY.

Wednesday, 1st April 1964.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Vacancies in the Gazetted and Non-Gazetted Teaching cadre in Government Engineering Colleges, Medical Colleges and Polytechnics.

**Q.*—110. Sri S. RUDRAPPA (Kalgi).—

Will the Government be pleased to state :—

the number of vacancies that are vacant in the Gazetted and Non-Gazetted teaching cadre in several (i) Government Engineering Colleges, (ii) Medical Colleges and (iii) Polytechnics in the State ?

A.—Sri S. R. KANTHI (Minister for Education).—

Number of Vacancies.—

	Gazetted	*Non-gazetted*
(i) (*a*) Engineering Colleges.	7	10
(*b*) Polytechnics	19	66
(ii) Medical Colleges	131	1

ಶ್ರೀ ಎಸ್. ರುದ್ರಪ್ಪ.—ಸ್ವಾಮಿ, ಎಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಜಾಗಗಳು ಖಾಲಿ ಇದ್ದರೂ ಕೂಡ ಈವರೆಗೆ ಏತಕ್ಕೆ ತುಂಬಲಿಲ್ಲ.

† ಶ್ರೀ ಎಸ್. ಆರ್. ಕಂಠಿ.—ಆಗಿಂದಾಗ್ಗೆ ಖಾಲಿ ಜಾಗಾ ತುಂಬುತ್ತಾ ಇದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಎಷ್ಟು ವರ್ಷಗಳಿಂದ ಈ ಜಾಗಗಳು ಖಾಲಿ ಇವೆ ?

†Indicates that the remarks or speeches have not been revised by the member concerned.

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಆಗಾಗ್ಗೆ ಖಾಲಿಯಾದಾಗ್ಗೆ ತುಂಬುತ್ತೇವೆ.

ಶ್ರೀ ಗೋಪಾಲರಾವ್ ಮುಡಬಿ.—ಬೀದರ್‌ನಲ್ಲಿರುವ ಪಾಲಿಟೆಕ್ನಿಕ್‌ನಲ್ಲಿ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಜಾಗಾ ಎಷ್ಟು ದಿವಸಗಳಿಂದ ಖಾಲಿ ಬಿದ್ದಿವೆ ?

ಶ್ರೀ ಎಸ್. ಆರ್. ಕಂಠಿ.—ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಎಷ್ಟೋ ಇವೆ. ಖಾಲಿ ಬಿದ್ದಿವೆ ಎಂದು ಹೇಳುತ್ತೀರಿ. ಅದನ್ನು ನೋಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಅನೇಕ ಅಧಿಕಾರಿಗಳನ್ನು ಓ. ಓ. ಡಿ. ಕಳಿಸುವುದರಿಂದ ಇಲಾಖೆಯ ಕೆಲಸ ಕಾರ್ಯಗಳಿಗೆ ಧಕ್ಕೆ ಬರುತ್ತದೆ ಎಂಬುದು ಸರಕಾರಕ್ಕೆ ಗೊತ್ತಿದೆಯೇ ? ಆದುದರಿಂದ ಅಂಥವರನ್ನು ಪಿ.ಡಬ್ಲ್ಯು.ಡಿ.ಗೆ ವಾಪಸ್ಸು ತೆಗೆದುಕೊಂಡು ಅಲ್ಲಿ ಬೇರೆ ಯಾರನ್ನಾದರೂ ಪರ್ಮನೆಂಟಾಗಿ ನೇಮಕ ಮಾಡುತ್ತೀರಾ ?

ಶ್ರೀ ಎಸ್.ಆರ್. ಕಂಠಿ.—ಅವರು ಹೇಳುವುದು ಪಿ.ಡಬ್ಲ್ಯು.ಡಿ. ಯಿಂದ ಬರುವ ಜನರಿಗೆ ತೊಂದರೆಯಾಗುತ್ತದೆಂದು. ಆದರೆ ಅಲ್ಲಿ ಪೇ ಸ್ಕೇಲ್ಸ್ ಸರಿಯಾಗಿಲ್ಲ. ಜನರು ಬರುವುದಿಲ್ಲ. ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತಾ ಇದ್ದೇವೆ. ಅದನ್ನು ವಿಚಾರ ಮಾಡುತ್ತಾ ಇದ್ದೇವೆ. ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 75 per cent of the staff in technical education will be permanent and 25 per cent will be drawn from the P.W.D.

ಶ್ರೀ ಟಿ. ಮಾದಯ್ಯಗೌಡ.—ಇಷ್ಟು ಕಾಲದವರೆಗೆ ಜಾಗ ಭರ್ತಿ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಪೇ ಸ್ಕೇಲ್ಸ್ ಕಡಮೆ ಇರುವುದರಿಂದ ಜನರು ಬರುವುದಿಲ್ಲ. ಪೇ ಸ್ಕೇಲ್ಸ್ ಜಾಸ್ತಿ ಮಾಡಲು ಪ್ರಯತ್ನ ಮಾಡುತ್ತೇವೆ.

Starting of the Mysore Rayon Pulp and Paper Factory in North Kanara District.

**Q.*—178. Sri S. P. PHAYDE (Ankola).—

Will the Government be pleased to state :—

(*a*) whether it is a fact that an industry by name the Greater Mysore Rayon Pulp and Paper Factory is intended to be started in North Kanara District ;

(*b*) when sanction was accorded and at what stage the construction of the factory stands at present ;

(*c*) when the factory will start production ;

(*d*) who are the promoters of the said factory and the nature of Government interest in it ?

A.—Sri K. MALLAPPA (Minister for Industries and Commerce).—

(*a*) Yes.

(*b*) An industrial licence was granted in October, 1960. The construction work has not yet been started.

(*c*) The licensee has not made any material progress in the implementation of the project.

(*d*) Sri S. V. Viswanathan of Bangalore is the promoter of the factory.

ಶ್ರೀ ಎಸ್. ಪಿ. ಫಾಯಿದೆ.—ಲೈಸೆನ್ಸ್ ತೆಗೆದುಕೊಂಡು ಪ್ರೋಗ್ರೆಸ್ ತೋರಿಸದೇ ಇರುವುದಕ್ಕೆ ಕಾರಣವೇನು ?

† ಶ್ರೀ ಕೆ. ಮಲ್ಲಪ್ಪ,—ಅವರು ಏನೂ ಪ್ರೋಗ್ರೆಸ್ ಮಾಡಲಿಲ್ಲ.

Sri B. P. KADAM.—What is the raw material for bamboo allowed to this licencee ?

Sri K. MALLAPPA.—The quantity I think is about 1,20,000 tons.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅವರು ಕೆಲಸ ಪ್ರಾರಂಭ ಮಾಡದೇ ಇರುವುದರಿಂದ ಅವರ ಲೈಸೆನ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಕೇಂದ್ರ ಸರಕಾರಕ್ಕೆ ನೀವು ಏಕೆ ಬರೆಯಬಾರದು ?

ಶ್ರೀ ಕೆ. ಮಲ್ಲಪ್ಪ.—ಒಂದು ನೋಟ್ ಬರೆದುಕೊಟ್ಟಿದ್ದೇವೆ. ಇಷ್ಟು ಕಾಲದಲ್ಲಿ ಇಫೆಕ್ಟಿವ್ ಆಗಿ ಆಕ್ಷನ್ ತೆಗೆದುಕೊಳ್ಳದೇ ಹೋದರೆ ಲೈಸೆನ್ಸ್ ಕ್ಯಾನ್ಸಲ್ ಮಾಡಲು ಕೇಂದ್ರ ಸರಕಾರಕ್ಕೆ ಬರೆದು ತಿಳಿಸಿದ್ದೇವೆಂದು ತಗಾದಿ ಆರ್ಡರ್ ಕೊಟ್ಟಿದ್ದೇವೆ.

ಶ್ರೀ ಎಸ್. ಪಿ. ಫಾಯದೆ.—ಈ ಪೇಪರ್ ಮಿಲ್ ಪ್ರಾರಂಭ ಮಾಡುವುದಕ್ಕೆ ಲೈಸೆನ್ಸ್ ಕೊಡಬೇಕೆಂದು ಬೇರೆ ಯಾರಿಂದಾದರೂ ಅರ್ಜಿಗಳು ಬಂದಿವೆಯೇ ?

ಶ್ರೀ ಕೆ. ಮಲ್ಲಪ್ಪ.—ನಿನ್ನೆ ಒಂದು ಅರ್ಜಿ ಬಂದಿದೆ.

Sri B. P. KADAM.—Is it not a fact that it has taken a very long time and the Government has slept over the entire period without enquiring into the matter ?

Sri K. MALLAPPA.—It is ture that it has taken time. But in view of the fact that there was no other offer, we wanted to give all the facilities to him to start the industry. Now of course, there are persons who are interested in starting. We have already given him a final notice and we will inform the Govt. of India to cancel the licence.

Sri B. P. KADAM.—When was the final notice given to him Sir ?

Sri K. MALLAPPA.—It was about two months back.

ಶ್ರೀ ಟಿ. ಮಾದಯ್ಯಗೌಡ.—ಅವರಿಗೆ ಲೈಸೆನ್ಸ್ ಕೊಡುವ ಕಾಲದಲ್ಲಿ ಅವರ ಹತ್ತಿರ ಸಾಕಷ್ಟು ಕ್ಯಾಪಿಟಲ್ ಇದೆಯೇ, ಸರಿಯಾದ ಚೈತನ್ಯ ಇದೆಯೇ ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡದೆ ಲೈಸೆನ್ಸ್ ಕೊಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಎಲ್ಲಾ ಅಂಶ ವಿಚಾರ ಮಾಡಿ ಲೈಸೆನ್ಸ್ ಕೊಡುತ್ತೇವೆ. It is a big venture. It involves seven crores and at the time when the recommendations were made, the Government were satisfied. His project report was examined and he was found to be a man of this place, with some business experience and some experience in the industry. On that basis, and being satisfied with his project report, the State Government recommended to the Central Government. The Central Government also went into the whole project report and they permitted him to start.

Unfortunately he did not start the factory ; I do not think he is in a position to start either. So the State Government has taken action to give a final notice and if he does not take effective action within certain time the Government of India will be forced to cancel the licence and give it to somebody else.

ಶ್ರೀ ಇ. ನಾರಾಯಣ ಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಪೇಪರು ಮಿಲ್ಲು ಸ್ಥಾಪನೆ ಮಾಡುವುದಕ್ಕೋಸ್ಕರ ಅನುಮತಿ ಕೊಟ್ಟಿರುವುದು ನಿಜವೆ ?

Mr. SPEAKER.—How does this arise out of the question ?

Sri K. MALLAPPA.—Letters of intent have been issued to party in Shimoga District to start a factory for Rayon.

ಶ್ರೀ ಎಸ್. ಪಿ. ಫಾಯಿದೆ.—ಲೈಸೆನ್ಸುದಾರರು ಫ್ಯಾಕ್ಟರಿ ಚಾಲು ಮಾಡುವ ಭರವಸೆ ಸರಕಾರಕ್ಕೆ ಇದೆಯೋ ?

ಶ್ರೀ ಕೆ. ಮಲ್ಲಪ್ಪ.—ಈಗಿರತಕ್ಕಂಥ ಲೈಸೆನ್ಸುದಾರರು ಫ್ಯಾಕ್ಟರಿ ಪ್ರಾರಂಭ ಮಾಡುವ ಸಾಮರ್ಥ್ಯವಿಲ್ಲ ಎಂಬ ಭಾವನೆ ಬಂದಿದೆ.

Sri V. S. PATIL.—It is now 3½ years since the licence was granted. During this period what is it that Government has done to see whether the man is really intent upon starting a factory or not. What steps have Government taken in this direction ?

Sri K. MALLAPPA.—We have sent for the party several times. Meetings were held from time to time. We tried to persuade him. It is easy to recommend to the Government of India for the cancellation of the licence. Perhaps it will go to some other State. Within the limited capacity, licence is issued to our State. If we tell them, they may cancel the licence and the benefit may go to some person in another State. Therefore, we are keen to persuade the licensee to start the industry. We offered every possible facilities to him. We are now satisfied that the party will not start the factory and we have given him final notice. We have got to proceed according to certain principles. If the party is not going to take effective action, there are already applications. We will recommend one of the applications to be considered by the Government of India and the licence issued to him.

Sri R. K. PRASAD.—Has it come to the notice of Government that Mr. Viswanathan is trying to sell the licence ?

Sri K. MALLAPPA.—It has not come to the notice of Government that there has been an attempt on the part of the licensee to sell the licence, but he has been trying to approach the people to join him because it is a big investment of Rs. 7 crores. He says that he has secured the technical knowhow. It is a big investment. Naturally, it will not be within the ability of any one individual. He has got to seek the co-operation of other people also, some big capitalists.

Sri V. S. PATIL.—May I know whether the licence is granted on seeling the capacity, the ability, financial position, technical knowhow, etc., or whether it is granted to anybody and then he is asked to collect the money ?

Mr. SPEAKER.—A good part of that question will have to go to the Parliament and not here.

Sri V. S. PATIL.– This Government has to recommend the case...

Mr. SPEAKER.—This Government has to guarantee certain facilities, that they are willing to supply bamboo at a particular rate and all that and when it acts, it acts in pursuance of the industrial policy. I do not know whether the licence is saleable. These are all complicated questions.

Sri V. S. PATIL.—Due to the delay on the part of this man, our State has to suffer. My second question is, is the Government aware that the bamboo in that area is now flowering and if it is not cut within six months, the whole bamboo plantations will be useless next year and who is to be held responsible for this huge loss ?

Sri K. MALLAPPA.—It is a fact that the bamboo has flowered. We have asked the gentleman to cut and preserve it. He should immediately start cutting the bamboo and preserving it. He has got to fulfil certain conditions. If these conditions are not fulfilled, perhaps within a fortnight or two we are going to cancel the licence. A party has offered to start the

paper factory. That application will be considered and recommendation will be made. I have already explained why we extended certain amount of leniency to this man. At that time there was no other application. We were worried that the benefit of the licence will be completely lost and it would again go to some other State.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಲೈಸೆನ್ಸು ಕೊಟ್ಟಮೇಲೆ ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಲೋನು ಕೊಟ್ಟಿದ್ದಾರೆಯೇ ?

Sri K. MALLAPPA.—Hypothetical question.

Sri R. K. PRASAD.—How many final notices have been issued to this party ?

Sri K. MALLAPPA.—Notices are being issued from time to time asking him to take effective action. He has failed to take action so far. Finally we have told him that if he does not take effective action within certain time, we are going to have the licence cancelled.

Sri V. S. PATIL.—Presuming that the cancellation business does not take place within six months or one year, then the whole bamboo will go to waste. Is there any scheme before Government to preserve the bamboo by cutting it and keeping it ?

Sri K. MALLAPPA.—The West Coast Paper Mills are ready to cut it and make use of it.

Construction of a Bridge across Igoor Halla at Yedekere Village, Saklespur Taluk.

**Q.*—249.* Sri S. A. VASANNA SETTY (Saklespur).—

Will the Government be pleased to state :—

(*a*) Whether a revised estimate is prepared for the construction of a bridge across Igoor Halla at Yedekere Village, Saklespur Taluk ;

(*b*) the amount so far spent for the construction of the bridge ?

A.—Sri G. B. SHANKAR RAO.—(Parliamentary Secretary to the Minister for Public Works).—

(*a*) Yes.

(*b*) Rs. 36,911.

ಶ್ರೀ ಎಸ್. ಎ. ವಾಸನ್ನ ಶೆಟ್ಟಿ.—ಇದರ ಒರಜಿನಲ್ ಎಸ್ಟಿಮೇಟು ಎಷ್ಟಕ್ಕೆ ತಯಾರಾಗಿತ್ತು ಮತ್ತು ಯಾವ ವರ್ಷ ತಯಾರಾಗಿತ್ತು?

Sri G. B. SHANKAR RAO.—The orginal estimate was prepared in the year 1956 for Rs. 40,000.

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಆ ಎಸ್ಟಿಮೇಟು ಸೇತುವೆಗೆ ಆಗಿತ್ತೇ ಅಥವಾ ಹೈಲೆವಲ್ ಕಾಸ್‌ವೇಗೆ ಆಗಿತ್ತೇ ?

ಶ್ರೀ ಜಿ. ಬಿ. ಶಂಕರರಾವ್.—ಹೈ ಲೆವಲ್ ಕಾಸ್‌ವೇ ಸಲುವಾಗಿ.

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಆ 40 ಸಾವಿರ ರೂಪಾಯಿ ಖರ್ಚಾಗಿರುವುದು ಯಾವುದಕ್ಕೆ? ಸೇತುವೆಗೆ ಒಂದು ಪಿಲ್ಲರ್ ಕಟ್ಟಿದ್ದಾರೆ. ಆ ಬಗ್ಗೆ ಎಸ್ಟಿಮೇಟ್ ತಯಾರಾಗಿರಲಿಲ್ಲವೇ?

Sri G.B. SHANKAR RAO.—The original idea was to construct a high level causeway. Subsequently there was a representation from the local people and the M.L.A.s. It was then changed to a full bridge. The modified estimate is being prepared and it is for an amount of Rs. 1,74,000.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಅಲ್ಲಿನ ಎಂ. ಎಲ್. ಎ. ಮತ್ತು ಇತರ ಜನಗಳ ಮಾತಿನ ಮೇಲೆ ಹೈ ಲೆವಲ್ ಕಾಸ್‌ವೇ ಮಾಡಬೇಕೆಂದು ಇದ್ದುದನ್ನು ಫುಲ್ ಬ್ರಿಡ್ಜ್ ಆಗಿ ಮಾಡಲು ಬದಲಾಯಿಸಿದೆವು ಎಂದು ಹೇಳಿದಿರಿ. ತಮಗೆ ಟೆಕ್ನಿಕಲ್ ಅಡ್‌ವೈಸ್—ಆಫೀಸರುಗಳ ಅಡ್‌ವೈಸ್ ಮುಖ್ಯವೋ ಅಥವಾ ಜನಗಳ ಅಡ್‌ವೈಸ್ ಮುಖ್ಯವೋ.

Sri G. B. SHANKAR RAO.—It is not only the technical advice, but the opinion of the local people also will be taken into consideration.

ಶ್ರೀ ವಿ. ಎಂ. ದೇವ್.—ಎಂ. ಎಲ್. ಎ. ಮಾತು ಕೇಳಿದ್ದರಿಂದ ಎಷ್ಟು ಹೆಚ್ಚು ಹಣ ಖರ್ಚಾಯಿತು ಎಂಬುದನ್ನು ಹೇಳುತ್ತೀರಾ?

ಅಧ್ಯಕ್ಷರು.—ಜನರ ಮಾತು ಕೇಳುವುದು ಎಂಬುದಲ್ಲ, ಜನರ ಸೌಕರ್ಯ ಯಾವುದು ಎಂಬುದನ್ನು ನೋಡಿಕೊಂಡು ಮಾಡಿದ್ದಾರೆ ಎಂದು ಹೇಳಿದರು.

ಶ್ರೀ ವಿ. ಎಂ. ದೇವ್.—ಆರೀತಿ ಮಾಡಿದ್ದರಿಂದ ಎಷ್ಟು ಹೆಚ್ಚು ಹಣ ಖರ್ಚಾಯಿತು ಎಂಬುದನ್ನು ಆ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri G. B. SHANKAR RAO.—The orginal estimate was for Rs. 40,000. The revised estimate is yet to be sanctioned. It is still in the process of preparation.

ಶ್ರೀ ವಿ. ಎಂ. ದೇವ್.—ಇಷ್ಟೊಂದು ಹಣ ಖರ್ಚು ಮಾಡುವಾಗ ಎಕ್ಸ್‌ಪರ್ಟ್ ಅಡ್‌ವೈಸ್ ಏಕೆ ಕೇಳಲಿಲ್ಲ?

ಅಧ್ಯಕ್ಷರು.—ಕೇಳುತ್ತಾರೆ.

ಶ್ರೀ ವಿ. ಎಂ. ದೇವ್.—ಎಂ ಎಲ್ ಎ ಮತ್ತು ಇತರ ಜನಗಳ ಅಡ್‌ವೈಸ್ ಇಂದ ಮಾಡಿದೆವು ಎಂದು ಹೇಳಿದರು.

ಅಧ್ಯಕ್ಷರು.—ಇನ್ನು ಮಾಡಿಸಿಲ್ಲ, ತಯಾರಾಗುತ್ತಾ ಇದೆ, ಅಷ್ಟೆ.

ಶ್ರೀ ವಿ. ಎಂ. ದೇವ್.—ಇಷ್ಟೊಂದು ದುಡ್ಡು ಖರ್ಚಾಗುವಾಗ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಅಡ್‌ವೈಸ್ ಬಿಟ್ಟು ಏಕೆ ಈ ತರಹ ಕೆಲಸ ಮಾಡಿದಿರಿ ಎಂದು ಕೇಳುತ್ತಾ ಇದ್ದೇನೆ.

ಅಧ್ಯಕ್ಷರು.—ಎಕ್ಸ್‌ಪರ್ಟನ್ನು ಕೇಳಿಯೇ ಖರ್ಚು ಮಾಡುತ್ತಾರೆ, ಅದಕ್ಕೆ ಮುಂಚೆ ಖರ್ಚು ಮಾಡುವುದಿಲ್ಲ.

Sri G. B. SHANKAR RAO.—It is done only on the advice of the technical experts.

ಶ್ರೀ ಎಸ್. ಎ. ಪಾಸಣ್ಣ ಶೆಟ್ಟಿ.—ರಿವೈಸ್ಡ್ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆಯೇ?

ಅಧ್ಯಕ್ಷರು.—ಇಲ್ಲ ಎಂದು ಹೇಳಿದರಲ್ಲ.

Estimated Cost of the new Government Electric Factory in Bangalore.

*Q.—283. Sri B. BYRAPPAJI (Turuvekere).—

Will the Government be pleased to state:—

(*a*) the estimated cost of the New Government Electric Factory in Bangalore.

(*b*) whether the factory is completed in all respects, if not, when it is expected to be completed ;

(c) whether the factory has gone into production, if so, the progress made so far;

(d) the programme of manufacture of new items in the said factory ?

A.—Sri K. MALLAPPA (Minister for Industries and Commerce).—

(a) Rs. 700 lakhs.

(b) It is expected to be completed by 1968-69.

(c) No. Civil Engineering works have been going on. Part of the machinery has been received.

(d) The programme of manufacture is as follows:—

(i) *Switchgear Department.*—Production commenced on 6th January 1964;

(ii) *Transformer Department.*—Production schedule to commence from 31st December 1964.

(iii) *Motor Department up to* 250 *H. P.*—Production scheduled to commence from 31st December 1965,

(iv) *Motor Department from* 250 *H. P. to* 1,500 *H. P.*—Production scheduled to commence from 1967-68.

ಶ್ರೀ ಬಿ. ಬೈರಪ್ಪಾಜಿ.—700 ಲಕ್ಷ ರೂಪಾಯಿ ಅಂದಾಜಾಗಿದೆ ಎಂದು ಹೇಳಿದ್ದೀರಿ. 1968-69 ರ ಹೊತ್ತಿಗೆ ಈ ಕಾಮಗಾರಿಯನ್ನು ಪೂರೈಸುತ್ತೇವೆ ಎಂದು ಹೇಳಿದ್ದೀರಿ. ಪ್ರಾರಂಭವಾದ ತಾರೀಖು ಯಾವುದು ? ಇಲ್ಲಿಯ ತನಕ ಖರ್ಚು ಆಗಿರುವ ಹಣ ಎಷ್ಟು ?

†ಶ್ರೀ ಕೆ. ಮಲ್ಲಪ್ಪ.—ಈ ಕಾಮಗಾರಿ ಪ್ರಾರಂಭವಾದದ್ದು ಮಾರ್ಚಿ 1962ರಲ್ಲಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕಾಮಗಾರಿಯ ಮೇಲೆ ಎಷ್ಟು ಹಣ ಖರ್ಚು ಮಾಡಬೇಕೆಂದು ಇದ್ದೀರಿ. ಮತ್ತು ಈಗ ಖರ್ಚಾಗಿರುವುದು ಎಷ್ಟು ?

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ 2 ಕೋಟಿ ರೂಪಾಯಿ ಖರ್ಚಾಗಿದೆ. It is a very big undertaking which costs Rs. 7 crores. ಕಟ್ಟಡ ಒಂದು-ಒಂದೂವರೆ ಕೋಟಿ ರೂಪಾಯಿ ಆಗುತ್ತದೆ- ಅದು ನಡೆಯುತ್ತಾ ಇದೆ. ಆ ಮೇಲೆ ಮಿಷಿನರಿ ಬರಬೇಕು, ಈ ರೀತಿ ಒಂದೊಂದು ಹಂತವಾಗಿ ಡೆವಲಪ್ ಮಾಡಬೇಕಾಗುತ್ತದೆ. ಒಂದೇ ಸಾರಿ ಡೆವಲಪ್ ಮಾಡುವುದಕ್ಕಾಗುವುದಿಲ್ಲ. The whole programme is spread over for about five years. It will come into 100 per cent production by 1968-69.

ಶ್ರೀ ಸಿ. ಆರ್. ರಂಗೇಗೌಡ.—ಮೈಸೂರು ಬಿಟ್ಟು ಇತರ ವಿವಿಧ ದೇಶಗಳಿಂದ ಸ್ವಿಚ್‌ಗೇರ್, ಟ್ರಾನ್ಸ್ ಫಾರ್ಮರ್ಸ್ ಇವುಗಳಿಗೆ ಎಷ್ಟು ಬೇಡಿಕೆ ಬಂದಿದೆ ?

ಶ್ರೀ ಕೆ. ಮಲ್ಲಪ್ಪ.—30-35 ಲಕ್ಷ ರೂಪಾಯಿನಷ್ಟು ಬೇಡಿಕೆ ಬಂದಿದೆ.

Sri G. V. GOWDA.—May I know to whom the construction is entrusted ? Is it to the Public Works Department or any private concern ?

Sri K. MALLAPPA.—National Construction Corporation.

Sri C. J. MUCKANNAPPA.—What is the output of production every year in the categories of Switchgear Transformers and Motors ?

Sri K. MALLAPPA.—It will go on by stages. It is scheduled to commence on 31-12-1964. However, I will give some idea. We will start this year production of Transformers of about 20,000 KVA and ultimately it will go up to 6,00,000 KVA per annum. We will start production of Motors from 1,500 H. P., and the total production will be 4,00,000 per annum. The production of Switchgear, both L. T. and

(SRI K. MALLAPPA)

H. T., will be started up to 11 KV, and ultimately it will go up to 20 MW amps, *i.e*, Rs. 85 lakhs per annum. In addition, we are trying to produce 4,000 flame-proof Motors per annum.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕಟ್ಟಡ ತಾವು ನಿರೀಕ್ಷಿಸಿದಷ್ಟು ಪ್ರಗತಿ ಬರುತ್ತಿಲ್ಲ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅದಕ್ಕೆ ಬೇಕಾದಷ್ಟು ಅಡಚಣೆಗಳು ಇರುತ್ತವೆ. ಮೆಟೀರಿಯಲ್ಸ್ ಕೊರತೆ ಇರುತ್ತದೆ. ಅಧಿಕಾರಿಗಳ ಒಂದು ಧೋರಣೆ ಏನು ಇದೆ ಇಂಡಿಫರೆನ್ಸ್ ಅದೂ ಕೂಡ ಇರುತ್ತದೆ. ಈ ರೀತಿ ಅನೇಕ ಕಾರಣಗಳು ಇರುತ್ತವೆ.

ಅಧ್ಯಕ್ಷರು.—ಸಿಮೆಂಟು ಸಿಕ್ಕುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಏನು ಸ್ವಾಮಿ ತಾವೂನೂ ಅವರ ಕಡೆ ಸಪ್ಪೋರ್ಟ್ ಮಾಡಿದರೆ ಹೇಗೆ ?

MR. SPEAKER.—I am not supporting anybody. If the Hon'ble Member is under the impression that I am supporting the Minister, it is not correct. I said that it was difficult to get cement and it is a fact.

12-30 P.M.

SRI S. SIVAPPA.—May I know how much money has been spent on the machinery and on the staff ?

SRI K. MALLAPPA.—Of course, we have got to get machinery from abroad and we are getting it. The Credit Bank has offered to give the necessary credit. For the other machinery which has to be got from Germany, we have got to get German credit. It is being now discussed and it will be made available. At present, the civil work has been going on and we are now trying to secure the indigenous material that is available here.

ಶ್ರೀ ಸಿದ್ದಯ್ಯ ಕಾಶಿಮಠ್.—ಸ್ವಿಚ್‌ಗೇರ್ ಇಲಾಖೆಯಲ್ಲಿ ಎಷ್ಟು ಜನ ಜರ್ಮನ್ ಎಕ್ಸ್‌ಪರ್ಟ್ ಎಂಜಿನಿಯರುಗಳಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಒಬ್ಬರೇ ಇರುವುದು.

SRI G. V. GOWDA.—Instead of entrusting this work to the National Construction Works, if it had been done through the Public Works Department, would not the Government have saved money and get the work done early ?

SRI K. MALLAPPA.—Sir, it is a Central Government Corporation. They have got experience, resources, machinery, equipment and they are all pooled. We had reason to believe that those people would have all the equipment and they would be in a better position than our Pubiic Works Department and that is why it was entrusted to them.

ಶ್ರೀ ಜಿ. ರಾಮೇಗೌಡ.—ಈ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಟೆಂಡರು ಕರೆದು ಕೊಟ್ಟರೋ ಅಥವಾ ನೇರವಾಗಿ ಕೊಟ್ಟರೋ ?

ಶ್ರೀ ಕೆ. ಮಲ್ಲಪ್ಪ.—ಟೆಂಡರ್ ಕರೆದೇ ಕೊಟ್ಟಿರುವುದು.

ಶ್ರೀ ವಿ. ಎಂ. ದೇವ್.—ಇಷ್ಟು ನಿಧಾನವಾಗಿ ಕೊಟ್ಟಿರುವಾಗ ಕಂಟ್ರಾಕ್ಟರುಗಳಿಗೆ ಹಣ ಎಷ್ಟು ಕೊಡಲಾಗಿದೆ ?

SRI K. MALLAPPA.—I do not know whether my friend has gone and seen the building. I invite him to go and see the building. The building has come up. But there is a delay of 4 to 5 months.

Sri V. M. DEO.—How much money is paid to them so far ?

Sri K. MALLAPPA.—It is a National Construction Corporation. As and when bills are prepared, payments are made. No money is given in advanc.

Sri R. K. PRASAD.—Are Government contemplating to have any ancillary unit round about this factory ?

Sri K. MALLAPPA.—Sir, we have already permitted two ancillary factories. We require some ancillaries for our transformers and switch-gears. Two Estates have been permitted.

ಶ್ರೀ ಬಿ. ಬೈರಪ್ಪಾಜಿ.—ಟ್ರಾನ್ಸ್‌ಫಾರ್ಮರ್ ಇಲಾಖೆ 31-12-64ರಿಂದ ಉತ್ಪಾದನೆ ಮಾಡುವುದಕ್ಕೆ ಪ್ರಾರಂಭಿಸುವುದೆಂದು ಉತ್ತರದಲ್ಲಿ ತಿಳಿಸಲಾಗಿದೆ. ಈಗಾಗಲೆ ಹೊರಗಡೆಯಿಂದ ಟ್ರಾನ್ಸ್‌ಫಾರ್ಮರುಗಳನ್ನು ತರುವ ಪರಿಸ್ಥಿತಿ ಇರುವುದರಿಂದ ಆದಷ್ಟು ಬೇಗ ಟ್ರಾನ್ಸ್‌ಫಾರ್ಮರುಗಳನ್ನು ಉತ್ಪತ್ತಿಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಅದನ್ನು ಶೀಘ್ರದಲ್ಲೇ ಪ್ರಾರಂಭಿಸಬೇಕೆಂದಿದ್ದೇವೆ. ಡಿಸೆಂಬರಿನೊಳಗೆ ಪ್ರಾರಂಭಿಸಬೇಕೆಂಬ ಉದ್ದೇಶದಿಂದ ಬೇಕಾದ ಪೂರ್ವಸಿದ್ಧತೆಗಳನ್ನು ಮಾಡಲಾಗುತ್ತಿದೆ. ಆದಷ್ಟು ಬೇಗ ಮಾಡುತ್ತೇವೆ. ಬೇಕಾದ ಎಕ್ಸ್‌ಪರ್ಟ್‌ಗಳನ್ನು ಪಡೆಯಲಾಗುತ್ತಿದೆ, ಕಾರ್ಖಾನೆಯಲ್ಲಿ ಬೇಕಾದವರಿಗೆ ಟ್ರೈನಿಂಗ್ ಕೊಡಲಾಗುತ್ತಿದೆ.

Sri C. J. MUCKANNAPPA.—May I know the employment potential of this factory ?

Sri K. MALLAPPA.—I cannot definitely say at this stage. It may be 2 to 3,000.

ಶ್ರೀ ಎಸ್. ಗೋಪಾಲ ಗೌಡ.—ಕಂಟ್ರಾಕ್ಟರಿಗೆ ವಹಿಸುವಾಗ್ಗಟೆಂಡರನ್ನು ಕರೆದು ವಹಿಸಲಾಯಿತ್ತು ಎಂದು ಹೇಳಿದರು. ಎಷ್ಟು ಜನ ಅರ್ಜಿ ಹಾಕಿದ್ದರು ? ಈಗ ಲೋಕಲ್ ಮಾರ್ಕೆಟ್ಟಿನಲ್ಲಿ ಸಿಕ್ಕುವ ಮೆಟೀರಿಯಲ್ ಕಾಸ್ಟ್ ಪ್ಲಸ್ ಶೇಕಡ 10 ರಷ್ಟು ಕೊಟ್ಟಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಷ್ಟು ಜನ ಅರ್ಜಿ ಹಾಕಿದ್ದರು ಎಂಬುದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಹೇಳುತ್ತೇನೆ. ಈಗ ಆ ವಿವರ ನನ್ನಲ್ಲಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಕಾರ್ಖಾನೆಗೆ ಸಂಬಂಧಪಟ್ಟ ಯಂತ್ರಸಾಮಗ್ರಿಗಳು ಕೆಲವು ಬಂದಿದೆ ಎಂದು ಹೇಳಿದ್ದೀರಿ. ಇನ್ನು ಕೆಲವು ಬರಬೇಕಾಗಿರುವುದರಿಂದ 10 ನೆಯ ತಾರೀಖು ಮಂತ್ರಿಗಳು ಜರ್ಮನಿಗೆ ಪ್ರವಾಸ ಹೋಗುವಾಗಲಾದರೂ ಬೇಕಾದ ಯಂತ್ರ ಸಾಮಗ್ರಿಗಳನ್ನು ತರಲು ವ್ಯವಸ್ಥೆಮಾಡಿಕೊಂಡು ಬರುತ್ತೀರಲ್ಲವೇ ?

(ಉತ್ತರವಿಲ್ಲ)

Sri R. K. PRASAD.—Sir, for starting these ancillary units, has the Government got any scheme or are they giving the ancillary units on *ad hoc* basis ?

Sri K. MALLAPPA.—The factory requires certain small parts. If anybody offers to manufacture these parts we approve. Some people have offered to manufacture certain ancillaries like screws, bolts and nuts. We have approved that.

Providing of necessary funds to Minor Irrigation Works in Hassan District.

*Q.—305. Sri H. D. DEVEGOWDA (Holenarasipur).—

Will the Government be pleased to state :—

(*a*) whether they are aware that number of estimates regarding minor irrigation works in Public Works Department Division and Sub-Division of Hassan District are pending for want of funds ;

(SRI H. D. DEVE GOWDA)

(*b*) whether they would take action to provide the necessary funds during the current year;

(*c*) The number and names of such works in Holenarasipur taluk that are pending sanction for want of funds;

(*d*) the amount of the estimates with reference to the above works in the said taluk?

A.—Sri ALUR HANUMANTHAPPA (Deputy Minister for Minor Irrigation).—

(*a*) No sanctioned works are kept pending for want of funds.

(*b*) Yes.

(*c*) One work. Construction of a new tank across halla near Banakuppa in Holenarasipur taluk.

(*d*) Rs. 84,000.

†Sri ALUR HANUMANTHAPPA.—Sir, there is a little modification. Sixty two estimates are pending for want of sanction in Hassan District and one more estimate is pending in the sub-division Holenarasipur near Enne Hole. The cost is 1,99,000 to benefit 2,100 acres.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕೇಳಿರುವ ಪ್ರಶ್ನೆಗೆ ಬಹಳ ಜಾಣ್ಮೆಯಿಂದ ಉತ್ತರ ಕೊಟ್ಟಿದ್ದಾರೆ. ಮಂಜೂರ್ಮಾಡಲ್ಪಟ್ಟ ಯಾವ ಕಾಮಗಾರಿಯನ್ನಾಗಲಿ ನಿಲ್ಲಿಸಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ನಾನು ಕೇಳಿರುವುದು ಹಾಸನ ಜಿಲ್ಲೆಯಲ್ಲಿ ನೀವು ಬಂದಾಗ ಇದ್ದ 19 ಲಕ್ಷದ ಅಂದಾಜನ್ನು ಮಂಜೂರು ಮಾಡದೆ ಹಾಗೆಯೇ ಬಿಟ್ಟಿರುವುದು ಗಮನಕ್ಕೆ ಬಂದಿದೆಯೇ ಎಂದು.

Mr. SPEAKER.—Let him not refer to personal conversations and private conversations on the floor of the House.

Sri B. V. MAGAVI.—In view of the scarcity condition prevailing in the State, are Government contemplating more funds to the scarcity areas in respect of minor irriation works?

Sri ALUR HANUMANTHAPPA.—Sir, our Hon. Chief Minister has already expressed several times in this behalf that we need more grants to take up fresh works in 1964-65. So, we are urging upon the Government of India to grant enough money for the minor irrigation works, that too, fresh works.

ಶ್ರೀ ಹೆಚ್. ಡಿ. ದೇವೇಗೌಡ.—ಹಾಸನದ ಜಿಲ್ಲೆಯಲ್ಲಿ ಸುಮಾರು 19 ಲಕ್ಷ ರೂಪಾಯಿಗಳಷ್ಟು ಕೆಲಸಗಳು ಮಂಜೂರಾಗಿದ್ದುವು. ಇನ್ನೂ ಡಿವಿಜನಲ್ ಆಫೀಸಿನಲ್ಲಿ ಪೆಂಡಿಂಗ್ ಆಗಿ ನಿಂತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಒಂದೇ ವರ್ಷದಲ್ಲಿ ಎಂದರೆ 1963-64ನೇ ಸಾಲಿನಲ್ಲಿ ಹಾಸನ ಜಿಲ್ಲೆಗಾಗಿ 24 ಲಕ್ಷ ರೂಪಾಯಿಗಳ ಕೆಲಸವನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ 62 ಸಣ್ಣ ಸಣ್ಣ ಕೆಲಸಗಳಿಗಾಗಿ ಈ ಡಿಸ್ಟ್ರಿಕ್ಟಿಗಾಗಿ ಮಂಜೂರು ಆಗಿದೆ. ಒಟ್ಟು ಇದರ ಅಂದಾಜಾ ಸುಮಾರು 7,18,000 ರೂಪಾಯಿಗಳಷ್ಟು ಬರುತ್ತದೆ ಎಂದು ಆಗಲೇ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಹೊಳೆನರಸೀಪುರಕ್ಕೆ ಸಂಬಂಧಪಟ್ಟಂತೆ ಇದ್ದ 16 ಕೆಲಸಗಳನ್ನು ಮಾಡಲು ಹಣ ಕಾಸಿನ ಕೊರತೆಯಿಂದಾಗಿ ಇನ್ನೂ ಇಲ್ಲಿರುವ ಡಿವಿಜನ್ನು ಆಫೀಸಿನಲ್ಲೇ ಪೆಂಡಿಂಗ್ ಇದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

Sri ALUR HANUMANTHAPPA.—Various works in Holenarsipur taluk which are under preliminary investigation are not included here. Only estimates which are ready and kept for sanction and which have been scrutinised by the concerned engineers are shown here.

ಶ್ರೀ ಎಸ್. ಶಿವಪ್ಪ.—ಹಾಸನ ಡಿವಿಜನ್ನಿನ ಬಗ್ಗೆ ಇಲ್ಲಿ ಬಡ್ಜೆಟ್ಟಿನ ಸಂಬಂಧದಲ್ಲಿ ಮಾನ್ಯ ಹಣಕಾಸಿನ ಸಚಿವರು ಇಲ್ಲಿ ಮಾತನಾಡುತ್ತಿದ್ದಾಗ ಹಾಸನ ಜಿಲ್ಲೆಯಲ್ಲಿ ತೆಗೆದುಕೊಂಡಿರತಕ್ಕ ಪ್ರಾಜೆಕ್ಟುಗಳ ಪಟ್ಟಿಯೊಂದನ್ನು ಇದರಲ್ಲಿ ಸೇರಿಸಿಲ್ಲ ಎಂದು ಹೇಳಿದಾಗ ಅದಕ್ಕೆ ಉತ್ತರ ಕೊಡುವಾಗ ಹಾಸನ ಜಿಲ್ಲೆಯಲ್ಲಿ ಮಂಜೂರಾಗಿರುವ ವಿವರಗಳನ್ನು ಮತ್ತು ಇನ್ನಿತರ ಸ್ಕೀಮುಗಳ ಪಟ್ಟಿಯನ್ನು ಒದಗಿಸಿ ಕೊಡುತ್ತೇನೆಂದು ಹೇಳಿದ್ದರು ಮತ್ತು ಅದು ಇದುವರೆಗೆ ನಮಗೆ ಕೊಟ್ಟಿಲ್ಲ. ಈಗಲಾದರೂ ವಿವರಗಳನ್ನು ಕೊಡುವ ಏರ್ಪಾಡು ಮಾಡುತ್ತೀರ?

Sri S. NIJALINGAPPA.—It does not mean that. My friend need not necessarily draw that inference.

Sri S. SIVAPPA.—Will the Hon'ble Chief Minister give an assurance to this House that at least by the close of the Session, he will place in our hands a list of works that have been included in the budget for the various taluks. That promise was given by the Finance Minister.

Sri S. NIJALINGAPPA.—I do not think it would be possible to do so within one are two days.

Mr. SPEAKER.—Whatever assurance has been given here should be complied with.

Sri S. NIJALINGAPPA.—I will get it done, but I cannot say that I can do it tomorrow.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಣ್ಣ ನೀರಾವರಿ ಕೆಲಸಗಳನ್ನು ಮಾಡುವಾಗ ಸಣ್ಣ ಪುಟ್ಟ ಕೆಲಸಗಳನ್ನೂ ಮಾಡಲು ಗ್ರಾಂಟಿಲ್ಲ ಎಂದು ಹೇಳಲು ಕಾರಣವೇನು?

ಶ್ರೀ ಎಸ್. ನಿಜಲಿಂಗಪ್ಪ.—ದುಡ್ಡಿನ ಕೊರತೆ ಇಲ್ಲ ಎಂದಲ್ಲ, ದುಡ್ಡಿನ ಕೊರತೆ ಇದೆ. ಅಷ್ಟು ಕೊರತೆಇದ್ದರೂ ಸಾಧ್ಯವಾದಮಟ್ಟಿಗೂ ಮಾಡತಕ್ಕಂತಹ ಕೆಲಸಗಳನ್ನು ಮಾಡಿಸಿಕೊಡುತ್ತೇನೆಂದು ಹೇಳಿದ್ದೇನೆ. ಆದರೆ ಇಲ್ಲಿ ಮಾನ್ಯ ಸದಸ್ಯರು ಸ್ವಲ್ಪ ತಿಳಿದುಕೊಂಡು ಹೇಳುತ್ತಾರೋ ಊಹೆಯಿಂದ ಹೇಳುತ್ತಾರೋ ಗೊತ್ತಾಗುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೊಸದಾಗಿ 24 ಲಕ್ಷ ರೂಪಾಯಿಗಳಷ್ಟು ಕೆಲಸವನ್ನು ಈ ವರ್ಷ ಅಂದಾಜುಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದಿರಿ. ಆದರೆ ಹಾಸನ ಜಿಲ್ಲೆಯಲ್ಲಿ ಸುಮಾರು 6,100 ಕೆರೆಗಳಿವೆ. ಇದಕ್ಕಾಗಿ 24 ಲಕ್ಷ ರೂಪಾಯಿಗಳು ಸಾಲುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ? ಹಾಗೆ ಬಂದಿದ್ದರೆ ಇಲ್ಲಿಗೆ ಇನ್ನೂ ಹೆಚ್ಚು ಹಣ ಕೊಡುವುದಕ್ಕೆ ಸರಕಾರ ಗಮನ ಕೊಡುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—26 ಲಕ್ಷದಷ್ಟು ಮಾಡಿರುವುದು ಹೊಸ ಕೆಲಸಗಳಿಗಾಗಿ ಆದರೆ ಸ್ಪಿಲ್ ಓವರುವರ್ಕುಗಳು ಬೇರೆ ಇವೆ. ಆದರೂ ಈ ವರ್ಷ ಇನ್ನೂ ಹೆಚ್ಚಿಗೆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಇದೆ.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಬಂದಿದ್ದಾಗ ಅಲ್ಲಿಗೆ ನೂರು ಕೆರೆಗಳ ಅಂದಾಜಾಗಿದ್ದನ್ನು ಡಿವಿಜನಲ್ ಆಫೀಸಿಗೆ ಬಂದುದನ್ನು ಹಿಂದಕ್ಕೆ ಕಳುಹಿಸಿ ನಿಮಗೆ ಬೇಕಾದ ಕೆಲವು ಕೆರೆಗಳ ಅಂದಾಜುಗಳನ್ನು ಮಾತ್ರ ಮಂಜೂರು ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಂಡಿರುವುದು ಸರಿಯೇ?

ಶ್ರೀ ಆಲೂರು ಹನುಮಂತಪ್ಪ.—ನೂರು ಇನ್ನೂರು ಕೆಲಸಗಳ ಪ್ರಶ್ನೆಯಲ್ಲ. ಅದಷ್ಟೂ ಜಾಸ್ತಿ ಕೆಲಸಗಳನ್ನು ಮಾಡಬೇಕೆಂದಿದೆ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸರ್ವೆಮಾಡಿರತಕ್ಕ ಕೆಲಸಗಳು ಹೆಚ್ಚಾಗಿರಲಿಲ್ಲ. ಅದಕ್ಕಾಗಿ ಹೆಚ್ಚಾಗಿ ಸರ್ವೆ ಮಾಡಬೇಕೆಂದು ಈಗ ಮಾಡಿಸುತ್ತಿದ್ದೇವೆ.

Replacement of Railway tract between Nanjangud and Chamarajanagar

*Q.—342. Sri M. C. BASAPPA (Chamarajanagar).—

Will the Government be pleased to state :—

whether they are aware that the Railway tract between Nanjangud and Chamarajanagar required replacement of rails to improve the speed of the Train?

A.—Sri S. NIJALINGAPPA (Chief Minister).—

Yes.

ಶ್ರೀ ಎಂ. ಸಿ. ಬಸಪ್ಪ.—ಇದರ ಬಗ್ಗೆ ರೈಲ್ವೆ ಬೋರ್ಡಿನವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಈ ಲೈನು ಇವೊತ್ತಿನಿಂದ ಸೆಂಟ್ರಲ್ ಗವರ್ನಮೆಂಟಿಗೆ ಟ್ರಾನ್ಸ್‌ಫರು ಆಗಿರಬೇಕು. ಇದಕ್ಕೆ ನಾವು ಕೂಡ ಒಪ್ಪಿಕೊಂಡು 4, 80,000 ದಷ್ಟು ಪರಿಹಾರವನ್ನು. ತೆಗೆದುಕೊಂಡು ಈ ರೈಲ್ವೆ ಟ್ರ್ಯಾಕ್ಕನ್ನು ಅವರಿಗೆ ಟ್ರಾನ್ಸ್‌ಫರು ಮಾಡಲಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಇವರು ತೆಗೆದುಕೊಳ್ಳುವುದೇನೋ ಸರಿ. ಅದರೆ ಈ ಲೈನನ್ನು ಉತ್ತಮ ಪಡಿಸುವುದಕ್ಕಾಗಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ತಿಳಿದು ಬಂದಿರುವ ಮಟ್ಟಿಗೆ ಸುಮಾರು 26 ಲಕ್ಷ ರೂಪಾಯಿಗಳಷ್ಟು ಖರ್ಚುಮಾಡಿ ಇಲ್ಲಿ ಹೊಸ ಲೈನನ್ನು ಹಾಕಬೇಕೆಂದು ಯೋಜನೆ ಹಾಕಿಕೊಂಡಿದ್ದಾರೆಂದು ಗೊತ್ತಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಈ ಕಾರ್ಯಕ್ರಮ ಇನ್ನು ಎಷ್ಟು ದಿವಸದಲ್ಲಿ ಬರುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ನಿನ್ನು ಮೇಲೆ ಇದನ್ನು ಕೇಂದ್ರ ಸರಕಾರದವರಲ್ಲಿ ಕೇಳಬೇಕು.

ಶ್ರೀ ಜಿ. ವಿ. ಗೌಡ.—ಇದಕ್ಕೇನು ಪರಿಹಾರವನ್ನು ಕೇಂದ್ರದವರು ಕೊಡುತ್ತಾರೆ. ಅದನ್ನು ಮೈಸೂರು ಜಿಲ್ಲೆಯಲ್ಲಿರುವ ತಾಲ್ಲೂಕು ಬೋರ್ಡುಗಳ ಮೂಲಕ ಹಂಚುವ ವ್ಯವಸ್ಥೆಮಾಡುತ್ತೀರಾ?

ಶ್ರಿ ಎಸ್. ನಿಜಲಿಂಗಪ್ಪ.—ಅದು ಮುಂದೆಬರುವ ವಿಚಾರ.

ಶ್ರೀ ಎಂ. ಸಿ. ಬಸಪ್ಪ.—ಈಗ ಇಲ್ಲಿರುವ ರೈಲ್ವೆ ಕಂಬಿಗಳ ಮೂಲಕ ಹೆವಿ ಲೋಡುಗಳನ್ನು ಸಾಗಿಸುವುದಕ್ಕಾಗದೇ ಇರುವುದರಿಂದ ರೈಲ್ವೇ ಬೋರ್ಡಿನವರಿಗೆ ನಷ್ಟವಾಗುತ್ತದೆ. ಆದರಿಂದ ಇದನ್ನು ಆದಷ್ಟು ಬೇಗ ಮಾಡಬೇಕೆಂದು ಈ ಸರಕಾರದವರು ಒಂದು ಆಶ್ವಾಸನೆಯನ್ನು ಕೊಡುತ್ತಾರೆಯೇ?

My question was bigger but some of them have been omitted.

Sri S. NIJALINGAPPA.—I will certainly write to the Central Government and request them to look into it very early.

Progress of the Work of Devarabelakere pick-up over Syagali halla in Harihar Taluk.

* *Q.*—347. Sri GANJI VEERAPPA (Harihar).—

Will the Government be pleased to state.—

(*a*) the progress made so far to complete the Devarabelakere Pick-up over Syagali halla in Harihar taluk;

(*b*) whether they have stopped further work of this pick-up recently and if so, the reasons for the same;

(*c*) when they intend to complete the same;

(*d*) whether the origenal estimate has been revised;

(*e*) if so, to what extent and the reasons for the same?

A.—Sri S. NIJALINGAPPA (Chief Minister).—

(*a*) The work which was commenced in December 1960 was stopped in February 1961.

(*b*) Yes, due to firm foundations not having been met with during the excavation for seating of bund.

(*c*) After the completion of the further investigations which are in progress and after the revised estimate for the work is sanctioned.

(*d*) It will be revised after the further investigations are completed.

(*e*) Does not arise in view of reply to clause (*d*).

Sri GANJI VEERAPPA.—May I know whether the object of taking up this project in 1960 was with a view to provide irrigational facilities to Harihar Taluk to irrigate 15,000 acres.

† Sri S. NIJALINGAPPA.—Yes.

Sri GANJI VEERAPPA.—May I know the original and revised estimates ?

Sri S. NIJALINGAPPA.—The original estimate was about 40 lakhs and the revised estimate is 122 lakhs.

Sri GANJI VEERAPPA.—May I know if it has taken 3 years to find a seating for the bund and therefore the foundations could not be laid ?

Sri S. NIJALINGAPPA.—They have investigated the cause and the revised estimate has come to 122 lakhs. Even so, this question is being examined by the technical sub-committee. The S.E. has been asked to provide definite reports.

Sri GANJI VEERAPPA.—When will the estimates be completed.

Sri S. NIJALINGAPPA.—The estimates are before Government and it will be looked into very carefully.

Vice-Chancellors appointed and worked in the University of Mysore during the last Two Years.

**Q.*—427. Sri S. SIVAPPA (Sravanabelagola).—

Will the Government be pleased to state:—

(*a*) how many Vice-Chancellors were appointed and worked in the University of Mysore during the last two years, *i.e.*, 1962-63 and 1963-64 ;

(*b*) how many of them had working knowledge of Kannada ?

A.—Sri S. R. KANTHI (Minister for Education).—

(*a*) Five.

(*b*) Two.

Sri S. SIVAPPA.—Five Vice-Chanellors have been appointed during 2 years in the Mysore University. May I know the normal period for which a Vice-Chancellor is appointed ?

† Sri S. R. KANTHI.—If the Hon'ble Member wants to know the period is 5 years and 5 Vice-Chancellors and for 4 years 4 Vice-Chancellors. I will give the details. Mr. Rahmatullah was appointed on 11th October 1962, Sardar Pannikar was appointed on 1st July 1963, Dr. Dawar on 20th December 1963 and Dr. K. L. Shrimali on 16th March 1964.

Sri S. SIVAPPA.—May I know the strong reasons for the Mysore Government to appoint 6 Vice-Chancellors for a period of 20 months.

Sri S. R. KANTHI.—This question came up before the University so many times. The reasons are obvious.

Sri S. SIVAPPA.—May I know the reasons? Government has not so far stated reasons for appointing so many Vice-Chancellors?

Sri S. R. KANTHI.—Sir, he knows it much better than myself. Still, if he wants to know why it has been done—after Mr. Nikkam, we wanted to appoint somebody of prominence from outside. So in the meantime, we had to make some arrangements. We appointed Mr. Rahmathulla. After that, Sri Panikar agreed to become Vice-Chancellor. Government appointed him and he took charge on 1st July 1963. Unfortunately for us, Mr. Panikkar died on 12th Octoher 1963 and we had to make temporary arrangements until we could get a prominent man from outside. So we made arrangements by appointing Dr. Davar on 20th October 1963. Dr. Srimali took charge on 20th March 1963.

Sri S. SIVAPPA.—May I know the reasons for appointing shifting men for nearly one year?

Sri S. R. KANTHI.—We wanted to make some arrangement until Mr. Panikkar came over. There is no shifting men.

Sri S. SIVAPPA.—Is the Government happy for the arrangement made for the smooth running of the University by having shifting arrangements like this.

Sri S. R. KANTHI.—In fact we had chosen Sardar Panikkar and we expected that he would continue for three years. But God willed it otherwise.

Sri S. SIVAPPA.—Government was pleased to say that the two people who had been appointed had no working knowledge of Kannada the language of the State.

Sri S. R. KANTHI.—When we appointed Sardar Panikkar we appointed him for three years. We appointed Dr. K. L. Srimali, it is also for three years and it is according to the provisions of the Act.

Sri V. S. PATIL.—Sir, may I know whether Mr. Nikkam was made to retire or whether he retired voluntarily?

Sri S. R. KANTHI.—His term was over. He was carrying on because we wanted him to carry on for some time. When we made some other arrangement, he had to retire.

Constitution of the District School Board, Dharwar.

*Q.—451. Sri SIDDAIAH KASHIMATH (Shirahatti).—

Will the Government be pleased to state :—

(a) whether it has come to their notice that the District School Board, Dharwar, was constituted on 7th September 1963 as per Notification No. ED 239 PMS 63;

(b) who are the Members of the Board and their qualifications;

(c) the basis on which these members are appointed to that Board ?

A.—Sri S. R. KANTHI (Minister for Education).—

(a) Yes.

(b) *Vide* Statement given below.

(c) According to Bombay Primary Education Act and Rules.

V-31c.c. N64
N64-4-26-30
(B) 4811

(SRI S. R. KANTHI)

STATEMENT

Sl. No.	Name of the Member	Qualification
1	Sri Fakirappa Mulgund, Social Worker, Post Gadag, District Dharwar.	Primary V Standard.
2	Sri Gangappa Laxmappa Shatter, Vice-President, Byadagi Municipality, Byadgi.	III Standard English (Old).
3	Sri K. M. Nalawagi, B.A., LL.B., Post Katenahalli, Taluk Haveri, District Dharwar.	B.A., LL.B.
4	Sri B. H. Patil, Post Hattimattur, Taluka Haveri, District Dharwar.	Matriculation passed.
5	Sri Marigowda F. Patil, Post Yerguppi, Taluka Kundgol, District Dharwar.	S. S. C.
6	Sri Siddappa Sindhur, Post Akki Alur, District Dharwar.	Studied up to Matric.
7	Sri Kalandarkhan M. Dasankop, Councillor, Hubli-Dharwar Corporation, Dharwar.	Passed English Standard VI (Old).
8	Sri Gururaj Gowda Aparanji, Post Alur, Taluka Mundargi, District Dharwar.	Studied up to Matric.
9	Smt. Neelamma C. Bhadrapur, Dajiban Peth, Hubli, District Dharwar.	Studied up to IV Standard.
10	Sri Kashinath Shastri, Gachhinamath, Post Naregal, Taluka Ron, District Dharwar.	(i) Primary VI Standard. (ii) Sanskrit Sahitya Adhyadhama (Calcutta University). (iii) Vyadhya Bhushan of Aligarh University.

11	Sri Rayangouda S. Patil, Post Kalghatgi, District Dharwar.	Passed Kannada ; Vernacular School Final examination.
12	Sri Goneppa Sowkar, Post Maidur, Taluk Ranebennur, District Dharwar.	English VI Standard.
13	Principal, Graduates' Basic Training Centre, Dharwar- (Sri M. G. Handral).	B. A. (Hons.), M. Ed., D. P. Ed.,
14	Sri C. J. Amanna, B.A., B.T., Head Master, Bassel Mission Girls' High School, Dharwar.	B.A., B.T.
15	Sri B. B. Mamle-Desai, President, Taluka Development Board, Shiggaon, District Dharwar.	Upto B. A.
16	Sri L. S. Patil, President, Municipal Council, Nargund, District Dharwar.	English III Standard.

ಶ್ರೀ ಸಿದ್ದಯ್ಯ ಕಾಶೀಮಠ.—ತಾ॥ 7-9-63ರಲ್ಲೇ ಧಾರವಾಡ ಸ್ಕೂಲ್ ಬೋರ್ಡನ್ನು ರಚನೆ ಮಾಡಿದ್ದಾಗ್ಯೂ ಸರ್ಕಾರದವರು ಬೊಂಬಾಯಿ ಪ್ರೈಮರಿ ಎಜುಕೇಷನ್ ಆಕ್ಟ್ ಪ್ರಕಾರ ಸದಸ್ಯರನ್ನು ನಾಮಕರಣ ಮಾಡುವುದರ ಉದ್ದೇಶವಾದರೂ ಏನು ?

† Sri S. R. KANTHI.—Sir, this question has been permanently decided. There were two writ applications before the High Court and both have been dismissed. There is no irregularity so far as the appointments of the District Board of Dharwar.

Sri G. V. GOWDA.—May I know the Chairman out of these sixteen Members ?

Sri S. R. KANTHI.—The other day, the Board has elected Mr. Sindur Siddappa as Chairman.

ಶ್ರೀ ಸಿದ್ದಯ್ಯ ಕಾಶೀಮಠ.—ಅಲ್ಲಿರತಕ್ಕ ಡಿ. ಪಿ. ಐ. ರವರ ಸಲಹೆ ಬಂದಿದ್ದರೂ ಅದನ್ನೂ ತಿರಸ್ಕಾರ ಮಾಡಿ, ರೂಲ್ಸ್ ರೆಗ್ಯುಲೇಷನ್‌ಗಳನ್ನೂ ತಿರಸ್ಕಾರ ಮಾಡಿ ಸರ್ಕಾರದವರು ತಮ್ಮ ಇಚ್ಛೆ ಬಂದವರನ್ನು ನೇಮಿಸಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಕೆಳಗಿನವರಿಂದ ಶಿಫಾರ್ಸ್‌ಗಳೇನೋ ಬರುತ್ತವೆ, ಆದರೆ ಅದರಲ್ಲಿ ಸೂಕ್ತ ಕಂಡವರನ್ನು ಸರ್ಕಾರದವರು ಗೊತ್ತುಮಾಡುತ್ತಾರೆ. ಅಲ್ಲಿಯ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತಿದೆ, ನನಗೂ ಗೊತ್ತಿದೆ.

ಶ್ರೀ ಟಿ. ಕೆ. ಕಂಬ್ಳಿ.—ಇವರನ್ನು ಯಾವ ಡೇಟಿನಿಂದ, ಎಷ್ಟು ದಿನಗಳವರೆಗೆ ಗೊತ್ತು ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಅನ್‌ಟಿಲ್ ಫರ್ದರ್ ಆರ್ಡರ್ಸ್ ಎಂತ ಮಾಡಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಇಲ್ಲಿಯೂ ಆ ಬಳ್ಳಾರಿಯಲ್ಲಿ ಮಾಡಿರತಕ್ಕ ರೀತಿಯಲ್ಲಿ ಮಾಡುತ್ತೀರಾ ?

Sri S. R. KANTHI.—This question was examined by the Law Department and they were of the opinion that the District School Boards in Bombay area cannot be abolished as they were statutory bodies.

Sri G. V. GOWDA.—Is there any proposal before the Government to secure uniformity in regard to the Primary Education Act ?

Sri S. R. KANTHI.—We are trying to have a single Act for the entire State. As soon as that Act comes into being, naturally these statutory bodies will go away.

Cost incurred in creating special branch for the implementation of the Betterment Levy Act.

*Q.—488. Sri V. S. PATIL (Belgaum).—

Will the Government be pleased to State :—

(a) what is the cost incurred by Government in creating special Branch for the implementation of the Betterment Levy Act (Irrigation), 1957 up till now ;

(b) the number of officers that were or have been appointed for the purpose and how long they are working ;

(c) what is outcome of their work ?

A.—Sri S. NIJALINGAPPA (Chief Minister).—

(*a*) Rs. 2,37,300.

(*b*) Five Betterment Levy Officers (Mysore, Simoga, Bellary, Munirabad and Belgaum) from 9th May 1961 up to 31st January 1963.

(*c*) The work done by the Betterment Levy Officers by way of collection of statistics in their tenure of appointment has helped in the introduction of a simpler provision in the Mysore Irrigation (Levy of Betterment Contribution and Water Rate) Act, 1957.

Sri V. S. PATIL.—May I know how many officers were working-staff and officers put together ?

†Sri S. NIJALINGAPPA.—One Assistant Commissioner. One Thasildar second grade-revenue inspector-Revenue Surveyor, First Division Clerks 2, Second Division Clerk 1, Steno-typist-1, peon.

Sri V. S. PATIL.—Whether it is a fact that all these persons were given some more pay for this particular work ?

Sri S. NIJALINGAPPA.—I am not aware of any more pay, Sir.

Sri V. S. PATIL.—Sir, this is mentioned in Government Order that these posts were to carry 10 percent of their basic pay to be given in addition to their pay, as this was a special work.

Sri S. NIJALINGAPPA.—If they are on other duties, they will be paid.

Sri V. S. PATIL.—What are the recommendations and what is the data collected by these people from 9-5-1961 to 31-1-1963 ?

Sri S. NIJALINGAPPA.—They tried to see how best the implementation of the betterment levy could be made. They studied the problem in all the areas. They came to the conclusion that they were unworkable. Certain changes were found necessary. Therefore, the new Act has come into being. That experience that has been gained has been made use of.

Sri V. S. PATIL.—Sir, I had occasion to visit this place personally. These people were simply sitting for 1½ years without doing any work. You said that not a single pie has been recovered by these people though they were appointed for this purpose.

Sri S. NIJALINGAPPA.—After this, the rules had to be framed and in order to frame these rules, they had to go into the field and make a report. Unfortunately they did not seem to have done much as per information furnished by my friend. But I am sure the experience they have gained has been of some use in the framing of the Act.

Sri C. J. MUCKANNAPPA.—May I know what is the collections made in other areas Mysore, Shimoga, Bellary and Munirabad ?

Sri S. NIJALINGAPPA.—No collections.

Sri G. V. GOWDA.—You have been pleased to say that during the tenure of their appointment, they indulged in collecting statistics; whether they have made any list of assessees, demands, etc.

Sri S. NIJALINGAPPA.—They did not indulge in any of these things. They only tried to do their duty.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.--ಎಷ್ಟು ಹಣ ವಸೂಲಾಗಬೇಕೆಂಬುದನ್ನು ನಿರ್ಧರ ಮಾಡಿಕೊಳ್ಳದೆ ಅಧಿಕಾರಿಗಳನ್ನು ನೇಮಕ ಮಾಡಬಾರದೆಂದು ನಾನು ಇಲ್ಲಿಗೆ 2 ವರ್ಷಗಳ ಹಿಂದೆ ಇದೇ ಸಭೆಯಲ್ಲಿ ತಿಳಿಸಿದ್ದೆ. ಹೀಗೆ ಅನಾವಶ್ಯಕವಾದ ವೆಚ್ಚವನ್ನು ತಪ್ಪಿಸಲು ಸರ್ಕಾರವೇನು ಕ್ರಮವನ್ನು ಕೈಗೊಂಡಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಅವಾಯ್ಡ ಮಾಡುವುದಕ್ಕಾಗೇ ಆಕ್ಟನ್ನು ತಿದ್ದುಪಡಿ ಮಾಡುವುದು.

Sri V. S. PATIL.—In regard to framing of the rules, for the implementation of the Act, I think the Secretariat is quite able to do it. Why a special branch was created in all these districts ?

Sri S. NIJALINGAPPA.—Because it is a special kind of work and the previous Act contemplated recovery based on the amount of produce per acre. That was I think an unpractical step which created difficulties. Therefore we felt it necessary to amend the Act.

Levying of Surcharge or Stamp Duty on the Registration of Documents.

Q.*—204. **Sri V. MASIYAPPA (Hiriyur).—

Will the Government be pleased to state :—

(*a*) whether most of the Taluk Development Boards are levying a surcharge or Stamp duty on the Registration of documents in the Sub-Registrar's Offices ;

(*b*) whether the amounts collected on this account are being transferred to the Taluk Boards regularly immediately at the end of the quarters ?

A.—**Sri RAMAKRISHNA HEGDE** (Minister for Development, Panchyat Raj and Co-operation).—

(*a*) Yes.

(*b*) Yes, generally.

ಶ್ರೀ ವಿ. ಮಸಿಯಪ್ಪ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಸಾಮಾನ್ಯವಾಗಿ ವರ್ಗಾಯಿಸಲಾಗುತ್ತಿದೆ ಎಂಬುದಾಗಿ ಹೇಳಿದೆ. ನಮ್ಮ ಅನುಭವ ಇರತಕ್ಕದ್ದು ಆಯಾ ಕ್ವಾರ್ಟರ್ ಎಂಡ್‌ನಲ್ಲಿ ಈ ಬಗ್ಗೆ ವಸೂಲಾದ ಮೊಬಲಗು ತಾಲ್ಲೂಕು ಮಂಡಲಿಗೆ ವರ್ಗಾವಣೆಯಾಗುವುದಕ್ಕೆ ಸಾಕಷ್ಟು ಪ್ರಯತ್ನಗಳು ನಡೆಯುತ್ತಾ ಇಲ್ಲ. ಅದರಿಂದ ತಾಲ್ಲೂಕು ಬೋರ್ಡುಗಳಿಗೆ ಹಣಕಾಸಿನ ವಿಷಯದಲ್ಲಿ ಬಹಳ ತೊಂದರೆಯಾಗಿದೆ ಎಂಬುದಾಗಿ ನನ್ನ ಗಮನಕ್ಕೆ ಬಂದಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಜಾಗ್ರತೆಯಾಗಿ ವಸೂಲಾದ ಮೊಬಲಗನ್ನು ತಾಲ್ಲೂಕು ಮಂಡಲಿಗೆ ವರ್ಗಾಯಿಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

† ಶ್ರೀ ರಾಮಕೃಷ್ಣ ಹೆಗ್ಗಡೆ.—ತೆಗೆದುಕೊಳ್ಳುತ್ತೇವೆ.

Mr. SPEAKER.—Question hour is over.

1-00 p.m.

QUESTIONS FOR ANSWERS ON THE DAY

(but not taken up)

Murders taken place during the last two years in the Aesalur Police Range Area of Saklespur.

*Q.—507. Sri B. H. LAKSHMANAIAH (Belur).—

Will the Government be pleased to state :—

(a) the number of murders that have taken place during the last two years in the Aesalur Police Range area of Saklespur Taluk;

(b) the number of cases in respect of which charge sheets have been filed during the said period ?

A.—Sri R. M. PATIL (Minister for Home).—

(a)

		Number of murder cases reported
1962	...	4
1963	...	3

(b)

		Number of cases charge-sheeted
1962	...	4
1963	...	3

Mr. SPEAKER.—Now calling attention to a matter of urgent importance.

Calling Attention to a Matter of Urgent Public Importance,

Re: Sinking of launch in Sharavathy river between Honnavar and Kasaragod.

Smt. V. V. MIRJANKAR (Kumta).— I request the permission of the Chair to call attention to a matter of urgent importance under rule 63, namely the sinking of the launch in Sharavathy river beetweenHonnavara and Kasargod recenty, resulting in the death of a number of persons, and action taken by the Government in finding out the cause for the mishap and the relief given to the victims.

† Sri R. M. PATIL (Minister for Home).—Mr. Speaker, Sir, in response to calling attention, I submit that it is a very bad incident. At about 1 p. m. on 23rd March 1964 a ferry launch sank in Sharavathy river between Honnavaraand Kasargod. In that ferry there were about 33 people sailing. It is reported up till now and during the course of the investigation it is revealed that there were 33 people out of whom 27 were traced and six dead bodies are also traced. The incident took

(SRI R. M. PATIL)

place on account of the dash between two pillars which are under construction in Sharavathy river pillars Nos. 5 and 6 of the six persons whose dead bodies were found, three are females and 2 boys and one girl. The investigation so far revealed that this incident was the result of the ferry hitting between the 5th and 6th pillar. This has been registered under Crime No. 14 of 1964 under section 304 Part A, I. P. C. Honnavar Police are investigating The Superintendent of Police and the Deputy Superintendent of Police were there immediatley after this incident was reported to them. They are taking every step to see that it is properly investigated. About 20 people who have been rescued are examined during the course of the investigation. Still more are to be examined and at the same time as to how many were exactly there in the boat has not yet been completely ascertained· Every effort is being made to acertain the exact number. One more thing is, almost all the villagers who are on the bank are alerted to be watchful for any dead body found anywhere near about the village. These are the steps that are taken and the Government is keen to find out the exact number and the exact cuase for this accident.

Smt. V. V. MIRJANKAR.—May I know whether the pillars were visible or not ?

Sri R. M. PATIL.—That can be acertained. Even if they are not visible, they can be traced.

Sri S. SIVAPPA (Sravanabelagola).—What about the payment of compensation to the people who have lost their lives?

Mr. SPEAKER.—By whom?

Sri S. SIVAPPA.—It is the ultimate responsibility of Government. Government must examine that question.

Sri B. P. KADAK (Karwar).—Would the Government conduct a judicial enquiry into this matter?

Sri R. M. PATIL.—At the most we can hold a magisterial enquiry.

BUSINESS OF THE HOUSE

Sri S. SIVAPPA.—I had given a notice of calling attention regarding the statement by the Railway Minister about Hassan-Mangalore Railway. I wanted to call the attention of the Chief Minister to maka a statement on that.

Mr. SPEAKER.—Yes so far as the non-official resolution is concerned, 4½ hours have been exhausted. That leaves on hand 1½ hours. I suppose that will be adequate enough.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ಎಷ್ಟೋ ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಸ್ವಲ್ಪ ಕಾಲವನ್ನು ಹೆಚ್ಚು ಮಾಡಬೇಕೆಂದು ಅಧ್ಯಕ್ಷರನ್ನು ಕೇಳುತ್ತೇನೆ.

Sri V. S. PATIL (Belgaum-I).—Yesterday there was no speaker at all on this resolution. Now the Congress Party appears to have decided not to allow any other resolution, especially our resolution to come up on the floor of the House. It is not a fair dealing so far as the Opposition is concerned and I protest for the extension of any time for the present resolution.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಇದರಲ್ಲಿ ದುರುದ್ದೇಶವೇನೂ ಇಲ್ಲ. ಇದು ಬಹಳ ಮುಖ್ಯವಾದಂಥ ಪ್ರಶ್ನೆ. ದಕ್ಷಿಣ ಭಾರತದಲ್ಲಿರತಕ್ಕ ಮುಖ್ಯ ನದಿಯಾದ ಕಾವೇರಿ ನದಿಯ ನೀರಿನ ಕರಾರಿನ ಪ್ರಕಾರ ಅಲ್ಲಿನ ನೀರನ್ನು ಆ ಕರಾರಿನ ವೇಳೆಯಷ್ಟರೊಳಗೆ ಉಪಯೋಗಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಅನೇಕ ಸದಸ್ಯರು ಈ ವಿಚಾರದಲ್ಲಿ ಚರ್ಚೆ ಮಾಡಿರುವುದರಿಂದ ಸರ್ಕಾರದಿಂದ ಸಮರ್ಪಕವಾದ ಉತ್ತರವನ್ನು ಪಡೆಯಬೇಕೆಂಬ ಆಶೆ ಇದೆ. ಅದಕ್ಕಾಗಿ ಇದಕ್ಕೆ ಹೆಚ್ಚು ಕಾಲಾವಕಾಶ ಕೊಡಬೇಕೆಂದು ನನ್ನ ಪ್ರಾರ್ಥನೆ.

Mr. SPEAKER.—Let us go a little slowly.

Sri S. SIVAPPA.—The Committee after considering the importance of this resolution has fixed certain time. I think the time fixed for this resolution is six hours. I think the Committee has done a good job in taking all factors into consideration and given six hours. As my friend Mr. Hutchmasty Gowda puts it, there is no doubt that the question of Cauvery waters is very important. The importance of the subject will be served by a good reply by the Government. We have discussed this enough. If the Chief Minister promises on behalf of Government that he would take all steps to see that the Cauvery valley projects will be implemented, that will serve the purpose. Let no Member of this House feel that their resolutions are going to be suppressed deliberately. Let us stick to the time allotted by the Committee.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಶ್ರೀಮಾನ್ ಶಿವಪ್ಪನವರಿಗೂ ಗೊತ್ತಿದೆ. ಎಷ್ಟೋ ಸಂದರ್ಭಗಳಲ್ಲಿ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಗೊತ್ತು ಮಾಡಿದ್ದಂತಹ ಕಾಲವನ್ನು ಹೆಚ್ಚು ಮಾಡಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಅದರಂತೆ ಈಗಲೂ ಈ ನಿರ್ಣಯದ ಮೇಲೆ ಚರ್ಚೆ ನಡೆಯಲು ಈ ಸಭೆಯವರು ಅನುಮತಿ ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

Sri L. B. BIRJE.—(Marathi)

Sri V. S. PATIL.—That is a good suggestion that no repetition of points raised by Hon'ble Members yesterday or today should be allowed. If there are new points and arguments, we have no objection.

Mr. SPEAKER.—It is a very good suggestion indeed. I will enforce it in future in respect of all debates. It will simplify my work and all work will be over in no time. Shall I analyse the budget debates and point out the repetitions after repetitions? That will be helpful. Now we have four days for non-official work, of which one day is gone.

Sri V. S. PATIL.—Even if the whole day is taken up by this resolution, I have no objection. Let the Leader of the House promise that the next resolution will be taken up atleast tomorrow.

Sri K. PUTTASWAMY.—We can see the reason behind the representation made by the Hon. Member. If it was the intention of the Hon. Member to make the representation, why did he attribute motives and threatened to stage a walk-out?

Sri V. S. PATIL.—I may repeat that we will be compelled to do such things as long as men like you are there to gag our mouth?

Mr. SPEAKER.—Each member is entitled to have his opinion about all others, individually and collectively. I am not concerned with them but such opinions should not be expressed virulently. Subject to that condition, they can reserve their opinions to themselves and not express them on the floor of the House to embarrass us. I have gone through

(MR. SPEAKER)

all these. Of the four days we had, one day is gone. I believe that in today's list, identical issues are there, as the first and the second. I do not think there is any chance of our going beyond the second resolution. How can I say that all the four days will be exhausted by the first resolution? Let us wait.

Sri V. S. PATIL.—We know that it is the desire of the ruling party to go on talking on the first resolution indefinitely. All the four days will be exhausted by the first resolution.

Mr. SPEAKER.—No man is to be punished or held responsible for intentions. I have very bad intentions in my mind, but I am not to be held responsible until I translate the intentions into practice. If the Hon. Member feels that today is gone, tomorrow and the day after are there. I am not going to say that the House will take the first resolution all the four days.

Sri V. S. PATIL.—If all the four days are to be taken up by the first resolution, it will save the trouble. We will go home and there is no reason why we should sit here.

Mr. SPEAKER.—Let me see how many members want to participate in the discussion on this resolution.

(*Ten members rose.*)

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈ ನಿರ್ಣಯದ ಮೇಲೆ ಚರ್ಚೆಮಾಡಲು ಈ ದಿವಸ ಪೂರ್ತಿ ಕಾಲಾವಕಾಶವನ್ನು ಕೊಡಬೇಕು.

Mr. SPEAKER.—The Whip must be precise. What would be the time required for reply? I do not know.

Sri V. S. PATIL.—We can as well rise at 5 O' clock so that they can prolong the resolution tomorrow and the day after.

Sri B. P. KADAM.—This is a strange democracy.

Mr. SPEAKER.—No comments, please. Should I not ascertain the opinion of the House to determine the time required. In view of the fact that there are two days more. I do not apprehend any trouble so far as the resolution of Sri Patil is concerned.

Sri V. S. PATIL.—That is why I requested that the Leader of the House, who is here now, may promise here and now that either tomorrow or the day after, my resolution would be taken up. I am satisfied.

Mr. SPEAKER.—With or without any assurance, for today I do not apprehend any trouble. I will put it to the House. Is it the desire of the House that the rest of the day be devoted for this Resolution?

The motion was carried.

Sri V. S. PATIL.—Sir, in view of the attitude of the ruling party, we are walking out of the House. We are forced to do it.

(*Some Opposition Members withdrew from the House*)

[MR. DEPUTY SPEAKER in the Chair.]

NON-OFFICIAL RESOLUTION

Re: Utilization of Potential Resources of Cauvery Waters.

(Debate continued)

† ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲ್‌ಪುರ).—ಅಧ್ಯಕ್ಷರೇ, ಕಾವೇರಿ ನೀರಿನ ಸಂಪೂರ್ಣವಾದ ಉಪಯೋಗವನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುಗಿಸಬೇಕು ಎಂದು ಈ ನಿರ್ಣಯ ತೋರಿಸುತ್ತದೆ. ಮೊದಲು ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ನದಿಗಳ ನೀರನ್ನು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕಾದರೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ಎನ್ನುವುದು ಅರ್ಥವಾಗದೆ ಹೋಗುತ್ತದೆ. ಇದರ ಕಾರಣವೇನೆಂದರೆ ನಮ್ಮಲ್ಲಿ ಕೃಷ್ಣಾನದಿ ಮತ್ತು ಕಾವೇರಿ ನದಿಗಳಿದ್ದರೂ ಕೂಡ ನಮ್ಮ ಹಣಕಾಸಿನ ಯೋಗ್ಯತೆ ಕಡಮೆ ಇದೆ ಎನ್ನುವುದನ್ನು ನಾವೆಲ್ಲರೂ ಅರಿಯಬೇಕಾಗಿದೆ. ಈಗಾಗಲೇ ಸಂಪೂರ್ಣ ನೀರನ್ನು ಉಪಯೋಗಮಾಡಬೇಕಾದರೆ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಬೇಕಾಗುತ್ತದೆಂದು ನಮಗೆ ಗೊತ್ತಾಗಿದೆ, ಈ ಕಾರಣದಿಂದ ಈಗ ನೀರಿನ ಉಪಯೋಗಕ್ಕಿಂತ ಹೆಚ್ಚಾಗಿ ನಮ್ಮ ಹಣಕಾಸಿನ ಪರಿಸ್ಥಿತಿ ಏನಿದೆ ಎನ್ನುವುದರ ಒಂದು ಪಕ್ಷಿನೋಟವನ್ನು ನೋಡಿದರೆ ನಮಗೆ ಬಹಳ ನಿರಾಶೆಯಾಗುತ್ತದೆ. ಮೊನ್ನೆ ಕೇಂದ್ರದ ನೀರಾವರಿ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ: ಬಹಳ ಪ್ರದೇಶಗಳಲ್ಲಿ ನೂರಕ್ಕೆ 80ರಷ್ಟು ನೀರಿನ ಉಪಯೋಗ ಈಗಾಗಲೇ ನಡೆದಿದೆ, ಇಂಡಿಯಾ ದೇಶದಲ್ಲಿ ಮಾಡಿಕೊಂಡಷ್ಟು ಜಗತ್ತಿನಲ್ಲಿ ಇಷ್ಟು ಪರ್ಸೆಂಟೇಜ್ ಉಪಯೋಗ ಮಾಡತಕ್ಕ ಯಾವ ದೇಶವೂ ಇಲ್ಲ ಎಂದು ಹೇಳಿದ್ದಾರೆ ? ಇಂಡಿಯಾದೇಶದ ಸರಾಸರಿ 80 ಪರ್ಸೆಂಟ್ ಯಾವ ಕಡೆಗೆ; ಮೈಸೂರು ದೇಶದಲ್ಲಿ ಆರು ಪರ್ಸೆಂಟ್ ಯಾವ ಕಡೆಗೆ; ಇದನ್ನು ನೋಡಿದರೆ ಒಂದು ಕಡೆ ಜಗತ್ತಿನಲ್ಲಿ ಇಂಡಿಯಾದೇಶ ನೀರಾವರಿಯಲ್ಲಿ ಮುಂದುವರಿದಿದೆ ಎಂದು ಹೇಳುತ್ತಾರೆ, ಮತ್ತೊಂದು ಕಡೆಗೆ ಭಾರತದೊಳಗೆ ಇದ್ದಂಥ ಮೈಸೂರು ರಾಜ್ಯದೊಳಗೆ ಈ ದಿವಸ ಆರು ಪರ್ಸೆಂಟ್ ಆಗಿ ಉಳಿದಿದ್ದ, ಮೂರನೆಯ ಯೋಜನೆಯ ಅವಧಿಯೊಳಗೆ ಅದು ಎಂಟು ಪರ್ಸೆಂಟ್ ತನಕ ಹೋಗಬಹುದು ಎಂದು ಗೊತ್ತಾಗುತ್ತದೆ. ಈಗ ನಮ್ಮ ಸರ್ಕಾರದವರು ಇಷ್ಟು ಹಣವನ್ನು ಎಲ್ಲಿಂದ ತರಬೇಕು ಎನ್ನುವುದು ಮೊದಲನೆಯ ಪ್ರಶ್ನೆ.

ಈಗಾಗಲೇ ಕೃಷ್ಣ ಕಣಿವೆಯಲ್ಲಿ ಸಾಕಷ್ಟು ನೀರಿನ ಪಾಲು ಸಿಕ್ಕಬೇಕು, ಅದನ್ನು ಪಡೆದು ಆ ನೀರನ್ನು ಉಪಯೋಗಮಾಡಿಕೊಳ್ಳಬೇಕು. ಇನ್ನೊಂದು ಕಡೆ 100—110 ಟಿ. ಎಂ. ಸಿ. ನೀರನ್ನು ಕಾವೇರಿ ಕಣಿವೆಯಿಂದ ನಾವು ಉಪಯೋಗ ಮಾಡಬೇಕಾಗುತ್ತದೆ. ಕೃಷ್ಣ ಕಣಿವೆಯ ಬಗ್ಗೆ ಸರ್ಕಾರದವರೇ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಕೃಷ್ಣ ಕಣಿವೆಯ ಹೊರಗೆ ಅಭಿವೃದ್ಧಿಯಾಗಿ ನೀರಾವರಿಗೆ ಬಂದಂಥ ಭೂಮಿ ಎಂದರೆ ಬರಿ ಹತ್ತು ಲಕ್ಷ ಎಕರೆ ಮಾತ್ರ. ಇನ್ನು ಮುಂದೆ ಇನ್ನೂ 15 ಲಕ್ಷ ಎಕರೆ ಮಾತ್ರ ಡೆವಲಪ್ ಮಾಡಬಹುದು ಎಂದು ಹೇಳಿದ್ದಾರೆ. ನಮ್ಮ ಮೈಸೂರು ದೇಶದಲ್ಲಿ ಈ ಎರಡು ನದಿಗಳ, ಕಾವೇರಿ ನೀರು ಮತ್ತು ಕೃಷ್ಣ ನೀರು, ಇವೆರಡನ್ನು ಬಿಟ್ಟರೆ ಇನ್ನು ಯಾವ ನದಿಯಿಂದ ಕೂಡ ನೀರಾವರಿ ಯೋಜನೆ ಸಾಧ್ಯವಿಲ್ಲ. ಗೋದಾವರಿ ಕೃಷ್ಣ ಕಣಿವೆಯಲ್ಲಿರತಕ್ಕದ್ದು ಆದರೂ ಅದರ ವಿಚಾರ ಬೇರೆ. ಅದು ಆಂಧ್ರದ ಮಟ್ಟಿಗೆ ಉಪಯೋಗವಾಗುತ್ತದೆ. ನಾವು ಕೃಷ್ಣ ನೀರನ್ನು ದಕ್ಷಿಣದ ಕಡೆಗೆ ತರುವುದಕ್ಕೆ ಸಾಧ್ಯವಿಲ್ಲ, ಕಾವೇರಿ ನೀರನ್ನು ಉತ್ತರದ ಕಡೆಗೆ ಒಯ್ಯಲಿಕ್ಕೆ ಸಾಧ್ಯವಿಲ್ಲ. ಈ ರೀತಿಯಿಂದ ನಮ್ಮಲ್ಲಿ ನೀರನ್ನು ಹೇಗೆ ಉಪಯೋಗಮಾಡಿಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದು ಹೆಚ್ಚು ಹಣವನ್ನು ಸಹಾಯ ಧನವಾಗಿ ಒದಗಿಸಿದರೆ ಮಾತ್ರ ಸಾಧ್ಯವಿದೆ, ಅದರಂತೆ ನೀರಾವರಿ ಯೋಜನೆಗಳಿಗೆ ಹೆಚ್ಚು ಧನವನ್ನು ಒದಗಿಸಬೇಕು ಎಂದು ಕೇಳಿಕೊಂಡಿದ್ದಾರೆ. ಆದರೆ ಅಷ್ಟು ಕೇಳುವುದು ಸಾಲದು. ನಮ್ಮ ದೇಶದಲ್ಲಿ ನೀರಾವರಿ ವ್ಯವಸಾಯದ ಅಭಾವ ಬಹಳ ಹೆಚ್ಚಾಗಿದೆ. ನಮ್ಮ ರಾಜ್ಯದಲ್ಲಿ ನೀರಾವರಿ ಬಹಳ ಕಡಮೆಯಾಗಿದೆ. ನಮ್ಮಲ್ಲಿ ನೀರಿನ ಅಭಾವ ಬಹಳ ದೊಡ್ಡದು. ಅದರಲ್ಲಿಯೂ ಸೌತ್-ವೆಸ್ಟ್ ಮಾನಸೂನ್ ಬರದೆ ಇದ್ದರೆ ವ್ಯವಸಾಯದಲ್ಲಿ ಬಹಳ ತೊಂದರೆಯಾಗುತ್ತದೆ, ಅಗ್ರಿಕಲ್ಚರ್ ಲಾಕೌಟ್ ಆಗುತ್ತದೆ. ಕಾರ್ಖಾನೆಗಳಲ್ಲಿ ಕಚ್ಚಾಮಾಲು ಇಲ್ಲದೆ ಇದ್ದರೆ ಅಥವಾ ಕಾರ್ಮಿಕರು ಮುಷ್ಕರವನ್ನು ಹೂಡಿದರೆ ಲಾಕೌಟ್ ಆಗುತ್ತದೆ. ವ್ಯವಸಾಯದಲ್ಲಿ ನೀರು ಸಿಕ್ಕದೆ ಹೋದರೆ ಲಾಕೌಟ್ ಆಗುತ್ತದೆ. ಆ ದೃಷ್ಟಿಯಿಂದ ಕೂಡ ನಾನು ಹೇಳುತ್ತೇನೆ—ಒಕ್ಕಲುತನಕ್ಕೆ ಕೇಂದ್ರ ಸರ್ಕಾರ ಬಹಳ ಮಹತ್ವ ಕೊಡುತ್ತದೆ, ಅದರ ಮೇಲೆ ಕೈಗಾರಿಕೆಗಳು ಅವಲಂಬಿಸಿವೆ. ಕೈಗಾರಿಕೆಗಳಿಗೂ ಕೂಡ ವ್ಯವಸಾಯವೇ ತಳಹದಿ

(ಶ್ರೀ ಅಣ್ಣಾರಾವ್ ಗಣಮುಖಿ)

ಎಂದು ಹೇಳುತ್ತೇನೆ. ಆದರೆ ಕೇಂದ್ರ ಸರ್ಕಾರದವರು ವ್ಯವಸಾಯಕ್ಕೆ ಎಷ್ಟು ಸಹಾಯ ಮಾಡುತ್ತಾರೆ ಎಂದು ನೋಡಿದರೆ ಬಹಳ ಕಡಮೆ ಎಂದು ಹೇಳಬಹುದು. ಇದರಿಂದ ಕೈಗಾರಿಕೆಗೂ ಧಕ್ಕೆ ಬರುತ್ತದೆ. ಆದಕಾರಣ ಇಂಡಿಯಾದೇಶದ ಎಲ್ಲ ರಾಜ್ಯಗಳ ನೀರಾವರಿ ಯೊಜನೆಗಳನ್ನು ತೆಗೆದುಕೊಂಡರೆ ಮೈಸೂರು ಎಲ್ಲ ಭಾಗಗಳಿಗಿಂತಲೂ ಹಿಂದುಳಿದ ಪ್ರದೇಶವಾಗಿದೆ. ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಸ್ವಲ್ಪ ಮುಂದುವರೆದಿದೆ ಆದರೆ, ವ್ಯವಸಾಯದಲ್ಲಿ ಮಾತ್ರ ಬಹಳ ಹಿಂದುಳಿದಿದ್ದೇವೆ ಮತ್ತು ನೀರಾವರಿಯಲ್ಲಿ ಹೆಚ್ಚು ಮುಂದುವರಿಯುತ್ತೇವೆಯೋ ಇಲ್ಲವೋ ಎನ್ನುವ ಸಂಶಯವುಂಟಾಗಿದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರ ಮತ್ತು ಮೈಸೂರು ಸಂಪೂರ್ಣವಾಗಿ ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಇಷ್ಟೇ ಅಲ್ಲ ಮದ್ರಾಸಿನವರು ಕಾವೇರಿ ನೀರಿಗೆ ಸಂಬಂಧಪಟ್ಟ ಹಾಗೆ 1924ರ ಒಪ್ಪಂದವೇನಿದೆ ಅದು ಅನ್ವಯದಲ್ಲಿದ್ದರೂ ಕೂಡ ಮೈಸೂರು ಸರ್ಕಾರವನ್ನು ಕೇಳದೆಯೇ, ಅವರಿಗೆ ತಿಳಿಸದೆಯೇ, ಅವರ ಸಲಹೆಯನ್ನು ತೆಗೆದುಕೊಳ್ಳದೆಯೇ ಎರಡು ಮೂರು ಯೋಜನೆಗಳನ್ನು ಪೂರ್ಣಮಾಡಿದ್ದಾರೆ. ಅದರಲ್ಲಿ ಮೆಟ್ಟೂರು, ಭವಾನಿ ಮತ್ತು ಅಮರಾವತಿ ಯೋಜನೆಗಳನ್ನು ಹೇಳದೆ ಕೇಳದೆ, ಕಾವೇರಿ ಮತ್ತು ಅದರ ಉಪನದಿಗಳ ನೀರನ್ನು ಇಂಟರ್‌ಸೆಪ್ಟ್ ಮಾಡಿ ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೆ. ನಮ್ಮ ರಾಜ್ಯಕ್ಕೆ ಸಿಕ್ಕತಕ್ಕ ನೀರು ಏನಿದೆ ಆದನ್ನು ಎಲ್ಲಿಯತನಕ ಉಪಯೋಗ ಮಾಡುವುದಿಲ್ಲ ಅಲ್ಲಿಯವರೆಗೂ ನಮ್ಮ ನೀರಾವರಿ ಯೋಜನೆಗಳು ಯಶಸ್ವಿಯಾಗುವುದಿಲ್ಲ. ಅಥವಾ ಇಡೀ ದೇಶ ಎಷ್ಟು ಅಭಿವೃದ್ಧಿಯಾಗಬೇಕೋ ಅಷ್ಟು ಆಗುವುದಿಲ್ಲ ಎಂದು ಎಲ್ಲರಿಗೂ ಕಾಣಿಸತಕ್ಕ ಮಾತಾಗಿದೆ.

1-30 P.M.

ಈಗ ನಮ್ಮ ಸರಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ, ನಮ್ಮ ರಾಜ್ಯ ಸರಕಾರದವರು ಕೆಲವು ಕೈಗಾರಿಕೆಗಳನ್ನು ಮಾರಾಟಮಾಡಿ ಅದರಿಂದ ಬಂದ ಹಣವನ್ನು ಇದಕ್ಕೆ ಹಾಕುತ್ತಿದ್ದಾರೋ ಎನಿಸುತ್ತದೆ. ಎಷ್ಟು ಹಣ ಎಲ್ಲಿ ಬೇಕೋ ಅಲ್ಲಿಗೆ ಒದಗಿಸಿ ನೀರಾವರಿ ಯೋಜನೆಗಳಿಗೆ ಹಾಕುತ್ತಿದ್ದಾರೆ. ಮೊದಲು ಪ್ರಾಶಸ್ತ್ಯವನ್ನು ಇದಕ್ಕೆ ಕೊಡುತ್ತಿದ್ದಾರೆ. ನಾವು ವ್ಯವಸಾಯ ಮತ್ತು ವಿದ್ಯಾಭ್ಯಾಸ ಎರಡಕ್ಕೂ ಮಹತ್ವ ಕೊಟ್ಟಿದ್ದೇವೆ ಈ ಎರಡನ್ನೂ ಬಿಟ್ಟು ಇತರ ಕೆಲಸಗಳನ್ನು ನಿಲ್ಲಿಸೋಣವೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಪ್ರತಿ ಇಲಾಖೆಯಲ್ಲಿಯೂ ಹೆಚ್ಚಿನ ಹಣವನ್ನು ತೆಗೆದುಕೊಂಡರೆ ನೀರಾವರಿಗೆ ಉಳಿಯುವುದೇನು ? ಉತ್ತರ ಕರ್ಣಾಟಕಕ್ಕೆ ಕೃಷ್ಣಾನದಿಯ ನೀರು ಬೇಕು, ಇಲ್ಲಿಗೆ ಕಾವೇರಿ ನೀರು ಹೆಚ್ಚು ಬೇಕು ಎನ್ನುವ ಪ್ರಶ್ನೆಯಲ್ಲ. ಮೈಸೂರು ದೇಶದ ನೀರಿನ ಸಂಪತ್ತನ್ನು ಸಂಪೂರ್ಣವಾಗಿ ಉಪಯೋಗ ಮಾಡಬೇಕಾದರೆ ಹಣವನ್ನು ಎಲ್ಲಿಂದ ದೊರಕಿಸಬೇಕೆಂಬ ಪ್ರಶ್ನೆ ಬರುತ್ತದೆ. ಈ ಗೊತ್ತುವಳಿಯಲ್ಲಿ ನಾಲ್ಕನೆಯ ಯೋಜನೆಯಲ್ಲಿ ಸಂಪೂರ್ಣವಾಗಿ ಕಾವೇರಿಯ ನೀರನ್ನು ಉಪಯೋಗ ಮಾಡಬೇಕೆಂಬ ಮಾತು ಇದೆ. ಒಂದು ವೇಳೆ ನಾವು ಇನ್ನು ಹತ್ತು ವರ್ಷಗಳಲ್ಲಿ ಆ ನೀರನ್ನು ಉಪಯೋಗ ಮಾಡದೇ ಹೋದರೆ 1974ನೆಯ ಇಸವಿಯಾದ ನಂತರ ಹೊಸದಾಗಿ ಹಂಚಿಕೆಯ ಲೆಕ್ಕ ಬರುತ್ತದೆ. ನಮ್ಮ ಡ್ರೈನೇಜ್ ಪ್ರದೇಶವೆಷ್ಟು, ನಾವು ಎಷ್ಟು ನೀರನ್ನು ಇಟ್ಟುಕೊಳ್ಳಬಹುದು, ಅವರಿಗೆ ಎಷ್ಟು ಕೊಡಬೇಕು ಎನ್ನುವ ಪ್ರಶ್ನೆಗಳೆಲ್ಲವೂ ಬಂದು ಅದರ ಪ್ರಕಾರ ಒಂದು ನಿರ್ದಿಷ್ಟ ಭಾಗ ನಮಗೆ ಸಿಕ್ಕುತ್ತದೆ. ಈಗ ಹೋದ ನೀರು ಹೋಗುವುದಲ್ಲದೆ ಮುಂದೆ ನಾವು ಮದರಾಸಿಗೆ ಒಂದು ಭಾಗವನ್ನು ಕೊಡಬೇಕಾಗುತ್ತದೆ. ಆಗ ನಮ್ಮ ತಪ್ಪಾಗುತ್ತದೆ. ಆದುದರಿಂದ 1924ರ ಒಪ್ಪಂದದ ಅವಧಿ ಮುಗಿಯುವುದರೊಳಗೆ ನಾವು ಎಷ್ಟು ನೀರನ್ನು ಉಪಯೋಗ ಮಾಡಬಹುದು ಎಂಬುದನ್ನು ನಿರ್ದಿಷ್ಟವಾಗಿ ನೋಡಿ ಕಾರ್ಯಗತ ಮಾಡಬೇಕು. ಇದಕ್ಕೆ ನಾವು ಎಲ್ಲಿಯವರೆಗೆ ಗಮನ ಕೊಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ನೀರಾವರಿ ಯೋಜನೆ ಉಪಯೋಗವಾಗುವುದಿಲ್ಲ. ನಮ್ಮ ದೇಶದಲ್ಲಿ ಶೇಕಡ 82ರಷ್ಟು ನೀರಾವರಿ ಯೋಜನೆಗಳಾಗಿವೆ ಎಂದು ಹೇಳುತ್ತಾರೆ. ಇತರ ದೇಶಗಳನ್ನು ತೆಗೆದುಕೊಂಡರೆ, ಜಪಾನಿನಲ್ಲಿ ಶೇಕಡ 60, ಪಾಕಿಸ್ಥಾನದಲ್ಲಿ 50, ಚೈನಾದಲ್ಲಿ 50 ಆಗಿದೆ ಎಂದು ಹೇಳುತ್ತಾರೆ. ಹೀಗಿದ್ದರೂ ಕೂಡ ನಮ್ಮ ಭಾರತದಲ್ಲಿ ಅನ್ನ ಬಟ್ಟೆಯ ಅಭಾವ ಎಲ್ಲ ಕಡೆಯೂ ಇದೆ. ಆದುದರಿಂದ ಸಾಧಾರಣವಾಗಿ ಭೂಮಿಯಲ್ಲಿ ಬೆಳೆಯತಕ್ಕ ಶಕ್ತಿಯೇನಿದೆಯೋ ಅದು ಸರಿಯಾಗಿ ಉಪಯೋಗವಾಗಿಲ್ಲವೋ ಏನೋ ಎನಿಸುತ್ತದೆ. ಎಲ್ಲಕ್ಕಿಂತ ನಮ್ಮ ಮೈಸೂರು ರಾಜ್ಯ ಹಿಂದುಳಿದಿದೆ ಎಂದು ಹೇಳುತ್ತಾರೆ. ನಮಗೆ ಗೊತ್ತಿರುವಂತೆ ಸಮುದ್ರಕ್ಕೆ ಎಷ್ಟು ನೀರು ಹೋಗುತ್ತದೆಯೋ ಅದನ್ನು ತಡೆಯುವ ಪ್ರಯತ್ನ ಎಲ್ಲ ಕಡೆಯೂ ನಡೆಯುತ್ತಿದೆ. ಎಷ್ಟೋ ನೀರು ಕಣ್ಣು ಮುಚ್ಚಿ ತೆರೆಯುವುದರೊಳಗೆ ಸಮುದ್ರಕ್ಕೆ ಹೋಗುತ್ತದೆ ಎಂದು ಹೇಳುತ್ತಾರೆ. ನಮ್ಮ ಮೈಸೂರಿನಲ್ಲಿ ಕೃಷ್ಣಾ ಮತ್ತು ಕಾವೇರಿ ಎರಡು ನದಿ

ಗಳ ಕೆಳಗೆ ಎಷ್ಟು ಪ್ರದೇಶವಿದೆ ಅದನ್ನು ಎಷ್ಟುಮಟ್ಟಿಗೆ ಅಭಿವೃದ್ಧಿ ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗಿದೆ. ನಾವು 50 ಲಕ್ಷ ಎಕರೆಯನ್ನು ಕೃಷ್ಣಾನದಿಯ ಕೆಳಗೆ ಅಭಿವೃದ್ಧಿ ಮಾಡಬೇಕಾಗಿದೆ. ಕಾವೇರಿಯಲ್ಲಿ ಸುಮಾರು 15 ಲಕ್ಷ ಎಕರೆ ಉಳಿದಿದೆ ಎಂದು ಹೇಳುತ್ತಾರೆ. ಅಪ್ಪರ್ ಕೃಷ್ಣಾ ಇನ್ನೊಂದೆರಡು ನದಿಗಳನ್ನು ತೆಗೆದುಕೊಂಡರೆ ಎಷ್ಟೋ ಅಷ್ಟು ಕಾವೇರಿಯಲ್ಲಿದೆ. ಅವರು ಪುಲ್ಲಂಪಾಡಿ, ಮೆಟ್ಟೂರು, ಭವಾನಿ ಇವುಗಳಿಗೆ ಎಷ್ಟು ನೀರನ್ನು ಉಪಯೋಗಮಾಡಿದಾರೋ ಅಷ್ಟನ್ನು ನಾವು ಇನ್ನು ಹತ್ತು ವರ್ಷಗಳಲ್ಲಿ ಮಾಡಬೇಕಾದರೆ ಅದಕ್ಕೆ ಬಹಳ ಹೆಚ್ಚು ಹಣ ಬೇಕಾಗುತ್ತದೆ. ಇಲ್ಲಿಯವರೆಗೆ ನಾವು ಉಪಯೋಗ ಮಾಡಿರುವುದು ಬಹಳ ಕಡಮೆ. ಕೇವಲ 16·3 ಟಿ. ಎಂ. ಸಿ. ಎಫ್. ಟಿ. ಉಪಯೋಗಮಾಡಿದ್ದೇವೆ. ಅವರು ಈಗಾಗಲೇ 32 ಟಿ. ಎಂ. ಸಿ. ಎಫ್. ಟಿ. ಉಪಯೋಗ ಮಾಡಿದ್ದಾರೆ. ನಮಗೆ ಶೇಕಡ 50ರಷ್ಟು ಉಪಯೋಗಮಾಡುವ ಹಕ್ಕಿದ್ದರೂ ನಾವು ಎಷ್ಟುಮಟ್ಟಿಗೆ ಉಪಯೋಗ ಮಾಡಬಹುದೆಂಬುದನ್ನು ವಿಚಾರ ಮಾಡಬೇಕಾಗಿದೆ. ನಮ್ಮಲ್ಲಿ ಇನ್ನೂ ಒಕ್ಕಲುತನ ಅಭಿವೃದ್ಧಿಯಾಗಿಲ್ಲ. ಮೈಸೂರು, ಮಂಡ್ಯದ ಕೆಲವು ತಾಲ್ಲೂಕುಗಳು, ಹಾಸನ ಮತ್ತು ಕೊಡಗಿನ ಮೂರು ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಸಂಪೂರ್ಣವಾಗಿ ಯೋಜನೆಗಳನ್ನು ಮಾಡಿದರೆ, ನಾಲ್ಕೈದು ನದಿಗಳು—ಹೇಮಾವತಿ, ಕಂಬದಕಡ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಯಗಚಿ ಈ ನಾಲ್ಕೈದು ನದಿಗಳನ್ನು ಚೆನ್ನಾಗಿ ಸರ್ವೆಮಾಡಿಸಿ, ಯೋಜನೆಗಳನ್ನು ತಯಾರು ಮಾಡಿಸಿ, ನಾವು ಎಷ್ಟು ನೀರನ್ನು ಉಪಯೋಗ ಮಾಡಬೇಕು, ಎಷ್ಟು ಅವಧಿಯಲ್ಲಿ ಮಾಡಬೇಕು ಎಂಬುದರ ಬಗ್ಗೆ ನಿರ್ದಿಷ್ಟ ನೀತಿಯನ್ನು ಸರಕಾರ ಘೋಷಣೆ ಮಾಡಬೇಕು. ಎಲ್ಲ ನದಿಗಳನ್ನೂ ಎಕ್ಸ್‌ಪ್ಲಾಯ್ಟ್ ಮಾಡುವುದು ಅಗತ್ಯ. ನಮ್ಮ ಸರಕಾರದವರು ಹಣಕಾಸಿನ ಪ್ರಶ್ನೆಯನ್ನು ಯೋಚನೆಮಾಡಿಲ್ಲ. ಇವೆಲ್ಲವನ್ನೂ ಮಾಡುವುದು ನಮ್ಮ ಸಂಪನ್ಮೂಲಗಳಿಂದ ಸಾಧ್ಯವಿಲ್ಲ. ಹತ್ತು ಇಪ್ಪತ್ತು ವರ್ಷಗಳಾದರೂ ಸಾಧ್ಯವಿಲ್ಲ. ಆದುದರಿಂದ ಹತ್ತು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಖರ್ಚು ಯಾವ ಯೋಜನೆಗಳಿಗಾಗುತ್ತದೆಯೋ ಅಂತಹ ಯೋಜನೆಗಳನ್ನು ಭಾರತ ಸರಕಾರದವರೇ ಮಾಡಬೇಕೆಂಬ ಒಂದು ನಿಲುವಿದೆ, ಅದು ಬಹಳ ಯೋಗ್ಯ. ಇದನ್ನು ನಾವು ಒಪ್ಪಿಕೊಂಡರೆ ಈ ಯೋಜನೆಗಳನ್ನು ನಾವು ಸಂಪೂರ್ಣ ಮಾಡಬಹುದು. ಇಲ್ಲದಿದ್ದರೆ ನಮ್ಮ ಸಂಪನ್ಮೂಲಗಳಿಂದ ಮಾಡಲು ಸಾಧ್ಯವಿಲ್ಲ. ನಮ್ಮ ಪಾಲಿಗೆ ಬಂದಿರುವ ನೀರನ್ನು ನಾವು ಉಪಯೋಗಿಸಿಕೊಳ್ಳದೇ ಇದ್ದರೆ ನಾಲ್ಕನೇ ಯೋಜನೆಗೆ ಧಕ್ಕೆ ಬರಬಹುದು ಎಂಬ ಸಂಶಯ ಬರುತ್ತದೆ. ಈಗ ನೀರು ಸಿಕ್ಕುತ್ತದೆ ಎಂಬ ಪ್ರಶ್ನೆಗಿಂತಲೂ ಹೆಚ್ಚಾಗಿ ಫೈನಾನ್ಸ್ ಪ್ರಶ್ನೆ ಹೆಚ್ಚು ಮಹತ್ವದ್ದಾಗಿದೆ. ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ನಮಗೆ ಹಣ ಬೇಕು. ಹಣವಿಲ್ಲದೆ ಪ್ರೋಜೆಕ್ಟ್ ತಯಾರ್ಮಾಡುತ್ತೇವೆ ಅಂದರೆ ಅದು ಸಾಧ್ಯವಿಲ್ಲ. ಆದುದರಿಂದ ಕೇಂದ್ರ ಸರಕಾರದವರು ಈ ಯೋಜನೆ ಕಾರ್ಯಗತ ಮಾಡಲು ಹಣ ಒದಗಿಸುತ್ತಾರೋ ಇಲ್ಲವೋ ಎಂಬುದನ್ನು ನಮ್ಮ ಸರಕಾರ ಯೋಚನೆ ಮಾಡಬೇಕು. ಈಗ ಇನ್ನೊಂದು ವಿಷಯ ಹೇಳಬೇಕಾದುದು ಏನೆಂದರೆ ದಿನದಿನಕ್ಕೆ ದೇಶದಲ್ಲಿ ಪಾಪ್ಯುಲೇಶನ್ ಅಂದರೆ ಜನಸಂಖ್ಯೆ ಹೆಚ್ಚಾಗುತ್ತಾ ಇದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಧಾನ್ಯದ ಬೇಡಿಕೆ ಮತ್ತು ಅವಶ್ಯಕತೆ ಹೆಚ್ಚುತ್ತಾ ಹೋಗುತ್ತದೆ. 1968 ನೇ ಇಸವಿಯೊಳಗಾಗಿ 80 ಸಾವಿರ ಎಕರೆ ಭೂಮಿ ನೀರಾವರಿ ಕೆಳಗೆ ಬಂದರೆ ಆಗ್ಗೆ ನಮಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನಾವು ಯೋಜನೆ ಹಾಕಿದರೆ ಜನರಿಗೆ ಆಹಾರ ಧಾನ್ಯ ತಿನ್ನುವುದಕ್ಕೆ ಸಿಕ್ಕುತ್ತದೆ. ಅಕ್ಕಿಗಾಗಿ ನಾವು ಬೇರೆಯವರಿಗೆ ಕೈ ಒಡ್ಡುವುದು ಸರಿಯಲ್ಲ. ನಮಗೆ ಬೇಕಾಗುವ ಆಹಾರ ಧಾನ್ಯ ನಮ್ಮ ದೇಶದಲ್ಲಿ ನಾವೇ ಬೆಳೆಯ ಬೇಕು. 2000 ದ ಇಸವಿಯಲ್ಲಿ ನಮ್ಮ ರಾಜ್ಯದ ಜನಸಂಖ್ಯೆ ಸುಮಾರು 5 ಕೋಟಿಯಾಗಬಹುದು ಎಂದು ಅಂದಾಜು ಮಾಡಲಾಗಿದೆ. ಅಷ್ಟು ಜನರಿಗೆ ಆಹಾರದಾನ್ಯ ಪೂರೈಸುವುದಕ್ಕೆ ಏರ್ಪಾಡು ಆಗಬೇಕು. ಅದಕ್ಕೆ ಅನುಗುಣವಾಗಿ ಯೋಜನೆ ಮಾಡಬೇಕಾಗುತ್ತದೆ. ಇದಲ್ಲದೆ ಜನಸಂಖ್ಯೆ ಪ್ರಮಾಣ ಹೆಚ್ಚುತ್ತಿರುವುದನ್ನು ಕಡಿಮೆ ಮಾಡುವುದಕ್ಕೆ ನಮ್ಮ ದೇಶದಲ್ಲಿ ಅರ್ಧದಷ್ಟು ಜನ ಬ್ರಹ್ಮಚಾರಿಗಳಾಗಿ ಇರಬೇಕಾಗತ್ತದೆ. ಶೇಕಡ 20 ರಷ್ಟು ಜನ ಸಂನ್ಯಾಸಿಗಳಾಗಬೇಕಾಗುತ್ತದೆ. ಅಂದರೆ ಜನಸಂಖ್ಯೆ ಕೆಲ ಮಟ್ಟಿಗೆ ಕಡಿಮೆಯಾಗಬಹುದು. ಜನಸಂಖ್ಯೆ ಕಡಿಮೆ ಮಾಡಲು ಅನೇಕ ಮಾರ್ಗಗಳನ್ನು ಹೇಳುತ್ತಾರೆ. ಜನನ ಪ್ರಮಾಣದಲ್ಲಿ ಗಂಡಸರಿಗಿಂತ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ಕಡಿಮೆ ಮಾಡಬೇಕಾದುದು ಅಗತ್ಯವಾಗಿದೆ. ಅನೇಕರು ಬಹ್ಮಚಾರಿಗಳು, ಸಂನ್ಯಾಸಿಗಳು ಆಗುವುದಲ್ಲದೆ ಮದುವೆ ಮಾಡಿಕೊಳ್ಳುವವರು ಸಹ 45 ವರ್ಷಗಳ ವಯಸ್ಸಿನ ನಂತರ ಮದುವೆ ಮಾಡಿಕೊಳ್ಳಬೇಕು. ಅಂದರೆ ಕಡಿಮೆ ಮಕ್ಕಳು ಆಗುತ್ತವೆ. ಫ್ಯಾಮಿಲಿ ಪ್ಲಾನಿಂಗ ಯೋಜನೆ ಇದ್ದರೂ ಕೂಡ ಅದು ಶೇಕಡ 2 ರಷ್ಟು ಯಶಸ್ವಿಯಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಜನಸಂಖ್ಯೆ ಕಡಿಮೆ ಮಾಡಬೇಕು. ಹಾಗು 50 ಲಕ್ಷ ಎಕರೆ ನೀರಾವರಿ ಭೂಮಿಯಾಗುವ ಹಾಗೆ ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅನ್ನ ಒದಗಿಸಬೇಕು ಎಂಬ ದೊಡ್ಡ ಸಮಸ್ಯೆ ಯಾವಾಗಲೂ ನಮ್ಮ

(ಶ್ರೀ ಅಣ್ಣಾರಾವ್ ಗಣಮುಖಿ)

ಮುಂದೆ ಇರುತ್ತದೆ- ಈ ದೊಡ್ಡ ಸಮಸ್ಯೆ ನಿರಂತರವಾಗಿ ಉಳಿಯುತ್ತದೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡುವುದಾದರೆ ನಾವು ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ನಮಗೆ ದೊರೆಯುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಾವು ಸತತ ಪ್ರಯತ್ನ ಮಾಡಬೇಕಾದದ್ದು ಬಹಳ ಅಗತ್ಯ. ನಾವು ಏನಾದರೂ ಮಾಡಿ ಈ ನೀರಾವರಿ ಯೋಜನೆಗಳಿಗೆ ಹಣ ಒದಗಿಸುವ ಏರ್ಪಾಡು ಮಾಡಬೇಕಾಗಿದೆ. ಜಾಯಿಂಟ್ ಸ್ಟಾಕ್ ಕಂಪನಿ ಷೇರ್ಸ ಮಾರಿ ಬಿಟ್ಟು ಆ ಹಣ ಇದಕ್ಕೆ ಖರ್ಚು ಮಾಡಬೇಕು. ಷೇರ್ಸನಲ್ಲಿ ದೊರೆಯುವ 5 ಪರ್ಸೆಂಟ್ ಲಾಭ ನಮಗೆ ಈಗ ದೊರೆಯುದ ಇದ್ದರೂ ಕೂಡ ನಮ್ಮ ಯೋಜನೆಗಳು ಪೂರ್ತಿಯಾಗಿ ಲಾಭ ಕೊಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಅದಕ್ಕೂ ಹೆಚ್ಚು ಲಾಭ ನಮಗೆ ಖಂಡಿತವಾಗಿ ದೊರೆಯುತ್ತದೆ ಎಂಬ ಭರವಸೆ ನಮಗೆ ಇದೆ. ಈಗದೊರೆತಿರುವ ನೀರು ಒಮ್ಮೆ ಕೈಬಿಟ್ಟು ಹೋದರೆ ಪುನಃ ನಮಗೆ ನೀರು ಉಪಯೋಗಿಸುವುದಕ್ಕೆ ಸಿಕ್ಕುವುದಿಲ್ಲ. ಅಂದರೆ ನದಿಯಲ್ಲಿ ನೀರು ಹರಿದು ಹೋಗುತ್ತದೆ; ಆದರೆ ಆ ನೀರನ್ನು ನಾವು ಯೋಜನೆಯಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಕಾವೇರಿ ನೀರು ಉಪಯೋಗಿಸುವುದು ಕೃಷ್ಣಾ ನದಿ ನೀರು ಉಪಯೋಗಿಸುವಷ್ಟೇ ಮಹತ್ವದ್ದಾಗಿದೆ. ಆದುದರಿಂದ ಯೋಜನೆ ಕಾರ್ಯಗತ ಮಾಡಲು ಹಣ ಒದಗಿಸುವ ದಾರಿ ತೋರಿಸಬೇಕಾಗುತ್ತದೆ. ಸರಕಾರದ ಹತ್ತಿರ ಇರುವ ಷೇರ್ಸ ಮಾರಿ ಆ ಹಣ ಉಪಯೋಗಿಸಿಕೊಂಡರೆ ಏನೂ ಚಿಂತೆಯಿಲ್ಲ. ಈ ಹಣ ಉಪಯೋಗಿಸಿ ಪೂರ್ತಿ ಮಾಡುವ ನೀರಾವರಿ ಯೋಜನೆ ಯಿಂದ ನಮಗೆ ರಿಟರ್ನ ಅಂದರೆ ಪ್ರತಿಫಲ ಬಂದ ಮೇಲೆ ಅದನ್ನು ಉಪಯೋಗಿಸಿ ಬೇರೆ ಯಾವುದಾದರೂ ಕೈಗಾರಿಕೆಗಳನ್ನು ನಾವು ಮುಂದೆ ಪ್ರಾರಂಭ ಮಾಡಬಹುದು. ಆದುದರಿಂದ ನಾನು ಸರಕಾರಕ್ಕೆ ಕೇಳಿ ಕೊಳ್ಳುವುದು ಇಷ್ಟೇ. ಬೆಗ್, ಬಾರೊ ಆರ್ ಸ್ಟೀಲ್ ಎಂದು ಇಂಗ್ಲೀಷನಲ್ಲಿ ಹೇಳುವ ಹಾಗೆ ಏನಾದರೂ ಉಪಾಯ ಮಾಡಿ ನಾವು ಈ ಯೋಜನೆಗಳಿಗೆ ಎಲ್ಲಿಂದಾದರೂ ಹಣ ಒದಗಿಸಬೇಕು ಮತ್ತು ಅದಕ್ಕೆ ಸರ್ವ ಪ್ರಯತ್ನ ಮಾಡಬೇಕಾದುದು ಆವಶ್ಯಕ. ಈ ಸಂದರ್ಭದಲ್ಲಿ ಕಾವೇರಿ ನೀರು ಸಂಪೂರ್ಣವಾಗಿ ಉಪಯೋಗಿಸುವುದಕ್ಕೆ ಏನು ಮಾಡಬೇಕು ಎಂಬುದಕ್ಕೆ ನಾವು ಆಳವಾಗಿ ವಿಚಾರ ಮಾಡಬೇಕು.

ಅಷ್ಟು ಅಲ್ಲದೇನೆ, ಎರಡು ಸ್ಟೇಟುಗಳು ಅನ್‌ಹೆಲ್ಪ್‌ಫುಲ್ ಆಗಿವೆ ಅಂತ ಹೇಳಬಹುದು. ಏಕೆಂದರೆ ಮದ್ರಾಸಿನವರು ಅಮರಾವತಿ, ಭವಾನಿ ಪ್ರಾಜೆಕ್ಟುಗಳನ್ನು ಮಾಡಿದ್ದಾರೆ. ಸಾಧಾರಣವಾಗಿ 1924ರ ಅಗ್ರೀಮೆಂಟ್ ಪ್ರಕಾರ ನಮ್ಮ ಸರಾಕಾರವನ್ನು ಅವರು ಕನ್‌ಸಲ್ಟ್ ಮಾಡಬೇಕಾಗಿತ್ತು. ನಮ್ಮನ್ನು ಕನ್‌ಸಲ್ಟ್ ಮಾಡದೇನೆ, ಪ್ರಾಜೆಕ್ಟುಗಳನ್ನು ತೆಗೆದು ಕೊಂಡು ರಿವರುಗಳ ಟ್ರಿಬ್ಯುಟರಿಗಳನ್ನು ಇಂಟರ್‌ಸೆಕ್ಟ್ ಮಾಡಿದ್ದಾರೆ. ಇದರಲ್ಲಿ ಒಂದು ದೊಡ್ಡ ಪ್ರಶ್ನೆ ಏನು ಬರುತ್ತದೆಂದರೆ, ಕೆಳಗಿನ ಗ್ರಾಂಡ್ ಅಣಿಕಟ್ಟಿಗೆ ಇಷ್ಟು ಫ್ಲೊ ಕೊಡಬೇಕೆಂದು ಹೇಳಿದ್ದಾರೆ. ಅದಕ್ಕೆ ನೀರು ಎಫೆಕ್ಟ್ ಆದರೆ ನಾವು ನೀರು ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ. ಕೃಷ್ಣರಾಜಸಾಗರದಿಂದ ನೀರಾವರಿ ಯಾಗುವ ಪ್ರದೇಶ 5 ಸಾವಿರ ಎಕರೆ; ಆ ಭೂಮಿ ಡೆವಲಪ್ ಮಾಡಬೇಕಾದರೆ ಅವರು ಅಬ್ಜೆಕ್ಷನ್ ತೆಗೆದುಕೊಳ್ಳುತ್ತಾರೆ: ನೀರು ಕಾಂಪೆನ್ಸೇಟು ಮಾಡಬೇಕು ಎಂತ ಹೇಳುತ್ತಾರೆ. ಅಮರಾವತಿ, ಭವಾನಿ ನದಿಗಳನ್ನು ಇಂಟರ್‌ಸೆಕ್ಟ್ ಮಾಡಿ ಆ ನೀರು ಉಪಯೋಗ ಮಾಡಿದ ನಂತರ, ಮುಂದೆ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಗ್ರಾಂಡ್ ಅಣಿಕಟ್ಟಿನಲ್ಲಿ ಇಷ್ಟೆ ಫ್ಲೊ ಇರಬೇಕು ಅನ್ನುವ ಪ್ರಶ್ನೆ ನೋಡಿ ಆಶ್ಚರ್ಯವೆನಿಸುತ್ತದೆ. ಪ್ಲಾನಿಂಗ್ ಕಮಿಶನ್ನನವರು 1924ರ ಅಗ್ರೀಮೆಂಟು ಇದ್ದರೂ ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸು ಹೇಗೆ ಕೊಟ್ಟರು ? ಮದ್ರಾಸ್ ಸರ್ಕಾರ ಯಾವ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಟೆಕ್ನಿಕಲ್ ಕ್ಲಿಯರೆನ್ಸು ಸಿಕ್ಕಿದೆ. ಇದು ಆಶ್ಚರ್ಯದ ಮಾತು. ಆದ್ದರಿಂದ ನಮ್ಮ ರೈಟ್ಸ್ ಸಾಧನೆಯಾಗಬೇಕಾದರೆ, ನಮ್ಮ ಹಕ್ಕುಬಾಧ್ಯತೆಗಳನ್ನು ಚೆನ್ನಾಗಿ ಪಡೆಯಬೇಕಾದರೆ, ನಮ್ಮ ಇಂಜನಿಯರುಗಳನ್ನು ಅಲ್ಲಿಗೆ ಕಳುಹಿಸಿ, ಸರ್ವೆ ಮಾಡಿಸಿ, ಅವರು ಎಷ್ಟು ನೀರು ತೆಗೆದುಕೊಂಡದ್ದಾರೆ ಅನ್ನುವುದನ್ನು ಲೆಕ್ಕಾಚಾರ ಮಾಡಿ ತೆಗೆದುಕೊಳ್ಳಬೇಕು. ನಮಗೆ ಗೊತ್ತಿದ್ದ ಪ್ರಕಾರ, ಮೊದಲು ಇಂಜನಿಯರನ್ನು ಕಳುಹಿಸಿದಾಗಲೂ ಸಹ ಯಾವ ಪ್ರಾಜೆಕ್ಟನ್ನೂ ಮದ್ರಾಸು ತೋರಿಸಲಿಲ್ಲ, ಯಾವ ಲೆಕ್ಕಪತ್ರಗಳನ್ನೂ ಕೊಡಲಿಲ್ಲ ಅಂತ ಗೊತ್ತಾಗಿದೆ. ಈಗಲಾದರೂ ಮದ್ರಾಸಿಗೆ ಇಂಜನಿಯರುಗಳನ್ನು ಕಳುಹಿಸಿ, ನೀರಿನ ಲೆಕ್ಕಾಚಾರವನ್ನು ಈ ವರ್ಷವೇ ಕೈಗೊಳ್ಳುವಂತೆ ಮಾಡಿ, ಸರಕಾರದವರು ಅದನ್ನು ಬೇಗ ಸ್ಪಷ್ಟೀಕರಣ ಮಾಡಬೇಕು. ಅದರಿಂದ ಮುಂದೆ ಅವರು ಎಷ್ಟು ಉಪಯೋಗ ಮಾಡುತ್ತಾರೆ ಎಂದು ಗೊತ್ತಾಗುತ್ತದೆ ಮತ್ತು 60 ಪರ್ಸೆಂಟು ಉಪಯೋಗ ಮಾಡಲಿಕ್ಕೆ ಒಂದು ನಿರ್ದಿಷ್ಟ ಕಲ್ಪನೆ ನಮಗೆ ಬರುತ್ತದೆ.

ಕಾವೇರಿ ಕೆಳಗೆ ನದಿಗಳು, ಉಪನದಿಗಳು, ಶೆಡ್ಯೂಲ್ಡ್ ಮತ್ತು ನಾನ್‌ಶೆಡ್ಯೂಲ್ಡ್ ನದಿಗಳು ಇದ್ದರೂ ಸಹ, ಗ್ರಾಂಡ್ ಅಣಕಟ್ಟೆ ಮೇಲೆ ಇಷ್ಟು ನಿರ್ದಿಷ್ಟ ಫ್ಲೊ ಕೊಡಬೇಕು ಅಂತ ಲೆಕ್ಕಹಾಕಿದರ,

ನಾನ್‌ಶೆಡ್ಯೂಲ್ಡ್ ರಿವರೂ ಆ ಲೆಕ್ಕದಲ್ಲಿ ಬರುತ್ತದೆಯೆ ಎಂಬ ಸಂಶಯ ಬರುತ್ತದೆ. ನಾನ್‌ಶೆಡ್ಯೂಲ್ಡ್ ರಿವರ್ ಎಕ್ಸ್‌ಪ್ಲಾಯಿಟ್ ಮಾಡಬೇಕು ಅಂತ ಒಂದು ಕಡೆ ವಾದ. ಆದರೆ, ಗ್ರ್ಯಾಂಡ್ ಅಣೆಕಟ್ಟಿನಲ್ಲಿ ಇಷ್ಟು ಫ್ಲೋ ಬರಬೇಕು ಅಂತ ಹೇಳುವಾಗ ನಾನ್‌ಶೆಡ್ಯೂಲ್ಡ್ ರಿವರ್‌ನಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಸ್ಪಷ್ಟೀಕರಣವಾಗಬೇಕು.

ಇಷ್ಟು ನದಿಗಳು, ಉಪನದಿಗಳು, ಇವುಗಳ ಬಗ್ಗೆ ಬೃಹತ್ ಯೋಜನೆಯನ್ನು ತಯಾರುಮಾಡಿದ್ದಾರೆ: ಈ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ, ಎಸ್ಟಿಮೇಟು ಎಷ್ಟಾಗುತ್ತದೆ, ಅದು ಎಷ್ಟು ಅವಧಿಯಲ್ಲಿ ಆಗುತ್ತದೆ, ಎಕ್ಸ್‌ಪ್ಲಾಯಿಟ್ ಮಾಡುವ ನೀರೆಷ್ಟು, ಇವುಗಳ ಸ್ಪಷ್ಟ ಕಲ್ಪನೆ ಮೈಸೂರು ಜನತೆಗೆ ಇಲ್ಲ. ಸರಕಾರದವರು ಇಷ್ಟು ಅವದಿಯಲ್ಲಿ ಇದನ್ನು ಮುಗಿಸುತ್ತೇವೆ ಎಂದು ಸ್ಪಷ್ಟ ಕಲ್ಪನೆ ಮಾಡಬೇಕು. ಕಾವೇರಿ ನದಿ ಅಷ್ಟೇ ಅಲ್ಲ. ಯಾವುದೂ ಯೋಜನೆ ಹಾಕದೆ ಕೆಲಸ ಮಾಡಬಾರದು. ಕೃಷ್ಣ ನದಿ ನೀರಿನ ಬಗ್ಗೆ ಆಗಲಿ, ಕಾವೇರಿ ನದಿ ನೀರಿನ ಬಗ್ಗೆ ಆಗಲಿ ಒಂದು ಯೋಜನೆ ಮಾಡಿಲ್ಲ. ಇಷ್ಟು ವರ್ಷದಲ್ಲಿ ನಾವು ಇದನ್ನು ಎಕ್ಸ್‌ಪ್ಲಾಯಿಟ್ ಮಾಡಿ ಮುಗಿಸುತ್ತೇವೆ ಎಂದು ಹೇಳುವುದು ನಮ್ಮ ಕರ್ತವ್ಯ. ಈಗ ಅಂಥ ಮಾಸ್ಟರ್‌ಪ್ಲಾನ್ ತಯಾರುಮಾಡಿದರೆ ಜನತೆಗೆ ಸಮಾಧಾನವಾಗುತ್ತದೆ. ಇಷ್ಟು ವರ್ಷದಲ್ಲಿ ಇಷ್ಟು ನೀರು ಉಪಯೋಗವಾಗುತ್ತದೆ, ಇಷ್ಟು ಅವೇಲಬಿಲಿಟಿ ಇದೆ, ಇಷ್ಟು ವೆಚ್ಚವಾಗುತ್ತದೆ ಎಂದು ಹೇಳಬೇಕು. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ನೀರಾವರಿ ಯೋಜನೆಗಳ ಮೇಲೆ ಸಾಧಾರಣವಾಗಿ ರಿಟರ್ನ ಬಹಳ ಕಡಿಮೆ ಇದೆ. ಅಥವ ಇಲ್ಲವೇ ಇಲ್ಲ ಅಂತ ಹೇಳಬಹುದು. ಆಂಧ್ರ ಮತ್ತು ಮದ್ರಾಸಿನಲ್ಲಿ ರಿಟರ್ನ ಏನಿದೆ ಅನ್ನುವುದು ಗೊತ್ತಿಲ್ಲ. ಡೈರೆಕ್ಟ್ ಮತ್ತು ಇಂಡೈರೆಕ್ಟ್ ರಿಟರ್ನ ನೋಡಬೇಕು. ನಾವು ಯಾವುದಾದರೂ ಪ್ರಾಜೆಕ್ಟು ತಯಾರುಮಾಡಿದರೆ, ಎಕನಾಮಿಕ್ ಫೀಸಿಬಿಲಿಟಿ ಮತ್ತು ಇಂಜನಿಯರಿಂಗ್ ಫೀಸಿಬಿಲಿಟಿಇವೆರಡನ್ನೂ ಒಟ್ಟಿಗೆ ಮುಂದಿಟ್ಟುಕೊಂಡು ಕೆಲಸತೆಗೆದುಕೊಳ್ಳಬೇಕು. ಇಂಜನಿಯರಿಂಗ್ ಫೀಸಿಬಿಲಿಟಿ ಎಲ್ಲಿದೆ ಅಲ್ಲಿಯೆ ಎಕನಾಮಿಕ್ ಫೀಸಿಬಿಲಿಟಿ ಎಲ್ಲಿದೆ ಅಲ್ಲಿಯೇ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕು. ಇಂಜನಿಯರುಗಳು ಇಂಥ ಕಡೆ ಪ್ರಾಜೆಕ್ಟು ಲೊಕೇಶನ್ ಇರಬೇಕೆಂದು ತೋರಿಸಿದರೆ, ಅಂಥ ಕಡೆಯಲ್ಲಿಯೆ ಕಟ್ಟಬೇಕು. ಇಂಥ ಕಡೆ ವಾಟರ್ ಬಂದು ಇಂಥವರ ಜಮೀನು ಸಬ್‌ಮರ್ಜ್ ಆಗುತ್ತದೆ, ಅಥವಾ ಇನ್ನೊಂದು ಕಡೆ ಇನ್ನೊಬ್ಬರ ಆಸ್ತಿ ಹೋಗುತ್ತದೆ ಎಂಬ ಪಾಲಿಟಿಕ್ಸನ್ನು ಒಯ್ಯಬಾರದು. ನೀರನ್ನು ಉಪಯೋಗ ಮಾಡತಕ್ಕಂಥ ಕಾಲ ಬಂದರೆ ಆಗ ಇಂಜನಿಯರಿಂಗ್ ಫೀಸಿಬಿಲಿಟಿ ಮತ್ತು ಎಕನಾಮಿಕ್ ಫೀಸಿಬಿಲಿಟಿ ಇವೆರಡು ಟೆಸ್ಟುಗಳನ್ನು ನಮ್ಮ ಎದುರಿಗೆ ಇಟ್ಟುಕೊಂಡು ಕೆಲಸ ಮಾಡಬೇಕು. ಅರ್ಥಿಕ ಮಂತ್ರಿಗಳು ಸಣ್ಣ ಸಣ್ಣ ಹತ್ತು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ ಅಂತ ಹೇಳಿದರು. ಖರ್ಚು ಒಂದು ಕೋಟಿ ರೂಪಾಯಿ ಮೇಲೆ ಆಗುತ್ತದೆಂದು ಹೇಳಿದ್ದಾರೆ. ಒಂದೂವರೆ, ಎರಡು ಕೋಟಿ ರೂಪಾಯಿ ಡಿಫಿಸಿಟ್ ಆಗುತ್ತದೆ, ರಿಟರ್ನ್ ಏನೂ ಇಲ್ಲ, ಅದನ್ನು ಇನ್ನೂ ಸರ್ವೆ ಮಾಡಿಸಿಲ್ಲ.

Sri B. D. JATTI (Minister for Finance).—All of a sudden, the Hon'ble Member has raised the point. They are not minor irrigation projects. I have referred to major and medium projects. We want to examine in all 15 projects, out of which we have examined only 11 projects. They are not minor projects ; they come under major and medium.

ಶ್ರೀ ಅಣ್ಣಾರಾವ್ ಗಣಮುಖಿ.—ಐದು ಸಾವಿರಕ್ಕಿಂತ ಹೆಚ್ಚಿಗೆ, 50 ಸಾವಿರ ರೂಪಾಯಿನ ವರೆಗೂ ಆದರೆ, ಮೀಡಿಯಮ್. ಹತ್ತು ಸಾವಿರ ಎಕರೆ ಎಂದರೆ ದೊಡ್ಡದಾಗಲಿಲ್ಲ. ಇವತ್ತು ನಾವು ರಿಟರ್ನ್ ನೋಡಿದರೆ, ಪ್ರಾಜೆಕ್ಟುಗಳಿಂದ ಏನೂ ಬರುತ್ತಿಲ್ಲ. ಅವಕ್ಕೆ ಹೆಚ್ಚು ಹಣ ಖರ್ಚಾಗುತ್ತಿದೆ. ನೀರಾವರಿ ಯೋಜನೆಗಳಲ್ಲಿ ರಿಟರ್ನ್ ಚೆನ್ನಾಗಿಲ್ಲ. ಕೃಷ್ಣರಾಜಸಾಗರದಲ್ಲಿ ಕೂಡ 24 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ, ಲಾಸ್ ಇದೆ. ಇದು ಪ್ರಾಜೆಕ್ಟುಗಳನ್ನು ನಡೆಸತಕ್ಕಂಥ ಪದ್ಧತಿ ಅಲ್ಲ ಅಂತ ಹೇಳಿ ನಿಮಗೆ ತಿಳಿಸುತ್ತೇನೆ. ಈ ದೃಷ್ಟಿಯಿಂದ ಎಲ್ಲ ಪ್ರಾಜೆಕ್ಟುಗಳನ್ನೂ ಸರ್ವೆ ಮಾಡಿಸಿ. ಘಟಪ್ರಭ ತೆಗೆದುಕೊಂಡರೆ ರಿಟರ್ನ್ ಏನು ? ತುಂಗಭದ್ರಾದ್ದು ರೈಟ್‌ಬ್ಯಾಂಕ್ ಕೆನಾಲ್ ಮಟ್ಟಿಗೆ ಹೇಳಿದ್ದಾರೆ; ಲೆಫ್ಟ್‌ಬ್ಯಾಂಕ್ ನದೀದು ಹೇಳಿಲ್ಲ. ಲಾಭ ಬಂದರೂ ಸ್ವಲ್ಪ ಆಗುತ್ತದೆ. ಹಳೆ ಮೈಸೂರಿನಲ್ಲಿ ಪಿಕಪ್ಪುಗಳನ್ನು ಮಾಡಿದ್ದಾರೆ. ಅದರಲ್ಲಿ ಮಾತ್ರ ಖರ್ಚು ಕಡಿಮೆ ; ಲಾಭ ಹೆಚ್ಚಾಗಿದೆ. ತಾವು ಹೇಳುವ ಪ್ರಕಾರ ಹಲವು ಪ್ರಾಜೆಕ್ಟುಗಳಲ್ಲಿ ನಿಜವಾಗಿ ರಿಟರ್ನ್ ಹೆಚ್ಚಾಗುತ್ತಾ ಇದೆ.

ಬೆಟರ್‌ಮೆಂಟ್ ಲೆವಿ ವಸೂಲು ಮಾಡಿಲ್ಲ, ವಾಟರ್ ರೇಟ್ ಹೆಚ್ಚಿಸಿಲ್ಲ, ಮೇಂಟೆನೆನ್ಸ್ ಸೆಸ್ ಹಾಕಿಲ್ಲವೆಂಬ ಕೆಲವು ಪ್ರಶ್ನೆಗಳಿವೆ. ಒಂದು ವೇಳೆ ಅವುಗಳೆಲ್ಲವನ್ನೂ ಹಾಕಿದರೂ ಲಾಸ್ ಆಗು

(ಶ್ರೀ ಅಣ್ಣಾರಾವ್ ಗಣಮುಖಿ)

ತ್ತದೆಂದು ನನಗನಿಸುತ್ತದೆ. ಮೊದಲನೆಯದಾಗಿ ಪ್ರಾಜೆಕ್ಟುಗಳನ್ನು ತಯಾರು ಮಾಡುವುದರಲ್ಲಿ ನಿಧಾನವಾಗುತ್ತಿದೆ. ಮಲಪ್ರಭಾದಲ್ಲಿ ಕೆಲಸ ಏನು ನಡೆದಿದೆ ಅದು ಬಹಳ ತಡವಾಗಿ ನಡೆದಿದೆ. ಬಹಳ ಡಿಲೆ ಆಗುತ್ತಿದೆ. ಅಲ್ಲಿ ಸ್ಟಾಫಿನ ಮೇಲೆ ಖರ್ಚು ಬಹಳ ಹೆಚ್ಚಾಗಿದೆ ಅಂತ ವಾದ ಇದೆ. ಸ್ಟಾಫ್ ಇರುವ ಪ್ರಮಾಣದಲ್ಲಿ ಕೆಲಸವಾಗಿಲ್ಲ. ಈ ದೃಷ್ಟಿಯಿಂದ ನೋಡಿದರೆ, ರಿಟರ್ನ್ ಹೆಚ್ಚಾಗಿ ಬಂದಿರತಕ್ಕಂಥ ಸ್ಕೀಮುಗಳು ಏನಿವೆ ಅವುಗಳಿಗೆ ಆದ್ಯತೆ ಕೊಡಬೇಕು. ನಾನ್ ಕಮರ್ಷಿಯಲ್ ಟೈಪ್ ಪ್ರಾಜೆಕ್ಟುಗಳಿರುತ್ತವೆ, ಕಮರ್ಷಿಯಲ್ ಟೈಪ್ ಇರುತ್ತವೆ. ಕಮರ್ಷಿಯಲ್ ಟೈಪು ಯಾವುದಿರುತ್ತದೆ, ಯಾವುದರಲ್ಲಿ ರಿಟರ್ನ್ ಹೆಚ್ಚಾಗಿರುತ್ತದೆ, ಅಂಥ ಪ್ರಾಜೆಕ್ಟುಗಳನ್ನು ಬದಿಗೊತ್ತಿ, ಪಾಲಿಟಿಕ್ಸಿಗಾಗಿ, ಇನ್ನೊಂದು ಒತ್ತಡಕ್ಕಾಗಿ ಒಳಗಾಗಿ, ನಾನ್ ಕಮರ್ಷಿಯಲ್ ಒಂದು ವೇಳೆ ತೆಗೆದುಕೊಂಡರೆ, ಅದರಲ್ಲಿ ಒಂದು ದೊಡ್ಡ ಪ್ರಶ್ನೆ ಹುಟ್ಟುತ್ತದೆ.

2-00 P.M.

ಇಲ್ಲಿ ಯಾವ ಹಾನಿಯಾದರೂ ಕೂಡ ಅದನ್ನು ಜನರಲ್ ಟ್ಯಾಕ್ಸ್ ಪೇಯರ್ಸ್ ವಹಿಸಬೇಕಾಗುತ್ತದೆ. ಸರ್ಕಾರದಿಂದ ಹಣ ಖರ್ಚು ಮಾಡುವುದು ನೀರಾವರಿ ಯಾರಿಗೆ ಸಿಕ್ಕುತ್ತದೆ ಅವರಷ್ಟೇ ಅಲ್ಲದೇ ಡ್ರೈ ಏರಿಯಾದವರಿಗೂ ಕೂಡ ಸಬ್ಸಿಡೈಸ್ ಮಾಡಬೇಕಾಗುತ್ತದೆ ಎಂದು ಅರ್ಥವಾಗುತ್ತದೆ. ಅಂತಹ ಸಬ್ಸಿಡೈಸೇಷನ್ ಏನಿವೆ ಅದನ್ನು ಅವರೂ ಕೂಡ ತೆರಬೇಕಾಗುತ್ತದೆ. ಆದ್ದರಿಂದ ಇನಿಷಿಯಲ್ ಸ್ಟೇಜಸ್‌ನಿಂದಲೇ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂಬುದನ್ನು ಒಪ್ಪುತ್ತೇನೆ. ಆದರೆ ಕೆಲಸ ಆಗುತ್ತಾ ಹೋದಂತೆ ಅದರಿಂದ ಎಷ್ಟು ಇಂಟರೆಸ್ಟ್ ಬರಬೇಕೋ ಅಷ್ಟು ಕೊಟ್ಟಿಲ್ಲ. ವರ್ಕಿಂಗ್ ಎಕ್ಸ್‌ಪೆನ್ಸಸ್ ರೂಡಿಮೆಂಟಾಗಿ ಎಷ್ಟಾಗುತ್ತದೆ ಎಂಬುದನ್ನು ಫೈನಾನ್ಸ್ ಮಿನಿಸ್ಟರು ಹೇಳುತ್ತಾರೆ. ಅದೇ ರೀತಿ ರಿಟರ್ನ್ ಎಷ್ಟು ಬರುತ್ತದೆ ಎಂಬುದನ್ನು ಈಗ ಎರಡು ಮೂರು ವರ್ಷದಿಂದ ಕೇಳುತ್ತಾ ಇದ್ದೇನೆ ಇನ್ನೂ ಕೂಡ ಅದನ್ನು ತಿಳಿಸಿಲ್ಲ. ಅದು ಇನ್ನೂ ಫಾಂಡ್ ಹೋಪ್ ಆಗಿಯೇ ಇದೆ ಎಂದು ಹೇಳಬೇಕಾಗುತ್ತದೆ. ಶರಾವತಿಯ ವಿಷಯದಲ್ಲೂ ಕೂಡ ಅದನ್ನು ಹೇಳಬೇಕಾಗುತ್ತದೆ. ಶರಾವತಿಯಲ್ಲೂ ಕೂಡ ಬಂಡವಾಳವನ್ನು ವಿಪರೀತವಾಗಿ ಹೆಚ್ಚು ಖರ್ಚು ಮಾಡುತ್ತಾ ಇದ್ದೀರಿ, ಕನ್‌ಸ್ಯೂಮರ್ ಅದನ್ನು ಉಪಯೋಗ ಮಾಡಿಕೊಳ್ಳಬೇಕಾದ ಸಮಯದಲ್ಲಿ ಅವನು ಎತ್ತಲಾರದಷ್ಟು ರೇಟನ್ನು ಹಾಕಿದರೆ ಅವನು ಏನು ಮಾಡಬೇಕು ? ಅದರಿಂದ ಜನರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಯಾವುದಾದರೂ ಒಂದು ಕೆಲಸವನ್ನು ಮಾಡುವಾಗ ಅದಕ್ಕೆ ರಿಟರ್ನ್ ಚೆನ್ನಾಗಿ ಬರುತ್ತದೆಯೇ ಇಲ್ಲವೇ ಎಂಬುದನ್ನು ಮೊದಲೇ ತಿಳಿದುಕೊಂಡು ಅನಂತರ ಅದನ್ನು ಮಾಡಿ ಮುಗಿಸಬೇಕು. ಇಲ್ಲದೇ ಹೋದರೆ ರಿಟರ್ನ್ ಬರದೇ ಹೋದ ಪಕ್ಷದಲ್ಲಿ ಜನರಲ್ ಟ್ಯಾಕ್ಸ್ ಪೇಯರ್ಸ್ ಅದರ ಹೊರೆಯನ್ನು ಹೊರ ಬೇಕಾಗುತ್ತದೆ. ಯಾವ ಲಾಭಕ್ಕೆ ಇದನ್ನು ಮಾಡಲಾಗುತ್ತಿದೆಯೋ ಅವರೇ ಅಲ್ಲದೇ ಇತರರೂ ಕೂಡ ಅದರ ಭಾರವನ್ನು ಹೊರಬೇಕಾಗುತ್ತದೆ ಎಂದು ಅರ್ಥವಾಗುತ್ತದೆ. ಅಂಥಾದ್ದಕ್ಕೆ ಇಂಟರೆಸ್ಟ್ ಏನೂ ಇಲ್ಲ, ಎಲ್ಲರೂ ಕೂಡ ಅದರ ಮೇಲೆ ಮಾಡಿದ ಹಣಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ. ಆ ಇರಿಗೇಷನ್‌ನಿಂದ ಯಾರು ಲಾಭ ಪಡೆದುಕೊಳ್ಳುತ್ತಾರೆ ಅವರು ಮಾತ್ರವಲ್ಲದೇ ಯಾರಿಗೆ ಲಾಭ ಇಲ್ಲವೋ ಅವರೂ ಕೂಡ ಕೊಡಬೇಕಾಗುತ್ತದೆ, ಅದು ಎಷ್ಟು ಮಟ್ಟಿಗೆ ನ್ಯಾಯ ಎಂದು ಕೇಳುತ್ತೇನೆ. ಅದಕ್ಕೆ ಒಂದು ಟೈಂ ಇರಬೇಕು. ಮುಂದೆ ಎಷ್ಟು ದಿವಸವಾದರೂ ಕೂಡ ಅದೇ ರೀತಿ ಉಳಿದುಕೊಂಡರೆ ಕಷ್ಟವಾಗುತ್ತದೆ. ಆದ್ದರಿಂದ ಎಕನಾಮಿಕ್ ಸರ್ವೇ ಮಾಡಬೇಕು. ಯಾವುದಾದರೂ ಒಂದು ಪ್ರಾಜೆಕ್ಟಿನ ಸರ್ವೇ ಮಾಡಬೇಕಾದರೆ ಈಗ ಏನಾಗಿದೆ ಇಂಜನಿಯರುಗಳು ಹೋಗುತ್ತಾರೆ ನಮ್ಮಲ್ಲಿ. ಎರಡನೆಯ ಕಡೆ ಎಕಾನಮಿಸ್ಟ್ಸ್ ಮತ್ತು ಸ್ಟ್ಯಾಟಿಸ್ಟೀಷಿಯನ್ಸ್ ಇಬ್ಬರೂ ಕೂಡ ಹೋಗುತ್ತಾರೆ. ಹೋಗಿ ಅಂಕಿಅಂಶಗಳನ್ನು ಸಂಗ್ರಹಮಾಡುತ್ತಾರೆ. ಎಕಾನಮಿಸ್ಟ್ಸ್ ಅದರಿಂದ ಡೈರೆಕ್ಟ್ ಬೆನಿಫಿಟ್ ಎಷ್ಟು, ಇನ್‌ಡೈರೆಕ್ಟ್ ಬೆನಿಫಿಟ್ ಸರ್ಕಾರದವರಿಗೆ ಎಷ್ಟಾಗುತ್ತದೆ. ಬಾಕಿಯವರಿಗೆ ಎಷ್ಟಾಗುತ್ತದೆ, ಎಂಬುದನ್ನೆಲ್ಲಾ ನೋಡಿ ವರದಿ ಮಾಡುತ್ತಾರೆ. ಆಮೇಲೆ ಒಂದು ಪ್ರಾಜೆಕ್ಟು ತಯಾರಾಗುತ್ತದೆಯೇ ವಿನಃ ಈಗ ನಮ್ಮಲ್ಲಿ ಆಗುತ್ತಿರುವಂತೆ ಇಂಜನಿಯರುಗಳು ಹೋಗಿ ಎಷ್ಟು ಏರಿಯಾ ಸಬ್‌ಮರ್ಷನ್ ಆಗುತ್ತದೆ, ಎಷ್ಟು ಜನಗಳಿಗೆ ರೀ ಹ್ಯಾಬಿಲಿಟೇಟ್ ಮಾಡಬೇಕಾಗುತ್ತದೆ ಎಂಬುದಷ್ಟನ್ನೇ ನೋಡಿ ಪ್ರಾಜೆಕ್ಟುಗಳನ್ನು ತಯಾರುಮಾಡುವುದಿಲ್ಲ. ಬರೀ ಇಂಜನಿಯರುಗಳು ಮಾಡತಕ್ಕ ಒಂದು ಸರ್ವೇ ಕೆಲಸದ ಮೇಲಿನಿಂದಲೇ ಪ್ರಾಜೆಕ್ಟುಗಳ ಕೆಲಸ ನಡೆಯಬಾರದು. ಎಕಾನಮಿಸ್ಟ್ಸ್ ಮತ್ತು ಸ್ಟ್ಯಾಟಿಸ್‌ಟೀಷಿಯನ್ಸ್‌ಗೆ ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ ಏನೇನೂ ಮಹತ್ವ ಇಲ್ಲ. ಎಕಾನಮಿಸ್ಟ್ಸ್ ಎಲ್ಲಿ ಲಾಭ ಪಡೆಯಬಹುದು, ಎಷ್ಟು ಬೆನಿಫಿಟ್ ಆಗುತ್ತದೆ ಎಂದು ಹೇಳುತ್ತಾರೆ ಅದನ್ನು ಹೇಳುವವರೇ ನಮ್ಮಲ್ಲಿ ದಿಕ್ಕಿಲ್ಲ. ನಾವು

ಎಷ್ಟು ಟ್ಯಾಕ್ಸ್‌ನ್ನು ಎತ್ತಬೇಕಾಗುತ್ತದೆ ? ಇದನ್ನೆಲ್ಲಾ ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ನಮ್ಮ ಅಜ್ಞಾನದ ಮೇಲೆ ಆಶ್ಚರ್ಯವಾಗುತ್ತದೆ. ಆದ್ದರಿಂದ ಇಂಜನಿಯರುಗಳು ಮತ್ತು ಎಕಾನಮಿಸ್ಟ್ಸ್ ಇಬ್ಬರೂ ಸೇರಿ ಎಂಜಿನಿಯರಿಂಗ್ ಮತ್ತು ಎಕನಾಮಿಕ್ ಫೀಸಿಬಿಲಿಟಿ ಎರಡನ್ನೂ ಗಮನಿಸಿ ಯಾವುದಾದರೂ ಒಂದು ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕೇ ಹೊರತು ಸುಮ್ಮನೆ ಇಷ್ಟು ನೀರಾವರಿ ಬರುತ್ತದೆ ಇಷ್ಟು ರಿಟರ್ನ್ ಸಿಕ್ಕಬಹುದು ಎಂಬ ಒಂದು ಊಹೆಯ ಮೇಲೆ ಕೆಲಸ ಮಾಡುತ್ತಾ ಹೋದರೆ ನಿಜವಾಗಿಯೂ ಅಷ್ಟು ರಿಟರ್ನ್ ಬರುತ್ತದೆಯೇ ಎಂಬುದು ಅನುಮಾನಾಸ್ಪದವಾದ ವಿಷಯವಾಗುತ್ತದೆ. ಆದ್ದರಿಂದ ಇಂಜನಿಯರುಗಳನ್ನು ರಿಟರ್ನ್ ಬಗ್ಗೆ ತಾವು ಕೇಳಬಾರದು. ಎಷ್ಟು ನೀರು ಇದೆ, ಎಷ್ಟು ನೀರು ನೀರಾವರಿಗೆ ಬರುತ್ತದೆ ಎಂಬ ವಿಷಯಗಳನ್ನು ಕೇಳಬೇಕೇ ಹೊರತು ಎಕನಾಮಿಕ್ ಫೀಸಿಬಿಲಿಟಿ ಅವರನ್ನು ಕೇಳಿದರೆ ಅವರಿಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಎಕಾನಮಿಸ್ಟ್ ಮತ್ತು ಸ್ಟ್ಯಾಟಿಸ್‌ಟೀಷಿಯನ್ಸ್ ಇವರಿಬ್ಬರ ಲಾಭವನ್ನೂ ಪಡೆದು ಅಂತಹ ಸರ್ವೆಗಳನ್ನೂ ಸಹ ಮಾಡಿಸಿ, ಅದನ್ನು ಪರಿಶೀಲನೆ ಮಾಡಿ ಪ್ರಾಜೆಕ್ಟುಗಳನ್ನು ವಿಶೇಷವಾಗಿ ತೆಗೆದುಕೊಳ್ಳಬೇಕು, ಅಂತಹ ಪ್ರಾಜೆಕ್ಟುಗಳಿಗೆ ಆದ್ಯತೆ ಕೊಡಬೇಕು ಎಂದರೆ ನಮ್ಮ ಫೈನಾನ್ಸ್‌ಸ್ ಚೆನ್ನಾಗಿ ಆಗುತ್ತದೆ ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಜತ್ತಿಯವರು ಯಾವುದನ್ನು ಕೇಳಿದರೂ ಹಣ ಇಲ್ಲ ಎಂದು ಹೇಳುತ್ತಾರೆ. ಹಣ ಇಲ್ಲವೂ ಇಲ್ಲ, ಎಲ್ಲಿಂದ ತರಬೇಕು ? ಜನರಲ್ ಟ್ಯಾಕ್ಸೆಸ್ ಹಾಕಬೇಕು. ಅದನ್ನು ಹೊರಲಿಕ್ಕೆ ಜನ ತಯಾರಾಗಿಲ್ಲ. ಆದ್ದರಿಂದ ಟ್ಯಾಕ್ಸ್ ಹಾಕಲಿಕ್ಕೆ ಆಗುವುದಿಲ್ಲ. ಖಜಾನೆಯಲ್ಲಿ ಹಣ ಇಲ್ಲ. ಆದ್ದರಿಂದ ಯಾವುದೂ ಪ್ರಾಜೆಕ್ಟ್ ಆಗುವುದಿಲ್ಲ ಎಂದು ನಮಗೆ ಅರ್ಥವಾಗುತ್ತದೆ. ಆದ್ದರಿಂದ ಸಾಲವನ್ನಾದರೂ ತೆಗೆದುಕೊಂಡು ಬಂದು ಈ ಪ್ರಾಜೆಕ್ಟುಗಳನ್ನು ತೀವ್ರವಾಗಿ ಮಾಡಬೇಕು. ನಾಲ್ಕನೆಯ ಯೋಜನೆಯಲ್ಲೇ ಮುಗಿಸಬೇಕೆಂದು ನಮ್ಮ ಸ್ನೇಹಿತರು ಹೇಳುತ್ತಾ ಇದ್ದಾರೆ. 5ನೇ ಯೋಜನೆಯಲ್ಲಾದರೂ ಇವನ್ನು ಮುಗಿಸಿದರೆ ನಾವೇ ಬಹಳ ಧನ್ಯವಂತರು ಎಂದು ನನಗೆ ಅನಿಸುತ್ತಾ ಇದೆ. ಆದ್ದರಿಂದ ನಮ್ಮ ಲೀಡರ್ ಅವರು ಒಂದಷ್ಟು ಏನಾದರೂ ಪ್ರಯತ್ನ ಮಾಡಿ ಹೆಚ್ಚು ಹಣ ತರುತ್ತಾರೆ ಎಂದರೂ ಕೂಡ ಅವರಾದರೂ ಎಷ್ಟು ಹಣ ತರುವುದಕ್ಕೆ ಸಾಧ್ಯವಾಗುತ್ತದೆ ? ಆದ್ದರಿಂದ ಕೇಂದ್ರದವರೇ ಇಂತಹ ಪ್ರಾಜೆಕ್ಟುಗಳನ್ನು ವಹಿಸಿಕೊಂಡು ಅದಕ್ಕೆ ಅವರೇ ಫೈನಾನ್ಸ್ ಮಾಡಿದರೆ ಸಾಧ್ಯವೇ ಹೊರತು ಇಲ್ಲವೇ ಇದ್ದರೆ ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಇದನ್ನು ವಿಶೇಷವಾಗಿ ಸೆಂಟ್ರಲ್ ಗವರ್ನಮೆಂಟಿನವರ ಗಮನಕ್ಕೆ ತಂದು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಒಂದು ಅಂಶ ನಮ್ಮ ಇರಿಗೇಷನ್ ವಿಷಯದಲ್ಲಿ ಅದರ ಪರ್ಸೆಂಟೇಜ್ ಏನಿದೆ ಎಂಬುದನ್ನು ಪೇಪರ್‌ನಲ್ಲಿ ನೋಡಿ ನನಗೆ ಆಶ್ಚರ್ಯವಾಯಿತು. ಶ್ರೀ ಕೆ. ಎಲ್. ರಾವ್ ಅವರು ಆಲ್ ಇಂಡಿಯಾ ಪರ್ಸೆಂಟೇಜ್ 82 ಇದೆ ಎಂದು ಹೇಳಿದ್ದಾರೆ ಅದಕ್ಕೆ ರಿಟರ್ನ್ ಏನಿದೆ ಎಂಬುದನ್ನು ಹೇಳಿಲ್ಲ. ಪ್ರಪಂಚದಲ್ಲೇ ನಾವು ಮೊದಲನೆಯವರು ಎಂದು ಅವರು ಹೇಳುತ್ತಾರೆ. ಅದು ಯಾವ ರೀತಿಯಲ್ಲಿ ಆಗುತ್ತದೆ ? ಮೊದಲನೆಯ ಪ್ಲಾನ್ ಪ್ರಕಾರ ನಮ್ಮದು 17 ಪರ್ಸೆಂಟ್ ಇತ್ತು. ಪಾಕಿಸ್ಥಾನದಲ್ಲಿ 48 ಪರ್ಸೆಂಟ್, ಚೈನಾದಲ್ಲಿ 46 ಪರ್ಸೆಂಟ್, ಜಪಾನ್‌ನಲ್ಲಿ 55 ಪರ್ಸೆಂಟ್ ಇರಬೇಕಾದರೆ ಈ 82 ಪರ್ಸೆಂಟ್ ಎಲ್ಲಿಂದ ಬಂತು ?

Sri S. NIJALINGAPPA (Chief-Minister).—The Hon'ble Member need not depend so much on press reports. It may be 8.2 per cent. It may be in fulfilling our targets. He need not labour much on the point.

ಶ್ರೀ ಅಣ್ಣಾರಾವ್ ಗಣಮುಖಿ.—ಇನ್ನೊಂದು ವಿಷಯವೇನೆಂದರೆ ನಮ್ಮಲ್ಲಿ ಈ ಹೊಗೇನಕಲ್ ಪ್ರಾಜೆಕ್ಟ್ ವಿಷಯ ಸ್ವಲ್ಪ ದಿವಸ ಕೇಳಿ ಬರುತ್ತಾ ಇತ್ತು. ಎಲ್ಲಿಯವರೆಗೆ ಎಂದರೆ 1924ರ ಅಗ್ರಿಮೆಂಟ್ ಪೀರಿಯಡ್ ಮುಗಿಯುವವರೆಗೂ ಕಾವೇರಿ ನದಿಯಲ್ಲಿ ಇರಿಗೇಷನ್ ಪೊಟೆನ್‌ಷಿಯಲ್ ಏನಿದೆ ಅದನ್ನು ಉಪಯೋಗ ಮಾಡಿಕೊಳ್ಳಬೇಕು, ಯಾವ ಎಲೆಕ್ಟ್ರಿಕಲ್ ಪವರ್ ಪ್ರಾಜೆಕ್ಟ್‌ಗೂ ಕೂಡ ಆದ್ಯತೆ ಕೊಡಬಾರದು ಅಥವಾ ಅದನ್ನು ಒಪ್ಪಬಾರದು, ಆ ರೀತಿ ಒಪ್ಪಿದ್ದೇ ಆದರೆ ಅದರಿಂದ ಇರಿಗೇಷನ್‌ಗೆ ತೊಂದರೆಯುಂಟಾಗುತ್ತದೆ. ಹೇಗೆಂದರೆ ಅದಕ್ಕೆ ಒಂದಷ್ಟು ನೀರನ್ನು ಅಷ್ಯೂರ್ಡ್ ಆಗಿ ಕೊಡಬೇಕಾಗುತ್ತದೆ. ಅಷ್ಟು ನೀರನ್ನು ಇಂಪೌಂಡ್ ಮಾಡಿದರೆ ಇರಿಗೇಷನ್ ಇಂಟರೆಸ್ಟ್‌ಗೆ ಧಕ್ಕೆ ಬರುತ್ತದೆ. ಈಗ ಇರತಕ್ಕ ಶರಾವತಿ ಪ್ರಾಜೆಕ್ಟ್ ಒಂದೇ ಸಾಕು. ನೀರಾವರಿಗೆ ಧಕ್ಕೆ ಬರದಂತೆ ಮಾಡಬೇಕಾದರೆ ಹೊಗೇನ್‌ಕಲ್ ಪ್ರಾಜೆಕ್ಟ್‌ನ ಕಡೆಗೆ ಗಮನವನ್ನು ಕೊಡಬಾರದು ಎಂದು ನನಗೆ ಅನಿಸುತ್ತದೆ. ಆ ಪ್ರಕಾರ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇವತ್ತಿನ ದಿವಸ ಕಾವೇರಿ ನೀರಿನ ಹಂಚಿಕೆ ಪ್ರಶ್ನೆಗಿಂತ ಅದರ ಉಪಯೋಗದ ಪ್ರಶ್ನೆ ಮುಖ್ಯವಾಗಿದೆ ಅದನ್ನು ಹೇಗೆ ಉಪಯೋಗಮಾಡಬೇಕು, ಎಕನಾಮಿಕ್ ಫೆಸಿಲಿಟಿ ಮತ್ತು ಫೈನಾನ್‌

(ಶ್ರೀ ಅಣ್ಣಾರಾವ್ ಗಣಮುಖಿ)

ಷಿಯಲ್ ಫೆಸಿಲಿಟಿ ಹೇಗಿದೆ ಎಂಬುದು ಕೂಡ ಬಹಳ ಮಹತ್ವವುಳ್ಳದ್ದಾಗಿದೆ. ಹಣದ ಪ್ರಶ್ನೆ ಬಂದಕೂಡಲೆ ಯಾವಯಾವ ರೀತಿ ಮಾಡಬೇಕೆಂದು ನಾನು ಹಿಂದೆ ಸಲಹೆಮಾಡಿದ್ದೆ. ಕೆಲವು ಇಲಾಖೆ ಗಳಲ್ಲಿ ಕಡಿತಮಾಡಬೇಕು, ಕೆಲವು ಬಡ್ಜೆಟ್ ಕಟ್‌ಮಾಡಿ ಇರೀಗೇಷನ್‌ಗೆ ಉಪಯೋಗಮಾಡಬೇಕು, ಇದು ಒಂದನೆಯ ಮಾರ್ಗ; ಎರಡನೆಯದು ಕೆಲವು ಕೈಗಾರಿಕೆಗಳೇನಿವೆ ಅವನ್ನು ಮಾರಿದರೂ ಚಿಂತೆಯಿಲ್ಲ, ಕೆಲವು ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿರುವ ಷೇರುಗಳನ್ನು ಮಾರಿದರೂ ಚಿಂತೆ ಯಿಲ್ಲ, ಆ ರೀತಿ ಮಾಡಿ ಉಳಿಸಿದ ಹಣ ನೀರಾವರಿ ಯೋಜನೆಗಳಿಗೆ ಉಪಯೋಗಮಾಡಬೇಕು. ಮೂರನೆಯ ಸಲಹೆ ಸಾಲವನ್ನೂ ಮಾಡಬೇಕೆಂಬುದು. ಇಂಡಿಯಾ ಸರ್ಕಾರಕ್ಕೆ ದೊಡ್ಡ ಪ್ರಾಜೆಕ್ಟು ಗಳನ್ನು ವಹಿಸಿ ಅವರ ಕಡೆಯಿಂದ ಸಹಾಯ ಪಡೆಯಬೇಕು. ಅವರು ಕೊಡದಿದ್ದರೆ ಸಾಲದ ರೂಪ ವಾಗಿ ಅದರೂ ಹೆಚ್ಚಿನ ಹಣಪಡೆದು ಕಾವೇರಿ ಅಲ್ಲದೆ ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳ ಬೇಕು. ಕಾವೇರಿ ನೀರಿನಿಂದ 15 ಅಥವಾ 20 ಲಕ್ಷ ಎಕರೆ ನೀರಾವರಿಯಾಗುವುದೇನಿದೆ ಅದಕ್ಕೆ ಪ್ರಯತ್ನಮಾಡುವುದು ಅವಶ್ಯಕ. ಉತ್ತರ ಕರ್ಣಾಟಕದಲ್ಲಿ ಕೃಷ್ಣಾದಿಂದ ಹೆಚ್ಚು ನೀರಾವರಿಯಾಗು ತ್ತದೆ, ಅಲ್ಲಿಗೂ ಹೆಚ್ಚು ಖರ್ಚುಮಾಡಬೇಕು. ಉತ್ತರ ಕರ್ಣಾಟಕ ಮಾತ್ರ ಕೃಷ್ಣಾದಿಂದ ಅಭಿವೃದ್ಧಿ ಯಾಗುತ್ತದೆಂದು ಯಾರೂ ಭಾವಿಸಬಾರದು. ಕಾವೇರಿ ಕಣಿವೆಯಲ್ಲಿ ಅಭಿವೃದ್ಧಿಯಾದರೆ ಉತ್ತರ ಕರ್ಣಾಟಕದವರೂ ತಮಗೇನೂ ಆಗಲಿಲ್ಲವೆಂದು ಏನೂ ತಿಳಿಯಬಾರದು. ಯಾವ ಮೂಲೆಯಲ್ಲಿ ನೀರಾವರಿ ಯೋಜನೆಯಿಂದ ಲಾಭವಾದರೂ ಅದು ಇಡೀ ದೇಶಕ್ಕೆ ಲಾಭವಾಗುತ್ತದೆ ಎಂಬ ಭಾವನೆಯಿರಬೇಕು. ಈ ದಿವಸ ಸರಕಾರದವರು ಒಂದು ಯೋಜನೆ ಇದರಮೇಲೆ ತಯಾರಿಸಿ ಎಷ್ಟು ಖರ್ಚಾಗುತ್ತದೆ, ಎಂದು ಅಂದಾಜುಮಾಡಿ ಎಷ್ಟು ವರ್ಷಗಳಲ್ಲಿ ನೀರನ್ನು ಪೂರ್ಣವಾಗಿ ಉಪಯೋಗ ಮಾಡಲು ಸಾಧ್ಯ ಎಂದು ನಿರ್ದಿಷ್ಟವಾಗಿ ಹೇಳಬೇಕು. ನಿರ್ಣಯದಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಲಸ ಮುಗಿಸಬೇಕೆಂದು ತಿಳಿಸಿದ್ದಾರೆ. ಇದು 5ನೆಯ ಯೋಜನೆಯ ಅಂತ್ಯ ದಲ್ಲಿ ಮುಗಿಯಬಹುದು ಅಥವ 6ನೆಯ ಯೋಜನೆಯಲ್ಲಿ ಮುಗಿಯಬಹುದು. ಆದರೆ ಹಾಗೆ ಮಾಡಿದರೆ ಎಷ್ಟು ಹಾನಿಯಾಗುತ್ತದೆಂಬುದನ್ನು ಗಮನಿಸಬೇಕು. ಉಳಿದ ನೀರು ಹಂಚಿಕೆಯಾಗು ವಾಗ ಹಾನಿ ಅಥವ ಲಾಭವೆಷ್ಟು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಸಭಾಪತಿಗಳೆ, ಮಾನ್ಯ ಮಿತ್ರರಾದ ದೇವೇಗೌಡರು ತಂದಿರುವ ಈ ನಿರ್ಣಯ ಬಹಳ ಮಹತ್ವವುಳ್ಳದ್ದಾಗಿದೆ, ಈ ಮಾನ್ಯ ಸಭೆಯವರು ಸಂಪೂರ್ಣವಾಗಿ ಇದನ್ನು ಒಪ್ಪಿ ಸರ್ಕಾರಕ್ಕೆ ಶಿಫಾರ್ಸು ಮಾಡುತ್ತಾರೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಈಗ ಕಾವೇರಿ ನೀರಿನ ಬಳಕೆಯ ವಿಚಾರ ಸುಮಾರು ನಾಲ್ಕಾರು ವರ್ಷಗಳಿಂದ ಈ ಸಭೆಯಮುಂದೆ ಒಂದಲ್ಲ ಒಂದು ರೀತಿಯಲ್ಲಿ ಬರುತ್ತಿದೆ. ಅದನ್ನು ಒಪ್ಪಂದದ ಪ್ರಕಾರ 1974ನೆಯ ಇಸವಿಯೊಳಗೆ ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬ ವಿಚಾರವನ್ನ ಈ ಸಭೆಯ ಗಮನಕ್ಕೆ ತರಬೇಕಾದ್ದು ಅಗತ್ಯವೆಂದು ನಾನಾದರೂ ಭಾವಿಸಿದ್ದೇನೆ. ನನಗೆ ತಿಳಿದಿರುವಮಟ್ಟಿಗೆ ಸುಮಾರು 100 ರಿಂದ 110 ಟಿ.ಎಂ.ಸಿ.ಎಫ್.ಟಿ. ನೀರನ್ನು ನಾವು ಉಪ ಯೋಗಿಸಿಕೊಳ್ಳಬೇಕಾಗಿದೆ. ಅದಕ್ಕೆ ನನ್ನ ಅಂದಾಜಿನ ಪ್ರಕಾರ ಸುಮಾರು 50-55 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಹಾಗೆ ಮಾಡುವುದಾದರೆ ಸುಮಾರು ಐದೂವರೆ ಲಕ್ಷ ಎಕರೆ ನೀರಾವರಿಮಾಡಲು ಸಾಧ್ಯ. ಅಂದಮೇಲೆ ಈಗ ಉಳಿದಿರುವ 10 ವರ್ಷಗಳಲ್ಲಿ ಇಷ್ಟು ಕಾರ್ಯ ಮಾಡಿ ಇರುವ ಎಲ್ಲಾ ನೀರಾವರಿ ಪ್ರಾಜೆಕ್ಟುಗಳನ್ನೂ ಪೂರೈಕೆಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆಮಾಡಬೇಕಾಗಿದೆ. ಸುಮಾರು 50 ಕೋಟಿ ರೂಪಾಯಿಗಳನ್ನು ಪಡೆಯುವುದು ಹೇಗೆ ಎಂಬುದನ್ನು ಯೋಚನೆ ಮಾಡಬೇಕು. 1974ರೊಳಗೆ ಎಲ್ಲ ನೀರನ್ನೂ ಉಪಯೋಗಿಸಿಕೊಳ್ಳ ದಿದ್ದರೆ ಮುಂದೆ ಬಹಳ ಕಷ್ಟವಾಗಬಹುದು; ಮುಂದೆ ಮದ್ರಾಸು ಸರ್ಕಾರ ಹೆಚ್ಚು ಅವಕಾಶ ಕೊಡುವುದಿಲ್ಲ ಎಂದು ಕೇಂದ್ರಸರ್ಕಾರದ ಮುಂದೆ ವಾದಮಾಡಿ ಅದನ್ನು ಒಪ್ಪಿಸಿ, ಅದಷ್ಟು ಸಹಾಯ ವನ್ನು ಅಲ್ಲಿಂದ ಪಡೆಯಬೇಕು. ತಾವು ಯೋಚನೆ ಮಾಡುವುದಾದರೆ ನಾಗಾರ್ಜುನಸಾಗರದಂಥ ದೊಡ್ಡ ಪ್ರಾಜೆಕ್ಟಿಗೆ ಆಂಧ್ರ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಸುಮಾರು 20 ಕೋಟಿ ರೂಪಾಯಿ ಗಳ ಆಡ್‌ಹಾಕ್ ಗ್ರಾಂಟನ್ನು ಸುಮಾರು 5 ವರ್ಷಗಳ ಅವಧಿಯವರೆಗೆ ಔಟ್‌ಸೈಡ್ ದಿ ಪ್ಲಾನ್ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಾವು ಪಡೆಯಲು 1974ರೊಳಗೆ ನಾವು ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲೇಬೇಕು, ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಕೇಂದ್ರಕ್ಕೆ ಮನವರಿಕೆಯಾಗುವಂತೆ ಹೇಳಬೇಕು. ಸುಮಾರು 50 ಕೋಟಿ ರೂಪಾಯಿಗಳನ್ನು ಯಾವ ರೀತಿ ಪಡೆಯಬೇಕೆಂಬುದಕ್ಕೆ ಸ್ವಲ್ಪ ತೀವ್ರಾಸಕ್ತಿ ವಹಿಸಿ ಒಂದು ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ.

ಸುಮಾರು 25 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಅಡ್‌ಹಾಕ್ ಗ್ರ್ಯಾಂಟಾಗಿ ಪಡೆಯಬೇಕು, ಉಳಿದ 25 ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಸಾಲದ ರೂಪವಾಗಿ ಪಡೆಯಬೇಕು. ಪೂರ್ಣವಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ 10 ವರ್ಷಗಳ ಒಂದು ಯೋಜನೆ ಮಾಡಿ, ವರ್ಷೇವರ್ಷೇ 5 ಕೋಟಿ ರೂಪಾಯಿ ಖರ್ಚುಮಾಡಿ 1974ರೊಳಗೆ 100 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಲು ಅವಕಾಶ ಮಾಡಿಕೊಳ್ಳಬೇಕು. ಪ್ರತಿ ವರ್ಷ 5 ಕೋಟಿ ಖರ್ಚು ಮಾಡಲು ಕೇಂದ್ರ ಸರ್ಕಾರದಿಂದ ಎರಡೂವರೆಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ, ಎರಡೂವರೆ ಕೋಟಿ ರೂಪಾಯಿಗಳನ್ನು ಸಹಾಯದ ರೂಪದಲ್ಲಿ ಬರುವುದಾದರೆ 1974ರೊಳಗೆ ಪೂರ್ಣವಾಗಿ ಒಂದು ಸಾವಿರ ಮಿಲಿಯನ್ ಸಿ. ಎಫ್. ಟಿ. ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯ, ಅದಕ್ಕೆ ತಕ್ಕ ಪ್ರಾಜೆಕ್ಟುಗಳನ್ನು ಮಾಡಲು ಸಾಧ್ಯ ಮತ್ತು ಐದೂವರೆ ಲಕ್ಷ ಎಕರೆಗಳ ನೀರಾವರಿ ಮಾಡಲು ಸಾಧ್ಯ ಎಂದು ಈ ದಿವಸ ಹೆಮ್ಮೆಯಿಂದ ಹೇಳಬಹುದು. ಇಂಥ ಯೋಜನೆ ಮಾಡಿ ಮುಖ್ಯಮಂತ್ರಿಗಳು ಶ್ರಮಪಟ್ಟರೆ ಬಹುಶಃ ಇದು ಸಾಧ್ಯವಾಗಬಹುದೆಂಬ ಆಶೆಯಿದೆ, 'ನೀರಾವರಿ ವಿಷಯದಲ್ಲಿ ಮೈಸೂರು ದೇಶ ಬಹಳ ಹಿಂದುಳಿದಿದೆ, ಇದು ಕೇಂದ್ರ ಸರ್ಕಾರಕ್ಕೆ ಗೊತ್ತಿದೆ, ಆದುದರಿಂದ ಇದನ್ನೆಲ್ಲಾ ತಿಳಿಸಿ ಕೇಂದ್ರ ಸರ್ಕಾರ ಒಪ್ಪುವಂತೆ ಮಾಡಲು ಕಾರ್ಯಕ್ರಮ ಹಾಕಿ ಸರಿಯಾಗಿ ಪ್ರಯತ್ನಪಟ್ಟರೆ ಅನುಕೂಲವಾಗಬಹುದು ಎಂದು ಒತ್ತಿ ಹೇಳಬೇಕಾಗಿದೆ.

ಸ್ವಾಮಿ, ಈ ವಿಚಾರದಲ್ಲಿ ಅನೇಕ ಮಾನ್ಯ ಮಿತ್ರರು ಮತ್ತು ಅಣ್ಣಾರಾಯರು ಕೆಲವು ವಿಚಾರಗಳನ್ನು ಹೇಳಿದರು, ಮೂರು ಯೋಜನೆಗಳಲ್ಲಿ ಎಷ್ಟು ಎಕರೆ ನೀರಾವರಿ ಮಾಡಬೇಕೆಂಬ ಅಂದಾಜಿಕೊಟ್ಟೇ ಅದರಲ್ಲಿ ಶೇಕಡ 72ರಷ್ಟು ಆಗಿದೆ, ಬೇರೆ ದೇಶಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ಆಗಿದೆ ಎಂದು ಶ್ರೀ ಕೆ. ಎಲ್. ರಾವ್‌ರವರು ತಮ್ಮ ಅಭಿಪ್ರಾಯ ವ್ಯಕ್ತಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅಂದಮೇಲೆ ನಾವುಮಾಡಿರುವುದು ಬಹಳ ಜಾಸ್ತಿ, ನಮ್ಮ ದೇಶದಲ್ಲಿ ನೀರಾವರಿ ಬಹಳ ಜಾಸ್ತಿಯಾಗಿದೆ ಎಂದು ಅರ್ಥವಲ್ಲ. ಆದರೆ ಹಾಗೆ ಹೇಳುವಾಗ ಮೈಸೂರು ದೇಶವನ್ನು ಇತರ ರಾಜ್ಯಗಳೊಡನೆ ಹೋಲಿಕೆಮಾಡಿದರೆ ನಮ್ಮ ದೇಶದಲ್ಲಿ ಅಷ್ಟೇನೂ ಇತರ ದೇಶಗಳಷ್ಟು ಹೆಚ್ಚಿಗೆ ಆಗಿರುವುದಿಲ್ಲ, ಆದುದರಿಂದ ನಮಗೆ ಹೆಚ್ಚಿನ ಸಹಾಯ ಮಾಡುವ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ ಎಂದು ಒತ್ತಿ ಹೇಳುವುದಕ್ಕೆ ನೈತಿಕ ಬೆಂಬಲವಿದೆ ಎಂದು ನಾನು ತಿಳಿದಿದ್ದೇನೆ. ಇವೊತ್ತಿನ ದಿವಸ ವಿದ್ಯುಚ್ಛಕ್ತಿ ತಯಾರು ಮಾಡತಕ್ಕ ಪ್ರಾಜೆಕ್ಟುಗಳ ಕಡೆಗೆ ಗಮನಕೊಡಬೇಕು. ಇದರ ಬಗ್ಗೆ ನೀರು ಸಿಕ್ಕುವುದೇ ಸಂಶಯವಾಗಿದೆ, ಹೊಗೇನಕಲ್ ಪ್ರಾಜೆಕ್ಟು ತೆಗೆದುಕೊಂಡರೆ ಇವೊತ್ತಿನ ದಿವಸ ಅದರಲ್ಲಿ ಹೋಗುತ್ತಿರುವ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಈ ರಾಜ್ಯ ಸರಕಾರ ಮತ್ತು ಮದರಾಸು ಸರಕಾರ ಇಬ್ಬರೂ ಸೇರಿಕೊಂಡು ಇದನ್ನು ಯೋಜನೆ ಮಾಡಿ ತೆಗೆದುಕೊಂಡರೆ ಇದರಿಂದ ಬರುವ ಪವರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಬರುವ ನೀರನ್ನು ನೀರಾವರಿಗಾಗಿ ಉಪಯೋಗಿಸಿಕೊಳ್ಳಲು ಯಾರ ಅಭ್ಯಂತರವೂ ಇಲ್ಲ. ಇದರಿಂದ ಮದರಾಸು ಸರ್ಕಾರಕ್ಕೆ ಅನುಕೂಲವಾಗುತ್ತದೆ ನಮ್ಮ ರಿವರು ಪ್ರಾಜೆಕ್ಟುಗಳಿಗೆ ದಕ್ಕೆ ಬರುತ್ತದೆ ಎನ್ನುವ ವಾದದಲ್ಲಿ ಅಷ್ಟೊಂದು ನಿಜಾಂಶವಿದೆ ಎನ್ನುವುದು ಕಂಡುಬರುವುದಿಲ್ಲ. ಹೊಗೇನಕಲ್ ಯೋಜನೆಯನ್ನು ಮಾಡಿದರೆ ಇದರಿಂದ ಬರುವ ಪವರು ಸುಮಾರು 10 ಲಕ್ಷ ಕಿಲೋವಾಟುಗಳಷ್ಟು ಬರುತ್ತದೆ. ಇದನ್ನು ಮೈಸೂರಿಗೆ ಸಂಬಂಧಪಟ್ಟ 1924ನೇ ಇಸವಿಯ ಒಪ್ಪಂದದ ಮೇಲೆ ಮೊದಲನೇ ಯೋಜನೆಯಲ್ಲಿ ಸೇರಿಸಬಹುದಾಗಿತ್ತು. 1952 ರಿಂದೀಚೆಗೆ ಈ ಯೋಜನೆಯ ಪ್ರಸ್ತಾಪ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇಷ್ಟೊಂದು ನೀರನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಮದರಾಸು ಸರಕಾರದವರು ಇಲ್ಲಿಯವರೆಗೆ ಉಪಯೋಗಿಸಿಕೊಳ್ಳದೇ ನಮಗೆ ಕಾವೇರಿ ಬೇಸಿನ್‌ನಲ್ಲಿ ಸಿಕ್ಕಬೇಕಾದ 110 ಸಾವಿರದಷಲಕ್ಷ ಘನ ಅಡಿಗಳಷ್ಟು ನೀರು ಬೇಕಾಗಿರುವಾಗ ಹೊಗೇನಕಲ್ ಯೋಜನೆ ತೆಗೆದುಕೊಳ್ಳುವುದು ಒಳ್ಳೆಯ ಬುದ್ಧಿವಂತಿಕೆಯ ಲಕ್ಷಣವೇ ಎಂದು ನಾನಾದರೂ ಇಲ್ಲಿ ಕೇಳಬೇಕಾಗಿದೆ. ಎರಡು ರಾಜ್ಯಗಳಿಗೂ ಇದು ಸಂಬಂದಪಟ್ಟಿರುವುದರಿಂದ ಕೇಂದ್ರ ಸರಕಾರದವರು ಮಾಡಿಸಿಕೊಟ್ಟರೆ ಇದರಿಂದ ಹೆಚ್ಚಿನ ಸೌಲಭ್ಯಗಳು ಕಲ್ಪಿಸುವುದಕ್ಕೆ ಅವಕಾಶವಾಗುತ್ತದೆ. ಮದರಾಸು ಹಾಗೂ ಮೈಸೂರು ರಾಜ್ಯದವರೂ ಸೇರಿ ಕೇಂದ್ರ ಸರಕಾರಕ್ಕೆ ಪ್ರಾರ್ಥನೆಮಾಡಿ ಈ ಪ್ರಾಜೆಕ್ಟ್ ಬಗ್ಗೆ ಒಂದು ನಿಶ್ಚಿತತೆ ಬರುವರೀತಿಯಲ್ಲಿ ಕೆಲಸ ಮಾಡುತ್ತಿರುವಂತೆ ನನಗೆ ತೋರುತ್ತಿಲ್ಲ. 14 ಲಕ್ಷ ಎಕರೆಗಳಿಗೆ ನೀರನ್ನು ಕೊಡುವುದಕ್ಕಾಗಿ ಇದರಲ್ಲಿ 110 ಟಿ.ಎಂ.ಸಿ. ನೀರನ್ನುಪಯೋಗಿಸಿಕೊಳ್ಳುವ ಅವಕಾಶ ಇದೆ ಎಂದರೂ ಇದರ ಭವಿಷ್ಯ ಯಾವ ರೀತಿಯಾಗುತ್ತೋ ನಾನು ಹೇಳುವಂತಿಲ್ಲ. ಯಾವ ತರಹದ ಅಡ್ಡಿ ಜನತೆಯಿಂದ ಬರುವುದಿಲ್ಲ ಎಂದು ನನ್ನ ಒಂದು ಅಭಿಪ್ರಾಯವೂ ಇದೆ. ಅಲ್ಲದೆ ಇನ್ನೂ ಕೆಲವರ ವಾದ ಏನಿದೆ ಎಂದರೆ, ಎಲ್ಲ ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಹೊರಟರೆ ಮುಂದೆ ಅಪ್ಪರ್ ತಂಜಾವೂರಿನಲ್ಲಿ 1924 ರಲ್ಲಿ ಆದ ಅಗ್ರೀಮೆಂಟಿನಂತೆ ಅದಕ್ಕೆ ಚ್ಯುತಿ ಬರುತ್ತದೆ ಎಂದು.

(ಶ್ರೀ ಜಿ. ವಿ. ಗೌಡ)

ಇಷ್ಟೊಂದು ನೀರನ್ನೂ ಶೇಖರಣೆ ಮಾಡುವುದಕ್ಕೆ ಸರಕಾರ ಹೋಗುವುದಿಲ್ಲ ಎನ್ನುವ ವಾದವನ್ನೂ ಕೇಳಿದ್ದೇನೆ. ಆದರೆ 1974ನೇ ವರ್ಷವಾದಮೇಲೆ ಏನು ವ್ಯವಸ್ಥೆಯಾಗುತ್ತದೋ ಅದನ್ನು ಈಗಲೇ ಅರ್ಥಮಾಡಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. 1974ನೇ ಇಸವಿಯಲ್ಲಿ ಒಪ್ಪಂದದ ಪ್ರಕಾರ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅಷ್ಟನ್ನೂ ಶೇಖರಣೆ ಮಾಡಿಕೊಂಡು ಲೀನ್ ಮಂತ್ಸ್‌ಗಳಲ್ಲಿ ಅದರ ವಾಟರನ್ನು ರಿಲೀಸು ಮಾಡಬೇಕೆನ್ನುವ ವಾದದಲ್ಲಿ ಅರ್ಥವಿಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ನಮ್ಮ ಸರಕಾರ ಈಗ ಹಾರಂಗಿ ಯೋಜನೆ ಬಗ್ಗೆ ಮಾಡಬೇಕೆಂದು ಇರುವ ಹಾರಂಗಿ ನದಿ ನಾನ್‌ಷೆಡ್ಯೂಲ್ಡ್ ರಿವರು. ಹಾರಂಗಿ ನದಿಯ ಯೋಜನೆಯಂತೆ ನಮಗೆ ನಿಖರವಾಗಿ ಸಿಕ್ಕುವ ನೀರಿನ ಅಂಶವೆಷ್ಟು ಎನ್ನುವ ಅಂಶ ಈಗ ನಮ್ಮ ಮುಂದೆ ಇಲ್ಲ. ಹಾಗೂ ಈ ಹಾರಂಗಿ ನದಿಯಿಂದ ನೀರನ್ನು ಶೇಖರಣೆ ಮಾಡಿದರೂ ಅದರಿಂದ ಸುಮಾರು 13 ಟಿ.ಎಂ.ಸಿ. ಯಷ್ಟು ಶೇಖರಣೆ ಮಾಡಲು ಸಾಧ್ಯ ಎಂದು ಕೆಲವರು ಹೇಳುತ್ತಾರೆ. ಈಗಿರುವ ಯೋಜನೆಯಂತೆ ಮಾಡಿದರೆ ಸುಮಾರು ನಾಲ್ಕೂವರೆ ಟಿ.ಎಂ.ಸಿ. ಯಷ್ಟು ನೀರು ಶೇಖರಣೆ ಮಾಡಲು ಸಿಗಬಹುದು ಎಂದು ಇದ್ದರೂ ಇದರಿಂದ ಸುಮಾರು 10-12 ಟಿ.ಎಂ.ಸಿ. ಯಷ್ಟು ನೀರು ನಿಲ್ಲಲು ಅವಕಾಶವಿರುವಾಗ ನಾಲ್ಕೂವರೆಯಷ್ಟು ಟಿ.ಎಂ.ಸಿ.ಗಾಗಿ ಎಂದು ಏಕೆ ನಿಲ್ಲಿಸಬೇಕು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇದು ನಾನ್ ಷೆಡ್ಯೂಲ್ಡ್ ರಿವರ್, ಹಾರಂಗಿ ನದಿಯ ನೀರಿನ ಪ್ರಮಾಣ ಇತರ ನದಿಗಳಂತೆ ಹೊಂದಿಕೊಂಡಿಲ್ಲ. ಇಷ್ಟೊಂದು ಹಾರಂಗಿ ನದಿಯಲ್ಲಿ ನೀರಿನ ಪ್ರಮಾಣ ಬರುವ ಹಾಗಿದ್ದರೆ ಮತ್ತು ಅದನ್ನು ಶೇಖರಣೆ ಮಾಡಲು ಸಾಧ್ಯವಾಗಿದ್ದರೆ ಅದನ್ನು ಮಾಡಿಕೊಳ್ಳುವುದು ಬುದ್ಧಿವಂತರ ಲಕ್ಷಣ. ಇದರಿಂದ ಏನೋ ಒಂದು ದೊಡ್ಡ ಅನಾಹುತವಾಗುತ್ತದೆ ಎಂದು ಸುಮಾರು 4·5 ಸಾವಿರ ಘನ ಅಡಿಗಳಷ್ಟು ಎನ್ನುವ ರೀತಿ ಸರಿಯಾದುದು ಎಂದು ಹೇಳುವುದು ಸರಿಯಾದ ಅಭಿಪ್ರಾಯ ಎಂದು ನನಗನಿಸುತ್ತದೆ. 12 ಟಿ.ಎಂ.ಸಿ. ಫೀಟು ನೀರನ್ನು ಶೇಖರಣೆ ಮಾಡಿದರೆ ಎಷ್ಟು ಜಮೀನನ್ನು ನೀರಾವರಿಗೆ ತರಬಹುದು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು, ಇದರಂತೆ ಕಾವೇರಿ ನೀರಿನ ಪ್ರಮಾಣವಾಗಲೀ ಅಥವಾ ಇನ್ನೊಂದು ಹಾರಂಗಿ ಅಥವಾ ಕಂಬದಕಡದ ಯೋಜನೆಯೇ ಆಗಲೀ ಅದಕ್ಕೆ ಯಾವ ರೀತಿಯಾದ ಯೋಜನೆಯನ್ನು ತಯಾರುಮಾಡಿ ಪ್ಲಾನಿಂಗು ಕಮಿಷನ್ನಿನವರಿಗೆ ತಾತ್ಕಾಲಿಕವಾಗಿ ಕೊಟ್ಟಿದ್ದಾರೋ ಅದರಂತೆ ಕಾವೇರಿ ನದಿಯಿಂದ ಎಷ್ಟು ನೀರು ಶೇಖರಣೆ ಮಾಡಬಹುದ ಎನ್ನುವ ಒಂದು ಯೋಜನೆಯನ್ನೂ ತಯಾರಿಸಲು ಪ್ರಯತ್ನ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಿಚ್ಛಿಸುತ್ತೇನೆ. ವಿದ್ಯುಚ್ಛಕ್ತಿ ಪ್ರಾಜೆಕ್ಟುಗಳು ಎಂದರೆ ಹೈಡಲ್‌ಪವರು ಪ್ರಾಜೆಕ್ಟುಗಳು ಎಂದು ನಮ್ಮ ಮೈಸೂರು ದೇಶದಲ್ಲಿ ಮಾಡಬೇಕೆಂದು ವಿಚಾರವಿತ್ತು. ಬಿಜಾಪುರ ಎಲೆಕ್ಟ್ರಿಫಿಕೇಷನ್ನು ಸ್ಕೀಮು, ಶರಾವತಿ, ಮೇಕೆದಾಟು ಹೀಗೆ ಬೇಕಾದಷ್ಟು ಇದೆ. ಕಾವೇರಿ ನೀರನ್ನುಪಯೋಗಿಸಿಕೊಳ್ಳುವ ಈ ಸಂದರ್ಭದಲ್ಲಿ ಇವೆಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಹಣಕಾಸಿನ ದೃಷ್ಟಿಯನ್ನು ನಾವೆಲ್ಲರೂ ನೋಡುತ್ತೇವೆ. ಕಾಳಿ ನದಿ ಯೋಜನೆಗಾಗಿ ಸುಮಾರು ಒಂದು ನೂರು ಕೋಟಿಯಷ್ಟು ಅಂದಾಜು ಇತ್ತು ಮತ್ತು ಇದರಿಂದ ಸುಮಾರು ಹತ್ತು ಲಕ್ಷ ಕಿಲೋ ವಾಟುಗಳಷ್ಟು ಪವರನ್ನು ಪಡೆಯುವುದಕ್ಕೆ ಸಾಧ್ಯ ಎಂದು ಇದೆ. ಇದೇರೀತಿ ಶರಾವತಿ ಯೋಜನೆಯಿಂದಲೂ ಹೆಚ್ಚು ಪವರನ್ನು ಪಡೆಯುವುದಕ್ಕೆ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ ಈಗ ಇದಕ್ಕೆ ಒಂದು ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾದ ಸಂದರ್ಭ ಬಂದಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ ಮೇಕೆದಾಟಿನಿಂದ ವಿದ್ಯುಚ್ಛಕ್ತಿಯನ್ನು ನಾವು ತೆಗೆದುಕೊಳ್ಳಬೇಕಾದರೆ ಮೂರು ಹಾಗೂ ನಾಲ್ಕನೇ ಯೋಜನೆಯಲ್ಲಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಕಾವೇರಿ ನದಿ ನೀರಿನ ಬಳಕೆಯಲ್ಲೂ ನಾವು ನ್ಯಾಯವಾಗಿ ಗಮನ ಕೊಡಬೇಕಾಗಿದೆ. ಅಲ್ಲದೆ, ಈ ಕಾವೇರಿ ನದಿಯ ದಂಡೆಯ ಮೇಲೆ ಇನ್ನೂ 18 ಪ್ರಾಜೆಕ್ಟುಗಳನ್ನು ಕಟ್ಟುವುದಕ್ಕೆ ಅವಕಾಶವಿದೆ. ಇವೆಲ್ಲವನ್ನೂ 1974ನೇ ಇಸವಿಯೊಳಗೇ ಮಾಡಲಿಕ್ಕೆ ಸಾಧ್ಯವಿದೆಯೋ ಎನ್ನತಕ್ಕ ವಿಚಾರವನ್ನೂ ಸರಕಾರ ಮನಗಾಣಬೇಕು. ಒಂದು ವೇಳೆ ನಾನಾ ನ್ಯೂನತೆಗಳಿಂದಾಗಿ ಇದು ಸಾಧ್ಯವಾಗದೇ ಇದ್ದರೆ ಸುಮಾರು 50 ಕೋಟಿಯಷ್ಟು ಸಹಾಯವನ್ನು ಪಡೆಯಲು ಹೇಗೆ ಸಾಧ್ಯ ಎನ್ನುವುದನ್ನೂ ಯೋಚನೆ ಮಾಡಬೇಕು. ಈ ವಿಚಾರದಲ್ಲಿ ಪ್ಲಾನಿಂಗು ಕಮಿಷನ್ನಿನವರು ತಮ್ಮ ಗಮನವನ್ನು ಇದಕ್ಕೆ ಹರಿಸಬೇಕಾದುದು ಅನಿವಾರ್ಯವೆಂದು ಈ ಸಂದರ್ಭದಲ್ಲಿ ತಿಳಿಸಬೇಕು. 55 ವರ್ಷಗಳ ಒಂದು ಒಪ್ಪಂದ 1974ನೇ ಇಸವಿಯಲ್ಲಿ ಪೂರ್ತಿಯಾಗುವುದರಿಂದ ಆಗ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಅದರ ಬಗ್ಗೆ ಬರುವ ವಾದ ವಿವಾದಗಳನ್ನು ಸರಕಾರ ಎದುರಿಸಬೇಕಾಗುತ್ತದೆ. ಅಂತಹ ನ್ಯೂನತೆಗಳೇನೂ ಇವೊತ್ತಿನ ಪರಿಸ್ಥಿತಿಯಲ್ಲಿಲ್ಲ. ಅಷ್ಟೊಂದು ಪರಿಸ್ಥಿತಿ ಹದಗೆಟ್ಟು ಅಷ್ಟೊಂದು

ಸಮಸ್ಯೆಗಳನ್ನೂ ಈಡೇರಿಸಬೇಕಾದರೆ ಸರಕಾರಕ್ಕೆ ನಾನಾ ರೀತಿಯ ಖರ್ಚುಗಳನ್ನು ಕೊಡಬೇಕಾದ ಪರಿಸ್ಥಿತಿ ಬರಬಹುದು. ನೀರನ್ನುಪಯೋಗಿಸಿಕೊಳ್ಳುವುದಕ್ಕೆ 1924ರಲ್ಲಿ ಇಂತಹ ಸಂದರ್ಭಗಳು ಇರಲಿಲ್ಲ. ಆದುದರಿಂದ ಇದನ್ನು ಮುಂದುವರಿಸುವುದಕ್ಕೆ ಯಾವರೀತಿಯಾದ ಅವಕಾಶವಿದೆಯೆನ್ನುವುದನ್ನು ತಿಳಿಯತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕು. 1974ರಲ್ಲಿ ಎಂದರೆ ಇನ್ನೂ ಹತ್ತು ವರ್ಷಗಳಲ್ಲಿ ಯಾವ ರೀತಿ ಇರುತ್ತದೆ ಎನ್ನುವುದನ್ನು ಈಗಿನಿಂದಲೇ ಊಹೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದರೂ ಇದನ್ನು ಸಾಧ್ಯವಾಗುವುದಾಗಿದ್ದರೆ ಪರಿಶೀಲನೆ ಮಾಡುವುದು ಆಗತ್ಯ ಎಂದು ನಾನು ತಿಳಿಸುತ್ತೇನ. ಒಂದು ವೇಳೆ 1974 ರೊಳಗಾಗಿ ಏನೊಂದು ಖರ್ಚಾಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ಈಗಿನಿಂದಲೇ ಹೇಳಲು ಸಾಧ್ಯವಿಲ್ಲ. ಹತ್ತು ವರ್ಷಗಳ ಒಪ್ಪಂದದಂತೆ ಈಗಿನಿಂದಲೇ ಊಹೆ ಮಾಡುವುದಕ್ಕೆ ಪ್ರಯತ್ನ ಮಾಡಬಾರದು ಎನ್ನುವ ವಿಚಾರವನ್ನು ಸರಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕು. ಮತ್ತು ಏನೊಂದು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚಿಸುವುದಕ್ಕೆ ' ಇಟೀಸ್ ನಾಟ್ ಯಟ್ ರೆಡಿ ಆನ್ ಹ್ಯಾಂಡ್ ',

ಇವ್ರೊತ್ತಿನಿಂದ ಊಹೆ ಮಾಡಲಿಕ್ಕೆ ಪರಿಸ್ಥಿತಿಯನ್ನು ಎಲ್ಲ ಜನರಲ್ಲಿಯೂ ವಿವರಿಸಬೇಕು ಮತ್ತು ಈ ಸಂದರ್ಭದಲ್ಲಿ ಆಗಿರುವ ಒಪ್ಪಂದವನ್ನು ಮುಂದುವರಿಸಲು ಸಾಧ್ಯವಿದ್ದರೆ ಇನ್ನೂ 60 ವರ್ಷಗಳವರೆಗೆ ಮುಂದೆ ಹಾಕಬಹುದು. ಜನರಲ್ಲಿ ಏತಕ್ಕಾಗಿ ಈಗಿರುವ ಒಪ್ಪಂದವನ್ನು ಮುಂದುವರಿಸಬೇಕು ಎನ್ನುವುದರ ಬಗ್ಗೆ ಸರಕಾರ ಜನತೆಗೆ ಅರಿವು ಉಂಟುಮಾಡಿ ಕೊಡಬೇಕು. ಮತ್ತು ಸರಕಾರ ಇದರ ಪೂರ್ಣ ವಿವರಗಳನ್ನು ಪಡೆಯಲು ತಿಳಿಯಬೇಕು ಮತ್ತು ಅದನ್ನು ಪರಿಶೀಲಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ,

2-30 P.M.

ಇದನ್ನು ಪರಿಶೀಲನೆಮಾಡಬೇಕೆಂದು ನಾನು ತಿಳಿಸುತ್ತಿದ್ದೇನೆ. ಕಾವೇರಿ ನದಿಗೆ ಬಂದು ಸೇರತಕ್ಕ ಉಪನದಿಗಳಲ್ಲಿ ಅನೇಕ ನಾನ್-ಷೆಡ್ಯೂಲ್ಡ್ ನದಿಗಳೂ ಇರುತ್ತವೆ. ಆದರೆ ಅವುಗಳಲ್ಲಿ ಬರತಕ ನೀರಿನ ಲೆಕ್ಕವನ್ನೂ ಸೇರಿಸಿಕೊಂಡು 1924ರ ಒಪ್ಪಂದವಾಗಿದೆಯೇ ಎಂಬ ವಿಚಾರ ಈಗ ನಮ್ಮ ಮುಂದಿಲ್ಲ. ನಾನ್-ಷೆಡ್ಯೂಲ್ಡ್ ರಿವರ್‌ಗಳ ಕೆಳಗೆ ನಾವು ಯಾವಾಗ ಬೇಕಾದರೂ ನೀರಾವರಿ ಯೋಜನೆಗಳನ್ನು ಕೈಗೊಳ್ಳಬಹುದೆಂದು ಮಾನ್ಯ ವೀರೇಂದ್ರ ಪಾಟೀಲರು ಹೇಳಿದರು. ನಾನ್ ಷೆಡ್ಯೂಲ್ಡ್ ರಿವರ್‌ಗಳಲ್ಲಿಯೂ ಇಂತಿಷ್ಟೇ ನೀರು ಇರುತ್ತದೆಂದು ಒಂದು ಪ್ರಮಾಣವನ್ನು ನಿಶ್ಚಯಿಸಿರುತ್ತಾರೆ. ಆದರೆ ಈ ವಿಚಾರದಲ್ಲಿ ವಾಸ್ತವಿಕತೆಯೇನೆಂಬುದನ್ನು ಸರ್ಕಾರ ನಮ್ಮ ಮುಂದಿಟ್ಟಿಲ್ಲ. ನಾಳೊಂದು ವೇಳೆ ಅ ಮದ್ರಾಸ್ ಸರ್ಕಾರದವರು ಆ ನಾನ್ ಷೆಡ್ಯೂಲ್ಡ್ ನದಿಗಳ ನೀರೂ ಇದರಲ್ಲಿ ಸೇರಿರುತ್ತೆಂದು ವಾದಕ್ಕೆ ಪ್ರಾರಂಭಮಾಡಿದರೆ ನಾಳೆ ನಾವು ಈ ನಾನ್ ಷೆಡ್ಯೂಲ್ಡ್ ನದಿಗಳ ಕೆಳಗೂ ಯಾವ ಒಂದು ಪ್ರಾಜೆಕ್ಟನ್ನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಈ ವಿಚಾರವನ್ನು 1974ಕ್ಕೆ ಮುಂಚಿತವಾಗಿಯೇ ಕ್ಲಾರಿಫೈ ಮಾಡಿಕೊಳ್ಳುವುದು ಒಂದು ಬುದ್ಧಿವಂತಿಕೆಯ ಲಕ್ಷಣ. ನಾಳೆಯ ದಿವಸ ಅವರು ಈ ನಾನ್-ಷೆಡ್ಯೂಲ್ಡ್ ನದಿಗಳ ನೀರನ್ನೆಲ್ಲಾ ಲೆಕ್ಕ ಹಾಕಿಕೊಂಡೇ ಅಷ್ಟಾಗುತ್ತದೆ ಎಂದರೆ ಅಗ ನಾವೇನು ಮಾಡುವುದು ? ಆದುದರಿಂದ ಈ ದಿವಸ ನಮಗೆ ಕಾವೇರಿ ನೀರಿನಲ್ಲಿ ಇಷ್ಟೇ ಪ್ರಮಾಣ ನೀರು ಸೇರಿದೆ ಎಂಬುದು ಖಚಿತವಾಗಿದ್ದಂತೆ ಕಾಣುತ್ತಿಲ್ಲ. ಏಕೆಂದರೆ ಈ ನಾನ್ ಷೆಡ್ಯೂಲ್ಡ್ ನದಿಗಳ ನೀರು ಸೇರಿದರೇ ಒಂದು ಲೆಕ್ಕವಾಗುತ್ತದೆ, ಇವುಗಳನ್ನು ಕೈಬಿಟ್ಟಿದ್ದರೇ ಒಂದು ಲೆಕ್ಕವಾಗುತ್ತದೆ, ಆದರೆ ಸರ್ಕಾರದವರು ಈ ವಿವರಗಳನ್ನು ಈಗ ನಮ್ಮ ಮುಂದೆ ಇಟ್ಟಿಲ್ಲ. ಆ ಒಂದು ದೃಷ್ಟಿಯಿಂದ ಹೇಳುವುದಾದರೆ ನಾವು 1974 ರ ನಂತರವೂ ಯಾವಾಗ ಬೇಕಾದರೆ ಆಗ ಈ ನಾನ್-ಷೆಡ್ಯೂಲ್ಡ್ ನದಿಗಳ ನೀರನ್ನು ಬಳಸಬಹುದೆಂದು ಹೇಳಿರತಕ್ಕ ವಾದವೇನಿದೆ, ಅದರಲ್ಲಿ ತಿರುಳಿಲ್ಲವೆಂದು ನನಗನ್ನಿಸುತ್ತಿದೆ. ಆದುದರಿಂದ ನಮ್ಮ ಸರ್ಕಾರ ಈ ವಾದಗಳನ್ನು ಮಾಡುವುದಕ್ಕೆ ಹೋಗದೆ ಸುಮ್ಮನೆ ಈ ನಾನ್-ಷೆಡ್ಯೂಲ್ಡ್ ನದಿಗಳ ನೀರನ್ನು ಬಳಸಲು ತಕ್ಷಣವೇ ಕಾರ್ಯಕ್ರಮಕೈಗೊಳ್ಳುವುದು ಉಚಿತವಾದುದೆಂದು ನಾನು ಸಲಹೆಮಾಡುತ್ತೇನೆ. ನಮ್ಮ ಪ್ರಾಂತ ಈ ಹಿಂದೆ ಮದ್ರಾಸ್ ಸರ್ಕಾರದಲ್ಲಿದ್ದಾಗ ಅವರು ಇಷ್ಟನ್ನೆಲ್ಲಾ ಊಹಿಸುವುದಕ್ಕೂ ಕೂಡ ಸಾಧ್ಯವಾಗಿರಲಿಲ್ಲ. ಆ ಸರ್ಕಾರದವರು ಇಸ್ಟೊಂದು ನೀರಿಗೂ ಕಣ್ಣನ್ನು ಹಾಕಿರಲಿಲ್ಲ. ಆದುದರಿಂದ ನಾವೀಗ ಕೂಡಲೇ ಕೆಲವಾರು ಪ್ರಾಜೆಕ್ಟ್‌ಗಳನ್ನು ಕೈಗೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ. ಇಲ್ಲವಾದರೆ ನಮಗೆ ತುಂಬಾ ಅನ್ಯಾಯವಾಗಬಹುದು. ನಮ್ಮ ರಾಜ್ಯ, ರಾಜ್ಯಗಳಲ್ಲ ಇಂಬ್ಯಾಲೆನ್ಸ್ ಬಹಳ ಜಾಸ್ತಿಯಾಗಿದೆ. ಈ ದಿವಸ ಈ ಕಾವೇರಿ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ನಮಗೆಲ್ಲಾ ಸುಮಾರು 4–5 ಕೋಟಿ ರೂಪಾಯಿಗಳಾದರೆ ಸಾಕಾಗಬಹುದು. ಅಂದರೆ ಕಾವೇರಿಗೆ ಸೇರತಕ್ಕ ನಾನ್-ಷೆಡ್ಯೂಲ್ಡ್ ನದಿಗಳ ನೀರಿನ ಬಗ್ಗೆ ನಾನೀಗ ಹೇಳುತ್ತಿದ್ದೇನೆ. ಅಥವಾ ಸ್ವಲ್ಪ ಹಣ ಜಾಸ್ತಿಬಿದ್ದರೂ ಬೀಳಬಹುದು ಏನೇ ಆಗಲಿ ಸರ್ಕಾರದವರು ಈ ವಿಚಾರದಲ್ಲಿ ನಿಧಾನ

(ಶ್ರೀ ಜಿ. ವಿ. ಗೌಡ)

ಮಾಡಬಾರದು. ಇಲ್ಲಿಯವರೆಗೂ ನಾವು ಆ ಕೇಂದ್ರದವರು ಕೊಡುತ್ತಿದ್ದ ಧನ ಸಹಾಯವೇನಿದೆ ಅದನ್ನು ನಾವು ಅಷ್ಟೇ ಸಾಕೆಂದು ಲೀಲಾಜಾಲವಾಗಿ ಕುಳಿತುಕೊಳ್ಳಲು ಇನ್ನು ಸಾಧ್ಯವಿಲ್ಲ. ನಾವು ಅವರು ನಮಗೆ ಕೊಡುತ್ತಿರುವ ಹಣ ಏತಕ್ಕೂ ಸಾಲದು ಅದರಿಂದಲೇ ರೀಜನಲ್ ಇಂಬ್ಯಾಲೆನ್ಸ್ ಜಾಸ್ತಿಯಾಗಿದೆ ಎಂದು ಹೇಳಿ ಒಂದು ಉತ್ತಮ ಕೇಸನ್ನು ತಯಾರುಮಾಡಿ ಅವರಿಂದ ಹೆಚ್ಚಿಗೆ ಹಣ ಬರುವುದಕ್ಕೆ ನಮ್ಮ ಸರ್ಕಾರ ಸರ್ವ ಪ್ರಯತ್ನಗಳನ್ನೂ ನಡೆಸಬೇಕೆಂದು ಹೇಳುತ್ತೇನೆ. ಇನ್ನೂ ಎಲ್ಲಿಯೋ ಒಂದು ಕಡೆ ಪತ್ರಿಕೆಯಲ್ಲಿ ಪ್ಲಾನಿಂಗ್ ಕಮಿಷನ್ನಿನವರಿಗೆ ನಮ್ಮ ಮೈಸೂರಿನಲ್ಲಿ ವಿಶೇಷ ವಾಗಿ ಹಣವಿರುವಂತೆ ತಿಳಿದು ಬಂದಿದೆ ಎಂಬ ಧಾಟಿಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದಂತೆ ನಾನು ನೋಡಿದ ಜ್ಞಾಪಕವಿದೆ. ಆದರೆ ಅದು ಸರಿಯೋ ತಪ್ಪೋ ಗೊತ್ತಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರ ಗಮನಕ್ಕೆ ಈ ವಿಚಾರವನ್ನೂ ತಂದು ನಮ್ಮ ರಾಜ್ಯದ ನಿಜಚಿತ್ರವನ್ನು ಶ್ರೀಮಾನ್ ಪತ್ತಿಯವರು ಅವರ ಮುಂದಿಟ್ಟು ಅವರನ್ನು ಕನ್‌ವಿನ್ಸ್‌ಮಾಡಿ ನಮಗೆ ನ್ಯಾಯವಾಗಿ ಸಲ್ಲಬೇಕಾದ ದ್ರವ್ಯ ಸಹಾಯವನ್ನು ಪಡೆದುಕೊಳ್ಳಲು ಎಲ್ಲಾ ರೀತಿ ಯಿಂದಲೂ ಪ್ರಯತ್ನ ಮಾಡಬೇಕು. ಇಂಥ ಒಂದು ನೀತಿಯನ್ನು ಕೇಂದ್ರ ಸರ್ಕಾರ ಮತ್ತು ಪ್ಲಾನಿಂಗ್ ಕಮಿಷನ್ನಿನವರು ಪಾಲಿಸದೇ ಇರುವುದರಿಂದ ಈ ದಿವಸ ರಾಜ್ಯ ರಾಜ್ಯಗಳ ಏಳಿಗೆಯಲ್ಲಿ ಇಂಬ್ಯಾಲೆನ್ಸ್ ವಿಪರೀತವಾಗಿದೆ. ಅವರು ನಮಗೆ ಮೊದಲನೆಯ ಪ್ಲಾನಿನಲ್ಲಿ ಕೊಟ್ಟಷ್ಟು ಹಣವನ್ನು ಎರಡನೇ ಪ್ಲಾನಿನಲ್ಲಿ ಕೊಡಲಿಲ್ಲ. ಎರಡನೇ ಪ್ಲಾನಿನಲ್ಲಿ ಕೊಟ್ಟ ಹಣಕ್ಕಿಂತಲೂ ಮೂರನೇ ಪ್ಲಾನಿನಲ್ಲಿ ಇನ್ನೂ ಕಡಮೆ ಮಾಡಿದ್ದಾರೆ. ಇನ್ನುಳಿದ ರಾಜ್ಯಗಳಿಗೆಲ್ಲಾ ಪ್ಲಾನಿನಿಂದ ಪ್ಲಾನಿಗೆ ಹಣದ ಸಹಾಯವನ್ನು ಏರಿಸಿಕೊಂಡು ಹೋಗಿದ್ದಾರೆ. ಹೀಗಾಗಿ ನಮಗೆ ಸರಿಯಾದ ಒಂದು ನ್ಯಾಯ ಕೇಂದ್ರದವರಿಂದ ದೊರೆಯುತ್ತಿಲ್ಲ. ಇನ್ನು ನಮ್ಮ ಮೂರನೇ ಪ್ಲಾನಿನಲ್ಲಿ ಈಗಾಗಲೇ ಮೂರು ವರ್ಷಗಳನ್ನು ಕಳೆದಿದ್ದೇವೆ. ನಮಗಿನ್ನು ಉಳಿದಿರತಕ್ಕದ್ದು ಕೇವಲ 2 ವರ್ಷಗಳು ಮಾತ್ರ. ಆದ್ದ ರಿಂದ ನಮಗೆ ಆ ಕೇಂದ್ರ ಸರ್ಕಾರದವರು ಇನ್ನು 10 ವರ್ಷಕಾಲ ವರ್ಷಂಪ್ರತಿ 25 ಕೋಟಿ ರೂಪಾಯಿಯಂತೆ ಕೊಟ್ಟರೆ ಅದಕ್ಕೆ ನಾವೂ ಕೂಡ ಸ್ವಲ್ಪ ಹಣವನ್ನು ಸೇರಿಸಿ ಈ ನದಿಯ ನೀರನ್ನೆಲ್ಲಾ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಬಹುದು. ಇಷ್ಟು ಹಣವನ್ನು ಕೇಂದ್ರದವರಿಂದ ಪಡೆಯಲು, ಇದರಲ್ಲಿ ಜಯಶಾಲಿಗಳಾಗಲು ದೇವರು ತಮಗೆ ಶಕ್ತಿಯನು ಕೊಡಲೆಂದು ಹಾರೈಸು ತ್ತೇನೆ. ಇನ್ನು ನಾನು ಈ ಮಾನ್ಯ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಇಷ್ಟ ಪಡದೆ, ನಮ್ಮ ಸರ್ಕಾರವೇನು ಇಲ್ಲಿಯುವರೆಗೆ ಒಂದು ಯೋಜನಾ ಕಾರ್ಯಕ್ರಮ ಹಾಕಿಕೊಂಡಿದೆಯೋ ಅದೇ ಬೇರೆ ವ್ಯವಹಾರವನ್ನಾಗಿಯೂ, ಈ ಕಾವೇರಿ ನೀರನ್ನು ಆ ವಾಯಿದೆ ಒಳಗೆ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳತಕ್ಕ ವ್ಯವಹಾರವನ್ನೇ ಒಂದು ಪ್ರತ್ಯೇಕವಾಗಿ ಪರಿಗಣಿಸಿ ಕಾರ್ಯವನ್ನು ಸಾಧಿಸಬೇಕಾಗಿದೆ. ಆದರೆ ಹಾಗೆ ಮಾಡದೆ ಇವರು ಈ ಯೋಜನೆಯ ಚೌಕಟ್ಟಿನಲ್ಲೇ ಈ ಹಾರಂಗಿ, ಕಂಬದಕಡ ಇತ್ಯಾದಿ ಯೋಜನೆಗಳನ್ನೆಲ್ಲಾ ಮಾಡುತ್ತೇವೆಂತಲೂ, ಯಗಚಿ ನದೀ ನೀರನ್ನು ಬೇರೆಕಡೆಗೆ ಡೈವರ್ಟ್ ಮಾಡುತ್ತೇವೆಂದು ಹೇಳುತ್ತಿದ್ದರೆ ಖಂಡಿತ ಕೆಲಸವಾಗುವುದಿಲ್ಲ. ಆದುದರಿಂದ ಇದಕ್ಕೇ ಒಂದು ಸ್ಪೆಸಿಫಿಕ್ ಸ್ಕೀಂ ಇರಬೇಕೆಂದು ಹೇಳಿ ಈ ಕಾರ್ಯಗಳನ್ನೆಲ್ಲಾ ಸುಗಮವಾಗಿ ಸಾಧಿಸತಕ್ಕ ಶಕ್ತಿಯನ್ನು ದೇವರು ತಮಗೆ ಕೊಡಲೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದಿರ ತಕ್ಕಂಥ ಖಾಸಗೀ ನಿರ್ಣಯದ ವಿಚಾರವಾಗಿ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಈ ಕಾವೇರಿ ನದಿಯ ನೀರನ್ನು ಪೂರ್ತಿಯಾಗಿ ಉಪಯೋಗಿಸಬೇಕು, ಅದರಿಂದ ಮೈಸೂರು ರಾಜ್ಯ ಪ್ರಯೋಜನ ಹೊಂದಬೇಕು ಎನ್ನುವ ವಿಚಾರದಲ್ಲಿ ಯಾವ ಅಭ್ಯಂತರವೂ ಇಲ್ಲ. ಮತ್ತು ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಇದನ್ನು ಯಾವ ರೀತಿ ಬಳಸಬೇಕು ಎನ್ನುವ ಬಗ್ಗೆ ಮಾತನಾ ಡುವ ಸಂದರ್ಭದಲ್ಲಿ ಕೆಲವರು ಇದು ಇದೇ ರೀತಿಯಲ್ಲಿ ಆಗಬೇಕೆಂಬ ದಾಟಿಯಲ್ಲಿ ಮಾತನಾಡುತ್ತಿ ದ್ದಾರೆ. ಅನೇಕ ಜನರು ಕಾವೇರಿ ನದಿಯಲ್ಲಿ ಕಟ್ಟತಕ್ಕ ಅಣೆಕಟ್ಟುಗಳ ವಿಚಾರವಾಗಿ ರಾಜಕೀಯ ಪ್ರವೇಶವಾಗಿದೆ. ಅದರಲ್ಲಿ ಅದಲು ಬದಲು ಆಗುತ್ತಿದೆ ಎಂದು ಹೇಳುತ್ತಿರುವುದನ್ನು ನೋಡಿದರ ಅವರೇ ತಜ್ಞರ ಸ್ಥಾನದಲ್ಲಿದ್ದಾಗ್ಗೆ ಮಾತನಾಡಿದಂತೆ ಕಾಣುತ್ತಿದೆ. ಇವತ್ತು ನಾವು ಕಟ್ಟೆಗಳ ವಿಚಾರದಲ್ಲಿ ರಾಜಕೀಯ ಸೇರಿದೆ ಎಂದು ವಾದದ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟು ಪೂರ್ಣ ವಾಗಿ ಈ ವಿಚಾರವನ್ನು ತಜ್ಞರಿಗೆ ಬಿಡಬೇಕು ಎಂದು ಹೇಳುವ ಕಾಲದಲ್ಲಿ ಈ ರೀತಿ ಭಾವನೆಯನ್ನು ನಾವು ಇಟ್ಟುಕೊಳ್ಳಬಾರದು. ಅದನ್ನು ಇಷ್ಟೇ ಕಾಲದಲ್ಲಿ ಕಟ್ಟುತ್ತೇವೆ, ಇಷ್ಟೇ ಎತ್ತರದಲ್ಲಿ ಅವು ಆಗಬೇಕು ಎಂಬ ಸಲಹೆಗಳನ್ನು ನಾವು ಕೊಡುತ್ತಾ ಬಂದರೆ ನಾವು ನಿಜವಾಗಿ ಒಂದು ತಪ್ಪು ದಾರಿಯನ್ನ ಹಿಡಿದಂತಾಗುತ್ತದೆ. ಈ ವಿಚಾರದಲ್ಲಿ ಯಾರೊಬ್ಬರ ರಾಜಕೀಯ ಪ್ರಭಾವ, ಅಥವಾ

ತಜ್ಞರಲ್ಲದವರ ಪ್ರಭಾವ ಖಂಡಿತವಾಗಿ ಇರಬಾರದು ಎಂಬುದಾಗಿ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇವತ್ತು ಕೆಲವು ಮಾನ್ಯ ಸದಸ್ಯರೇ ತಮ್ಮ ಒಂದು ಪ್ರಭಾವವನ್ನು ಬೀರುವ ಪ್ರಯತ್ನ ನಡೆಯುತ್ತಾ ಇದೆ. ಇವತ್ತು ಕಾವೇರಿ ನದಿಯ ನೀರನ್ನು ಉಪಯೋಗಿಸುವ ಪ್ರಯತ್ನದಲ್ಲಿ ಇದಕ್ಕಿಂತ ಮೊದಲು ಇದ್ದ ಸರ್ಕಾರ ಹಾರಂಗಿ, ಕಂಬದಕಡ, ಲಕ್ಷ್ಮಣತೀರ್ಥ ಕಟ್ಟೆಗಳನ್ನು ಕಟ್ಟಬೇಕೆಂದು ಒಂದು ನಿರ್ಣಯವನ್ನು ಕೈಗೊಂಡಿತ್ತು. ಈ ನಿರ್ಣಯ ನಿಜವಾಗಿ ತಜ್ಞರಿಂದ ಕೈಗೊಂಡ ನಿರ್ಣಯವೋ ಅಥವಾ ರಾಜಕೀಯ ಒತ್ತಡ ಅಥವಾ ಪ್ರಭಾವ ಇದರಲ್ಲಿ ಇತ್ತೋ ಏನೋ ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ ಅಂತಹ ಘಟನೆಯನ್ನು ಪುನರ್ಪರಿಶೀಲನೆಮಾಡುವ ಸ್ಥಿತಿಗೆ ಬಂದಿದೆ. ಕೆಲವರು ಇದರಲ್ಲಿ ಹಿಂದೆಯೇ ರಾಜಕೀಯ ಪ್ರಭಾವ ಇತ್ತೆಂದು ಹೇಳುತ್ತಿದ್ದಾರೆಯೇ ಹೊರತು ಮೊದಲು ಈ ಯೋಜನೆಗಳನ್ನು ತಯಾರು ಮಾಡಿದಂತಹ ಕಾಲದಲ್ಲಿ ನಿಜವಾಗಿ ಇದರಲ್ಲಿ ರಾಜಕೀಯ ಪ್ರಭಾವ ಇತ್ತೋ ಇರಲಿಲ್ಲವೋ ಎಂಬ ಪ್ರಶ್ನೆಯನ್ನು ನಾವು ಈಗ ವಿಚಾರಮಾಡಿ ನೋಡಬೇಕಾಗಿದೆ. ಆಗಲೇ ಈ ಬಗ್ಗೆ ರಾಜಕೀಯ ಪ್ರಭಾವ ಇದ್ದುದರಿಂದಲೇ ಈಗ ಅದನ್ನು ಪುನರ್ಪರಿಶೀಲನೆ ಮಾಡುವುದಾಗಿ ಬಂತು ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಮಂತ್ರಿಮಂಡಲ ಹೋದರೆ, ಇನ್ನೊಂದು ಮಂತ್ರಿಮಂಡಲ ಮಾಡುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ.—ಬೇರೆಯವರ ಮಕ್ಕಳನ್ನು ಬಾವಿಗೆ ಹಾಕುತ್ತಿದ್ದರೆ, ಅದನ್ನು ನೋಡುವುದು ಸುಲಭ ಆದರೆ ತಮ್ಮ ಮಕ್ಕಳನ್ನು ......

ಶ್ರೀ ಜಿ. ವಿ. ಗೌಡ.—ಅದನ್ನು ನೋಡುವುದೂ ಕೂಡ ಬಹಳ ಕಷ್ಟವಿದೆ. ಇಲಿ ಹೋಯಿತು ಅಂದರೆ ಹುಲಿ ಹೋಯಿತು ಎಂದು ಹೇಳುವ ಹಾಗೆ ಆಗುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ.—ಇವತ್ತು ಕೊಡಗಿನ ವಿಷಯದಲ್ಲಿ ಹೇಳುವುದಾದರೆ ಕಾವೇರಿ ನದಿಯ ನೀರನ್ನು ಉಪಯೋಗಿಸುವ ಕಾಲದಲ್ಲಿ 3 ಕಟ್ಟೆಗಳನ್ನು ನಮ್ಮಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ. ಅಥವಾ ಬೇರೆ ಕಟ್ಟೆಯನ್ನು ಕಟ್ಟುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಬೇಕು. ಇವತ್ತು ಆ ಮೂರು ಕಟ್ಟೆಗಳು ಮೊದಲು ಯಾವ ರೀತಿ ತಯಾರಾಗಿತ್ತೋ ಅದೇ ರೀತಿಯಲ್ಲಿ ಆಗಬೇಕು. ಅದನ್ನು ಬದಲಾವಣೆ ಮಾಡಬಾರದು. ಅಲ್ಲಿನ ಜನಗಳ ಕೂಗನ್ನು ಕೇಳಬಾರದು ಎಂದು ವಾದ ಮಾಡುವ ಜನಗಳು ಕೊಡಗು ಮೂಲೆಗೆ ಹೋದರೂ ಪರವಾ ಇಲ್ಲ, ಕಟ್ಟೆಗಳನ್ನಾದರೂ ಮಾಡಬೇಕು ಎಂದು ಇದ್ದಾರೆ. ಮೈಸೂರು ಹೆಸರನ್ನೇ ಬದಲಾಯಿಸಬೇಕೆಂದು ಹೊರಟಿರುವ ಜನ ಇಡೀ ಕೊಡಗೇ ಇದರಿಂದ ಮುಳುಗಡೆಯಾಗುತ್ತದೆಂದು ಹೇಳಿದರೆ ಆಗ ಕೊಡಗಿನವರು ಏನು ಮಾಡಬೇಕೆಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಖಂಡಿತವಾಗಿ ಅದಕ್ಕೆ ಅವಕಾಶ ಕೊಡಬಾರದು. ಕೊಡಗನ್ನೇ ಮುಳುಗಿಸಬೇಕೆಂಬ ಅಭಿಪ್ರಾಯವನ್ನು ಹಳೆಯ ಮೈಸೂರಿನ ಜನತೆ ಯಾವ ರೀತಿ ವಾದವನ್ನು ಮಾಡುತ್ತಾರೆಂಬುದನ್ನು ನಾನು ಅಂಕಿ ಅಂಶಗಳಿಂದ ಹೇಳಬೇಕಾಗುತ್ತದೆ. ಇನ್ನು ಹಾರಂಗಿ, ಲಕ್ಷ್ಮಣತೀರ್ಥ, ಕಂಬದಕಡ-ಈ ಮೂರು ಕಟ್ಟೆಗಳನ್ನು ಕಟ್ಟಬೇಕೆಂದು ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿದೆ. ಮೊನ್ನೆ ನಮ್ಮ ನೀರಾವರಿ ಮಂತ್ರಿಗಳು ಇದಕ್ಕೆ ಎಷ್ಟು ಖರ್ಚಾಗುತ್ತದೆಂಬ ಬಗ್ಗೆ ಉತ್ತರ ಹೇಳಿದರು. ಹೇಮಾವತಿಯಿಂದ ಕೊಡಗಿನ ಪ್ರದೇಶ ಎಷ್ಟು ಮುಳುಗಡೆಯಾಗುತ್ತದೆ ಎಂಬ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ತಿಳಿದುಕೊಳ್ಳುವುದಕ್ಕೆ ತಯಾರಿಲ್ಲವೆಂದು ಹೇಳಿದರೆ ನಾನು ಮಾತನಾಡುವುದಕ್ಕಾಗುವುದಿಲ್ಲ. ನಾನು ಕೊಡಗಿನವನು, ಮೈಸೂರಿನವನಲ್ಲ ಎಂದು ಹೇಳಿದ್ದರೆ ಈ ಮೂರು ಕಟ್ಟೆಗಳನ್ನು ಕಟ್ಟಬಾರದು ಎಂದು ಹೇಳುತ್ತಿದ್ದರು. ಇವತ್ತು ಅವನ್ನು ಕಟ್ಟುವಾಗ ಎಲ್ಲಾ ಕಟ್ಟೆಗಳನ್ನು ಕಟ್ಟಬೇಡಿ ಎಂದು ಹೇಳಬಾರದು. ಕೊಡಗನ್ನೇ ಮುಳುಗಿಸುವುದಕ್ಕೆ ಹೋಗಬೇಕೆಂಬ ಧೋರಣೆಯನ್ನು ವಿಶಾಲದೃಷ್ಟಿಯಿಂದ ಹೇಳುತ್ತಾರೆ. ನಮ್ಮ ದೃಷ್ಟಿಯಿಂದ ಮತ್ತು ಕೊಡಗಿನ ಜನತೆಯ ದೃಷ್ಟಿಯಿಂದ ಇವತ್ತು ಮೊದಲು ಯಾವ ರೀತಿ ಕಟ್ಟೆಗಳನ್ನು ಕಟ್ಟಬೇಕು ಎಂಬುದಾಗಿ ತೀರ್ಮಾನವನ್ನು ಕೈಗೊಂಡಿದ್ದರೋ, ಯಾವ ರೀತಿ ಅದನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದರೋ ಆ ರೀತಿಯಲ್ಲೇನಾದರೂ ಕಟ್ಟಿದರೆ ಕೊಡಗು ನಿಜವಾಗಿ ಮುಳುಗಡೆಯಾಗುತ್ತದೆ ಮತ್ತು ನಿರ್ನಾಮವಾಗುತ್ತದೆಂದು ನಾನು ದೃಢವಾಗಿ ನಂಬಿದ್ದೇನೆ. ಆದ್ದರಿಂದ ಇದನ್ನು ಖಂಡಿತವಾಗಿ ಪರಿಶೀಲನೆ ಮಾಡಬೇಕು. ಇದರ ಬಗ್ಗೆ ಒಂದು ರೀತಿ ಅಂಕಿ ಅಂಶ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿಯೇ ನಿಮ್ಮ ಕ್ಷೇತ್ರದ ಒಬ್ಬ ಪ್ರತಿನಿಧಿ ಮಾತನಾಡುವಾಗ ಶ್ರೀಮಾರ್ಕ ದೇವ್ ಅವರು ಮಧ್ಯೆ ಮಾತನಾಡಿ ಹಾರಂಗಿಯನ್ನು 120 ಅಡಿ ಎತ್ತರ ಕಟ್ಟುವುದಾದರೆ ನಮ್ಮ ಅಡ್ಡಿ ಇಲ್ಲವೆಂದು ಸ್ಪಷ್ಟಪಡಿಸಿರುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ನಾನು ಬರೀ ಹಾರಂಗಿ ವಿಚಾರವಾಗಿ ಮಾತನಾಡಲಿಲ್ಲ. ಕೊಡಗಿನಲ್ಲಿ ಕಟ್ಟುವ ಕಟ್ಟೆಗಳ ವಿಚಾರವಾಗಿ ಮಾತನಾಡುತ್ತಿದ್ದೇನೆ. ಮತ್ತೆ ಒಂದೊಂದಕ್ಕೆ ಬರುತ್ತೇನೆ. ಇದರಲ್ಲಿ ಕೊಡಗಿನ ಜನತೆಯ ಧೋರಣೆ ಏನೆಂಬುದನ್ನು ವಿಚಾರಮಾಡಬೇಕು. ಕೊಡಗಿನಲ್ಲಿ ಈ ಕಟ್ಟೆಗಳನ್ನು ಕಟ್ಟುವಾಗ ಎಲ್ಲಾ ಕಟ್ಟೆಗಳನ್ನು ಕಟ್ಟಬಾರದು ಎಂದು ಜನತೆ ಹೇಳಲಿಲ್ಲ. ಯಾವುದನ್ನು ಸಣ್ಣ ಪ್ರಮಾಣದಲ್ಲಿ ಕಟ್ಟಬಹುದು, ಯಾವುದನ್ನು ಕಟ್ಟಬಾರದು ಎಂಬ ಧೋರಣೆಯನ್ನು ಹೇಳಿದ್ದಾರೆಯೇ ವಿನಹ, ಯಾವುದನ್ನು ಕಟ್ಟಬಾರದು, ಹಳೆಯ ಮೈಸೂರಿನಿಂದ ನೀರನ್ನು ಉಪಯೋಗಿಸಬೇಡಿ, ನಿಮಗೆ ನೀರು ಸಿಗದಿದ್ದರೂ ಪರವಾಇಲ್ಲ ಬೇಸರವಿಲ್ಲವೆಂಬ ಭಾವನೆಯನ್ನು ಕೊಟ್ಟಿಲ್ಲ. ಇವತ್ತು ಕಂಬದಕಡ, ಹಾರಂಗಿ, ಲಕ್ಷ್ಮಣತೀರ್ಥ, ಯೋಜನೆಗಳನ್ನು ಯಾವ ರೀತಿಯಲ್ಲಿ ತಯಾರುಮಾಡಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದರೋ ಆ ರೀತಿಯಲ್ಲಿ ಈ ಕಟ್ಟೆಗಳನ್ನು ಕಟ್ಟಿದ್ದೇ ಆದರೆ ಅದರ ಜೊತೆಗೆ ಹೇಮಾವತಿ ಜಲಾಶಯದ ಯೋಜನೆಯನ್ನು ಕಟ್ಟುವುದಾದರೆ ಕೊಡಗಿನ ಮುಕ್ಕಾಲು ಭಾಗ ನೀರಿನ ಹಾವಳಿಯಿಂದ ತೊಂದರೆಯಾಗುತ್ತದೆ ಎಂಬುದಾಗಿ ನಾನು ಇಲ್ಲಿ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಕೊಡಗಿನಲ್ಲಿ ಹಿಂದೆ 1961ರಲ್ಲಿ ದೊಡ್ಡ ಮಳೆಗಾಲದಲ್ಲಿ ಇಂತಹ ಕಟ್ಟೆಗಳು ಇಲ್ಲದಂತಹ ಸಂದರ್ಭದಲ್ಲಿ ಆದಂಥ ಒಂದು ಹಾವಳಿಯನ್ನು ಗಣನೆಗೆ ತೆಗೆದುಕೊಂಡರೆ ಬರೀ ಅಷ್ಟು ಸಣ್ಣ ಜಿಲ್ಲೆಯಲ್ಲಿರತಕ್ಕ ಜನರಿಗೆ 10 ಲಕ್ಷ ರೂಪಾಯಿಗಳ ತಕಾವಿ ಸಾಲವನ್ನು ಕೊಡಬೇಕಾದ ಸಂದರ್ಭಬಂತು. ಅಂದರೆ ಈಗ ಇನ್ನೆಷ್ಟು ಲಕ್ಷ ರೂಪಾಯಿಗಳು ಆಗಿರಬಹುದೆಂಬುದನ್ನು ಮಾನ್ಯ ಸದಸ್ಯರೆಲ್ಲರೂ ತಿಳಿಯಬೇಕು. ಇವತ್ತು 1924ರಲ್ಲಿ ಆದಂಥ ತೀರ್ಮಾನದ ಪ್ರಕಾರ 45 ಟಿ.ಎಂ.ಸಿ. ಯಷ್ಟು ನೀರನ್ನು ಹೊಂದಬೇಕೆಂದು ನಮಗೆ ಹೇಳುತ್ತಿದ್ದಾರೆ. ಬಹುಶಃ ಕೊಡಗು ಈ ವಿಶಾಲ ಮೈಸೂರಿನಲ್ಲಿ ವಿಲೀನವಾಗದಿದ್ದರೆ ಇವರು ಎಲ್ಲಿಂದ ನೀರನ್ನು ತೆಗೆಯುತ್ತಿದ್ದರೆಂದು ನಾನು ಈಗ ಕೇಳಬೇಕಾಗಿದೆ.

ನಾವು ಇದಕ್ಕೆ ಸೇರಿದ ಮೇಲೆ ನಾವು ಎಲ್ಲಕ್ಕೂ ಬಾಧ್ಯರಾಗುತ್ತೇವೆ. ನಾವು ಮೊಂಡುವಾದವನ್ನು ತೆಗೆಯತಕ್ಕ ವ್ಯಕ್ತಿಗಳಲ್ಲ. ಆದರೆ ಕೊಡಗಿನಲ್ಲಿ ಮುಂದಿನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನೂ ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮೊದಲು ಯೋಜನೆ ಮಾಡಿರುವ ಪ್ರಕಾರ ಕಟ್ಟೆಯನ್ನು ಕಟ್ಟಿದರೆ ಕೊಡಗು ಜಿಲ್ಲೆಯಲ್ಲಿ ಬಹಳ ಹಾವಳಿಯಾಗುತ್ತದೆ ಎಂದು ನಾನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಾರಂಗಿ ಕಟ್ಟೆಯನ್ನು 120 ಅಡಿ ಎತ್ತರದಲ್ಲಿ ಹರದೂರಿನಲ್ಲಿ ಕಟ್ಟುವುದಾದರೆ ಕೊಡಗು ಜಿಲ್ಲೆಗೆ ಬಹಳ ತೊಂದರೆಯಾಗುತ್ತದೆ. ಕೆಲವು ಮಾನ್ಯ ಸದಸ್ಯರು ಅದನ್ನು ಬದಲಾಯಿಸಬೇಡಿ ಸಣ್ಣಪ್ರಮಾಣದ ಕಟ್ಟೆಯನ್ನು ಕಟ್ಟಲೇಬೇಡಿ ಎನ್ನುವ ವಾದವನ್ನು ತೆಗೆಯುತ್ತಾರೆ. 1924ನೇ ಇಸವಿಯ ಕಾವೇರಿನದಿಯ ನೀರಿನ ಒಪ್ಪಂದದ ಪ್ರಕಾರ ನಾವೂ ಕೂಡ ಅದಕ್ಕೆ ಬಾಧ್ಯಸ್ಥರು. ನಾವು ಯಾವ ಕಟ್ಟೆಯನ್ನೂ ಕಟ್ಟಬೇಡಿ ಎನ್ನುವ ವಾದವನ್ನು ತೆಗೆಯಲಿಲ್ಲ. ಹಾರಂಗಿ ಕಟ್ಟೆಯ ಎತ್ತರವನ್ನು ಕಡಿಮೆ ಮಾಡಿ ಸಣ್ಣ ಪ್ರಮಾಣದಲ್ಲಿ ಎರಡು ಕಟ್ಟೆಯನ್ನು ಕಟ್ಟಬಹುದು.

ಇನ್ನು ಕಂಬದಕಡ ಕಟ್ಟೆಯ ವಿಚಾರವನ್ನು ಹೇಳುವುದಾದರೆ, ಕಂಬದಕಡ ಕಟ್ಟೆಯನ್ನು ಕಟ್ಟಲೇ ಬಾರದೆಂಬ ವಾದವನ್ನು ಹಿಂದೆಯೂ ಇಟ್ಟುಕೊಂಡಿದ್ದೆವು. ಈಗಲೂ ಕೂಡ ಅದನ್ನು ಕಟ್ಟಕೂಡದು ಎನ್ನುವ ವಾದವನ್ನು ಇಟ್ಟುಕೊಂಡಿದ್ದೇವೆ. ಈ ವಾದ ಫಲಕಾರಿಯಾಗುತ್ತದೆಯೋ ಇಲ್ಲವೋ ಅದು ಬೇರೆ ಮಾತು. ಕಂಬದಕಡ ಕಟ್ಟೆಯನ್ನು ಕಟ್ಟುವುದರಿಂದ ಆಗುವಷ್ಟು ನಷ್ಟ ಬೇರೆ ಯಾವುದರಿಂದಲೂ ಆಗುವುದಿಲ್ಲ. 1956ನೇ ಇಸವಿಯಲ್ಲಿ ಕೊಡಗು ಮೈಸೂರು ದೇಶದಲ್ಲಿ ವಿಲೀನವಾಯಿತು. ಈಗ ಕಂಬದಕಡ ಕಟ್ಟೆಯನ್ನು ಕಟ್ಟಿದರೆ ಕೊಡಗು ನೀರಿನಲ್ಲಿ ವಿಲೀನವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಂಬದಕಡ ಕಟ್ಟೆಯನ್ನು ಕಟ್ಟುವ ಸ್ಥಳಕ್ಕೂ ಕಾವೇರಿ ನದಿಯು ಹುಟ್ಟುವ ಸ್ಥಳಕ್ಕೂ ಇರುವ ಅಂತರ 100 ಅಡಿ ಇದೆ. ಆದ್ದರಿಂದ ಇದನ್ನು ಕಟ್ಟುವುದರಿಂದ ಕೊಡಗಿಗೆ ತುಂಬಾ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಕಂಬದಕಡ ಕಟ್ಟೆಯನ್ನು ಕಟ್ಟುವುದನ್ನು ನಿಲ್ಲಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಹಾರಂಗಿ ಕಟ್ಟೆಯ ಎತ್ತರವನ್ನು ಕಡಿಮೆ ಮಾಡಿ ಸಣ್ಣ ಪ್ರಮಾಣದಲ್ಲಿ ಎರಡು ಕಡೆ ಕಟ್ಟಲು ಸರ್ಕಾರ ನಿರ್ಣಯವನ್ನು ಕೈಗೊಂಡಿದೆ. ಅದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಈಗ ನಮಗೆ ದೊಡ್ಡ ಹೆದರಿಕೆ ಇರುವುದು ಕಂಬದಕಡ ಕಟ್ಟೆಯ ವಿಚಾರ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಲ್ಪ ತ್ಯಾಗ ಮಾಡಿ.

ಶ್ರೀ ಎ. ಪಿ. ಅಪ್ಪಣ್ಣ.—ಮೈಸೂರಿನ ಹೆಸರನ್ನು ಕರ್ನಾಟಕವೆಂದು ಹೆಸರು ಬದಲಿಸುವ ಸಣ್ಣ ವಿಷಯಕ್ಕೂ ಒಪ್ಪದಿರುವ ನೀವು ನಮಗೆ ಇಷ್ಟು ದೊಡ್ಡ ತ್ಯಾಗ ಮಾಡಬೇಕೆಂದು ಹೇಳುವುದು ಸರಿಯಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಶರಾವತಿಯಲ್ಲಿ ಎಷ್ಟು ಮುಳುಗಡೆಯಾಗುತ್ತದೆ ಎಂಬುದನ್ನು ತಾವು ನೋಡಿದ್ದೀರಾ ? ಅದರ ಉಪಯೋಗ ಹಳೆಯ ಮೈಸೂರಿಗೆ ಮಾತ್ರವಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಕಂಬದಕಡ ಕಟ್ಟೆಯನ್ನು ಕಟ್ಟುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಅಷ್ಟೇ ನೀರನ್ನು ಸರಬರಾಜು ಮಾಡುವ ಒಂದು ಕಟ್ಟೆಯನ್ನು ಕಟ್ಟುವುದಕ್ಕೆ ಸಾಧ್ಯವಿದೆ. ಕಂಬದಕಡ ಕಟ್ಟೆಯ ವಿಚಾರವಾಗಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಮಂತ್ರಿವರ್ಯರಾದ ವೀರೇಂದ್ರ ಪಾಟೀಲರು ಅದಕ್ಕೆ ಬೇರೆ ಒಂದು ಆಲ್ಟರ್‌ನೇಟೀವ್ ಪ್ರಾಜೆಕ್ಟನ್ನು ತಯಾರು ಮಾಡುತ್ತಿದ್ದೇವೆ, ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ, ಒಂದು ಪ್ರತ್ಯೇಕವಾದ ಅಷ್ಟೇ ನೀರಾವರಿಯಾಗುತ್ತದೆ. ಅದರಿಂದ ಅಷ್ಟೇ ಜಮೀನಿಗೆ ನೀರು ಸರಬರಾಜಾಗುತ್ತದೆ ಎಂದು ಹೇಳಿದ್ದರು, ಕೊಡಗು ಜಿಲ್ಲೆಯ ಪ್ರದೇಶ ಮುಳುಗಡೆ ಆದರೂ ಪರವಾಯಿಲ್ಲ, ಮೈಸೂರಿನವರಿಗೆ ನೀರು ಬೇಕು ಎಂದು ವಾದ ಮಾಡುವವರೂ ಇದ್ದಾರೆ. ಅದು ಸರಿಯಲ್ಲ. ಕಂಬದಕಡ ಕಟ್ಟೆಯನ್ನು ಕಟ್ಟುವುದನ್ನು ತಪ್ಪಿಸುವ ರೀತಿಯಲ್ಲಿ ಅದನ್ನು ಪುನರ್‌ವಿಮರ್ಶೆ ಮಾಡುವುದು ಅತ್ಯಗತ್ಯ. ಹಾಗೆ ಅದನ್ನು ಪುನರ್‌ವಿಮರ್ಶೆ ಮಾಡುವಾಗ ಕಂಬದಕಡೆ ಕಟ್ಟೆಯಿಂದ ಎಷ್ಟು ಹಾನಿಯಾಗುತ್ತದೆ, ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅದನ್ನು ಕೈಬಿಟ್ಟು ಅದಕ್ಕೆ ಬೇರೆ ಆಲ್ಟರ್‌ನೇಟಿವ್ ಪ್ರಾಜೆಕ್ಟು ಇದ್ದು ಅದರಿಂದ ಅಷ್ಟೇ ನೀರಾವರಿಯಾಗುತ್ತದೆ ಎನ್ನುವ ಸಂದರ್ಭ ಇದ್ದರೆ ಅದನ್ನು ಸರ್ಕಾರದವರು ಏತಕ್ಕೆ ಮಾಡಬಾರದು ? ಈಗ ಅಂಥಾ ಒಂದು ಆಲ್ಟರ್‌ನೇಟಿವ್ ಸಜೆಷನ್ ಸರ್ಕಾರಕ್ಕೆ ಬಂದಿದೆ ಅದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಕಂಬದಕಡ ಕಟ್ಟೆಯ ವಿಚಾರವಾಗಿ ನಮ್ಮ ಜಿಲ್ಲೆಯ ಜನತೆಯ ಹಿತವನ್ನೂ, ಮತ್ತು ಅದರಿಂದ ನಮ್ಮ ಜಿಲ್ಲೆಗೆ ಆಗುವ ನಷ್ಟವನ್ನೂ ಪರಿಶೀಲನೆಗೆ ತೆಗೆದುಕೊಳ್ಳುವುದಾದರೆ ಆ ಕಟ್ಟೆಯನ್ನು ಕಟ್ಟುವುದನ್ನು ಕೈಬಿಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಜಿ. ವಿ. ಗೌಡ.—ಅದರಿಂದಾಗುವ ನಷ್ಟವನ್ನು ಪೂರ್ಣವಾಗಿ ತುಂಬಿಕೊಟ್ಟರೆ ?

ಶ್ರೀ ಎ. ಪಿ. ಅಪ್ಪಣ್ಣ.—ಈಗ ಕೆ. ಆರ್. ನಗರದವರಿಗೆ ಆಗಿರುವ ನಷ್ಟವನ್ನು ಸರ್ಕಾರದವರು ಇನ್ನೂ ತುಂಬಿಕೊಟ್ಟಿಲ್ಲ. ಕೊಡಗು ಜಿಲ್ಲೆಯನ್ನೆಲ್ಲಾ ಮುಳುಗಿಸಿ ಮುಂದೆ ನಷ್ಟವನ್ನು ತುಂಬಿಕೊಡುತ್ತೇವೆಂದು ಹೇಳಿದರೆ ಮನುಷ್ಯ ಸತ್ತ ಮೇಲೆ ಇನ್‌ಷೂರೆನ್ಸ್ ಪ್ರೀಮಿಯಮ್ ಹಣ ಬಂದಂತಾಗುತ್ತದೆ. ಈ ದೃಷ್ಟಿಯಿಂದ ಇದರಿಂದ ಕೊಡಗಿಗೆ ಅನೇಕ ರೀತಿಯ ತೊಂದರೆಗಳಿವೆ. ಆದ್ದರಿಂದ ಕೊಡಗಿಗೆ ತೊಂದರೆಯಾಗದಂತೆ, ಅಪಾಯವಾಗದಂತೆ, ಧಕ್ಕೆ ಬಾರದ ರೀತಿಯಲ್ಲಿ ಇದನ್ನು ಪರಿಶೀಲನೆ ಮಾಡಬೇಕು. ಈ ಸಂಬಂಧವಾದ ಒಂದು ಪ್ರಶ್ನೆಗೆ ಮಾನ್ಯ ಸಚಿವರು ಒಂದು ಸಂದರ್ಭದಲ್ಲಿ ಉತ್ತರವನ್ನು ಕೊಡುವಾಗ ಕಟ್ಟೇಪುರದ ಹತ್ತಿರ ಒಂದು ಆಲ್ಟರ್‌ನೇಟಿವ್ ಪ್ರಾಜೆಕ್ಟನ್ನು ಕಟ್ಟುವುದರಿಂದ ಅಷ್ಟೇ ನೀರಾವರಿಯಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಕಟ್ಟೇಪುರ ಕಟ್ಟೆಯನ್ನೂ, ಹಾರಂಗಿ ಮತ್ತು ಹೇಮಾವತಿ ಕಟ್ಟೆಯನ್ನು ಕಟ್ಟುವುದರಿಂದ ಹಾಸನಾ ಡಿಸ್ಟ್ರಿಕ್ಟಿನ ಬಹು ಭಾಗ ಮುಳುಗಡೆಯಾಗಿ ಹೋಗುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ.—ಕೊಡಗು ಜಿಲ್ಲೆಯ ಪ್ರದೇಶ ಮಾತ್ರ ಮುಳುಗಡೆಯಾಗಲಿ ಎಂದು ಹೇಳುವಿರಿ. ನಿಮ್ಮ ಜಿಲ್ಲೆಗೆ ನೀರಾವರಿ ಮಾಡುವ ಸಂದರ್ಭದಲ್ಲಿ ನಿಮ್ಮ ಜಿಲ್ಲೆಯಲ್ಲಿ ಒಂದು ಎಕರೆ ಭೂಮಿಯೂ ಮುಳುಗಡೆ ಆಗಬಾರದು ಎಂದು ವಾದ ಮಾಡುತ್ತಿದ್ದೀರಿ ?

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಕಂಬದಕಡ ಕಟ್ಟೆಯನ್ನು ಕಟ್ಟೇಪುರದ ಹತ್ತಿರ ಕಟ್ಟುವುದು ನ್ಯಾಯವಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಏತಕ್ಕೆ ನ್ಯಾಯವಲ್ಲ ?

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಹೇಮಾವತಿಯ ಕಟ್ಟೆಯನ್ನು ಕಟ್ಟುವುದರಿಂದ ಹಾಸನ ಜಿಲ್ಲೆಯಲ್ಲಿ ಕೆಲವು ಭಾಗ ಮುಳುಗಡೆಯಾಗುತ್ತದೆ. ಮತ್ತೆ ಕಟ್ಟೇಪುರದ ಕಟ್ಟೆಯನ್ನು ಕಟ್ಟುವುದರಿಂದ ಹಾಸನ ಜಿಲ್ಲೆಯಲ್ಲಿ ಮತ್ತಷ್ಟು ಜಮೀನು ಮುಳುಗಡೆ ಆಗುತ್ತದೆ.

ಶ್ರೀ ಎ. ಪಿ. ಅಪ್ಪಣ್ಣ.—ದೇಶದ ಹಿತದೃಷ್ಟಿಯಿಂದ ಹಾಸನ ಜಿಲ್ಲೆಯಲ್ಲಿ ಕೆಲವು ಭಾಗ ಮುಳುಗಡೆ ಆದರೆ ಅದರಿಂದ ಬೇಸರ ಪಡಬಾರದು.

Mr. DEPUTY SPEAKER.—The House will now adjourn and meet again at 3-30 p.m.

The House adjourned for recess at Three of the Clock and reassembled at Thirty Minutes past Three of the Clock.

[Mr. Speaker in the Chair.]

ಶ್ರೀ ಎ. ಪಿ. ಅಪ್ಪಣ್ಣ—ಈ ಕಾವೇರಿ ನೀರನ್ನು ಸಂಪೂರ್ಣವಾಗಿ ಉಪಯೋಗಿಸುವ ಕಾರ್ಯದಲ್ಲಿ ಕೆಲವು ಪ್ರದೇಶ ಮುಳುಗಡೆಯಾಗುತ್ತದೆ; ಅದನ್ನು ತ್ಯಾಗಮಾಡುವ ಹಕ್ಕು ಮತ್ತು ಸಾಮರ್ಥ್ಯ ಬರೀ ಒಂದು ಜಿಲ್ಲೆಗೆ ಸೇರಿದ್ದು ಅಲ್ಲ. ರಾಜ್ಯದ ಇತರ ಜಿಲ್ಲೆಗಳೂ ಅದರಲ್ಲಿ ಪಾಲುಗೊಳ್ಳಬೇಕು ಎಂಬುದು ಅಗತ್ಯವಾಗಿದೆ ಎಂಬುದನ್ನು ಮನಗಾಣಬೇಕು. ಹಾರಂಗಿ ಯೋಜನೆ ಕೈಕೊಂಡಿದೆ. ಈ ಯೋಜನೆಯಲ್ಲಿ ಸಾವಿರಾರು ಎಕರೆ ಭೂಮಿ ಕೊಡಗಿನಲ್ಲಿ ಮುಳುಗಡೆಯಾಗುತ್ತದೆ. ಹೇಮಾವತಿ ಯೋಜನೆಯಲ್ಲಿ ಕೆಲವು ಭಾಗ ಮುಳುಗಡೆಯಾಗುತ್ತದೆ. ಲಕ್ಷ್ಮಣತೀರ್ಥದಲ್ಲಿಯೂ ಕೆಲವು ಪ್ರದೇಶ ಮುಳುಗಡೆಯಾಗುತ್ತದೆ. ಇಂಥ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಕಂಬದಕಡ ಕಟ್ಟೆ ಕಟ್ಟಿದರೆ ಹಾಸನ ಜಿಲ್ಲೆ ಪಾಲುಗೊಳ್ಳಲು ಅವಕಾಶವಾಗುತ್ತದೆ ಹಾಗೂ ಅವರು ತ್ಯಾಗಮಾಡಲು ಸಿದ್ಧವಾಗಿದ್ದಾರೆ. ಒಂದೇ ಜಿಲ್ಲೆಯಲ್ಲಿ ಎಲ್ಲ ಕಟ್ಟೆ ಕಟ್ಟಿಸಿ ಅದರ ಪ್ರಯೋಜನ ಬೇರೆಯವರಿಗೆ ಆಗುವ ಸಂದರ್ಭದಲ್ಲಿ ನೀವೇ ಒಬ್ಬರು ತ್ಯಾಗಮಾಡಬೇಕು ಎಂಬ ಧೋರಣೆ ಸರಿಯಲ್ಲ. ಕೆಲವರು ಹೇಳಬಹುದು. ಕೊಡಗು ವಿಶಾಲ ಮೈಸೂರಿನಲ್ಲಿ ವಿಲೀನವಾದಮೇಲೆ ಒಂದೇಮನೆಯವರು ಎಂಬ ಭಾವನೆ ಇರಬೇಕು, ಸಂಕುಚಿತಭಾವನೆ ಇರಕೂಡದು ಎಂದು ಹೇಳಬಹುದು. ಇಂಥ ಸಂಕುಚಿತ ಮನೋಭಾವನೆ ಇರದೇ ಇದ್ದುದರಿಂದಲೇ ಕೊಡಗು ಸರ್ಪ್ಲಸ್ ಆಗಿದ್ದರೂಕೂಡ ವಿಶಾಲ ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. ಇವತ್ತು ಕೊಡಗು ಜಿಲ್ಲೆಯಿಂದ ಸಾಧಾರಣವಾಗಿ, ವರ್ಷಕ್ಕೆ 3 ಕೋಟಿ ರೂಪಾಯಿ ಉತ್ಪತ್ತಿ ಇದ್ದರೂಸಹ, ಅದರಲ್ಲಿ ಕಡಿಮೆಪಕ್ಷ 2 ಕೋಟಿ ರೂಪಾಯಿ ಕೊಡಗು ಜಿಲ್ಲೆಯ ಹೊರಗೆ ವಿನಿಮಯವಾಗುತ್ತದೆ. ಆದರೂ ಸಹ ಇದನ್ನು ವಿಶಾಲ ಮೈಸೂರು ದೃಷ್ಟಿಯಿಂದ ಒಪ್ಪಿಕೊಂಡಿದ್ದೇವೆ. ಈ ಎಲ್ಲಾ ಕಟ್ಟೆಗಳನ್ನು ಇಲ್ಲಿ ಕಟ್ಟಿ, ಕೊಡಗನ್ನೆಲ್ಲಾ ಮುಳಗಿಸಿಕೊಂಡು ತ್ಯಾಗಬುದ್ಧಿ ತೋರಿಸಬೇಕೆಂದು ಹೇಳುತ್ತಾ ಇದ್ದಾರೆ; ಆದರೆ ಬೇರೆ ಜಿಲ್ಲೆಯ ಜನತೆಯ ಅವರ ಭಾಗಗಳು ಮುಳುಗಿದರೆ, ತ್ಯಾಗಬುದ್ಧಿ ತೋರಿಸಲು ಸಿದ್ಧರಾಗಿಲ್ಲವೆಂದು ಹೇಳುತ್ತಾ ಇದ್ದೇವೆ. ಹಾರಂಗಿ, ಲಕ್ಷ್ಮಣತೀರ್ಥ, ಹೇಮಾವತಿಗಳಿಂದ ಕೇವಲ ಕೊಡಗು ಮುಳುಗಡೆಯಾಗುವಂಥ ಪರಿಸ್ಥಿತಿ. ಇದನ್ನು ಕಂಬದಕಡದ ಬದಲು ಕಟ್ಟೆಮರದಲ್ಲಿ ಕಟ್ಟಿದ್ದೇ ಆದರೆ, ಇನ್ನೊಂದು ಜಿಲ್ಲೆಯ ಕೆಲವು ಭಾಗಗಳು ಮುಳುಗಡೆಯಾಗುತ್ತದೆ; ಅದು ಬೇಡ, ಬರೀ ಕೊಡಗು ಮುಳುಗಡೆಯಾಗಿ, ಕಾವೇರಿನದಿಯ ಪ್ರಯೋಜನವನ್ನು ಇನ್ನೊಂದು ಜಿಲ್ಲೆಯವರು ಪಡೆಯೋಣ ಅನ್ನುವ ಭಾವನೆ ಸರಿಯಲ್ಲ, ಕಾವೇರಿ ನದಿ ನೀರನ್ನು ಪೂರ್ತಿ ಉಪಯೋಗಿಸಬೇಕು. ಹಾಗೆ ಉಪಯೋಗಿಸುವಂಥ ಕಾರ್ಯದಲ್ಲಿ, ಅದಕ್ಕೆ ಮಾಡಬೇಕಾದಂಥ ಕಾರ್ಯದಲ್ಲಿ ಎಲ್ಲ ಜನತೆಯೂ ಪಾಲುಗೊಳ್ಳಬೇಕು ಎಂಬ ಭಾವನೆಯನ್ನು ಇನ್ನೊಂದು ಜಿಲ್ಲೆಯವರೂ ಹೊಂದಬೇಕು. ಈ ದೃಷ್ಟಿಯಿಂದ ಕಂಬದಕಡದ ವಿಚಾರವಾಗಿ ಪುನರ್ ಪರಿಶೀಲನೆಯಾಗಿ, ಕಟ್ಟೆಪುರದಲ್ಲಿ ಕಂಬದಕಡದಷ್ಟೇ ನೀರನ್ನು ಶೇಖರಣೆ ಮಾಡಬಹುದು. ಕಂಬದಕಡದಿಂದ ಎಷ್ಟು ಎಕರೇಜ್ ನೀರಾವರಿ ಮಾಡಬಹುದೋ ಅಷ್ಟನ್ನೇ ಕಟ್ಟೆಪುರ ಯೋಜನೆಯಿಂದ ನೀರಾವರಿಯಾಗುತ್ತದೆ ಎಂಬ ಮಾತನ್ನು ಮನಗಂಡಿದೆ; ಈ ಪುನರ್ ಪರಿಶೀಲನೆ ತೀರ್ಮಾನವನ್ನು ಸರಕಾರ ಒಪ್ಪಿಕೊಳ್ಳಲೇಬೇಕು. ಕಂಬದಕಡದ ಹಾವಳಿಯಿಂದ ಕೊಡಗನ್ನು ಬಿಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ. ಇವತ್ತು ಕೊಡಗಿನ ಜನತೆಗೆ, ಕಟ್ಟೆಗಳ ವಿಚಾರವಾಗಿ ಹೊತ್ತಿರುವ ಧೋರಣೆಯಲ್ಲಿ, ಅನೇಕ ರೀತಿಯ ಅಭಿಪ್ರಾಯಗಳಿವೆ. ಕಟ್ಟೆಗಳನ್ನು ಎಂದೆಂದಿಗೂ ನಮ್ಮ ಜಿಲ್ಲೆಯಲ್ಲಿ ಕಟ್ಟಬಾರದು ಎಂಬ ಧೋರಣೆ ನಮ್ಮಲ್ಲಿಲ್ಲ, ಸಾಧಾರಣ 1,600 ಚದುರ ಮೈಲಿ ವಿಸ್ತಾರವುಳ್ಳಂಥ ಕೊಡಗು ಜಿಲ್ಲೆಯ ಕೆಲವು ಭಾಗವಾದರೂ ಉಳಿದಿರಬೇಕು. ಅದರ ಎಲ್ಲಾ ಭಾಗವೂ ಈ ಯೋಜನೆಯಿಂದ ಮುಳುಗಡೆಯಾಗಬೇಕಾದ ಸ್ಥಿತಿ ಬರುವುದು ಅನ್ನುವ ದೃಷ್ಟಿಯಿಂದ ನಾವು ಹೇಳುತ್ತಿದ್ದೇವೆ. ಬರೀ ಕೊಡಗಿನ ಭಾಗವನ್ನೇ ಮುಳುಗಡೆ ಮಾಡದೆ, ಇನ್ನೊಂದು ಜಿಲ್ಲೆಯ ಕೆಲವೊಂದು ಭಾಗವನ್ನು ಮುಳುಗಡೆಮಾಡಿ ಯೋಜನೆಮಾಡುವ ಸಾಧ್ಯತೆ ಇದೆ. ಏಕೆಂದರೆ ಕೊಡಗು ಬಹಳ ಸಣ್ಣ ಜಿಲ್ಲೆ, ಅದನ್ನೊಂದನ್ನೇ ಮುಳುಗಿಸುವ ಪ್ರಯತ್ನ ಸರಿಯಲ್ಲ. ಕಂಬದಕಡದ ಬದಲು ಕಟ್ಟೆಪುರದಲ್ಲಿ ಯೋಜನೆ ನಿರ್ಮಿಸಿ ಎಂದು ಧೋರಣೆ ಹೊತ್ತಿರುವ ಜನ, ಇವತ್ತಿನ ದಿವಸ ಈಗಲೂ ಸಹ ಹಾರಂಗಿ ವಿಚಾರದಲ್ಲಿ ಹಾರಂಗಿ ಕಟ್ಟಬೇಡಿ ಎಂಬ ಮಾತನ್ನು ಕೊಡಗು ಜನತೆ ಹೇಳುತ್ತಾ ಇಲ್ಲ. ಆದರೆ ಕೊಡಗು ಗುಡ್ಡಗಾಡು ಪ್ರದೇಶ, ಅಲ್ಲಿನ ಸ್ಥಿತಿಗತಿ, ಅಲ್ಲಿನ ಮಣ್ಣಿನ ಸ್ಥಿತಿ, ಮಳೆಗಾಲದಲ್ಲಿ ಅಲ್ಲಿ ಮಳೆಯಿಂದ ಆಗತಕ್ಕಂಥ ಹಾವಳಿ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಮಾಡಿ ಎಂಬುದು ಕೊಡಗಿನ ಜನತೆಯಲ್ಲಿ ಕೂಗು, ಕಂಬದಕಡ, ಹಾರಂಗಿ ವಿಚಾರವಾಗಿ ಪುನರಾಲೋಚಿಸಿ ಎಂದು ಸರಕಾರವನ್ನು ಒತ್ತಾಯಪಡಿಸಿತು. ಹಾರಂಗಿ ವಿಚಾರವಾಗಿ ಪರಿಶೀಲನೆ ಮಾಡಿ ಸರಕಾರಕ್ಕೆ ಒಂದು ಇತ್ಯರ್ಥ ಬಂದಿದೆ. ಈ ಕಟ್ಟೆಯನ್ನು ಕಟ್ಟಬಾರದು ಎಂಬ ಮಾತನ್ನು ಯಾರೂ ಮಾತನಾಡಿಲ್ಲ: ಅದರೆ ಕಂಬದಕಡ ಮಾತ್ರ ಕೊಡಗು ಜನತೆಗೆ life and death question ಆದ್ದರಿಂದ ಕಂಬದಕಡದ ವಿಚಾರವಾಗಿ ಕೊಡಗಿನ ಜನತೆ ಒಂದು ಏಕಧ್ವನಿಯಿಂದ ಹೇಳುತ್ತಾ-

ಇದೆ. ನಾವು ಕಡಿಮೆ ಪ್ರಮಾಣದಲ್ಲಿ ಇರುವಂಥ ಜನತೆ, ಅದರ ಪ್ರತಿನಿಧಿಗಳು ಕೆಲವರೇ ಇರು ವರು, ಆದ್ದರಿಂದ ಅದರ ಮಾತಿಗೆ ತಿರುಳಿಲ್ಲ ಎಂಬ ಭಾವನೆ ಹೊತ್ತಿದ್ದೇ ಆದರೆ, ಆ ವಾದದಲ್ಲಿ ನ್ಯಾಯ ವಿಲ್ಲ. ಈ ಸಂಬಂಧದಲ್ಲಿ ಕೊಡಗಿನ ಜನತೆ ಹೇಳುವುದನ್ನು ನೀವು ಪರಿಶೀಲನೆ ಮಾಡಬೇಕಾದ್ದು ಅಗತ್ಯ. ಇವತ್ತು ಕೊಡಗಿನ ಒಂದು ಭೂಪಟವನ್ನು ನೋಡಿ, ಅವರ ಪ್ಲಾನ್ ಒಂದು ನನ್ನ ಹತ್ತಿರವಿದೆ. ಅದನ್ನು ನೋಡಿದರೆ, ಕಂಬದಕಡ ಕಟ್ಟೆಯಿಂದ ನೀರಾವರಿಯಾಗುವಂಥ ಎಷ್ಟೋ ಏಕರೇಜ್ ಜಮೀನುಗಳು ಮುಳುಗಡೆಯಾಗುತ್ತವೆ, ಅದರಿಂದ ಅಕ್ಕಪಕ್ಕದಲ್ಲಿ ಖುಷ್ಕಿ ಭತ್ತ ಮತ್ತಿತರ ಕಾಫಿಬೆಳೆಗಳನ್ನು ಬೆಳ ಸಲಿಕ್ಕೆ ಸಾಧ್ಯವಾಗುವಂಥ ಜಮೀನುಗಳು ಅನೇಕವಿವೆ, ಇವೆಲ್ಲಾ ಹೋಗುತ್ತವೆ ಕಂಬದಕಡದ ವಿಚಾರವಾಗಿ ಕೊಡಗು ಜನತೆ ಏಕೆ ಈ ಧೋರಣೆ ಹೊಂದಿದೆಯೆಂದರೆ, ಮತ್ತೊಂದು ಮುಖ್ಯ ವಾದ ಅಂಶವಿದೆ. ಕಂಬದಕಡ ಕಟ್ಟೆ ಕಟ್ಟುವ ನಿವೇಶನಕ್ಕೂ, ಕಾವೇರಿ ಹುಟ್ಟುವ ಸ್ಥಳಕ್ಕೂ ಬರೀ 100 ಅಡಿ ವ್ಯತ್ಯಾಸವಿರುತ್ತದೆ. ಇವತ್ತು ಕಂಬದ ಕಡದಲ್ಲಿ 120 ಅಡಿ ಎತ್ತರವಾದ ಕಟ್ಟೆ ಕಟ್ಟಿದ್ದೇ ಆದರೆ ಇಡೀ ಕೊಡಗನ್ನು ವಿಭಜನೆ ಮಾಡಿದ ಹಾಗಾಗುತ್ತದೆ. ಅದು ದ್ವೀಪದಂತೆ ಅದರೆ 4ಸಾವಿರ ಅಡಿ ಇರುವ ಕೊಡಗಿನ ಜನತೆಯ ಮನಸ್ಸಿನಮೇಲೆ ಏನು ಪರಿಣಾಮವಾಗಬಹುದು ಅನ್ನುವು ದನ್ನು ತಾವೇ ಊಹಿಸಬೇಕು. ಕೊಡಗಿನ ಮಣ್ಣು ಬೇರ, ಇತರ ಕಡೆಯಲ್ಲಿರುವ ಮಣ್ಣು ಬೇರೆ ಅನ್ನುವ ಭಾವನೆ ಇಟ್ಟುಕೊಂಡು, ಸಂಕುಚಿತ ದೃಷ್ಟಿಯಿಂದ ಹಾರಂಗಿ ಕಟ್ಟಬಾರದು ಎಂಬ ಧೋರಣೆ ಹೊತ್ತಿಲ್ಲ, ಹೇಮಾವತಿ ಕಟ್ಟಬಾರದೆಂಬ ಧೋರಣೆ ಇಲ್ಲ, ಕಂಬದಕಡ ಕಟ್ಟೆಯನ್ನು ಕಟ್ಟಲೇ ಬಾರದೆಂದು ಒಂದು ಸಮಸ್ಯೆಯ ದೃಷ್ಟಿಯಿಂದ ಹೇಳುತ್ತಾ ಇದ್ದೇವೆ, ಬೇರೆ ದೃಷ್ಟಿಯಿಂದಲ್ಲ. ಆದ್ದರಿಂದ ಕಂಬದಕಡವನ್ನು ಕೈಬಿಡಿ ಅದರ ಬದಲು ಕಟ್ಟೇಪುರದಲ್ಲಿ ಕಟ್ಟಿ ಕಂಬದಕಡದಿಂದ ಉಪ ಯೋಗ ಬರುವಷ್ಟು ನೀರನ್ನು, ಪ್ರಯೋಜನವನ್ನು ಬೇರ ಯತ್ನದ ಮೂಲಕವೂ ಹೊಂದುವಂಥ ಸಾಧ್ಯತೆ ಇದೆ, ಮೇಲಾಗಿ, ಈ ತ್ಯಾಗದ ಬುಧ್ಧಿಯಲ್ಲಿ ಇತರ ಜಿಲ್ಲೆಗಳೂ ಪಾಲುಗೊಳ್ಳುವ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ತಾವು ಕಂಬದ ಕಡವನ್ನು ಇದರಲ್ಲಿ ಕೈಬಿಡಬೇಕು ಎಂಬ ದೃಷ್ಟಿಯಿಂದ ಇಲ್ಲಿ ನಿವೇದಿಸಿಕೊಳ್ಳುತ್ತಾ ಇದ್ದೇವೆ.

ಕಾವೇರಿನದಿ ನೀರನ್ನು ಉಪಯೋಗಿಸುವಂಥ ಕಾರ್ಯದಲ್ಲಿ ಪ್ರತಿಯೊಬ್ಬರೂ ಪಾಲುಗೊಳ್ಳು ವಂಥ ಅವಶ್ಯಕತೆ ಇರುವುದರಿಂದ, ಬೇರೆ ಒಂದು ಭಾಗದವರಿಗೂ ಇದೇ ಒಂದು ತ್ಯಾಗಬುದ್ಧಿ ಇರಬೇಕು. ಅದಿಲ್ಲದೆ ಬೇರೆ ಧೋರಣೆಯನ್ನು ಹೂಡಿದ್ದೇ ಆದರೆ, ಅದು ನ್ಯಾಯವಾಗಿ ತೋರಿ ಬರುವುದಿಲ್ಲ. ಈ ದೃಷ್ಟಿಯಿಂದ, ಕೊಡಗಿನ ಜನತೆಯ ಹಿತದೃಷ್ಟಿಯಿಂದ ನಾನು ಕಡೆಯದಾಗಿ ಒಂದೇಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಶ್ರೀಮಾನ್ ಅಂದಾನಪ್ಪ ದೊಡ್ಡ ಮೇಟಿಯವರು, ಕರ್ನಾಟಕವನ್ನು ಎರಡು ಭಾಗ ಮಾಡಬೇಕಾಗಿದ್ದರೆ, "It must be done on my dead body" ಎಂದು ಹೇಳುತ್ತಿದ್ದಾರೆ. ಅದೇರೀತಿ ಕಂಬದಕಡವನ್ನು ಕಟ್ಟಬೇಕಾದರೆ it must be constructed on the dead body of Coorg people, ಅಂತ ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಶ್ರೀ ದೇವೇಗೌಡರು ತಂದಿರ ತಕ್ಕಂಥ ಈ ನಿರ್ಣಯವನ್ನು ಪೂರ್ಣ ಮನಸ್ಸಿನಿಂದ ಅನುಮೋದಿಸುತ್ತಾ, ಇದು ಅತಿಮುಖ್ಯವಾದ ನಿರ್ಣಯ ಎಂದು ಹೇಳುತ್ತೇನೆ. 16 ವರ್ಷಗಳ ಹಿಂದೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ಸರ್ಕಾರ ಇದಕ್ಕೆ ಎಲ್ಲ ಸಮಸ್ಯೆಗಳಿಗಿಂತಲೂ ಹೆಚ್ಚು ಆದ್ಯತೆ ಕೊಡಬೇಕಾಗಿತ್ತು. ಅವರು ತಪ್ಪು, ಮಾಡಿದರು. ಕಾವೇರಿನದಿ ನಮ್ಮ ದೇಶದ ಜೀವನಾಡಿ ಆಗಿದೆ, ಕಾವೇರಿ ಹೆಸರು ಮನೆಮನೆಯಲ್ಲಿ ಯೂ ಕೂಡ, ಮನೆಮಾತಾಗಿದೆ. ಇದು ಅವರ ದೃಷ್ಟಿಯಲ್ಲಿ ಇದ್ದರೂ ಕೂಡ, ಏತಕ್ಕೋಸ್ಕರ ಈ ಕಾವೇರಿ ನೀರಾವರಿ ಕೆಲಸಗಳನ್ನು ಕೈಬಿಟ್ಟರೋ ನಮಗೆ ಅರ್ಥವಾಗುವುದಿಲ್ಲ. ಕೃಷ್ಣರಾಜಸಾಗರ ಎಲ್ಲರ ಮನಸ್ಸನ್ನೂ ಸೆಳೆಯತಕ್ಕಂಥ ಒಂದು ಮಹಾ ಸರೋವರವಾಗಿದೆ ನಮ್ಮ ದೇಶದಲ್ಲಿ. ಇದರ ಪ್ರತಿಫಲವನ್ನು ಉಣ್ಣತಕ್ಕಂಥ ನಮ್ಮ ಮೈಸೂರುದೇಶದ ಜನತೆಯನ್ನು ಪ್ರತಿನಿಧಿಸತಕ್ಕಂಥ ಈ ಒಂದು ಸರ್ಕಾರ, ಕಾವೇರಿವಿಷಯಲ್ಲಿ ಏತಕ್ಕೆ ಈ ಧೋರಣೆ ತಾಳಿತೋ; ಇದು ನಮ್ಮ ದುರ್ದೈವ. ನಿಧಾನವಾದರೂ ಪರವಾಗಿಲ್ಲ. 1924ನೆ ಇಸವಿಯಲ್ಲಿ ಅಗ್ರಿಮೆಂಟ್ ಮದ್ರಾಸ್ ಮತ್ತು ನಮ್ಮ ಸರ ಕಾರಕ್ಕೆ ಆದಾಗ, ಇದ್ದ ಕೆಲವು ಅಧಿಕಾರಿಗಳು ಈಗಲೂ ನಮ್ಮ ಸರ್ಕಾರದಲ್ಲಿ ಬಹುಶಃ ಇದ್ದಾರೆ. ಅಥವ ಅವರು ಇಲ್ಲದೆ ಇದ್ದರೂ ಕೂಡ ನಮ್ಮ ಸರ್ಕಾರಕ್ಕೆ ಅವರು ನಿರ್ದೇಶನ ಕೊಡುತ್ತಿದ್ದಾರೆಂದು ಭಾವಿಸುತ್ತೇನೆ. ಇಂಥ ಅಧಿಕಾರಿಗಳು ಬಹಳ ಮುಖ್ಯವಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ, ತಕ್ಕ ಸಲಹೆಗಳನ್ನು ಕೊಡುವುದಕ್ಕೆ ಏತಕ್ಕೆ ಅವಕಾಶಕಲ್ಪಿಸಿಕೊಡಲಿಲ್ಲವೆಂದು ನಾನು ತಮ್ಮನ್ನು ಕೇಳಿ, ಆಕಡೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

1924ನೇ ಇಸವಿಯ ಅಗ್ರಿಮೆಂಟ್ ಪ್ರಕಾರ ಮದ್ರಾಸ್ ರಾಜ್ಯಕ್ಕೂ ನಮಗೂ ಕಾವೇರಿ ಮತ್ತು ಅದರ ಉಪನದಿಗಳ, ನೀರಿನ ಉಪಯೋಗದಲ್ಲಿ ಆಗಿರುವ ಒಪ್ಪಂದದ ಪ್ರಕಾರ ನಾವು ಎಲ್ಲ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಅಣೆಕಟ್ಟುಗನ್ನೂ 1974ನೇ ಇಸವಿ ಫೆಬ್ರವರಿ ತಿಂಗಳ 18ನೆ ತಾರೀಖಿನೊಳಗಾಗಿ ಕಟ್ಟಿ ಮುಗಿಸಬೇಕು. ಎಂದರೆ ಕೇವಲ 10 ವರ್ಷ ಕೂಡ ಇಲ್ಲ. ಇಷ್ಟು ಅವಧಿಯಲ್ಲಿ ಇಂಥ ಬೃಹತ್ ಯೋಜನೆಗಳನ್ನು ಕಾರ್ಯಗತಮಾಡಿ ಜಯಶೀಲರಾಗಲು ಸರ್ಕಾರ ಹಗಲಿರುಳೂ ಎಷ್ಟು ದುಡಿಯಬೇಕು ಎಂಬುದನ್ನು ಆಲೋಚನೆ ಮಾಡಬೇಕು. ಸರ್ಕಾರದವರು ಈ ವಿಷಯದಲ್ಲಿ ಯಾವ ಯೋಚನೆಯನ್ನೂ ಮಾಡಿಲ್ಲ ಎಂದು ಬಹಳ ಖಿನ್ನ ಮನಸ್ಸಿನಿಂದ ಹೇಳಬೇಕಾಗಿದೆ. ಕೃಷ್ಣಾ ಮತ್ತು ಕಾವೇರಿ ನದಿಗಳು ನಮ್ಮ ಮೈಸೂರು ದೇಶದ ಅಥವಾ ಕರ್ಣಾಟಕದ ಎರಡು ಕಣ್ಣುಗಳಿದ್ದಹಾಗೆ. ಈ ಕಣ್ಣುಗಳಲ್ಲಿ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚುತ್ತಿದ್ದಾರೆ. ಒಂದೇ ಒಂದು ಉದಾಹರಣೆ ಹೇಳಬೇಕು ಎಂದರೆ ಸರ್ಕಾರದವರು ಬಹಳ ಕಷ್ಟಪಟ್ಟು ಎಲ್ಲ ಅಂಶಗಳನ್ನೂ ಕ್ರೋಢೀಕರಿಸಿ ಕೃಷ್ಣಾ-ಗೋದಾವರಿ ನದಿಗಳಿಗೆ ಸಂಬಂಧಪಟ್ಟಂತೆ ಒಂದು ಮೆಮೊರಾಂಡಂ ಹೊರಡಿಸಿದ್ದಾರೆ. ಇಂಥದೇ ಮೆಮೊರಾಂಡಂ ಕಾವೇರಿ ಮತ್ತು ಅದರ ಉಪನದಿಗಳ ಸಂಬಂಧದಲ್ಲಿ ಏಕೆ ಒದಗಿಸಲಿಲ್ಲ ಎಂದು ಕೇಳುತ್ತೇನೆ. ಅವರಿಗೆ ಇದರಲ್ಲಿ ಶ್ರದ್ಧೆ ಇಲ್ಲ, ಶ್ರದ್ಧೆ ಇಲ್ಲದೆ ಇರುವುದರಿಂದ ಅವರು ಒಂದು ಮೆಮೊರಾಂಡಂ ಮಾಡಿಲ್ಲ. ದಯವಿಟ್ಟು ಇನ್ನು ಮುಂದಾದರೂ ಕೂಡ ಇದಕ್ಕೆ ಹೆಚ್ಚು ನಿಗಾಕೊಟ್ಟು ಎರಡನ್ನೂ ಒಂದೇ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕೆಂದು ಅವರಿಗೆ ಒತ್ತಿ ಹೇಳುತ್ತೇನೆ.

ಮೊನ್ನೆಯ ದಿನ ಇದೇ ಸಭೆಯಲ್ಲಿ ಒಂದು ಪ್ರಶ್ನೆ ಬಂದಾಗ ಕೇವಲ 176 ಟಿ.ಎಂ.ಸಿ.ಎಫ್‌ಟಿ. ನೀರಿನ ಉಪಯೋಗ ಹೊಂದಬೇಕು ಎಂದು ಸರ್ಕಾರದವರು ಹೇಳಿದ್ದಾರೆ. ಮದ್ರಾಸ್ ಒಪ್ಪಂದದ ಪ್ರಕಾರ 45 ಟಿ.ಎಂ.ಸಿ.ಎಫ್‌ಟಿ. ನೀರಿನ ಉಪಯೋಗವನ್ನು ಕೇವಲ 1974ನೇ ಇಸವಿಯೊಳಗಾಗಿ ಹೊಂದಲೇಬೇಕು. ಅದರಿಂದ ಒಂದು ಲಕ್ಷ 10 ಸಾವಿರ ಎಕರೆ ಜಮೀನನ್ನು ನೀರಾವರಿ ಮಾಡಬಹುದು. ಹಾಗೆಮಾಡದೆ ಹೋದರೆ ನಾವು ಮುಂದೆ ಅಂಥ ಒಂದು ಅವಕಾಶವನ್ನು ಹೊಂದುವುದಕ್ಕೆ ಸಾಧ್ಯವಿಲ್ಲ ಎಂಬುದು ಖಚಿತವಾಗಿ ಸರ್ಕಾರಕ್ಕೂ ಮನವರಿಕೆಯಾಗಿದೆ. ದೇಶಾದ್ಯಂತ ಎಲ್ಲರೂ ಇದನ್ನು ತಿಳಿದುಕೊಂಡಿದ್ದಾರೆ. ಇಂಥ ಸ್ಥಿತಿಯಲ್ಲಿಯೂ ಕೂಡ ಸರ್ಕಾರದವರು ಕಣ್ಣುಮುಚ್ಚಿಕೊಂಡು ಕುಳಿತಿರುವುದಕ್ಕೆ ಕಾರಣವೇನು ? 45 ಟಿ.ಎಂ.ಸಿ.ಎಫ್‌ಟಿ. ನೀರನ್ನು ಉಪಯೋಗಿಸಲು ನೀರಾವರಿ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಕೋಟಿ ರೂಪಾಯಿ ಬೇಕು, ಆ ದುಡ್ಡನ್ನು ಹೇಗೆ ಒದಗಿಸಬೇಕು, ಇದಕ್ಕೆ ಪ್ಲಾನ್ಸ್ ಮತ್ತು ಅಂದಾಜುಗಳನ್ನು ತಯಾರುಮಾಡುವುದಕ್ಕೆ ಏನು ಪ್ರಯತ್ನವನ್ನು ಮಾಡಬೇಕು, ಇದನ್ನೆಲ್ಲ ದಯವಿಟ್ಟು ಹೇಳಬೇಕು. ಬಾಯಿ ಮಾತಿನಲ್ಲಿ ಹೇಳುವುದರಿಂದ ಏನೂ ಉಪಯೋಗವಿಲ್ಲ, ಏನು ಮಹಾ ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನು ದಯವಿಟ್ಟು ತೋರಿಸಬೇಕು, ಕಣ್ಣು ಒರಸತಕ್ಕ ಒಂದು ಜವಾಬನ್ನು ಹೇಳದಂತೆ ತಮ್ಮ ಆತ್ಮವನ್ನು ಮುಟ್ಟಿ ನೋಡಿಕೊಂಡು ಉತ್ತರವನ್ನು ಹೇಳಬೇಕು. ಮೀಡಿಯಂ ಮತ್ತು ಮೇಜರ್ ಪ್ರಾಜೆಕ್ಟ್‌ಗಳಲ್ಲಿ 14 ಪ್ರಾಜೆಕ್ಟ್‌ಗಳಿವೆ. ಮೂರನೆಯ ಯೋಜನೆಯಲ್ಲಿ ಹೇಮಾವತಿ ಪ್ರಾಜೆಕ್ಟ್ ಒಂದು ಮಾತ್ರ ಇದೆ. ಇನ್ನು ಯಾವುದೂ ಕಾಣುತ್ತ ಇಲ್ಲ. ಹೇಮಾವತಿ ಯೋಜನೆಯಲ್ಲಿ ಅವರ ಅಂದಾಜು ಪ್ರಕಾರ 4 ಟಿ.ಎಂ.ಸಿ.ಎಫ್‌ಟಿ. ನೀರನ್ನು ಒದಗಿಸತಕ್ಕ ಜಲಾಶಯವನ್ನು ನಿರ್ಮಿಸತಕ್ಕ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದನ್ನು ದೊಡ್ಡದು ಮಾಡತಕ್ಕ ಯೋಜನೆ ನಮಗೆ ಕಾಣುತ್ತಿಲ್ಲ ಈ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ಇಷ್ಟು ನಿಧಾನವಾಗಿ ಹೋದರೆ 1974ನೆ ಇಸವಿಯೊಳಗೆ 45 ಟಿ ಎಂ.ಸಿ.ಎಫ್‌ಟಿ. ನೀರನ್ನು ಒದಗಿಸತಕ್ಕ ಬೃಹತ್ ನೀರಾವರಿ ಕಾಮಗಾರಿಗಳನ್ನು ಮಾಡಿ ಮುಗಿಸಲು ಸಾಧ್ಯವೇ ? ಅದೇ ಮದ್ರಾಸ್ ಕಡೆ ನೋಡಿ, ಅವರು ಏನು ಮಾಡುತ್ತಿದ್ದಾರೆ. ಅವರು ನಮ್ಮ ಮೇಲೆ ಹತೋಟಿಯನ್ನು ಇಟ್ಟುಕೊಂಡಿದ್ದಾರೆ. ಪ್ರತಿ ಘಳಿಗೆಯಲ್ಲಿಯೂ ನಾವು ಏನು ಮಾಡುತ್ತಿದ್ದೇವೆಂದು ನೋಡುತ್ತಿದ್ದಾರೆ. ನಾವಾದರೂ ಅವರ ಮೇಲೆ ಏನೂ ಹತೋಟಿಯನ್ನು ಇಟ್ಟುಕೊಂಡಿಲ್ಲ. ಅವರು ಹಿಂದೆ ಆಗಿರುವ ಒಪ್ಪಂದದ ಪ್ರಕಾರ ಸುಮಾರು ಮೂರು ಲಕ್ಷ ಎಕರೆ ಭೂಮಿಗೆ ನೀರು ಹಂಚತಕ್ಕ ಹಕ್ಕು ಇದೆ. ಇವತ್ತು ಅದಕ್ಕಿಂತಲೂ ಹೆಚ್ಚಾಗಿ ಎಂದರೆ ಸುಮಾರು ಐದು ಲಕ್ಷ ಎಕರೆಗೆ ನೀರಾವರಿ ಅನುಕೂಲವನ್ನು ಕಲ್ಪಿಸಿಕೊಂಡಿದ್ದಾರೆ ಎಂದು ವರ್ತಮಾನ ಕೇಳುತ್ತೇವೆ. ಇದನ್ನು ತಡೆಗಟ್ಟುವುದಕ್ಕೆ ಮೈಸೂರು ಸರ್ಕಾರ ಏನು ಮಾಡಿದೆ ? ಈಗಲಾದರೂ ನಮ್ಮ ಸರ್ಕಾರದವರು ಎಚ್ಚತ್ತು ಶೀಘ್ರವಾಗಿ, ಚುರುಕಾಗಿ ಕಾವೇರಿಗೆ ಸಂಬಂಧಪಟ್ಟ ಯೋಜನೆಯನ್ನು ಕಾರ್ಯಗತಮಾಡಬೇಕು. ತಮ್ಮ ಶ್ರದ್ಧೆ, ಆಸಕ್ತಿ ಮತ್ತು ಸಂಯಮ ಇವುಗಳನ್ನು ಇವತ್ತು ದೇಶಕ್ಕೆ ತೋರಿಸಿಕೊಡಬೇಕು ಎಂದು ನಾನು ಅವರಿಗೆ ಪ್ರಾರ್ಥನೆ ಮಾಡುತ್ತೇನೆ.

ಹಾರಂಗಿ ಮತ್ತು ಕಂಬದಕಡ ವಿಷಯ ತೆಗೆದುಕೊಂಡರೆ, ಕಂಬದಕಡ ಯೋಜನೆ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಕೊಡಗಿಗೆ ಅನ್ಯಾಯ ಮಾಡದಂತೆ ಮೈಸೂರು ದೇಶಕ್ಕೆ ಉಪಕಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದು ಒಂದು ನ್ಯಾಯ

ವಾದ ವಾದ. ಆದರೂ ಕೂಡ ಕೆಲವರ ತ್ಯಾಗದಿಂದ ಕೆಲವರು ಭೋಗಿಗಳಾಗಬೇಕು. ಅದು ಪ್ರಪಂಚದ ನಿಯಮ. ಗಾಂಧೀಜಿಯವರ ತ್ಯಾಗದಿಂದ ನೀವೆಲ್ಲ ಭೋಗಿಗಳಾಗಿದ್ದೀರಿ. ಹಾಗೆಯೇ ಕೊಡಗಿನವರ ತ್ಯಾಗದಿಂದ ಇಡೀ ದೇಶದ ಜನರು ಭೋಗಿಗಳಾಗತಕ್ಕ ಒಂದು ಅವಕಾಶವಿದೆ. ಅಷ್ಟಕ್ಕೆ ಅವರು ತಯಾರಾಗಬೇಕು. ಇಷ್ಟೇ ನನ್ನ ಅರಿಕೆ.

ಹಾರಂಗಿ ವಿಷಯದಲ್ಲಿ ಶ್ರೀ ಅಪ್ಪಣ್ಣನವರು ಹೇಳಿದರು. ಅದರ ಬಗ್ಗೆ ದೊಡ್ಡದಾಗಿ ಗಲಭೆ ನಡೆದಿದೆ. ಕಂಬದಕಡ ಮತ್ತು ಹಾರಂಗಿ ಎರಡರ ಸಂಬಂಧದಲ್ಲಿಯೂ ಕೂಡ ಪ್ರೊಟೆಕ್ಷನ್ ಆಫ್ ಕೂರ್ಗ್ ಕಮಿಟಿ ಎಂದು ಮಾಡಿಕೊಂಡು 20-12-1960ರಲ್ಲಿ ಭಾರತದ ರಾಷ್ಟ್ರಾಧ್ಯಕ್ಷರಿಗೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಅವರು ಹೇಳತಕ್ಕದ್ದು ಎಲ್ಲ ಅಡಕವಾಗಿದೆ. ಉತ್ಪ್ರೇಕ್ಷೆ ಮಾಡಿಲ್ಲ. ಹಾರಂಗಿ ಅಣೆಕಟ್ಟನ್ನು ಎಲ್ಲಿ ಕಟ್ಟಬೇಕೆಂದು ನಿರ್ಣಯ ಮಾಡಿದ್ದಾರೆಯೋ ಅದೇ ಸರ್ವೋತ್ಕೃಷ್ಟವಾದುದು ಎಂದು ಹೇಳುತ್ತೇನೆ. ಮೈಸೂರು ಸರ್ಕಾರದವರು 1961ನೇ ಇಸವಿಯಲ್ಲಿ ಒಂದು ನೋಟ್ ಹೊರಡಿಸಿದ್ದಾರೆ. ಅದರ ಪ್ರಕಾರ ಹಾರಂಗಿ ಯೋಜನೆ ಈಗ ಚುನಾಯಿಸಿರುವುದೇ ಉತ್ತಮ ಸೈಟ್, ಅದಕ್ಕಿಂತ ಉತ್ತಮವಾದ ಸೈಟ್ ಇನ್ನೊಂದಿಲ್ಲ ಎಂದು ಹೇಳಿದ್ದಾರೆ. ಸೆಂಟ್ರಲ್‌ವಾಟರ್, ಇರಿಗೇಷನ್ ಅಂಡ್ ನ್ಯಾವಿಗೇಷನ್ ಕಮಿಷನ್ನಿನವರು 13 ಸೈಟುಗಳನ್ನು ನೋಡಿ ವಿಮರ್ಶೆಮಾಡಿ ಕೊನೆಗೆ ಹರದೂರು ಬಹಳ ಉತ್ಕೃಷ್ಟವಾದ ಸ್ಥಳ ಎಂದು ಅವರು ತೀರ್ಮಾನಕ್ಕೆ ಬಂದಿದ್ದಾರೆ.

Survey Report by the Central Water Irrigation and Navigation Commission—1949-51 :

> "It could thus be seen that while the project reservoir across Harangi as originally envisaged by the erstwhile Coorg provide for 6,000 acres submerging 1,729 acres, this one possesses 1,05,000 acres comprising of 20,000 of sugar cane, 61,000 acres of paddy and 24,000 acres of irrigated dry. The extra submersion is just about 3,000 acres and extra benefit will be about 1,00,000 acres."

ನೀರು ಮುಳುಗಡೆ ಆಗುವುದು 3,000 ಎಕರೆ ಪ್ರಯೋಜನವಾಗುವುದು ಒಂದು ಲಕ್ಷ ಎಕರೆಗೆ. ಹೀಗಿರುವಾಗ ಅವರು ತ್ಯಾಗ ಮಾಡುವುದಕ್ಕೆ ಸಿದ್ಧರಾಗಿರಬೇಕೋ ಬೇಡವೋ ಎಂಬುದನ್ನು ತಾವಾದರೂ ಯೋಚನೆ ಮಾಡಬೇಕು. ಹಾರಂಗಿಯಲ್ಲಿ Percentage of submersion to irrigation is : 5 per cent. Number of villages to be sumerged—one village. ಹೀಗಿರುವಾಗ ಏನು ತೊಂದರೆಯಾಗುತ್ತದೆ ಎನ್ನುವುದನ್ನು ಅವರೇ ಆಲೋಚನೆ ಮಾಡಬೇಕು.

4-00 P.M.

The project referred to in para 2 was inspected and examined by the Planning Technical Advisory Committee. Haradur site was selected best for storage dam on considerations of economy, technical suitability and extensive command by the immediate submersion of upper level of Harangi river at Haradur higher than at Hudugur. This position is specially advantageous from the point of view of irrigable command and power development. ಎಂದು ಹೇಳಿದ್ದಾರೆ. ಅಲ್ಲಿಂದ ಮುಂದೆ ಬಂದರೆ ಹರದೂರು ಮತ್ತು ಹುದಗೂರು ಎರಡನ್ನೂ ತೆಗೆದುಕೊಂಡರೆ, ಹುದಗೂರಿನ ಹತ್ತಿರ ಕಟ್ಟಿದರೆ 9,700 ಎಕರೆ ಮುಳುಗಡೆಯಾಗುತ್ತದೆ. ಅಲ್ಲದೆ,

The proposed project will utilise only 24 t. m. c. ft. out of a total estimated yield of 48 t. m. c. ft. The revenue return from the project is 4.7 per cent as against 1.5 per cent and 2.5 per cent obtaining in most of the other parts in Mysore and elsewhere.

(ಶ್ರೀ ಎಚ್. ಆರ್. ಕೇಶವಮೂರ್ತಿ)

ಕಾವೇರಿ ಯೋಜನೆಗಳಲ್ಲಿ ಹೇಮಾವತಿ ಮತ್ತು ಹಾರಂಗಿ ಮುಖ್ಯವಾದುವು. ಹತ್ತು ವರ್ಷಗಳಲ್ಲಿ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಹಗಲೂ ರಾತ್ರಿ ನಾಗಾಲು ಓಟದಿಂದ ಓಡಿದರೆ ಮಾತ್ರ ಸಾಧ್ಯ. ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ ಬೆಗ್, ಬಾರೋ ಆರ್ ಸ್ಟೀಲ್, ಏನಾದರೂ ಮಾಡಿ ಹಣವನ್ನೊದಗಿಸಿಕೊಳ್ಳಬೇಕು. Either you beg, borrow or steal. It is the duty of the Government to get money for this.

Mr. SPEAKER.—I will not permit anybody to encourage the last on the floor of the House.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಹಣವನ್ನೊದಗಿಸುವುದು ಸರಕಾರದ ಜವಾಬ್ದಾರಿ. ದಕ್ಷತೆಯಿಂದ ಸರಕಾರ ಆಡಳಿತ ನಡೆಸಿದರೆ, ಶೇಕಡ 4.7 ಪ್ರತಿಫಲವಿರುವಾಗ ಜನರು ಸರಕಾರಕ್ಕೆ ಸಾಲವನ್ನು ಕೊಡುತ್ತಾರೆ; ಸಾಲ ತರಬಹುದು ಅಥವಾ ಬೇರೆ ಕಡೆ ಕೈಗಾರಿಕೆ ಮತ್ತು ಇತರ ವ್ಯವಹಾರಗಳಿಗೆ ಕೋಟಿಗಟ್ಟಲೆ ಖರ್ಚು ಮಾಡುತ್ತಿರುವಾಗ ಇಂತಹ ಒಂದು ಒಳ್ಳೆಯ ಯೋಜನೆಗೆ ಖರ್ಚು ಮಾಡಲು ಹಿಂತೆಗೆಯಬಾರದು. ಇದು ದೇಶದ ಜೀವ ನಾಡಿ. ಇದಕ್ಕೆ ಬೇಕಾದ ಹಣವನ್ನು ಸರಕಾರ ಒದಗಿಸಿ ಇದನ್ನು ಬೇಗ ಪ್ರಾರಂಭ ಮಾಡಬೇಕು. ಮತ್ತು ಅನ್ಯಾಯವಾಗಿ ಖರ್ಚು ಮಾಡತಕ್ಕ ಅನೇಕ ವ್ಯವಹಾರಗಳನ್ನು ನಿಲ್ಲಿಸಬೇಕು. ಉದಾಹರಣೆಗೆ, ಎನ್. ಇ. ಎಸ್.ನಲ್ಲಿ ಹಣ ಅನ್ಯಾಯವಾಗಿ ಹೊಳೆ ಹರಿದುಹೋಗುವಂತೆ ಹೋಗುತ್ತಿದೆ. ಕೇಂದ್ರ ಸರಕಾರವನ್ನು ಕೇಳುವುದರ ಮೂಲಕ, ಅನ್ಯಾಯವಾಗಿ ಖರ್ಚಾಗುವುದನ್ನು ತಡೆಗಟ್ಟುವುದರ ಮೂಲಕ, ಹಣವನ್ನು ಸೇರಿಸಲು ಪ್ರಯತ್ನ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ, ಕಾವೇರಿಗೆ ಸಂಬಂಧಪಟ್ಟ ಹಾಗೆ ಅನೇಕ ಮಿತ್ರರು ಹೇಳಿದ್ದಾರೆ. ಬರಿಯ ಯೋಜನೆಗಳನ್ನು ನಂಬಿದರೆ ಸಾಲದು; ಕೆಲಸವನ್ನು ಪ್ರಾರಂಭ ಮಾಡಿ ಕೂಡಲೆ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. 1974 ರೊಳಗೆ ಮುಗಿಸಬೇಕು. ಮುಂಗೈಬಿಟ್ಟು ಮೊಳಕೈ ಹಿಡಿದುಕೊಳ್ಳುವುದು ಎಂದು ನಮ್ಮಲ್ಲಿ ಒಂದು ಗಾದೆ ಇದೆ. ಮದರಾಸು ಸರಕಾರದವರು ನಮ್ಮ ಸರಕಾರದ ಕಣ್ಣಿಗೆ ಮಣ್ಣು ಹಾಕಿ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡಿದ್ದಾರೆ. ಹೀಗಿರುವಾಗ 1974 ಆದಮೇಲೆ ನಮ್ಮ ಭಾಗವನ್ನು ನಾವು ಉಪಯೋಗ ಮಾಡುವುದಕ್ಕೆ ಒಪ್ಪುತ್ತಾರೆಯೆ ಎಂಬುದನ್ನು ಯೋಚನೆ ಮಾಡಬೇಕು. ಅಲ್ಲದೆ ಆಗ ನಾವು ಕೇಂದ್ರ ಸರ್ಕಾರದ ತೀರ್ಮಾನಕ್ಕೆ ಕಾಯಬೇಕಾಗುತ್ತದೆ. ಆದುದರಿಂದ 1974 ರೊಳಗೆ ಎಲ್ಲ ಯೋಜನೆಗಳನ್ನೂ ನಾವು ಕಾರ್ಯಗತ ಮಾಡಬೇಕು. ಈ ಬಗ್ಗೆ ಸರಕಾರದವರು ಬದ್ಧಕಂಕಣರಾಗಬೇಕು. ಮೂರನೆಯ ಸಂಬಂಧವಾಗಿರುವ ವಿಚಾರಗಳನ್ನು ನೋಡಿದರೆ, ಕಾವೇರಿಗೆ ಸಂಬಂಧಪಟ್ಟ ಹಾಗೆ ಯಗಚಿಯನ್ನು ಕೈಬಿಟ್ಟಿದ್ದಾರೆ. 1882ರಲ್ಲಿ ಹೇಮಾವತಿ, ಯಗಚಿ, ಹೊನ್ನುಹೊಳೆ ಮುಂತಾದ ಕಾವೇರಿಯ ಐದು ಉಪ ನದಿಗಳನ್ನು ತೆಗೆದುಕೊಂಡಿದ್ದಾರೆ, ಆದರೆ ಇದರಲ್ಲಿ ಯಗಚಿಯನ್ನು ಬಿಟ್ಟಿದ್ದಾರೆ. ಕಾವೇರಿಯ ಪಾತ್ರದಲ್ಲಿ ಯಗಚಿ ಬಹು ಮುಖ್ಯವಾದುದು. ಇದಕ್ಕೆ ಅಡ್ಡ ಕಟ್ಟೆ ಹಾಕಿ ನೀರಾವರಿ ಕೆಲಸವನ್ನು ಮಾಡಿದರೆ, ಇದರಿಂದ ಬರತಕ್ಕ ನೀರಿನಿಂದ ಮಳೆ ಕಡಮೆ ಬರುವ ಬಯಲು ಸೀಮೆಗೆ ಬಹಳ ಅನುಕೂಲವಾಗುತ್ತದೆ. ಅರಸೀಕೆರೆ, ಹೊಸದುರ್ಗ, ತುಮಕೂರು, ತಿಪಟೂರು ಮುಂತಾದ ಕ್ಷಾಮಪೀಡಿತ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಕಂಬದಕಡ, ಹಾರಂಗಿ, ಮುಂತಾದ ಯೋಜನೆಗಳನ್ನು ಮಾಡುವುದರಿಂದ ಮಲೆನಾಡಿಗೆ ಅನುಕೂಲವಾಗುತ್ತದೆ. ಯಗಚಿ ಯೋಜನೆ ಮಾಡಿದರೆ ಬಯಲು ಸೀಮೆಗೆ ಅನುಕೂಲವಾಗುತ್ತದೆ. ಆದುದರಿಂದ ಯಗಚಿ ಯೋಜನೆಯನ್ನು ತೆಗೆದುಕೊಳ್ಳಲೇಬೇಕು. ಈಗ ಸರಕಾರ ತಪ್ಪು ಮಾಡಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ಶೀಘ್ರದಲ್ಲಿ ಅಲ್ಲಿ ಒಂದು ಬೃಹತ್ ಪ್ರಮಾಣದ ಜಲಾಶಯ ಕಟ್ಟುವುದಕ್ಕೆ ಏರ್ಪಾಡು ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ಇನ್ನು ನಾನ್‌ಷೆಡ್ಯೂಲ್ಡ್ ನದಿಗಳಿಗೆ ಕಟ್ಟೆಗಳನ್ನು ಕಟ್ಟಿ 45 ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗಿಸಿಕೊಂಡು ಲಕ್ಷಾಂತರ ಎಕರೆ ಪ್ರದೇಶದಲ್ಲಿ ಸಾಗುವಳಿ ಮಾಡಬಹುದು. 5 ಲಕ್ಷ ಎಕರೆಯನ್ನು ಕಾವೇರಿಯಿಂದ ಮಾಡಬಹುದು. ಇಷ್ಟು ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಸರಕಾರ ಪ್ರಯತ್ನ ಮಾಡದೇಯಿರುವುದನ್ನು ನೋಡಿದರೆ ತಲೆ ಬಗ್ಗಿಸಬೇಕಾಗುತ್ತದೆ. ಈಹೊತ್ತಿನಿಂದಲೇ ಕಾರ್ಯೋನ್ಮುಖರಾಗಿ ಕೆಲಸಗಳನ್ನು ಪ್ರಾರಂಭಿಸಬೇಕು. ಹಿಂದೆ ಸಮುದ್ರವನ್ನೇ ಆಪೋಶನ ತೆಗೆದುಕೊಂಡ ಅಗಸ್ತ್ಯರಿದ್ದರು; ಈಗ ಶ್ರೀಮಾನ್ ನಿಜಲಿಂಗಪ್ಪನವರು ಅಗಸ್ತ್ಯರಾಗಬೇಕು. ಹಾಗೆ ಮಾಡಿದರೆ ಮದರಾಸು ಸರಕಾರಕ್ಕೆ ಬುದ್ಧಿ ಕಲಿಸಬಹುದು.

ಹೇಮಾವತಿ ಪ್ರಾಜೆಕ್ಟಿನ ವಿಷಯದಲ್ಲಿ ಅದರ ಮಟ್ಟವನ್ನು ಕಡಿಮೆ ಮಾಡಬೇಕೆಂದು ತಾವು ಆಲೋಚನೆ ಮಾಡಿದ್ದೀರಿ. ಹೇಮಾವತಿಯಿಂದ ಬರತಕ್ಕ ನೀರನ್ನು ತಿಪಟೂರು ತಾಲ್ಲೂಕಿನಿಂದ ಹಿಡಿದು ನಾಗಮಂಗಲದವರೆಗೂ ಪಡೆಯುವುದಕ್ಕೆ ಅವಕಾಶವಿದೆ. ಇಂತಹ ಒಂದು ಪ್ರಾಜೆಕ್ಟನ್ನು ಮಾಡುವುದಕ್ಕೆ ಸಹಕಾರಿಯಾಗಲು ಶ್ರೀಮಾನ್ ಅಪ್ಪಣ್ಣನವರೂ ಕೂಡ ಸ್ವಲ್ಪ ತ್ಯಾಗ ಮಾಡಬೇಕು, ಹಾಸನ ಡಿಸ್ಟ್ರಿಕ್ಟ್‌ನವರೂ ಕೂಡ ತ್ಯಾಗ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಏಕೆಂದರೆ ತಾಯಿ ಊಟಕ್ಕೆ ಬಡಿಸುವಾಗ ಮಕ್ಕಳು ಊಟಮಾಡುವುದನ್ನು ನೋಡಿ ಆನಂದಪಡುತ್ತಾಳೆ, ತಾನು ಕೊನೆಗೆ ಊಟ ಮಾಡುತ್ತಾಳೆ. ಹಾಗೆ ಹಾಸನ ಡಿಸ್ಟ್ರಿಕ್ಟ್‌ನವರು ಮತ್ತು ಕೊಡಗು ಡಿಸ್ಟ್ರಿಕ್ಟ್‌ನವರು ಬಾಕಿ ಡಿಸ್ಟ್ರಿಕ್ಟ್‌ನವರನ್ನು ಮಕ್ಕಳಂತೆ ನೋಡಿ ಅವರಿಗೆ ಅನುಕೂಲವಾದುದನ್ನು ಮಾಡಿಕೊಡುವುದಕ್ಕೆ ಹಿಂಜರಿಯಬಾರದು. ಆದ್ದರಿಂದ ಹೇಮಾವತಿ ಪ್ರಾಜೆಕ್ಟ್‌ನ್ನು ಮೊದಲು ಯಾವ ಪ್ರಕಾರ ಅಂದಾಜಾಗಿತ್ತೋ ಆ ರೀತಿ ಮಾಡಬೇಕು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಕಾರಣದಿಂದಲೂ ಆ ಅಣೆಕಟ್ಟಿನ ಎತ್ತರವನ್ನು ತಗ್ಗಿಸದೇ ಮೊದಲು ಅಂದಾಜು ಆದ ಪ್ರಕಾರ ಕಟ್ಟಿದ್ದೇ ಆದರೆ ಬಯಲು ಸೀಮೆಯ ಕ್ಷಾಮ ಪೀಡಿತ ಪ್ರದೇಶಗಳಿಗೆ ಅನುಕೂಲವಾಗುತ್ತದೆ, ಇಲ್ಲದೇ ಇದ್ದರೆ ಸ್ವಲ್ಪವೂ ಕೂಡ ಅನುಕೂಲವಾಗುವುದಿಲ್ಲ. ಈ ವಿಷಯದಲ್ಲಿ ಚೀಫ್ ಮಿನಿಸ್ಟರ ಮನೆಗೂ ಕೂಡ ಹೋಗಿ ಅರಿಕೆ ಮಾಡಿಕೊಂಡೆವು. ಅವರೂ ಕೂಡ ನಮ್ಮ ಉದ್ದೇಶವನ್ನು ಒಪ್ಪಿಕೊಂಡರು. ತುಮಕೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಅಭಾವ ಪೀಡಿತ ಪ್ರದೇಶಗಳು ಇವೆ. ಅವಕ್ಕೆ ಹೇಮಾವತಿ ಬಹಳ ಪ್ರಾಮುಖ್ಯವಾದದ್ದು. ಅದನ್ನು ಯಾವ ಕಾರಣದಿಂದಲೂ ಕೂಡ ಕಟ್ಟಬೇಕಾಗಿರತಕ್ಕ ಎತ್ತರದ ಮಟ್ಟವನ್ನು ಕಡಿಮೆ ಮಾಡದಂತೆ ಕಟ್ಟುವುದು ಒಳ್ಳೆಯದು. ಒಟ್ಟಿನಲ್ಲಿ 1974ನೇ ಇಸವಿಯ ಹೊತ್ತಿಗೆ 45 ಟಿ. ಎಂ. ಸಿ. ಎಫ್. ಟಿ. ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ಕಾರ್ಯವನ್ನು ಕಾರ್ಯಗತ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಸರ್ವ ಪ್ರಯತ್ನವನ್ನೂ ಮಾಡಿ ಕೀರ್ತಿಗಳಿಸಬೇಕೆಂದು ಹೇಳುತ್ತಾ, ಇದಕ್ಕೆ ಬೇಕಾಗತಕ್ಕ ಹಣವನ್ನು ಶೇಖರಣೆ ಮಾಡಲು ಈ ಸಭೆಯಲ್ಲಿರತಕ್ಕ ಎಲ್ಲ ಪಕ್ಷದವರೂ ಕೂಡ ಅವರಿಗೆ ಬೆಂಬಲವನ್ನು ಕೊಡುತ್ತೇವೆ ಎಂದು ತಿಳಿಸಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ನನ್ನ ಸ್ನೇಹಿತರು ಶ್ರೀಮಾನ್ ದೇವೇಗೌಡರು ತಂದಿರುವ ಈ ನಿರ್ಣಯ ಬಹಳ ವ್ಯಾಪಕವಾದದ್ದು. ಈ ನಿರ್ಣಯದ ಮೂಲ ತತ್ವವನ್ನು ಒಪ್ಪದೇ ಇರಲಿಕ್ಕೆ ಯಾರಿಗೂ ಸಾಧ್ಯವಿಲ್ಲ, ಇದು ಎಲ್ಲರೂ ಒಪ್ಪಲೇ ಬೇಕಾದ ಮಾತು. ರಾಜ್ಯದೊಳಗಿನ ಬೇರೆ ಬೇರೆ ನದಿಗಳ ಯಾವತ್ತೂ ನೀರು ರೈತ ಜನಾಂಗಕ್ಕೆ ಉಪಯುಕ್ತವಾಗುವಂತಹ ರೀತಿಯಲ್ಲಿ ಸರಕಾರದವರು ಕ್ರಮ ಕೈಕೊಳ್ಳಬೇಕೆನ್ನುವುದರಲ್ಲಿ ಎರಡು ಅಭಿಪ್ರಾಯ ಬರಲಾರದು. ಶ್ರೀಮಾನ್ ದೇವೇಗೌಡರ ವಾದವನ್ನು ನಾನು ಕೇಳಿದೆನು. ಆ ವಾದ ಸರಣಿಯಲ್ಲಿ ಮಾತ್ರ ಕೆಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತಮಾಡದೇ ಇರಲಾರೆ. ಅದೇನೆಂದರೆ ಸರ್ಕಾರ ಒಂದು ಕಡೆ ಒಂದು ಅಭಿಪ್ರಾಯ ತಾಳಿದೆ, ಇನ್ನೊಂದು ಕಡೆ ಇನ್ನೊಂದು ಅಭಿಪ್ರಾಯ ತಾಳಿದೆ ಅನ್ನುವುದು. ನಮಗೆ ಸ್ವರಾಜ್ಯ ಬಂದು 17 ವರ್ಷವಾದರೂ ಇಂತಹ ಯೋಜನೆಗಳಿಗೆ ಒಂದು ನಿಶ್ಚಿತವಾದ ಸ್ವರೂಪ ಬರಲಿಲ್ಲ ಎಂಬ ಮಾತಿನಲ್ಲಿ ಏನೂ ವ್ಯತ್ಯಾಸ ಇಲ್ಲ. ಆದರೆ ಈ 17 ವರ್ಷಗಳಲ್ಲಿ—1956ನೇ ಇಸವಿ ನವೆಂಬರ್‌ವರೆಗೂ ಈ ನದಿಗಳ ಬಗ್ಗೆ ಸರಕಾರ ಏನು ಕಾರ್ಯಕ್ರಮವನ್ನು ಕೈಕೊಂಡಿತ್ತು; ಹತ್ತು ವರ್ಷ ಆದನಂತರ ಆ ಹಿಂದೆ ಕೈಕೊಂಡ ಕ್ರಮಗಳನ್ನು ಸರಕಾರದವರು ಮುಂದುವರಿಸಿಕೊಂಡು ಹೋಗಿದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಿದರೆ ಆ ರೀತಿ ವಾದ ಮಾಡಲಿಕ್ಕೆ ಒಂದು ಅವಕಾಶ ಆದೀತೇ ಅಂತ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಸರ್ಕಾರದವರು ಒಂದು ಮಾತನ್ನು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಬೇಕು. 1956ನೇ ಇಸವಿ ನವೆಂಬರ್ ಒಂದನೇ ತಾರೀಖಿನವರೆಗೂ ಕಾವೇರಿ ಹಾಗೂ ಅದರ ಉಪನದಿಗಳ ಬಗ್ಗೆ ಒಂದು ನಿಶ್ಚಿತವಾದ ಯೋಜನೆಯನ್ನು ಮಾಡಲಿಕ್ಕೆ ಆಗಿನ ಸರ್ಕಾರದವರು ಏನು ಕ್ರಮ ಕೈಕೊಂಡಿದ್ದರು ಆ ಕ್ರಮಗಳನ್ನು ಮುಂದುವರಿಸಲಿಕ್ಕೆ 1956ನೇ ನವೆಂಬರ್‌ನಿಂದ ಬಂದಂತಹ ಸರ್ಕಾರದವರು ಏನು ಪ್ರಯತ್ನ ಮಾಡಿದರು ಎಂಬುದನ್ನು ಹೇಳಿದರೆ ಅವರ ಯಾವ ಒಂದು ವಾದ ಇದೆ ಅದಕ್ಕೆ ಯಾವುದೇ ಒಂದು ಆಧಾರವೂ ಸಹ ಸಿಕ್ಕಲಿಕ್ಕೆ ಇಲ್ಲ ಎಂದು ನಾನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಈಗಾಗಲೇ ಅನೇಕ ಮಹನೀಯರು ಮಾತನಾಡಿದ್ದಾರೆ. ಇದರಲ್ಲಿ ಯಾವುದೇ ರೀತಿಯ ರಾಜಕೀಯವಾಗಲೀ ಪಕ್ಷಗಳ ಹಿತದೃಷ್ಟಿಯಿಂದ ಮಾಡಿರುವುದಾಗಲೀ ಯಾವುದೂ ಕೂಡ ನಡೆದಿಲ್ಲ. ಈ ಕಾರ್ಯಗಳನ್ನು ಮಾಡುವ ವಿಷಯದಲ್ಲಿ ಇದರ ಮೂಲ ತತ್ವವನ್ನು ಎಲ್ಲರೂ ಒಪ್ಪಲೇ ಬೇಕಾಗುತ್ತದೆ. ಆಯಾಯಾ ಜಿಲ್ಲೆಗಳವರಿಗೆ ಸ್ವಾಭಾವಿಕವಾಗಿ ತಮ್ಮ ತಮ್ಮ ಭಾಗದಲ್ಲಿ ಮುಳುಗಡೆ ಪ್ರದೇಶ ಹೆಚ್ಚಾಗುವುದರಿಂದ ತೊಂದರೆಯಾಗುತ್ತದೆ. ಈ ಕಾರಣಕ್ಕಾಗಿ ಕೆಲವು ಯೋಜನೆಗಳ ಬಗ್ಗೆ ಅಸಂತೃಪ್ತಿ ಇರುವುದು ಸಹಜ,

(ಶ್ರೀ ಎ. ಜಿ. ದೊಡ್ಡಮೇಟಿ)

ಹೇಮಾವತಿ ಬಗ್ಗೆ ಹಾಸನದವರು, ಕಂಬದಕಡದ ಬಗ್ಗೆ ಕೊಡಗಿನವರು ಆಕ್ಷೇಪಣೆ ಮಾಡುವುದು ಅಥವಾ ಕಳವಳವನ್ನು ವ್ಯಕ್ತಪಡಿಸುವುದು ಸ್ವಾಭಾವಿಕ. ಈ ಎಲ್ಲ ಯೋಜನೆಗಳಿಂದ ಎಲ್ಲ ಜನರು ಕಳವಳವನ್ನು ವ್ಯಕ್ತ ಮಾಡುತ್ತಾರೆ, ಆ ದೃಷ್ಟಿಯಿಂದ ವಿಚಾರ ಮಾಡದೇ ಇಡೀ ರಾಜ್ಯದ ಹಿತದೃಷ್ಟಿಯಿಂದ ಯಾವ್ಯಾವ ಯೋಜನೆಗಳು ಹೆಚ್ಚು ಫಲದಾಯಕವಾಗಿವೆ ಆರ್ಥಿಕ ದೃಷ್ಟಿಯಿಂದ ಧಾನ್ಯ ಮತ್ತು ಬೆಳೆಯ ಬೆಳವಣಿಗೆಯ ದೃಷ್ಟಿಯಿಂದ ಯಾವುದು ಹೆಚ್ಚು ಉಪಯುಕ್ತವಾದೀತು ಎಂಬ ಒಂದು ವಿಷಯಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಆ ದೃಷ್ಟಿಯಿಂದ ವಿಚಾರ ಮಾಡಬಹುದೇ ಹೊರತು ಯಾವುದೋ ಒಂದು ರಾಜಕೀಯ ಒತ್ತಡಕ್ಕೆ ಸರ್ಕಾರ ಬಗ್ಗುವುದಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡುವಲ್ಲಿ ನಾವು ಒಂದು ವ್ಯಾವಹಾರಿಕ ಮಾತನ್ನು ಇಲ್ಲಿ ವಿಚಾರ ಮಾಡುವುದು ಅವಶ್ಯಕವಾಗಿದೆ. ಈ ರಾಜ್ಯದೊಳಗಿನ ಅನೇಕ ನದಿಗಳಿಗೆ ಮತ್ತು ಉಪನದಿಗಳಿಗೆ ಕಟ್ಟೆಗಳನ್ನು ಕಟ್ಟಬೇಕಾಗಿದೆ. ಇದಕ್ಕೆ ಒಟ್ಟಾರೆ ಎಷ್ಟು ಹಣ ಬೇಕಾದೀತು, ಮಾಸ್ಟರ್ ಪ್ಲಾನ್ ಅಂತ ಏನಿದೆ ಆ ರೀತಿ ರಾಜ್ಯದೊಳಗಿನ ಎಲ್ಲಾ ನದಿಗಳ ನೀರಿನ ಉಪಯೋಗಕ್ಕೆ ಎಷ್ಟು ಕಟ್ಟಡಗಳ ನಿರ್ಮಾಣದ ಅವಶ್ಯಕತೆ ಇದೆ ಮತ್ತು ಅವುಗಳಿಗೆ ಎಷ್ಟು ಹಣ ಬೇಕಾದೀತು ಎಂಬ ಒಂದು ಮಾಸ್ಟರ್ ಪ್ಲಾನನ್ನು ಜನರ ಲಕ್ಷ್ಯಕ್ಕೆ ತರುವುದರ ಸಲುವಾಗಿ ಸರ್ಕಾರದವರು ಸಿದ್ಧಮಾಡಿ ಅದನ್ನು ನಮ್ಮ ಗಮನಕ್ಕೆ ತರುವುದು ಸರ್ಕಾರದವರ ಕರ್ತವ್ಯ ಎಂದು ನಮ್ರಪೂರ್ವಕವಾಗಿ ಹೇಳಲು ಬಯಸುತ್ತೇನೆ. ಶರಾವತಿ ಯೋಜನೆ ಪೂರ್ಣವಾಗಬೇಕಾದರೆ ಸುಮಾರು 300 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಮೊನ್ನೆ ಸರ್ಕಾರದ ವತಿಯಿಂದ ಹೇಳಲಾಯಿತು. ಹಾಗೆಯೇ ಬೇರೆ ಬೇರೆ ಯೋಜನೆಗಳಿಗೆ ಸುಮಾರು 5-6 ನೂರು ಕೋಟಿ ರೂಪಾಯಿಗಳು ಬೇಕು. ಇಷ್ಟು ಹಣ ಹೇಗೆ ಸರ್ಕಾರ ಒದಗಿಸಿಕೊಳ್ಳಬೇಕೆಂಬುದಕ್ಕೆ ಸಲಹೆ ಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ಇದಕ್ಕೆ ಸರ್ಕಾರಿ ಪಕ್ಷದವರು ಇತರ ಇತರ ಪಕ್ಷಗಳವರೂ ಕೂಡಿ ಬೇಕಾಗಿರುವ ಹಣವನ್ನು ಯಾವ ರೀತಿ ಒದಗಿಸಿಕೊಳ್ಳಬೇಕೆಂಬುದಕ್ಕೆ ಸೂಕ್ತ ಸಲಹೆ ಕೊಡಬೇಕು. ಕರಭಾರ ಹೆಚ್ಚಿಸಲು ಸಾಧ್ಯವಿಲ್ಲ, ಹಳ್ಳಿಗಳಲ್ಲಿ ಬಹಳ ಕಷ್ಟವಿದೆ. ಶ್ರೀಮಂತರ ಮೇಲೆ ಹೆಚ್ಚಿಗೆ ಹಾಕಿದರೆ ಅವರು ಸುಸಂಘಟಿತರಾಗುತ್ತಾರೆ. ನಗರಗಳಲ್ಲಿ ಕಟ್ಟಡದ ಮೇಲೆ ತೆರಿಗೆ ಹಾಕಿರುವುದರಿಂದ ದೊಡ್ಡ ಕ್ರಾಂತಿ, ಚಳವಳಿ ನಡೆಯುತ್ತಿದೆ. ಹಾಗೆ ಮಾಡಬಾರದು. ಇನ್ನೂ ಹೆಚ್ಚಿನ ಶ್ರೀಮಂತರಾಗಬೇಕೆಂಬ ಆಶೆ ಹಾಗೆ ಮಾಡಿಸುತ್ತದೆ. ಕರಭಾರ ಹೆಚ್ಚಿಸದಿದ್ದರೂ ಶ್ರೀಮಂತರಿಂದ ಸಾಲ ಪಡೆಯಬಹುದು. ಕಾವೇರಿ ಯೋಜನೆಗೆ ಇಷ್ಟು ಕೊಡಿ, ಕೃಷ್ಣಾ ಯೋಜನೆಗೆ ಇಷ್ಟು ಸಾಲ ಕೊಡಿ ಎಂದು ತೆಗೆದುಕೊಂಡ 20 ವರ್ಷದ ಅವಧಿ ಗೊತ್ತುಮಾಡಿಕೊಂಡು ಶೇಕಡ 3-4ರಂತೆ ಬಡ್ಡಿ ಕೊಡಬಹುದು. ಬಹುಶಃ ದೇಶದ ಅನೇಕ ಬ್ಯಾಂಕುಗಳು ಸಹ ಸಾಲ ಕೊಡಬಹುದು. ಆಸಕ್ತಿ ಇರುವವರೂ ಸಾಲ ಕೊಡುವ ಸಂಭವವಿದೆ. ಆ ರೀತಿ ಅವರಿಂದ ಸಾಲ ಪಡೆಯಬಹುದು. ಅದಲ್ಲದೆ ಆಡಳಿತ ಮಟ್ಟದಲ್ಲಿ ಬರಬೇಕಾದ ಕರವನ್ನು ಕೈಬಿಡದೆ ಬಡವರಿಗೆ ಹಾನಿಯಾಗದಂತೆ ವಸೂಲು ಮಾಡಬೇಕು.

ಇನ್ನು ಹೇಮಾವತಿ, ಯಗಚಿ ಮುಂತಾದ ಉಪನದಿಗಳಿವೆ. ಹೇಮಾವತಿ ಪ್ರಶ್ನೆ ಎತ್ತಿದರೆ ಒಬ್ಬರಿಗೆ ನೋವು, ಕಂಬದಕಡ ಪ್ರಶ್ನೆ ಎತ್ತಿದರೆ ಇನ್ನೊಬ್ಬರಿಗೆ ನೋವು. ಅಪ್ಪಣ್ಣನವರ ವಾದವನ್ನು ನಾನು ಶಾಂತರೀತಿಯಿಂದ ಕೇಳಿದೆ. ಯಾವುದೇ ಸಂಕುಚಿತ ಭಾವನೆಯಿಂದ ಅವರು ಮಾತನಾಡಲಿಲ್ಲ. ಅವರು ಹಾರಂಗಿ ಜಲಾಶಯವನ್ನು ಶಾಸ್ತ್ರೀಯವಾಗಿ ಹೆಚ್ಚಿನ ಲಾಭವಾಗುವಂತೆ ನಿರ್ಮಿಸಿರಿ ಎಂದು ಹೇಳಿದ್ದಾರೆ. ಹಾಗೆಯೇ ತಿಮ್ಮಪ್ಪಗೌಡರು ಒಳ್ಳೆಯ ಉದಾರ ಮನಸ್ಸಿನಿಂದ ಮಾತನಾಡಿದ್ದಾರೆ. ಹೇಮಾವತಿ ಯೋಜನೆಯನ್ನು ಶಾಸ್ತ್ರೀಯವಾಗಿ ಲಾಭದಾಯಕವಾಗಿ ಮಾಡುತ್ತಾರೆಂಬುದು ಮನವರಿಕೆಯಾದರೆ ಅವರೂ ವಿರೋಧಿಸುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಕೇವಲ ಶಾಸನ ಸಭೆಯಲ್ಲೇ ಹೆಚ್ಚು ಚರ್ಚಿಸುವುದಕ್ಕಿಂತ ಸಂಬಂಧಪಟ್ಟ ಯಾವತ್ತೂ ಜನರನ್ನು ಕರೆದು ಕೆಲವು ಟೆಕ್ನಿಕಲ್ ಹ್ಯಾಂಡ್ಸ್ ಸಹಾಯಕ್ಕೆ ಕೊಟ್ಟು ಒಂದು ಒಮ್ಮತಕ್ಕೆ ಬರುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು. ಏಕೆಂದರೆ ಇದೆಲ್ಲಾ ಒಂದೇ ರಾಜ್ಯಕ್ಕೆ ಒಂದೇ ದೇಶಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಹಾಗಿರುವಾಗ ಯಾವುದೇ ಒಂದು ಜಿಲ್ಲೆಗೆ ಅಪಾಯವಾಗುವುದಕ್ಕೆ ಸರ್ಕಾರ ಅವಕಾಶ ಕೊಡಲಾರದು. ಕೊಡಗಿನವರು ಕಂಬದಕಡದ ಬಗ್ಗೆ ಬಹಳ ಕಳವಳದಿಂದ ಹೇಳಿದರು. ಅಷ್ಟು ಕಳವಳಕ್ಕೆ ಕಾರಣವಿಲ್ಲ. ಸರ್ಕಾರ ಬಹಳ ಅವಸರದಿಂದ ಆಲೋಚನೆ ಮಾಡುತ್ತದೆಂದು ಭಾವಿಸುವುದಕ್ಕೆ ಕಾರಣವಿಲ್ಲ.

ಇದು ಬಹಳ ವ್ಯಾಪಕವಾದ ಗೊತ್ತುವಳಿ. ಕಾವೇರಿಯ ಯಾವತ್ತೂ ನೀರನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪೂರ್ಣವಾಗಿ ಉಪಯೋಗಿಸಬೇಕು ಎಂದು ಸೂಚಿಸಿದ್ದಾರೆ. ಹಾಗೆ ಮಾಡಬೇಕಾದರೆ ಎಷ್ಟು ಹಣ ಬೇಕು, ಅವನ್ನು ಯಾವ ರೀತಿ ತರಬೇಕು ಎಂಬು

ದನ್ನು ಗೊತ್ತುವಳಿಯನ್ನು ತಂದವರು ಅಂಕಿ ಸಂಖ್ಯೆಗಳೊಡನೆ ಹೇಳಿದ್ದರೆ ಚೆನ್ನಾಗಿತ್ತು. ಆ ರೀತಿಯ ವಿಚಾರ ಅಂಥ ಸೂಚನೆ ಮುಂದೆ ಬಂದ ಹಾಗೆ ಕಾಣಲಿಲ್ಲ. ಸಾಮಾನ್ಯವಾಗಿ ಹಾರಂಗಿ ಯೋಜನೆಯ ಬಗ್ಗೆ ಕೆಲವರು ಹೆಚ್ಚಿನ ಆಸ್ಥೆ ವಹಿಸಿದ್ದಾರೆ. ಹಾರಂಗಿ ಯೋಜನೆಯನ್ನು ಕೊಡಗಿನವರು ವಿರೋಧಿಸುವುದಿಲ್ಲವೆಂದು ಹೇಳುತ್ತಾರೆ. ಆದರೆ ಜಲಾಶಯದ ಎತ್ತರದ ವಿಚಾರದಲ್ಲಿ ಸರಿಯಾದ ಒಪ್ಪಿಗೆ ಇಲ್ಲದೆ ಸ್ಪಷ್ಟ ವಿನಿಮಯವಿಲ್ಲದೆ ಕಳವಳಕ್ಕೆ ಕಾರಣವಾಗಿದೆ. ಆದರೆ ಸರ್ಕಾರ ಕೃಷ್ಣ ಮತ್ತು ಕಾವೇರಿ ವಿಚಾರದಲ್ಲಿ ಪಕ್ಷಪಾತ ಮಾಡುತ್ತಿದೆ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಏಕೆಂಬುದನ್ನು ಹೇಳಿದ್ದಾರೆ. 1956ರ ಪೂರ್ವದಲ್ಲೇ ಕಾವೇರಿ ಯೋಜನೆ ಇತ್ತು. ಕೃಷ್ಣಾ ಯೋಜನೆ ಕೂಡ ಕರ್ಣಾಟಕ ರಾಜ್ಯವಾದ ಕೂಡಲೆ ಮಾಡಲಾಗಿದೆ ಎಂದು ಹೇಳುವುದೂ ಸರಿಯಲ್ಲ, ಮುಂಬಯಿ ಸರ್ಕಾರದಲ್ಲಿ ನಾವಿದ್ದಾಗಲೇ ಆ ವಿಷಯ ಚರ್ಚೆಯಾಗಿತ್ತು. ಅತ್ತಕಡೆಯಿಂದ ಕೆಲವರು ಈಗ ಈ ಕಡೆಗೆ ಬಂದಿದ್ದಾರೆ. ಕೊಡಗಿನಿಂದ ಎರಡು ಕೋಟಿ ಉತ್ಪತ್ತಿ ಇದೆ, ಅಲ್ಲಿನವರೂ ತ್ಯಾಗ ಮಾಡುವುದಾದರೆ ಬಹಳ ಸಹಾನುಭೂತಿಯನ್ನು ಸೂಚಿಸುತ್ತೇವೆ. ಸರ್ಕಾರ ತಪ್ಪು ಮಾಡಿದರೆ ಅದನ್ನು ಸರಿಪಡಿಸುವುದು ಎಲ್ಲರ ಕರ್ತವ್ಯ. ಕೃಷ್ಣಾ ಮತ್ತು ಕಾವೇರಿಯಲ್ಲಿ ಯಾವುದೂ ಕಡಮೆಯೆಂದು ಹೇಳುವುದಲ್ಲ. ಅವೆರಡೂ ಎರಡು ಕಣ್ಣುಗಳಿದ್ದ ಹಾಗೆ. ಒಂದು ಕಣ್ಣನ್ನು ಕುರುಡು ಮಾಡಿಕೊಳ್ಳುತ್ತೇನೆಂದು ಹೇಳುವವನು ದೇಶಪ್ರೇಮಿಯಲ್ಲ, ಹಾಗೆ ಯಾರೂ ಮಾಡುವುದಿಲ್ಲ. ಹಾಗೆ ಯಾರಾದರೂ ಮಾಡಿದರೆ ಅವರಿಗೆ ಬೆಂಬಲ ದೊರೆಯುವುದಿಲ್ಲ. ಆ ಕಾರಣ ಅಂಥ ಸಂದೇಹ ಬೇಡ. ಸರ್ಕಾರ 1974ನೆಯ ಇಸವಿಯೊಳಗೆ ನಮ್ಮ ಭಾಗದ ಯಾವತ್ತೂ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾದ ಎಲ್ಲಾ ಪ್ರಯತ್ನವನ್ನೂ ಮಾಡಬೇಕು. 1974ರ ನಂತರವೂ ಉಪಯೋಗ ಮಾಡಿಕೊಳ್ಳುವುದಕ್ಕೆ ಕಾಯಿದೆ ಇರಬಹುದು. ಹಾಗಿದ್ದರೂ ಔದಾಸೀನ್ಯವಿರಬಾರದು, ಏನೇ ಇರಲಿ 1974ರೊಳಗೆ ಎಷ್ಟು ಸಾಧ್ಯವೋ ಅಷ್ಟನ್ನು ಉಪಯೋಗ ಮಾಡಿಕೊಳ್ಳಬೇಕು. ಆ ರೀತಿ ಸರ್ಕಾರ ನಿರ್ಧಾರ ತಳೆಯಬೇಕು. ನಮ್ಮದು ಮಾನವ ಶಕ್ತಿ. ಒಂದು ವೇಳೆ ಅದಕ್ಕೆ ಮೀರಿ ಉಳಿದರೆ 1974ರನಂತರ ಉಪಯೋಗ ಮಾಡಿಕೊಳ್ಳಲು ಮದ್ರಾಸಿನೊಡನೆ ವ್ಯವಹಾರ ನಡೆಸಬೇಕು. 1974ರನಂತರ ಉಪಯೋಗ ಮಾಡಿಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತೇವೆಂಬ ಭಾವನೆ ಯಾರಿಗೂ ಬರಬಾರದು. ಆ ದೃಷ್ಟಿಯಿಂದ ಈ ಎರಡು ಮಾತನ್ನೂ ಲಕ್ಷದಲ್ಲಿಟ್ಟು ವಿಚಾರ ಮಾಡಬೇಕು.

ಸರ್ಕಾರದವರು ಬೇಕಾದಷ್ಟು ಶಾಸ್ತ್ರೀಯ ತಜ್ಞರಿದ್ದಾರೆಂದು ಒಂದು ಸಲ ಹೇಳಿದರು. ಇದನ್ನು ನಾವು ನಿಧಾನವಾಗಿ ಮಾಡಿದರೂ ಸಹ 1974ನೇ ಇಸವಿಯೊಳಗಾಗಿ ಎಷ್ಟು ಅಂಶ ಕಾವೇರಿ ನೀರನ್ನು ನಾವು ಕನಿಷ್ಠವಾಗಿ ಅಭಿವೃದ್ಧಿ ಮಾಡಿಕೊಳ್ಳಲಿಕ್ಕೆ ಸಾಧ್ಯವಾದೀತು ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಿದರೆ ಎಲ್ಲರಿಗೂ ಅದರಿಂದ ಸಮಾಧಾನವಾದೀತು. ಅಷ್ಟನ್ನು ಮಾಡಿದರೆ ಅದರ ಮೇಲೆ ಒತ್ತಾಯ ಮಾಡಲಿಕ್ಕೆ ಅನುಕೂಲವಾಗುತ್ತದೆ. ಕೃಷ್ಣ ನದಿಯ ಬಗ್ಗೆ ಎಷ್ಟು ಆತುರವಿದೆಯೋ ಅಷ್ಟೇ ಆತುರ ಕಾವೇರಿ ನದಿಗೂ ಇದೆ, ಇದು ಸಮಗ್ರ ರಾಜ್ಯದ ಪ್ರಶ್ನೆ. ಒಂದು ರಾಜ್ಯದ ಒಂದು ಭಾಗ ದುರ್ಬಲವಾದರೆ ಇಡೀ ರಾಜ್ಯವೇ ದುರ್ಬಲವಾಗುತ್ತದೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತುಂಟು. ಆ ರೀತಿ ಮಾಡಲಿಕ್ಕೆ ಹೋಗುವುದು ಅಸಾಧುವಾದುದು ಅದು ಸಾಧ್ಯವೂ ಅಲ್ಲ, ಉಚಿತವೂ ಅಲ್ಲ. ಇದರ ಬಗ್ಗೆ ಯಾವುದೇ ರೀತಿಯ ವಿವಂಚನೆಗೆ ಒಳಗಾಗಬೇಕಾದ ಕಾರಣವೂ ಇಲ್ಲ ಎಂದು ನಾನು ಹೇಳುತ್ತೇನೆ. ಈವರೆಗೆ ನಾನು ಹೇಳಿದ ಎಲ್ಲ ವಿಷಯಗಳನ್ನೂ ಸರಕಾರ ಮನಗಂಡು ಒಂದು ಸ್ಪಷ್ಟವಾದ ನಿಲುವನ್ನು ರಾಜ್ಯದ ಹಿತದೃಷ್ಟಿಯಿಂದ, ನಮ್ಮ ಒಕ್ಕಲಿಗರ ಹಿತದೃಷ್ಟಿಯಿಂದ, ಒಕ್ಕಲಿಗರ ಕಲ್ಯಾಣದ ದೃಷ್ಟಿಯಿಂದ ಏನು ಇದೆ ಎನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ನಮ್ಮಲ್ಲಿ ಸರಕಾರ ಕೊಡುವ ಉತ್ತರದಿಂದ ಜನರಿಗೆ ಸಮಾಧಾನವಾದೀತು ಎಂದು ನಾನು ತಿಳಿದುಕೊಂಡಿದ್ದೇನೆ. ಸರಕಾರ ಅಂತಃಕರಣ ಪೂರ್ವಕವಾಗಿ ಹೇಳುವ ಉತ್ತರವನ್ನು ಸೂಚಕರು ವಿಚಾರ ಮಾಡಿ ತಮ್ಮ ನಿರ್ಣಯ ಸ್ವೀಕೃತವಾಗಲೇಬೇಕು ಎಂಬ ಭಾವನೆಯನ್ನು ತಳೆದು ಒತ್ತಾಯ ಮಾಡಲಿಕ್ಕೆ ಅಪೇಕ್ಷೆ ಮಾಡಲಾರು ಎಂದು ಭಾವಿಸಿ ನಾನು ಮತ್ತೊಮ್ಮೆ ಶ್ರೀಮಾನ್ ದೇವೇಗೌಡರವರಿಗೆ ಇಂತಹ ಒಂದು ಸಂಧಿಯನ್ನು ಕಲ್ಪಿಸಿ ಮಾತನಾಡಲು ಅವಕಾಶ ಮಾಡಿಕೊಟ್ಟುದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಿಸಿ ನಾನು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

4-30 P.M.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರ).—ಸ್ವಾಮಿ, ಶ್ರೀಮಾನ್ ಹೆಚ್. ಡಿ. ದೇವೇಗೌಡರವರು ಇಲ್ಲಿ ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ಕಾವೇರಿ ನದಿಯ ಸಂಪೂರ್ಣ ನೀರಿನ ಹಕ್ಕು ನಮ್ಮ ಮೈಸೂರು ರಾಜ್ಯಕ್ಕಿದೆ. ಅದನ್ನು ನಾವು ಬಳಸಿಕೊಳ್ಳಬೇಕಾದುದು ಅಗತ್ಯ ಎಂದು ನಾನು

(ಶ್ರೀ ಕೆ. ದೇವಯ್ಯ)

ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದರ ವಿಚಾರದಲ್ಲಿ ಅನೇಕ ಸ್ನೇಹಿತರುಗಳು ಈಗಾಗಲೇ ಬೇಕಾದಷ್ಟು ಮಾತನಾಡಿದ್ದಾರೆ. ನಮ್ಮಲ್ಲಿ ಒಂದು ತೊಡಕು ಏನೆಂದು ಹೇಳಿದರೆ ಒಂದು ಸಂಕುಚಿತ ಭಾವನೆ. ವಿಶಾಲ ಭಾವನೆ ಇಲ್ಲದಿರುವುದು ನೂರಾರು ವರ್ಷಗಳ ನಂತರ ನಮ್ಮ ದೇಶದ ಪರಿಸ್ಥಿತಿ ಯಾವ ರೀತಿಯಾಗಬೇಕು ಅದಕ್ಕೆ ನೀರಿನ ಸಂಪೂರ್ಣ ಉಪಯೋಗ ಮಾಡಿಕೊಳ್ಳಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಮಾಡುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಾನು ತಿಳಿಯುತ್ತೇನೆ. ಕಾವೇರಿ ನದಿಯ ನೀರಿನ ಸಂಪೂರ್ಣ ಉಪಯೋಗವನ್ನು 1974 ಇಸವಿಯೊಳಗೇ ಪಡೆದುಕೊಳ್ಳಬೇಕೆಂದು ಈ ನಿರ್ಣಯದಲ್ಲಿದೆ. ನಾನು ಹೇಳುವುದಾದರೆ, ನಾವು 1974ನೇ ಇಸವಿಯೇ ನಮ್ಮ ಗುರಿ ಎಂದು ಮಾತನಾಡುವುದು ಸರಿಯಲ್ಲ. 1974ನೇ ವರ್ಷದಲ್ಲಿ ಈ ಗುರಿಯನ್ನು ಇಡುವುದು ಎಂದು ಹೇಳಿದರೆ ತಪ್ಪಾಗುತ್ತದೆ. ನಾವು ಆದಷ್ಟು ಮಟ್ಟಿಗೆ 1974ನೇ ಇಸವಿಗೆ ಮುಂಚೆಯೇ ಈ ಗುರಿಯನ್ನು ಸಾಧಿಸುವುದಕ್ಕೆ ಒಂದೆರಡು ವರ್ಷಗಳಷ್ಟು ಹೆಚ್ಚುಕಡಿಮೆ ಕಾಲಾವಕಾಶ ಇರಬೇಕೆಂದು ನನ್ನ ಭಾವನೆ. ಇಲ್ಲಿ ಉದ್ಭವಿಸತಕ್ಕ ಸಮಸ್ಯೆಯನ್ನು ಟ್ರೇನ್ಡ್ ಟೆನ್ನಿಕಲ್ ಪೀಪಲ್‌ಗಳಿಗೆ ಬಿಟ್ಟು ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕು. ಅದಕ್ಕೆ ಕೆಲವಾರು ಎಡರುಗಳಿದ್ದರೆ ಅದನ್ನು ತಪ್ಪಿಸಬೇಕು ಎನ್ನುವ ದೃಷ್ಟಿ ನಮ್ಮಲ್ಲಿರಬೇಕೆಂದು ಹೇಳುತ್ತೇನೆ. ಹಾಗೆಂದು ಹೇಳಿದರೆ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರ ಅಡಿಯಲ್ಲಿ ಅನೇಕ ಜನ ನುರಿತ ಇಂಜನಿಯರುಗಳು ಹಾಗೂ ಯುವಕರಾದ ಇಂಜನೀಯರುಗಳಿದ್ದಾರೆ. ಅವರೆಲ್ಲ ಈ ದೇಶದ ಪ್ರೀತಿ ಹಾಗೂ ಪ್ರೇಮವುಳ್ಳವರಾಗಿರುವುದರಿಂದ ನಮ್ಮ ದೇಶದ ಆಗುಹೋಗುಗಳು ಅವರ ಕೈನಲ್ಲಿದೆ. ಅಂತಹ ನಿಷ್ಠಾವಂತ ಯುವಕರು ಯಾವ ಒಂದು ರಾಜಕೀಯ ಗುಂಪಿಗೆ ಸೇರದೆ, ದೇಶದ ದೃಷ್ಟಿಯನ್ನಿಟ್ಟುಕೊಂಡು, ನೂರಾರು ವರ್ಷಗಳನಂತರ ನಮ್ಮ ದೇಶ ಎಷ್ಟು ಅಭಿವೃದ್ಧಿಗೊಂಡು ಮುಂದೆ ಬರಬಹುದು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಯಾವ ಒಂದು ಪ್ರಭಾವಕ್ಕೂ ಒಳಗಾಗದೇ ತಮ್ಮದೇ ಆದ Technical Advice ಕೊಟ್ಟು ಅದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಂಡು ಮುಂದೆ ಬರುತ್ತಾರೆಂದು ನಾನು ಹೇಳಬಯಸುತ್ತೇನೆ. ಇದರೊಳಗೆ ನಮ್ಮ ಮುಖ್ಯ ಮಂತ್ರಿಗಳೂ ಸಹ ಬೇರೆ ಯಾವ ಪ್ರಭಾವಕ್ಕೂ ಒಳಗಾಗದೆ ನಮ್ಮಲ್ಲಾಗುವ ಯಾವ ಕೆಲಸಗಳನ್ನೂ ನಿಲ್ಲಿಸುವುದಕ್ಕೆ ಪ್ರಯತ್ನಿಸಬಾರದು. ನಮ್ಮಲ್ಲಿ ಹಾರಂಗಿ ಇಲ್ಲಿ ಕಟ್ಟಬೇಕೆಂದು ಒಬ್ಬರು, ಇನ್ನೊಂದು ಕಡೆ ಕಂಬದಕಡ ಹಾಸನದ ಬಳಿ ಕಟ್ಟುವುದನ್ನು ನಿಲ್ಲಿಸಬೇಕೆಂದು ಇನ್ನೊಬ್ಬರು ಹೇಳಿ ಇಲ್ಲಿ ಹಳ್ಳಿಗಳು ಬಹಳ ಮುಳುಗಡೆಯಾಗುತ್ತದೆ ಎಂದು ಈ ಕೆಲಸಗಳನ್ನು ನಿಲ್ಲಿಸುವ ಮನೋಭಾವನೆ ಬರುತ್ತಿದೆ. ನಮ್ಮಲ್ಲಿ ತೊಡಕಾಗದೇ ಇರುವ ಯಾವ ಒಂದು ಪ್ರಾಂತವೂ ಇಲ್ಲ. ಒಂದು ಸಮಯದಲ್ಲಿ ಇಂತಹ ತೊಡಕುಗಳಿಗಾಗಿ ಹೆದರಬಾರದು. ಕಬ್ಬಿಣವನ್ನು ಚೆನ್ನಾಗಿ ಕಾಯಿಸಿ ಅವನ್ನು ಹೇಗೆ ಬಿಸಿಬಿಸಿಯಾಗಿರುವಾಗ ಚಿಮಿಟ್ಟಿಯಿಂದ ಬಡಿದು ಯಾವ ರೀತಿಯ ಆಕಾರ ಬೇಕೆಂದು ಮಾಡುತ್ತಾರೋ ಆ ರೀತಿಯಲ್ಲಿ ಬಿಸಿಬಿಸಿಯಾಗಿರುವಾಗಲೇ ಇಂತಹ ಒಂದು ಕೆಲಸವನ್ನು ಆದಷ್ಟು ಬೇಗನೆ ಮಾಡಿ ಮುಗಿಸಿ ಅದನ್ನು ಮಾಡಬೇಕಾದುದು ನಮ್ಮ ಕರ್ತವ್ಯ. ಇದಕ್ಕೆ ಬೇಕಾದಷ್ಟು ತೊಂದರೆಗಳು, ಅಡ್ಡಿ ಆತಂಕಗಳು ಬಂದು ಕೆಲಸ ನಿಲ್ಲಿಸುವ ಹಾಗೆ ಆಗುತ್ತದೆ. ಇದು ಬರೀ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಆದರೆ ಇದು ಒಂದೇ ಒಂದು ದೇಶಕ್ಕೆ ಸಂಬಂಧಪಟ್ಟಿದ್ದು. ಈ ದಿನ ಈ ಕೆಲಸಕ್ಕಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚುಮಾಡಿ ಸಾವಿರಾರು ಎಕರೆಗಳಷ್ಟು ಜಮೀನು ವ್ಯವಸಾಯಕ್ಕೆ ಬರುವ ಸಂದರ್ಭದಲ್ಲಿ, ಇದರಿಂದ ದೇಶದ ಆಹಾರದ ಉತ್ಪತ್ತಿಯೂ ಹೆಚ್ಚಾಗುವ ಈ ಸಂದರ್ಭದಲ್ಲಿ ಇದರಿಂದ ಕೆಲವರಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳದೆ, ನಾವು ನಮ್ಮ ಕರ್ತವ್ಯ ಎಂದು ಇದನ್ನು ಮುಂದುವರಿಸಿಕೊಂಡು ಹೋಗಬೇಕು. ಇದು ಕೇವಲ ಕೆಲವು ವ್ಯಕ್ತಿಗಳ ವಿಚಾರವಲ್ಲ. ವಿಶಾಲ ಮೈಸೂರಿನ ವಿಶಾಲ ದೃಷ್ಟಿಯಿಟ್ಟುಕೊಂಡು, ಇವೊತ್ತು ಕೊಡಗಿನ ಭಾಗಕ್ಕೆ ತೊಂದರೆ ಬರುತ್ತೆ, ಹಳೇ ಮೈಸೂರಿನ ಭಾಗಕ್ಕೆ ತೊಂದರೆಯಾಗುತ್ತದೆ ಎನ್ನುವುದನ್ನು ನೋಡದೆ, ಗೋದಾವರಿ ಕೃಷ್ಣಾ ನದಿಯ ವಿಚಾರದಲ್ಲಿ ಹೇಗೆ ನೋಡುತ್ತಿದ್ದಾರೋ, ಅಂತಹ ಒಂದು ವಿಶಾಲ ದೃಷ್ಟಿಯಿಂದ ನೋಡಬೇಕು. ಒಂದು ಕಡೆಯಲ್ಲಿ ಸ್ವಲ್ಪ ಅನ್ಯಾಯವಾಗಬಹುದು. ಯಾರಿಗೆ ಅನ್ಯಾಯ ಜಾಸ್ತಿಯಾಗುತ್ತದೋ ಅವರಿಗೆ ಬೇಕಾದಷ್ಟು ಪರಿಹಾರಗಳನ್ನು ಕೊಟ್ಟು ಎಂದರೆ ಎಷ್ಟು ನಷ್ಟವಾಗುತ್ತದೋ ಅದಕ್ಕೆ ದ್ವಿಗುಣವಾಗಿ ಅವರಿಗೆ ಕೊಟ್ಟು ಸಮಾನತೆ ಬರುವ ಹಾಗೆ ಪರಿಹಾರಗಳನ್ನು ಕೊಟ್ಟು ಈ ಕೆಲಸಕಾರ್ಯಗಳನ್ನು ಕೂಡಿಸಿಕೊಂಡು ನಡೆಸಬೇಕೆಂದು ಬೇಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಏನು ಗುರಿ ಇಟ್ಟುಕೊಂಡಿದ್ದೇವೋ ಅದು ಪರಿಪೂರ್ಣವಾಗುವುದಿಲ್ಲ. ಈ ಸಂದರ್ಭದಲ್ಲಿ ಕಾವೇರಿ ನದಿ ಹಾಗೂ ಕಾವೇರಿ ನದಿಗೆ ಯಾವ ಯಾವ ಉಪನದಿಗಳು ಸೇರಿಕೊಂಡಿವೆಯೋ ಅಲ್ಲೆಲ್ಲಾ ಕಟ್ಟೆಗಳನ್ನು ಕಟ್ಟಿ ನೀರಿನ ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡಬೇಕು. ಅದನ್ನು ನಮ್ಮ

ಇಂಜನೀಯರುಗಳೂ ಕಲೆತು ಸೇರಿ 1970ನೇ ಇಸವಿಯೊಳಗೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಯಾರೂ ಈಗ ಸಿದ್ಧ ಮಾಡಬಾರದು. ಆದರೆ ಇದರ ಬಗ್ಗೆ ಶ್ರೀಮಾನ್ ದೇವೇಗೌಡರು ಅಂಕಿ ಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದರು. ಆದರೆ ಇದು ಇಂಜನೀಯರುಗಳಿಗೆ ಸಂಬಂಧಪಟ್ಟ ಪ್ರಶ್ನೆ. ಮುಖ್ಯಮಂತ್ರಿಗಳು ಇದನ್ನು ಗಮನಿಸಿ ನಮ್ಮ ಮುಂದೆ ಆದಷ್ಟು ಬೇಗ ಇದರ ಅಂಕಿ ಅಂಶಗಳನ್ನು ಕೊಟ್ಟು ಯಾವ ರೀತಿ ಕಾರ್ಯಗತ ಮಾಡುವುದು ಎನ್ನುವುದರ ಬಗ್ಗೆ ಪರಿಪೂರ್ಣವಾದ ಒಂದು ಸಲಹೆ ಕೊಡಬೇಕು. ಹೆಚ್ಚು ತಡಮಾಡದೆ ಈ ಕೆಲಸವನ್ನು ಕಾರ್ಯಗತ ಮಾಡುವುದಕ್ಕೆ ಏನೇನು ಹೊಂದಿಸಿಕೊಳ್ಳಬೇಕೋ ಅದನ್ನೆಲ್ಲ ಮಾಡಿ ಕಾವೇರಿ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಸ್ವಾಮಿ, ಈ ವಿಚಾರದಲ್ಲಿ ಈಗಾಗಲೇ ವಿಶೇಷ ಚರ್ಚೆ ನಡೆದಿದೆ; ವಿಚಾರ ವಿನಿಮಯವಾಗಿದೆ, ವಿಷಯವೇನೆಂಬುದು ಈಗ ಎಲ್ಲರಿಗೂ ಗೊತ್ತಾಗಿದೆ. ಕಾವೇರಿ ನದಿಯ ನೀರಿನ ಬಳಕೆಯ ಬಗ್ಗೆ ಈಗೇನು ಮಾಡಬೇಕೆಂಬುದನ್ನು ಪರಿಶೀಲನೆ ಮಾಡತಕ್ಕ ಕಾಲ ಈಗ ಒದಗಿದೆ. ಈಗ ಒದಗಿರತಕ್ಕ ಕಾಲವನ್ನು ಕೈಬಿಟ್ಟರೆ ಈ ಕಾಲ ಮಿಂಚಿಹೋಗುತ್ತದೆ, ಇನ್ನೆಂಥ ಸಮಯ ಒದಗುವುದಿಲ್ಲವೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾವೀಗ ಇದನ್ನು ಚರ್ಚೆ ಮಾಡುತ್ತಿದ್ದೇವೆ; ಇಲ್ಲಿಯವರೆಗೂ ಆ ಕಾವೇರಿ ನದಿಯ ನೀರಿನ ವಿಚಾರದಲ್ಲಿ ಏನಾಯಿತೋ ಅದು ಆದದ್ದು ಆಗಿಹೋಯಿತು. ಆದುದರಿಂದ ನಾವೀಗ ಕಳೆದು ಹೋದದ್ದನ್ನು ವಿಚಾರ ಮಾಡುವುದಕ್ಕೆ ಪ್ರಯತ್ನ ಮಾಡದೆ ಈಗ ನಾವು ಮುಂದೇನು ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡಬೇಕೇ ವಿನಾ, ಅದು ಹಾಗಾಗಬೇಕಾಗಿತ್ತು, ಹೀಗಾಗಬೇಕಾಗಿತ್ತು, ಅಗ್ರೀಮೆಂಟಿನಲ್ಲಿ ಅದು ಸರಿಯಾಗಿಲ್ಲ, ಎಂದು ನಾವೀಗ ವಾದ ಮಾಡುವುದು ಬೇಡ. ಆದರೆ ಆ ಹಿಂದಿನವರು ಮಾಡಿದ್ದು ತಪ್ಪೋ ಅಥವಾ ಅಲ್ಲವೋ, ಅದು ಹೀಗಿರಬೇಕಾಗಿತ್ತೊ, ಹಾಗಿರಬೇಕಾಗಿತ್ತೋ ಅದನ್ನು ಚರಿತ್ರಕಾರರು ಹೇಳಬಹುದು ಆದರೆ ಅವರು ಹೇಳತಕ್ಕದ್ದೆಲ್ಲಾ ಒಂದು ಚರಿತ್ರೆಯಾಗುತ್ತದೆಯೇ ವಿನಾ ಅದನ್ನು ನಾವಿಂದು ಮಥನ ಮಾಡುವುದಕ್ಕಾಗುವುದಿಲ್ಲ. ಆ 1924ರಲ್ಲಿ ಆಗಿದ್ದ ಪರಿಸ್ಥಿತಿಗನುಗುಣವಾಗಿ ಆ ಅಗ್ರೀಮೆಂಟನ್ನು ಅವರು ಬರೆದಿರುತ್ತಾರೆ. ಆದರೆ ಅವರು ಬರೆದಿದ್ದ ಅಗ್ರೀಮೆಂಟಿನಲ್ಲಿ ಕಾಣಿಸಿರತಕ್ಕ 40 ವರ್ಷ ಕಾಲ ನಾವು ಏನನ್ನೂ ಮಾಡದೆ ಕೈಕಟ್ಟಿ ಕುಳಿತುಕೊಂಡಿದ್ದು, ಈ ದಿವಸ ಅವರು ಮಾಡಿರತಕ್ಕ ಅಗ್ರೀಮೆಂಟ್ ಸರಿಯಾಗಿಲ್ಲವೆಂದು ಹೇಳಿದರೆ ಇದನ್ನು ಯಾರು ಒಪ್ಪುತ್ತಾರೆ? ಆದ್ದರಿಂದ ಈ ದಿವಸ ನಾವು ಅವರು ಮಾಡಿರತಕ್ಕ ಅಗ್ರೀಮೆಂಟನ್ನು ತಪ್ಪೆಂದು ಹೇಳುವುದಕ್ಕಾಗುವುದಿಲ್ಲ. ನಾವು ಹೀಗೆ ತಪ್ಪು ಮಾಡಿಕೊಂಡು ನಮ್ಮ ನೆರೆಹೊರೆಯ ಪ್ರಾಂತ್ಯದವರನ್ನು ಅವರೇನಾದರೂ ಮುಂದೆ ಸಾಗಿದ್ದರೆ ಅವರನ್ನು ಟೀಕೆ ಮಾಡಬಾರದು, ಅವರನ್ನು ಅಭಿನಂದಿಸಬೇಕು. ನಾವು ಈ ದಿವಸ ಅವರ ಬುದ್ಧಿವಂತಿಕೆಯನ್ನು ಒಪ್ಪಿಕೊಳ್ಳಲೇಬೇಕು. ಇಲ್ಲಿಯವರೆಗೂ ಇಲ್ಲಿ ಚರ್ಚೆಯಾಗಿರುವುದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ನೀರಾವರಿ ಕೆಲಸಕಾರ್ಯಗಳು ಚುರುಕಾಗಿ ನಡೆಯುತ್ತಿಲ್ಲವೆಂದು ಟೀಕೆ ಮಾಡಲಾಗಿದೆ. ಆದರೆ ನಾವು ಇಂಥಾ ಒಂದು ಬೃಹತ್ ಯೋಜನೆಯನ್ನು ಕೈಗೊಳ್ಳಬೇಕಾದ ಸಂದರ್ಭದಲ್ಲಿ ಇದನ್ನು ಎಲ್ಲಿ ಕಟ್ಟಬೇಕು, ಎಷ್ಟು ನೀರು ಮುಳುಗಾಗುತ್ತದೆ, ಎಷ್ಟು ಅಚ್ಚುಕಟ್ಟು ಬರುತ್ತೆ, ಡ್ಯಾಮಿನ ಎತ್ತರವೇನಿರಬೇಕು, ಆಯಕಟ್ಟು ಪ್ರದೇಶ ಯಾವುದು ಎಂಬ ತಪಶೀಲುಗಳ ಚರ್ಚೆಯಲ್ಲೇ ಬಹು ಕಾಲವನ್ನು ಮಾನ್ಯ ಅಪ್ಪಣ್ಣನವರು ಹೇಳಿದಹಾಗೆ ಕಳೆಯುತ್ತಿದ್ದೇವೆ. ಸಾಲದ್ದಕ್ಕೆ ಇಂಥಾ ಒಂದು ಪ್ರಾಜೆಕ್ಟನ್ನು ಎಲ್ಲಿ ಕಟ್ಟಿದರೆ ಇಡೀ ದೇಶಕ್ಕೆ ಅನುಕೂಲವಾಗುತ್ತದೆಂಬುದನ್ನು ಕೈಬಿಟ್ಟು ರಾಜಕೀಯಕ್ಕೆ ಹೋಗುವುದರಿಂದ ಪ್ರತಿಯೊಂದು ಕೆಲಸದಲ್ಲೂ ವ್ಯಾಜ್ಯ ವ್ಯವಹಾರಗಳು ಹುಟ್ಟಿ ಕೆಲಸ ನಿಧಾನವಾಗುತ್ತದೆ. ಇದು ಸರಿಯಾದ್ದಲ್ಲ ಎಂದು ನಾನು ಹೇಳುತ್ತಿದ್ದೇನೆ. ನಾವೀ ದಿವಸ ಈ ಕಾವೇರಿ ನೀರನ್ನು ಆ ಅಗ್ರೀಮೆಂಟಿನ ಪ್ರಕಾರ 1974ರೊಳಗೆ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳದೆ ಹೋದರೆ ಈಗಿರತಕ್ಕ ಹಕ್ಕು ನಮಗೆ ಮುಂದಕ್ಕೆ ಸಿಕ್ಕಲಾರದು. ಈ ವಿಚಾರ ಅಗ್ರೀಮೆಂಟಿನಲ್ಲಿ ಸೇರಿರಲೀ, ಸೇರಿಲ್ಲದಿರಲಿ, ಅದು ಷೆಡ್ಯೂಲ್ ರಿವರ್ ಆಗಿರಲಿ, ಆಗಿಲ್ಲದಿರಲಿ ನಾವು ಮುಂದೆ ಇಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಅವರು ಆ ಅಗ್ರೀಮೆಂಟನ್ನು ಮಾಡಿಕೊಳ್ಳುವ ದಿವಸ ಷೆಡ್ಯೂಲ್ಡ್ ಮತ್ತು ನಾನ್-ಷೆಡ್ಯೂಲ್ಡ್ ನದಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಗ್ರೀಮೆಂಟನ್ನು ಮಾಡಿದ್ದಾರೋ—ಅಥವಾ ಇಲ್ಲವೋ ಅದನ್ನು ನಾವೀದಿವಸ ಪ್ರಸ್ತಾಪಿಸಬೇಕಾದ್ದು ಅನುಚಿತ. ಈ ದಿವಸ ಆ ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಇವುಗಳ ವಿಚಾರದಲ್ಲಿ ಶ್ರೀ ಅಪ್ಪಣ್ಣನವರು ಹೇಳಿದ ಹಾಗೆ ಅನೇಕ ವ್ಯವಹಾರಗಳು ನಡೆದಿವೆ. ನಾನು ಹೇಳತಕ್ಕದ್ದಿಷ್ಟೆ: ಜನರಿಗೆ ಹೆಚ್ಚು ತೊಂದರೆಯಾಗದೆ, ಕಡಮೆ ಖರ್ಚಿನಲ್ಲಿ, ಹೆಚ್ಚು ಆದಾಯ ಬರತಕ್ಕ ಕೆಲಸಗಳನ್ನು ಕೈಗೊಳ್ಳುವುದು ಜಾಣ್ಮೆಯ ವ್ಯವಹಾರವೆಂತ ಭಾವಿಸಿ ನಾನೀಗ ಈ ಹಾರಂಗೀ ವಿಚಾರದಲ್ಲಿ ಕೆಲವು ಮಾತುಗಳನ್ನು

(ಶ್ರೀ ಕೆ. ಎಸ್. ಸೂರ್ಯನಾರಾಣ ರಾವ್)

ಹೇಳಬಯಸುತ್ತೇನೆ. ಹಾರಂಗಿಯಲ್ಲಿ ಒಂದು ಉತ್ತಮವಾದ ಅಣೆಯನ್ನು ಹಾಕಲು ಒಂದು ತೀರ್ಮಾನವನ್ನು ಕೈಗೊಂಡಿದ್ದ ಕಾಲದಲ್ಲಿ, ಅಲ್ಲಿನ ಕೆಲಸವನ್ನು ಪ್ರಾರಂಭಮಾಡಬೇಕೆಂಬ ಕಾಲದಲ್ಲಿ, ಅಂಥಾ ಹಂತವನ್ನು ತಲುಪಿದ್ದಾಗ ಇದರಬಗ್ಗೆ ಮತ್ತೆ ಪುನರಾಲೋಚನೆ ನಡೆಯಿತು. ಆದರಲ್ಲಿ ಯಾರೇ ತಪ್ಪುಮಾಡಿರಲಿ ಅದನ್ನು ತಿದ್ದಿಕೊಳ್ಳಬೇಕು. ಆದರೆ ಈ ಕೆಲಸ ಆ ಒಂದು ಹಂತಕ್ಕೇರಿದ್ದಾಗ ಅದನ್ನು ಪುನರ್ವಿಮರ್ಶೆಮಾಡಲು ಹೊರಟದ್ದು ದೇಶಕ್ಕೆ ಇದರಿಂದ ಅಷ್ಟೇನೂ ಒಳ್ಳೆಯದಾಗುವುದಿಲ್ಲ ವೆಂಬುದು ನನ್ನ ಅಭಿಪ್ರಾಯ. ಈಗ ಹಾರಂಗಿ ಡ್ಯಾಮಿನ ಬಗ್ಗೆ ಎರಡು ಕಟ್ಟೆಗಳನ್ನು ಕಟ್ಟಬೇಕೆಂದು ಹೇಳಲಾಗಿದೆ. ಒಂದೊಂದರಲ್ಲೂ ನಾಲ್ಕು ಅಥವಾ ನಾಲ್ಕೂವರೆ ಟಿ. ಎಂ. ಸಿ. ಎಫ್‌ಟಿ. ನೀರನ್ನು ಹಿಡಿದಿಡಲು ಯೋಜನೆಯನ್ನು ಮಾಡಿದ್ದಾರೆ. ಈ ಎರಡು ಕಟ್ಟೆಗಳನ್ನು ಕಟ್ಟತಕ್ಕ ಕಾರ್ಯಕ್ಕೆ ಸುಮಾರು 11 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಹೀಗೆ 2 ಕಟ್ಟೆಗಳನ್ನು ಕಟ್ಟಿ 11 ಕೋಟಿ ರೂಪಾಯಿ ಖರ್ಚುಮಾಡುವುದರ ಬದಲು ಒಂದೇ ಕಟ್ಟೆಯನ್ನು ಕಟ್ಟಿ ಕಮ್ಮಿ ಖರ್ಚಿನಲ್ಲಿ ಹೆಚ್ಚಿನ ಅನುಕೂಲ ಪಡೆಯತಕ್ಕುದು ಒಳ್ಳೆಯದಲ್ಲವೇ ಎಂದು ನಾನು ಕೇಳುತ್ತೇನೆ? ಇನ್ನು ಕಟ್ಟೆಯ ಎತ್ತರ ಅದು 180 ಅಡಿಗಳಿರಬೇಕೇ ಅಥವಾ 120 ಅಡಿಗಳಿರಬೇಕೇ ಎಂಬುದು ಸರ್ಕಾರಕ್ಕೂ ಮತ್ತು ಇಂಜಿನಿಯರುಗಳಿಗೂ ಬಿಟ್ಟಿದ್ದು. ಒಂದೇ ಕಟ್ಟೆಯನ್ನು ಹಾಕಿ ಕಡಮೆ ಖರ್ಚಿನಲ್ಲಿ ಈ ಎರಡೂ ಕಟ್ಟೆಗಳಿಂದಾಗುತ್ತಿದ್ದ ಅನುಕೂಲವನ್ನು ಒಂದೇ ಕಟ್ಟೆಯಿಂದ ಪಡೆಯತಕ್ಕ ಅವಕಾಶವಿದ್ದರೆ ಅದನ್ನು ಸರ್ಕಾರದವರೇಕೆ ಪುನರ್ಪರಿಶೀಲನೆ ಮಾಡಬಾರದು ಎಂದು ಕೇಳುತ್ತೇನೆ? ಹೀಗೆ 180 ಅಡಿಯಿರಬೇಕೆ ಅಥವಾ 120 ಅಡಿಯಿರಬೇಕೆ ಎಂಬ ಪ್ರಶ್ನೆಯಲ್ಲಿ ಒಟ್ಟು 60 ಅಡಿಗಳ ವ್ಯತ್ಯಾಸಕ್ಕಾಗಿ ನಾವೀಗ ಎರಡು ಕಟ್ಟೆಗಳನ್ನು ಕಟ್ಟುವುದಕ್ಕೆ ಹೋಗಿ 4-5 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚುಮಾಡತಕ್ಕದ್ದು ಸೂಕ್ತವೇ ಎಂಬುದೊಂದು ಪ್ರಶ್ನೆ.

ಇನ್ನು ಎರಡನೆಯ ಜಿಜ್ಞಾಸೆಯೇನೆಂದರೆ: ಅದನ್ನು ನ್ಯಾಯ ಇಲಾಖೆಯವರು ತೀರ್ಮಾನ ಮಾಡಬೇಕಾದ್ದು. ನೀರಿನ ಉಪಯೋಗ ಎಷ್ಟರಮಟ್ಟಿಗಾಗುತ್ತದೆ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ನಾವು ಈಗ ಚಿಕ್ಕ ಚಿಕ್ಕ ಕಟ್ಟೆಗಳನ್ನು ಕಟ್ಟಿದರೆ ಅವುಗಳಲ್ಲಿ ಮಳೆಗಾಲದಲ್ಲಿ ನಾವು ನೀರಿನ ಅನುಕೂಲವೆಷ್ಟೇ ಇದ್ದರೂ ನಾಲ್ಕು ಅಥವಾ ನಾಲ್ಕುವರೆ ಟಿ. ಎಂ. ಸಿ. ಎಫ್‌ಟಿ. ನೀರಿಗಿಂತ ಜಾಸ್ತಿ ಹಿಡಿದಿಡಲು ಸಾಧ್ಯವಿಲ್ಲ. ನಾವು ಹೆಚ್ಚಿಗೆ ನೀರನ್ನು ಇವುಗಳಲ್ಲಿ ಸ್ಟೋರೇಜ್‌ಮಾಡುವುದಕ್ಕಾಗುವುದಿಲ್ಲ. ನಮಗೆ ನೀರಿನ ಹೆಚ್ಚು ಅವಶ್ಯಕತೆಯೆಲ್ಲಾ ಬೇಸಿಗೆಯಲ್ಲಿ ಇರುವುದು. ಅದಕ್ಕೆ ಹೆಚ್ಚು ನೀರನ್ನು ಶೇಖರಣೆಮಾಡಲು ಸಾಧ್ಯವಿಲ್ಲ. ಇನ್ನು ಎರಡನೆಯ ವಿಚಾರವೆಂದರೆ: ಮೊದಲು ಅಂದಾಜು ಮಾಡಿದ್ದ ಕಟ್ಟೆಯಲ್ಲಿ 13 ಟಿ. ಎಂ. ಸಿ. ಎಫ್‌ಟಿ. ನೀರನ್ನು ತಡೆಹಿಡಿಯಲು ಅಂದಾಜು ಮಾಡಲಾಗಿತ್ತು. ಒಟ್ಟು ಅಲ್ಲಿರತಕ್ಕ ಫ್ಲೋ 23 ಟಿ. ಎಂ. ಸಿ. ಎಫ್‌ಟಿ. ನೀರು. ಹಿಂದಿನ ಪ್ಲಾನಿನಲ್ಲೇ ನಮಗೆ 10 ಟಿ. ಎಂ. ಸಿ. ಎಫ್‌ಟಿ. ನೀರು ಕಡಮೆ ಆಗುತ್ತೆಂದು ಹೇಳುತ್ತಿರುವಾಗ ಇನ್ನು ಅದರ ಜೊತೆಗೆ 9 ಟಿ. ಎಂ. ಸಿ. ಎಫ್‌ಟಿ. ನೀರನ್ನು ನಾವೀಗ ಕೈಬಿಡುತ್ತಿದ್ದೇವೆಂದರೆ ಅಲ್ಲಿಗೆ ನಾವು ಬಳಸಿದ ನೀರೆಷ್ಟು? ಅದರಿಂದ ಬರತಕ್ಕ ಅಚ್ಚುಕಟ್ಟೆಷ್ಟು ಎಂಬುದನ್ನೂ ಪರಿಶೀಲಿಸಬೇಕಾಗುತ್ತದೆ. ಮೊದಲ ಅಂದಾಜಿನ ಪ್ರಕಾರ ಒಂದು ಲಕ್ಷ ಐದು ಸಾವಿರ ಎಕರೆಗೆ ನೀರು ಸರಬರಾಯಿ ಆಗಬೇಕು. ಈಗ ಅಷ್ಟಾಗುತ್ತದೆಯೇ? ಈಗಿನ ಅಂದಾಜಿನ ಪ್ರಕಾರ 25 ಸಾವಿರ ಎಕರೆಗಳಿಗೂ ಸಹಾ ನೀರು ಆಗುವುದಿಲ್ಲವೆಂದು ತಿಳಿದು ಬಂದಿದೆ. ಅದೂ ಕೂಡ ಅಷ್ಯೂರ್ಡ್ ಅಚ್-ಕಟ್ ಏರಿಯಾದಲ್ಲಿ ಬರುವುದರಿಂದ ಅದಕ್ಕೆ ಹೆಚ್ಚು ನೀರು ಕೊಟ್ಟಹಾಗಾಗುತ್ತದೆ. ಹೊಸ ಅಚ್‌ಕಟ್ ಕಡಮೆಯಾಗುತ್ತದೆ. ಆದ್ದರಿಂದ ಎರಡನ್ನೂ ಕೊಡೋಣ. ಚಿಕ್ಕ ಚಿಕ್ಕದಾಗಿ ಅದರಿಂದ ಅನುಕೂಲ ಆಗಲಿಕ್ಕಿಲ್ಲವೆಂದು ನಾನು ಹೇಳುತ್ತೇನೆ.

ಮೂರನೆಯದಾಗಿ ನನಗೆ ತಿಳಿದಮಟ್ಟಿಗೆ ಸ್ವಲ್ಪ ಈ ಕಾನೂನು ಭಾಗದಲ್ಲಿ ಒಂದು ಜಿಜ್ಞಾಸೆ ಬರುತ್ತದೆಂದು ನಾನು ಹೇಳುತ್ತೇನೆ. ಕಾವೇರಿ ನದಿಯ ಪಾತ್ರದಲ್ಲಿ ಬರುವ 2½ ಟಿ. ಎಂ. ಸಿ ಯಷ್ಟು ನೀರನ್ನು ಬೇರೆಕಡೆ ತಿರುಗಿಸುವುದಾದರೆ ಕೃಷ್ಣರಾಜಸಾಗರದ ಮೇಲೆ ಇರುವ ನಾಲ್ಕು ಅಣೆಕಟ್ಟುಗಳನ್ನು ಅವರು ಇವತ್ತು ಕೊಡಗಿನಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅದರಲ್ಲಿ ನೀರನ್ನು storage ಮಾಡುವುದಕ್ಕಾಗುವುದಿಲ್ಲ. ಆಗ ನಾಲ್ಕು ಅಣೆಕಟ್ಟುಗಳ ಅಯಕಟ್ಟಿನ ಕಡೆ ಇದ್ದ ನೀರು ಸಾಲದೆ ಕಷ್ಟಪಡುವ ಪರಿಸ್ಥಿತಿ ಇದೆ. ಕಾವೇರಿ ನೀರಿನ ಮೇಲಿನ ಅಪ್ಪರ್ ರೀಚಸ್ಸಿನಲ್ಲಿ ತಡೆ ಹಿಡಿದರೆ ಕಾವೇರಿ ನೀರು ಹರಿಯುವುದು ಕಡಿಮೆಯಾಗಿ ಜನಗಳಿಗೆ ತೊಂದರೆಯಾಗುವ ಪರಿಸ್ಥಿತಿ ಬರುತ್ತದೆ. ಅದರ ಜೊತೆಗೆ ಕೃಷ್ಣರಾಜಸಾಗರದ ಕೆಳಗೆ ಇರುವ ಜನಗಳಿಗೂ ಕೂಡ ಧಕ್ಕೆ ಬರುತ್ತದೆ. ಏಕೆಂದರೆ ಕೃಷ್ಣರಾಜಸಾಗರದಲ್ಲಿ ಎಷ್ಟೆಷ್ಟು ನಿಗದಿ ಪ್ರಕಾರ ನೀರು ಕೊಡಬೇಕಾಗುತ್ತದೋ ಆ ರೀತಿ ಕೊಡದಿದ್ದರೆ ಖಂಡಿತವಾಗಿ ಅಲ್ಲಿನ ಜನರಿಗೆ ತೊಂದರೆಯಾಗುತ್ತದೆ. ಕೃಷ್ಣರಾಜಸಾಗರದ

ಕೆಳಗೆ ಇರತಕ್ಕ ಜನಗಳಿಗೆ ಮತ್ತು ಅವರ ಹಕ್ಕಿಗೆ ಖಂಡಿತವಾಗಿ ಧಕ್ಕೆ ಬರುತ್ತದೆ ಎಂದು ಹೇಳುವ ಅವಕಾಶ ಇದರಲ್ಲಿದೆ ಎಂಬುದಾಗಿ ನನಗೆ ತಿಳಿದುಬರುತ್ತದೆ. ಆಗ ಈ ಯೋಜನೆಯ ಹಕ್ಕನ್ನು ಬಹಳ ಜಾಗ್ರತೆಯಿಂದ ನೋಡಬೇಕು. ಆದರೆ ಖರ್ಚನ್ನು ಈ ಬಾಬಿಗೆ ಎಷ್ಟು ಕಡಮೆಮಾಡುವುದಕ್ಕೆ ಸಾಧ್ಯವಾಗುತ್ತದೋ ಅಷ್ಟು ಕಡಮೆ ಮಾಡುವ ರೀತಿಯಲ್ಲಿ ಮಾಡಬೇಕು. ಶ್ರೀಮರ್ಾ ದೊಡ್ಡಮೇಟಿಯವರು ಕೃಷ್ಣಾ ಒಂದು ಕಣ್ಣು, ಕಾವೇರಿ ಇನ್ನೊಂದು ಕಣ್ಣು ಎಂದು ಹೇಳಿದರು, ನಿಜ. ಆದರೆ ಎರಡೂ ಆಗಬೇಕೆಂದು ಒಪ್ಪಿಕೊಳ್ಳೋಣ. ಆದರೆ ಕಾವೇರಿ ನದಿಯ ನೀರನ್ನು 1974ರ ವರೆಗೆ ಉಪಯೋಗಿಸದೆ ಹೋದರೆ ಖಂಡಿತವಾಗಿ ಡೆವಲಪ್‌ಮೆಂಟ್ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಅದು ಸಾಧ್ಯವೇ ಇಲ್ಲ. ಕಾವೇರಿಯಿಂದ ನಮಗೆ ಇರತಕ್ಕ ರಿಸೋರ್ಸಸ್ ಹೆಚ್ಚಿನ ರೀತಿಯಲ್ಲಿ ಕಾವೇರಿ .ಬೇಸನ್ನಿನಲ್ಲೇ ದೊರೆಯುತ್ತದೆ. ಒಂದು ವೇಳೆ ಹಾಗೆ ಡೆವಲಪ್‌ಮೆಂಟ್ ಮಾಡದಿದ್ದರೆ ಇನ್ನು ಜಿಜ್ಞಾಸೆ ಕೃಷ್ಣಾ ನದಿಯ ನೀರಿನ ಮೇಲೆ ಇರುತ್ತದೆ. ಅಲ್ಲೇನೋ ಹೆಚ್ಚಿಗೆ ನೀರು ಬರುತ್ತದೆಂದು ನಾನು ಹೇಳುತ್ತೇನೆ. ಆದರೂ ಸಹಾ ತೊಂದರೆಯಾಗಿಲ್ಲ. Time is running past in the Cauvery basin. ಆದರೆ ಬಾಕಿ ಕೊಡದೆ ಈ ಕೆಲಸ ಮಾಡಬಾರದೆಂಬ ದೃಷ್ಟಿ ನನಗಿಲ್ಲ. ಹೆಚ್ಚಿನ ರೀತಿಯೊಳಗೆ ನಮಗಿರತಕ್ಕ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳಿ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ಇದನ್ನು ಮಾಡುವಾಗ ಯಾರದೇ ಪ್ರಭಾವಕ್ಕೂ ಅವಕಾಶವಿಲ್ಲದೆ ದೇಶದ ಹಿತದೃಷ್ಟಿಯಿಂದ ಕಮ್ಮಿ ಖರ್ಚಿನಲ್ಲಿ ಹೆಚ್ಚಿನ ಉಪಯೋಗವಾಗುವ ರೀತಿಯಲ್ಲಿ ಕೆಲಸ ಕಾರ್ಯಗಳಾಗಬೇಕು. ಇನ್ನೊಂದು ದೃಷ್ಟಿಯ ಕಡೆ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಮಾಡಿದ್ದೇನೆ. ಕಾವೇರಿ ನದಿಯ ನೀರಿನ ಪೂರ್ಣ ಉಪಯೋಗದ ಜೊತೆಗೆ ನಮಗೂ, ನಿಮಗೂ, ಜನತೆಗೂ ಇದರಿಂದ ಅನುಕೂಲವಾಗುತ್ತದೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Sri A. P. APPANNA.— The debate may go on for the rest of the day and the reply may-be given to-morrow.

Mr. SPEAKER.—I am entirely in the hands of the Chief Minister. There was a little noie of dissatisfaction. What shall we do ? Are all the members keen on the debate being continued for the rest of the day ?

ಶ್ರೀ ಎಸ್. ಗೋಪಾಲ ಗೌಡ.—ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೇಳಿದರೆ ಸಾಕೆಂದು ಕಾಣುತ್ತದೆ.

Sri S. NIJALINGAPPA.—I will reply to-morrow for about one hour.

Mr. SPEAKER.—We will devote the rest of the day for discussion and the reply will be given to-morrow.

[Mr. Depuyt Speaker in the Chair]

†ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಸಭಾಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ತಂದಿರತಕ್ಕಂಥ ಈ ನಿರ್ಣಯವನ್ನು ನಾನು ಅನುಮೋದಿಸುತ್ತಾ ಇದರಲ್ಲಿ ಹೇಮಾವತಿ ರಿಜರ್‌ವಾಯರ್ ಪ್ರಾಜೆಕ್ಟು ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಹೇಮಾವತಿ ಹೊಳೆಗೆ ಗೊರೂರು ಹತ್ತಿರ ಕಟ್ಟತಕ್ಕ ಅಣೆಯ ಒಂದು ಅಂದಾಜನ್ನು ಬಹಳ ವರ್ಷಗಳಿಂದ ಕಾರ್ಯಗತ ಮಾಡಬೇಕೆಂದು ಹೇಳಿ ತುಮಕೂರಿನ ಕೆಲವು ಭಾಗದ ಜನತೆ ಹಾಗೂ ಹಾಸನ ಜಿಲ್ಲೆಯ ಕೆಲವು ಭಾಗದ ಜನತೆ ಸರ್ಕಾರವನ್ನು ಅನೇಕವರ್ಷಗಳಿಂದ ಪ್ರಾರ್ಥನೆ ಮಾಡಿಕೊಂಡು ಬಂದಿದೆ. ಕಳೆದ ಸಾರಿ ಒಂದು ಮಂತ್ರಿಮಂಡಲ ಇದ್ದಾಗ ಈ ಯೋಜನೆಯನ್ನು ತುಮಕೂರು ಜಿಲ್ಲೆಗೂ ಅನ್ವಯಿಸುವ ರೀತಿ ಸುಮಾರು ಒಂದು ಅಂದಾಜನ್ನು ಸರ್ವೆ ಮಾಡಿಸಿ ತಯಾರುಮಾಡಿಸಿತ್ತು ಎಂಬುದಾಗಿ ನಾನು ಕೇಳಿದ್ದೇನೆ. ಅದರ ಅಂದಾಜು ಸುಮಾರು 14 ಕೋಟಿ ಚಿಲ್ಲರೆ. ಈ ಅಂದಾಜಿನಿಂದ ಹಾಸನ ಜಿಲ್ಲೆಯ ಹೊಳೇನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ತುಮಕೂರು ಜಿಲ್ಲೆಯ ತಿಪಟೂರು, ತುರುವೆಕೆರೆ, ಕುಣಿಗಲ್, ಗುಬ್ಬಿ, ಚಿಕ್ಕನಾಯಕನಹಳ್ಳಿ, ಬೆಂಗಳೂರು ಜಿಲ್ಲೆಯ..............

ಶ್ರೀ ಎಸ್. ನಿಜಲಿಂಗಪ್ಪ.—ಅಷ್ಟೊಂದು ಇರಲಿಲ್ಲ.

ಶ್ರೀ ಬಿ. ಭೈರಪ್ಪಾಜಿ.—ಆ ರೀತಿಯಾಗಿ ಸರ್ವೆ ನಡೆಸಿದರು. ಇನ್ನೂ ಸುಮಾರು 14 ಕೋಟಿ ಚಿಲ್ಲರೆ ಆಗುತ್ತಿತ್ತೋ ಏನೋ ಎಂದು ತಿಳಿದುಕೊಂಡಿದ್ದೆವು. ಅದನ್ನು ಈಚೆಗೆ ಸುಮಾರು 3 ಕೋಟಿ ಚಿಲ್ಲರೆಗೆ ಇಳಿಸಿ ಕೇವಲ ಎರಡು ತಾಲ್ಲೂಕುಗಳಿಗೆ ಅಂದರೆ ಚನ್ನರಾಯಪಟ್ಟಣ ಮತ್ತು ಅರಸೀಕೆರೆಗೆ

(ಶ್ರೀ ಬಿ. ಬೈರಪ್ಪಾಜಿ)

ಮಾತ್ರ 27 ಎಕರೆಯಷ್ಟು ಹೊಸ ಅಚ್ಚುಕಟ್ಟಿಗೆ ಇಳಿಸಿದ್ದಾರೆ. ಈ ವಿಷಯದಲ್ಲಿ ತೆಗೆದುಕೊಂಡಿದ್ದ ಹಿಂದಿನ ಆಲೋಚನೆಯನ್ನು ಇವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದಿಷ್ಟೆ. ಹೊಳೇನರಸೀಪುರದ ಜನಗಳಿಗೇ-ಆಗಲೀ ಅಥವಾ ಯಾರಿಗೇ ಆಗಲೀ ಈ ವಿಷಯದಲ್ಲಿ ಹೆಚ್ಚಿಗೆ ತೊಂದರೆ ಕೊಡಬಾರದೆಂದು ನಾನು ಹೇಳುತ್ತೇನೆ. ಮೊದಲನೆಯ ಸ್ಟೇಜ್‌ನಲ್ಲಿ ಅಲ್ಲಿಂದ 7.2 ಟಿ.ಎಂ.ಸಿ.ಎಫ್‌ಟಿ. ನೀರನ್ನು ಉಪಯೋಗಿಸಬೇಕೆಂದು ಏನು ನಿಗದಿ ಮಾಡಿ ಅಣೆಕಟ್ಟುತ್ತೇವೆಂದು ಹೇಳಿದ್ದರೋ ಈಗ ಎರಡನೆ ಸ್ಟೇಜಿನಲ್ಲಿ 11·2 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಬೇಕೆಂದು ನಿಗದಿಮಾಡಿದ್ದಾರೆ. ಅದರಂತೆ ಈ ಅಣೆಗೆ ವ್ಯಾಸ, ತಳಹದಿ ಹಾಕುತ್ತೇವೆಂದು ಈ ವರದಿಯಲ್ಲಿ ಹೇಳಿದ್ದಾರೆ.

5-00 P.M.

ನಾನು ಹೇಳುವುದು ಎರಡು ಸ್ಟೇಜು ತೆಗೆದುಕೊಳ್ಳುವುದನ್ನು ಈಗಲೇ ತೆಗೆದುಕೊಳ್ಳಿ ಎಂದು. ಮುಖ್ಯವಾಗಿ ನಮ್ಮ ತಾಲ್ಲೂಕಿಗೆ ನೀರನ್ನು ಕೊಡುವುದಾದರೂ ಕೂಡ ಮಳೆಗಾಲದಲ್ಲಿ ಫ್ಲಡ್ಸ್ ಬಂದಾಗ ಹೆಚ್ಚಿಗೆ ನೀರು ಹೋಗತಕ್ಕದ್ದನ್ನು ಸಣ್ಣ ಪಿಕಅಪ್ ಹಾಕುವುದರ ಮೂಲಕ ನಮ್ಮ ತಾಲ್ಲೂಕಿಗೆ ನೀರನ್ನು ಒದಗಿಸಿಕೊಡಬೇಕೆಂದು ನಾನು ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹೆಚ್ಚಿಗೆ ಜಮೀನನ್ನು ಮುಳುಗಡೆ ಮಾಡಿ ನಮಗೆ ನೀರನ್ನು ಕೊಡಿ ಎಂದು ನಾನು ಹೇಳುತ್ತಿಲ್ಲ. ಬಹಳ ದಿವಸಗಳಿಂದ ತುಮಕೂರು ಜಿಲ್ಲೆಯ ನನ್ನ ಸಹೋದರರು ನಮಗೆಲ್ಲ ಹೇಮಾವತಿಯ ನೀರು ಬರುತ್ತದೆ, ನಾವುಗಳೆಲ್ಲಾ ಹೊಲಗಳನ್ನೂ ಗದ್ದೆಗಳನ್ನೂ ಮಾಡಿಕೊಂಡು ಸುಖವಾಗಿರುತ್ತೇವೆ. ಎಂದು ಆಸೆಪಡುತ್ತಿದ್ದರು. ಅವರ ಹತ್ತಾರುವರ್ಷಗಳ ಒಂದು ಬಯಕೆ ಕೊಂಚಮಟ್ಟಿಗಾದರೂ ಈಡೇರಿಸಬೇಕು ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈಗಲೂ ಕೂಡ ಕಾಲ ಮಿಂಚಿಹೋಗಿಲ್ಲ. ಈಗ ಇಲ್ಲಿ ಪಿಕ್‌ಅಪ್ ಹಾಕುವುದರ ಮೂಲಕ 11·2 ಟಿ.ಎಂ.ಸಿ. ಎಫ್‌ಟಿ. ನೀರನ್ನು ಸ್ಟೋರೇಜ್ ಮಾಡಬೇಕೆಂದು ನಿರ್ಧರಿಸಿ ಅದನ್ನು ಈಗಲೇ ಕಾರ್ಯಗತ ಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೊಣವಿನಕೆರೆ ಮಲ್ಲಾಘಟ್ಟ ಈ ಪ್ರದೇಶದಲ್ಲಿ ಸಣ್ಣಸಣ್ಣ ಪಿಕಅಪ್‌ಗಳನ್ನು ಕಟ್ಟಿ ಮಾರ್ಕೋನಹಳ್ಳಿಯತನಕ ನೀರನ್ನು ಕೊಡಬೇಕು. ಇದನ್ನು ಪುನರ್ವಿಮರ್ಶೆ ಮಾಡಬೇಕು. ಹೇಮಾವತಿ ಪ್ರಾಜೆಕ್ಟ್ ಏನಿದೆ ಅದರಿಂದ ನಮ್ಮ ತಾಲ್ಲೂಕಿಗೂ ನೀರು ಬರುವ ಹಾಗೆ ಏರ್ಪಾಡು ಮಾಡಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇದರಲ್ಲಿ ಯಾವುದಾದರೂ ಒಂದನ್ನಾದರೂ ತೀರ್ಮಾನಮಾಡಿ ಅಥವಾ ಕಡ್ಡಾಯವಾಗಿ ಕೊಡುವುದಿಲ್ಲವೆಂದಾದರೂ ಹೇಳಿ. ಅದಾದರೂ ಆಗಲಿ. ಎರಡನೆಯ ಹಂತದಲ್ಲಿ ನಮಗೆ ನೀರನ್ನು ಕೊಡುತ್ತೇವೆಂದು ಹೇಳಿದರೆ ಅಲ್ಲಿಯವರೆಗೂ ನಮಗೆ ನೀರು ಬರುತ್ತದೆ ಎನ್ನುವ ಆಸೆ ನಮಗೆ ಕಾಣುವುದಿಲ್ಲ. ಆದ್ದರಿಂದ ಮೊದಲನೆಯ ಹಂತದಲ್ಲಿಯೇ 11.2 ಟಿ. ಎಂ. ಸಿ. ಎಫ್‌ಟಿ. ನೀರನ್ನು ಸ್ಟೋರೇಜ್ ಮಾಡುವುದಕ್ಕೋಸ್ಕರ ವ್ಯವಸ್ಥೆ ಮಾಡಬೇಕು. ಈ ರೀತಿಯಾಗಿ ಆ ಕೆಲಸಗಳನ್ನು ಈಗಾಗಲೇ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ತುಮಕೂರು ಜಿಲ್ಲೆಯ ಜನಗಳಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮುಂತ್ರಿಗಳಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಸ್. ಎ. ಪಾಸಣ್ಣ ಶೆಟ್ಟಿ (ಸಕಲೇಶಪುರ).—ಮಾನ್ಯ ಸಭಾಪತಿಯವರೇ, ನನ್ನ ಸ್ನೇಹಿತರಾದ ಶ್ರೀಮಾನ್ ದೇವೇಗೌಡರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ನೋಡಿದರೆ ನನಗಾದರೂ ಅಪ್ರಕೃತ ಎಂದು ನನಗೆ ಕಾಣುತ್ತದೆ. ಕಾವೇರಿ ನೀರಿನಿಂದ ದೊರಕುವ ಸಾಧನ ಸಂಪತ್ತುಗಳನ್ನು ಪೂರ್ತಿಯಾಗಿ ಉಪಯೋಗಿಸಬೇಕು ಎನ್ನುವುದರಲ್ಲಿ ಯಾವುದೂ ಕೂಡ ಬಿನ್ನಾಭಿಪ್ರಾಯವಿಲ್ಲ. ಈ ಸಂಬಂಧದಲ್ಲಿ ಮೊನ್ನೆಕೂಡ ಒಂದು ಪ್ರಶ್ನೆಗೆ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಉಪಯೋಗಿಸುಕೊಳ್ಳುತ್ತೇವೆ. ಅದಕ್ಕೋಸ್ಕರ ನಾವು 18 ಯೋಜನೆಗಳನ್ನು ಕೈಗೊಳ್ಳುತ್ತೇವೆ ಎಂದು ಪ್ರಶ್ನೆಗೆ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಇವೊತ್ತಿನ ನಮ್ಮ ದೇಶದ ಒಂದು ಆರ್ಥಿಕ ಪರಿಸ್ಥಿತಿಯಲ್ಲಿ ಕೂಡ ಈ ಎಲ್ಲಾ ಯೋಜನೆಗಳನ್ನೂ ನಾಲ್ಕನೇ ಯೋಜನೆಯ ಅವಧಿಯಲ್ಲಿ ಕೈಗೊಳ್ಳುವುದಕ್ಕಾಗುವುದಿಲ್ಲ ಎನ್ನುವುದು ಶತಸಿದ್ಧವಾಗಿದೆ. ಹೇಮಾವತಿ ಮತ್ತು ಹಾರಂಗಿ ಯೋಜನೆಗಳನ್ನು ಆದಷ್ಟು ಜಾಗ್ರತೆಯಾಗಿ ಕಾರ್ಯಗತಮಾಡಬೇಕೆಂದು ಅನೇಕರು ಹೇಳುತ್ತಿದ್ದಾರೆ. 1924ನೇ ಇಸವಿಯ ಅಗ್ರೀಮೆಂಟ್ ಪ್ರಕಾರ ಕೂಡ ಮೈಸೂರು ಸರ್ಕಾರದವರು ಇದನ್ನು ಪುನರ್ ವಿಮರ್ಶೆ ಮಾಡ

ಕೂಡದು ಎಂದು ಮಾಡಿದ್ದಾರೆಂದು ನನಗೆ ಕಾಣುವುದಿಲ್ಲ. 50 ವರ್ಷಗಳಾದ ಮೇಲೆ ಎರಡು ಸರ್ಕಾರಗಳೂ ಕೂಡಿ ಅದನ್ನು ಪುನರ್‌ವಿಮರ್ಶೆಮಾಡಬೇಕು ಎಂದು ಇದೆ. ಮತ್ತು ಇವೊತ್ತಿನ ಪರಿಸ್ಥಿತಿಯಲ್ಲಿ ಕೂಡ ಈ ಯೋಜನೆಗಳನ್ನು ಮುಗಿಸುವಂತಾ ಪರಿಸ್ಥಿತಿ ಕೂಡ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಅನೇಕ ಮಾನ್ಯ ಸದಸ್ಯರು ದೇಶದ ಇಡೀ ಚಿತ್ರವನ್ನು ಮುಂದಿಟ್ಟುಕೊಂಡು ಈ ದೇಶದಲ್ಲಿ ಹೆಚ್ಚಿನ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು. ಅದರಿಂದ ದೇಶಕ್ಕೆ ಹೆಚ್ಚಿನ ಲಾಭವುಂಟಾಗುತ್ತದೆ, ಹೆಚ್ಚಿನ ಪ್ರಯೋಜನ ಆಗುತ್ತದೆ, ಇಂಥಾ ಯೋಜನೆಗಳನ್ನು ದೇಶದ ಹಿತದೃಷ್ಟಿಯಿಂದ ತೆಗೆದುಕೊಳ್ಳುವುದು ಒಳ್ಳೆಯದು ಎಂದು ವಾದ ಮಾಡಿದ್ದಾರೆ. ಅದನ್ನು ನಾನೂ ಕೂಡ ಪುಷ್ಟೀಕರಿಸುತ್ತೇನೆ. ಸಮಾನ್ಯವಾಗಿ 35 ವರ್ಷಗಳ ಹಿಂದೆಯೇ ಹೇಮಾವತಿ ನದಿಯ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಒಂದು ಅಂದಾಜನ್ನು ತಯಾರು ಮಾಡಿದ್ದರು.* ಈ ವಿಷಯದಲ್ಲಿ ಇದುವರೆಗೂ ಕೂಡ ಅನೇಕ ಮಾನ್ಯ ಸದಸ್ಯರು ಎಲ್ಲರೂ ಕೂಡ ವಾದಿಸಿದ್ದಾರೆ. ಆದರೆ ಈ ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ಈ ಹೇಮಾವತಿ ಯೋಜನೆ ಅಷ್ಟು ಉಪಯುಕ್ತವಾದ ಯೋಜನೆಯಲ್ಲ, ಅದರ ವೆಚ್ಚಕೂಡ ಜಾಸ್ತಿಯಾಗುತ್ತದೆ, ಮತ್ತು ಆ ಯೋಜನೆಯಿಂದ ನೀರಾವರಿಗೆ ಬರುವಂಥ ಜಾಗ ಕೂಡ ಬಹಳ ಕಡಿಮೆ ಎಂದು ಹೇಳಿ ಹಿಂದಿನ ಸರ್ಕಾರಗಳು ಈ ಯೋಜನೆಯನ್ನು ಕಾರ್ಯನೀತಿ ಮಾಡ ಕೂಡದು ಎಂದು ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆಂದು ನಾನು ಕೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ನಿರ್ಧಾರವನ್ನು ಕೈಗೊಂಡಿದ್ದು ಯಾವ ಸರ್ಕಾರ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಹಿಂದಿನ ಸರ್ಕಾರ. ಇವೊತ್ತು ನಾವು ಈ ಯೋಜನಗಳನ್ನು ತೀವ್ರವಾಗಿ ಕಾರ್ಯಗತ ಮಾಡಬೇಕೆಂದು ಕೇಳುವುದು ನ್ಯಾಯಬದ್ಧವಾಗಿದ್ದರೂ ಕೂಡ ಈ ನೀರಾವರಿ ಯೋಜನೆಗಳನ್ನು ತೆಗೆದುಕೊಂಡ ಪಕ್ಷದಲ್ಲಿ ಆ ಕ್ಷೇತ್ರದಲ್ಲಿ ಮುಳುಗಡೆಯಾಗುವ ಪ್ರದೇಶದ ಜನಗಳ ಕಷ್ಟಸುಖಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕು. ಹೇಮಾವತಿಯ ಎರಡನೆಯ ಹಂತವನ್ನು ಕಾರ್ಯಗತಮಾಡಬೇಕು, ತುಮಕೂರು ಜಿಲ್ಲೆಗೆ ನೀರನ್ನು ಕೊಡಬೇಕು ಎಂದು ನಮ್ಮ ತುಮಕೂರಿನ ಮಾನ್ಯ ಸ್ನೇಹಿತರು ಏನೊಂದು ವಾದವನ್ನು ಮಾಡುತ್ತಿದ್ದಾರೆಯೋ ಆ ವಾದ ಸರಿಯಲ್ಲ. ಹೇಮಾವತಿಯ ಯೋಜನೆಯ ಎರಡನೆಯ ಹಂತವನ್ನೂ ಕೂಡ ತೆಗೆದುಕೊಳ್ಳಬೇಕೆಂದರು ಒಂದು ವಾದವನ್ನು ಹೂಡುತ್ತೇವೆಂದರೆ ಆದರಿಂದ ಜಾಸ್ತಿ ಪ್ರದೇಶ ಮುಳುಗಡೆಯಾಗುತ್ತದೆ. ಇಂಥಾ ಒಂದು ಪ್ರದೇಶದ ಇನ್‌ವೆಸ್ಟಿಗೇಷನ್ ಆಗುತ್ತದೆ. ಆ ಪ್ರದೇಶದಲ್ಲಿ ಹೇಮಾವತಿ ಯೋಜನೆ ಆಗುತ್ತದೆ ಎಂದು ಅಲ್ಲಿ ಇಲ್ಲಿಯವರೆಗೂ ಕೂಡ ಯಾವ ಒಂದು ಅಭಿವೃದ್ಧಿಯ ಕಾರ್ಯ ಕೂಡ ಆಗಿಲ್ಲ. ಅಲ್ಲಿಯ ಜನ ಇವೊತ್ತು ಬೇಸತ್ತು ಹೋಗಿದ್ದಾರೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಅವರು ಬಹಳ ಕಷ್ಟದಿಂದ ಜೀವನವನ್ನು ನಡೆಸುತ್ತಿದ್ದಾರೆ. ಈ ಯೋಜನೆಯನ್ನು ಕಾರ್ಯಗತ ಮಾಡುವ ವಿಷಯದಲ್ಲಿ ಕೆಲವರು ವಿರೋಧವನ್ನು ವ್ಯಕ್ತಪಡಿಸಿದರೂ ಕೂಡ, ಕೆಲವು ಜನ ಈ ಒಂದು ಸಮಯದಲ್ಲಿ ಆ ಯೋಜನೆಯ ಮೊದಲನೆಯ ಹಂತವನ್ನು ಮಾತ್ರ ಪ್ರಾರಂಭ ಮಾಡುವುದರಿಂದ ಅಲ್ಲಿ ಸುಮಾರು 22 ಸಾವಿರ ಎಕರೆ ಜಮೀನು ಸಾಗಾಗುತ್ತದೆ, ಅದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ, ಎಂದು ಅಲ್ಲಿನ ಜನತೆ ಈ ಯೋಜನೆಯನ್ನು ವಿರೋಧ ಮಾಡುವುದನ್ನು ಕೈಬಿಡಿಸಿದ್ದಾರೆ. ಅವರು ಅಷ್ಟು ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಕೇಳಿರುವುದು ನ್ಯಾಯಬದ್ಧವಾದ ಸಲಹೆಯಾಗಿದೆ. ಈಗ ಆ ಯೋಜನೆಯಿಂದ ಕಷ್ಟಕ್ಕೆ ಒಳಗಾಗಿರತಕ್ಕವರಿಗೆ ಜಮೀನು, ಮತ್ತು ಹಣವನ್ನು ಕೊಡಿಸಿ ಅವರ ಪುನರ್‌ವಸತಿಯ ಕಾರ್ಯವನ್ನು ಫಲಕಾರಿಯಾಗಿ ಜಾಗ್ರತೆಯಾಗಿ ನಡೆಸಬೇಕೆನ್ನುವ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಈ ಕೆಲಸವನ್ನು ಮಾಡುವ ಜವಾಬ್ದಾರಿ ಬರೀ ಸರ್ಕಾರದ್ದೇ ಅಲ್ಲದೆ ನಮ್ಮದೂ ಕೂಡ ಆಗಿದೆ. ಆದರೆ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೋಸ್ಕರ ಸರ್ಕಾರದವರು ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈಗ ಆ ಯೋಜನಯಿಂದ ಮುಳುಗಡೆಯಾಗತಕ್ಕ ಪ್ರದೇಶದ ಜನಗಳಿಗೆ ಜಮೀನು ಕೊಡುವುದು, ಕಾಂಪೆನ್‌ಸೇಷನ್ ಕೊಡುವುದು, ಇವುಗಳನ್ನೆಲ್ಲಾ ಮಾಡಿ ಅವರಿಗೆ ಪುನರ್‌ವಸತಿ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕಾದರೆ ಅದಕ್ಕೆ ಎರಡು ಕೋಟಿ ರೂಪಾಯಿಗಳವರೆಗೂ ಖರ್ಚಾಗುತ್ತವೆ ಎಂದು ನನಗೆ ಕಾಣಿಸುತ್ತದೆ. ಈ ಯೋಜನೆಯ ಪ್ಲಾನು ಮತ್ತು ಎಸ್ಟಿಮೇಟುಗಳು 1960 ನೇ ಇಸವಿಯಲ್ಲಿಯೇ ಆಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಯಾವ ರೀತಿ ಹೇಳುತ್ತಿದ್ದಾರೆಂದರೆ ಈ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ 4 ಕೋಟಿ ರೂಪಾಯಿಗಳಿಂದ 8 ಕೋಟಿ ರೂಪಾಯಿಗಳವರೆಗೆ ಖರ್ಚಾಗ ಬಹುದು ಎಂದು ಹೇಳುತ್ತಿದ್ದಾರೆ.

ಅದೇ ರೀತಿ ಮುಳುಗಡೆ ಪ್ರದೇಶ ಬಹಳ ಕಡಿಮೆ ಎಂದು ಯೋಚನೆ ಮಾಡುವುದಾದರೂ ಕೂಡಿ ಹೇಮಾವತಿ ನದಿಯ ಎರಡೂ ತೀರಗಳಲ್ಲಿ ಬಹಳ ಫಲವತ್ತಾದ ತರೀ ಜಮೀನು ಇದೆ. ಹೇಮಾವತಿ ನದಿ ಯಾವತ್ತಿಗೂ ಕೂಡ ಪ್ರವಾಹದಿಂದ ಕೂಡಿರುತ್ತದೆ. ಆದುದರಿಂದ ಪ್ರವಾಹ ಇಳಿಯುವವರೆಗೂ ಕೂಡ ಹೇಮಾವತಿ ನದಿ ದಡದಲ್ಲಿರುವ ರೈತಾದಿ ಜನ ಸಾಗುವಳಿ ಮಾಡುವುದಕ್ಕೆ ತೊಂದರೆಯಾಗಿದೆ.

(ಶ್ರೀ ಎಸ್. ವಿ. ಪಾಪಣ್ಣ ಶೆಟ್ಟಿ)

ಹೀಗಿರುವಾಗ ಹೇಮಾವತಿ ಅಣೆಕಟ್ಟನ್ನು ಹಾಕಿ ಅದರಲ್ಲಿ 4 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡುವುದಕ್ಕೆ ಅವಕಾಶವಾದರೆ ಮುಳುಗಡೆ ಪ್ರದೇಶದಲ್ಲಿ ವ್ಯವಸಾಯಕ್ಕೆ ಉಪಯೋಗವಿಲ್ಲದ ಜಮೀನು ಎಷ್ಟಾಗುತ್ತದೆ ಅದಕ್ಕಿಂತ ಮಿಗಿಲಾಗಿ ಎರಡು ಕಡೆಯೂ ಇರುವ ಫಲವತ್ತಾದ ತರೀ ಜಮೀನು ಕೂಡ ಇದರಿಂದ ನಷ್ಟವಾಗುತ್ತದೆ. ಮುಳುಗಡೆ ಪ್ರದೇಶದಲ್ಲಿ ತಿರುಗಾಡತಕ್ಕ ನಮಗೆ ಫಲವತ್ತಾದ ತರೀ ಜಮೀನು ಉಪಯೋಗಕ್ಕೆ ಬರದೆ ಹೋಗಿ ದೇಶಕ್ಕೂ ನಷ್ಟವಾಗುತ್ತಿದೆಯಲ್ಲ ಎಂದು ಅನ್ನಿಸುತ್ತದೆ. ಅದರೂ ಎಲ್ಲರವಾದವೂ ಕೂಡ 1974ರ ಒಪ್ಪಂದವನ್ನು ನಾವು ಮುಂದುವರಿಸುವ ಹಾಗಿಲ್ಲ; 1974ರ ನಂತರ ಕಾವೇರಿ ನೀರನ್ನು ನಾವು ಉಪಯೋಗಿಸಿಕೊಳ್ಳುವ ರೀತಿಯಲ್ಲಿಲ್ಲ ಎಂಬುದೇ ಆಗಿದೆ. ಇದು ಶತಸಿದ್ಧವಾದ ಮಾತು. ಕಾವೇರಿ ನೀರನ್ನು 1974 ಅಲ್ಲ 1984 ಆದರೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಹಿಂದೆ ಆಗಿರುವ ಒಪ್ಪಂದದ ಪ್ರಕಾರ ನಾವು ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಕೂಡ ಅವಕಾಶವಿದೆ. ನಾನಾದರೂ ಈ ವಿಚಾರದಲ್ಲಿ ಖಡಾಖಡಿಯಾಗಿ ಮಾತನಾಡುವುದಾದರೆ ಇವತ್ತಿಗೂ ಕೂಡ ನಾವು ಅಂಕಿ ಅಂಶಗಳನ್ನು ನೋಡುವುದಾದರೆ ಹೇಮಾವತಿ ಯೋಜನೆ ನಿಜವಾಗಿಯೂ ಅಂಥ ಫಲದಾಯಕವಾದ ಯೋಜನೆಯಲ್ಲ.

ನಮ್ಮ ತುಮಕೂರು ಸ್ನೇಹಿತರಲ್ಲಿ ನಾನು ಹೇಳುವುದು ಇಷ್ಟೆ: ಸರ್ಕಾರದವರು ದಿಟ್ಟತನದಿಂದ ಎರಡನೆಯ ಹಂತವನ್ನು ಕಾರ್ಯಗತಗೊಳಿಸುತ್ತೇವೆ ಎಂದು ತೀರ್ಮಾನವನ್ನು ಕೈಗೊಳ್ಳಬೇಕು. ಒಂದು ಕಡೆ ನಾನು ಹೇಳಿದ ಹಾಗೆ ನಾವು ಮೊದಲನೆಯ ಹಂತವನ್ನು ಪ್ರಾರಂಭ ಮಾಡುತ್ತೇವೆ, ಆ ಕಡೆ ವಿರೋಧ ಕಡಿಮೆಯಾಗಬಹುದು ಎಂದು ಮೊದಲನೆಯ ಹಂತವನ್ನು ಮಾತ್ರ ಕಟ್ಟುತ್ತೇವೆಂದು ತಿಳಿಸಿ ಎರಡನೆಯ ಹಂತವನ್ನು ಆ ನಂತರ ಪ್ರಾರಂಭ ಮಾಡುತ್ತೇವೆಂದು ಹೇಳುವುದಾದರೆ, ಎರಡನೇ ಹಂತದ ಅಂಕಿ ಅಂಶಗಳ ಪ್ರಕಾರ ನಾವು ತಿಳಿದುಕೊಂಡಿರುವ ಮಟ್ಟಿಗೆ ಎರಡನೆಯ ಹಂತವನ್ನು ಕಟ್ಟುವುದಾದರೆ ಅದು ಒಂದು ದೊಡ್ಡ ದುರಂತವೆಂದು ನಾನು ಭಾವಿಸುತ್ತೇನೆ. ಆದುದರಿಂದ ಈಗಲೇ ಎರಡನೆಯ ಹಂತವನ್ನು ಕೈಗೊಳ್ಳುತ್ತೇವೆ ಅಥವಾ ಇಲ್ಲ ಎಂದು ಒಂದು ನಿರ್ಣಯವನ್ನು ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡುವುದು ಒಳ್ಳೆಯದು ಎಂದು ನನಗಾದರೂ ಅನ್ನಿಸುತ್ತದೆ.

ಈ ಯೋಜನೆ 30 ವರ್ಷಗಳಿಂದ ಕಾರ್ಯಗತವಾಬೇಕು ಎಂದು ಇದ್ದರೂ ಕೂಡ ಮುಳುಗಡೆ ಪ್ರದೇಶದ ಹತ್ತಿರದ ಪ್ರದೇಶಗಳಲ್ಲಿ ಯಾರಿಗೂ ಕೂಡ ಇವತ್ತು ಸಾಗುವಳಿಗೆ ಜಮೀನು ಇಲ್ಲದ ರೀತಿ ಆಗಿದೆ. ಆ ಪ್ರದೇಶದಲ್ಲಿ ಕೆಲವು ಭೂಮಿಯನ್ನು ಯಾರಿಗೂ ದರಖಾಸ್ತು ಮುಖಾಂತರ ವಿಲೇ ಮಾಡ ಕೂಡದು ಅಥವಾ ಅದನ್ನು ಮುಳುಗಡೆ ಪ್ರದೇಶದ ಜನಗಳಿಗೋಸ್ಕರ ನಿಗದಿ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರ ಒಂದು ಹುಕ್ಕುಂ ಕಳಿಸಿದೆ ಎಂದು ನಾನು ಕೇಳಿದ್ದೇನೆ.

ಇವೊತ್ತು ಕಾನೂನು ಬದ್ಧವಾಗಿ ಜಮೀನು ಮುಳುಗಡೆಯಾಗತಕ್ಕ ಪ್ರದೇಶದ ಜನಗಳಿಗೆ ಇಲ್ಲಿಯವರೆಗೂ ಕೂಡ ಒಂದು ನೋಟೀಸನ್ನೂ ಕೊಟ್ಟಿಲ್ಲ, ನಿಮ್ಮ ಜಮೀನನ್ನು ನಾವು ಅಕ್ವೈರ್ ಮಾಡಿಕೊಳ್ಳುತ್ತೇವೆ ಎಂದು ತಿಳಿಸದೆ ಅಧಿಕಾರಿಗಳು ಅವರನ್ನು ಬೆದರಿಸುತ್ತಿದ್ದಾರೆ. ಈ ವಿಚಾರವನ್ನು ಶ್ರೀ ತಿಮ್ಮಪ್ಪ ಗೌಡರೂ ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ಒಂದು ಕಾನ್‌ಫರೆನ್ಸ್ ಆದಾಗ ರೈತಾಪಿ ಜನಗಳಿಗೆ ನಾವು ಒಂದು ಭರವಸೆಯನ್ನು ಕೊಟ್ಟಿದ್ದೇವೆ. ಯಾವರೀತಿ ನೀವು ಜಾಗವನ್ನು ಬಿಟ್ಟು ಹೊರಡುತ್ತೀರಿ ಅದೇ ರೀತಿ ನಿಮಗೆಲ್ಲ ಪುನರ್ವಸತಿಯನ್ನು ಮಾಡುತ್ತಿದ್ದೇವೆ ಎಂದು ಭರವಸೆ ಕೊಟ್ಟಿದ್ದೇವೆ. ಈಗಲೂ ಕೂಡ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅಲ್ಲಿ ಬಹಳ ವರ್ಷಗಳಿಂದ ಇರುವಂಥ ಜನ ನಾಳೆಯ ದಿನ ದಿಕ್ಕಾಪಾಲಾಗಿ ಓಡುವಂಥ ಪರಿಸ್ಥಿತಿ ಇದೆ. ಅದನ್ನು ತಪ್ಪಿಸಲು ಅರಣ್ಯವನ್ನಾದರೂ ಈ ಜನರ ಪುನರ್ವಸತಿಗೆ ಮತ್ತು ಅವಲಂಬನೆಗೆ ಬಿಡುಗಡೆ ಮಾಡಿಕೊಡಬೇಕು. ಶರಾವತಿ ಯೋಜನೆ ಸಂಬಂಧದಲ್ಲಿ ಯಾವರೀತಿ ಪುನರ್ವಸತಿ ಕಾರ್ಯವನ್ನು ನಡೆಸಿದರೋ ಅದೇ ರೀತಿ ಇಲ್ಲಿಯೂ ಮಾಡಬೇಕು. ಅದಕ್ಕೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿ ಆ ಜನಗಳಿಗೆ ತೊಂದರೆಯಾಗದಂಥ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುವಂತೆ ಮಾಡಬೇಕು. ನೂರಾರು ವರ್ಷಗಳಿಂದ ಅಲ್ಲ ಸ್ವಲ್ಪ ಜಮೀನನ್ನು ಇಟ್ಟುಕೊಂಡು ಅದರಿಂದ ಜೀವನ ನಡೆಸುತ್ತಿರುವ ರೈತಾಪಿ ಜನಗಳು ಕಂಗಾಲಾಗಿ ಮುಂದೆ ಹೇಗೆ ಜೀವನ ಮಾಡಬೇಕು ಎನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಸಾಮಾನ್ಯವಾಗಿ ಇಂಥ ದೊಡ್ಡ ಯೋಜನೆಗಳಲ್ಲಿ ಮುಳುಗಡೆಯಾಗುವ ಪ್ರದೇಶದ ಜನಗಳ ಪುನರ್ವಸತಿ ಇನ್ನೂ ಕೆಲವು ಕಡೆ ಆಗಿಲ್ಲ ಎಂದು ಕೇಳಿದ್ದೇನೆ. ಅಂಥ ಒಂದು ದುರಂತವನ್ನು ನಮ್ಮ ಜಿಲ್ಲೆಯಲ್ಲಿ ನಿರೀಕ್ಷೆ ಮಾಡುವುದು ಬೇಡ, ಪುನರ್ವಸತಿ ಕಾರ್ಯ ಬಹಳ ತುರ್ತಾಗಿ ನಡೆಯಬೇಕು ಎಂದು ಹೇಳುತ್ತೇನೆ.

ಯಗಚಿ ಹೊಳೆಯ ನೀರನ್ನು ಹಾಸನ ಜಿಲ್ಲೆಯಿಂದ ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರಕ್ಕೆ ಕೊಂಡೊಯ್ಯಬೇಕು ಎಂದು ಮಾನ್ಯ ಮಸಿಯಪ್ಪನವರು ಮಾತನಾಡುತ್ತ ಹೇಳಿದರು. ಯಗಚಿ ನೀರನ್ನು ವಾಣಿವಿಲಾಸ ಸಾಗರಕ್ಕೆ ತಗೆದುಕೊಂಡು ಹೋಗುವ ವಿಷಯದಲ್ಲಿ ಆ ನೀರು ಹಾಸನ ಜಿಲ್ಲೆಯವರೆಗೆ ಇಲ್ಲದೆ ಚಿತ್ರದುರ್ಗ ಜಿಲ್ಲೆಗೆ ಸಾಗಿಸುತ್ತಾರೆ ಎಂದು ನಾವು ಅನೇಕರು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿದೆವು. ಆದರೆ ಈಚೆಗೆ ಒಂದು ಸರ್ವೆ ಮಾಡಿ ನಮ್ಮ ಹಾಸನ ಜಿಲ್ಲೆಯಲ್ಲಿ ಕೂಡ 45 ಸಾವಿರ ಎಕರೆ ನೀರಾವರಿಯಾಗುತ್ತದೆ, ಆ ರೀತಿ ಉಪಯೋಗವಾದ ಮೇಲೆ ಫ್ಲಡ್‌ವಾಟರ್ ಏನಿದೆ ಅದನ್ನು ಮಾತ್ರ ವಾಣಿವಿಲಾಸ ಸಾಗರಕ್ಕೆ ತೆಗೆದುಕೊಂಡು ಹೋಗುವುದು ಎಂದು ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ನಾನೂ ಕೂಡ ನಮ್ಮ ಚಿತ್ರದುರ್ಗ ಜಿಲ್ಲೆಯ ಸ್ನೇಹಿತರಲ್ಲಿ ಮನವಿ ಮಾಡಿಕೊಂಡೆ; ಈ ಯೋಜನೆಯನ್ನು ಬೇಗ ಕಾರ್ಯಗತಗೊಳಿಸಿದರೆ ನಮ್ಮ ಜಿಲ್ಲೆಯಲ್ಲಿಯೂ ನೀರಾವರಿ ಸಾಗುವಳಿಗೆ ಅನುಕೂಲವಾಗುವುದಲ್ಲದೆ ಚಿತ್ರದುರ್ಗ ಜಿಲ್ಲೆಗೂ ಉಪಯೋಗವಾಗುತ್ತದೆ; ನಾವು ನಿಮಗೆ ಎಲ್ಲ ರೀತಿಯ ಸಹಕಾರವನ್ನೂ ಕೊಡುತ್ತೇವೆ, ನಾವು ಯೋಜನೆಯನ್ನು ವಿರೋಧ ಮಾಡುತ್ತೇವೆಂದು ತಿಳಿಯಬೇಡಿ ಎಂದು ಹೇಳಿದೆವು. ಅದು ಬಹಳ ಪ್ರಾಮುಖ್ಯವಾದ ಯೋಜನೆ. ಯಗಚಿ ನದಿಯ ನೀರಿನ ಉಪಯೋಗವನ್ನು ನಾವು ಆದಷ್ಟು ಬೇಗ ಪಡೆಯುವುದಾದರೆ ಹೇಮಾವತಿ ಯೋಜನೆಯಲ್ಲಿ ಮುಳುಗಡೆಯಾಗುವ ಪ್ರದೇಶದ ಜನಗಳಿಗೆ ಕೂಡ ಸ್ವಲ್ಪ ಜಮೀನನ್ನು ಇಲ್ಲಿ ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಕೂಡ ಬೇಗ ಕಾರ್ಯಗತಗೊಳಿಸಬೇಕು ಎಂದು ಹೇಳಿ ಈ ವಿಚಾರದಲ್ಲಿ ನನಗೆ ಒಂದೆರಡು ಮಾತನ್ನು ಆಡುವುದಕ್ಕೆ ಅವಕಾಶ ಕೊಟ್ಟ ಸಭಾಪತಿಗಳನ್ನು ವಂದಿಸುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ಕಾವೇರಿ ನೀರಿನ ವಿಷಯದಲ್ಲಿ ನಿರ್ಣಯ ಈ ಸಭೆಯಲ್ಲಿ ಎರಡು ದಿವಸ ಚರ್ಚೆಯಾಗಿದೆ. ಇದು ಬಹಳ ಪ್ರಾಮುಖ್ಯವಾದ ನಿರ್ಣಯ. ಕಾವೇರಿ ಮತ್ತು ಅದರ ಉಪನದಿಗಳ ನೀರಿನ ಅನುಕೂಲತೆಯನ್ನು ನಮ್ಮ ಸಂಸ್ಥಾನಕ್ಕೆ ಮಾಡಿಕೊಳ್ಳಬೇಕು ಎಂದು ಈ ಮಾನ್ಯ ಸಭಾಸದಸ್ಯರೆಲ್ಲರೂ ಕೂಡ ಏಕಾಭಿಪ್ರಾಯವನ್ನು ಕೊಟ್ಟಿದ್ದಾರೆ. 1924ರ ಒಪ್ಪಂದದ ಪ್ರಕಾರ ಕಾವೇರಿ ಮತ್ತು ಆದರ ಉಪನದಿಗಳ ನೀರಿನ ಅನುಕೂಲತೆಯನ್ನು ಕಳೆದ 40 ವರ್ಷಗಳಿಂದ ನಮ್ಮ ರಾಜ್ಯ ಸರ್ಕಾರದವರು ಸುಮಾರು ಅರ್ಧ ಭಾಗವನ್ನು ಮಾತ್ರ ಉಪಯೋಗಿಸಿದ್ದಾರೆಂದರೆ ತಪ್ಪಾಗಲಾರದು. ಇನ್ನು 10 ವರ್ಷದಲ್ಲಿ ಈಗ ಉಳಿದಿರತಕ್ಕ ಕಾವೇರಿ ಮತ್ತು ಅದರ ಉಪನದಿಗಳ ಅನುಕೂಲತೆಯನ್ನು ನಮ್ಮ ದೇಶದಲ್ಲಿ ಲಕ್ಷೋಪಲಕ್ಷ ಎಕರೆ ನೀರಾವರಿ ಮಾಡುವುದಕ್ಕೋಸ್ಕರವಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಇದನ್ನು ಈ ಹತ್ತು ವರ್ಷಗಳಲ್ಲಿ ಪೂರೈಸಬೇಕಾದ ಕೆಲಸ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಈ ಹತ್ತು ವರ್ಷದಲ್ಲಿ ಕಾವೇರಿ ಮತ್ತು ಅದರ ಉಪನದಿಗಳ ಪ್ರಾಜೆಕ್ಟುಗಳನ್ನು ಕಟ್ಟಬೇಕಾದರೆ ಅನೇಕ ಸದಸ್ಯರು ಹೇಳಿದ ಹಾಗೆ 50–60 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುತ್ತ ಹೇಳಿದರು ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯವನ್ನು ತಂದು ಈ ಯೋಜನೆಗಳಿಗೆ ಹಣವನ್ನು ಕೂಡಿಸುವ ಭರವಸೆಯನ್ನು ಈ ಸಭೆಗೆ ಕೊಟ್ಟಿದ್ದಾರೆ. ನಾನಾದರೂ ಸಲಹೆ ಮಾಡತಕ್ಕದ್ದು ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇರತಕ್ಕ ಪ್ರಾಜೆಕ್ಟುಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸತಕ್ಕದ್ದು ಬಹಳ ಪ್ರಾಮುಖ್ಯವಾದುದು.

ಆಂಧ್ರ ಪ್ರಾಂತ್ಯದವರು ಮತ್ತು ಮದ್ರಾಸ್ ಸರ್ಕಾರದವರು ಎಷ್ಟರಮಟ್ಟಿಗೆ ಈ ನೀರನ ಸೌಕರ್ಯವನ್ನು ಉಪಯೋಗಿಸಿಕೊಂಡಿದ್ದಾರೆ ಎನ್ನುವುದು ಈ ಮಾನ್ಯ ಸಭಾ ಸದಸ್ಯರಿಗೂ ಸರ್ಕಾರಕ್ಕೂ ಗೊತ್ತಿರುವ ವಿಚಾರ. ಅವರ ನೀರಾವರಿ ಪರ್ಸೆಂಟೇಜ್ ತೆಗೆದುಕೊಂಡರೆ ಆಂಧ್ರದಲ್ಲಿ ಸೇಕಡ 27 ಇದೆ, ಮದ್ರಾಸಿನಲ್ಲಿ ಇನ್ನೂ ಜಾಸ್ತಿ ಇದೆ. ನಾವಾದರೂ ಕೇವಲ 7% ನೀರಾವರಿಯನ್ನು ಸುಮಾರು ಎರಡೂವರೆ ಕೋಟಿ ಜನಸಂಖ್ಯೆ ಇರತಕ್ಕ ದೇಶದಲ್ಲಿ ಹೊಂದಿದ್ದೇವೆ. ನಾವು ಅವರ ಮಟ್ಟಕ್ಕೆ ಬರಬೇಕಾದರೆ ಎಷ್ಟರಮಟ್ಟಿಗೆ ಶ್ರಮಿಸಿ, ಎಷ್ಟು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೋ? ಅಗತ್ಯ ತ್ವರಿತತೆಯಿಂದ ನಮ್ಮ ಯೋಜನೆಗಳ ಕೆಲಸವನ್ನು ಕೈಕೊಳ್ಳಬೇಕಾದಂಥ ಬಹಳ ಹೆಚ್ಚಿನ ಹಾಗೂ ಗುರುತರವಾದ ಜವಾಬ್ದಾರಿಯಾಗಿದೆ ಎನ್ನುವುದನ್ನು ಒತ್ತಿ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಕಾವೇರಿ ಉಪನದಿಗಳ ಯೋಜನೆಗಳ ಪೈಕಿ ಹಾರಂಗಿ ಮತ್ತು ಕಂಬದಕಡ ಯೋಜನೆಗಳ ವಿಚಾರದಲ್ಲಿ ಸದಸ್ಯರು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಇದನ್ನು ಒಂದು ರಾಜಕೀಯ ಪ್ರಶ್ನೆಯಾಗಿ ಈ ಸಭೆಯ ಮುಂದೆ ಪ್ರಸ್ತಾಪ ಮಾಡಿದುದು ದುರ್ದೈವದ ಸಂಗತಿ. ಲಕ್ಷಾಂತರ ಎಕರೆ ನೀರಾವರಿಯಾಗುತ್ತದೆಂದು ತಜ್ಞರು ಆಲೋಚನೆ ಮಾಡಿ, ಮುಳುಗಡೆಯಾಗುವುದಕ್ಕಿಂತ ಹೆಚ್ಚಾಗಿ ಜನರಿಗೆ ಉಪಯುಕ್ತವಾಗುತ್ತದೆ ಎಂದು ತೀರ್ಮಾನ ಮಾಡಿದ್ದಾರೆ. ಹಾರಂಗಿ ಅಣೆಯನ್ನು 180 ಅಡಿ ಕಟ್ಟಬೇಕಾಗಿತ್ತು. ಅದಕ್ಕೆ ಬದಲು 120 ಅಡಿ ಒಂದು ಕಡೆ, ಇನ್ನೊಂದು ಕಡೆ, 80 ಅಡಿ, ಹೀಗೆ ಎರಡು ಕಡೆ ಕಟ್ಟಬೇಕೆಂದು ಹೇಳಿದ್ದಾರೆ. ಕಂಬದಕಡದ ವಿಚಾರದಲ್ಲಿ

(ಶ್ರೀ ಡಿ. ಎಂ. ಸಿದ್ದಯ್ಯ)

ಕೆಲವರು ಉದ್ವೇಗದಿಂದ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳಿದರು. ಈ ಸದಸ್ಯರ ಉದ್ವೇಗಕ್ಕೆ ಅವಕಾಶವಿಲ್ಲವೆಂದು ಹೇಳಬೇಕಾಗಿದೆ. ಕಂಬದಕಡ ಅಣೆಯ ನಿರ್ಮಾಣದಿಂದ ಕೊಡಗು ಮುಳುಗಡೆಯಾಗುತ್ತದೆಂಬ ಭೀತಿ ಅವರಿಗಿದ್ದರೆ ಅದಕ್ಕೆ ಆಧಾರವಿಲ್ಲ. ಕೊಡಗನ್ನು ಮುಳುಗಿಸಿ ಅದರಿಂದ ಇತರರಿಗೆ ಸೌಕರ್ಯ ಮಾಡಬೇಕೆಂಬ ಉದ್ದೇಶ ಸರಕಾರಕ್ಕಿಲ್ಲ. ಕೊಡಗನ್ನು ಉಳಿಸಿಕೊಳ್ಳುವುದಲ್ಲದೆ, ಈ ಯೋಜನೆಯಿಂದ ಸಹಸ್ರಾರು ಎಕರೆ ನೀರಾವರಿಯಾಗಿ ಜನರಿಗೆ ಉಪಯುಕ್ತವಾದರೆ ಅದನ್ನು ಕಟ್ಟುವುದು ಯೋಗ್ಯ. ನಿಜವಾಗಿಯೂ ಕೊಡಗಿನಲ್ಲಿ ಹೆಚ್ಚು ಮುಳುಗಡೆಯಾಗಿ ತೊಂದರೆಯಾದರೆ ತಜ್ಞರಲ್ಲಿ ವಿಚಾರಮಾಡಿ, ಯಾವ ರೀತಿ ಕಟ್ಟಬೇಕೆಂದು ಆಲೋಚನೆ ಮಾಡಿ, ಸೂಕ್ತವಾದ ರೀತಿಯಲ್ಲಿ ಕಟ್ಟುತ್ತಾರೆಂದು ನನ್ನ ಭಾವನೆ. ಮೈಸೂರಿನ ಇತರ ಭಾಗಗಳಿಗೆ ಅನುಕೂಲವಾಗುವ ಯೋಜನೆಗಳಲ್ಲಿ ಕಬಿನಿ ಯೋಜನೆ ಮುಖ್ಯವಾದುದು. ಹತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ಇದನ್ನು ಪ್ರಾರಂಭಮಾಡಿದ್ದಾರೆ. ಮಳೆ ಬೆಳೆಗಳಿಲ್ಲದೆ ತೊಂದರೆ ಪಡುತ್ತಿರುವ ರೈತರಿರುವ ಪ್ರದೇಶದಲ್ಲಿ ಸುಮಾರು 60 ಸಾವಿರ ಎಕರೆಗಿಂತ ಹೆಚ್ಚು ಪ್ರದೇಶಕ್ಕೆ ನೀರಾವರಿಯಾಗಿ ಸಹಾಯವಾಗುತ್ತದೆ. ಕಬಿನಿ ಅಣೆಕಟ್ಟನ್ನು ಸ್ವಲ್ಪ ಎತ್ತರಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದರಿಂದ ಗುಂಡ್ಲುಪೇಟೆ, ನಂಜನಗೂಡು, ಚಾಮರಾಜನಗರ ತಾಲ್ಲೂಕುಗಳ ಕೆಲವು ಭಾಗ ನೀರಾವರಿಯಾಗುತ್ತದೆ. ಈ ವಿಷಯವನ್ನು ತಜ್ಞರಿಂದ ಪುನರಾಲೋಚನೆ ಮಾಡಿಸಿ ಎತ್ತರ ಮಾಡುವುದರಿಂದ ಇತರ ಕಡೆಗಳಿಗೂ ಉಪಯೋಗವಾಗುತ್ತದೆ. ಶ್ರೀಮತಿ ನಾಗರತ್ನಮ್ಮನವರು ಈ ಪ್ರಶ್ನೆಯನ್ನೆತ್ತಿ ನಂಜನಗೂಡಿನ ನೀರು ಗುಂಡ್ಲುಪೇಟೆಯಲ್ಲಿ ಹರಿಯುವುದಕ್ಕೆ ಅವಕಾಶಮಾಡಬೇಕೆಂದು ಹೇಳಿದರು. ಆ ಪ್ರದೇಶದಲ್ಲಿ ಜನರು ಕೇವಲ ಕಡಲೇಕಾಯಿ ತಿಂದು ನೀರು ಕುಡಿದು ವರ್ಷದಲ್ಲಿ ಆರು ತಿಂಗಳ ಕಾಲ ಜೀವನ ಮಾಡುತ್ತಾರೆ. ಆ ಜನರಿಗೆ ಕಳೆದ ಏಳೆಂಟು ವರ್ಷಗಳಿಂದಂತೂ ಬಹಳ ತೊಂದರೆಯಾಗಿದೆ. ಬೊಂಬಾಯಿ ಮತ್ತು ಹೈದರಾಬಾದು ಕರ್ಣಾಟಕದ ಜನರಿಗೆ ಕೃಷ್ಣಾ ನದಿಯ ನೀರಿನಿಂದ ಎಷ್ಟು ಸೌಕರ್ಯವೋ ಅಷ್ಟು ಕಬಿನಿ ಯೋಜನೆಯಿಂದ ಮೈಸೂರು ಡಿಸ್ಟ್ರಿಕ್ಟಿನ ಜನರಿಗೆ ಉಪಯೋಗವಾಗುತ್ತದೆ. ಆದುದರಿಂದ ಅದನ್ನು ಎತ್ತರಿಸುವ ಕೆಲಸವನ್ನು ತಜ್ಞರಲ್ಲಿ ಆಲೋಚನೆಮಾಡಿ ಕಾರ್ಯಗತ ಮಾಡುತ್ತಾರೆಂದು ನಂಬಿದ್ದೇನೆ.

ಸುವರ್ಣಾವತಿ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸದಿದ್ದರೆ, ಮಾನ್ಯ ಸದಸ್ಯರನೇಕರು ಹೇಳಿದಂತೆ ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ. ಚಿಕ್ಕಹೊಳೆ ಯೋಜನೆ ಸುವರ್ಣಾವತಿಯ ಹತ್ತಿರವಿರುವುದರಿಂದ ಅಲ್ಲಿ ಏರ್ಪಾಡು ಮಾಡಬೇಕು. ಇದಕ್ಕೆ ಮೂರನೆಯ ಯೋಜನೆಯಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿ ಖರ್ಚಾಗಬಹುದು. ಇತರ ದೊಡ್ಡ ಯೋಜನೆಗಳಿಗೆ ಹೋಲಿಸಿದರೆ ಇದು ಬಹಳ ಕಡಮೆ. ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಆಶಾದಾಯಕವಾದ ಭರವಸೆ ಕೊಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ, 1974ನೆಯ ಇಸವಿಗೆ ಮುಗಿಯುವುದಾಗಿರುವ ಒಪ್ಪಂದಗಳೇನಿವೆಯೋ ಅವುಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವುದು ಕಷ್ಟ. ಕೃಷ್ಣಾಗೋದಾವರಿ ವಿಚಾರದಲ್ಲಿ 1951ನೆಯ ಇಸವಿಯ ಒಪ್ಪಂದ ಪೂಂಟೆಂದು ನಾವು ಹೇಳುತ್ತೇವೆ. ಸರಕಾರ ಇಲ್ಲವೆಂದು ಹೇಳುತ್ತಾರೆ. ನಾಗಾರ್ಜುನ ಸಾಗರ ಮತ್ತು ಶ್ರೀಶೈಲ ಯೋಜನೆಗಳನ್ನು ಅಗಲೇ ಕಟ್ಟಿದ್ದಾರೆ. ಅವರು ಹೇಳುವುದನ್ನು ಹೇಳುತ್ತಾರೆ, ನಾವು ಉಂಟು ಎಂದು ಹೇಳುತ್ತೇವೆ. ಹೀಗೆಯೇ 1974ರಲ್ಲಿ ಕಟ್ಟಬೇಕೆಂದಿರುವುದು ಕಾವೇರಿ ನೀರಿನ ಸಂಬಂಧವಾದ ಯೋಜನೆಗಳನ್ನು ಇಷ್ಟು ವರ್ಷಗಳಲ್ಲಿ ಮುಗಿಸಬೇಕೆಂದು ಹೇಳುವುದು ಸಹಜವಾದರೂ ಈಗಿರುವ ಯೋಜನೆಗಳನ್ನೂ, ಇವಕ್ಕೆ ಬೇಕಾದ ಹಣ ಮತ್ತು ಎಷ್ಟು ಕಾಲದಲ್ಲಿ ಮುಗಿಯಬೇಕೆಂಬ ವಿಚಾರವನ್ನೂ ವ್ಯವಹಾರಿಕ ದೃಷ್ಟಿಯಿಂದ ನೋಡಿದರೆ 1974 ರೊಳಗೆ ಮುಗಿಸುವುದು ಕಷ್ಟವೆಂದು ಕಾಣುತ್ತದೆ. ಆ ಒಪ್ಪಂದವನ್ನು ಮುರಿಯಬೇಕೆಂದು ನಾನು ಹೇಳುವುದಿಲ್ಲ. ಮುಖ್ಯ ಮಂತ್ರಿಗಳು ವಿಶೇಷ ಆಸಕ್ತಿವಹಿಸಿ, ಅದನ್ನು ಮುಂದುವರಿಸಿ, ಇನ್ನು ನಾಲ್ಕಾರು ವರ್ಷ ಮುಂದೆ ಹಾಕಿ, ಅದಕ್ಕೇನು ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ. In the agreement it is stated :

> "The Mysore Government and the Madras Government further agree that the limitations and arrangements embodied in clauses (iv) to (vii) *supra* shall, at the expiry of fifty years from the date of the execution of these presents be opened to

> reconsideration in the light of the experience gained and of an examination of the possibilities of the further extension of irrigation within the territories of the respective Government and to such modifications and additions as may be mutually agreed upon as the result of such reconsideration.,"

ಎಂದಿದೆ. 1974ರಲ್ಲಿ ಮುಗಿಯುವುದಿಲ್ಲ, ಮುಗಿಸಬೇಕಾದ ಅಗತ್ಯವೂ ಇಲ್ಲ, ಆ ಒಪ್ಪಂದವನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಅವಕಾಶವಿದೆ ಎಂದು ಮುಖ್ಯ ಮಂತ್ರಿಗಳು ಮೊನ್ನೆ ಮಾತನಾಡುವಾಗ ಭರವಸೆಯನ್ನು ಕೊಟ್ಟಿದ್ದಾರೆ. ಕಾವೇರಿ ಮತ್ತು ಅದರ ಉಪನದಿಗಳ ಪಾತ್ರದ ಯೋಜನೆಗಳ ಬಗ್ಗೆ ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳ ವಿಚಾರದಲ್ಲಿ ಎಷ್ಟು ಆಸಕ್ತಿ ವಹಿಸಿದ್ದಾರೋ ಹಾಗೆಯೇ ಹೆಚ್ಚಿನ ಶ್ರದ್ಧಾಸಕ್ತಿಗಳನ್ನು ವಹಿಸಿ ಕಾರ್ಯಗತ ಮಾಡಿ ವಿಶಾಲ ಮೈಸೂರಿಗೆ ಅನುಕೂಲಮಾಡಬೇಕು. ವಿಶಾಲ ಮೈಸೂರು ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕಾದರೆ ಮೊದಲು ನೀರಾವರಿ ಸೌಕರ್ಯ ಹೆಚ್ಚಬೇಕು. ಕಬಿನಿ ಯೋಜನೆಯಿಂದ ವಿದ್ಯುಚ್ಛಕ್ತಿ ಕೂಡ ಉತ್ಪತ್ತಿಯಾಗುತ್ತದೆ. ಶರಾವತಿ ಮತ್ತು ಕಾವೇರಿಯಿಂದ ವಿದ್ಯುಚ್ಛಕ್ತಿ ಉತ್ಪತ್ತಿವಿಷಯದಲ್ಲಿ ಎಷ್ಟು ಆಸಕ್ತಿ ವಹಿಸುತ್ತಿದ್ದೇವೊ ಅದಕ್ಕಿಂತ ಹೆಚ್ಚಾಗಿ ನೀರಾವರಿ ವಿಚಾರದಲ್ಲಿ ಆಸಕ್ತಿವಹಿಸಿ ಕೇಂದ್ರ ಸರಕಾರದಿಂದ ಹಣವನ್ನೊದಗಿಸಿಕೊಂಡು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಮುಳುಗಡೆ ಪ್ರದೇಶದಲ್ಲಿ ರೈತರಿಗೇನು ಸೌಕರ್ಯಮಾಡಿ ಕೊಡಬೇಕೋ, ಅವರಿಗೇನು ಪರಿಹಾರ ಕೊಡಬೇಕೋ ಅದರಲ್ಲಿಯೂ ತೀವ್ರಾಸಕ್ತಿ ವಹಿಸುತ್ತಾರೆ ಎಂದು ನಂಬಿದ್ದೇನೆ.

ನನ್ನ ಮಾತನ್ನು ಮುಗಿಸುವುದಕ್ಕಿಂತ ಮುಂಚೆ ಒಂದು ಮಾತು ಹೇಳಬೇಕಾಗಿದೆ. ಕಾವೇರಿ ಮತ್ತು ಅದರ ಉಪನದಿಗಳಿಗೆ ಸಂಬಂಧಪಟ್ಟ ಕೆಲವು ಯೋಜನೆಗಳ ವಿಚಾರವನ್ನು ಕೆಲವರು ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ಯೋಜನೆಗಳನ್ನು ಮಾಡಲು ವಿಳಂಬ ಮಾಡಿರುವುದರಿಂದ ಅನಾವಶ್ಯಕವಾದ ಟೀಕೆಗಳಿಗೆ ಅವಕಾಶವಾಗಿದೆ. ನಾನು ಮೊದಲೇ ಹೇಳಿದಂತೆ, ಲಿಖಿತ ಮೂಲಕ ಉತ್ತರ ಕೊಡುವುದಕ್ಕೆ ಬದಲು ಕೆಲಸಗಳನ್ನು ಪ್ರಾರಂಭ ಮಾಡಿದರೆ ಈ ವ್ಯವಹಾರಗಳೆಲ್ಲವೂ ಮಾಯವಾಗುತ್ತವೆ. ಹಾರಂಗಿ, ಕಂಬದಕಡ ಯೋಜನೆಗಳ ಕೆಲಸವನ್ನು ಪ್ರಾರಂಭಮಾಡಿ ಕೆಲಸದ ಮೂಲಕ ಉತ್ತರ ಕೊಡುವುದರಿಂದ ಈ ವಿವಾದ ಕೊನೆಗೊಳ್ಳುವುದಲ್ಲದೆ ಕೋಟ್ಯಾಂತರ ಜನರಿಗೆ ಸಂತೋಷವಾಗುತ್ತದೆಂಬುದನ್ನು ಸರಕಾರದ ಗಮನಕ್ಕೆ ತರಲು ಈ ನಿರ್ಣಯವನ್ನು ತಂದಿದ್ದಾರೆ. ಇದಕ್ಕಾಗಿ ಅವರನ್ನು ಮನಸಾರ

5-30 P.M.

ವಂದಿಸುತ್ತೇನೆ. ನಲ್ವತ್ತು ವರ್ಷಗಳ ಹಿಂದೆ ಈ ಅಗ್ರಿಮೆಂಟು ಆಗಿದೆ. ಈ ಅಗ್ರಿಮೆಂಟು ಮುಗಿಯುವುದಕ್ಕೆ ಇರುವ ಹತ್ತು ವರ್ಷಗಳ ಅವಧಿಯಲ್ಲಿ ಪ್ರಾಜೆಕ್ಟ್ ಕೆಲಸವಾಗಬೇಕಾಗಿದೆ. ಈ ಹಿಂದೆ ಕೆಲಸ ಪ್ರಾರಂಭವಾಗಲಿಲ್ಲ. ಈ ಮೊದಲೇ ಪ್ರಾಜೆಕ್ಟ್ ಕೆಲಸವಾಗಿದ್ದರೆ ಕಾವೇರಿ ನೀರು ಉಪಯೋಗವಾಗುತ್ತಿತ್ತು. ಮದ್ರಾಸ್ ರಾಜ್ಯದವರು ಕಾವೇರಿ ನೀರು ಉಪಯೋಗಿಸುತ್ತಿದ್ದಾರೆ. ಅದೇ ರೀತಿ ಮೈಸೂರು ಸರಕಾರ ಸಹ ನೀರು ಉಪಯೋಗಿಸಬಹುದಾಗಿತ್ತು. ಅಗ್ರಿಮೆಂಟನ್ನು ಅಕ್ಷರಶಃ ಅನ್ವಯಿಸುವುದಕ್ಕಿಂತ ನಿಜವಾಗಿಯೂ ಅದರ ಅರ್ಥ ಏನಿದೆ ಎಂಬುದನ್ನು ಅರ್ಥಮಾಡಿಕೊಂಡು ಅದಕ್ಕೆ ಅನುಗುಣವಾಗಿ ಪ್ರಾಜೆಕ್ಟ್ ಕಟ್ಟಿ ನೀರನ್ನು ಉಪಯೋಗಿಸುವುದಕ್ಕೆ ಸೌಕರ್ಯ ಮಾಡಿಕೊಡುವುದು ಜಾಣತನ. ಆಂಧ್ರ ಸರಕಾರದವರೂ ಮದ್ರಾಸ್ ಸರಕಾರದವರೂ ಬಹು ಚಾಕಚಕ್ಯತೆಯಿಂದ ಕೇಂದ್ರ ಸರಕಾರದಿಂದ ಹಣ ಪಡೆದುಕೊಂಡು ಪ್ರಾಜೆಕ್ಟ್ ಕಟ್ಟುತ್ತಿದ್ದಾರೆ. ಈ ವಿಚಾರದಲ್ಲಿ ಆಂಧ್ರ ಸರಕಾರದಿಂದಲೂ ಮದ್ರಾಸ್ ಸರಕಾರದಿಂದಲೂ ನಮ್ಮ ಮಂತ್ರಿಮಂಡಳ ಸ್ಫೂರ್ತಿ ಪಡೆಯಬೇಕು. ನಮಗೆ 56 ಪರ್ಸೆಂಟ್ ಸಹಾಯ ಕೊಡುತ್ತಿದ್ದರೆ ಕೇಂದ್ರದವರು ಅವರಿಗೆ 58 ಪರ್ಸೆಂಟ್ ಸಹಾಯ ಕೊಡುತ್ತಿದ್ದಾರೆ. ನಮ್ಮ ಮೈಸೂರು ದೇಶ ಶ್ರೀಮಂತರ ದೇಶ. ಇವರಿಗೆ ಹಣದ ಸಹಾಯದ ಅವಶ್ಯಕತೆ ಇಲ್ಲಾ ಎಂದು ಕೇಂದ್ರದವರು ತಪ್ಪು ತಿಳಿದುಕೊಂಡಿದ್ದಾರೆ. ಈ ತಪ್ಪು ತಿಳುವಳಿಕೆಯನ್ನು ಆದಷ್ಟು ಬೇಗ ಹೋಗಲಾಡಿಸಬೇಕು. ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಆಲ್ ಇಂಡಿಯಾ ಲೀಡರ್ ಆಗಿದ್ದಾರೆ. ಅವರಲ್ಲಿ ಎಲ್ಲರ ವಿಶ್ವಾಸ ಇದೆ. ಅವರು ಕೇಂದ್ರ ಸರಕಾರದ ಹತ್ತಿರ ಹೋಗಿ ಮೈಸೂರು ರಾಜ್ಯ ಶ್ರೀಮಂತ ದೇಶವಲ್ಲ. ಮೈಸೂರು ರಾಜ್ಯದಲ್ಲಿ ಬಡವರೇ ಹೆಚ್ಚಾಗಿ ಇದ್ದಾರೆ. ಆದುದರಿಂದ ಅಂಧ್ರ ಹಾಗು ಮದ್ರಾಸ್ ರಾಜ್ಯಗಳಿಗೆ ಕೊಡುವ ಸಹಾಯಕ್ಕಿಂತಲೂ ಹೆಚ್ಚಾಗಿ ಸಹಾಯ ಮೈಸೂರು ರಾಜ್ಯಕ್ಕೆ ಕೊಡಬೇಕು ಎಂದು ಒತ್ತಾಯಪೂರ್ವಕ ತಿಳಿಸಬೇಕು. ವಿಶಾಲ ಮೈಸೂರಿನಲ್ಲಿ ನೀರಾವರಿ 7 ಪರ್ಸೆಂಟ್ ಇದೆ ಎಂದು

(ಶ್ರೀ ಡಿ. ಎಂ. ಸಿದ್ದಯ್ಯ)

ಕೇಂದ್ರದವರು ಹೇಳುವುದು ಅರ್ಥವಾಗುವುದಿಲ್ಲ. ನಮ್ಮ ಸರಕಾರ ಇದನ್ನು ಮೊದಲೇ ಅವರಿಗೆ ಸ್ಪಷ್ಟವಾಗಿ ಏತಕ್ಕೆ ತಿಳಿಸಲಿಲ್ಲ? ಈ ಮಾತಿನ ಕಡೆ ಸಹ ನಮ್ಮ ಸರಕಾರ ಗಮನ ಕೊಡಬೇಕು. ಇದನ್ನು ಸಹ ಕೇಂದ್ರದವರಿಗೆ ತಿಳಿಸಿ ಹೆಚ್ಚಿನ ಸಹಾಯ ನಮಗೆ ಕೊಡಬೇಕೆಂದು ಹೇಳುವುದು ಅವರ ಕರ್ತವ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಜಿ. ವಿ. ಗೌಡ.—1961–62ನೇ ಸಾಲಿನಲ್ಲಿ ಮೂರನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವ ಕಾಲದಲ್ಲಿ ಇದೇ ಮಾತನ್ನೇ ನಾವು ಹೇಳಿದ್ದೇವೆ. ನಮಗೆ ಕೇಂದ್ರ ಸರಕಾರ ಕೊಡತಕ್ಕಂಥ ಸಹಾಯ ಬಹಳ ಕಡಿಮೆ ಎಂದು ನಾವು ಹೇಳಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಆದುದರಿಂದ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರಕಾರ ಹೆಚ್ಚಿನ ಒಂದು ಸಹಾಯ ಪಡೆಯಬೇಕು. ನಾವು ಪ್ರಾಜೆಕ್ಟ್ ಕಟ್ಟತಕ್ಕಂಥಾದ್ದು ಒಂದೇ ಸಾರಿ. ದೇಶದ ಹಿತ ದೃಷ್ಟಿಯಿಂದ ಕಟ್ಟತಕ್ಕಂಥ ಪ್ರಾಜೆಕ್ಟ್ ವಿಚಾರದಲ್ಲಿ ಕಾಲ ವಿಳಂಬ ಮಾಡುವುದರಿಂದ ನಾವು ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುವುದಿಲ್ಲ. ಒಂದು ಪ್ರಾಜೆಕ್ಟ್ ಕಟ್ಟದಿದ್ದರೆ ಅದು ಹೋಯಿತು. ಕೃಷ್ಣಾ ಗೋದಾವರಿ ನೀರಿನ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಕೃಷ್ಣಾ ನದಿಗೆ ಅಣೆಕಟ್ಟು ಆಲಮಟ್ಟಿಯಲ್ಲಿ ಮೊದಲು ಕಟ್ಟಬೇಕೋ ನಾರಾಯಣಪುರದಲ್ಲಿ ಮೊದಲು ಕಟ್ಟಬೇಕೋ ಎಂಬುದಕ್ಕೆ ಇನ್ನೂವರೆಗೆ ಚರ್ಚೆ ಮಾಡುತ್ತಲೇ ಇದ್ದೇವೆ. ಆದರೆ ಆಂಧ್ರದವರು ಬರೀ ಚರ್ಚೆಯಲ್ಲಿ ಕಾಲಹರಣ ಮಾಡದೆ ಆದಷ್ಟು ಜಾಗ್ರತೆ ಪ್ರಾಜೆಕ್ಟು ಕೆಲಸ ಕೈಯಲ್ಲಿ ತೆಗೆದುಕೊಂಡು ಕೇಂದ್ರದ ಸಹಾಯ ಪಡೆದು ಈಗಾಗಲೇ ಅನೇಕ ಯೋಜನೆಗಳನ್ನು ಪೂರ್ತಿ ಸಹ ಮಾಡಿದ್ದಾರೆ. ಈಗಾಗಲೇ ಶ್ರೀಶೈಲ ಪ್ರಾಜೆಕ್ಟ್ ಮಾಡಿದ್ದಾರೆ. ನಾಗಾರ್ಜುನ ಸಾಗರ, ಪೋಚಂಪಾಳ ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ. ಅವರು ಜಾಣತನದಿಂದ ಮಾತು ಕಡಿಮೆ ಮಾಡಿ ಕೆಲಸ ಮಾಡುತ್ತಾರೆ. ನಾವೂ ಕೂಡ ಮಾತು ಕಡಿಮೆ ಮಾಡಿ ಜಾಣತನದಿಂದ ಕೆಲಸ ಮಾಡಬೇಕು ಎಂಬುದು ಬಹಳ ಮುಖ್ಯವಾದುದು. ನಮ್ಮಲ್ಲಿ ಒಂದು ವಿಷಯ ಚರ್ಚೆಗೆ ಬಂದರೆ ಬಹಳ ಜಿಜ್ಞಾಸೆ ಉಂಟಾಗುತ್ತದೆ. ಒಬ್ಬರು ಒಂದು ಹೇಳುತ್ತಾರೆ. ಇನ್ನೊಬ್ಬರು ಮತ್ತೊಂದು ಹೇಳುತ್ತಾರೆ. ಈ ಎರಡೂ ಸ್ಥಳಬಿಟ್ಟು ಮೂರನೇ ಸ್ಥಳದಲ್ಲಿ ಕಟ್ಟೆ ಕಟ್ಟಬೇಕು ಎಂದು ಮತ್ತೊಬ್ಬರು ಹೇಳುತ್ತಾರೆ. ಈ ರೀತಿ ಜಿಜ್ಞಾಸೆಯುಂಟಾಗುವುದರಿಂದ ಸರಿಯಾಗಿ ಕೆಲಸ ಪ್ರಾರಂಭವಾಗುವುದಿಲ್ಲ. ಆದುದರಿಂದ ನಾವು ತಜ್ಞರ ಅಭಿಪ್ರಾಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾದುದು ಅಗತ್ಯ. ತಜ್ಞರಲ್ಲಿ ಯಾವ ರಾಜಕೀಯವಿರುವುದಿಲ್ಲ. ಯಾವುದು ನ್ಯಾಯವಾದುದು ಇರುತ್ತದೆಯೋ ಅದನ್ನು ತೀರ್ಮಾನ ಮಾಡುತ್ತಾರೆ. ಇಂಥ ವಿಷಯ ಜಿಜ್ಞಾಸೆಗೊಳಗಾದರೆ, ಅನೇಕ ವಿಷಯಗಳನ್ನು ಒಳಹೊಕ್ಕು ಸರಿಯಾಗಿ ನೋಡದೆ ಬಹಳ ತೊಂದರೆಯುಂಟಾಗುತ್ತದೆ. ಆಂಧ್ರ ಮತ್ತು ಮದ್ರಾಸಿನವರು ಹೇಗೆ ಕೆಲಸ ಮಾಡುತ್ತಾರೆಯೋ ಹಾಗೆ ನಾವೂ ಕೆಲಸ ಮಾಡಬೇಕು. ಮದ್ರಾಸಿನವರು ಕುಡಿಯುವ ನೀರಿಗಾಗಿ ಕಾವೇರಿ ನದಿ ನೀರನ್ನು ಕೇಳುತ್ತಿದ್ದಾರೆ. ಕೇಂದ್ರದವರು ಆಂಧ್ರ ಮತ್ತು ಮದ್ರಾಸಿಗೆ ಹಣ ಕೊಡುತ್ತಾರೆ, ಆದರೆ ನಮಗೆ ಕೊಡುವುದಿಲ್ಲ. ನಾವೂ ಸಹ ಭಾರತದ ಪ್ರಜೆಗಳಾಗಿದ್ದೇವೆ. ನಾವೂ ಅವರ ಹಾಗೆಯೇ ಇದ್ದೇವೆ. ಅವರು ಹಣ ಪಡೆದುಕೊಳ್ಳುತ್ತಾರೆ ಹಾಗೂ ಪ್ರಾಜೆಕ್ಟ್ ಕೆಲಸ ಪ್ರಾರಂಭಮಾಡಿ ಪ್ರಯೋಜನ ಪಡೆಯುತ್ತಾರೆ. ನಾವು ಅವರಿಂದ ಇದನ್ನು ಕಲಿತುಕೊಳ್ಳಬೇಕಾಗಿದೆ. ಆದುದರಿಂದ ಕೇಂದ್ರ ಸರಕಾರದವರು ನಾವೂ ಸಹ ಹಣ ಪಡೆಯಬೇಕು ಮತ್ತು ಪ್ರಾಜೆಕ್ಟುಗಳನ್ನು ಕಟ್ಟಬೇಕು. ನಾವು ಭಾರತದಲ್ಲಿ ಎಲ್ಲ ಪ್ರಾಂತಗಳೊಡನೆ ಸರಿಸಮಾನಸ್ಕಂಧರಾಗಿ ನಮ್ಮ ಕಾಲ ಮೇಲೆ ನಾವು ಭದ್ರವಾಗಿ ನಿಲ್ಲಬೇಕಾದರೆ ವಿಶಾಲ ಮೈಸೂರು ರಾಜ್ಯ ಸುಂದರವಾದ ದೇಶ ನೈಸರ್ಗಿಕ ಸಂಪತ್ತಿನಿಂದ ಕೂಡಿದ ದೇಶ ಚೆನ್ನಾಗಿ ಅಭಿವೃದ್ಧಿಯಾಗಿ ಸೊಗಸಾದ ಒಂದು ಆದರ್ಶ ಪ್ರಾಂತ್ಯವಾಗಿ ಕಟ್ಟಬೇಕು ಮತ್ತು ಈ ಹೇಳಿಕೆಯನ್ನು ಸಾರ್ಥಕಗೊಳಿಸಲು ಹೆಚ್ಚು ಧೈರ್ಯದಿಂದ ಸಾಹಸದಿಂದ ಕೇಂದ್ರ ಸರಕಾರದ ಮೇಲೆ ಪ್ರಭಾವ ಹೆಚ್ಚಾಗಿ ಬೀರಿ ಹೆಚ್ಚು ಸಹಾಯ ಪಡೆಯಬೇಕು. ಯಾಕೆಂದರೆ ಅವರ ಸಹಾಯವಿಲ್ಲದೆ ಕೆಲಸ ಮಾಡಲು ನಮಗೆ ಸಾಧ್ಯವಿಲ್ಲ. ನಮ್ಮ ಮುಖ್ಯ ಮಂತ್ರಿಗಳವರು ತಮ್ಮ ಶಕ್ತಿ ಸಾಹಸಗಳನ್ನು ಉಪಯೋಗಿಸಿ ನಮಗೆ ನ್ಯಾಯವಾಗಿ ದೊರೆಯಬೇಕಾದ ಹೆಚ್ಚಿನ ಸಹಾಯ ಪಡೆದು ಕಾವೇರಿ ಪ್ರಾಜೆಕ್ಟ್ ಕಟ್ಟಿ ದೇಶದಲ್ಲಿ ಇಂದು ಇರತಕ್ಕ ಆಹಾರದ ಕೊರತೆ ಎಲೆಕ್ಟ್ರಿಸಿಟಿ ಅಭಾವ ನೀಗಿ ಆಹಾರ ಧಾನ್ಯ ಹೆಚ್ಚು ಉತ್ಪತ್ತಿ ಮಾಡುವುದಲ್ಲದೆ ನಮ್ಮ ವಿಶಾಲ ಮೈಸೂರು ರಾಜ್ಯ ಒಂದು ಆದರ್ಶ ರಾಜ್ಯವಾಗಿ ಕಟ್ಟುವುದಲ್ಲದೆ ಸರ್ವತೋಮುಖವಾದ ಪ್ರಗತಿ ಸಾಧನೆಯ ದೃಷ್ಟಿಯಿಂದ ನೀರಾವರಿ ಯೋಜನೆಗಳನ್ನು ಹೆಚ್ಚು ಶ್ರಮವಹಿಸಿ ಹೆಚ್ಚಿನ ನಿಗಾ ಕೊಟ್ಟು ಕೇಂದ್ರದ ಮೇಲೆ ಪ್ರಭಾವ ಬೀರಿ ಕೆಲಸ ಪೂರೈಸಬೇಕು. ಈಗ ಐದು ಭಾಗಗಳು ಸೇರಿ ನಮ್ಮ ವಿಶಾಲ ಮೈಸೂರು ರಾಜ್ಯ ರಚನೆಯಾಗಿದೆ. ಈ ಐದೂ

ಭಾಗದವರು ಒಂದುಗೂಡಿ ಭಾವೈಕ್ಯದಿಂದ ಒಂದು ಸರ್ವಾಂಗ ಸುಂದರ ಕನ್ನಡ ನಾಡನ್ನು ಕಟ್ಟು ವುದಕ್ಕೆ ಧೈರ್ಯ ಸಾಹಸದಿಂದ, ರಾಜಕೀಯದ ಕಡೆ ಹೆಚ್ಚು ಮನಸ್ಸು ಹಾಕದೆ ಕಾರ್ಯೋನ್ಮುಖರಾಗ ಬೇಕು ಪ್ರಗತಿ ಸಾಧಿಸಬೇಕು ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಯೋಜನೆಗಳನ್ನು ತೆಗೆದುಕೊಳ್ಳಬೇಕು, ಯೋಜನೆಗಳನ್ನು ಕಾರ್ಯಗತ ಮಾಡಬೇಕು ಎಂದು ಹೇಳುವುದು ಸರಿ. ಮಾನ್ಯ ಸದಸ್ಯರು ಮಾತನಾಡುವಾಗ್ಗೆ ಒಂದು ಶಂಕೆ ವ್ಯಕ್ತ ಪಡಿಸುತ್ತಿದ್ದಾರೆ, ನಮ್ಮಲ್ಲಿ ದುಡ್ಡು ಇಲ್ಲಾ, ಇರುವ ದುಡ್ಡು ಸಾಲುವುದಿಲ್ಲ ಹೇಗೆ ಮಾಡುತ್ತಾರೆ ಎಂಬ ಒಂದು ಶಂಕೆ ಇದೆ. ಇನ್ನು ಕೆಲವರು ಪ್ರಾಜೆಕ್ಟ್ ಕಟ್ಟಿಲ್ಲ ತಡವಾಗಿ ಕಟ್ಟ ಬಾರದು ಎಂಬ ಒಂದು ವಾದ ಇದೆ. ಕೈಕೊಂಡಿರತಕ್ಕಂಥ ಯೋಜನೆಗಳನ್ನು ಕೈ ಬಿಡಬಾರದು ಎಂದು ಹೇಳಿದ್ದಾರೆ. ವಾಟರ್ ಯುಟಿಲೈಜೇಶನ್ ಮಾಡಿಕೊಳ್ಳದೆ ಇದ್ದರೆ ಮೈಸೂರಿಗೆ ನಷ್ಟ ವಾಗುತ್ತದೆ. ಹೊರಗಡೆಬೇರೆ ಪ್ರಾಂತ್ಯದವರು ನೀರು ಉಪಯೋಗಮಾಡಿಕೊಳ್ಳುತ್ತಾರೆ. ಹೆಚ್ಚು ಹಣ ಉಪಯೋಗಿಸುವುದಕ್ಕೆ ಕೇಂದ್ರ ಸರಕಾರ ಕೇಳಬೇಕೆಂದು ಹೇಳುವುದು ಒಂದು ವಿಧಾನ ವಾಗಿದೆ. ಹೆಚ್ಚು ಹಣ ಶೇಖರಿಸುವುದಕ್ಕೆ ನಮ್ಮ ದೇಶದಲ್ಲಿ ನಾವು ಏನು ಮಾಡಬೇಕು ಎಂಬುದಕ್ಕೆ ರಚನಾತ್ಮಕ ಸಲಹೆ ಹೇಳಬೇಕು.

ಶ್ರೀ ಜಿ. ವಿ. ಗೌಡ.—ನಾವು ನಮ್ಮ ಸಲಹೆ ಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾನ ನಿರೋಧ ರದ್ದುಮಾಡಿ. ಎಸ್ಟಾಬ್ಲಿಶ್‌ಮೆಂಟ್ ಮೇಲೆ ಅನಾವಶ್ಯಕವಾಗಿ ಹೆಚ್ಚು ದುಡ್ಡು ಖರ್ಚು ಮಾಡುತ್ತಿರುವುದನ್ನು ಕಡಮೆ ಮಾಡಿ, ಫಾರೆಸ್ಟ್ ಇಲಾಖೆ ಯಲ್ಲಿ ಸಬ್‌ಸಿಡಿ ಕೊಡುವುದನ್ನು ಕಡಮೆ ಮಾಡಿ ವುರ್ ಸೊಸೈಟಿ ಖಾದಿ ಬೋರ್ಡಿನಲ್ಲಿ ಹಣ ಪೋಲು ಆಗುವುದನ್ನು ನಿಲ್ಲಿಸಿ, ಮಂತ್ರಿಮಂಡಳ ಗಾತ್ರ ಕಡಮೆ ಮಾಡಿ ಅಂದರೆ ಸರಕಾರಕ್ಕೆ ಹಣ ದೊರೆಯುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಈ ರಾಗಾ ನಾವು ಅನೇಕ ಸಲ ಕೇಳಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸಚಿವರಾದ ಶ್ರೀ ದೇವರಾಜ ಅರಸು ಅವರು ನಾವು ದುಡ್ಡು ಹೇಗೆ ತರಬೇಕು ಎಂಬುದನ್ನು ಹೇಳಬೇಕೆಂದು ಕೇಳಿದ್ದಾರೆ. ನಮ್ಮ ಮೂಲ ರಿಸೋರ್ಸಸ್ ಏನು ಇವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವ ರೀತಿಯಿಂದಾದರೂ ಹಣ ಒದಗಿಸು ವುದಕ್ಕೆ ಕೈಕೊಳ್ಳುವ ಕ್ರಮದ ಬಗ್ಗೆ ಈ ಮಾನ್ಯ ಸಭೆಯ ಎಲ್ಲ ಸದಸ್ಯರ ಸಂಪೂರ್ಣ ಬೆಂಬಲ ಸರಕಾರಕ್ಕೆ ಇದೆ. ಇದೇ ಸಾಕ್ಷಿಯಾಗಿದೆ. ಯಾವ ಯಾವುದು ಅನಾವಶ್ಯಕವಾಗಿದೆಯೋ ಅಂಥ ಖರ್ಚು ತಡೆಗಟ್ಟಬೇಕು, ಇದು ಸರಕಾರದ ಪವಿತ್ರ ಕರ್ತವ್ಯವಾಗಿದೆ. ಪ್ರೊಹಿಬಿಷನ್ ಪಾಲಿಸಿ ಇದೆ. ಮೂಲತಃ ಈ ತತ್ವವನ್ನು ನಾವು ಒಪ್ಪಿಕೊಂಡಿದ್ದರೂ ಕೂಡ ಇಂದು ಅನೇಕ ಪ್ರಾಂತ್ಯಗಳಲ್ಲಿ ಕೇಂದ್ರದಲ್ಲಿಯೂ ಕೂಡ ಈ ನಿರ್ಣಯದ ಬಗ್ಗೆ ಪುನಃ ವಿಚಾರ ಮಾಡಬೇಕು ಎಂಬ ಭಾವನೆ ಉಂಟಾಗಿದೆ. ಪಾನ ನಿರೋಧದಬಗ್ಗೆ ದೀರ್ಘವಾಗಿ ಯೋಚನೆಮಾಡಿ ತಕ್ಷಣ ಅದನ್ನು ಬದಲಾವಣೆ ಮಾಡುವ ನಿರ್ಧಾರ ತೆಗೆದುಕೊಂಡರೆ ಸುಮಾರು 20 ಕೋಟಿ ರೂಪಾಯಿ ಉಳಿತಾಯವಾಗಿ ಪ್ರಾಜೆಕ್ಟ್ ಕೆಲಸಕ್ಕೆ ಸಿಕ್ಕುತ್ತದೆ. ಟಾಪ್ ಹೆವೀ ಎಸ್ಟಾಬ್ಲಿಷ್‌ಮೆಂಟ್ ಡಿವಿಜನಲ್ ಕಮಿಷನರ್ ಹುದ್ದೆ ರದ್ದು ಮಾಡಬೇಕು. ಒಂದು 100 ಕೋಟಿ ರೂಪಾಯಿಗಳ ಬಡ್ಜೆಟ್ ಒಂದು ವರ್ಷಕ್ಕೆ ಮಾಡಿದರೆ ನೇರವಾಗಿ ಕೆಲಸ ಕಾರ್ಯಗಳು ಸಾಫಲ್ಯವಾಗುತ್ತವೆ ಎಂಬುದು ಸರಕಾರಕ್ಕೆ ಸಹ ಚೆನ್ನಾಗಿ ಗೊತ್ತಿದೆ.

ಸರಕಾರ ಸಂಪನ್ಮೂಲಗಳನ್ನು ಹೆಚ್ಚಿಸಲು ಅನುಸರಿಸುವ ನೀತಿಗೆ ಸದಸ್ಯರ ಸಂಪೂರ್ಣ ಬೆಂಬಲವಿದೆಯೆಂದು ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಅನವಶ್ಯಕ ಇಲಾಖೆಗಳನ್ನು ರದ್ದು ಪಡಿಸಬೇಕು. ಶ್ರೀ ಚಾಗ್ಲಾರವರು ಕೇಂದ್ರ ಸರಕಾರದ ವಿದ್ಯಾ ಇಲಾಖೆಯಲ್ಲಿದ್ದ 50 ಕಮಿಟಿ ಗಳನ್ನು ವಜಾಮಾಡಿದರು. ಅದರಿಂದ ಎಷ್ಟೋ ಟಿ.ಎ., ಡಿ.ಎ. ಉಳಿದು ಸರ್ಕಾರಕ್ಕೆ ಲಕ್ಷಗಟ್ಟಲೆ ಹಣ ಅನಗತ್ಯವಾಗಿ ವೆಚ್ಚವಾಗುತ್ತಿದ್ದುದನ್ನು ಮಿಗಿಸಿದ್ದಾರೆ. ಇವತ್ತಿನ ನಮ್ಮ ರಾಜ್ಯದಲ್ಲಿಯೂ ಕೂಡ ಅನೇಕ ಇಲಾಖೆಗಳ ವ್ಯವಹಾರಗಳನ್ನು ನೋಡಿದರೆ, ಅವುಗಳಲ್ಲಿ ಅನೇಕವನ್ನು ರದ್ದುಪಡಿಸ ಬಹುದು. ಈ ದಿಶೆಯಲ್ಲಿ ಸರಕಾರ ಧೈರ್ಯಮಾಡಿ ದಿಟ್ಟತನದ ಹೆಜ್ಜೆಯನ್ನು ಇಡಬೇಕು. ಇವತ್ತು ಸರಕಾರಕ್ಕೆ ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಗೆಹರಿಸಲು ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸಲು, ಸರಕಾರ ಅಪೇಕ್ಷೆಪಡುವುದಾದರೆ, ಈ ಸಭೆಯವರು ಸಂಪೂರ್ಣ ಬೆಂಬಲ ಕೊಡಲು ಸಿದ್ಧರಿದ್ದಾರೆ. ಜನಗಳ ಮನಸ್ಸಿನಲ್ಲಿ ಮಿತವ್ಯಯ ಸಾಧನೆಗೆ ಗಮನಕೊಡುತ್ತಿಲ್ಲವೆಂಬ ಶಂಕೆ ಇದೆ. ಇನ್ನೊಂದು ಕಡೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಒದಗಿಸಬೇಕೋ ಅಷ್ಟನ್ನು ಕೊಡ ದಿದ್ದ ಪಕ್ಷದಲ್ಲಿ, ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಭುವನೇಶ್ವರದಲ್ಲಿ ಸಮಾವೇಶಗೊಂಡ ಎ.ಐ.ಸಿ.ಸಿ. ಅಧಿವೇಶನದಲ್ಲಿ ಪ್ರಜಾಸತ್ತಾತ್ಮಕ ಸಮತಾಸಮಾಜ ಸ್ಥಾಪನೆ ಕಾಂಗ್ರೆಸ್ ಗುರಿ ಎಂದು ಸಾರಲಾಗಿದೆ. ಇಂಥ ಆದರ್ಶ ಸಮಾಜ ರಚನೆಮಾಡುವ ಕಾರ್ಯದಲ್ಲಿ

(ಶ್ರೀ ಡಿ. ಎಂ. ಸಿದ್ದಯ್ಯ)

ಜನತೆಯ ಸಂಪೂರ್ಣ ಸಹಕಾರ ಗಳಿಸಬೇಕು. ಇದಕ್ಕೆ ಅಪವ್ಯಯ ತಪ್ಪಿಸಬೇಕು, ಸಿಬ್ಬಂದಿ ವೆಚ್ಚ ಕಡಿಮೆ ಮಾಡಬೇಕು. ಇವತ್ತು ಡಿವಿಜನಲ್ ಕಮೀಷನರುಗಳು ಮತ್ತು ಅಸಿಸ್ಟೆಂಟ್ ಕಮೀಷನರುಗಳು ಏನಿದ್ದಾರೆ ಅವರಿಗೆ ಸಾಕಷ್ಟು ಕೆಲಸವಿಲ್ಲ. ಸೆಕ್ರೆಟೇರಿಯಟ್ಟಿನಲ್ಲಿ, ಕ್ಲಾರ್ಕುಗಳು ಗಂಟೆಗಟ್ಲೆ ಕ್ಯಾಂಟೀನುಗಳಲ್ಲಿ, ಕಾಫಿ ಕ್ಲಬ್ಬುಗಳಲ್ಲಿ ಆಫೀಸು ವೇಳೆಯಲ್ಲಿ ಕೂತು ಕಾಲಕಳೆಯುತ್ತಿರುತ್ತಾರೆ. ಫೈನಾನ್ಸ್ ಮಿನಿಸ್ಟರು ಎ.ಜಿ.ಆರ್. ಸಮಿತಿ ರಿಪೋರ್ಟಿನಲ್ಲಿ, 50 ಪರ್ಸೆಂಟ್ ಶಿಫಾರಸುಗಳು ಜಾರಿಯಾಗಿ, ಇನ್ನು 50 ಪರ್ಸೆಂಟು ಹಾಗೆಯೇ ಉಳಿದಿವೆ ಎಂದು ಹೇಳಿದರು. ಈ ಕಮಿಟಿ ರಿಪೋರ್ಟನ್ನು ಸಂಪೂರ್ಣವಾದ ರೀತಿಯಲ್ಲಿ ಜಾರಿಗೆ ಕೊಡಬೇಕು. ನೀರಾವರಿ ಯೋಜನೆಗಳಿಗೆ ಎಷ್ಟು ಖರ್ಚುಮಾಡಿದರೆ ಅಷ್ಟೂ ಜನಸಾಮಾನ್ಯರ ನಿಜಸ್ಥಿತಿ ಅಭಿವೃದ್ಧಿಯಾಗುವುದು. ಮಂಡ್ಯ ಜಿಲ್ಲೆಯಲ್ಲಿ ಕನ್ನಂಬಾಡಿ, ವಿಶ್ವೇಶ್ವರಯ್ಯ ನಾಲಾ ಬರುವುದಕ್ಕೆ ಮುಂಚೆ ಅಲ್ಲಿ ಜನರು ಯಾವ ಸ್ಥಿತಿಯಲ್ಲಿದ್ದರು, ಇವತ್ತು ಹೇಗಿದೆ ಎಂದು ನೋಡಬಹುದು. ಇವತ್ತಿನ ದಿವಸ ಅಲ್ಲಿಯ ರೈತರು ನೀರಾವರಿ ಸೌಕರ್ಯ ಮಾಡಿಕೊಡುವುದಾದರೆ, ಏನು ಟ್ಯಾಕ್ಸು ಕೊಡಲೂ ಸಿದ್ಧರಾಗಿದ್ದಾರೆ, ಅವರ ಟ್ಯಾಕ್ಸೆಬಿಲ್ ಕೆಪ್ಯಾಸಿಟಿ ಜಾಸ್ತಿಯಾಗಿದೆ, ಅಲ್ಲಿಯ ಪ್ರಜೆಗಳು ಸೌಕರ್ಯ ಒದಗಿಸಿ, ಟ್ಯಾಕ್ಸ್ ಹಾಕಿ, ಕೊಡಲು ಸಿದ್ಧ ಎಂದು ಹೇಳುತ್ತಾರೆ. ಆದರೆ ಬರೀ ಬಡವರ ಮೇಲೇ ಟ್ಯಾಕ್ಸ್ ಹೇರಿದರೆ ಯೋಜನೆಗಳನ್ನು ಕಾರ್ಯಗತ ಮಾಡಲು ಬೇಕಾಗುವ ಹಣವನ್ನು ದೊರಕಿಸಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಯಾರು ಯಾರು ಎಷ್ಟೆಷ್ಟು ಟ್ಯಾಕ್ಸ್ ಕೊಡಬೇಕೋ, ಅಷ್ಟು ಕೊಡದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಪ್ರತಿಯೊಂದು ಬಾಬಿನಲ್ಲಿಯೂ ಆದಾಯ ಹೆಚ್ಚಿಸಿಕೊಳ್ಳಬಹುದು; ತೆರಿಗೆಗಳು ಸರಿಯಾಗಿ ವಸೂಲಾಗುತ್ತಿಲ್ಲ. ಶ್ರೀಮಂತರು, ಪ್ರಭಾವಶಾಲಿಗಳು ಟ್ಯಾಕ್ಸ್ ಎವೇಡ್ ಮಾಡುತ್ತಿದ್ದಾರೆ-ಫಾರೆಸ್ಟ್ ಇಲಾಖೆಯಿಂದ ಗಂಧದ ಮರವನ್ನು ಕದ್ದು ಹೊರಗಡೆ ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಮೂರು ಕೋಟಿ ರೂಪಾಯಿ ಆದಾಯ ಸರಕಾರಕ್ಕೆ ಲುಕ್ಸಾನಾಗುತ್ತಿದೆ. ಹೀಗೆಯೇ ಅನೇಕ ಇಲಾಖೆಗಳಿಂದ ಬರತಕ್ಕಂಥ ಆದಾಯ ಬರದೆ, ಹಣವೂ ದುರುಪಯೋಗವಾಗುತ್ತಿದೆ. ಶ್ರೀ ಡಿ. ದೇವರಾಜ ಅರಸ್‌ರವರು ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಈ ಇಲಾಖೆಯಿಂದ ಎಷ್ಟರಮಟ್ಟಿಗೆ ಲಾಭ ಬರಬೇಕೋ ಅಷ್ಟು ಬರುತ್ತಿದೆಯೇ ಅನ್ನುವುದನ್ನು ಅವರು ತಿಳಿಸಬೇಕು. ಅವರು ಉತ್ಸಾಹದಿಂದ, ಶ್ರಮವಹಿಸಿ ಕೆಲಸಮಾಡುತ್ತಿದ್ದಾರೆ, ಅವರು ಬಹಳ ಬುದ್ಧಿವಂತರು. ಆದರೆ ಇವರು ಚಾಪೆ ಕೆಳಗೆ ಹೋದರೆ, ರಂಗೋಲಿ ಕೆಳಗೆ ನುಸುಳುವ ಜನರಿದ್ದಾರೆ. ಈ ಇಲಾಖೆಯೊಂದರಲ್ಲಿಯೇ ಅನೇಕ ರೀತಿಯಿಂದ ಹಣ ದುರ್ವಿನಿಯೋಗವಾಗುತ್ತಿದೆ. ನಮ್ಮ ದೇಶದಲ್ಲಿ ಸಾಧಾರಣವಾಗಿ ರಾಷ್ಟ್ರೀಯ ಮನೋಭಾವನೆ ಕಡಿಮೆ, ರಾಷ್ಟ್ರಕ್ಕೋಸ್ಕರ ತ್ಯಾಗ ಮಾಡಬೇಕು ಎನ್ನುವ ಪ್ರವೃತ್ತಿ ನಮ್ಮಲ್ಲಿ ಬಹಳಮಟ್ಟಿಗೆ ಕಡಿಮೆ ಇದೆ. ಅದು ಮಾನ್ಯ ಸರ್ಕಾರದವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಸರಕಾರಕ್ಕೆ ಯಾವ ಯಾವ ರೀತಿಯಲ್ಲಿ ಹಣವನ್ನು ಒದಗಿಸಬೇಕೋ, ಅದನ್ನು ಎಲ್ಲ ರೀತಿಯಲ್ಲಿಯೂ ಒದಗಿಸಿಕೊಳ್ಳುವುದಕ್ಕೆ ಈ ಮಾನ್ಯಸಭೆಯ ಒಪ್ಪಂದವಿದೆ. ಆದ್ದರಿಂದ ಹಣದ ಅಭಾವ ನೆಪಮಾಡಿಕೊಂಡು ಹೇಳುವುದರಲ್ಲಿ ಸಕಾರಣವಿಲ್ಲ. ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ ಒಂದು ಮಾತನ್ನು ಮಾತ್ರ ಹೇಳಬೇಕಾಗಿದೆ

1974ರೊಳಗಾಗಿ ನಾವು ಕಾವೇರಿ ನದಿಯಲ್ಲಿ ಉಳಿದಿರುವ ಭಾಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಲಸ ನಡೆಯುತ್ತಾ ಇರಲಿ. ಆದರೂ ಪುನರ್ವಿಮರ್ಶೆಮಾಡಿ, 50 ಪರ್ಸೆಂಟ್ ಕಾವೇರಿ ನದಿ ನೀರನ್ನು 10-15 ವರ್ಷಗಳಲ್ಲಿ ಪೂರ್ತಿ ಬಳಸಲು ಸಾಹಸ ಮಾಡಬೇಕು. ಯಾವ ಒಂದು ಯೋಜನೆಯನ್ನೂ, ಕೆಲಸವನ್ನು ಮಾಡುವಾಗ, ಯಾವ ಒಂದು ಅಂಜಿಕೆ, ಸಂಶಯಕ್ಕೆ ಈಡಾಗದೆ ದಿಟ್ಟತನದಿಂದ ಕೆಲಸ ಮಾಡಬೇಕು, ರಾಷ್ಟ್ರದ ಸಂಪತ್ತನ್ನು ಹೆಚ್ಚಿಸತಕ್ಕಂಥ, ಸರ್ವಸಾಧಾರಣ ಮನುಷ್ಯನ ಜೀವನವನ್ನು ಸುಖಮಯವಾಗಿ ಮಾಡಬೇಕೆಂಬ ಉದ್ದೇಶದಿಂದ, ಒಂದು ಕೆಲಸ ತೆಗೆದುಕೊಂಡಾಗ, ಅದನ್ನು ಧೀರೋದಾತ್ತವಾಗಿ ಮಾಡಬೇಕು. ಹೀಗೆ ಮಾಡುವಾಗ ನಮ್ಮ ಸಂಪೂರ್ಣ ಬೆಂಬಲವಿದೆ. ಇಂಥ ಪ್ರಾಮುಖ್ಯವಾದಂಥ ವಿಷಯಗಳಲ್ಲಿ, ನಮ್ಮ ಆಳುವ ಪಕ್ಷದವರದ್ದೇ ಅಲ್ಲ, ಈ ಇಡೀ ಮಾನ್ಯಸಭೆಯ ಬೆಂಬಲವಿದೆ. ಅದಕ್ಕೋಸ್ಕರ ತಾವು ಕೇಂದ್ರ ಸರ್ಕಾರದವರಿಗೆ ತಿಳಿಸಬೇಕು. ನಮಗೆ ಸರಿಯಾದ ಹಂಚಿಕೆ ನೀರಿನಲ್ಲಿ ಕೊಡದಿದ್ದ ಪಕ್ಷದಲ್ಲಿ, ಸಭಾಸದಸ್ಯರೆಲ್ಲರೂ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಕ್ಕ ಸಿದ್ಧರಿದ್ದಾರೆಂದು. ಹೋದ ಸಲವೇ ನಾನು ಹೇಳಿದ್ದೆ. ನಾವುಗಳೆಲ್ಲರೂ ಇಲ್ಲಿಗೆ ಬರತಕ್ಕಂಥಾದ್ದು, ತಾವು ಸರಕಾರ ನಡೆಸತಕ್ಕಂಥಾದ್ದು, ದೇಶದ ಜನಗಳ ಹಿತದೃಷ್ಟಿಯಿಂದಲೇ ಹೊರತು, ಸಭಾಸದಸ್ಯತ್ವವನ್ನು ಉಳಿಸಿಕೊಳ್ಳುವುದಕ್ಕಾಗಲಿ, ಸರಕಾರದ ಆಡಳಿತ ಮಾಡುವುದಕ್ಕಾಗಲಿ ಅಲ್ಲ-ದೇವರು ನಮಗೆ

ಕೊಟ್ಟಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು; ಹಾಗೆಯೇ ನೀವು ರಾಜ್ಯಸೂತ್ರವನ್ನು ವಹಿಸಿರುವುದು ಸಾರ್ಥಕವಾಗಬೇಕಾದರೆ, ನಿಮ್ಮ ಕೆಲಸವನ್ನು ಉಚ್ಚಮನಸ್ಸಿನಿಂದ, ನಿರ್ಮಲ ಮನಸ್ಸಿನಿಂದ ಜನ ಕಲ್ಯಾಣಕ್ಕಾಗಿ ಮಾಡಬೇಕು, ಹಾಗೆ ನಾವಿಬ್ಬರೂ ಮಾಡಿದರೆ ಮಾತ್ರ ನಿಜವಾಗಿ, ಆದರ್ಶ ಕರ್ಣಾಟಕ ರಾಜ್ಯವನ್ನು ಕಟ್ಟುವುದಕ್ಕೆ ಆಗುತ್ತದೆಂದು ಸೂಚಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಹೆಚ್ಚು ಧೈರ್ಯ, ಸಾಹಸವನ್ನು ಮಾಡಿ, ನಮ್ಮ ಜನಗಳ ಜೀವನ ಸುಖಮಯವಾಗುವಂತೆ ಪ್ರಯತ್ನ ಮಾಡಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಪ್ರತಿ ವರ್ಷ ನೀರಾವರಿ ಯೋಜನೆಗಳಿಂದ $4\frac{1}{2}$ ಕೋಟಿ ರೂಪಾಯಿ ಲುಕ್ಸಾನು ಆಗುತ್ತಿದೆ. ಮಾನ್ಯ ಸದಸ್ಯರು ಆ ಬಗ್ಗೆ ಏನಾದರೂ ಸೂಚನೆ ಹೇಳುತ್ತಾರೆಯೇ ?

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಉದಾಹರಣೆ ಕೊಡುತ್ತೇನೆ. ನಾನು ಚುನಾವಣೆಯಾಗಿರುವ ಕ್ಷೇತ್ರದ ಅರ್ಧಭಾಗದಲ್ಲಿ ಯಾವ ನೀರಾವರಿ ಸೌಕರ್ಯವೂ ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ನಮ್ಮ ಸರ್ಕಾರದವರು ಒಂದು ಸಣ್ಣ ಪಿಕಪ್ಪನ್ನು 3 ಲಕ್ಷ 20 ಸಾವಿರ ರೂಪಾಯಿನಲ್ಲಿ ಮಾಡಿದ್ದಾರೆ; ಅದರಿಂದ ಒಂದು ಸಾವಿರ ಎಕರೆ ಇರ್ರಿಗೇಟ್ ಆಗಿ, ಎಷ್ಟೋ ಸಂತೋಷದಿಂದ ವಾಟರ್ ಟ್ಯಾಕ್ಸ್ ಕೊಡುತ್ತಿದ್ದಾರೆ; ಮರುಮಾತಿಲ್ಲದೆ ಕೊಡುವುದಕ್ಕೆ ಸಿದ್ಧರಿದ್ದಾರೆ. ಎಲ್ಲೆಲ್ಲಿ ನೀರಾವರಿ ಸೌಕರ್ಯ ಕೊಟ್ಟಿದ್ದಾರೆ. ಅಲ್ಲೆಲ್ಲಾ ಹಾಗೇ ಟ್ಯಾಕ್ಸ್ ಕೊಡಲು ರೈತರು ಸಿದ್ಧವಾಗಿದ್ದಾರೆ.

Sri ALUR HANUMANTHAPPA.—It is no loss. If there is any delay in collecting the contribution, it will be done in no time. The ryots are coming forward to pay the contribution in advance in many places in view of the irrigation facilities to be created for them.

ಶ್ರೀ ಡಿ.ಎಂ. ಸಿದ್ದಯ್ಯ.—ಇವತ್ತು ಜನಗಳಿಗೆ ನೀರಿನ ಸೌಕರ್ಯ ಏರ್ಪಡಿಸಿ ಕೊಡುವುದಾದರೆ; ಜನಗಳು ಅದರ ಉಪಯುಕ್ತತೆಯನ್ನು ಮನಗಂಡು, ವಾಟರ್‌ರೇಟ್ ಕೊಡಲು ಸಿದ್ಧರಾಗಿದ್ದಾರೆ. ವಿಶ್ವೇಶ್ವರಯ್ಯ ನಾಲೆಯಿಂದ ಪ್ರಯೋಜನ ಹೊಂದುತ್ತಿರುವ ಜಗಳದ್ದೇ ಉದಾಹರಣೆ ತೆಗೆದು ಕೊಳ್ಳಬಹುದು. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಅವರ ತಾಲ್ಲೂಕಿನ ಸ್ಥಿತಿಯನ್ನು ಉದ್ಧರಿಸಿದರು. ಚಾಮರಾಜನಗರದ ಕೆಲವು ಭಾಗಗಳಲ್ಲಿ ಕಡ್ಲೆಕಾಯಿ ತಿಂದು, ಟೀ ನೀರು ಕುಡಿದು ಕಾಲ ಹಾಕುತ್ತಿರುವ ಜನಗಳನ್ನು ನೋಡಿದ್ದೇನೆ. ಸ್ಥಿತಿ ಹೀಗಿರುವಾಗ ನೀರಾವರಿ ಸೌಕರ್ಯ ಏರ್ಪಡಿಸಿ ಕೊಟ್ಟಲ್ಲಿ ಜನ ಟ್ಯಾಕ್ಸ್ ಧಾರಾಳವಾಗಿ ಕೊಡುತ್ತಾರೆ. ಟ್ಯಾಕ್ಸನ್ನು ಕಲೆಕ್ಟ್ ಮಾಡಿ, ಸಕಾಲದಲ್ಲಿ ರೂಢಿಸತಕ್ಕಂಥಾದ್ದು ಸರ್ಕಾರಕ್ಕೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಸಂಬಂಧ ಪಟ್ಟದ್ದು. ಕಲೆಕ್ಟ್ ಮಾಡದೇನೆ ಇದ್ದರೆ ರೈತರ ತಪ್ಪು ಅಲ್ಲ ಎಂದು ನಾನು ತಮಗೆ ತಿಳಿಸುತ್ತೇನೆ. ಇದು ಬಹಳ ಪ್ರಾಮುಖ್ಯವಿದೆ. ನೀರಾವರಿ ಸೌಕರ್ಯ ಏರ್ಪಡಿಸುವ ವಿಷಯದಲ್ಲಿ ರೈತರು ಯಾವ ರೀತಿಯ ತ್ಯಾಗವನ್ನಾದರೂ ಮಾಡಿ, ನೀವು ಏನು ಟ್ಯಾಕ್ಸ್ ಹಾಕಿದರೂ ಕೊಡುವುದಕ್ಕೆ ಸಿದ್ಧರಿದ್ದಾರೆಂದು ತಮಗೆ ತಿಳಿಸುತ್ತೇನೆ. ನೀರಾವರಿ ಸೌಕರ್ಯದ ಬಗ್ಗೆ ನಿಮಗಿಂತಲೂ ರೈತರಿಗೆ ಹೆಚ್ಚಾಗಿ ಗೊತ್ತಿದೆ; ಅದರಲ್ಲಿ ಅವರಿಗೆ ಹೆಚ್ಚಾದ ಆಸಕ್ತಿ ಇದೆ.

ಊರಿನಲ್ಲಿ ಒಬ್ಬರು ಬಾವಿ ತೆಗೆಸಿ ಪಂಪ್‌ಸೆಟ್ ಹಾಕಿ ಒಂದು ಎಕರೆ ಹತ್ತು ಗುಂಟೆ ವ್ಯವಸಾಯ ಮಾಡಿದರು ಅವರಿಗೆ ಈ ಸಾರಿ ಕಬ್ಬಿನ ಬೆಳೆಯಿಂದ 10 ಸಾವಿರ ರೂಪಾಯಿ ಲಾಭ ಬಂತು, ಒಂದು ಒಂದೂಕಾಲು ಎಕರೆಯಲ್ಲಿ ಮಾಡತಕ್ಕ ಮನುಷ್ಯನಿಗೆ ನೀರು ಇಲ್ಲದೇ ಹೋದರೆ—ಮಳೆ ಬಂದರೆ ಸರಿ ಇಲ್ಲದೇ ಹೋದರೆ—ಆ ಜಮೀನಿನಲ್ಲಿ ದನಗಳಿಗೆ ಹುಲ್ಲೂ ಕೂಡ ಸಿಕ್ಕುವುದಿಲ್ಲ. ಅದರ ದೆಶೆಯಿಂದ ನೀರಿನ ಸೌಕರ್ಯವನ್ನು ಒದಗಿಸಿದ ಪಕ್ಷದಲ್ಲಿ ರೈತರು ಯಾವ ಅಂದಾಜಿನ ಪ್ರಕಾರ ತೆರಿಗೆಯನ್ನು ಕೊಡಬೇಕೆಂದು ನಿರೀಕ್ಷೆಮಾಡುತ್ತೀರೋ ಅದೇ ಅಂದಾಜಿನ ಪ್ರಕಾರ ಅವರು ಖಂಡಿತ ವಾಗಿಯೂ ಕೊಡುತ್ತಾರೆ ಎಂಬ ಮಾತನ್ನು ತಮ್ಮ ಮುಂದೆ ಸೂಚಿಸಲು ಇಚ್ಛಿಸುತ್ತೇನೆ. ಆದ್ದರಿಂದ ಸರ್ಕಾರದವರು ನೀರಾವರಿ ವಿಷಯದಲ್ಲಿ ಮಾತ್ರ ಬಹಳ ಎಚ್ಚರಿಕೆಯಿಂದ ಮತ್ತು ತ್ವರಿತವಾಗಿ ಈ ಕಾರ್ಯಗಳನ್ನು ಮಾಡಿ ಮುಗಿಸಬೇಕು. ಈ ಸಂದರ್ಭದಲ್ಲಿ ಪುನಃ ಆಂಧ್ರ ಮತ್ತು ಮದರಾಸು ಸರ್ಕಾರದವರ ಉದಾಹರಣೆಯನ್ನು ಹೇಳುತ್ತೇನೆ. ಅವರು ನಾಗಾರ್ಜುನ ಸಾಗರ ಮತ್ತು ಶ್ರೀಶೈಲ ಪ್ರಾಜೆಕ್ಟುಗಳನ್ನು ಮಾಡುತ್ತಾ ಇರುವುದು ನಿಜವಾಗಿಯೂ ಹೆಮ್ಮೆ ಪಡತಕ್ಕ ವಿಷಯ. ಅದೇ ರೀತಿಯಲ್ಲಿ ನಮ್ಮ ಕೃಷ್ಣಾ ಪ್ರಾಜೆಕ್ಟಿನ ವಿಷಯದಲ್ಲೂ ಕೂಡ 600 ಟಿ. ಎಂ. ಸಿ. ಎಫ್. ಟಿ. ನೀರು ಏನು ಕೊಡುತ್ತೇವೆ ಎಂದು ಹೇಳಿದ್ದಾರೆ ಅದನ್ನು ಉಪಯೋಗಮಾಡಿಕೊಳ್ಳಲು ಆದಷ್ಟು ಜಾಗ್ರತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾದ್ದು ಇವತ್ತು ಬಹಳ ಮುಖ್ಯವಾದ ವಿಚಾರವಾಗಿದೆ. ಇವತ್ತಿನ ದಿವಸ ವಿಜಾಪುರ ಮತ್ತು ಧಾರವಾಡದ ಜನರನ್ನು ನೋಡಿದರೆ ಅವರಿಗೆ

(ಶ್ರೀ ಡಿ. ಎಂ. ಸಿದ್ದಯ್ಯ)

ಈ ನೀರಿನ ಸೌಕರ್ಯ ಅತ್ಯಗತ್ಯವಾಗಿ ಮಾಡಬೇಕಾದ್ದು ಅನಿವಾರ್ಯವಾಗಿದೆ. ಅದೇ ಪ್ರಕಾರ ಕಾವೇರಿ ಬೇಸಿನ್‌ನಲ್ಲಿ ಇರತಕ್ಕವರಿಗೂ ಕೂಡ ಅಷ್ಟೇ ಅಗತ್ಯತೆ ಇದೆ ಎಂಬುದನ್ನು ನಾನು ಮತ್ತೆ ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರಿಂದ ಹಣವನ್ನು ತೆಗೆದುಕೊಂಡು ಬಂದು ನಮ್ಮಲ್ಲಿ ಯಾವ ಒಂದು ಕೊರತೆ ಇದೆ ಅದನ್ನು ನಿವಾರಣೆ ಮಾಡಲು ಧೈರ್ಯ ಮಾಡಿ ಎಂದು ಹೇಳುತ್ತೇನೆ. ಯಾರು ಯಾವುದೇ ಒಂದು ತತ್ವವನ್ನು ಮಾಡಿದರೂ ಕೂಡ ಅದರ ಸಫಲತೆ ಎಷ್ಟರಮಟ್ಟಿಗೆ ಆಗುತ್ತಾ ಇದೆ ಎಂಬುದನ್ನು ನೋಡಬೇಕೇ ಹೊರತು ಅಪ್ಪ ಹಾಕಿದ ಆಲದ ಮರ ಎಂದು ಅದಕ್ಕೆ ನೇಣು ಹಾಕಿಕೊಂಡು ಸಾಯುವುದಕ್ಕೆ ಆಗುವುದಿಲ್ಲ. ಪಾನನಿರೋಧದ ವಿಷಯದಲ್ಲಿ ಅದನ್ನು ಪುನರ್‌ವಿಮರ್ಶೆ ಮಾಡಿ. ಕಳ್ಳಭಟ್ಟಿ ಸಾರಾಯಿ ಮಾಡಿ ಒಬ್ಬ ಕುಡಿಯುತ್ತಾ ಇದ್ದ ಕಡೆ ಮನೆ ಮಂದಿ ಎಲ್ಲಾ ಕುಡಿದು ಇವತ್ತು ಜನ ಹಾಳಾಗುತ್ತಾ ಇದ್ದಾರೆ, ಜನರ ಸ್ವಾಭಾವಿಕ ಪ್ರವೃತ್ತಿ ಏನಿರುತ್ತದೆಯೋ ಅದಕ್ಕೆ ವಿರುದ್ಧವಾಗಿ ಹೋಗುವುದು ಅಸಾಧ್ಯ. ಇಂತಹ ಒಂದು ತತ್ವವನ್ನು ತಕ್ಷಣ ತ್ಯಾಗ ಮಾಡಬೇಕಾದರೆ ಅದಕ್ಕೆ ಒಂದು ಧೈರ್ಯ ಬೇಕು, ಆ ವಿಚಾರದಲ್ಲಿ ಪುನರ್‌ವಿಮರ್ಶೆ ಮಾಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಇವತ್ತು ಎಷ್ಟೋ ಲಕ್ಷ ರೂಪಾಯಿಗಳು ನಮ್ಮ ಕಣ್ಣಮುಂದೆ ಹೋಗುತ್ತಾ ಇದೆ, ನೀರಾವರಿ ಯೋಜನೆಗಳಿಗೆ ಇವತ್ತಿನ ದಿವಸ ಹಣವನ್ನು ಒದಗಿಸಬೇಕಾದ ಪರಿಸ್ಥಿತಿ ಇರುವುದರಿಂದ ಈ ಮಾತನ್ನು ನಾನು ಬಹಳ ಕಳಕಳಿಯಿಂದ ಹೇಳಬೇಕಾಗಿದೆ. ಯಾವುದು ದೇಶಕ್ಕೆ ಒಳ್ಳೆಯದೋ ಅದನ್ನು ಯಾವತ್ತೂ ಮಾಡುವುದಕ್ಕೆ ಹಿಂಜರಿಯಬೇಕಾಗಿಲ್ಲ ಅದಕ್ಕೆ ನಮ್ಮೆಲ್ಲರ ಪೂರ್ಣ ಬೆಂಬಲ ಇದೆ ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Half-an-hour discussion on Question No. 395 *re*: Registration of Hyderabad Karnatak Education Society, Afzalpur.

† Sri ANNARAO GANAMUKHI.—Sir, in the 16th list I had put a question, No 395 about the Hyderabad Karnatak Education Society and the Hon'ble Revenue Minister while replying to the question stated that he has no information about the society. But when I saw the Registration of Societies Act, I came to know that the Government has every right to call for Annual General Body Meeting under Section 11, if the Society does not call for any meeting. Of course, it is for the Society to call for the general body but if it does not convene any meeting, then there is Section 28 under which there is penalty for failure to call for meeting. The president or an office-bearer or the Members may be punished with a fine which may extend to Rs. 50. When I saw the answers given and the supplementaries, it was said that the Government was helpless because of the bye-laws. The Governing Body Members or the General Body Members can address the society to convene a meeting, and not anybody else. If the society does not convene the meeting, punishment is provided under the Act itself. Under section 13, the balance-sheet and the annual list of Governing Body has to be filed with the Registrar. If any contravention takes place under these 2 sections, then the Society or the President or the Secretary or the Members who are under the bye-laws bound to call the meeting are punishable.

I think the Education Minister knows very well that the Society started many colleges, among them engineering and medical. In the engineering college, there was a complaint lodged with the Central

Government, which was inquired into by the State Government. As Education Minister, orders were passed that the grants should be stopped because for 2 years the society could not give any account and they refused to submit the accounts to the technical audit officers. The Director of the Enquiry reported that the society refused to give any accounts and the moneys which have been collected. I think the Education Minister knows that the Government of India gave 50 per cent of the grant and the State Government gave 25 per cent of the grant and only 25 per cent was contributed by the society.

6-00 P.M.

Now, there was a complaint that seats were actually auctioned and it had become a commercial concern for the society members. Therefore, in order to stop that we had to enquire into the matter but there was no response from the Society and the Society disobeyed and refused to give the accounts of the Engineering College. I learnt afterwards, when I had stopped the grant, the present Education Minister released the grant although he had received the report of the Director of Technical Education saying that the Society refuses point blank to give the Society's account. Sir, to my question (*b*) and (*c*) the answer is 'no information is available.' Under this Act, the Government has failed to carry out its duty. Is it not possible for the Government to enquiry into the matter and call for the annual reports and accounts? I do not know whether the Government is giving grants to these bodies irrespective of the fact that they are not producing any accounts of the Society. Therefore, I wanted to raise this discussion because Government has failed to collect the facts and carry out the duty imposed on them under Sections 11, 12 and 13. Section 13 says that the balance-sheet and annual report should be filed with Registrar. They have not so for filed. If such societies are left free, unfettered and if Government grants are given without any control, I think, such kind of favouritism will never help. I wanted to draw special attention of the Government to this so that they may take care to see that these societies are brought to book or they are made to run on sound lines. Sir, this Society is allowed to run a Medical College where the hospital facility is provided by Government. They do not want to show the accounts of the Society and they do not file the accounts and the balance-sheet with the Registrar. In that case, is it the duty of the Government to wait and see and then keep silent so that the Society may carry on its business as it likes? This is not the proper attitude. Under Section 25 they must carry out their duty and under 28, whoever is at fault, he should be punished.

(*Sri G. V. Gowda rose*)

MR. DEPUTY SPEAKER.—I cannot allow any member to speak on this without previous intimation to the Chair.

SRI K. S. SURYANARAYANA RAO.—Sir, in writing I have asked for permission and I had sent it to you.

Mr. DEPUTY SPEAKER.—He can ask for clarification after the Minister replies.

† **Sri S. R. KANTHI** (Minister for Education).—Sir, according to the rule, after the Minister gives the reply, one or two members who have given prior intimation may ask for clarification.

Sri K. S. SURYANARAYANA RAO.—If you want to be so technical and ask us to speak later, I have no objection.

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಅಧ್ಯಕ್ಷರೇ, ಅಣ್ಣಾರಾಯರು ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆಕ್ಟ್ ಪ್ರಕಾರ ಸರ್ಕಾರದವರು ಕೆಲವು ಕ್ರಮ ಕೈಕೊಳ್ಳಬೇಕಾಗಿತ್ತು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. 18 ತಿಂಗಳಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆಯಬೇಕೆಂದು ಅವರು ಹೇಳಿದರು. ಅದನ್ನು ಕರೆಯದಿದ್ದರೆಏನು ಮಾಡಬೇಕೆಂಬುದನ್ನು ಸಹ ಹೇಳಿದ್ದಾರೆ. ಸೊಸೈಟಿ ಹುಟ್ಟಿದ 18 ತಿಂಗಳಲ್ಲಿ ಜನರಲ್ ಬಾಡಿ ಮೀಟಿಂಗನ್ನು ಮಾಡಿಲ್ಲ ಮತ್ತು ರಿಜಿಸ್ಟ್ರಾರರೂ ಸಹ ಈವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಕೂಡ ಹೇಳಿದ್ದಾರೆ. ಜನರಲ್ ಬಾಡಿ ಮೀಟಿಂಗನ್ನು ಕರೆದಿಲ್ಲ, ಆನ್ಯುಯಲ್ ಆಡಿಟ್ ವರದಿ ಜನರಲ್ ಬಾಡಿ ಮೀಟಿಂಗ್ ಕರೆದು ಅದರ ಮುಂದಿಡಬೇಕಾಗಿತ್ತು, ಇಟ್ಟಿಲ್ಲ, ಈ ರೀತಿ ತಪ್ಪು ಮಾಡಿದ್ದಾರೆ ಎಂದು ಆರೋಪ ಮಾಡಿದರು.

(ಇ) ಪ್ರಶ್ನೆಗೆ ಉತ್ತರಕೊಟ್ಟಿರುವುದು ಹೀಗಿದೆ :

"(*e*) The Registrar of Societies had issued a notice to the Society to which the Society has replied on 21st December 1963 stating that the General Body Meetings are being held according to the bye-laws and that the accounts of the Society are being audited annually since 1958 by the Chartered Accountant and reported to the Members".

ಆದುದರಿಂದ ಅವರು ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ ಮತ್ತು ಸರಿಯಾದ ಅಕೌಂಟನ್ನು ಪ್ರತಿ ವರ್ಷ ಆಡಿಟ್ ಮಾಡಿಸಿಲ್ಲ ಎಂದು ಅವರು ಒಪ್ಪಿಕೊಂಡಿಲ್ಲ.

(ಬಿ) ಪ್ರಶ್ನೆ ಹೀಗಿದೆ :

"(*b*) How many Annual General Body Meetings have been held for the above Education Society as per section 11 of the Mysore Societies' Registration Act, 1960"?

ಆನ್ಯುಯಲ್ ಜನರಲ್ ಬಾಡಿ ಮೀಟಿಂಗು ಕರೆಯದೇ ಇದ್ದರೆ ರಿಜಿಸ್ಟ್ರಾರ್‌ರವರು ಅದನ್ನು ಕರೆಸಬೇಕಾಗಿತ್ತು.

(ಸಿ) ನಲ್ಲಿ

"how many reports of the management of the above Society together with an audited copy of the balance sheet,......"

ಎಂದು ಕೇಳಿದ್ದಾರೆ, ಆಡಿಟೆಡ್ ಅಕೌಂಟುಗಳನ್ನು ಕೊಟ್ಟಿದ್ದರೆನ್ನುವುದಕ್ಕೆ ರಿಪೋರ್ಟುಗಳನ್ನು ಕಳುಹಿಸಿದ್ದಾರೋ ಇಲ್ಲವೋ ಎನ್ನುವ ಇನ್‌ಫರ್‌ಮೇಷನ್ನೂ ಸಾಕಷ್ಟು ಇಲ್ಲ ಎಂದು ಹೇಳಿದ್ದಾರೆ. ಆದರೆ ಈ ಸೊಸೈಟಿಯವರು Balanced Budget ಮತ್ತು Audited Accounts ಮಾಡಿಲ್ಲ ಎನ್ನುವುದರ ವಿಚಾರವಾಗಿಯೂ ಇಲ್ಲಿ ಹೇಳಿದ್ದಾರೆ. ಇದರ ಬಗ್ಗೆ ನನ್ನಲ್ಲಿ ಸಾಕಷ್ಟು ಪುರಾವೆಗಳು ಇಲ್ಲ. ಒಂದು ಮಾತು ಇಲ್ಲಿ ಹೇಳಬೇಕಾಗಿದೆ. ಸನ್ಮಾನ್ಯ ಸದಸ್ಯರು, ಅವರೇ ನನ್ನ ಹಿಂದೆ ಇಲ್ಲಿ ಎಜುಕೇಷನ್ನು ಮಿನಿಸ್ಟರವರಾಗಿದ್ದರು. ನನಗಿಂತ ಅವರಿಗೇ ಈ ಸೊಸೈಟಿ ವಿಚಾರ ಜಾಸ್ತಿ ಗೊತ್ತಿದೆ. ಅಲ್ಲಿಗೆ 58—59, 59—60, 60—61 ಈ ಮೂರು ಸಾಲಿನಲ್ಲೂ ಅವರೇ ಗ್ರಾಂಟಿನ ಹಂಚಿಕೆಯನ್ನು ಮಾಡುತ್ತಾ ಬಂದಿದ್ದಾರೆ. ಅದೇ ಪ್ರಕಾರ ನಾನು ಎಜುಕೇಷನ್ನು ಮಿನಿಸ್ಟರಾದ ಮೇಲೆ 62—63ನೇ ಸಾಲಿನಲ್ಲಿ 61—62ನೇ ಸಾಲಿನ ಗ್ರಾಂಟನ್ನು ಕೊಟ್ಟಿದ್ದೇನೆ. ಅವರು ಹೇಳುವಂತೆ ನಮ್ಮ ಡಿಪಾರ್ಟುಮೆಂಟಿನ ಎಲ್ಲ ಅಕೌಂಟುಗಳು ಅಷ್ಟು ಕೆಟ್ಟಂತೆ ಕಾಣುವುದಿಲ್ಲ. ಇಲ್ಲಿ ಎರಡು ತರಹದ ಅಕೌಂಟುಗಳಿವೆ. ಸೊಸೈಟಿ ಅಕೌಂಟು ಒಂದು ಮತ್ತೊಂದು ಎಜುಕೇಷನಲ್ ಇನ್‌ಸ್ಟಿಟ್ಯೂಷನ್ನುಗಳ ಅಕೌಂಟುಗಳು. ನಾನು ಸೊಸೈಟಿಗಳ ಅಕೌಂಟನ್ನು ಕೇಳಲಿಕ್ಕೆ ಬದ್ಧನಲ್ಲ.

ಎಜುಕೇಷನ್ ಇನ್‌ಸ್ಟಿಟ್ಯೂಷನ್ನುಗಳ ಅಕೌಂಟುಗಳನ್ನು ಅವು ಸರಿಯಾಗಿವೆಯೋ, ಇಲ್ಲವೋ, ಎನ್ನುವು ದನ್ನು ನಾವು ಗ್ರಾಂಟು ಕೊಡುವಷ್ಟರ ಮಟ್ಟಿಗೆ ನೋಡಬೇಕಾಗಿದೆ. ಇದನ್ನು ನಾವು ತರಿಸಿಕೊಂಡು ನೋಡಿ 61—62ನೇ ಸಾಲಿನ ಗ್ರಾಂಟನ್ನು 62—63ನೇ ಸಾಲಿನಲ್ಲಿ ಕೊಡಲಾಗಿದೆ ಮತ್ತು ಈ ಗ್ರಾಂಟು ಮೊದಲೇ ಪ್ಲಾನಿಂಗು ಗ್ರಾಂಟನೊಳಗಿರುವ ಎಕ್ಸ್‌ಪೆಂಡೀಚರಿನಲ್ಲಿ ಸೇರಿದೆ. ಅದರಲ್ಲಿ ತೆಗೆದುಕೊಂಡಿರುವ ಗ್ರಾಂಟಿನ ಪ್ರಕಾರ ಇಂಜನೀಯರಿಂಗು ಕಾಲೇಜಿಗಾಗಿ 1,75,000 ರೂಪಾಯಿ ಗಳಷ್ಟು ಕೊಟ್ಟಿದೆ. ಮತ್ತು ಬಿಲ್ಡಿಂಗ್ ಗ್ರಾಂಟಿಗಾಗಿ 2,19,223 ಎಂದು ಎಲ್ಲಕ್ಕೂ ಸೇರಿಸಿ ಕೊಟ್ಟಿದೆ. ಇನ್ನೊಂದುಸಾರಿ Recurring Expenditure Rs. 27,618—38 ನಯಾ ಪೈಸಾ ಕೊಟ್ಟಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಕ್ಯಾಪಿಟೇಷನ್ ಫೀಯನ್ನು ಕಲೆಕ್ಟು ಮಾಡಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಅದು ಏನಾಗಿದೆ ಎನ್ನುವುದನ್ನೂ ಹೇಳುತ್ತೇನೆ. ಇವರು ಮೆಡಿಕಲ್ ಕಾಲೇಜು ಏನು ನಡೆಸುತ್ತಿದ್ದಾರೆ ಅದಕ್ಕೆ ನಾವೇನೂ ಕೊಟ್ಟಿಲ್ಲ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿ ಗಾಗಿ ಅದಕ್ಕೆ ಒಂದು ಲಕ್ಷದಷ್ಟು ಅಡ್ ಹಾಕ್ ಗ್ರಾಂಟ್ ಎಂದು ಕೊಡಲಾಗಿದೆ. 1961—62ನೇ ಸಾಲಿನಲ್ಲಿ ಮೇಂಟನೆನ್ಸ್ ಗ್ರಾಂಟು ಎಂದು 8,58 ರೂಪಾಯಿಗಳನ್ನು ಕೊಟ್ಟಿದೆ. 1962—63ನೇ ಸಾಲಿನಲ್ಲಿ 10,299 ಮತ್ತು ಈ ವರ್ಷ 4,500 ರೂಪಾಯಿಗಳಷ್ಟು ಮಾತ್ರ ಅಡ್ವಾನ್ಸ್ ಆಗಿ ಕೊಡಲಾಗಿದೆ. ದತ್ತರ್ ಗಾಂವ್ ಹೈಸ್ಕೂಲಿಗಾಗಿ 580 ರೂಪಾಯಿಗಳನ್ನು, ಹೊಸನೂರು ಹೈಸ್ಕೂಲಿಗಾಗಿ 580 ರೂಪಾಯಿಗಳನ್ನು ಗ್ರಾಂಟಾಗಿ ಮಾತ್ರ ಕೊಟ್ಟಿದ್ದೇವೆ. ಹೀಗಿರುವುದರಿಂದ ನಾವು ಕೊಟ್ಟಿರುವ ವಿವರಗಳಂತೆ ಈ ಕಾಲೇಜುಗಳು ಏನು ನಡೆಯುತ್ತವೆ ಆವುಗಳು ಸರಿಯಾ ಗಿಲ್ಲವೋ ಏನೋ ಎನ್ನುವ ಮಾತನ್ನೂ ಇಲ್ಲಿ ಹೇಳಿದ್ದಾರೆ. ಅಲ್ಲದೆ ಈ ಸೊಸೈಟಿ ವಿಚಾರವಾಗಿ ಹೇಳುತ್ತಾ ಈ ವರ್ಷ ಕ್ಯಾಪಿಟೇಷನ್ನು ಫೀಸನ್ನು ತೆಗೆದುಕೊಂಡಿದ್ದಾರೆ ಎಂದಿದ್ದಾರೆ. ಗುಲ್ಬರ್ಗ ದಲ್ಲಿರುವ ಇಂಜನೀಯರಿಂಗು ಕಾಲೇಜಿನಲ್ಲಿ ಶೇಕಡ ಇಪ್ಪತ್ತರಷ್ಟು ಸೀಟುಗಳನ್ನು ಮಾತ್ರ ಅವರು ಕೊಟ್ಟಿದ್ದರು. ಶೇಕಡ 20ರಷ್ಟು ಸೀಟುಗಳನ್ನು ಕೊಡುವ ಕಾಲಕ್ಕೆ ಪ್ರತಿಯೊಬ್ಬರಿಂದಲೂ ಸ್ವಲ್ಪ ಹಣವನ್ನು ತೆಗೆದುಕೊಂಡಿರಬಹುದು. ಅದನ್ನು ಕೊಡುವ ಕಾಲಕ್ಕೆ ಅವರ ಎಕ್ಸ್‌ಪೆಂಡೀಚರ್ ಮೀಟ್ ಮಾಡುವುದಕ್ಕಾಗುವುದಿಲ್ಲ. ಮೇಂಟನೆನ್ಸ್ ಗ್ರಾಂಟು ಮೀಟ್ ಆಗುವುದಿಲ್ಲ ಎಂದು ಅದಕ್ಕಾಗಿ 20 ಸೀಟುಗಳನ್ನು ಕೊಟ್ಟಿದ್ದರಲ್ಲಿ ಕೆಲವರಿಂದ ಕ್ಯಾಪಿಟೇಷನ್ ಫೀ ಎಂದು ತೆಗೆದುಕೊಂಡಿದ್ದಾರೆ ಎಂದು ಹೇಳುವುದರಲ್ಲಿ ಸತ್ಯವೂ ಇದೆ. ಅದೇ ರೀತಿ ಇಲ್ಲಿನ ಬಿ.ಎಂ.ಎಸ್. ಕಾಲೇಜಿನಲ್ಲೂ ನಡೆಯುತ್ತಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—20 ಪರ್ಸೆಂಟಿನಷ್ಟನ್ನೂ 59-60 ರಲ್ಲಿಯೂ ಕೊಟ್ಟಿಲ್ಲ. 60-61 ರಲ್ಲಿ ಏಕೆ ಕೊಟ್ಟಿಲ್ಲ ಎನ್ನುವುದನ್ನೂ ಪರಿಶೀಲಿಸಬೇಕಾಗಿತ್ತು.

ಶ್ರೀ ಎಸ್. ಆರ್. ಕಂಠಿ.—ಅಲ್ಲಿ ಎಲ್ಲ ಸರಿಯಾಗಿಯೇ ಇದೆ. 62-63 ರಲ್ಲಿ ಕೊಡಬೇಕಾದು ದನ್ನು 63-64 ರಲ್ಲಿ ಕೊಡಲಾಗಿದೆ. 59-60 ರಲ್ಲಿ ಆಗ ಏನು ಹಂಚಿಕೆಯಾದ ಸೀಟುಗಳಿತ್ತು ಎನ್ನುವುದನ್ನು ಸನ್ಮಾನ್ಯ ಸದಸ್ಯರೇ ನೋಡಬೇಕು. ಆಗ ಅವರೇ ಗ್ರಾಂಟನ್ನು ಕೊಟ್ಟುಬಿಟ್ಟು ಈಗ ನನ್ನನ್ನು ಹಿಂದೇನಾಗಿತ್ತು ಎನ್ನುವುದನ್ನು ಕೇಳಿದರೆ ಅದು ನನಗೆ ಹೇಗೆ ಗೊತ್ತಾಗುತ್ತೆ. ಇದು ನನಗೆ ಗೊತ್ತಾಗುವುದಿಲ್ಲ. ನಾನು ಬಂದಮೇಲೆ ಯಾವ ರೀತಿ ನಡೆಯುತ್ತಿದೆ ಎಂದು ನೋಡಿದುದರಲ್ಲಿ ಇದರಲ್ಲಿ ಅಂತಹ ಇರ್ರೆಗ್ಯುಲಾರಿಟೀಸ್‌ಗಳಾಗಿವೆ ಎನ್ನುವುದು ಕಂಡುಬಂದಿಲ್ಲ. ಸೊಸೈಟಿ ವಿಷಯವಾಗಿ ನಾನು ಏನೂ ಹೇಳುವುದಿಲ್ಲ. ಸೊಸೈಟಿಯವರು ಆಡಿಟೆಡ್ ಅಕೌಂಟ್ಸ್ ಕೊಡದಿದ್ದರೆ ರಿಜಿಸ್ಟ್ರಾರವರು ಅವರ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಆಕ್ಷನ್ನು ತೆಗೆದುಕೊಳ್ಳುವುದರ ಸಲುವಾಗಿ ಸರಕಾರದವರು ಅವರಿಗೆ ತಿಳಿಸುತ್ತಾರೆ. According to Rules ಅವರು ತಕ್ಕ ಆಕ್ಷನ್ ತೆಗೆದುಕೊಳ್ಳಬೇಕು. ಹಾಗೇ ಸೊಸೈಟಿಗಳು ಯಾವ ರೀತಿ ನಡೆಯಬೇಕಾದರೂ ಸೊಸೈಟಿಯಲ್ಲಿನ ಸದಸ್ಯರೇ ಸರಿಯಾಗಿ ಅಡ್ವೈಸರು ಮಾಡಲು ಜವಾಬ್ದಾರಿಯೂ ಇರುವುದರಿಂದ ಅದು ಚೆನ್ನಾಗಿ ನಡೆಯಬಹುದು. ಸೊಸೈಟಿಯಲ್ಲಿರುವ ಸದಸ್ಯರೇ ಒತ್ತಾಯವನ್ನು ತರಬಹುದೇ ವಿನಾ ಸರಕಾರದವರು ಯಾವ ತರಹದ ಒತ್ತಡವನ್ನೂ ತರುವುದಕ್ಕಾಗುವುದಿಲ್ಲ. ನಿಯಮಗಳಿವೆ ಸೊಸೈಟಿ ಆಕ್ಟು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಆದರೆ ಮೇಂಟನೆನ್ಸ್ ಗ್ರಾಂಟನ್ನು ನಿಯಮದ ಪ್ರಕಾರ ದುರುಪಯೋಗ ಪಡಿಸಿದ್ದರೆ ಆ ಗ್ರಾಂಟನ್ನು ನಿಲ್ಲಿಸುವುದಕ್ಕೆ ಸರಕಾರಕ್ಕೆ ಬರುತ್ತದೆ. ಈ ಪ್ರಸಂಗದಲ್ಲಿ ಸರಕಾರದಮೇಲೆ ಹೆಚ್ಚಿನ ಜವಾಬುದಾರಿ ಇದೆ. ಆದರೆ ಸೊಸೈಟಿಯ ಬಗ್ಗೆ ಮಾನ್ಯ ಸದಸ್ಯರೇನಿದ್ದಾರೆ ಅವರೇ ಅವರ ಮೇಲೆ ಹೆಚ್ಚು ಜವಾಬುದಾರಿಯಿಂದ ಪ್ರೆಷರ್‌ನ್ನು ತೆಗೆದುಕೊಂಡು ಬಂದು ಸರಿಮಾಡಬೇಕು. ನಾವು ಕೊಡುವ ಗ್ರಾಂಟನ್ನು ಸದುಪಯೋಗ ಮಾಡಿಕೊಂಡಿಲ್ಲ ಮಿಸ್ ಅಪ್ರೋಪ್ರಿಯೇಷನ್ನಾಗಿದೆ ಎಂದರೆ ಆಗ ಸರಕಾರ ಗ್ರಾಂಟನ್ನು ನಿಲ್ಲಿಸುವುದಕ್ಕೆ ಯೋಚನೆ ಮಾಡಬಹುದು. ಆದರೆ ಸೊಸೈಟಿಯು

(ಶ್ರೀ ಎಸ್. ಆರ್. ಕಂಠಿ)

ಬಗ್ಗೆ ಸೊಸೈಟಿಯು ಸರಿಯಾಗಿ ಮಾಡುತ್ತಿಲ್ಲ ಎನುವುದನ್ನು ಕ್ವಶ್ಚನ್ ಮಾಡಿ ಯಾವ ತರಹದ ಒತ್ತಾಯವನ್ನೂ ತರುವುದಕ್ಕಾಗುವುದಿಲ್ಲ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದು ರೂಲ್ಸು ಪ್ರಕಾರ ಏನಾದರೂ ತಪ್ಪು ಮಾಡಿದ್ದರೆ ಯಾವುದಾದರೂ ಶಿಕ್ಷೆ ಮಾಡಲಿಕ್ಕೆ ಸಾಧ್ಯವಿದೆ. ಆದರೆ ಇದರ ವಿಷಯದಲ್ಲಿ ಮಾನ್ಯ ಸದಸ್ಯರಿಗೇ ನನಗಿಂತ ಹೆಚ್ಚಿಗೆ ಗೊತ್ತಿದೆ, ಮತ್ತು ಅವರೇ ಸರಿಪಡಿಸಬಹುದು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

†Sri K. S. SOORYANARAYANA RAO (Mysore City).—Sir, when this question was put and answered, we heard very clearly, possibly the record will show that the Hon'ble Revenue Minister totally denied that the Society has refused to file the returns and he pleaded his inability to take steps in the matter under the Act. Therefore, the point now for consideration is not only whether the working of the Society so far as the institutions are concerned is one Society, but also whether the Society has complied with the provisions of law, *i.e.*, mandatory provisions of law. The clarification needed is this. The Societies Act was specially amended in the year 1960 to empower the Registrar to take such action as to compel them to hold a General Body meeting, file audit statements and all that. It was done with a specific purpose. In the year 1964, the Hon'ble Revenue Minister says that the law is helpless. As a matter of fact, the law armed that Registrar with all the powers. When such is the case, if the Government were to say that they are helpless and the Societies rules......

Mr. DEPUTY SPEAKER.—He need not ask for information on the question of law.

Sri K. S. SOORYANARAYANA RAO.—It almost amounts to breach of privilege because the correct fact is not placed before the House.

Mr. DEPUTY SPEAKER.—What is the clarification that he wants now?

Sri K. S. SOORYANARAYANA RAO.—What the Education Minister said is only one aspect. The other aspect is not placed before the House. Therefore, I want the Hon'ble Minister to clarify this position as to why the Government found it helpless to take action according to law.

Sri S. R. KANTHI.—I have already made it clear Sir. I have said that Government is willing to take any step both under the Societies Registration Act as also under the grant-in-aid code. We are willing to take action provided there is any lapse or lacuna on the part of the society.

Sri K. S. SOORYANARAYANA RAO.—Sir, it does not solve the problem. The problem cannot be solved because Government cannot in any way force the society to call for a general body meeting.

Sri S. R. KANTHI.—If they do not call for the General Body meeting, we can fine them. If it is proved that they have not called the annual general meeting or the accounts are not audited or is not submitted to the Registrar or they have not in any way submitted accounts for maintenance grant, equipment grant, we will force the society to do it. If they do not do it, then we will take proper action.

Sri K. S. SOORYANARAYANA RAO.—What is the action that you can take beyond imposing fine ?

Sri S. R. KANTHI.—I have already said that if there is provision for the Registrar to call for a meeting of the general body, that will also be done. Let us examine the entire question.

Sri K. S. SOORYANARAYANA RAO.—Merely saying that the power lies with the Registrar, does not solve the problem.

Sri S. R. KANTHI.—The Government will look into the entire thing and see what can be done.

Sri K. S. SOORYANARAYANA RAO.—The law is very clear. Section 35 of the Societies Act.

Sri S. R. KANTHI.—If the law is clear, the action of the Government also will be clear.

(Interruption from **Sri K. S. Sooryanarayana Rao and Sri Anna Rao Ganamukhi).**

Mr. DEPUTY SPEAKER.—The House will now adjourn and re-assemble tomorrow at 12 NOON.

The House adjourned at Twenty-five Minutes past Six of the Clock to meet again at Twelve of the Clock on Thursday, the 2nd April 1964.

WD 2594—GPB—900—23 6-64